JOURNAL OF RESEARCH AND DEVELOPMENT

A Multidisciplinary International Level

Referred and Double Blind Peer Reviewed, Open Access Journal

ISSN:2230-9578 April - 2026 Volume-18 Issue-4(II)

K. L. E. Society's

Shri Shivayogi Murughendra Swamiji Arts, Science and Commerce College, Athani

Accredited at 'A' level by NAAC with 3.09 CGPA

Affiliated to Rani Channamma University, Belagavi, Karnataka, India

Internal Quality Assurance Cell Initiative

One Day National Conference

on

LANGUAGE, LITERATURE, AND INTERDISCIPLINARY HUMANITIES; NEGOTIATIONS, TRANSFORMATIONS, AND FUTURES

Chief Editor: Prof. Ramesh V. Bhole

Mob: +91-9552416001 **Website: https://jrdrvb.org**

MULTIDISCIPLINARY INTERNATIONAL JOURNAL

Website: https://jrdrvb.org



ISSN: 2230-9578
April - 2026
Volume-18 Issue-4(II)

Please Get in Touch
Email: jrdrvb.org@gmail.com
Mob: +91-9552416001,+91- 8888454089

Journal of Research and Development
Peer Reviewed International, Open Access Journal.
ISSN : 2230-9578 | Website: https://jrdrvb.org Volume-18, Issue-4(II)| April 2026

Journal of Research and Development

A Multidisciplinary International Double-Blind Peer Reviewed Refereed International Research Journal

Volume-18, Issue-4 (II) | April 2026
Publication Language – English, Hindi, Marathi and other Indian Languages
Periodicity of Publication- Monthly
Email: jrdrvb.org@gmail.com
Journal Website: https://jrdrvb.org

CHIEF EDITOR
Dr. Ramesh V. Bhole
Professor
Sardar Vallabhbhai Patel Arts and Science College Ainpur,
Tal Raver, Dist Jalgaon
Email: jrdrvb.org@gmail.com

Disclaimer

The Editors shall not be held responsible for the originality or the views and opinions expressed in the papers. The author(s) alone shall bear full responsibility for the originality of their work and the ideas expressed therein.

© All rights reserved with the Editors.

Journal of Research and Development

Peer Reviewed International, Open Access Journal.
ISSN : 2230-9578 | Website: https://jrdrvb.org

JOURNAL PARTICULARS

Name of Journal	JOURNAL OF RESEARCH AND DEVELOPMENT
Frequency	Monthly : Jan to Dec (12 issues per year)
ISSN	2230-9578
Publisher	Dr. Ramesh V. Bhole
Chief Editor	Dr. Ramesh V. Bhole
Copy right	Journal of Research and Development
Starting Year	January 2010
Subject	Multi-Disciplinary
Review Process	Double Blind Peer
Language	English, Hindi, Marathi, and other Indian Constitutional Languages.
Publication Format	Print
Access	OPEN ACCESS
License	Creative Commons (CC BY-NC-SA 4.0)
Phone No.	+91 93256 65856, +91-8888454089
Email	jrdrvb.org@gmail.com
Journal Website	https://jrdrvb.org
Registered office Address	'Ravichandram' Survey No-101/1, Plot, No-23, Mundada Nagar, Jalgaon, Maharashtra, India
Admin. Office Address	'Ravichandram' Survey No-101/1, Plot, No-23, Mundada Nagar, Jalgaon , Maharashtra, India
Printing	**Amitsons Digital Copiers** 106 and 110, Paras Chambers 1st Floor, Near Laxmi Narayan Theatre, Above Bank Of India, Swargate-411042

Journal of Research and Development
Peer Reviewed International, Open Access Journal.
ISSN : 2230-9578 | Website: https://jrdrvb.org

JOURNAL OF RESEARCH AND DEVELOPMENT

A Multidisciplinary International Double Blind Peer Reviewed Refereed International Research Journal

Publication Language – English, Hindi, Marathi and other Indian Languages
Periodicity of Publication- Monthly
Email: jrdrvb.org@gmail.com
Journal Website: https://jrdrvb.org

CHIEF EDITOR

Dr. Ramesh V. Bhole
Professor
Sardar Vallabhbhai Patel Arts and Science College Ainpur,
Tal Raver, Dist Jalgaon
Email: jrdrvb.org@gmail.com

ASSOCIATE EDITORS

Prof. (Dr.) Madan Mohan Goel
Vice-Chancellor (Former)
Rajiv Gandhi National Institute of Youth Development, Govt. of India
Starex University, Gurugram, Haryana, India

Dr. Praveen G. Saptarshi
Visiting Faculty
Salisbury University, United States

MANAGING EDITOR

Dr. Santosh P. Mane
Assistant Professor,
Head Department of Geography,
Sameer Gandhi Kala Mahavidyalaya

Journal of Research and Development

Peer Reviewed International, Open Access Journal.
ISSN : 2230-9578 | Website: https://jrdrvb.org

EDITORIAL BOARD

BABALOLA, Ayodele Samuel Department of Pure and Applied Zoology, Federal University of Agriculture, PMB 2240, Abeokuta, Ogun State, Nigerian	**Dr. Lal Mervin Dharmasiri** Senior Professor and Chair Head of Geography University of Kelaniya, Sri Lanka.	**Vijayanand Selvaraj** Data Strategist and Artificial Intelligence Lead Information Technology (IT), Houston,Texas, USA
Dr. Munther Moh'd Ibrahim Zyoud Assistant Professor of English Language Teaching Methods-Al-Quds Open University, Palestine.	**Prof. A.G. Amarasinghe** Senior Lecturer Grade University of Kelaniya, Sri Lanka.	**Dr. Gyanaranjan Sahoo** Extension Scientist Orissa University of Agriculture & Technology, Orissa India
Dr. RVS Praveen Director Digital Engineering and Assurance, USA	**Dr. Ranjan Kalita** Principal Rangapara College, Amaribari, Rangapara, (Autonomous) Assam	**Dr. S. C. Advitot** Principal CBK's B. Sci, R.V. Com. & R. J. Arts College, Akkalkot
Dr. Kulkarni Swanand Gajanan Associate Professor, Mechanical Engineering Department, S.K.N. Sinhgad College of Engineering,Korti, Pandharpur-	**Dr. Anurag Shrivastava** Professor & Post Doctoral, Lincoln University College (LUC) Petaling Jaya, Malaysia, Malyasia	**Prof. (Dr.) F. M. Nadaf** Principal, Government College Borda Margao Goa (Autonomous), India
Dr. Tushti Sharma Royal School of Languages, The Assam Royal Global University, Guwahati, Assam	**Dr. Sandeep Rout** Faculty of Agriculture, Sri Sri University, Cuttack, Odisha	**Dr. Daneshwar. R. Pandey** Assistant Professor, Head Of Department S.S Agrawal College Of Commerce And Management Navsari Gujarat

PUBLISHER

Dr. Ramesh V. Bhole

'Ravichandram' Survey No-101/1, Plot, No-23, Mundada Nagar, Jalgaon

Email: jrdrvb.org@gmail.com Journal Website: https://jrdrvb.org

K. L. E. Society's

Shri Shivayogi Murughendra Swamiji Arts, Science and Commerce College, Athani – 591 304

Internal Quality Assurance Cell Initiative

One Day National Conference

on

LANGUAGE, LITERATURE, AND INTERDISCIPLINARY HUMANITIES; NEGOTIATIONS, TRANSFORMATIONS, AND FUTURES

08th April 2026

Venue
Khot Auditorium
KLE SSMS College, Athani

Chief Patrons

Dr. Prabhakar Kore
Honarary Chairman,
KLE Society, Belagavi

Shri.Amit P. Kore
Chairman,
KLE Society, Belagavi

Organizing Committee

Dr. M. G. Hanji
Chairman, LGB,
KLE S.S.M.S College, Athani

Dr. Prashant Magdum
Principal,
KLE S.S.M.S College, Athani

Editors

Dr. Smt. B. S. Gaddi
Shri. I. G. Mulla
Shri. V. A. Adahalli
Smt. T. A. Akkol

Working Editors
Smt. L. L. Pujari
Smt. Zarina Biradar
Dr. S. A. Patted
Smt. G. A. Anagale
Shri. S. Y. Patil

ORGANIZING TEAM

Dr.Smt. B. S. Gaddi
Conference Convener

Shri. I. G. Mulla
Coordinator, IQAC &
Organizing Secretary

Shri. V. A. Adahalli
Co-Convener
Smt. T. A. Akkol
Member
Smt. L. L. Pujari
Member
Smt. Zarina Biradar
Member
Dr. S. A. Patted
Member
Smt. G. A. Anagale
Member
Shri. S. Y. Patil
Technical Secretary

SAPTARISHIS OF K.L.E. SOCIETY

Prof. M. R. Sakhare

Prof. S. S. Basavnal

Shri. B. B. Mamdapur

Dr. H. F. Kattimani

Prof. B. S. Hanchinal

Prof. P. R. Chikodi



Sardar V. V. Patil

KLE Society

The KLE Society was established in 1916. Its vision is to impart education to all sectors of the society of North Karnataka region. Initially, education journey was began with a school and now as many as 309 Institutions, 18,000 dedicated staff serving their best to cater the needs of about 1,38,000 students every year. The courses offered from KG to PG in Basic Science, Commerce and Management, Medical Sciences, Engineering and Technology, Educational training etc. spread across the nation as well as under collaboration with international HEI's of UK, USA, Malaysia, China and Zimbabwe. All HEI's of the society accredited A and above A Grade which speaks of the sustenance & excellent quality performance in HEIs. The great visionary, our beloved Chairman Amit P. Kore, and assisted by the dynamic Board of Management, the society has achieved spectacular growth over the last three decades.

SSMS College

K.L.E. Society's Shri S.M.S. Arts, Science & Commerce College, Athani, was established in 1968 in the name of His Holiness Shri Shivayogi Murughendra Swamiji with the vision of uplifting rural youth through quality education. Affiliated to Rani Channamma University, Belagavi, and recognized by the UGC under Sections 2(f) and 12(B), the college has grown steadily in academic excellence, infrastructure, and faculty strength. With modern facilities such as a rich library, well-equipped laboratories, multimedia classrooms, computer centre, and sports amenities, the institution provides a holistic learning environment. Accredited with an "A" grade by NAAC (CGPA 3.09), the college has a proud legacy of over 58 years as the first degree college in this backward and drought-prone region, nurturing generations of students who today serve with distinction across the country and abroad.

The Conference

The rapidly changing intellectual climate of the twenty-first century calls for a renewed understanding of language and literature as dynamic, interdisciplinary fields. No longer confined to aesthetic appreciation, literature today functions as a powerful site of negotiation, resistance, and identity formation, while language operates as both a medium of expression and a structure shaping social reality. Together, they engage deeply with history, politics, culture, technology, ecology, and economics. Recent transformations driven by globalization, digital media, migration, environmental crises, and identity politics have reoriented the humanities toward interdisciplinary inquiry. Literary studies now intersect productively with sociology, anthropology, philosophy, media studies, psychology, and the natural sciences. New cultural practices such as digital storytelling, translation, cultural memory studies, and political discourse further demand innovative methods of analysis that account for space, embodiment, memory, affect, and technology. Contemporary scholarship is also reshaped by postcolonial, subaltern, and intersectional perspectives that foreground marginalized voices and challenge dominant narratives. Translation and comparative studies highlight how ideas travel across linguistic and cultural borders, enriching global literary conversations. In this context, the proposed National Conference aims to foster critical dialogue among scholars, students, and practitioners, promote collaborative research, address evolving pedagogical challenges in the digital age, and explore how language and literature contribute to social transformation, cultural preservation, and the imagining of alternative future.

THEMES

ENGLISH:

- Interdisciplinary approaches to literature and language
- Literature, history, and cultural memory
- Literature and technology: digital humanities & new media narratives
- Ecocriticism and environmental humanities
- South Asian literature and culture
- Translation, multilingualism, and transnational studies
- Gender, queer, and feminist literatures
- Dalit, Tribal, Indigenous writings, and literatures of protest & resistance

KANNADA:

- **ಕನ್ನಡ ಸಾಹಿತ್ಯ ಮತ್ತು ಇತಿಹಾಸ**
- **ಕನ್ನಡ ಸಾಹಿತ್ಯ ಮತ್ತು ತಂತ್ರಜ್ಞಾನ**
- **ಕನ್ನಡ ಸಾಹಿತ್ಯ ಮತ್ತು ಪರಿಸರ**
- **ಕನ್ನಡ ಸಾಹಿತ್ಯ ಮತ್ತು ಅನುವಾದ**
- **ಕನ್ನಡ ಸಾಹಿತ್ಯ ಮತ್ತು ಭಾಷಿಕ ಪ್ರಭಾವಗಳು**
- **ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದ**
- **ಕನ್ನಡ ಸಾಹಿತ್ಯ ಮತ್ತು ಧರ್ಮ**
- **ಕನ್ನಡ ಸಾಹಿತ್ಯ ಮತ್ತು ಚಲನಚಿತ್ರಗಳು**

HINDI:

- साहित्य और इतिहास दृष्टि।
- साहित्स और प्रौध्योगिकी।
- पर्यावरण मानविकी में पारिस्थितिक आलोचना।
- हिन्दी साहित्य और दक्षिण एशियाई साहित्य।
- अनुवाद तथा अंतरराष्ट्रीय अध्ययन ।
- हिन्दी साहित्य और नए मीडिया कथा के पहलू।
- विश्व साहित्य और तुलनात्मक साहित्य ।
- हिंदी साहित्य और दर्शनशास्त्र ।

ACKNOWLEDGEMENT

The KLE Society, a longstanding symbol of excellence in India's educational sector, stands as a testament to the dedication and perseverance of countless bright minds.

KLE Society's Shri Shivayogi Murughendra Swamiji Arts, Science and Commerce College in Athani is a distinguished hub of learning, committed to fostering intellect, character, and creativity. Recently, the college's Department of Languages hosted the National Conference on "Language, Literature, and Interdisciplinary Humanities: Negotiations, Transformations, and Futures" on April 8, 2026.

The conference aimed to bring together academicians, researchers, industry leaders, and students to engage in meaningful discussions. This collection of papers reflects a belief that the humanities are at a vital crossroads today. The once-clear boundaries between language studies, literary criticism, history, philosophy, and social sciences are now more like vibrant zones of negotiation. The articles here explore these intersections—how texts cross cultural borders, narratives adapt amidst digital and ecological shifts, and pedagogical practices evolve alongside new realities. The theme of "transformation" weaves through these pages—whether examining decolonial rewritings, AI-created poetry, or the reinvention of local oral traditions—highlighting how language and literature are constantly changing, resisting, and reinventing themselves.

I sincerely thank our esteemed honorary Chairman, Dr Prabhakar Kore, Chairman Amit P. Kore and Board of Management for their unwavering encouragement. I am also grateful to Dr M. G. Hanji, Chairman of LGB, and the entire support team for helping to make this conference a grand success.

A special word of appreciation goes to the chief guest, Dr Mallika Ghanti, former Vice-Chancellor of Kannada University, Hampi, and the guest of honour, Shri Mahesh Chinatamani, Professor at the Department of Kannada, KSAW, Vijayapur. Thanks are also due to the resource persons whose insights, knowledge, and stimulating discussions enriched the event. I am equally grateful to the paper presenters for their valuable contributions.

I would like to acknowledge the tireless efforts of the conference the convener, Dr Smt. B. S. Gaddi, co-convener, Shri V. A. Adahalli, and the organising secretary and IQAC Coordinator, Shri I. G. Mulla, along with all the team members, faculty, non-teaching staff, technical staff, and volunteers. Their dedication and teamwork ensured everything ran smoothly.

Lastly, I extend my heartfelt thanks to all sponsors, supporters, and well-wishers; without their backing, this event wouldn't have been possible. A special note of appreciation to Dr Ramesh V.

Bhole, publisher of the Journal of Research and Development, who published all the selected papers in two special issues of the journal. This peer-reviewed, multidisciplinary journal aims to promote high-quality research across various fields. May this collaborative effort inspire further dialogue, research, and collaboration.

Date: 08.04.2026

Principal
Dr. Prashant Magdum

ಸಂಪಾದಕೀಯ

ಕನ್ನಡ ವಿಭಾಗವು ಕನ್ನಡ ಸಾಹಿತ್ಯ ಮತ್ತು ಅಂತರಶಿಸ್ತೀಯ ನೆಲೆಗಳು ಎಂಬ ಶೀರ್ಷಿಕೆ ಅಡಿಯಲ್ಲಿ 8 ಏಪ್ರಿಲ್ 2026 ರಂದು ಹಮ್ಮಿಕೊಂಡಿದ್ದ ಒಂದು ದಿನದ ರಾಷ್ಟ್ರೀಯ ವಿಚಾರ ಸಮ್ಮೇಳನದಲ್ಲಿ ಮಂಡಿಸಲಾದ ಸಂಶೋಧನಾ ಲೇಖನಗಳ ಸಂಗ್ರಹ ಈ ಸಂಚಿಕೆ.

ಕನ್ನಡ ಸಾಹಿತ್ಯ ಕೇವಲ ಭಾಷಾ ಕೃತಿಗಳ ಸಂಗ್ರಹವಲ್ಲ ; ಬದಲಾಗಿ ಇತಿಹಾಸ , ಸಮಾಜಶಾಸ್ತ್ರ ಮತ್ತು ಸಂಸ್ಕೃತಿಯೊಂದಿಗೆ ಬೆಸೆದ ಅಂತರಶಿಸ್ತಿಯ ಅಧ್ಯಯನ ಕ್ಷೇತ್ರವಾಗಿದೆ. ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಸಾಹಿತ್ಯವನ್ನು ಅರ್ಥಮಾಡಿಕೊಳ್ಳಲು ಶಾಸನ , ರಂಗಭೂಮಿ, ತಂತ್ರಜ್ಞಾನ ಮತ್ತು ಜನಪದ ಕಲೆಗಳ ತುಲನಾತ್ಮಕ ಅಧ್ಯಯನ ಅತ್ಯಂತ ಅತ್ಯಗತ್ಯವಾಗಿದೆ . ಸಾಹಿತ್ಯದ ವಿವಿಧ ಘಟ್ಟಗಳಾದ ಇಂದಿನ ಜಾಗತೀಕರಣದ ಯುಗದಲ್ಲಿ ಅರ್ಥೈಸಲು ಸಾಹಿತ್ಯವನ್ನು ಕೇವಲ ಸಾಹಿತ್ಯಕ ದೃಷ್ಟಿಯಿಂದ ಮಾತ್ರವಲ್ಲದೆ ರಾಜಕೀಯ , ಸಾಮಾಜಿಕ ನೆಲೆಗಳಲ್ಲಿ ಅಧ್ಯಯನ ಮಾಡಬೇಕಾಗಿದೆ.

"ಕನ್ನಡ ಸಾಹಿತ್ಯ ಅಂತರಶಿಸ್ತಿಯ ನೆಲೆಗಳು" ಎಂಬ ವಿಷಯದ ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರ ಸಮ್ಮೇಳನವನ್ನು ಆಯೋಜಿಸಲಾಗಿದ್ದು. ಈ ವಿಚಾರ ಸಂಕೀರ್ಣದಲ್ಲಿ ಕನ್ನಡ ಭಾಷೆ , ಸಾಹಿತ್ಯ , ಸಂಸ್ಕೃತಿ ವಿವಿಧ ಪ್ರಕಾರಗಳ ಘಟ್ಟಗಳ ಕುರಿತು ಕನ್ನಡ ಸಾಹಿತ್ಯದ ಸಮಗ್ರ ಕವಲುಗಳ ವಿವೇಚನೆ, ಚರ್ಚೆ ಪರಿಶೀಲನೆ, ಸಂಶೋಧನೆ, ಚಿಂತನೆ, ಪರಿಚಯ ಕುರಿತು ವಿಷಯಗಳ ಮೇಲೆ ಅಭ್ಯಾಸ ಪೂರ್ಣ ಸಂಶೋಧನಾ ಲೇಖನಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಪ್ರಸ್ತುತ ಈ ಕೃತಿಯಲ್ಲಿ ವಿವಿಧ ವಿದ್ವಾಂಸರ ಲೇಖನಗಳು ತುಂಬಾ ವಿಭಿನ್ನ ವಿಶೇಷ ಹಾಗೂ ಓದುವ ಅಭಿರುಚಿಯನ್ನು ಬೆಳೆಸುತ್ತವೆ. ಈ ಸಂಪಾದನಾ ಗ್ರಂಥ ತಮ್ಮ ಕೈಯಲ್ಲಿರುವುದು ಇಲ್ಲಿ ಪ್ರಕಾಶಿತ ಗೊಂಡ ಲೇಖಕರ ಪರಿಶ್ರಮ ಈ ಕೃತಿಯು ಓದುಗರ ಗಮನ ಸೆಳೆಯಬಹುದು ಎಂಬ ಸದಾಶಯ ನಮ್ಮದು. ಹಿರಿಯ, ಕಿರಿಯ ಅಧ್ಯಯನಶೀಲ ಬರಹಗಾರರ ವಿಶಿಷ್ಟ ಬರವಣಿಗೆಯ ಸಂಗ್ರಹವಾಗಿದೆ. ವಿಭಿನ್ನ ಭಾವನೆಗಳು, ಚಿಂತನೆಗಳು, ಚರ್ಚೆಗಳು,ವಿವೇಚನೆಗಳು, ಪ್ರಸ್ತುತತೆಗಳು, ಅವಿಚ್ಛಿನ್ನ ಆಯಾಮಗಳು ಶೋಧ ನೋಟಗಳ ಕುರಿತು ಕನ್ನಡ ಮನಸ್ಸುಗಳ ಕನಸುಗಳ ಕನವರಿಕೆ, ಕಲ್ಪನೆ, ಸತ್ಯ ಶೋಧದ ವಿಷಯ ವಿಭಿನ್ನತೆಗಳಿಂದ ಕೂಡಿದ ಕನ್ನಡ ಸಾಹಿತ್ಯದ ಕವಲುಗಳ ಸಮಗ್ರವಾದ ಅವಲೋಕನಗಳ ಸಂಕಲನವೇ ಈ ಕೃತಿ.

ಈ ಕೃತಿಯ ಪ್ರಕಟಣೆಗೆ ಸಹಕರಿಸಿದ ಕೆ. ಎಲ್. ಇ ಸಂಸ್ಥೆಗೂ ನಮ್ಮ ಮಹಾವಿದ್ಯಾಲಯದ ಸ್ಥಳೀಯ ಆಡಳಿತ ಮಂಡಳಿಯ ಅಧ್ಯಕ್ಷರಾದ ಡಾ. ಮಲ್ಲಿಕಾರ್ಜುನ ಹಂಜಿ ಅವರಿಗೆ ವಿಶೇಷ ನಮನಗಳನ್ನು ಸಲ್ಲಿಸುತ್ತೇನೆ. ಅದೇ ರೀತಿ ಸ್ಥಳೀಯ ಆಡಳಿತ ಮಂಡಳಿಯ ಸದಸ್ಯರಿಗೂ ಹೃತ್ಪೂರ್ವಕ ನಮನಗಳನ್ನು ಸಲ್ಲಿಸುತ್ತೇನೆ. ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಪ್ರಶಾಂತ್ ಮಗದುಮ್ ಅವರು ನಮ್ಮೆಲ್ಲ ಕಾರ್ಯಗಳಿಗೆ ಬೆನ್ನೆಲುಬಾಗಿದ್ದರು ಅವರ ಪ್ರೇರಣೆ, ಪ್ರೋತ್ಸಾಹಗಳನ್ನು ಸ್ಮರಿಸಿ. ಅವರಿಗೆ ವಿಶೇಷವಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ವಿಚಾರ ಸಂಕಿರಣದ ಆಯೋಜಕರು, ಭಾಗವಹಿಸಿದ ಸಂಶೋಧಕರು ಹಿರಿಯ , ಕಿರಿಯ ವಿದ್ವಾಂಸರು ತಮ್ಮ ಸಮಯವನ್ನು ಮೀಸಲಿಟ್ಟು ಅತ್ಯಂತ ಕಡಿಮೆ ಸಮಯದಲ್ಲಿ ಲೇಖನಗಳನ್ನು ಕಳುಹಿಸಿ ಸಹಕರಿಸಿದ ಎಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಹಾಗೆಯೇ ಸುಂದರವಾಗಿ ಮುದ್ರಿಸಿದ ಮುದ್ರಣದವರಿಗೂ ಅನಂತ ಕೃತಜ್ಞತೆಗಳು.

08–04–2026

ಡಾ. ಭಾರತಿ ಎಸ್. ಗದ್ದಿ

Journal of Research and Development
Peer Reviewed International, Open Access Journal.
ISSN : 2230-9578 | Website: https://jrdrvb.org Volume-18, Issue-4(II)| April -2026

Sr.No.	CONTENTS	Page No.
1	ಜಾಗತೀಕರಣದ ಬಿಕ್ಕಟ್ಟನ್ನು ಮೀರಿದ ಭಾಷಾಂತರ ಪ್ರಕ್ರಿಯೆ ಡಾ. ಗಜಾನನ ನಾಯ್ಕ	1-3
2	ಕನ್ನಡ ಸಾಹಿತ್ಯ ಚರಿತ್ರೆಯನ್ನು ಕಟ್ಟುವಲ್ಲಿ ಪಾಶ್ಚಾತ್ಯ ವಿದ್ವಾಂಸರ ಕೊಡುಗೆಗಳು ಡಾ. ಸತೀಶ ಜಿ. ನಾಯ್ಕ,	4-7
3	ಕನ್ನಡ ಸಾಂಗತ್ಯ ಕಾವ್ಯಗಳಲ್ಲಿ ಬಸವಣ್ಣನವರು : ಒಂದು ಅವಲೋಕನ ಶ್ರೀ ಮಹಾದೇವಪ್ಪ ಕೊಪ್ಪದ ಪ್ರೊ. ಎಸ್. ಎಂ. ಗಂಗಾಧರಯ್ಯ	8-11
4	ಕುವೆಂಪು ಅವರ ಕಾವ್ಯದಲ್ಲಿ ಪರಿಸರ ಪ್ರಜ್ಞೆ ಡಾ. ಭಾರತಿ ಎಸ್. ಗದ್ದಿ	12-14
5	ತೇಜಸ್ವಿಯವರ ಸಾಹಿತ್ಯದಲ್ಲಿ ಪರಿಸರದ ವಾಸ್ತವ ಪ್ರಜ್ಞೆ ಸಂತೋಷ ಉಂಡಾಡಿ' ಪ್ರೊ. ಎಸ್. ಎಮ್. ಗಂಗಾಧರಯ್ಯ	15-18
6	ಕನ್ನಡ ಸಾಹಿತ್ಯದಲ್ಲಿ ಅನುವಾದದ ಹೆಜ್ಜೆ ಶ್ರೀಮತಿ ಲಕ್ಷ್ಮೀ ಎಲ್. ಪೂಜಾರಿ	19-20
7	ಕನ್ನಡದಲ್ಲಿ ನವ್ಯ ಸಾಹಿತ್ಯದ ಪರಿಭಾಷೆ ಹಾಗೂ ಇತಿಹಾಸ ಡಾ. ಸಂಗಪ್ಪ ಪಟ್ಟೇದ	21-22
8	ಹೊರನಾಡು – ಗಡಿನಾಡಕನ್ನಡ ಶಾಲೆಗಳ ಸಮಸ್ಯೆ ಮತ್ತು ಸವಾಲುಗಳು ಡಾ. ನಾಗಪ್ಪ	23-25
9	ಕನ್ನಡ ಸಾಹಿತ್ಯದಲ್ಲಿ ನಾಟಕ ಪರಂಪರೆ ಶ್ರೀ ತುಕ್ಕಪ್ಪ	26-30
10	ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರದಲ್ಲಿ ಧರ್ಮ ಸಂಘರ್ಷದ ನೆಲೆಗಳು ಡಾ. ಮೈಲಾರಪ್ಪ ಎನ್. ಶಿದ್ದಗಿರಿ	31-34
11	ಅನುಪಮಾ ನಿರಂಜನರ 'ಮಾಧವಿ' ಡಾ. ಆರತಿ ತಮದಡ್ಡಿ	35-36
12	ರವೀಂದ್ರನಾಥ ಠಾಕೂರರ ಚಾರಿತ್ರಿಕ ನಾಟಕಗಳ ವಸ್ತುವಿನ್ಯಾಸ (ಠಾಕೂರರ ಕನ್ನಡಾನುವಾದ ನಾಟಕಗಳನ್ನು ಅನುಲಕ್ಷಿಸಿ) ಡಾ. ಶಮಂತಕುಮಾರ ಕೆ.ಎಸ್	37-39
13	ಕನ್ನಡ ಸಾಹಿತ್ಯ ಮತ್ತು ಧರ್ಮ ಡಾ. ಗಾಯತ್ರಿ ಕುಲಕರ್ಣಿ	40-43
14	ಕನ್ನಡ ಸಾಹಿತ್ಯ ಮತ್ತು ತಂತ್ರಜ್ಞಾನ: ಡಿಜಿಟಲ್ ಯುಗದಲ್ಲಿ ಭಾಷಾ ಅಸ್ತಿತ್ವ, ಸಾಹಿತ್ಯಿಕ ಅಭಿವ್ಯಕ್ತಿ ಮತ್ತು ಸಾಂಸ್ಕೃತಿಕ ಪರಿವರ್ತನೆ ಕೃಷ್ಣಮೂರ್ತಿ. ಜಿ' ಶೃತಿ ಕೆ. ಎಸ್	44-49
15	ಕನ್ನಡ ನವೋದಯ ಕಾದಂಬರಿ: ಆಧುನಿಕ ಶಿಕ್ಷಣ ಚಿಂತನೆ ಕುಮಾರ ತಳವಾರ, ಡಾ. ಗಜಾನನ ನಾಯ್ಕ	50-52
16	ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀವಾದ ಅಕ್ಷಯಕುಮಾರ್. ಡಿ	53-55
17	ಬರಗೂರು ರಾಮಚಂದ್ರಪ್ಪನವರ ಒಂದು ಊರಿನ ಕಥೆ ಕಾದಂಬರಿಯ ಜಾತಿ ರಾಜಕಾರಣ ಮಲ್ಲಿಕಾರ್ಜುನ ಕಕಮರಿ ಡಾ. ಮಹೇಶ ಗಾಜಪ್ಪನವರ	56-59
18	ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸೊಬಗು ನಮ್ರತ ಡಿ.ಎನ್.	60-62
19	"ಕನ್ನಡ ಸಾಹಿತ್ಯದಲ್ಲಿ ದಾಸ ಪರಂಪರೆ" ಶ್ರೀಮತಿ ಪೂರ್ಣಿಮಾ ಅ. ಮಿಣಚೆ	63-64
20	ಗುಲಾಬಿ ಟಾಕೀಸ್ ಕಥೆ ಮತ್ತು ಚಲನಚಿತ್ರ ಅಂತರಂಗ ಸಂಬಂಧ ಡಾ.ಸುಮಾ ವ ಸಾವಂತ	65-68
21	ಕನ್ನಡ ಸಾಹಿತ್ಯದಲ್ಲಿ ಮಹಿಳಾ ವಿಮರ್ಶಕರು ಡಾ. ರವಿಕುಮಾರ. ಕೆ. ಎಂ.	69-71
22	ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸ್ತ್ರೀವಾದಿ ಸಂವೇದನೆಗಳು ಕು. ಪೂಜಾ ಮ ರೋಹಿದಾಸ.	72-73
23	ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸ್ತ್ರೀವಾದಿ ಸಂವೇದನೆಗಳು ಕು. ಪೂಜಾ ಮ ರೋಹಿದಾಸ.	74-76
24	ಬೇಟೆ ಸಾಂಸ್ಕೃತಿಕ ಪದಕೋಶ : ಜಾನಪದ ಚಹರೆ ಅಸ್ಲಮ್ ಮುಲ್ಲಾ ,ಡಾ. ಗಜಾನನ ನಾಯ	77-80

Journal of Research and Development
Peer Reviewed International, Open Access Journal.
ISSN : 2230-9578 | Website: https://jrdrvb.org Volume-18, Issue-4(II)| April -2026

25	ಕನ್ನಡ ಚಲನಚಿತ್ರಗಳ ಮೇಲೆ ಕನ್ನಡ ಸಾಹಿತ್ಯದ ಪ್ರಭಾವ ಶ್ರೀ. ಶಂಭನಗೌಡ ನೀರಲಗಿ	81-85
26	ಶ್ರೀ ಕಲ್ಮೇಶ್ವರರ ಜೀವನ ಮತ್ತು ತತ್ವಪದ ಶ್ರೀಮತಿ ಶೋಭಾಎಸ್. ಕೊಕಟನೂರ	86-88
27	ಶಾಂತಿನಾಥ ದೇಸಾಯಿಯವರ ಕಾದಂಬರಿಗಳು : ಮಹಿಳಾ ಅಸ್ತಿತ್ವ ಡಾ. ಶ್ರೀದೇವಿ ಆಲೂರ ಡಾ. ಸಿದ್ರಾಮಪ್ಪ ಕಳಸಪ್ಪ	89-92
28	ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಚೇತನ ಶ್ರೀಮತಿ ಶ್ರೀದೇವಿ ಖೋತ	93-95
29	ವೀಣಾ ಶಾಂತೇಶ್ವರಕಥನ ಸಾಹಿತ್ಯದಲ್ಲಿ ಸ್ತ್ರೀವಾದಿ ಧೋರಣೆಗಳು ಶ್ರೀಮತಿ ಆಶಾ, ಡಾ.ಸೋಮಶೇಖರ್ ಎಂ.	96-99
30	ಕನ್ನಡ ಸಾಹಿತ್ಯ ಮತ್ತು ಇತಿಹಾಸ: ಒಂದು ಸಂಶೋಧನಾತ್ಮಕ ವಿಶ್ಲೇಷಣೆ ಡಾ. ವಜ್ರೇಶ್ವರಿ ಎಸ್. ಮೂರ್ತಿ	100-103
31	ಕನ್ನಡ ಸಾಹಿತ್ಯ ಮತ್ತು ಪಂಪ: ಸಾಮಾಜಿಕ ಕಣ್ಣೋಟಗಳು. ಡಾ. ಶ್ರೀನಿವಾಸ ಎಸ್. ಜಿ.	104-106
32	ಮಹಾಕಾವ್ಯಗಳಲ್ಲಿ ಧರ್ಮ ಸಂಬಂಧಿ ನೆಲೆಗಳು ಮತ್ತು ಲಿಂಗಸಂಬಂಧಗಳು ಪ್ರೊ. ದೊಡ್ಡಬಸಪ್ಪ ಸಿದ್ದನಗೌಡ ಹುಡೇದಗಡ್ಡಿ,	107-112
33	ಕನ್ನಡ ಸಾಹಿತ್ಯಕ್ಕೆ ಡಾ.ಗೀತಾ ನಾಗಭೂಷಣ ಅವರ ಕೊಡುಗೆ ಡಾ. ವಿದ್ಯಾ ಶಿವಾನಂದ ಛಬ್ಬಿ	113-116
34	ಕಡ್ಲಿಮಟ್ಟಿ ಕಾಶಿಬಾಯಿ : ಮೌಲ್ಯ ಮತ್ತು ವಾತ್ಸಲ್ಯ ಪ್ರೊ. ಎಸ್. ಎಂ ಗಂಗಾಧರಯ್ಯ ಆರ್. ಎಚ್. ಬಿ. ರಾಘವೇಂದ್ರ	117-120
35	ತೇಜಸ್ವಿ ಕಾದಂಬರಿಗಳಲ್ಲಿ ಪರಿಸರಪ್ರಜ್ಞೆ ಬಿ ಈ ಶಿವರಾಜಕುಮಾರ ಡಾ. ರಾಜಶೇಖರಜಮದಂಡಿ	121-122
36	ಬೇಂದ್ರೆ ಕಾವ್ಯದಲ್ಲಿ ಪರಿಸರ ಪ್ರಜ್ಞೆ ಡಾ. ಕಸ್ತೂರಿ ದಳವಾಯಿ	123-126
37	ಜೈನ ಸಾಹಿತ್ಯ ಮತ್ತುಧರ್ಮ ಶ್ರೀನಿವಾಸ್ ಬಿ.ಆರ್.	127-131
38	ಆಧುನಿಕ ನಾಟಕ ಮತ್ತು ರಂಗಭೂಮಿಯಲ್ಲಿ ಡಾ. ರಾಜಪ್ಪದಳವಾಯಿ ಅವರ ಕೊಡುಗೆಗಳು ಶ್ರೀಮತಿ ವೆಂಕಟಲಕ್ಷ್ಮಿ ಎಂ.	132-134
39	ಆಧುನಿಕ ವೀರಶೈವ ಪುರಾಣಗಳ: ವೈಜ್ಞಾನಿಕ ವಿಶ್ಲೇಷಣೆ ಆತ್ಮಾನಂದ ಸಕ್ರಿಕಡ್ಡಿ,	135-137
40	ಶಿಕ್ಷಣದಲ್ಲಿ ಮಾಹಿತಿ ತಂತ್ರಜ್ಞಾನದ ಪಾತ್ರ ಡಾ. ಗೌರಮ್ಮ ಟಿ	138-140
41	ಜಿ.ಎಚ್.ಹನ್ನೆರಡುಮಠ ಅವರ ನಾಟಕಗಳಲ್ಲಿ ಸಾಮಾಜಿಕ ಸಂಘರ್ಷ ಶಿವಕುಮಾರ ನಾಯಿಕ	141-143
42	ಬಸವಾದಿ ಶರಣರ ವಚನಗಳಲ್ಲಿ ಪ್ರಕೃತಿ ವರ್ಣನೆ ಡಾ. ರಾಜಶೇಖರ ಬಿರಾದಾರ	144-148
43	ಜಾತಿ ತಾರತಮ್ಯದ ಗ್ರಹಣ ಬಿಂಬಿಸುವ ಚಲನಚಿತ್ರ –'ಗ್ರಹಣ' ನಟರಾಜು. ಎಂ	149-152
44	ಕನ್ನಡ ಸಾಹಿತ್ಯ ಮತ್ತು ಧರ್ಮ ಮೌನೇಶ ಕೆಲ್ಲೂರ	153-155

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಜಾಗತೀಕರಣದ ಬಿಕ್ಕಟ್ಟನ್ನು ಮೀರಿದ ಭಾಷಾಂತರ ಪ್ರಕ್ರೀಯೆ

ಡಾ, ಗಜಾನನ ನಾಯ್ಕ
ಸಹ ಪ್ರಾಧ್ಯಾಪಕರು
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ
ಇಮೇಲ್–gajanannaikadkar@gmail.com

Manuscript ID:
JRD -2026-180401
ISSN: 2230-9578
Volume 18
Issue 4(II)
Pp.1-3
April 2026
Submitted:05 Mar. 2026
Revised:20Mar. 2026
Accepted:05Apr.2026
Published:30 April2026

ಸಾರಲೇಖ :
ಸಮಕಾಲೀನ ಸಂದರ್ಭದಲ್ಲಿ ಭಾಷಾಂತರದ ಚಿಂತನೆ, ತತ್ವ ಮತ್ತು ತಾತ್ವಿಕತೆಗಳು ಬದಲಾಗಿ ಹೊಸ ಸ್ವರೂಪವನ್ನು ಪಡೆದುಕೊಳ್ಳುತ್ತಿದೆ. ವಸಹತು ಕಾಲಘಟ್ಟದಿಂದ ಮೊದಲ್ಗೊಂಡು ಇಲ್ಲಿಯವರೆಗೆ ಸಾಹಿತ್ಯಕ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಇತರ ಚಳುವಳಿಗಳ ನೇರ ಬಿಕ್ಕಟ್ಟನ್ನು ಮೀರ ಜಾಗತೀಕರಣವನ್ನು ತನ್ನ ಮುಖ್ಯ ಸ್ವರೂಪದಲ್ಲಿ ಜೀರ್ಣಿಸಿಕೊಂಡಿರುವುದು ಭಾಷಾಂತರದ ಮೂಲ ದ್ರವ್ಯದಲ್ಲಿರುವ ಸಾಪೇಕ್ಷ ಗುಣ. ಜಾಗತೀಕರಣ ಮೇರೆ ಮೀರಿದ ಒಂದು ಪ್ರಕ್ರಿಯೆ. ಇದರ ಹೊಡೆತದಲ್ಲಿ ಸಿಕ್ಕ ಭಾಷೆ ಮತ್ತು ಸಂಸ್ಕೃತಿಗಳು ತಮ್ಮತನ ಕಳೆದುಕೊಳ್ಳುವ ಭೀತಿಯಲ್ಲಿವೆ. ಇಂದು ಜಾಗತೀರಣದ ಕದಂಬ ಬಾಹುವಿನಲ್ಲಿ ಸಂಸ್ಕೃತಿಯೂ ಸಿಕ್ಕಿದೆ. ಸಹಜವಾಗಿ ಭಾಷಾಂತರವೂ ಇದರ ಪ್ರಭಾವಕ್ಕೆ ಒಳಗಾಗಿವೆ. ಆದರೆ ಜಾಗತೀಕರಣದ ಪ್ರಭಾವ ಭಾಷಾಂತರದ ಮೇಲೆ ಎಷ್ಟಾಗಿದೆ. ಅದನ್ನು ನಿರ್ದೇಶಿಸುವ ಸಂಗತಿಗಳಾವವು ಮತ್ತು ಅದರ ಸಾಂಸ್ಕೃತಿಕ ಪರಿಣಾಮಗಳೆನು ಎಂಬ ಚರ್ಚೆಗಳು ಅಗತ್ಯ. ಭಾಷಾಂತರವೆಂದರೆ ಕೇವಲ ಸಂವಾದಿ ಪದ ಜೋಡಣೆಯಲ್ಲ. ಅದು ವಿಭಿನ್ನ ಸಂಸ್ಕೃತಿಗಳನ್ನು ಹತ್ತಿರಕ್ಕೆ ತರುವ, ಪರಸ್ಪರ ತಿಳುವಳಿಕೆ ಮೂಡಿಸುವ ಸಾಧನ. . ಇಂದು ಭಾಷಾಂತರಶಾಸ್ತ್ರ ಪ್ರಬಲ ಶಾಖೆಯಾಗಿ ಬೇಳೆದಿದೆ. ಅದರ ಚರ್ಚೆ ಜಾಗತೀಕ ಹೆಗ್ಗುರುತಿನ ಭಾಷೆಯಾದ ಇಂಗ್ಲೀಷನ ಸುತ್ತ ಗಿರಕಿ ಹೊಡೆಯುತ್ತದೆ. ಮೂಲ ಆಕರವೇ ಭಾಷಾಂತರವಾದಾಗ ಭಾಷೆಯ ಸ್ವರೂಪದ ಅಸ್ತಿತ್ವವನ್ನು ಅಲ್ಲಾಡಿಸುತ್ತದೆ.ಈ ಹಿನ್ನೆಲೆಯಲ್ಲಿ ಜಾಗತೀಕರಣದ ಬಿಕ್ಕಟ್ಟನ್ನು ಮೀರಿರುವ ಭಾಷಾಂತರದ ಸ್ವರೂಪವನ್ನು ಪ್ರಕ್ರಿಯೆಯ ಮಾದರಯಲ್ಲಿ ಇಲ್ಲಿ ಚರ್ಚಿಸಲಾಗಿದೆ.

ಮುಖ್ಯಪದಗಳು :ಜಾಗತೀಕರಣ, ಸಾಂಸ್ಕೃತಿಕ ಪರಿಣಾಮ, ಬಹುತ್ವದ ಸಂಸ್ಕೃತಿ, ವಿಶ್ವಪ್ರಜ್ಞೆ, ಸಂಸ್ಕೃತಿ. ವಿಶ್ವಜ್ಞಾನ, ಅಸ್ತಿತ್ವ, ಸಿದ್ಧಾಂತ, ಬಿಕ್ಕಟ್ಟು, ಮೂರ್ತಸ್ವರೂಪ ಮತ್ತುಅನುಸಂಧಾನ

ಇಂದಿನ ಸಂದರ್ಭದಲ್ಲಿ ಜಾಗತೀಕರಣ ಬಹುಮುಖ್ಯ ಪ್ರಭಾವ ಮತ್ತು ಪ್ರಕ್ರಿಯೆ. ಬಹುತ್ವ ಹೊಂದಿರುವ ವಿಶ್ವವನ್ನು ಏಕರೂಪತ್ವಕ್ಕೆ ದೂಡುವ ಪ್ರಕ್ರಿಯೆ ಜಾಗತೀಕರಣವನ್ನು ಸಾಮಾನ್ಯವಾಗಿ ಆರ್ಥಿಕ ವಿದ್ಯಮಾನಕ್ಕೆ ಸಂಬಂಧಿಸಿದಂತೆ ಅಭ್ಯಸಿಸಲಾಗುತ್ತದೆ. ಜಾಗತೀಕರಣದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಣಾಮಗಳೂ ಅಷ್ಟೇ ಮುಖ್ಯವಾಗುತ್ತವೆ. ತೃತೀಯ ರಾಷ್ಟ್ರಗಳಲ್ಲಿ ಈ ಪರಿಣಾಮ ಹೆಚ್ಚು. ರೋನಾಲ್ಡ ರಾಬರ್ಟಸನಸ್ ಹೇಳುವಂತೆ, "ಜಾಗತೀಕರಣ ಎನ್ನುವುದು ಜಗತ್ತನ್ನು ಚಿಕ್ಕದಾಗಿಸುವ ಜೊತೆಗೆ ವಿಶ್ವವೇ ಒಂದು ಎಂಬ ಪ್ರಜ್ಞೆಯನ್ನು ಬಲಗೊಳಿಸಿತು". ಜಾಗತೀಕರಣ ಮೇರೆ ಮೀರಿದ ಒಂದು ಪ್ರಕ್ರಿಯೆ. ಇದರ ಹೊಡೆತದಲ್ಲಿ ಸಿಕ್ಕ ಭಾಷೆ ಮತ್ತು ಸಂಸ್ಕೃತಿಗಳು ತಮ್ಮತನ ಕಳೆದುಕೊಳ್ಳುವ ಭೀತಿಯಲ್ಲಿವೆ. ಜಾಗತೀಕ ಸಂಸ್ಕೃತಿಯ ಪರಿಕಲ್ಪನೆ ಸ್ಥಳೀಯ ಸಂಸ್ಕೃತಿಗೆ ಅಸಾಯಕಾರಿಯಾಗಿದೆ.

ಜಾಗತೀಕರಣದ ಫಲವಾದ ವಿಶ್ವ ಸಂಸ್ಕೃತಿಗೆ ಬಹುತ್ವದಲ್ಲಿ ನಂಬಿಕೆಯಿಲ್ಲ. ಭಾಷೆಯೊಂದು ಸೃಜನಶೀಲ ಪ್ರಕ್ರಿಯೆ. ಭಾಷೆ ಸಂಸ್ಕೃತಿಯನ್ನು ಅಭಿವ್ಯಕ್ತಗೊಳಿಸುವ ಮಾಧ್ಯಮ. ಭಾಷೆಯ ಅಸ್ತಿತ್ವ ಚಲನಶೀಲ. ಇಂದು ಜಾಗತೀರಣದ ಕದಂಬ ಬಾಹುವಿನಲ್ಲಿ ಸಂಸ್ಕೃತಿಯೂ ಸಿಕ್ಕಿದೆ. ಸಹಜವಾಗಿ ಭಾಷಾಂತರವೂ ಇದರ ಪ್ರಭಾವಕ್ಕೆ ಒಳಗಾಗಿವೆ. ಜಾಗತೀಕ ಭಾಷೆಗಾಗಿ ಇಂಗ್ಲೀಷನ ಪ್ರತಿಷ್ಠಾಪನೆ ಭಾಷಾಂತರ ಪ್ರಕ್ರಿಯೆಯನ್ನು ಒಮ್ಮುಖವಾಗಿಸಿದೆ. ಭಾಷೆ ಕೇವಲ ಸಂವಹನ ಮಾಧ್ಯಮವಲ್ಲ, ಅದು ನಮ್ಮ ಬದುಕಿನ ಪ್ರತಿಬಿಂಬ; ಪ್ರಭುತ್ವದ ಯಜಮಾನಿಕೆಯ ಸಂಕೇತ

ಭಾಷಾಂತರ ಇಂಗ್ಲೀಷ ಭಾಷೆ ಮತ್ತು ಸಂಸ್ಕೃತಿಗಳ ಜೊತೆಗೆ ಅನುಸಂಧಾನ ನಡೆಸಿದೆ. ಕಳೆದ ಕೆಲವು ದಶಕಗಳಿಂದ ಜಾಗತೀಕರಣದ ಕುರಿತು ಗಂಭೀರ ಚರ್ಚೆ ನಡೆಸುತ್ತಿದ್ದರೂ ಭಾಷಾಂತರ ಮತ್ತು ಜಾಗತೀಕರಣದ ಅಂತರ ಸಂಬಂಧವನ್ನು ಕುರಿತು ಆಳವಾದ ಅಧ್ಯಯನ ಕನ್ನಡದ ಸಂದರ್ಭದಲ್ಲಿ ನಡೆದಿಲ್ಲ. ಜಾಗತೀಕರಣದ ಕುರಿತು ಚರ್ಚಿಸುವಾಗ ಆರ್ಥಿಕತೆಯನ್ನು ಮುಖ್ಯವಾಗಿ ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಆದರೆ ಜಾಗತೀಕರಣದ ಪ್ರಭಾವ ಭಾಷಾಂತರದ ಮೇಲೆ ಎಷ್ಟಾಗಿದೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondenc
ಡಾ, ಗಜಾನನ ನಾಯ್ಕ, ಸಹ ಪ್ರಾಧ್ಯಾಪಕರುಶಾಸ್ತ್ರೀಯ ಕನ್ನಡ ಭಾಷಾಅಧ್ಯಯನ ಸಂಸ್ಥೆರಾಣಿಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

How to cite this article:
ಡಾ, ಗಜಾನನ ನಾಯ್ಕ,*(2026).* ***ಜಾಗತೀಕರಣದ ಬಿಕ್ಕಟ್ಟನ್ನು ಮೀರಿದ ಭಾಷಾಂತರ ಪ್ರಕ್ರಿಯೆ.*** *Journal of Research and Development, 18(4(II)), 1–3. https://doi.org/10.5281/zenodo.19394345*

Quick Response Code:
Website: https://jrdrvb.org/
DOI: 10.5281/zenodo.19394345

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಅದನ್ನು ನಿರ್ದೇಶಿಸುವ ಸಂಗತಿಗಳಾವವು ಮತ್ತು ಅದರ ಸಾಂಸ್ಕೃತಿಕ ಪರಿಣಾಮಗಳೆನು ಎಂಬ ಚರ್ಚೆಗಳು ಅಗತ್ಯ. ಭಾಷಾಂತರವೆಂದರೆ ಕೇವಲ ಸಂವಾದಿ ಪದ ಜೋಡಣೆಯಲ್ಲ. ಅದು ವಿಭಿನ್ನ ಸಂಸ್ಕೃತಿಗಳನ್ನು ಹತ್ತಿರಕ್ಕೆ ತರುವ, ಪರಸ್ಪರ ತಿಳುವಳಿಕೆ ಮೂಡಿಸುವ ಸಾಧನ. ಭಾಷಾಂತರ ಭಾಷೆಗಳ ನಡುವೆ ಕ್ರಿಯಾಶೀಲ ಸಂಬಂಧ ಚಿಗುರುವ ಸೃಜನಶೀಲ ಚಿಂತನ. ಭಾಷಾಂತರವು ಭಾಷೆ, ಸಂಸ್ಕೃತಿ ಮತ್ತು ಅಸ್ಮಿತಿಗಳ ನಿರಂತರ ಅನುಸಂಧಾನದ ಫಲ. ಮುನೌಜ್ ಕಲವ್ಯಮ್ ಮತ್ತು ಬ್ಯುಸೆ ಗೌಮೆಜ್ (Munoz Calvo,m & Buesa Gomez) ಹೇಳುವಂತೆ, "ಸಂಸ್ಕೃತಿಗಳ ನಡುವಿನ ಸಂವಾದ ಹಾಗೂ ವಿನಿಮಯಕ್ಕೆ ಭಾಷೆಗಳು ಸೀಮಿತ, ಎಲ್ಲೆ ದಾಟಿದ ಸಂಬಂಧ ರೂಪಿಸಿಕೊಳ್ಳುವುದಕ್ಕೆ ಪೂರಕ. ವಾತಾವರಣವನ್ನು ಅನುವಾದ ಸೃಷ್ಟಿಸುವ ಕಾರಣದಿಂದ ಅನುವಾದವು ಒಂದು ಸದಾಂಸ್ಕೃತಿಕ ವಾಸ್ತವವಾಗಿದೆ." (2010) ಆದ್ದರಿಂದ, ಭಾಷಾಂತರಕ್ಕೆ ಕೇವಲ ಎರಡು ಭಾಷೆಗಳ ಜ್ಞಾನ ಸಾಲದು. ಎರಡೂ ಸಂಸ್ಕೃತಿಗಳ ಅರಿವೂ ಬೇಕಾಗಿರುತ್ತದೆ. ಜಾಗತೀಕರಣದ ಈ ಸಂದರ್ಬದಲ್ಲಿ, ಭಾಷಾಂತರ ಕ್ರಿಯೆ ಸಾಕಷ್ಟು ನಡೆಯುತ್ತಿದ್ದರೂ ಅದು ಕೇವಲ ಭಾರತೀಯ ಭಾಷೆಗಳಿಂದ ಇಂಗ್ಲೀಷಗೆ' ಸಾಗುವ ಅಪಾಯಕಾರಿ ಸ್ಥಿತಿಯಲ್ಲಿದೆ. ಭಾರತದ ಬಹುತ್ವದ ಸಂಸ್ಕೃತಿ ಏಕರೂಪತ್ವಕ್ಕೆ ಹೊಂದುವ ಬಿಕ್ಕಟ್ಟಿನಲ್ಲಿದೆ. ಭಾರತೀಯ ಭಾಷೆಗಳ ನಡುವೆ ನಡೆಯುವ ಸಮಾನಾಂತರ ಭಾಷಾಂತರ ಕ್ರಿಯೆ ಕಡಿಮೆಯಾಗುತ್ತಿದೆ. ಇದು ನಮ್ಮ ಅನನ್ಯತೆಯಾದ ಬಹುತ್ವಕ್ಕೆ ಹೊಡೆತ. ಈ ಹಿನ್ನೆಲೆಯಲ್ಲಿ ಜಾಗತೀಕರಣವನ್ನು ನಿರ್ವಹಿಸುವಲ್ಲಿ ಭಾಷಾಂತರದ ಪಾತ್ರ, ಭಾಷಾಂತರ ಮತ್ತು ಸಾಂಸ್ಕೃತಿಕ ರಾಜಕಾರಣ, ತಂತ್ರಜ್ಞಾನದ ಪರಿಣಾಮ ಕುರಿತು ಚರ್ಚಿಸುವ ಅಗತ್ಯವಿದೆ. ಜಾಗತೀಕರಣದ ಅವಶ್ಯಕತೆಗಳಿಗೆ ಪೂರಕವಾದ ಹೊಂದಾಣಿಕೆಯ ಭಾವವನ್ನು ಪ್ರದರ್ಶಿಸಿವೆ. ಭಾಷಾಂತರ ವಿವಿಧ ಭಾಷೆಗಳ ನಡುವಿನ ಕೊಂಡಿಯಾಗಿ ಬಹುಭಾಷಿಕ ವಾತಾವರಣ ನಿರ್ಮಿಸಬೇಕು. ಜಾಗತೀಕರಣ ನಮ್ಮ ಸಾಮಾಜಿಕ ರಚನೆಯನ್ನು ತೀವ್ರ ಬದಲಾವಣೆಗೆ ಒಡ್ಡುತ್ತದೆ.

ಭಾರತದ ಮಟ್ಟಿಗೆ ಹೇಳುವುದಾದರೆ, ಭಾತರದ ವಿವಿಧ ಭಾಷೆಗಳ ನಡುವೆ ಸಮಾನಾಂತರ ಭಾಷಾಂತರ ಅವಶ್ಯಕವಾಗಿದೆ. ಭಾಷೆಗಳ ನಡುವೆ ಅಂತರ–ಸಾಂಸ್ಕೃತಿಕ ಸಂಬಂಧ ಬೆಳೆಸುವ ಅಗತ್ಯವಿದೆ. ಬಹು ಜನಾಂಗೀಯ, ಬಹು ಸಂಸ್ಕೃತಿಯ, ಬಹು ಭಾಷಿಕ ಭಾರತೀಯ ಸಂರಚನೆಗೆ ಪೂರಕವಾದ ಮೌಲ್ಯಗಳಾಗಿವೆ. ಇಂದು ಭಾಷಾಂತರಶಾಸ್ತ್ರ ಪ್ರಬಲ ಶಾಖೆಯಾಗಿ ಬೇಳೆದಿದೆ. ಅದರ ಚರ್ಚೆ ಜಾಗತೀಕ ಹೆಗ್ಗುರುತಿನ ಭಾಷೆಯಾದ ಇಂಗ್ಲೀಷನ ಸುತ್ತ ಗಿರಕಿ ಹೊಡೆಯುತ್ತದೆ. ಮೂಲ ಆಕರವೇ ಭಾಷಾಂತರವಾದಾಗ ಭಾಷೆಯ ಸ್ವರೂಪದ ಅಸ್ತಿತ್ವವನ್ನು ಅಲ್ಲಾಡಿಸುತ್ತದೆ. ಯಜಮಾನ ಭಾಷೆಗಳಿಗೆ ಭಾಷಾಂತರಗೊಳ್ಳುವ ಪ್ರಮಾಣ ಹೆಚ್ಚಿರುವುದರಿಂದ ಬಹುಭಾಷಿಕ ಪರಿಸರದಲ್ಲಿ ಭಾಷೆಗಳ ನಡುವಿನ ಸಂಬಂಧ ವಿರುಪೇರು ಉಂಟಾಗುತ್ತವೆ. ಒಮ್ಮುಖ ಭಾಷಾಂತರ ಸಣ್ಣ ಭಾಷೆಗಳಿಗೆ ಪೂರಕವಾಗಿದೆ. ಭಾರತದ ಭಾಷಾಂತರ ವ್ಯವಸ್ಥೆಯಲ್ಲಿ ಇಂಗ್ಲೀಷ ಕೇಂದ್ರ ಸ್ಥಾನವನ್ನು ಆಕ್ರಮಿಸಿದೆ. ಇಂಗ್ಲೀಷನಿಂದ ಮತ್ತು ಇಂಗ್ಲೀಷಗೆ ಭಾಷಾಂತರಗೊಳ್ಳುವ ರಿತಿಯನ್ನು ನಿಯಂತ್ರಿಸುತ್ತ ಭಾರತದ ಬಹುಭಾಷಾ ಪರಿಸರವನ್ನು ನಿರ್ದೇಶಿಸುತ್ತದೆ. ತ್ವರಿತಗತಿಯಲ್ಲಿ ಬದಲಾಗುತ್ತಿರುವ ಜಗತ್ತಿನ ವಿಜ್ಞಾನ, ತಂತ್ರಜ್ಞಾನ, ಚಿಂತನೆಗಳನ್ನು ಕನ್ನಡದಲ್ಲಿ ಭಾಷಾಂತರ ಕನ್ನಡ ಓದುಗರ ಜ್ಞಾನವನ್ನು ವಿಸ್ತರಿಸುತ್ತವೆ.

ಭಾಷಾಂತರ ಕೇವಲ ಸಾಹಿತ್ಯಕ ಭಾಷಾಂತರವಾಗಬಾರದು. ಜೀವನಕ್ಕೆ ಬೇಕಾದ ಎಲ್ಲ ಲಭ್ಯ ಮಾಹಿತಿ ಭಾಷಾಂತರಗೊಳ್ಳಬೇಕು. ಜಾಗತೀಕರಣ ಗಾಢವಾದ ಆತಂಕ, ಅಭದ್ರತೆ ಉಂಟುಮಾಡಿದೆ. ಕನ್ನಡದ ಅಸ್ತಿತ್ವ, ಕನ್ನಡತ್ವದ ಚಿಂತನೆಗಳು ಆತಂಕದೊಂದಿಗೆ ಮೂಡಿವೆ. ಕನ್ನಡ ಸಂಸ್ಕೃತಿ ಜಾಗತೀಕರಣದ ಎದುರಿಸಲು, ಶ್ರೀಮಂತವಾಗಿಸಲು ಭಾಷಾಂತರ ಸಹಾಯ ಮಾಡುತ್ತವೆ. ಇವತ್ತು ಜಾಗತೀಕರಣ ಕನ್ನಡಕ್ಕೆ ಯಾಕೆ ಅಪಾಯವಾಗಿ ಕಾಣುತ್ತದೆ ಎಂದರೆ ಚಿನ್ನಿಯವರು ಹೇಳುವಂತೆ ಮೊದಲಿದ್ದ ಸಾಂಸ್ಕೃತಿಕ ಸುಭದ್ರತೆ ಈಗಿಲ್ಲ. ಇವತ್ತಿನ ಜಾಗತೀಕರಣ ಕನ್ನಡದ ಗುರುತಿನ ಬಗ್ಗೆ ಕನ್ನಡತ್ವದ, ಕನ್ನಡ ಸಂಸ್ಕೃತಿ ಬಗ್ಗೆ ಕೀಳಿರಿಮೆ ಬೆಳೆಸಿದೆ.

ಕನ್ನಡ ಕೇವಲ ಸಂವಹನ ಮಾಧ್ಯಮವಾಗಿರದೆ ವಿಶ್ವವನ್ನು ಅರಿಯುವ ಮಾಧ್ಯಮವಾಗಬೇಕು. ಜಾಗತೀಕರಣ ಸಂದರ್ಭದಲ್ಲಿ ಜಗತ್ತನ್ನು ಅರ್ಥಮಾಡಿಕೊಳ್ಳಲು ಕನ್ನಡ ಉಪಯೋಗಿಸಬೇಕು. ಕನ್ನಡದ ಸಾಮರ್ಥ್ಯ ಹೆಚ್ಚಿಸುವ ಕಾರ್ಯ ಭಾಷಾಂತರ ಮಾಡುತ್ತದೆ. ಜಾಗತೀಕರಣದ ಫಲಗಳು ಇಂಗ್ಲೀಷನಿಂದ ಮಾತ್ರ ಸಿಗುತ್ತವೆ ಎಂಬ ಭಾವನೆ ಕನ್ನಡಕ್ಕೆ ಅಪಾಯಕಾರಿ. ಭಾಷೆಗೆ ರಾಜಕೀಯ, ಸಾಂಸ್ಕೃತಿಕ, ಭಾವನಾತ್ಮ ಆವರಣ ಇರುತ್ತವೆ. ಜಾಗತೀಕರಣ ಸ್ಥಳೀಯ ಸಂಸ್ಕೃತಿಗಳಿಗೆ ಅಪಾಯಕಾರಿಯಾಗಿ ಪರಿಣಮಿಸಿದೆ. ಕನ್ನಡ ಕೇವಲ ಭಾಷಾಂತರದ ಭಾಷೆಯಾಗದೆ ಕನ್ನಡವಾಗಿಸುವ ಕೆಲಸವಾಗಬೇಕು. ಭಾಷಾಂತರ ಸ್ಥಳೀಯವಾದದ್ದನ್ನು ವಿಶ್ವಾತ್ಮಕವಾಗಿಸುತ್ತವೆ. ಕನ್ನಡದ ಸಾಧ್ಯತೆಗಳನ್ನು ಹೆಚ್ಚಿಸುವ ಕೆಲಸ ಭಾಷಾಂತರದಿಂದ ಸಾಧ್ಯ. ಜಾಗತೀಕರಣದ ದೆಸೆಯಿಂದ ಭಾಷಾಂತರ ಇಂದು ವ್ಯಾಪಾರವಾಗಿದೆ. ಭಾಷಾಂತರದ ವ್ಯಾಖ್ಯಾನಗಳನ್ನು ಮೂಲ ಮತ್ತು ಭಾಷಾಂತರ ಎಂಬ ದ್ವಂದ್ವ ಒಳಗೊಂಡಿದೆ. ಅದು ಭಾಷಾಂತರವನ್ನು ಮೂಲಕ್ಕಿಂತ ಎರಡನೇಯದಾಗಿ ನೋಡುವ ಪ್ರಕ್ರಿಯೆ. ಭಾಷಾಂತರದ ಸಾಂಪ್ರದಾಯಿಕ ವ್ಯಾಖ್ಯೆಗಳು ಹೇಗೆ ಭಾಷಾಂತರವನ್ನು ಮೂಲದಿಂದ ದಾಟಿಸುವ ಕ್ರಿಯೆಯಾಗಿ ನೋಡುತ್ತವೆ.

ಜಾಗತೀಕರಣದ ಫಲವಾಗಿ ಮೊಬೈಲ್, ಅಂತರ್ಜಾಲ, ಉತ್ತಮ ರಸ್ತೆ, ಪ್ರಯಾಣ ಸೌಕರ್ಯಗಳು ಗಡಿ ದಾಟುವುದನ್ನು ಸುಲಭವಾಗಿಸಿವೆ. ದೇಶದ ಒಳಗೆ ಮತ್ತು ದೇಶ–ದೇಶಗಳ ನಡುವೆ ಸಂಪರ್ಕ ಹೆಚ್ಚಿದೆ. ಹೀಗಾಗಿ ರಾಷ್ಟ್ರ, ರಾಷ್ಟ್ರಪ್ರಜ್ಞೆಯ ವ್ಯಾಖ್ಯಾನಗಳು ಬದಲಾದಂತೆ ಭಾಷಾಂತರದ ವ್ಯಾಖ್ಯಾನಗಳೂ ಬದಲಾಗುವ ಅವಶ್ಯಕತೆ ಇದೆ. ಮರು ವ್ಯಾಖ್ಯಾನದ ಅವಶ್ಯಕತೆಯಿರುವ ಒಂದು ಪ್ರಕ್ರಿಯೆ. ಹೀಗಾಗಿ ಭಾಷಾಂತರ ಬೇರೆ ಭಾಷೆಯ ಪಠ್ಯವನ್ನು ಆಮದು ಮಾಡಿಕೊಳ್ಳುವದಲ್ಲ. ತನ್ನ ಅನುಭವಗಳನ್ನಾಧರಿಸಿ, ತನ್ನ ನೆಲೆಯಲ್ಲಿ ತನ್ನದಾಗಿಸಿಕೊಳ್ಳುವುದು. ಅದು ಯಾಂತ್ರಿಕ ಚಟುವಟಿಕೆಯಲ್ಲ. ಸ್ಥಿತಿಸ್ಥಾಪಕ ಗುಣ ಹೊಂದಿರುವ ಬೇಕಾದ ಆಕಾರ ಪಡೆಯಬಲ್ಲ ವಿಷಯ. ಒಬ್ಬ ಸಮರ್ಥ ಭಾಷಾಂತರಕಾರನಿಗೆ ಎರಡು ಭಾಷೆಗಳ ಸಂಸ್ಕೃತಿ ಆಚರಣೆಗಳ, ಪದ್ಧತಿ, ಸಾಮಾಜಿಕ ಸ್ಥಿತಿಗತಿಗಳು, ಆಚಾರ–ವಿಚಾರಗಳು, ಇತ್ಯಾದಿಗಳ ಬಗ್ಗೆ ಆಳವಾದ ಜ್ಞಾನ ಇರಬೇಕಾಗುತ್ತವೆ. ಭಾಷೆಯು ಸಂಸ್ಕೃತಿಯ ಮುಖ್ಯವಾಣಿ. ಹೀಗಾಗಿ ಬಹುಭಾಷೆಯ ಭಾಷಾಂತರ ಬಹು ಸಂಸ್ಕೃತಿಯ ಭಾಷಾಂತರ. ಸಾಹಿತ್ಯ ಕೃತಿಗಳೊಂದಿಗೆ ವೈಜ್ಞಾನಿಕ, ತಾಂತ್ರಿಕ ಲೇಖನಗಳ ಹಾಗೂ ಕೃತಿಗಳ ಭಾಷಾಂತರ ಸೇರಿಕೊಳ್ಳುವ ಮೂಲಕ ಭಾಷಾಂತರ ಪರಿಕಲ್ಪನೆ ವಿಸ್ತಾರವಾಗಿದೆ. ಅಂತರ್ಜಾಲವು ಸೃಷ್ಟಿಸಿರುವ ಅವಕಾಶಗಳಲ್ಲಿ ಪ್ರತಿಷ್ಠಿತ ಭಾಷೆಯ ಪ್ರಯೋಗ ಕ್ಷೀಣಿಸುತ್ತಿದೆ. ಇಂದು ಜಾಗತೀಕರಣದ ಸಂದರ್ಭದಲ್ಲಿ ಭಾಷಾಂತರ ಎಲ್ಲ ವಲಯಗಳಿಗೂ ಹಬ್ಬುತ್ತಿವೆ.

ಭಾಷಾಂತರ ಅನ್ನುವ ಸಾಂಸ್ಕೃತಿಕ ಚಟುವಟಿಕೆ ಏಕೆ ಸಂಭವಿಸುತ್ತದೆ, ಅದರ ಹಿಂದಿನ ಒತ್ತಡಗಳೇನು ಎಂದು ಚರ್ಚಿಸುವುದು ಒಂದು ನೆಲೆ. ಈಗ ಕನ್ನಡದಲ್ಲಿ ನಡೆಯುತ್ತಿರುವ ಭಾಷಾಂತರ ಚಟುವಟಿಕೆಯಲ್ಲಿ ಇಂಗ್ಲೀಷ ಆಕರ ಭಾಷೆಯಾಗಿ ತನ್ನ ಸ್ಥಾನವನ್ನು ಗಟ್ಟಿ ಮಾಡಿಕೊಂಡಿದೆ. ಹಲವು ವಿದೇಶಿ ಸಾಹಿತ್ಯ ಕೃತಿಗಳು ಕನ್ನಡಕ್ಕೆ ಬರುತ್ತಿರುವುದು ಇಂಗ್ಲೀಷ ಮೂಲಕವೇ. ಈಗ ಜಗತ್ತಿನ ಹಲವು ಭಾಷೆಗಳ ಸಾಹಿತ್ಯ ಕೃತಿಗಳು ಮೊದಲು ಇಂಗ್ಲೀಷಗೆ ಭಾಷಾಂತರಗೊಂಡು ಆನಂತರ ಕನ್ನಡಕ್ಕೆ ಬರುತ್ತಿವೆ. ಹಲವಾರು ಕನ್ನಡ ಭಾಷಾಂತರಗಳು ಶಿಷ್ಟ ಭಾಷೆಯಲ್ಲಿಯೇ ನಡೆಯುತ್ತಿವೆ. ಈ ಮಿತಿಗಳನ್ನು ಮೀರುವ ಅವಶ್ಯಕತೆ ಈಗ ಹೆಚ್ಚಾಗಿದೆ. ಅಂದಾಗ ಮಾತ್ರ ಕನ್ನಡ ತನ್ನ ಅಸ್ತಿತ್ವತೆಯನ್ನು ಕಾಯ್ದುಕೊಳ್ಳುವುದು ಸಾಧ್ಯ.

ಭಾಷಾಂತರ ಭಾಷೆಯಾಗಿ ಕನ್ನಡ ಕಂಡುಕೊಂಡ ಬಿಡುಗಡೆಯ ಮಾರ್ಗಗಳನ್ನು ನಾವೀಗ ಗಂಭೀರವಾಗಿ ಅಧ್ಯಯನ ಮಾಡುವುದು ಅವಶ್ಯ. ಜೊತೆಗೆ ಆ ಮಾರ್ಗಗಳ ಅನುಸರಣೆ ಕೂಡ ಬೇಕಾಗಿದೆ. ಭಾಷಾಂತರದ ಸಿದ್ಧಾಂತಗಳು ಸಾಂಸ್ಕೃತಿಕ ರಾಜಕಾರಣದ ಭಾಗವಾಗಿರುತ್ತವೆ ಎನ್ನುವುದನ್ನು ಕಂಡುಕೊಂಡು ನಾವೀಗ ಅದೇ ಬಗೆಯ ರಾಜಕಾರಣದ ಆಯ್ಕೆಗಳನ್ನು ಮಾಡಿಕೊಳ್ಳಬೇಕು.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ದಿನೇ ದಿನೇ ಪ್ರಗತಿ ಹೊಂದುತ್ತಿರುವ ತಂತ್ರಜ್ಞಾನದ ಜಾಗತೀಕರಣವನ್ನು ಫಲವನ್ನಾಗಿಯು ನೋಡಬಹುದು. ತಂತ್ರಜ್ಞಾನ, ರಾಜಕೀಯ ಆರ್ಥಿಕ ಪರಿಸ್ಥಿತಿ ಬದಲಾದಂತೆ ಭಾಷೆಯೂ ಬದಲಾಗುತ್ತವೆ. ಅಂತೆಯೇ ಭಾಷಾಂತರ ಮಾರುಕಟ್ಟೆಯ ಅಗತ್ಯಗಳೂ ಬದಲಾಗುತ್ತವೆ. ಭಾಷಾಂತರದ ಸೇವೆಯು ಜಾಗತೀಕರಣದ, ತಂತ್ರಜ್ಞಾನದ ಫಲ. ಜಾಗತೀಕರಣ ಭಾಷಾಂತರಕಾರರ ಕೆಲಸದ ರೀತಿಯನ್ನು ಶೈಲಿಯನ್ನು ಬದಲಾಯಿಸಿದೆ. ಇದು ಭಾಷಾಂತರವನ್ನು ಮರುವ್ಯಾಖ್ಯಾನಗೊಳಿಸಲು ಪ್ರೇರೆಪಿಸಿದೆ. ಸಾಮಾಜಿಕ ಸ್ತರದಲ್ಲಿ ಜಾಗತೀಕರಣ ಭಾಷಾಂತರಕಾರರನ್ನು ಎರಡು ಸಂಸ್ಕೃತಿಗಳನ್ನು ಒಂದಕ್ಕೊಂದು ಪರಿಚಯಿಸುವ ಮಾಧ್ಯಮವಾಗಿದ್ದಾರೆ. ಜಾಗತೀಕರಣವು ಜನರನ್ನು ಮತ್ತೊಂದು ಸಂಸ್ಕೃತಿಯನ್ನು ಅರಿತುಕೊಳ್ಳುವ ಅಗತ್ಯವನ್ನು ಸೃಷ್ಟಿಸಿದೆ. ಭಾಷಾಂತರ ಇದನ್ನು ಸರಳಗೊಳಿಸಿದೆ. ಜಾಗತೀಕರಣದ ಈ ಯುಗದಲ್ಲಿ ಬಹು ಮುಖ್ಯವಾದ ಜ್ಞಾನ ಶಿಸ್ತುವಾಗಿ ಭಾಷಾಂತರವು ಬೆಳೆಯತೊಡಗಿದೆ. ಭಾರತದಂತಹ ಬಹುಭಾಷೆಯ, ಬಹುಸಂಸ್ಕೃತಿಯ ದೇಶದಲ್ಲಿ ಭಾಷಾಂತರ ಅನೇಕ ಸಮಸ್ಯೆಗಳಿಗೆ ಪರಿಹಾರವಾಗಿದೆ.

ಇಂದು ಭಾಷಾಂತರ ಕೇವಲ ಸಾಹಿತ್ಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲ. ಪತ್ರಿಕೊಧ್ಯಮ, ಧರ್ಮ, ವಿಜ್ಞಾನ, ವೈದ್ಯಕೀಯ, ತಂತ್ರಜ್ಞಾನ ಮುಂತಾದ ಕ್ಷೇತ್ರಗಳಿಗೂ ವ್ಯಾಪಿಸಿದೆ. ಇಂದು ಭಾಷಾಂತರ ಕೇವಲ ಹವ್ಯಾಸವಾಗಿರದೆ ಕೆಲವರಿಗೆ ಜೀವನ ವೃತ್ತಿಯಾಗಿಯೂ ಬದಲಾಗಿದೆ. ಕಾನೂನು, ವಾಣಿಜ್ಯ, ಕೃಷಿ, ಕೈಗಾರಿಕೆ, ಆಡಳಿತ, ಶಿಕ್ಷಣ, ಆರೋಗ್ಯ ಮುಂತಾದ ವಲಯಗಳಿಗೂ ವ್ಯಾಪಿಸಿದೆ. ಭಾಷಾಂತರವೆಂದರೆ ಎರಡು ಭಾಷೆಗಳನ್ನು, ಎರಡು ಭಾಷಿಕ ಸಮೂಹಗಳನ್ನು, ಎರಡು ಸಂಸ್ಕೃತಿಗಳನ್ನು ಒಂದುಗೂಡಿಸುವ ಕಲೆ. ಭಾಷಾಂತರ ಒಂದು ಸಾಹಿತ್ಯದ ಮತ್ತು ಸಮಾಜದ ಬದಲಾವಣೆಗೆ ಕಾರಣವಾಗಿದೆ. ಕನ್ನಡದಲ್ಲೂ ಆಧುನಿಕ ವಿಚಾರಗಳ ಪ್ರವೇಶವಾದದ್ದು ಭಾಷಾಂತರದ ಮುಖಾಂತರವೇ.

ಭಾಷಾಂತರ ಅಧ್ಯಯನಕಾರರ ಪ್ರಕಾರ ಉತ್ತಮ ಭಾಷಾಂತರವೆಂದರೆ ರಾಜಕೀಯ, ಸಾಂಸ್ಕೃತಿಕ–ಭಾಷಿಕ ಒತ್ತಡಗಳ ಅರಿವಿನಿಂದ ಮೂಡಿದ, ಎಚ್ಚರಿಕೆಯಿಂದ ಮೂಲಕ್ಕೆ ಸಾಧ್ಯವಿದ್ದಷ್ಟು ಹತ್ತಿರವಿದ್ದು, ತನ್ನ ಅಪರಿಚಿತ ಅಂಶಗಳನ್ನು ಉಳಿಸಿಕೊಂಡ ಭಾಷಾಂತರ. ಎಂದರೆ ಭಾಷಾಂತರ 'ಭಾಷಾಂತರ'ದಂತೆಯೇ ಕಾಣಬೇಕಲ್ಲದೆ ಸ್ವತಂತ್ರ ಕೃತಿಯಂತಲ್ಲ. ಜಾಗತೀಕರಣದ ಈ ಹೊತ್ತಿನ ಸಾಂಸ್ಕೃತಿಕ ಪರಿಸರದಲ್ಲಿ ಭಾಷಾಂತರದ ಬಗ್ಗೆ ಹೆಚ್ಚು ಚರ್ಚೆ ನಡೆಯುತ್ತಿದೆ. ಈ ಚರ್ಚೆಯ ಹಿಂದಿನ ಆಶಯ ಭಾಷಾಂತರ ಕ್ರಿಯೆಯ ಹಿಂದಿನ ಅನನ್ಯತೆಯನ್ನು ಶೋಧಿಸಿಕೊಳ್ಳುವುದು. ಹಿಂದೆ ಭಾಷಾಂತರ ಕ್ರಿಯೆ, ಸಾಹಿತ್ಯ, ಭಾಷೆಗಳ ನೆಲೆಯಲ್ಲಿ ಮಾತ್ರ ಚರ್ಚೆಗೆ ಒಳಗಾಗುತ್ತಿತ್ತು. ಭಾಷಾಂತರವನ್ನು ಹುರಿತ ಚಿಂತನೆ ಇಂದು ಅತ್ಯಂತ ಸಂಕೀರ್ಣವಾದ ಪ್ರಶ್ನೆಗಳನ್ನು ಎದುರಾಗಿಸುವದೊಂದಿಗೆ ತನ್ನ ಅಸ್ತಿತ್ವದ ಹುಡುಕಾಟ ರೂಪಿಸಿಕೊಳ್ಳುವುದರ ಕಡೆ ಹೊರಟಿರುವುದು ಕಾಣುತ್ತದೆ.

ಭಾಷಾಂತರವು ಕನ್ನಡಕ್ಕೆ ಹೊಸ ಚೇತನ ತರುವುದರ ಜೊತೆಗೆ ಅದರ ಬೆಳವಣಿಗೆಗೂ ಕಾರಣವಾಗಿದೆ. ಕನ್ನಡದ ಶಕ್ತಿ ಸಾಮರ್ಥ್ಯಗಳಿಗೆ ಸವಾಲಾಗಿ, ಅಭಿವ್ಯಕ್ತಿಯ ಹೊಸ ಆಯಾಮಗಳನ್ನು ದೊರಕಿಸಿದೆ. ಭಾಷೆಯನ್ನು ಮತ್ತಷ್ಟು ಶ್ರೀಮಂತವಾಗಿಸಿದೆ. ಹೊಸ ಆಲೋಚನೆಗಳ, ತತ್ವಗಳ ಅಭಿವ್ಯಕ್ತಿಗೆ ತನ್ನದೇ ಆದ ಮಾರ್ಗ ಕಂಡುಕೊಂಡಿವೆ. ಭಾಷಾಂತರ ಸಾಂಸ್ಕೃತಿಕ ಪರಂಪರೆ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಜಗತ್ತಿನ ಇತರ ಭಾಷೆಗಳ ಪರಂಪರೆಯನ್ನು ಪರಸ್ಪರ ಪರಿಚಯಿಸುವುದರಲ್ಲಿ ಭಾಷಾಂತರ ಬಹುಮುಖ್ಯ ಪಾತ್ರವಹಿಸುತ್ತದೆ. ಪ್ರಗತಿಶೀಲವು ಪರಿವರ್ತನಶೀಲವು ಆದ ಜಾಗತೀಕರಣದ ಜಗತ್ತಿನಲ್ಲಿ ಈ ಹೊತ್ತಿನಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಭಾಷಾಂತರ ಪ್ರಕ್ರಿಯೆಯು ಅನಿವಾರ್ಯವಾಗಿದೆ. ಭಾಷಾಂತರದ ಮೂಲಕ ಇತರ ಸಂಸ್ಕೃತಿಯ ಚಿಂತನೆಗಳು ನಮ್ಮ ಸಂಸ್ಕೃತಿಯನ್ನು ಪ್ರವೇಶಿಸುತ್ತವೆ. ಭಾಷಾಂತರವು ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಜನಜೀವನವನ್ನು ವಿಶ್ವದಾದ್ಯಂತ ಪರಿಚಯಿಸುವ, ಕರ್ನಾಟಕದ ಬಗೆಗಿನ ಅರಿವನ್ನು ವಿಸ್ತರಿಸುವ, ಅನಂತಮುಖಿಯಾದ ವಿಶ್ವಜ್ಞಾನವನ್ನು ಕನ್ನಡ ಜ್ಞಾನವನ್ನಾಗಿಸಿ ಪರಿವರ್ತಿಸಿ ಅದು ಕನ್ನಡಿಗರಿಗೆ ನಿಲುಕುವಂತೆ ಮಾಡುವ ಸಾಮರ್ಥ್ಯ ಹೊಂದಿದೆ. ಕನ್ನಡ ಪ್ರಜ್ಞೆಯನ್ನು ವಿಶ್ವ ಪ್ರಜ್ಞೆಯಾಗಿಸಬಲ್ಲದು. ವಿಶ್ವಪ್ರಜ್ಞೆಯನ್ನು ಕನ್ನಡ ಸಂಸ್ಕೃತಿಯಲ್ಲಿ ಸಮನ್ವಯಗೊಳಿಸಬಲ್ಲದು. ಕನ್ನಡ ಮಾನವ ವಿಶ್ವಮಾನವನಾಗಲು ಸಾಧನವಾಗಬೇಕು.

ಪರಾಮರ್ಶನ ಗ್ರಂಥಗಳು :

1, ಜಾಗತೀಕರಣ, ಕೇಶವ ಶರ್ಮ
2. ಅನುವಾದ ಸಂಪುಟಗಳು (1 ಮತ್ತು 2), (ಸಂ), ನಟರಾಜ ಹುಳಿಯಾರ್
3. ಕನ್ನಡ ಮತ್ತು ಇಂಗ್ಲೀಷ ಸಂಬಂಧ, ಸಿ ನಾಗಣ್ಣ
4. ಭಾಷಾಂತರದ ಪೂರ್ವ ಪೀಠಿಕೆ. ಗಜಾನನ ನಾಯ್ಕ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

Original Article

ಕನ್ನಡ ಸಾಹಿತ್ಯ ಚರಿತ್ರೆಯನ್ನು ಕಟ್ಟುವಲ್ಲಿ ಪಾಶ್ಚಾತ್ಯ ವಿದ್ವಾಂಸರ ಕೊಡುಗೆಗಳು

ಡಾ. ಸತೀಶ ಜಿ. ನಾಯ್ಕ,
ಕನ್ನಡ ಉಪನ್ಯಾಸಕ
ಜಿ.ಐ. ಬಾಗೇವಾಡಿ ಕಲಾ,
ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು,
ನಿಪ್ಪಾಣಿ 591237

Manuscript ID:
JRD -2026-180402
ISSN: 2230-9578
Volume 18
Issue 4(II)
Pp.4-7
April 2026
Submitted: 05 Mar. 2026
Revised: 20 Mar. 2026
Accepted: 05 Apr. 2026
Published: 30 April 2026

ಸಾರಲೇಖ :

ನಮ್ಮ ಭಾರತೀಯ ಜನಜೀವನದ ಇತಿಹಾಸವನ್ನು ಅಧ್ಯಯನ ಮಾಡುವ ವೈಜ್ಞಾನಿಕ ಯತ್ನ ಆರಂಭವಾದುದು ಪಾಶ್ಚಾತ್ಯರ ಆಗಮನದ ನಂತರವೇ. ಭಾರತೀಯ ಅಥವಾ ಕನ್ನಡ ನಾಡಿನ ಇತಿಹಾಸ ರಚನೆಯಲ್ಲಿ ಪಾಶ್ಚಾತ್ಯ ವಿದ್ವಾಂಸರ ಪರಿಶ್ರಮ ಅತೀವವಾಗಿದೆ. ಕನ್ನಡ ಸಾಹಿತ್ಯ–ಪರಂಪರೆಯ ಸಂದರ್ಭಕ್ಕೂ ಈ ಮಾತು ನಿಜ. ಕನ್ನಡ ಸಾಹಿತ್ಯ ಚರಿತ್ರೆಯು ಮೊದಲು ದಾಖಲೆಯಾದದ್ದು ಪಾಶ್ಚಾತ್ಯ ಮಿಷನರಿ ಅಧಿಕಾರಿಗಳಿಂದ. ಲಭ್ಯವಿದ್ದ ಆಕರ ಸಂಪನ್ಮೂಲಗಳನ್ನು ಒಂದು ಜ್ಞಾನ ಶಿಸ್ತುಗಳ ಸಂಕಥನೀಯ ಮಾದರಿಗೆ ಅಳವಡಿಸಿ ಅದನ್ನು ಅಧ್ಯಯನ ಯೋಗ್ಯವಾಗಿಸಿದರು. ಬ್ರಿಟಿಷರು ತಮ್ಮ ಮೂಲ ನೆಲೆಯಿಂದ ಜಗತ್ತಿನ ಇತರೆ ಕಡೆಗಳತ್ತ ವಲಸೆ ಹೋಗಿ ಹೊಸ ಜಗತ್ತನ್ನು ಕಂಡಿದ್ದರಿಂದ ಅವರಿಗೆ ತಾವು ಕಂಡ ಪ್ರತಿಯೊಂದನ್ನು ಸಹ ದಾಖಲಿಸುವ ಪ್ರವೃತ್ತಿ ಬೆಳೆಯಿತು. ಈ ಪ್ರಕಾರದಲ್ಲಿ ಸಾಹಿತ್ಯವನ್ನು ಸಹ ಒಂದು ದಾಖಲೆಯ ಸ್ವರೂಪದಲ್ಲಿ ಅವರು ನಿರ್ವಚಿಸಿದರು. ಹಾಗೆ ನಿರ್ವಚಿಸಿದವರಲ್ಲಿ ವೈಗಲ್, ಜೆ.ಎಫ್. ಕಿಟ್ಟೆಲ್, ಬಿ.ಎಲ್. ರೈಸ್, ಈ.ಪಿ. ರೈಸ್ ಮುಂತಾದವರು. ಅವುಗಳು ವಿಸ್ತೃತ ಟಿಪ್ಪಣಿ ಸಹಿತ ಲೇಖಕ–ಗ್ರಂಥ ಸೂಚಿಯಾಗಿದೆ. ಕಾಲ–ದೇಶಗಳ ಬಗ್ಗೆ ಲಭ್ಯವಿದ್ದ ಮಾಹಿತಿಗಳಾದ್ದರಿಂದ ಅವು ಶೋಧ ಸಂಗ್ರಹವಾಗಿತ್ತು ಅಷ್ಟೇ. ಮುಂದಿನ ತಲೆಮಾರಿಗೆ ನೀಡುವ ಜ್ಞಾನಸ್ವರೂಪದ ದಾಖಲೆಯಾಗಿತ್ತು. ಈ ದಾಖಲೀಕರಣದ ಹಿಂದಿನ ಒತ್ತಡ ಮತ್ತು ಅನಿವಾರ್ಯತೆ ಏನಿತ್ತು? ಆ ಕಾಲದ ಧಾರ್ಮಿಕತೆ ಮತ್ತು ರಾಜಕೀಯತೆ ಚರಿತ್ರೆಯನ್ನು ಕಟ್ಟುವಲ್ಲಿ ಯಾಕೆ ಪ್ರೇರಣೆ ನೀಡಿದವು? ಕನ್ನಡಕ್ಕೆ ಅದರಿಂದಾದ ಲಾಭಗಳೇನು? ಎನ್ನುವುದು ಮಹತ್ವವಾಗಿದೆ.

ಮುಖ್ಯ ಪದಗಳು : ಜನಬದುಕು, ಇತಿಹಾಸ, ಸಂಕಥನೀಯ, ಜ್ಞಾನಶಿಸ್ತು, ಪಾಶ್ಚಾತ್ಯ, ನಿರ್ವಚನ, ಕಾಲ–ದೇಶ, ಭಾರತೀಯತೆ.

ಹದಿನೆಂಟರಿಂದ ಇಪ್ಪತ್ತನೆಯ ಶತಮಾನದ ಇನ್ನೂರು ವರ್ಷಗಳ ಕಾಲದಲ್ಲಿ ಉಂಟಾದ ಒಂದು ಅಪೂರ್ವ ರಾಜಕೀಯ ಮತ್ತು ಸಾಂಸ್ಕೃತಿಕ ಉತ್ಕ್ರಾಂತಿಯು ಈ ದೇಶದ ಸಹಸ್ರಾರು ವರ್ಷಗಳ ಚರಿತ್ರೆಯಲ್ಲಿ ಎಂದೂ ಕಂಡಿರದ ವಿಶಿಷ್ಟ ಘಟನೆಯಾಗಿದೆ. ಪಾಶ್ಚಾತ್ಯರ ಆಗಮನವೇ ಈ ದೇಶವನ್ನು ಆಧುನಿಕ ಜಗತ್ತಿನ ಬಯಲಿಗೆ ತಳ್ಳಿತು ಎನ್ನುವುದರಲ್ಲಿ ಎರಡು ಮಾತಿಲ್ಲ. ಆಧುನಿಕತೆ ಎನ್ನುವ 'ಬಯಲು' ಅನೇಕ ಬದಲಾವಣೆಗೆ ಕಾರಣವಾಯಿತು. ಈ ಬದಲಾವಣೆಗಳ ಮೂಲಕ ಅನ್ಯ ಜ್ಞಾನಗಳ ಅಧ್ಯಯನ ಶಿಸ್ತುಗಳು ನಮಗೆ ಪರಿಚಯವಾದವು. ಎಷ್ಟರ ಮಟ್ಟಿಗೆ ಎಂದರೆ ಕ್ರಿ.ಶ. 8ನೆಯ ಶತಮಾನದಿಂದ 18ನೆಯ ಶತಮಾನದವರೆಗಿನ ಒಂದು ಸಾವಿರ ವರ್ಷಗಳ ಕಾಲದ ಸಾಹಿತ್ಯ ಬರವಣಿಗೆಯ ಸ್ಥಿತಿಗತಿಗಳಿಗೂ, 18ನೆಯ ಶತಮಾನದ ಈಚೆಗೆ ಉಂಟಾದ ಬೌದ್ಧಿಕ ಬೆಳವಣಿಗೆಗೆ ಒಂದು ಅಂತರ ಪಡೆಯುವುದನ್ನು ಕಾಣಬಹುದು. ಇನ್ನೂರು ವರ್ಷಗಳ ವಸಾಹತುಶಾಹಿ ಕಾಲದಲ್ಲಾದ ರಾಜಕೀಯ, ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಬೆಳವಣಿಗೆಗಳು ನಮ್ಮ ಬದುಕಿನ ಶೈಲಿಯನ್ನು ಮುರಿದು ಕಟ್ಟುಕೊಳ್ಳುವಂತೆ ಪ್ರೇರೆಪಿಸಿತು. ಆ ಮೂಲಕ ನಮ್ಮ ಪರಂಪರೆ ಮತ್ತು ಚರಿತ್ರೆಯನ್ನು ಪ್ರಶ್ನಿಸುವಂತೆ ಮಾಡಿತು. ಆ ಕಾಲಘಟ್ಟದಲ್ಲಾದ ಬೌದ್ಧಿಕ ಮತ್ತು ಭೌತಿಕ ಪರಿವರ್ತನೆಗೆ ಕ್ರಿಶ್ಚಿಯನ್ ಮಿಷನರಿಗಳು ಮತ್ತು ಪಾಶ್ಚಾತ್ಯ ವಿದ್ವಾಂಸರ ಕಾಯಕವೇ ಕಾರಣ.

ಕ್ರಿಶ್ಚಿಯನ್ ಧರ್ಮದ ಪ್ರಸಾರಕ್ಕಾಗಿಯೇ ಮಿಷನರಿಗಳು ಮತ್ತು ಮಿಷನರಿ ವಿದ್ವಾಂಸರು ಭಾರತಕ್ಕೆ ಬಂದಿದ್ದು. ಸಮಾಜಸೇವೆಯ ಘನೋದ್ದೇಶವಿದ್ದರೂ ಕೂಡ ತಮ್ಮ ಮತಪ್ರಚಾರದ ನೆಪವನ್ನು ಪ್ರಧಾನವಾಗಿಟ್ಟುಕೊಂಡು ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರವನ್ನು ಬಳಸಿಕೊಂಡು ಜನರೊಂದಿಗೆ ಬೆರೆತರು. ಜನ ಭಾಷೆಯನ್ನು ಕಲಿತರು. ಇದರಿಂದ ಅವರ ಮತಧರ್ಮ ಪ್ರಚಾರ ಕಾರ್ಯಕ್ಕೆ ಎಷ್ಟು ಸಹಾಯವಾಯಿತೋ ತಿಳಿಯದು. ಅದಕ್ಕಿಂತ ಹೆಚ್ಚಿನ ಉಪಕಾರವು ನಮ್ಮ ದೇಶಭಾಷೆಗಳಿಗೆ ದೊರಕಿತು ಎಂದರೆ ತಪ್ಪಾಗಲಾರದು. ಇದರ ಸ್ಪಷ್ಟನೆಗೆ ಬಿ. ಎಂ. ಶ್ರೀಕಂಠಯ್ಯನವರು ಮಾಡಿದ ಒಂದು ಉಪನ್ಯಾಸದ ಸಾರಾಂಶವನ್ನು ಕೊಡಬಹುದು–"ನಮ್ಮ ದೇಶಭಾಷೆಗಳ ಈಗಿನ ಚರಿತ್ರೆಯಲ್ಲಿ ಕ್ರೈಸ್ತ ಪಾದ್ರಿಗಳಿಗೆ ಪ್ರಥಮ ಸ್ಥಾನವನ್ನು ಕೊಡಬೇಕಾಗಿದೆ. ನಮ್ಮ ಸೀಮೆಯಲ್ಲಿ ಮೊತ್ತಮೊದಲ ಹಳೆಯ ತಾಳೆಯೋಲೆಗಳನ್ನು ಶೋಧಿಸಿ, ಸಾಹಿತ್ಯ ಗ್ರಂಥಗಳನ್ನು ಹೊರತೆಗೆದು, ಅಚ್ಚುಕೂಟವನ್ನು ಒದಗಿಸಿಕೊಟ್ಟು, ಪುಸ್ತಕಗಳನ್ನು ಪ್ರಕಟಿಸಿದವರು ಹೆಚ್ಚಾಗಿ ಕ್ರೈಸ್ತ ಮಿಷನರಿಗಳು. 'ಕನ್ನಡದಲ್ಲಿ ಡಾ.ಜೆ.ಎಫ್.ಕಿಟ್ಟಲ್, ತೆಲುಗಿನಲ್ಲಿ ಡಾ.ರಾಬಲ್ಟ ಬ್ರೌನ್, ತಮಿಳಿನಲ್ಲಿ ಡಾ.ಎಡ್ವರ್ಡ್ ಪೋಪ್, ಮಲೆಯಾಳಂನಲ್ಲಿ ಡಾ.ಗುಂಡರ್ಟ– ಈ ನಾಲ್ವರೂ ಆಯಾ ದೇಶ ಭಾಷೆಗಳನ್ನು ಪಂಡಿತರ ಸಹಾಯದಿಂದ ಚೆನ್ನಾಗಿ ಕಲಿತು ಹಳೆಯ ಗ್ರಂಥಗಳನ್ನು ಬೆಳಕಿಗೆ ತಂದದ್ದಲ್ಲದೆ, ವ್ಯಾಕರಣ ನಿಘಂಟುಗಳನ್ನು ರಚಿಸಿ ಭಾಷಾಶಾಸ್ತ್ರ ವ್ಯಾಸಂಗಕ್ಕೆ ಸಾಮಗ್ರಿ ಕೂಡ ಹಾಕಿದರು. ಆ ಬಳಿಕ ಡಾ. ಕಾಲ್ಡವೆಲ್ ಅವರು ಈ ನಾಲ್ವರ ಕೆಲಸವನ್ನೂ ಕ್ರೋಡೀಕರಿಸಿ, ಬಹುಕಾಲ ಶ್ರಮಪಟ್ಟು ಆಳವಾಗಿ ಪರಿಶೋಧಿಸಿ,

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ. ಸತೀಶ ಜಿ. ನಾಯ್ಕ, ಕನ್ನಡ ಉಪನ್ಯಾಸಕ ಜಿ.ಐ. ಬಾಗೇವಾಡಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ನಿಪ್ಪಾಣಿ

How to cite this article:
ಡಾ. ಸತೀಶ ಜಿ. ನಾಯ್ಕ,. (2026). ಕನ್ನಡ ಸಾಹಿತ್ಯ ಚರಿತ್ರೆಯನ್ನು ಕಟ್ಟುವಲ್ಲಿ ಪಾಶ್ಚಾತ್ಯ ವಿದ್ವಾಂಸರ ಕೊಡುಗೆಗಳು. Journal of Research and Development, 18(4(II)), 4–7. https://doi.org/10.5281/zenodo.19394408

Quick Response Code:
Website: https://jrdrvb.org/
DOI: 10.5281/zenodo.19394408
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

ಆರ್ಯಭಾಷಾ ವರ್ಗದಿಂದ ಭಿನ್ನವಾದ ದ್ರಾವಿಡ ಭಾಷಾ ವರ್ಗವೊಂದುಂಟು ಎಂಬ ತಮ್ಮ ಅಭಿಪ್ರಾಯವನ್ನು ಜನಗಳ ಮುಂದಿಟ್ಟರು."*

"ಭಾರತದಲ್ಲಿ ಬ್ರಿಟೀಷರ ಆಡಳಿತದ ಪ್ರಭಾವದಿಂದ, ಯುರೋಪ್ ನಾಗರಿಕತೆಯನ್ನು ತಿಳಿದುಕೊಂಡದ್ದರಿಂದ, ಸಂಶೋಧನೆಯ ಪಾಶ್ಚಿಮಾತ್ಯ ರೀತಿಗಳು ಮತ್ತೂ ಪಾಡಿಂತ್ಯದ ಆದರ್ಶಗಳು ಇಲ್ಲಿ ಆಂರಭವಾದ್ದರಿಂದ 19ನೆಯ ಶತಮಾನದ ಆದಿಯಲ್ಲಿ ಕನ್ನಡ ಸಾಹಿತ್ಯದಲ್ಲಿ ಹೊಸ ಯುಗವೇ ಆರಂಭವಾಗಿದೆ"[1] ಎಂದು ಇ.ಪಿ.ರೈಸರು ತಮ್ಮ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹೇಳಿದ್ದಾರೆ. ಭಾರತೀಯ ಚರಿತ್ರೆ, ಸಾಹಿತ್ಯ, ಶಾಸನ, ನಾಣ್ಯಗಳು, ಕಲೆ–ವಾಸ್ತುಶಿಲ್ಪ, ಮುಂತಾದ ಕ್ಷೇತ್ರಗಳ ಮೇಲೆ ಸಂಶೋಧನಾ ಲೇಖನಗಳನ್ನು ಬರೆದವರ ಸಂಖ್ಯೆ ಸಾವಿರಕ್ಕೂ ಮಿಕ್ಕಿ ಇದೆ. ಕರ್ನಾಟಕದಲ್ಲಿ ಅಂಧಕಾರವಿರುವಾಗ, ಕನ್ನಡಿಗರ ಭಾಷಾಭಿಮಾನ ಕುಗ್ಗುತ್ತಿರುವಾಗ, ಕನ್ನಡ ಜನತೆಯಲ್ಲಿ ಭಾಷೆಯ ಹಿಗ್ಗಿನ ಸೇವೆಯನ್ನು ಹರಿಸಲು ಮಿಷನರಿಗಳು ಮತ್ತು ಪಾಶ್ಚಾತ್ಯ ವಿದ್ವಾಂಸರು ಪ್ರಯತ್ನಿಸಿದ್ದಾರೆ. ಕನ್ನಡ ನಾಡಿನ ನೆಲ, ಜಲ, ಸಂಸ್ಕೃತಿ, ಚರಿತ್ರೆ, ಭಾಷೆ–ಸಾಹಿತ್ಯದ ಕುರಿತು ಮಹತ್ವದ ಅಂಶಗಳನ್ನು ಸಂಗ್ರಹಿಸಿ ದಾಖಲಿಸಿದವರು ಮಿಷನರಿ ವಿದ್ವಾಂಸರು. ಇವರು ಸಂಗ್ರಹಿಸಿದ ಬರವಣಿಗೆಗಳನ್ನು 'Asiatic Research', 'Asiatic Journal', 'Calcutta Review', 'Madras literary Review', 'Indian Antiquary', ಇಟಲಿಯ ಪತ್ರಿಕೆಯಾದ 'Societa Asiatica Italiana' ಜರ್ಮನ್] ಪತ್ರಿಕೆಯಾದ 'ZDMD'(Zeitschrift der Deutschen Morgenlandischen Gessels chaft) ಮುಂತಾದ ಪತ್ರಿಕೆಗಳಲ್ಲದೆ, ಯುರೋಪ್ ಖಂಡದ 'Asiatic Society' ಶಾಖೆಗಳ ಪತ್ರಿಕೆಗಳು ಮತ್ತು ಸಾಹಿತ್ಯ ಪತ್ರಿಕೆಗಳು ಸಹಸ್ರಾರು ಸಂಶೋಧನಾ ಲೇಖನಗಳನ್ನು ಪ್ರಕಟಿಸಿವೆ.

ಭರತಖಂಡದಲ್ಲಿ 19ನೆಯ ಶತಮಾನ ಸಾಹಿತ್ಯದ ದೃಷ್ಟಿಯಿಂದ ಬರದ ಕಾಲ. ಆಗ ಬೆರಳೆಣಿಕೆಯ ಕನ್ನಡ ಬರವಣಿಗೆಗಳು ಓದುಗರಿಗೆ ಲಭ್ಯವಿತ್ತು. ಕನ್ನಡ ಸಾಹಿತ್ಯ ಉದಯವಾದ ಕಾಲದಿಂದ ಸಾಹಿತ್ಯವೆಲ್ಲ ಹೆಚ್ಚಾಗಿ ಸಂಸ್ಕೃತದಿಂದ ಪ್ರೇರಣೆ ಪಡೆದು ಕನ್ನಡ ಜೈನ, ವೀರಶೈವ, ಬ್ರಾಹ್ಮಣ, ಮತ್ತು ವೈಷ್ಣವ ವರ್ಗಗಳಿಂದ ಕಟ್ಟಲ್ಪಟ್ಟಿದೆ. "ಕನ್ನಡ ಸಾಹಿತ್ಯಕ್ಕೆ ಸಂಸ್ಕೃತ ಸಾಹಿತ್ಯವೇ ಪ್ರೇರಕ, ಪೋಷಕ, ಗುರು"[2]–ಎಂದು ಬಿ.ಎಂ.ಶ್ರೀಯವರು ಹೇಳಿದರು. ಯಾವಾಗ ಕನ್ನಡಕ್ಕೆ ಪಶ್ಚಿಮದ ಬೌದ್ಧಿಕ ಚಟುವಟಿಕೆಗಳ ಪ್ರಭಾವ ಬೀರಿತೋ, ಆವಾಗ ಕನ್ನಡ ಸಾಹಿತ್ಯದ ರಚನೆ ಮತ್ತು ಅಧ್ಯಯನದಲ್ಲಿನ ಗತಿ ಬದಲಾಯಿತು. ಬದಲಾದ ಈ ಹೊಸ ಯುಗದಲ್ಲಿ ಪಶ್ಚಿಮದ ಪ್ರತಿಭೆಯ ಮೂಲಕ ಕ್ರೈಸ್ತ ಮತದ ಅಟ್ಲಾಂಟಿಕ್, ಫ್ಯಾಸಿಪಿಕ್ ಸಮುದ್ರಗಳು ಕನ್ನಡ ಸಮಾಜಕ್ಕೆ ಹತ್ತಿರವಾದವು. ಆ ಹೊತ್ತಿಗಾಗಲೇ ಕನ್ನಡ ನೆಲದಲ್ಲಿ ಕ್ರೈಸ್ತ ಮಿಷನರಿಗಳು ಕಾಲಿಟ್ಟಿದ್ದವು. ಇಲ್ಲಿಯ ಜನರನ್ನು ಮನಗಂಡ ಅವರು ಜನರಿಗೆ ಅನುಕೂಲವಾಗುವ ಬೈಬಲ್ ಸಾಹಿತ್ಯ ಮತ್ತು ಇತರ ಕ್ರೈಸ್ತ ಸಾಹಿತ್ಯದ ನಿರ್ಮಿತಿಗೆ ಕೈ ಹಾಕಿದರು. ಈ ಅಧ್ಯಯನದ ಜೊತೆಗೆ ಆರಂಭವಾದ ಕನ್ನಡ ಭಾಷಾಚರಿತ್ರೆ, ಹಳೆಯ ಶಾಸನ, ನಾಣ್ಯಗಳು, ಕಲೆ–ವಾಸ್ತುಶಿಲ್ಪ, ವ್ಯಾಕರಣ, ಇತಿಹಾಸ, ಗ್ರಂಥಸಂಪಾದನೆ ಮತ್ತು ಸಾಹಿತ್ಯ ಚರಿತ್ರೆ ಎಂಬ ಮೊದಲಾದ ಹೊಸ ಹೊಸ 'ಶಾಸ್ತ್ರ'ಕ್ಕೆ ಸಂಬಂಧಪಟ್ಟ ವಿಷಯಗಳ ಬಗೆಗೂ ಗ್ರಂಥ ರಚನೆ ಮಾಡಿದರು. ಅವರಲ್ಲಿ 'ಸಾಹಿತ್ಯ ಚರಿತ್ರೆಯ' ಕುರಿತು ಕೆಲಸ ಮಾಡಿದ ಪ್ರಮುಖರೆಂದರೆ ಜಿ.ವೆಗ್ಲೈ, ಜೆ.ಎಫ್. ಕಿಟ್ಟೆಲ್, ಹರ್ಮನ್ ಮೋಗ್ಲಿಂಗ್, ಬಿ.ಎಲ್.ರೈಸ್, ಇ.ಪಿ.ರೈಸ್ ಮತ್ತು ಜೆ.ಎಫ್. ಫ್ಲೀಟ್.

'ಸಾಹಿತ್ಯ ಚರಿತ್ರೆ' ಎಂಬ ಒಂದು ಹೊಸ ಪ್ರಕಾರವೊಂದು ಕನ್ನಡ ಲೋಕಕ್ಕೆ ಪರಿಚಯವಾಗುವ ಪ್ರಮೇಯವೇ ಇರಲಿಲ್ಲ. ಆದರೆ 19ನೆಯ ಶತಮಾನದಲ್ಲಿ ಕನ್ನಡ ನಾಡಿಗೆ ಮೋಗ್ಲಿಂಗನ ಜೊತೆಗೆ ಬಂದ 'ರೆ.ಜಿ. ವೈಗೆಲ್'[3] ಕನ್ನಡ ಮತ್ತು ಸಂಸ್ಕೃತದ ಉಭಯ ಭಾಷೆಯ ಪಾಂಡಿತ್ಯವನ್ನು ಗಳಿಸಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕಟ್ಟುವ ಕಾರ್ಯಕ್ಕೆ ಕೈ ಹಾಕಿದ. ಈತ ಮೂಲತಃ ಜರ್ಮನ್ ದೇಶದವನು. 1840ರಲ್ಲಿ ಕರ್ನಾಟಕಕ್ಕೆ ಬಂದು, ಬಾಶೆಲ್ಲ ಮಿಷನ್ ಸಂಸ್ಥೆಗೆ ಸೇರಿದನು. ಮೊದಲು ಭಗವದ್ಗೀತೆಯ ಅನೇಕ ಶ್ಲೋಕಗಳನ್ನು ಇಂಗ್ಲೀಷ್‌ಗೆ ಅನುವಾದ ಮಾಡಿದನು. ಬೈಬಲ್ ಕುರಿತು ಅಧ್ಯಯನ ಮಾಡಿ, ಬೈಬಲ್ ಆವೃತ್ತಿಯನ್ನು ಪರಿಷ್ಕರಿಸಿ ಸುಂದರವಾಗಿ ಮುದ್ರಿಸಿ ಹಂಚಿದ. ಇವೆಲ್ಲದರೊಂದಿಗೆ 1846ರಲ್ಲಿ ಕನ್ನಡ ಸಾಹಿತ್ಯವನ್ನು ಕುರಿತು ಜರ್ಮನ್ ಭಾಷೆಯಲ್ಲಿ "Canares sprache Und literature" ಎಂಬ ಲೇಖನವನ್ನು ಬರೆದ. ಈ ಲೇಖನ 1848 (ಸಂ.2. ಪುಟ257–284) ರಲ್ಲಿ ಜರ್ಮನ್ ಪತ್ರಿಕೆಯಾದ 'ZDMD' (Zeitschrift der Deutschen Morgenlandischen Gesselschaft) ಯಲ್ಲಿ ಪ್ರಕಟವಾಯಿತು. ಈ ಲೇಖನದಲ್ಲಿ ಕನ್ನಡ ಭಾಷೆ ಯಾವ ವರ್ಗಕ್ಕೆ ಸೇರಿದೆ ಮತ್ತು ಅದರ ವ್ಯಾಕರಣ ವಿಷಯಗಳನ್ನು ಸಂಸ್ಕೃತ, ಪ್ರಾಕೃತ ಮತ್ತು ದ್ರಾವಿಡ ಭಾಷೆಗಳೊಡನೆ ಹೋಲಿಸುತ್ತಾ ವಿವರಣೆ ಕೊಟ್ಟಿದ್ದಾರೆ. ಈ ಸುದೀರ್ಘ ಲೇಖನದಲ್ಲಿ ಕನ್ನಡ ಮೌಖಿಕ ಪರಂಪರೆಯಿಂದ ಬೆಳೆದುಬಂದ ಜನಪದ ಸಾಹಿತ್ಯವನ್ನು ಪರಿಚಯಿಸಿದ್ದಾನೆ. ಕನ್ನಡ ಜನಪದ ಕತೆಗಳು (ಆತ ಅದನ್ನು ಗುರುತಿಸುವುದು ಅಜ್ಜಿ ಕತೆ ಎಂಬುದಾಗಿ) ವಿಶ್ವದ ಯಾವುದೆ ಭಾಷೆಯ ಜನಪದ ಕತೆಗಳಿಗೆ ಸರಿಸಾಟಿಯಾಗಿ ನಿಲ್ಲಬಲ್ಲದೆಂದು ಹೇಳಿದ್ದಾನೆ. ಇದು ಕನ್ನಡ ಜನಪದದ ಮೊದಲ ತೇದಿಯುಳ್ಳ ಪ್ರಸ್ತಾಪ. ಮುಂದೆ ಅನೇಕ ಕವಿ, ಕೃತಿಗಳ ಉಲ್ಲೇಖ ಮಾಡಿದ್ದಾನೆ. "ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ಬೇರೆ ಬೇರೆ ವಿಷಯಗಳೂ ಇಲ್ಲಿ ಸೇರಿಕೊಂಡಿರುವುದರಿಂದ ಇದನ್ನು ಸಾಹಿತ್ಯ ಚರಿತ್ರೆಯ ಸಮೀಕ್ಷೆ ಎನ್ನಲು ಬರುವುದಿಲ್ಲ. ಅಲ್ಲದೇ ಅದಕ್ಕೆ ಕಿಟ್ಟೆಲ್ಲ ಅವರ ಸಮೀಕ್ಷೆಯೊಡನೆ ಯಾವುದೇ ದೃಷ್ಟಿಯಿಂದಲೂ ಸ್ಪರ್ಧಿಸುವ ಶಕ್ತಿ ಇಲ್ಲ. ಚಾರಿತ್ರಿಕವಾದ ಮಹತ್ವವಿದೆ ಎನ್ನುವುದನ್ನು ಮಾತ್ರ ಗಮನಿಸಬೇಕು."[4] ಈ ಚರಿತ್ರಾರ್ಹ ಲೇಖನ ಬರೆಯುವ ಮೂಲಕ ಕನ್ನಡ ಸಾಹಿತ್ಯ ಚರಿತ್ರೆಯ ನಾಂದಿಗೆ ಕಾರಣನಾದವನು ರೆ.ಜಿ.ವೈಗ್ಲೆ.

ನಿಜವಾದ ಸಾಹಿತ್ಯ ಚರಿತ್ರೆಯ ಕೃಷಿ ನಡೆದದ್ದು ಕಿಟ್ಟೆಲ್‌ನ ಕಾಲಾವಧಿಯಲ್ಲಿ. ಆಗಾಗಲೇ ಕನ್ನಡ ಸಾಹಿತ್ಯ ಚರಿತ್ರೆಗೆ ವೈಗ್ಲೆಯ ಭೂಮಿಕೆ ಇತ್ತು. ಆ ಭೂಮಿಕೆಯ ಅಡಿ ಕಿಟ್ಟೆಲ್ ಸಾಹಿತ್ಯ ಚರಿತ್ರೆಯನ್ನು ಕಟ್ಟುವ ಕೆಲಸ ಮಾಡುತ್ತಾರೆ. ಕಿಟೆಲ್‌ರು ಮೊದಲು ಕನ್ನಡ ಭಾಷೆಯನ್ನು ಅಧ್ಯಯನ ಮಾಡಿ ಅದರ ಸಾಹಿತ್ಯವನ್ನು ಕುರಿತು 'Old Canarese Lieteature' ಎಂಬ ಚಿಕ್ಕ ಸಮೀಕ್ಷೆಯೊಂದನ್ನು ಪ್ರಕಟಿಸುತ್ತಾರೆ. ಅದು 1874ರ 'The Indian Evangelical Review' ಪತ್ರಿಕೆಯಲ್ಲಿ ಪ್ರಕಟವಾಗುತ್ತದೆ. ಈ ಲೇಖನದ ಪ್ರಾರಂಭದಲ್ಲಿ ಪ್ರಾಚೀನ ಕನ್ನಡ ಸಾಹಿತ್ಯವನ್ನು ಗಮನಿಸುವಾಗ ಕನ್ನಡಿಗರು ತಮ್ಮಲ್ಲಿರುವ ಸಾಹಿತ್ಯಿಕ ವರಗಳನ್ನು ದುರುಪಯೋಗ ಮಾಡಿಕೊಂಡಿರುವ ದುಃಖದ ಸಂಗತಿಯನ್ನು ವ್ಯಕ್ತಪಡಿಸುತ್ತಾರೆ. "The Canarese Speaking people both Aryas and Dravidas are much gifted" ಎಂದು ಹೇಳುತ್ತಾರೆ. ಮುಂದೆ ಈ ಲೇಖನದಲ್ಲಿ ಜೈನ ಸಾಹಿತ್ಯ, ಲಿಂಗಾಯತ ಸಾಹಿತ್ಯ, ಶೈವ ಸಾಹಿತ್ಯ, ವೈಷ್ಣವ ಸಾಹಿತ್ಯ ಎಂದು ವಿಭಜಿಸುತ್ತಾರೆ. ಕಿಟೆಲರು ಈ ಲೇಖನದ ಬಳಿಕ 1875ರಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯ ಕುರಿತು 'An Essay on canarese Literature' ಎಂಬ ದೀರ್ಘವಾದ ಪ್ರಬಂಧ ಬರೆಯುತ್ತಾರೆ. ಅದು ನಾಗವರ್ಮನ ಕನ್ನಡ ಛಂದಸ್ಸು ಎನ್ನುವ ಕೃತಿಯ ಪ್ರಸ್ತಾನವೆ ಭಾಗದಲ್ಲಿ ಪ್ರಕಟವಾಗುತ್ತದೆ. ಇದರ ಮೊದಲ ಭಾಗದಲ್ಲಿ ಕಾಲ ವಿಭಜನೆಯ ಕುರಿತು ತಿಳಿಸುತ್ತಾರೆ. ಎರಡನೆಯ ಭಾಗದಲ್ಲಿ ಕವಿಗಳ ಕುರಿತು ಮತ್ತು ಅವರ ಕೃತಿಗಳ ಕುರಿತು ವಿವರಣೆ ನೀಡುತ್ತಾರೆ.

---

1. A History of Kanarese Literature, E.p Rice, 1931, Page 99.

* 16-8-1964 ರಂದು ಬೆಂಗಳೂರು ಆಕಾಶವಾಣಿಯ ಆಶ್ರಯದಲ್ಲಿ ಮಾಡಿದ ಪ್ರಸಾರ ಭಾಷಣದ ಪರಿಷ್ಕೃತ ಮತ್ತು ವಿಸ್ತೃತ ರೂಪ ಎಂದು ಪ್ರೋ. ಎಂ.ವಿ. ಸೀತಾರಾಮಯ್ಯನವರು ದಾಖಲಿಸಿದ್ದಾರೆ.

2. ಕನ್ನಡ ಕೈಪಿಡಿ ಸಂ.–2 ಪು.472.

3. ಇತನ ಹೆಸರನ್ನು 'ರೆ.ಜಿ.ವೈಗ್ಲೆ ' ಎಂದೂ ಉಚ್ಚರಿಸುತ್ತಾರೆ. ತಪ್ಪಲ್ಲ.

4. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಮೊದಲ ಸಂ. ಮೈಸೂರು ವಿಶ್ವವಿದ್ಯಾಲಯ, 1974, ಪು.ಸಂ–35

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

ಒಂದೊಂದು ಕೃತಿಗಳ ವಿವರಣೆ ನೀಡುತ್ತ ಸಂಬಂಧಿಸಿದ ತೆಲಗು, ತಮಿಳು ಕೃತಿಗಳ ವಿವರಣೆ ನೀಡಿರುವುದು ವಿಶೇಷ. ಸಮಗ್ರ ಕನ್ನಡ ಸಾತ್ಯವನ್ನು ಸಮಿಕ್ಷಿಸಿದ ಕಿಟೆಲ್‌ರು ತಮ್ಮ ಪ್ರಬಂಧದ ಕೊನೆಯಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯ ಮಹತ್ವದ್ದು. "ಸಂಸ್ಕೃತದ ಅನುಕರಣೆ ತುಂಬಿರದ ಭಾರತದ ಸಾಹಿತ್ಯ ಎಂದರೆ ತಮಿಳು ಒಂದೇ ಎಂಬುದಾಗಿ ಡಾ. ಕಾಲ್ಡ್‌ವೆಲ್ಲರ ಅಭಿಪ್ರಾಯವನ್ನು ಉಲ್ಲೇಖಿಸಿ, ಕನ್ನಡ ಸಾಹಿತ್ಯ ಹೆಚ್ಚು ಹೆಚ್ಚಾಗಿ ಪ್ರಸಿದ್ಧಿಗೆ ಬಂದ ಹಾಗೆಲ್ಲ ಅದು ದಕ್ಷಿಣದ ಸಾಹಿತ್ಯಗಳಿಗೆ ಸರಿದೂರೆಯಾಗಿರುವುದು ಸ್ಪಷ್ಟ ವಾಗುತ್ತದೆ, ಎಂಬುವುದು ತಮ್ಮ ಸ್ವಂತ ಭಾವನೆಯಾಗಿದೆ ಎಂದು ಕಿಟೆಲ್ಲರು ಹೇಳುತ್ತಾರೆ"[5]. ಈ ಅಭಿಪ್ರಾಯವನ್ನು ಒಟ್ಟಾಗಿ ನೋಡಿದಾಗ ಅದರ ಹಿಂದಿರುವ ಅಧ್ಯಯನ ಮತ್ತು ಕನ್ನಡ ಸಾಹಿತ್ಯವನ್ನು ಒಟ್ಟಾಗಿ ನೋಡಿದ್ದರ ಪ್ರತಿಫಲನವೂ ಕಂಡುಬರುತ್ತದೆ. ಏನೂ ಇಲ್ಲದ ಕಾಲದಲ್ಲಿ ತಮ್ಮ ಕೈಯಲ್ಲಿರುವ ಸಾಮಗ್ರಿಯನ್ನು ಆಧರಿಸಿ ರಚಿಸಿದ ಈ ಬರಹ, ಕನ್ನಡ ಸಾಹಿತ್ಯ ಚರಿತ್ರೆಯ ಮೊದಲ ಲೇಖನ.

ಕನ್ನಡ ಸಾಹಿತ್ಯ ಚರಿತ್ರೆಯನ್ನು ಕಟ್ಟಿದ ಸಾಧಕರಲ್ಲಿ ಬಿ. ಎಲ್ ರೈಸ್ ಕೂಡ ಒಬ್ಬರು. ಬಿ.ಎಲ್ ರೈಸ್ ಒಬ್ಬ ಶಾಸನ ತಜ್ಞರು. ಕನ್ನಡದ ಕೆಲ ಕೃತಿಗಳನ್ನು ಸಂಪಾದಿಸಿದ್ದಾರೆ ರೈಸರು ಸಂಪಾದಿಸಿದ ಪ್ರಮುಖ ಕೃತಿಗಳ ಪೀಠಿಕಾ ಭಾಗದಲ್ಲಿ ಅಥವಾ ಪ್ರಸ್ತಾವನೆಯಲ್ಲಿ ಕನ್ನಡ ಸಾಹಿತ್ಯ ಚರಿತ್ರೆಗೆ ಸಂಬಂಧಿಸಿದಂತೆ ಕೆಲ ವಿಚಾರಗಳನ್ನು ವಿಮರ್ಶಿಸಿ, ವಿಶ್ಲೇಷಿಸಿ ಕೊಟ್ಟಿದ್ದಾರೆ. ವೈಗ್ಲೆ ಮತ್ತು ಕಿಟೆಲ್ಲರ ಬರಹಗಳಿಂದಲೂ ಮತ್ತು ಸಮಕಾಲೀನ ಸಂಶೋಧನೆಗಳಿಂದಲೂ ಅವರ ಬರಹಗಳು ಇನ್ನಷ್ಟು ಪುಷ್ಟಿಗೊಂಡಿವೆ. ಅವರು ಸಂಪಾಧಿಸಿ ಪ್ರಕಟಿಸಿದ 'ಮೈಸೂರು ಗೆಜಿಟಿಯರ್'ನ ಮೊದಲ ಸಂಪುಟದಲ್ಲಿ (1876), ಕರ್ನಾಟಕ ಭಾಷಾಭೂಷಣ(1884), ಮತ್ತು ಕರ್ಣಾಟ ಶಬ್ದಾನುಶಾಸನಂ(1880) ಗ್ರಂಥಗಳ ಪೀಠಿಕಾಭಾಗದಲ್ಲಿ. 'Mysore and coorg from the Inscription' (1909) ಗ್ರಂಥದಲ್ಲಿ, 'JRAS' ಪತ್ರಿಕೆಯ 1882 ಜನವರಿ 1883 ಜುಲೈ ಮತ್ತು 1890 ಎಪ್ರಿಲ್ ಸಂಚಿಕೆಗಳಲ್ಲಿ ಅವರು ಕನ್ನಡ ಸಾಹಿತ್ಯ ಚರಿತ್ರೆಗೆ ಸಂಬಂಧಿಸಿದ ಹಲವಾರು ವಿಚಾರಗಳನ್ನು ದಾಖಲಿಸಿದ್ದಾರೆ. ಕರ್ಣಾಟ ಶಬ್ದಾನುಶಾಸನಂ 'ಕರ್ನಾಟಕ ಭಾಷಾಭೂಷಣ'ದ ಪೀಠಿಕೆಯಾಗಿ ಬರೆದ 'Kannda Literature' ಎನ್ನುವ ಭಾಗದಲ್ಲಿ ಸಾಹಿತ್ಯ ಚರಿತ್ರೆಯ ಕೆಲ ಅಂಶಗಳನ್ನು ಹೇಳಿದ್ದಾರೆ. ಆರಂಭದಿಂದ 1300ರವರೆಗೆ ಜೈನ ಕವಿಗಳೆ ಹೆಚ್ಚು ಕೆಲಸಮಾಡಿದ್ದಾರೆ ಎಂದು, ನಂತರದ ಎರಡು ಶತಮಾನಗಳ ಕಾಲ ಲಿಂಗಾಯತ ಮತ್ತು ಶೈವ ಬರಹಗಾರರು ಹೆಚ್ಚು ಕಾಣಿಸಿಕೊಳ್ಳುತ್ತಾರೆ, ನಂತರ 1500ರಿಂದ ಮುಂದಕ್ಕೆ ಬ್ರಾಹ್ಮಣ ಮತ್ತು ವೈಷ್ಣವ ಕವಿಗಳು ಹೆಚ್ಚಾಗಿ ಗುರುತಿಸಿಕೊಂಡಿದ್ದಾರೆ. ಜೊತೆಗೆ ಆಯಾ ಕಾಲದ ಕಾವ್ಯ ಪ್ರಕಾರಗಳನ್ನು, ಕವಿಗಳ ಕಾಲ, ದೇಶ, ಕೃತಿ ವಿಚಾರಗಳನ್ನು ವಿವರಿಸಿದ್ದು ಉಲ್ಲೇಖನಾರ್ಹ. ಜೊತೆಗೆ ಆ ಕಾಲದಲ್ಲಿ ಯಕ್ಷಗಾನ ಕೃತಿಗಳೂ ಮೇಲುಗೈ ಸಾಧಿಸಿದವೂ ಎನ್ನುತ್ತ "The most Popular book of Late Years" ಎಂದಿದ್ದಾರೆ.

ಬಿ.ಎಲ್ ರೈಸರು ತಾವು ಸಂಪಾದಿಸಿದ 'ಕರ್ಣಾಟ ಸಬ್ದಾನುಶಾಸನಂ' ಎನ್ನುವ ಕೃತಿಯ ಪ್ರಸ್ತಾವನೆಯಲ್ಲಿ ಬರೆದ 'The litereature of Karnataka'ದಲ್ಲಿ ಸಾಹಿತ್ಯ ಚರಿತ್ರೆಯ ಕುರಿತಾದ ವಿವರಣೆಯನ್ನು ನೀಡಿದ್ದಾರೆ. 'ಭಾಷಾಭೂಷಣಂ'ನಲ್ಲಿಯ ಲೇಖನದ ವಿವರಣೆಗೂ ಈ ಲೇಖನದಲ್ಲಿಯ ವಿವರಣೆಗೂ ಸ್ವಲ್ಪ ಹೊಸತನ ಕಂಡುಬರುತ್ತದೆ. 'ಭಾಷಾಭೂಷಣಂ' ವನ್ನು ಪ್ರಕಟಿಸಿದ ಮೇಲೆ ನಡೆದಿರುವ ಸಮಕಾಲೀನ ಸಂಶೋಧನೆಗಳು, ಅದರಲ್ಲಿಯೂ ಕನ್ನಡ ಸಾಹಿತ್ಯದ ಅಂತ್ಯಂತ ಕುತುಹಲಕಾರಿಯಾದ ಪ್ರಾಚೀನ ಕಾಲಕ್ಕೆ ಸಂಬಂದಿಸಿದ ಮಹತ್ವದ ವಿವರಣೆಗಳನ್ನು ಈ ಲೇಖನದಲ್ಲಿ ಕಟ್ಟಿಕೊಟ್ಟಿರುವುದರಿಂದ ಚಾರಿತ್ರಿಕವಾಗಿ ಪ್ರಮುಖವಾಗಿದೆ.

ಪಾಶ್ಚಾತ್ಯ ವಿದ್ವಾಂಸರಾದ ಬಿ.ಎಲ್. ರೈಸ್ ಮತ್ತು ಈ.ಪಿ. ರೈಸ್‌ರು ಮೂಲತಃ ಸಹೋದರರು. (ಹೆಚ್ಚಿನ ಮಾಹಿತಿಗಾಗಿ ಡಾ. ಶ್ರೀನಿವಾಸ್ ಹಾವನೂರರ ಹೊಸಗನ್ನಡ ಅರುಣೋದಯವನ್ನು ನೋಡಬಹುದು) ಕನ್ನಡ ಸಾಹಿತ್ಯ ಚರಿತ್ರೆಯ ಕ್ಷೇತ್ರದಲ್ಲಿಯೂ ಅವರು ಅಣ್ಣ–ತಮ್ಮಂದಿರಂತೆ ದುಡಿದಿದ್ದಾರೆ. ಈ.ಪಿ. ರೈಸ್‌ರು 1915ರಲ್ಲಿ 'A History of Kanarese Literature' ಎನ್ನುವ ಸಾಹಿತ್ಯ ಚರಿತ್ರೆಯ ಆದಾರಿತ ಕೃತಿಯೊಂದನ್ನು ಪ್ರಕಟಿಸಿದರು. ಇದು ಶಾಸ್ತ್ರೀಯ ದೃಷ್ಟಿಯನ್ನೊಳಗೊಂಡ ಮೊತ್ತಮೊದಲ ಸಾಹಿತ್ಯ ಚರಿತ್ರೆ ಎಂದು ಇದು ವಿದ್ವಾಂಸರಿಂದ ಗುರುತಿಸಲ್ಪಟ್ಟಿತು. ಆ ಕಾಲಘಟ್ಟದಲ್ಲಿನ ಎಲ್ಲ ಸಾಮಗ್ರಿಗಳನ್ನು ಬಳಸಿಕೊಂಡು, ಚರಿತ್ರೆಯ ಸ್ವರೂಪವನ್ನು ಅವರ ಮತಿಯ ಮಿತಿಯಲ್ಲಿ ಕಟ್ಟಿಕೊಡುವ ಯತ್ನ ಮಾಡಿದ್ದಾರೆ. ಈ ಕೃತಿಯಲ್ಲಿ ಕನ್ನಡ ನಾಡುನುಡಿಯ ವಿಚಾರ, ವರ್ಣಮಾಲೆ, ನೆರೆಹೊರೆಯ ಭಾಷೆಗಳನ್ನು ಆರಂಭಿಕ ಅಧ್ಯಾಯದಲ್ಲಿ ವಿವರಿಸಿದ್ದಾರೆ. ಮುಂದೆ ಜೈನ ಸಾಹಿತ್ಯ, ಲಿಂಗಾಯತ ಸಾಹಿತ್ಯ, ವೈಷ್ಣವ ಮತ್ತು ಬ್ರಾಹ್ಮಣ ಸಾಹಿತ್ಯ ಎಂದೂ ವಿಭಾಗ ಮಾಡಿ ಆಯಾ ಕಾಲಘಟ್ಟದ ಕವಿಗಳ ಮತ್ತು ಕೃತಿಗಳ ಪರಿಚಯವಿದೆ. ನಂತರ ಕೊನೆಯಲ್ಲಿ 19ನೆಯ ಶತಮಾನವನ್ನು ನವಯುಗ ಎಂದು ಕರೆದಿದ್ದಾರೆ.

"ಅಷ್ಟೊಂದು ಪ್ರಮುಖವಲ್ಲದ ಎಲ್ಲ ಕವಿಗಳನ್ನೂ ಪಟ್ಟಿಮಾಡಿದರೆ ಓದುಗರಿಗೆ ಬೇಸರವಲ್ಲದೆ ಮತ್ತೇನೂ ಅಲ್ಲ, ಸಾಧ್ಯವಾದಷ್ಟು ಪ್ರಾದೇಶಿಕ ಬಣ್ಣಕೊಟ್ಟು, ಆ ಕವಿಗಳು ಬಾಳಿದ ಕಾಲಮಾನದ ಹಿನ್ನೆಲೆಯನ್ನೂ ಅವರು ನಂಬಿದ ಧರ್ಮನಿಷ್ಠೆಯ ಸಂಪ್ರದಾಯಗಳ ವಾತಾವರಣವನ್ನೂ ಚಿತ್ರಿಸಿ ಓದುಗನ ಪ್ರಯಾಸವನ್ನು ಕಡಿಮೆಮಾಡಲು ಪ್ರಯತ್ನಿಸಿದ್ದೇನೆ. ಭಾರತೀಯ ಓದುಗರಿಗೆ ವಿವರಣೆಗಳು ಅವಶ್ಯವಿಲ್ಲದಂತ ಭಾರತೀಯ ವಿಶಿಷ್ಟ ಶಬ್ದಗಳನ್ನು ಇಂಗ್ಲೀಷ್ ಓದುಗರಿಗಾಗಿ ವಿವರಿಸಿದ್ದೇನೆ"[6]ಎಂದು ಅವರು ತಮ್ಮ ನಿಲುವನ್ನು ಮೊದಲ ಆವೃತ್ತಿಯ ಮುನ್ನುಡಿಯಲ್ಲಿಯೇ ಹೇಳಿದ್ದಾರೆ. ಈ.ಪಿ ರೈಸ್ ಈ ವಿಚಾರ ಕಂಡಾಗ ಅವರು ಕನ್ನಡ ಸಾಹಿತ್ಯವನ್ನು ಕನ್ನಡಿಗನಾಗಿ ಕಂಡಿಲ್ಲ, ಬದಲಾಗಿ ಜರ್ಮನ್, ಫ್ರೆಂಚ್, ಇಂಗ್ಲೀಷ್ ಮುಂತಾದ ಪಾಶ್ಚಾತ್ಯ ಭಾಷೆಗಳ ನೆಲೆಯಲ್ಲಿಯೇ ಕಂಡಿರುವುದರಿಂದ ಕನ್ನಡದ ಅಸ್ಮಿತೆಯನ್ನು ಕಟ್ಟಿಕೊಡಲು ಆಗಲಿಲ್ಲ.

ಕನ್ನಡಿಗರ ಕೃತಜ್ಞತೆಗೆ ಪಾತ್ರರಾದವರಲ್ಲಿ ಜೆ.ಎಫ್ ಫ್ಲೀಟ್‌ರು ಒಬ್ಬರು. ಇವರು ಒಬ್ಬ ಸಿವಿಲ್ ಅಧಿಕಾರಿಯಾಗಿದ್ದರು. ಶಾಸನ, ಕಲೆ, ಸಾಹಿತ್ಯ, ನಾಣ್ಯಗಳೂ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ದುಡಿದಿದ್ದಾರೆ. ಇದರೊಂದಿಗೆ ಸಂಸ್ಕೃತ ಮತ್ತು ಮತ್ತು ಕನ್ನಡ ಭಾಷೆಯ ಪಾಂಡಿತ್ಯ ಸಾಧಿಸಿದ್ದರು. ಇವರ ಅನೇಕ ಲೇಖನಗಳು 'Journal of Royal Asiatic Socity' ಮತ್ತು 'Indian Antiquary' ಪತ್ರಿಕೆಗಳಲ್ಲಿ ಪ್ರಕಟವಾಗಿದೆ. 'Note on Indian history and Epigraphy (IAXXXIII.1904) ಎನ್ನುವ ಲೇಖನದಲ್ಲಿ ಕರ್ನಾಟಕದ ರಾಜಮನೆತನಗಳ ಮೂಲಕ ಬೆಳೆದು ಬಂದ ಸಾಹಿತ್ಯ ಬೆಳವಣಿಗೆಯನ್ನು ತೆರದಿಟ್ಟಿದ್ದಾರೆ. ಇದು ಮೇಲ್ನೋಟಕ್ಕೆ ಇತಿಹಾಸ ಮತ್ತು ಶಾಸನಗಳ ಪರಿಚಯವಾದರೂ, ಇದರ ಆಂತರ್ಯದಲ್ಲಿ ಕನ್ನಡ ಕವಿ–ಕೃತಿಗಳ ವಿಚಾರವೂ ಅಡಗಿದೆ.

ಇದು ಕನ್ನಡ ಸಾಹಿತ್ಯ ಚರಿತ್ರೆಯ ಒಂದು ಹಂತದ ಚಾರಿತ್ರಿಕ ಸಮೀಕ್ಷೆ. ಸಾವಿರಾರು ವರ್ಷಗಳಲ್ಲಿ ಹಾಯ್ದು ಬಂದ ಕನ್ನಡ ಸಾಹಿತ್ಯಕ್ಕೆ ಸಾಹಿತ್ಯ ಚರಿತ್ರೆಯನ್ನು ಕಟ್ಟಲು ಶ್ರಮಿಸಿದ ವೈಗ್ಲೆಯಿಂದ ಫ್ಲೀಟ್ ವರೆಗಿನ ಕಾಲಘಟ್ಟವನ್ನು ಮೊದಲನೆಯ ಹಂತ ಎಂದು ಗುರುತಿಸುತ್ತಾರೆ. ಈ ಮೊದಲ ಘಟ್ಟದ ಬರವಣಿಗೆಗಳು ಮುಂದಿನ ನಾಲ್ಕೈದು ಮಾದರಿಗಳ ಹುಟ್ಟಿಗೆ ಕಾರಣ ಮತ್ತು ಆಕರಗಳಾದವು. ಇಲ್ಲಿ ಕೆಲವೊಂದು ಸಾಹಿತ್ಯ ಚರಿತ್ರೆಯಲ್ಲ. ಮಾಹಿತಿ ಕೋಶ. ಆದರೂ ಅದು ಸಾಹಿತ್ಯ ಚರಿತ್ರೆಯೇ. ಯಾಕೆಂದರೆ ಸಾಹಿತ್ಯ ಚರಿತ್ರೆ ಎನ್ನುವ ಪರಿಕಲ್ಪನೆಯನ್ನು ಪರಿಚಯಿಸಿದ ಲೇಖನಗಳಾಗಿವೆ. ಈ ಮೂಲಕವಾಗಿ 19ನೆಯ ಶತಮಾನದಲ್ಲಿ 'ಸಾಹಿತ್ಯ ಚರಿತ್ರೆ' ಎಂಬ ಒಂದು ಹೊಸ ಪ್ರಕಾರವೊಂದು ಕನ್ನಡ ಲೋಕಕ್ಕೆ ಪರಿಚಯವಾಯಿತು. ಕನ್ನಡಕ್ಕೆ ಇದು ಪಾಶ್ಚಾತ್ಯ ವಿದ್ವಾಂಸರ ಕೊಡುಗೆ.

ಪರಾಮರ್ಶನ ಗ್ರಂಥಗಳು

5. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಮೊದಲ ಸಂ. ಮೈಸೂರು ವಿಶ್ವವಿದ್ಯಾಲಯ, 1974, ಪು.ಸಂ–35

6. A History of Kanarese Literature, E.p Rice, 1915, Preface Part.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

1. ಇ.ಪಿ.ರೈಸ್, ಕನ್ನಡ ಸಾಹಿತ್ಯ ಚರಿತ್ರೆ, 1931, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
2. ಮುಗುಳಿ ರಂ.ಶ್ರೀ, ಕನ್ನಡ ಸಾಹಿತ್ಯ ಚರಿತ್ರೆ, 1953, ಗೀತಾ ಬುಕ್ ಹೌಸ್ ಪ್ರಕಾಶನ, ಮೈಸೂರು
3. ಐ. ಮಾ ಮುತ್ತಣ್ಣ, ಭಾರತೀಯ ಸಂಸ್ಕೃತಿಗೆ ಪಾಶ್ಚಾತ್ಯ ವಿದ್ವಾಂಸರ ಕೊಡುಗೆ, 1987, ಮೈಸೂರು ವಿದ್ಯಾಲಯ.
4. ಶ್ರೀನಿವಾಸ ಹಾವನೂರು, ಹೊಸಗನ್ನಡ ಅರುಣೋದಯ, 2000, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.
5. ಡಾ.ಎ.ವಿ. ನಾವಡ (ಸಂ) ಮುಂಬೆಳಗು, 2015, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
6. ಡಾ.ಗೀತಾ ನಂದಿಹಾಳ, ಕನ್ನಡಕ್ಕೆ ಬಾಶೆಲ್ ಮಿಶನರಿ ಕೊಡುಗೆ, 2003, ಮನೋಹರ ಪ್ರಕಾಶನ ಧಾರವಾಡ.
7. ಡಾ. ರಾ.ಯ. ಧಾರವಾಡಕರ್, ಹೊಸಗನ್ನಡ ಸಾಹಿತ್ಯದ ಉದಯಕಾಲ, 2013, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
8. ಡಾ. ಹಾ. ಮಾ. ನಾಯಕ್ (ಸಂ) ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಮೊದಲ ಸಂಪುಟ, ಮೈಸೂರು ವಿಶ್ವವಿದ್ಯಾಲಯ, 1974.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಕನ್ನಡ ಸಾಂಗತ್ಯ ಕಾವ್ಯಗಳಲ್ಲಿ ಬಸವಣ್ಣನವರು : ಒಂದು ಅವಲೋಕನ

ಶ್ರೀ ಮಹಾದೇವಪ್ಪ ಕೊಪ್ಪದ[1] [2]ಪ್ರೊ. ಎಸ್. ಎಂ. ಗಂಗಾಧರಯ್ಯ
[1]ಸಂಶೋಧನಾ ವಿದ್ಯಾರ್ಥಿ ಹಾಗೂ ಸಹಾಯಕ ಪ್ರಾಧ್ಯಾಪಕರು
ಸರಕಾರಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯ
ಬೈಲಹೊಂಗಲ ತಾ: ಬೈಲಹೊಂಗಲ
ಜಿಲ್ಲೆ: ಬೆಳಗಾವಿ
[2]ಮಾರ್ಗದರ್ಶಕರು
ಮಾರ್ಗದರ್ಶಕರು ಪ್ರಾಧ್ಯಾಪಕರು
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ

Manuscript ID:
JRD -2026-180403
ISSN: 2230-9578
Volume 18
Issue 4(II)
Pp.8-11
April 2026
Submitted:05 Mar. 2026
Revised:20Mar. 2026
Accepted:05Apr.2026
Published:30 April 2026

ಸಾರಲೇಖ :

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಬಸವಣ್ಣನವರ ಜೀವನ ಹಾಗೂ ವ್ಯಕ್ತಿತ್ವವನ್ನು ಚಿತ್ರಿಸುವ ಸಾಂಗತ್ಯ ಕಾವ್ಯಗಳ ವಿಶ್ಲೇಷಣೆಯನ್ನು ಪ್ರಸ್ತುತ ಲೇಖನದಲ್ಲಿ ಮಾಡಲಾಗಿದೆ. ಕನ್ನಡ ನಾಡಿನ ಸಾಂಸ್ಕೃತಿಕ ವೈವಿಧ್ಯದಲ್ಲಿ ಹನ್ನೆರಡನೆಯ ಶತಮಾನದ ವಚನ ಚಳುವಳಿ ಮಹತ್ವದ್ದಾಗಿದ್ದು, ಬಸವಣ್ಣನವರ ನೇತೃತ್ವದಲ್ಲಿ ನಡೆದ ಸಮಾಜ–ಧಾರ್ಮಿಕ ಕ್ರಾಂತಿಯು ಸಮಾನತೆ, ಸ್ವಾತಂತ್ರ್ಯ, ಕಾಯಕ–ದಾಸೋಹ ತತ್ವಗಳನ್ನು ಪ್ರತಿಪಾದಿಸಿ ಹೊಸ ಸಮಾಜ ನಿರ್ಮಾಣಕ್ಕೆ ದಾರಿತೋರಿತು. ಈ ಹಿನ್ನೆಲೆಯಲ್ಲಿಯೇ ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಬಸವಣ್ಣನವರ ಚರಿತ್ರೆಯನ್ನು ಆಧರಿಸಿ ಅನೇಕ ಸಾಂಗತ್ಯ ಕಾವ್ಯಗಳು ರಚನೆಯಾಗಿವೆ. ಗರಣಿಯ ಬಸವಲಿಂಗನ "ಬಸವೇಶ್ವರ ಕಾವ್ಯ", ಪಂಚಯ್ಯನ "ಭಕ್ತಿರಸಸೋನೆ", ಅದೃಶ್ಯಕವಿಯ "ಬಸವಪವಾಡ", ಶಿವಕವಿ ಕಾಡನ "ಬಸವಶಿಖಾಮಣಿ", ಪರ್ವತದೇವನ "ಬಸವ ಸಂಪಾದನೆ", ಸಂಗಯ್ಯದೇವರ "ಬಸವ ಸಾಂಗತ್ಯ" ಹಾಗೂ ವಿಠ್ಠಲನ "ಬಸವಪವಾಡ ಪುರಾಣ" ಪ್ರಮುಖ ಕೃತಿಗಳಾಗಿವೆ. ಇವುಗಳಲ್ಲಿ ಬಸವಣ್ಣನವರ ಜೀವನಘಟನೆಗಳು, ಪವಾಡಗಳು, ಸಮಕಾಲೀನ ಶರಣರ ಕಥೆಗಳು ಹಾಗೂ ಸಾಮಾಜಿಕ ಚಿತ್ರಣಗಳು ವಿವಿಧ ರೀತಿಯಲ್ಲಿ ನಿರೂಪಿತವಾಗಿವೆ. ಕೆಲವು ಕಾವ್ಯಗಳು ವಿಸ್ತಾರವಾಗಿ ಬಸವಚರಿತ್ರೆಯನ್ನು ವಿವರಿಸಿದರೆ, ಕೆಲವು ಕೇವಲ ಪವಾಡಗಳನ್ನೇ ಕೇಂದ್ರವಾಗಿಸಿಕೊಂಡಿವೆ. ಕೆಲವು ಕೃತಿಗಳಲ್ಲಿ ಪೌರಾಣಿಕ ಅಂಶಗಳು ಹೆಚ್ಚಾಗಿದ್ದರೆ, ಇನ್ನೂ ಕೆಲವು ಸರಳವಾಗಿ ಮತ್ತು ಸಂಕ್ಷಿಪ್ತವಾಗಿ ಕಥೆಯನ್ನು ಹೇಳುತ್ತವೆ. ಈ ಕಾವ್ಯಗಳಲ್ಲಿಯೂ ಬಸವಣ್ಣನವರ ಅಸಾಮಾನ್ಯ ವ್ಯಕ್ತಿತ್ವ, ಭಕ್ತಿ, ಸಾಮಾಜಿಕ ಸುಧಾರಣೆಯ ಚಿಂತನೆ ಮತ್ತು ಆಧ್ಯಾತ್ಮಿಕತೆ ವಿಭಿನ್ನ ರೂಪಗಳಲ್ಲಿ ಅನಾವರಣಗೊಂಡಿದೆ ಎಂಬುದನ್ನು ಈ ಅವಲೋಕನ ಸ್ಪಷ್ಟಪಡಿಸುತ್ತದೆ.

ಮುಖ್ಯಪದಗಳು: ಬಸವಣ್ಣ, ವಚನ ಸಾಹಿತ್ಯ, ಸಾಂಗತ್ಯ ಸಾಹಿತ್ಯ, ಧಾರ್ಮಿಕ ಕ್ರಾಂತಿ, ಅನುಭವ ಮಂಟಪ, ಸಾಮಾಜಿಕ ಸುಧಾರಣೆ

ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಕನ್ನಡ ನಾಡು ಸಹ ಅತ್ಯಂತಪ್ರಾಚೀನ ಮತ್ತು ವೈವಿಧ್ಯಮಯ ಚರಿತ್ರೆಯನ್ನು ಹೊಂದಿದೆ. ಹಲವು ಸಾಂಸ್ಕೃತಿಕ ಹಿರಿಮೆ ಗರಿಮೆಗಳಿಗೆ ಹೆಸರುವಾಸಿಯಾದ ಕನ್ನಡ ನಾಡಿನಲ್ಲಿ ನಾನಾ ಚಳುವಳಿಗಳು ನಡೆದು ಹೋಗಿವೆ. ಅವುಗಳಲ್ಲಿ ಹನ್ನೆರಡನೆಯ ಶತಮಾನದವಚನ ಚಳುವಳಿಗೆ ವಿಶಿಷ್ಟವಾದ ಸ್ಥಾನಮಾನವಿದೆ. ಸುಮಾರು ಒಂಭತ್ತು ನೂರು ವರ್ಷಗಳ ಹಿಂದೆ ಕರ್ನಾಟಕದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಹಾಗೂ ಶಿವಶರಣರ ಸಮ್ಮುಖದಲ್ಲಿನಡೆದ ಸಮಾಜೋ–ಧಾರ್ಮಿಕ ಚಳುವಳಿಯು ಸಮಾಜದಲ್ಲಿ ಹೊಸ ಸಂಚಲನೆಯನ್ನು ಉಂಟು ಮಾಡಿತು. ಬಸವಣ್ಣನವರ ತತ್ವಾದರ್ಶಗಳು ನೂತನ ಯುಗ ನಿರ್ಮಾಣಕ್ಕೆ ಅಡಿಪಾಯವನ್ನು ನಿರ್ಮಿಸಿದವು. ಬಸವಣ್ಣನವರು ಹಾಗೂ ಶಿವಶರಣರು ಅಂದಿನ ಸಮಾಜದಲ್ಲಿಯ ಕುಲಭೇದ, ಅಸ್ಪೃಶ್ಯತೆ, ಲಿಂಗ ಭೇದ, ಜಾತಿ ಪದ್ಧತಿಯ ದೋಷಗಳು, ಸ್ತ್ರೀ–ಪುರುಷ ಎಂಬ ಭೇದಭಾವ ಮುಂತಾದವುಗಳನ್ನು ಹೊಡೆದೊಡಿಸಿ ಸ್ವಾತಂತ್ರ್ಯ, ಸಮಾನತೆ, ಕಾಯಕ–ದಾಸೋಹ, ಆತ್ಮ ಗೌರವ, ಹಾಗು ಪ್ರಜಾಪ್ರಭುತ್ವ ತತ್ವಗಳ ಆಧಾರಿತವಾದ ಶರಣ ಧರ್ಮವನ್ನು ಸ್ಥಾಪಿಸಿದರು. ಆ ಮೂಲಕ ನೂತನ ಹಾಗೂ ಆದರ್ಶ ಸಮಾಜ ನಿರ್ಮಾಣ ಮಾಡಿ ಜನರ ಬಾಳಿಗೆ ದಾರಿದೀಪವಾದರು.ಬಹಳ ಮುಖ್ಯವಾಗಿ ಕಾಯಕ ಮತ್ತು ದಾಸೋಹ ಎಂಬ ತತ್ವಗಳನ್ನು ರೂಪಿಸಿ ಆರ್ಥಿಕ ಸುಧಾರಣೆಯ ಮೂಲಕ ಸಾಮಾಜಿಕ ಸುಧಾರಣೆಯನ್ನು ಮಾಡುತ್ತಾರೆ. ಶತಶತಮಾನಗಳಿಂದ ನಿರಂತರವಾಗಿ ಜನಮಾನಸದ ಮೇಲೆ ಪ್ರಭಾವ ಬೀರುತ್ತಾ ಜನರುಸುಖೀ ಬದುಕನ್ನು ರೂಪಿಸಿಕೊಳ್ಳುವಲ್ಲಿ ಪ್ರಮುಖ ಚಿಂತನದ ಮಹಾ ಮಾರ್ಗವನ್ನು ನಿರ್ಮಾಣ ಮಾಡಿದ ಬಸವಣ್ಣನವರು ಮಹಾಪುರುಷರು ಹೌದು, ಯುಗ ಪುರುಷರು ಹೌದು. ಅವರ ಜೀವನ ಸಾಹಿತ್ಯವನ್ನು ಕುರಿತು ಅಭ್ಯಾಸ ಮಾಡುವುದೆಂದರೆ ಒಂದು ರೀತಿಯಲ್ಲಿ ಲೋಕದ ಪುಣ್ಯ ಕಥನ ವಿಶೇಷವೇ ಆಗಿದೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಶ್ರೀ ಮಹಾದೇವಪ್ಪ ಕೊಪ್ಪದ" ಸಂಶೋಧನಾ ವಿದ್ಯಾರ್ಥಿ ಹಾಗೂ ಸಹಾಯಕ ಪ್ರಾಧ್ಯಾಪಕರುಸರಕಾರಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯಬೈಲಹೊಂಗಲ ತಾ: ಬೈಲಹೊಂಗಲಜಿಲ್ಲೆ: ಬೆಳಗಾವಿ

How to cite this article:
ಶ್ರೀ ಮಹಾದೇವಪ್ಪ ಕೊಪ್ಪದ' ಪ್ರೊ. ಎಸ್. ಎಂ. ಗಂಗಾಧರಯ್ಯ *(2026).*ಕನ್ನಡಸಾಂಗತ್ಯ ಕಾವ್ಯಗಳಲ್ಲಿ ಬಸವಣ್ಣನವರು : ಒಂದು ಅವಲೋಕನ. *Journal of Research and Development, 18(4(II)), 8–11.*
https://doi.org/10.5281/zenodo.19394462
.

Quick Response Code:
Website: https://jrdrvb.org/
DOI: 10.5281/zenodo.19394462

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಬಸವಣ್ಣನವರು ಈ ಜಗತ್ತಿನ ಸಕಲ ಮಾನವ ಜನಾಂಗಕ್ಕೆ ಒಳಿತಿನಹೆದ್ದಾರಿಯೊಂದನ್ನು ನಿರ್ಮಿಸಿದ್ದಾರೆ. ಆದುದರಿಂದಲೇ ಎಂ. ಎಂ. ಕಲ್ಬುರ್ಗಿಯವರು "ಜಾಗತಿಕ ಇತಿಹಾಸದಲ್ಲಿ ಶಿವಶರಣರದೊಂದು ವಿನೂತನ ಯುಗ....., ಶರಣ ಪ್ರಪಂಚದ ವಸಂತಕಾಲ ಬಸವಯುಗ" ಎಂದಿದ್ದಾರೆ(1). ಬಸವಣ್ಣನವರು ತಮ್ಮ ವಿಶಿಷ್ಟ ವ್ಯಕ್ತಿತ್ವ ಹಾಗೂ ಅನುಪಮ ಕಾರ್ಯಸಾಧನೆಗಳಿಂದಾಗಿ ನಾಡಿನ ಜನರ ವಿಶೇಷ ಗೌರವಕ್ಕೆ ಪಾತ್ರರಾಗಿದ್ದಾರೆ.ಒಟ್ಟಿನಲ್ಲಿ ಬಸವಣ್ಣನವರು ಈನಾಡು ಕಂಡ ಅಪೂರ್ವ ತತ್ವಜ್ಞಾನಿ, ಸಮಾಜ ವಿಜ್ಞಾನಿ, ಅರ್ಥಶಾಸ್ತ್ರಜ್ಞ, ಎಲ್ಲಕ್ಕೂ ಮಿಗಿಲಾಗಿ ಅವರೊಬ್ಬಮಹಾನ್ ಮಾನವತಾವಾದಿಯಾಗಿದ್ದಾರೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹನ್ನೆರಡನೆಯ ಶತಮಾನದಲ್ಲಿ ಕನ್ನಡ ನಾಡು ಕಂಡ ಮಹಾ ಮಾನವತಾವಾದಿ, ಸಮಾಜ ಸುಧಾರಣೆಯ ಕ್ರಾಂತಿಪುರುಷ ಬಸವಣ್ಣನವರ ವ್ಯಕ್ತಿತ್ವ ಹಾಗು ದಿವ್ಯ ಜೀವನದ ಭವ್ಯ ಇತಿಹಾಸವನ್ನು ಅರಿತುಕೊಳ್ಳುವುದು ತುಂಬಾ ಅಗತ್ಯವಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಚನೋತ್ತರ ಕಾಲಘಟ್ಟದಿಂದ ಪ್ರಾರಂಭಿಸಿ ಇಂದಿನವರೆಗೂ ಬಸವಣ್ಣನವರ ಜೀವನ ಚರಿತ್ರೆಯನ್ನು ಚಿತ್ರಿಸುವ ವಚನ, ಶಾಸನ, ರಗಳೆ, ಷಟ್ಪದಿ, ಸಾಂಗತ್ಯ, ಚಂಪೂ, ಶತಕ, ಅಷ್ಟಕ, ತಾರಾವಳಿ, ಕಂದ, ತ್ರಿಪದಿ, ಚೌಪದಿ, ದಂಡಕ, ಯಕ್ಷಗಾನ, ಗದ್ಯ, ಸ್ತೋತ್ರ, ಹಾಡು, ಚರಿತ್ರೆ, ಪುರಾಣ, ಪವಾಡ, ಕಥೆ, ಕಾದಂಬರಿ, ನಾಟಕ, ಜೀವನ ಚರಿತ್ರೆ, ವಿಮರ್ಶೆ, ಸಂಶೋಧನೆ, ಇತ್ಯಾದಿ ಕನ್ನಡದ ಎಲ್ಲ ಕಾವ್ಯ ಪ್ರಕಾರಗಳಲ್ಲಿ ಸಾಹಿತ್ಯ ರಚನೆ ಅಖಂಡವಾಗಿ ನಡೆಯುತ್ತಾ ಬಂದಿದೆ.

"ಬಸವಣ್ಣನವರು ಕೈಗೊಂಡ ಅಪೂರ್ವ ಕಾರ್ಯ, ಸಾಧಿಸಿದ ಸಿದ್ಧಿ, ಏರಿದ ಎತ್ತರ, ಅವರ ಕಾರ್ಯ ತತ್ಪರತೆ, ಹೃದಯ ಶ್ರೀಮಂತಿಕೆ, ಅನುಭಾವದ ಹಿರಿಮೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅನೇಕ ಕವಿಗಳು ಕಾವ್ಯ ರಚಿಸಿದ್ದಾರೆ. ಹಲವು ಕವಿಗಳಿಗೆ ಅವರೊಬ್ಬ ಸಮಾಜ ಸುಧಾರಕರಾಗಿ ಕಂಡರೆ, ಮತ್ತೆ ಕೆಲವರಿಗೆ ಆಧ್ಯಾತ್ಮಿಕ ಸಾಧನೆಯ ಮೇರು ಶಿಖರವಾಗಿ ಕಂಡಿದ್ದಾರೆ. ಮತ್ತೆ ಕೆಲವರಿಗೆ ಭಕ್ತಿಭಂಡಾರಿಯಾಗಿ ಕಂಡರೆ ಇನ್ನೂ ಕೆಲವರಿಗೆ ಶ್ರೇಷ್ಠ ಅನುಭಾವಿಯಾಗಿ ತೋರಿದ್ದಾರೆ.ಮತ್ತೆ ಕೆಲವರಿಗೆ ಕಾರಣಿಕ ಪುರುಷನಾಗಿ, ಸಾಕ್ಷಾತ್ ಶಿವನ ಅವತಾರಿಯಾಗಿ– ದ್ವಿತೀಯ ಶಂಭುವಾಗಿ ಕಂಡಿದ್ದಾರೆ.ಅವರವರಿಗೆ ಕಂಡ ರೀತಿಯಲ್ಲಿ ಅವರ ವ್ಯಕ್ತಿತ್ವ, ಜೀವನ ವೃತ್ತಾಂತಗಳನ್ನು ತಮ್ಮ ಕಾವ್ಯಗಳಲ್ಲಿ ಅನಾವರಣಗೊಳಿಸಿದ್ದಾರೆ"(2). ಪ್ರಸ್ತುತ ಲೇಖನದಲ್ಲಿ ಬಸವಣ್ಣನವರ ಜೀವನ ಹಾಗೂ ವ್ಯಕ್ತಿತ್ವವನ್ನು ಕುರಿತು ಮಧ್ಯಕಾಲೀನ ಕನ್ನಡ ಸಾಹಿತ್ಯದ ಒಂದು ರೂಪವಾಗಿರುವ ಸಾಂಗತ್ಯ ಸಾಹಿತ್ಯದಲ್ಲಿ ರಚನೆಗೊಂಡಿರುವ ಕಾವ್ಯಗಳ ಕುರಿತು ವಿಶ್ಲೇಷಣೆ ಮಾಡುವ ಕಾರ್ಯವನ್ನು ಕೈಗೊಂಡಿದ್ದೇನೆ. ಬಸವಣ್ಣನವರ ಚರಿತ್ರೆಯನ್ನು ಹೇಳುವ ಕನ್ನಡ ಕಾವ್ಯರೂಪಗಳಲ್ಲಿ ಸಾಂಗತ್ಯಕ್ಕೆ ಅಗ್ರಸ್ಥಾನವಿದೆ. ಸದ್ಯ ಏಳು ಜನ ಕವಿಗಳು ಈ ಪ್ರಕಾರದಲ್ಲಿ ಕಾವ್ಯ ರಚಿಸಿದುದು ಕಂಡುಬರುತ್ತದೆ. ಎಲ್ಲ ಕೃತಿಗಳು ಭೀಮಕವಿಯ ಬಸವಪುರಾಣ ಹಾಗೂ ಸಿಂಗರಾಜನ ಸಿಂಗಿರಾಜಪುರಾಣ ಇವುಗಳನ್ನು ಆಧರಿಸಿಯೇ ರಚನೆಗೊಂಡಿರುವುದನ್ನು ಕಾಣುತ್ತೇವೆ. ಕಥಾನಾಯಕನ ಅಸಾಮಾನ್ಯ ವ್ಯಕ್ತಿತ್ವವನ್ನು ಪವಾಡಗಳ ಮೂಲಕ ವರ್ಣಿಸುವುದು ಜೊತೆಗೆ ಸಮಕಾಲೀನ ಶರಣರ ಕಥೆಗಳನ್ನು ಹೇಳುವುದು ಸಾಮಾನ್ಯವಾಗಿ ಎಲ್ಲ ಕಾವ್ಯಗಳಲ್ಲಿಯೂ ಕಂಡುಬರುತ್ತದೆ. ಕೆಲವು ವಿಸ್ತಾರವಾದ ವರ್ಣನೆ ಹೊಂದಿದ್ದರೆ ಮತ್ತೆ ಕೆಲವು ಸಂಕ್ಷಿಪ್ತವಾಗಿ, ನೇರವಾಗಿ ಕಥೆಯನ್ನು ಪವಾಡಾತ್ಮಕವಾಗಿ ಹೇಳಿ ಮುಗಿಸುತ್ತವೆ, ಅವುಗಳ ಸ್ಥೂಲ ಪರಿಚಯವನ್ನು, ವಿಶ್ಲೇಷಣಾ ಕಾರ್ಯವನ್ನು ಈ ಕೆಳಗಿನಂತೆ ಕೈ ಗೊಂಡಿದ್ದೇನೆ.

1. ಬಸವೇಶ್ವರ ಕಾವ್ಯ : ಗರಣಿಯ ಬಸವಲಿಂಗ – 1570
2. ಭಕ್ತಿರಸಸೋನೆ : ಪಂಚಯ್ಯ – 1650
3. ಬಸವಪವಾಡ : ಗುರುಚೆನ್ನಬಸವ ಶಿಷ್ಯ ಅದೃಶ್ಯ ಕವಿ – 1650
4. ಬಸವಶಿಖಾಮಣಿ : ಕವಿಕಾಡ – 1700
5. ಬಸವ ಸಂಪಾದನೆ : ಪರುವ(ಪರ್ವತದೇವ) – 1700
6. ಬಸವ ಸಾಂಗತ್ಯ : ಓದಿಸುವ ವೀರಯ್ಯ ದೇವರ ಕುಮಾರ ಸಂಗಯ್ಯ ದೇವರು
7. ಬಸವಪವಾಡ ಪುರಾಣ : ವಿಠ್ಠಲ – 1704

ಬಸವಣ್ಣನವರ ಜೀವನ ಹಾಗೂ ವ್ಯಕ್ತಿತ್ವವನ್ನುಕುರಿತು ಪ್ರಪ್ರಥಮವಾಗಿ ಸಾಂಗತ್ಯ ಸಾಹಿತ್ಯರೂಪದಲ್ಲಿ ಕಾವ್ಯ ರಚಿಸಿದ ಶ್ರೇಯಸ್ಸು ಗರಣಿಯ ಬಸವಲಿಂಗ ಕವಿ ಸಲ್ಲುತ್ತದೆ. ಈತನು ರಚಿಸಿದ "ಬಸವೇಶ್ವರ ಕಾವ್ಯ" ಎಂಬ ಸಾಂಗತ್ಯ ಕಾವ್ಯವು ಹತ್ತೊಂಭತ್ತು ಸಂಧಿಗಳನ್ನು, ಮೂರು ಸಾವಿರದಾ ಎಂಟು ಸಾಂಗತ್ಯ ಪದ್ಯಗಳನ್ನು ಒಳಗೊಂಡಿರುವ ವಿಸ್ತೃತವಾದ ಹಿರಿಯ ಕಾವ್ಯವಾಗಿದೆ. ಪಾಲ್ಕುರಿಕೆ ಸೋಮನಾಥನ ತೆಲಗು ಬಸವಪುರಾಣ ಹಾಗೂ ಭೀಮಕವಿಯ ಬಸವಪುರಾಣಗಳನ್ನು ಆಕರ ಕಾವ್ಯಗಳನ್ನಾಗಿಟುಕೊಂಡು ತನ್ನ " ಬಸವೇಶ್ವರ ಕಾವ್ಯ" ವನ್ನು ರಚಿಸಿದ್ದೇನೆ ಎಂದು ಕವಿ ಹೇಳಿಕೊಂಡಿದ್ದಾನೆ. ಈ ಕಾವ್ಯದಲ್ಲಿ ಬಸವಣ್ಣನವರ ಚರಿತ್ರೆ, ಅವರು ಮರೆದ ಅನೇಕ ಪವಾಡಗಳು, ಸಮಕಾಲೀನ ಶರಣರ ಕಥೆಗಳು ಇಲ್ಲಿ ವರ್ಣಿತವಾಗಿವೆ. ಈ ಕಾವ್ಯದಲ್ಲಿ "ಬಸವಣ್ಣನವರ ಅವತಾರದ ಕಾರಣ, ಬಸವಣ್ಣನವರ ಜನನ, ಬಸವಣ್ಣನವರ ನಾಮಕರಣ, ವಿದ್ಯಾಭ್ಯಾಸ, ಉಪನಯನ ಪ್ರಸಂಗ, ಸಹೋದರ ಮಾವ ಬಲದೇವರ ಮಗಳು ಗಂಗಾಂಬಿಕೆಯೊಡನೆ ವಿವಾಹ, ಕೂಡಲಸಂಗಮಕ್ಕೆ ಪ್ರಯಾಣ, ಗುರು ಸಂಗಮೇಶ್ವರನು ಬಸವಣ್ಣನವರಿಗೆ ಅವತಾರದ ಉದ್ದೇಶವನ್ನು ತಿಳಿಸಿ, ನೀನು ಬಂದ ಕಾರ್ಯವನ್ನು ಕೈಗೊಳ್ಳಬೇಕೆಂದು ಉಪದೇಶಿಸಿದುದು. ಬಲದೇವನ ಮರಣ, ಬಸವಣ್ಣನವರಿಗೆ ಬಿಜ್ಜಳ ಮಂತ್ರಿ ಪದವಿ ನೀಡುವುದು. ಬಿಜ್ಜಳನಿಗೆ ನಿಧಿ ದೊರಕಿಸಿ ಕೊಟ್ಟದ್ದು, ಬಸವಣ್ಣನವರು ಮಂತ್ರಿ ಪದವಿ ಹಾಗೂ ದಂಡಾಧೀಶ ಪದವಿ ಪಡೆದುಕೊಂಡು ಧರ್ಮೋದ್ಧಾರ ಜಗದೋದ್ಧಾರ ಕಾರ್ಯದಲ್ಲಿ ನಿರತನಾದುದು, ಅನುಭವ ಮಂಟಪ ರಚಿಸಿ, ವೀರಶೈವ ಧರ್ಮಪ್ರಚಾರ ಕೈಕೊಂಡದ್ದು, ಹೊಸ ಹೊಸ ಪವಾಡಗಳನ್ನು ಮೆರೆದುದು, ಬಸವೇಶ್ವರನು ಶಿವಶರಣರಿಗೆ ಅನೇಕ ಶರಣರ ಪವಾಡಗಳ ಕಥೆಗಳನ್ನು ತಿಳಿಸುತ್ತಾ ತಾನೂ ಅಂತಹ ಪವಾಡಗಳನ್ನು ಮಾಡಿ ತೋರಿಸಿದ್ದು, ಬಸವಣ್ಣನವರು ಹರಳಯ್ಯ ಮಧುವಯ್ಯಗಳ ಮಕ್ಕಳ ಮದುವೆ ಮಾಡಿಸಿದ್ದು, ಬಿಜ್ಜಳ ಅಂತರ ಜಾತಿ ವಿವಾಹದಿಂದ ರೊಚ್ಚಿಗೆದ್ದು ಹರಳಯ್ಯ ಮಧುವಯ್ಯಗಳ ಕಣ್ಣು ಕೀಳಿಸಿದ್ದು, ಶರಣ ಸಮೂಹದಲ್ಲಿ ಕೋಲಾಹಲ ಉಂಟಾದುದು, ಬಸವಣ್ಣನವರು ಮಂತ್ರಿಪದವಿ, ದಂಡನಾಯಕ ಪದವಿ ತೊರೆದುದು, ಜಗದೇವ – ಮಲ್ಲಿದೇವರಿಂದ ಬಿಜ್ಜಳನ ಕೊಲೆಯಾದುದು, ಇಡೀ ನಾಡಿನಲ್ಲಿ ಅಲ್ಲೋಲ–ಕಲ್ಲೋಲ ಉಂಟಾದುದು, ಶರಣರು ದಿಕ್ಕಾಪಾಲಾದುದು, ಬಸವಣ್ಣನವರು ಅದನ್ನು ಕಂಡು ಮನನೊಂದು ಕೂಡಲಸಂಗಮಕ್ಕೆ ನಡೆದು ಜಗತ್ತಿಗೆ ಶುಭವಾಗಲೆಂದು ಹಾರೈಸಿ ಐಕ್ಯನಾದುದು"(3). ಇವೇ ಮೊದಲಾದ ಘಟನೆಗಳು ವರ್ಣಿತವಾಗಿರುವುದನ್ನು ಕಾಣುತ್ತೇವೆ. ಈ ಕಾವ್ಯದಲ್ಲಿ ಬಸವಣ್ಣನವರ ಜೀವನ ಹಾಗೂ ವ್ಯಕ್ತಿತ್ವದ ಜೊತೆಗೆ ಅಂದಿನ ಕಾಲದ ಸಾಮಾಜಿಕ ಚಿತ್ರಣವನ್ನು ಕಟ್ಟಿಕೊಟ್ಟಿರುವುದನ್ನು ಕಾಣುತ್ತೇವೆ. ಅಂದಿನ ಕಾಲದ ವಿದ್ಯಾಭ್ಯಾಸ, ಆಟ–ಪಾಟ, ಮದುವೆ ಮುಂಜಿವೆಯ ರೀತಿ, ಅಡುಗೆ, ಊಟೋಪಚಾರ, ಜಾನಪದ ಆಟಗಳು ಇತ್ಯಾದಿ ವಿಷಯಗಳ ಬಗೆಗೆ ವರ್ಣಿಸಲಾಗಿದೆ. ಹೀಗೆ ಕಥೆ, ಪವಾಡ, ಸುಂದರ ವರ್ಣನೆ, ಸಾಮಾಜಿಕ ಚಿತ್ರಣಗಳನ್ನು ಒಳಗೊಂಡಿರುವ ಈ ಕಾವ್ಯ ಕನ್ನಡಕ್ಕೆ ಒಂದು ಶ್ರೇಷ್ಠ ಕೊಡುಗೆಯಾಗಿದೆ.

ಹದಿನೇಳನೆಯ ಶತಮಾನದಲ್ಲಿ ಬಾಳಿ ಬದುಕಿದ ಕವಿ ಪಂಚಯ್ಯನು " ಭಕ್ತಿರಸಸೋನೆ " ಎಂಬ ಕಾವ್ಯವನ್ನು ರಚಿಸಿದ್ದಾನೆ. ಕವಿ ಪಂಚಯ್ಯನು ಬಸವಣ್ಣನವರ ಜೀವನ ಹಾಗು ವ್ಯಕ್ತಿತ್ವವನ್ನು ಕುರಿತು ಕಾವ್ಯ ರಚಿಸಿದ ಮತ್ತೊಬ್ಬ ಸಾಂಗತ್ಯ ಕವಿಯಾಗಿದ್ದಾನೆ. ಈ ಕೃತಿಯುಗರಣಿಬಸವಲಿಂಗನ "ಬಸವೇಶ್ವರನ ಕಾವ್ಯ'ಕ್ಕಿಂತ ಸ್ವಲ್ಪ ಕಿರಿದಾದ, ನಿರೂಪಣೆಯಲ್ಲಿ ಅದರಿಂದ ಭಿನ್ನವಾದ, ವೀರಶೈವ ಪುರಾಣ ಪರಂಪರೆಯನ್ನುಅನುಸರಿಸಿ ನಡೆದ ಬಸವಣ್ಣನವರ ಚರಿತ್ರೆಯನ್ನು ವಿವರವಾಗಿ ತಿಳಿಸುವ ಮತ್ತೊಂದು ಉತ್ತಮ ಸಾಂಗತ್ಯ ಕೃತಿಯಾಗಿದೆ"(4).ಪಂಚಯ್ಯನ 'ಭಕ್ತಿರಸಸೋನೆ'ಕಾವ್ಯವುಇಪ್ಪತ್ತೈದು ಸಂಧಿ ಎರಡು ಸಾವಿರದಾ ನಾಲ್ಕು ನೂರಾ ಒಂಭತ್ತು ಪದ್ಯಗಳನ್ನು ಹೊಂದಿದ್ದು ಹೆಸರೇ ಸೂಚಿಸುವಂತೆಬಸವಣ್ಣನ ಭಕ್ತಿನಿರೂಪಣೆಗೆ, ಅಲೌಕಿಕ ಮಹಿಮೆಗಳ ವರ್ಣನೆಗೆ ಇಲ್ಲಿ ಪ್ರಮುಖಸ್ಥಾನದೊರೆತಿದೆ. ಬಸವಚರಿತ್ರೆ, ಜೊತೆಗೆ ಅನೇಕ ಪೌರಾಣಿಕ ಹಾಗೂ ಶರಣರ ಕಥೆಗಳು ಇಲ್ಲಿ ಹೆಣೆದುಕೊಂಡಿವೆ. ಉಪಕಥೆಗಳು ಬಹುಮಟ್ಟಿಗೆ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಮೂಲಕಥೆಗೆ ಪೂರಕವಾಗಿವೆ.ಈ ಕೃತಿಯಲ್ಲಿ ಬಸವಣ್ಣನವರ ಚರಿತ್ರೆ ಎರಡು ಪ್ರಮುಖ ಘಟ್ಟಗಳಲ್ಲಿ ಸಾಗಿ ಬಂದಿರುವುದನ್ನು ಕಾಣುತ್ತೇವೆ. ಒಂದರಿಂದ ಒಂಬತ್ತನೆಯ ಸಂಧಿಯವರೆಗಿನ ಭಾಗದಲ್ಲಿ ಬಸವಣ್ಣ ಶಿವನವಾಹನ ವೃಷಭನಾಗಿ ಕೈಲಾಸದಲ್ಲಿ ತೋರಿದ ಸಾಹಸಗಳ ವರ್ಣನೆ ಬಂದರೆ,ಎರಡನೆಯ ಭಾಗದಲ್ಲಿಹತ್ತರಿಂದ ಇಪ್ಪತ್ತೈದನೆಯ ಸಂಧಿಯವರೆಗಿನ ಭಾಗದಲ್ಲಿ ವೃಷಭ ಬಸವನಾಗಿ ಭೂಲೋಕದಲ್ಲಿ ಅವತರಿಸಿ ಮಾಡಿದ ಮಹತ್ಕಾರ್ಯಗಳ ವಿವರಣೆ ಬರುತ್ತದೆ. ಹೀಗೆ ಕವಿ ಇಲ್ಲಿ ಬಸವಣ್ಣನವರ ಪೂರ್ವ ಜೀವನವೃತ್ತಾಂತ ಹಾಗೂ ಭೂಲೋಕದಲ್ಲಿನ ಉತ್ತರಜೀವನಗಳೆರಡರ ಚಿತ್ರವನ್ನು ಕೊಡಲು ಕವಿ ಪ್ರಯತ್ನಿಸಿ ಕಾವ್ಯಕ್ಕೆ ಹೊಸ ಮೆರಗನ್ನು ತಂದುಕೊಟ್ಟಿದ್ದಾನೆ.

ವೃಷಭ ಕೈಲಾಸದಲ್ಲಿ ಶಿವನ ಸನ್ನಿಧಿಯಲ್ಲಿದ್ದು ಗೈದ ಕಾರ್ಯಗಳಲ್ಲಿತನಗೆ ಬಿರುನುಡಿಯಾಡಿದ ದೇವೇಂದ್ರನ ಗರ್ವ ಇಳಿಸಿದುದು.ಶಿವನಿಗೆ ಅವಮಾನಗೊಳಿಸಿದ ದಕ್ಷನ ಶಿರವನ್ನು ವೀರಭದ್ರನಾಗಿ ಹರಿದುದು.ತಾರಕಾಸುರ ವಧೆ, ತ್ರಿಪುರದಹನ ಪ್ರಸಂಗಗಳಲ್ಲಿ ಶಿವನಿಗೆ ಸಹಾಯಮಾಡಿದುದು.ಗಿರಿಜಾಕಲ್ಯಾಣ ಪ್ರಸಂಗದಲ್ಲಿ ಪ್ರಮುಖ ಪಾತ್ರವಹಿಸಿದುದು.ಅಸುರರನ್ನೆಲ್ಲ ಸೋಲಿಸಿದುದು.ಹನುಮಂತ ಹಾಗೂ ಭೀಮರ ಅವತಾರ ತಾಳಿ ಅನೇಕ ಸಾಹಸಗಳನ್ನು ಮೆರೆದುದು.ಇವೇ ಮೊದಲಾದವುಗಳ ವರ್ಣನೆಯನ್ನು ಮಾಡಿ ಕವಿ ಕಥೆಯನ್ನು ಕೈಲಾಸದಿಂದ ಭೂಲೋಕಕ್ಕೆ ಇಳಿಸುತ್ತಾನೆ.ಮುಂದಿನ ಕಥೆಯೆಲ್ಲ ಸಾಂಪ್ರದಾಯಿಕವಾಗಿದೆ. ಇದು ಹೆಚ್ಚಾಗಿ ಸಿಂಗಿರಾಜಪುರಾಣವನ್ನು ಹೋಲುತ್ತದೆ.ಈ ಕಾವ್ಯದಲ್ಲಿಬಸವಣ್ಣನವರ ಕಥೆ ಆರಂಭವಾಗುವುದು ಹನ್ನೊಂದನೇ ಸಂಧಿಯ ಅನಿಮಿಷಯ್ಯನ ಕಥೆಯಲ್ಲಿ. ಇಲ್ಲಿನ ಹನ್ನೊಂದು ಸಂಧಿಗಳಲ್ಲಿ ಬಸವಣ್ಣನ ಕಥೆ ಕುರಿತಾಗಿ: ಬಸವೇಶ್ವರರು ಜನಿಸಿದ ಕಥೆ, ಕಲ್ಯಾಣಕ್ಕೆ ಬಂದುದು, ಲಿಪಿಯ ಪವಾಡ, ವಿವಾಹ, ಸಿದ್ಧರಾಮೇಶ್ವರರ ಕಥೆ, ಮೇದಾರ ಕೇತಯ್ಯಗಳಕಥೆ, ಗೋರಾಂಟಕನ ಕಥೆ, ಪ್ರಭುದೇವರು ಬಸವೇಶ್ವರದಲ್ಲಿ ಆರೋಗಣೆ ಮಾಡಿದೆ ಕಥೆ, ಹರಳಯ್ಯ–ಮಧುವರಸರ ಕಥೆ, ಬಸವೇಶ್ವರ ಕಪ್ಪಡಿಗೆ ಪ್ರಯಾಣಿಸಿದ ಕಥೆ, ಚೆನ್ನಬಸವಣ್ಣನು ಗಣಂಗಳ ಜೊತೆ ಉಳುವಿಗೆ ಹೋದ ಕಥೆ ಹೀಗೆ ವಿವರಣೆಯನ್ನು ಒಳಗೊಂಡಿದೆ. ಒಟ್ಟಿನಲ್ಲಿ ಬಸವಣ್ಣನವರ ಕಥೆಯನ್ನು ಭಕ್ತಿರಸದಲ್ಲಿ ತುಂತುರುಮಳೆಯಂತೆ ಹನಿಸಿರುವ ಜನಪ್ರಿಯ ಕಾವ್ಯವಾಗಿದೆ.

'ಬಸವಣ್ಣನವರ ಜೀವನ ಹಾಗು ವ್ಯಕ್ತಿತ್ವವನ್ನು ಕುರಿತು ಸಾಂಗತ್ಯದಲ್ಲಿ ಕಾವ್ಯ ರಚಿಸಿದ ಶ್ರೇಷ್ಠ ಕವಿಗಳಲ್ಲಿ ಚೆನ್ನಬಸವನ ಶಿಷ್ಯ ಅದೃಶ್ಯ ಕವಿಯು ಒಬ್ಬನಾಗಿದ್ದಾನೆ. ಈತನು ರಚಿಸಿದ ಕಾವ್ಯ "ಬಸವ ಪವಾಡ"ಕಾವ್ಯವು ಹೆಸರೆ ಸೂಚಿಸುವಂತೆ ಬಸವಣ್ಣನವರ ಪವಾಡಗಳನ್ನುವರ್ಣಿಸುವ ಕಾವ್ಯವಾಗಿದೆ. ಸುಮಾರು ಅರವತ್ತು ನಾಲ್ಕು ಪವಾಡಗಳನ್ನು ಐದು ಸಂಧಿಗಳನ್ನು,ಏಳುನೂರಾ ಎಪ್ಪತ್ತೊಂದು ಸಾಂಗತ್ಯ ಪದ್ಯಗಳನ್ನು ಒಳಗೊಂಡ ಕಾವ್ಯವಾಗಿದೆ. ಕೇವಲ ಏಳೆಂಟು ಪವಾಡಗಳು ಮಾತ್ರ ವಿಸ್ತಾರವಾಗಿದ್ದು ಉಳಿದುವೆಲ್ಲ ಒಂದೋ ಎರಡೋ ಪದ್ಯಗಳಲ್ಲಿ ಸಂಕ್ಷೀಪ್ತವಾಗಿ ಮುಗಿದಿವೆ. ವರ್ಣನೆಗಳನ್ನು ಬದಿಗಿರಿಸಿ ನೇರವಾಗಿ ಪವಾಡಗಳನ್ನು ಮಾತ್ರ ವಿವರಿಸುತ್ತಾ ಹೊರಟ ಈ ಕಾವ್ಯದಲ್ಲಿ ಕಾವ್ಯಾಂಶವನ್ನು ಹುಡುಕುವುದು ಕಷ್ಟವಾಗಿದೆ."ಕಾವ್ಯದಲ್ಲಿಎಂದಿನಂತೆ ಕೈಲಾಸದಿಂದ ಆರಂಭವಾಗುವ ಕಥೆಯಲ್ಲಿ ಶಿವ ಸಭೆಯಲ್ಲಿದ್ದಾಗ, ಬಿರುಬನೆಂಬ ಗಣೇಶನು ಪ್ರವೇಶಿಸುವುದನ್ನು ನಂದೀಶನು ತಡೆಯುತ್ತಾನೆ. ಈ ವಿಷಯ ಶಿವನಿಗೆ ತಿಳಿದು ಅವರಿರ್ವರನ್ನು ಕರೆದು (ನಂದೀಶ–ಬಸವ, ಗಣೇಶ–ಬಿಜ್ಜಳ) ಮನಸಿಜರಾಗಿ ಮರ್ತ್ಯಲೋಕದಲ್ಲಿ ಜನಿಸಿ ಬನ್ನಿರೆಂದು ಶಾಪವನಿತ್ತು ಕಳುಹುವನು. ನಂತರ ಕವಿಯು ಬಸವನ ಸುಮಾರು 64 ಪವಾಡಗಳ ಮೂಲಕ ಬಿಜ್ಜಳನನ್ನು ಸೋಲಿಸುತ್ತಾಹೋಗುತ್ತಾನೆ. ಈತ ತನ್ನ ಕೃತಿ ರಚನೆಯಲ್ಲಿ ಲಕ್ಕಣ್ಣದಂಡೇಶ ಮತ್ತು ಸಿಂಗಿರಾಜನನ್ನು ಅನುಸರಿಸುವುದು ಸೂಕ್ಷ್ಮವಾಗಿ ಕಾಣಬರುತ್ತದೆ"(5). ಜಗದೇವನ ಪ್ರಕರಣ ಮತ್ತು ಬಿಜ್ಜಳನ ಕೊಲೆ ಪ್ರಸಂಗಗಳು ಸಿಂಗಿರಾಜನಲ್ಲಿಲ್ಲ. ಆದರೆ ಈ ಪ್ರಸಂಗಗಳನ್ನು ಚೆನ್ನಬಸವನ ಶಿಷ್ಯನೆಂಬ ಈ ಕವಿ ಬಸವಪವಾಡ ಸಂಧಿ ಐದರಲ್ಲಿ ಪ್ರಸ್ತಾಪಿಸಿದ್ದಾನೆ.ಹೀಗೆ ಕಥೆ ಕೆಲವು ನೂತನ ಅಂಶಗಳನ್ನು ಅಳವಡಿಸಿಕೊಂಡು ತನ್ನ ವಿಶಿಷ್ಟತೆಯನ್ನು ಮೆರೆದಿದೆ.ಮಡಿವಾಳ ಮಾಚಯ್ಯ, ಶಂಕರದಾಸಿಮಯ್ಯ, ಗೊಲ್ಲತಿಯಪ್ರಸಂಗಗಳು ಜೀವಕಳೆತುಂಬಿ ನಿಂತಿವೆ. ಅಳಿಯ ಬಿಜ್ಜಳ ಹಾಗೂ ಶರಣರ ಮಧ್ಯೆ ನಡೆದಯುದ್ಧದ ವರ್ಣನೆ ರೋಚಕವಾಗಿದೆ.ಅದು ಉಳಿದ ಕಾವ್ಯಗಳಿಗಿಂತ ಈ ಕಾವ್ಯಕ್ಕೆಹೆಚ್ಚಿನ ಬೆಲೆಯನ್ನು ತಂದುಕೊಟ್ಟಿದೆ.ಜನಬಳಕೆಯ ಸಹಜ ಆಡುನುಡಿಗಳಿಂದ ಕೂಡಿದ ಸರಳಭಾಷೆಓದುಗರ ಮನಸ್ಸನ್ನು ಸೆರೆಹಿಡಿಯುತ್ತದೆ.

ಬಸವಣ್ಣನವರ ಜೀವನ ಚರಿತ್ರೆಯನ್ನು ಕುರಿತು ರಚನೆಯಾದ ಮತ್ತೊಂದು ಸಾಂಗತ್ಯ ಕೃತಿಯೆಂದರೆ ಶಿವಕವಿ ಕಾಡನು ರಚಿಸಿದ ಏಕೈಕ ಕಾವ್ಯ "ಬಸವ ಶಿಖಾಮಣಿ" ಕಾವ್ಯವಾಗಿದೆ.ಇದು ಏಳು ಸಂಧಿಗಳನ್ನು ಸಾವಿರದಾ ತೊಂಭತ್ತೆಂಟು ಪದ್ಯಗಳನ್ನು ಒಳಗೊಂಡ ಕಾವ್ಯವಾಗಿದೆ.ಈ ಕಾವ್ಯದ ಮುಖ್ಯ ಉದ್ದೇಶ ಬಸವಣ್ಣನವರು ಮಾಡಿದ ಪವಾಡಗಳನ್ನು ವರ್ಣಿಸುವುದೇ ಆಗಿದೆ. ಬಸವಣ್ಣನವರ ಬದುಕಿನ ಎಲ್ಲ ಘಟನೆಗಳನ್ನು ಸಾಂಪ್ರದಾಯಿಕ ರೀತಿಯಲ್ಲಿ ಸಿಂಗಿರಾಜಪುರಾಣವನ್ನು ಅನುಸರಿಸಿ ಆರಂಭದಲ್ಲಿ ವರ್ಣಿಸುತ್ತಾ ಮುಂದೆ ಹರಿಹರನಲ್ಲಿ ಬರುವ ಎಲ್ಲ ಪವಾಡಗಳನ್ನು ಹಾಗು ಇತರ ಕವಿಗಳ ಕಾವ್ಯಗಳಲ್ಲಿ ಬರುವ ಬಸವಣ್ಣನವರ ಪವಾಡಗಳನ್ನು ಸೇರಿಸಿಕೊಂಡು ವರ್ಣಿಸುತ್ತಾ ಕಾವ್ಯ ರಚನೆಗೊಂಡಿರವುದನ್ನು ಕಾಣುತ್ತೇವೆ. ಈ ಕಾವ್ಯದಲ್ಲಿ "ಬಸವಪವಾಡದಂತೆ ಯುದ್ದದ ಪ್ರಸಂಗ ಬರುವುದಿಲ್ಲ. ಬಿಜ್ಜಳನ ಕೊಲೆ, ಮಧುವಯ್ಯ–ಹರಳಯ್ಯರ ಮಕ್ಕಳಮದುವೆ ಸಂಗತಿಗಳಿಲ್ಲ.ಇಲ್ಲಿ ಬಸವಣ್ಣನವರ ಅನುಪಮ ವ್ಯಕ್ತಿತ್ವವನ್ನು ವರ್ಣಿಸುವುದಕ್ಕೆ ಪ್ರಾಮುಖ್ಯತೆ ನೀಡಿ ಪವಾಡಗಳನ್ನು ಮಾತ್ರ ಹೇಳಿದ್ದಾನೆ. ಇಡೀ ಕಾವ್ಯ ಸರಳ ನಿರೂಪಣೆ, ವರ್ಣನೆಗಳಿಂದ ಓದುಗರನ್ನಾಗಿ ಭಾವುಕರನ್ನಾಗಿಸಿ ಆಕರ್ಷಿಸುವಲ್ಲಿ ಯಶಸ್ವಿಯಾಗಿದೆ" (6).

ಬಸವಣ್ಣನವರನ್ನು ಕುರಿತು ರಚನೆಗೊಂಡ ಸಾಂಗತ್ಯ ಕಾವ್ಯಗಳಲ್ಲಿಯೇ ಅತಿ ವಿಸ್ತಾರವಾದ ಕಾವ್ಯ ಎಂದರೆ ಅದು ಬಸವ ಸಂಪಾದನೆ ಕಾವ್ಯವಾಗಿದೆ.ಈ ಕಾವ್ಯವನ್ನು ಪರುವ ಅಥವಾ ಪರ್ವತದೇವ ಎಂಬ ಕವಿಯು ರಚಿಸಿದ್ದಾನೆ. ಇದು ನಲವತ್ತು ಸಂಧಿಗಳನ್ನು ನಾಲ್ಕು ಸಾವಿರದಾ ಆರು ನೂರಾ ಹದಿಮೂರು ಸಾಂಗತ್ಯ ಪದ್ಯಗಳನ್ನು ಒಳಗೊಂಡ ಅತಿ ದೊಡ್ಡ ಕಾವ್ಯವಾಗಿದೆ.ಇಷ್ಟು ವಿಸ್ತಾರವಾದ ಕಾವ್ಯದಲ್ಲಿ ಬಸವಣ್ಣನವರ ಚರಿತ್ರೆಗೆ ಸಂದ ಸ್ಥಾನ ತೀರಾ ಸಣ್ಣದಾಗಿದ್ದು, ಪೌರಾಣಿಕ ಕಥೆಗಳ ವರ್ಣನೆಯೇ ಅತಿಯಾಗಿ ಮೂಡಿಬಂದಿದ್ದು, ಬಸವ ಚಿರಿತ್ರೆ ಎಲ್ಲಿಯೋ ಒಮ್ಮೊಮ್ಮೆ ಕಾಣಿಸಿಕೊಂಡು ಮಾಯವಾಗುತ್ತದೆ.

ಬಸವ ಸಂಪಾದನೆ ಕಾವ್ಯದ ತಂತ್ರ ನವೀನವಾಗಿದೆ. ಇಲ್ಲಿ ಬಸವಣ್ಣ ಕಥೆಯನ್ನು ತನ್ನ ಹೆಂಡತಿ ನೀಲಲೋಚನೆಗೆ ಹೇಳುತ್ತಾ ಸಾಗುತ್ತಾನೆ.ಅಕ್ಕನಾಗಮ್ಮ ಪತಿಯಿಲ್ಲದೆ ಪ್ರಸಾದ ಸೇವನೆ ಮಾತ್ರದಿಂದ ಗರ್ಭಿಣಿಯಾಗುವುದು, ಅದಕ್ಕೆ ಕೊಂಡೆಯರು ಬಿಜ್ಜಳನಲ್ಲಿ ಚಾಡಿ ಹೇಳುವುದು ಅವನು ವಿಚಾರಣೆಗೆ ಗುರಿಪಡಿಸುವುದು, ಹೊಟ್ಟೆಯೊಳಗಿನ ಶಿಶು ನುಡಿಯುವುದು, ಅಕ್ಕನಾಗಮ್ಮನನ್ನು ಗೌರವಿಸುವುದು, ಚೆನ್ನಬಸವಣ್ಣನ ಜನನವಾಗುವುದು – ಇದು ಕೃತಿಯಲ್ಲಿ ಚರ್ಚಿತವಾಗುವ ಮುಖ್ಯ ವಿಷಯ. ಚರ್ಚೆ ಆರಂಭಿಸುವವಳು ನೀಲಮ್ಮ ಅಕ್ಕನಾಗಲೆಯ ಗರ್ಭದ ಬಗೆಗೆ ಸಂಶಯ ತಾಳಿ ಬಸವಣ್ಣನಿಗೆ ಪ್ರಶ್ನೆ ಮಾಡುತ್ತಾಳೆ.ಬಸವ ಅದಕ್ಕೆ ಉತ್ತರವನ್ನು ಕೊಡುತ್ತ, ದೃಷ್ಟಾಂತ ರೂಪವಾಗಿ, ಪೌರಾಣಿಕ ಕಥೆಗಳನ್ನು ಹೇಳುತ್ತ ಸಾಗುತ್ತಾನೆ. ಮೊದಲ ಸಂಧಿಯಲ್ಲಿ ಚರ್ಚೆ ಆರಂಭ–ಮಧ್ಯವೆಲ್ಲ ಪೌರಾಣಿಕ ಕಥೆಗಳು, ಕೊನೆಗೆ ಮತ್ತೆ ಆ ವಿಷಯದ ಪ್ರಸ್ತಾಪ, ಪರಿಹಾರವನ್ನು ನೀಡಿದ್ದಾನೆ.

ಬಸವ ಸಂಪಾದನೆಯಲ್ಲಿ ಬರುವ ಪೌರಾಣಿಕ ಕಥೆಗಳನ್ನು ಗಮನಿಸಿದರೆ ಇದೊಂದು ರೀತಿಯಲ್ಲಿ ಶಿವನ ಚರಿತ್ರೆ ಎಂದು ಮನದಟ್ಟಾಗುತ್ತದೆ. ಆರಂಭದಲ್ಲಿ ಕವಿಕುಂತಳದೇಶ, ಅಲ್ಲಿ ಕಲ್ಯಾಣವೆಂಬ ರಾಜ್ಯ, ಅದನ್ನಾಳುವವ ಬಿಜ್ಜಳನೆಂಬ ಅರಸ, ಅವನಲ್ಲಿ ಬಸವಣ್ಣನೆಂಬ ಮಂತ್ರಿ, ಆ ಬಸವಣ್ಣನಿಗೆ ನೀಲಲೋಚನೆಯೆಂಬ ಸತಿ, ಬಸವಣ್ಣ ಅನೇಕ ಪವಾಡಗಳನ್ನು, ಮಹಿಮೆಗಳನ್ನು ಮೆರೆದು ದುಷ್ಟರನ್ನು ದಮನಗೊಳಿಸಿದ ಎಂದು ಹೇಳಿ ಮುಂದೆ ಬಸವಣ್ಣನವರ ಮುಖಾಂತರ ಶಿವನಿಗೆ ಸಂಬಂಧಿಸಿದ ಕಥೆಗಳನ್ನು ಹೇಳಿಸುತ್ತಾನೆ. 1. ದಕ್ಷಬ್ರಹ್ಮನ ದೂರ್ವಾಸನ ಕಥೆ, 3. ಗಜಾಸುರನ ಕಥೆ. 4. ಹೋಮದ ಕಥೆ, 5. ಗಿರಿರಾಜನ ಕಥೆ.ತಾರಕಾಸುರನ ಕಥೆ, 7.ಶಿವನ ಮದುವೆಯ ಕಥೆ. 8. ಮುಪ್ಪುರದ ಕಥೆ, 9. ಷಣ್ಮುಖನಕಥೆ. ಈ ಕಥೆಗಳು ಮುಗಿದೊಡನೆ ಕೊನೆಗೆ ಮತ್ತೆ ಬಸವಣ್ಣನ ಪ್ರಸ್ತಾಪ, ಅಕ್ಕ ನಾಗಮ್ಮನ ಗರ್ಭದ ಪ್ರಸ್ತಾಪ, ಅದಕ್ಕೆ ಉತ್ತರ, ಪರಿಹಾರ ಸೂಚಿಸಿ ಮುಗಿಸಿಬಿಡುತ್ತಾನೆ.

ಬಸವ ಸಾಂಗತ್ಯ ಕೃತಿಗಳಲ್ಲಿಯೇ ಅತ್ಯಂತ ಚಿಕ್ಕದಾದ ಹಾಗೂ ಬಸವಣ್ಣನವರ ಚರಿತ್ರೆಯನ್ನು ಸಂಕ್ಷೀಪ್ತವಾಗಿ ಸುಂದರವಾಗಿ ನಿರೂಪಿಸಿದ ಕಾವ್ಯವೆಂದರೆ ಓದಿಸುವ ವೀರಯ್ಯ ದೇವರ ಕುಮಾರ ಸಂಗಯ್ಯ ದೇವರು ಅವರು ರಚಿಸಿದ "ಬಸವ ಸಾಂಗತ್ಯ" ಕೃತಿಯಾಗಿದೆ.ಎಸ್. ಉಮಾಪತಿ ಎಂಬುವರು ಈ ಕಾವ್ಯವನ್ನು ಸಂಪಾದಿಸಿದ್ದಾರೆ.ಇಲ್ಲಿ ಯಾವುದೇ ಉಪಕಥೆಗೆ ಅವಕಾಶವಿಲ್ಲ. ಕಾವ್ಯವು ಏಳು ಸಂಧಿಗಳಲ್ಲಿ ಏಳು ನೂರಾ ಮೂವತ್ತೇಳು

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಪದ್ಯಗಳನ್ನು ಒಳಗೊಂಡು ರಚನೆಯಾಗಿದೆ.“ ಕಾವ್ಯದ ಮೊದಲ ಆರು ಸಂಧಿಗಳಲ್ಲಿ ಬಸವಣ್ಣನವರ ಜನನ, ಬಾಲ್ಯ, ಬಿಜ್ಜಳನಲ್ಲಿ ಬಂದು ಲಿಪಿ ಓದಿ ನೀಲಾಂಬಿಕೆಯನ್ನು ಮದುವೆಯಾಗುವ ವರೆಗಿನ ಸಂಗತಿಗಳನ್ನು ಹೇಳಿದರೆ, ಕೊನೆಯದಾದ ಏಳನೆಯ ಸಂಧಿಯಲ್ಲಿ ಬಸವಣ್ಣನವರ ಪವಾಡಗಳನ್ನು ಒಂದೊಂದು ಪದ್ಯದಲ್ಲಿ ಅತಿ ಸಂಕ್ಷೀಪ್ತವಾಗಿ ತಿಳಿಸಲಾಗಿದೆ”(7). ಸರ್ವರಿಗೂ ಬಸವಚರಿತ್ರೆಯನ್ನು, ಅವರ ಮಹಿಮೆಗಳನ್ನು ಸಂಕ್ಷೀಪ್ತವಾಗಿ ತಿಳಿಸಬೇಕೆಂಬ ಉದ್ದೇಶವಿಟ್ಟುಕೊಂಡು ಕವಿ ಈ ಕಾವ್ಯವನ್ನು ರಚಿಸಿದಂತಿದೆ.ಕವಿಯ ಉದ್ದೇಶ ಈಡೇರಿದೆ.

ಬಸವ ಪವಾಡ ಪುರಾಣ ಕಾವ್ಯವು ವೀರಶೈವೇತರ ಕವಿಯಿಂದ ರಚಿತವಾದ ಕಾವ್ಯವಾಗಿದೆ. “ಭೂಸುರ ಬಸುರಲಿ ಬಂದರೇನಾಯಿತು ಶಶಿಧರಕವಿಗಳ ಶಿಶು ನಾನು” ಎಂದು ಹೇಳಿ ಭಕ್ತಿಭಾವದಿಂದ ಬಸವಣ್ಣನವರ ಪವಾಡಗಳನ್ನು ವರ್ಣಿಸಿದ ಬ್ರಾಹ್ಮಣ ಕವಿ ವಿಠ್ಠಲ ಎಂಬುವನು ಈ ಕಾವ್ಯದ ರಚನಾಕಾರನಾಗಿದ್ದಾನೆ”(8). ಈ ಕಾವ್ಯವು ಐದು ಸಂಧಿಗಳನ್ನು ಐದು ನೂರಾ ತೊಂಭತ್ತೊಂದು ಪದ್ಯಗಳನ್ನು ಒಳಗೊಂಡ ಕಾವ್ಯವಾಗಿದೆ. ಈ ಕಾವ್ಯದ ಕವಿ ವಿಠ್ಠಲನು ತನಗಿಂತ ಪೂರ್ವದಲ್ಲಿ ರಚಿತವಾದ ಬಸವಚರಿತ್ರೆಗಳನ್ನು ಅಧ್ಯಯನ ಮಾಡಿ ಈ ಕಾವ್ಯದಲ್ಲಿ ಸಂಕ್ಷೀಪ್ತವಾಗಿ ಕೇವಲ ಪವಾಡಗಳನ್ನು ವಿವರಿಸಲು ಪ್ರಯತ್ನಿಸಿದ್ದಾನೆ. ಉಳಿದ ಕಾವ್ಯಗಳಂತೆ ಬಸವಣ್ಣನವರ ಚರಿತ್ರೆ ಇಲ್ಲಿ ಜನನ, ಬಾಲ್ಯ, ಮದುವೆ, ಮಂತ್ರಿಪದವಿ, ಇತ್ಯಾದಿಯಾಗಿ ಕ್ರಮವರಿತು ಸಾಗುವುದಿಲ್ಲ. ಒಮ್ಮಲೇ ಪವಾಡಗಳಿಂದಲೇ ಕಾವ್ಯ ಆರಂಭವನ್ನು ಪಡೆದುಕೊಳ್ಳುತ್ತದೆ. ಪವಾಡಗಳ ಜೊತಗೆ ಬಸವಣ್ಣನವರ ಜೀವನಕ್ಕೆ ಹೊಂದಿಕೊಂಡು ಬರುವ ಅನೇಕ ಶರಣರ ಕಥೆಗಳನ್ನೂ ಜೋಡಿಸುತ್ತಾನೆ. ಅವು ಕೂಡ ಸಂಕ್ಷೀಪ್ತವಾಗಿ ವರ್ಣಿತವಾಗಿವೆ. ಬರೀ ಪವಾಡ ಕಥೆಗಳೇ ತುಂಬಿರುವಈ ಕಾವ್ಯದಲ್ಲಿ ವರ್ಣನೆಗಾಗಲೀ, ಕಾವ್ಯಾಂಶಕ್ಕಾಗಲಿ ಅವಕಾಶವಿಲ್ಲದಾಗಿದೆ.ಆದರೆ ಅನ್ಯಮತೀಯ ಕವಿಯೊಬ್ಬ ಬಸವಣ್ಣನವರ ಬಗೆಗೆ ಭಕ್ತಿಯಿಂದ ಕಾವ್ಯ ರಚಿಸಿದ್ದಾನೆಂಬ ದೃಷ್ಟಿಯಿಂದ ಮಾತ್ರ ಈ ಕಾವ್ಯಕ್ಕೆ ಹೆಗ್ಗಳಿಕೆ ಪ್ರಾಪ್ತವಾಗಿದೆ.

ಈ ಮೇಲಿನ ಸಾಂಗತ್ಯ ಕಾವ್ಯಗಳು ವೀರಶೈವ ಪುರಾಣ ಪರಂಪರಗೆ ಸೇರಿದ ಕಾವ್ಯಗಳಾಗಿದ್ದು, ಬಸವಣ್ಣನವರ ಅಲೌಕಿಕ, ಅನುಪಮ ವ್ಯಕ್ತಿತ್ವವನ್ನು ಕಟ್ಟಿಕೊಡುವ ಉದ್ದೇಶವನ್ನು ಹೊಂದಿರುವುದನ್ನು ಕಾಣುತ್ತೇವೆ.ಒಟ್ಟಿನಲ್ಲಿ ಹಲವು ವೈಶಿಷ್ಟ್ಯಗಳನ್ನು ಹೊಂದಿರುವ ಸಾಂಗತ್ಯ ಕಾವ್ಯಗಳು ಬಸವಣ್ಣನವರ ಚರಿತ್ರೆಗೆ ತಮ್ಮದೇ ಆದ ಕಾಣಿಕೆಯನ್ನು ಸಲ್ಲಿಸಿವೆ. ಬಸವಚರಿತ್ರೆಯ ತೌಲನಿಕ ಅಧ್ಯಯನಕ್ಕೆವಿಶೇಷ ಸಾಮಗ್ರಿಯನ್ನು ಒದಗಿಸುತ್ತಿವೆ ಎಂದು ಹೇಳಬಹುದಾಗಿದೆ.

ಅಡಿ ಟಿಪ್ಪಣಿಗಳು :

1. ಕಲಬುರ್ಗಿ ಎಂ. ಎಂ. (2000), ಶಾಸನಗಳಲ್ಲಿ ಶಿವಶರಣರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.ಪು. ಸಂ. 5.
2. ರಾಜೂರ ವೀರಣ್ಣ (2010), ಬಸವಪುರಾಣ ಪರಂಪರೆ, ಶ್ರೀ ಮ.ನಿ.ಪ್ರ ಮುರಗೋಡ ಮಹಾಂತ ಶಿವಯೋಗೀಶ್ವರ ಶತಮಾನೋತ್ಸವ ಸ್ಮಾರಕಶ್ರೀ ಬಸವೇಶ್ವರಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಪು.ಸಂ. 53.
3. ಅದೇ ಪು.ಸಂ. 56
4. ಅದೇ ಪು.ಸಂ. 58
5. ರಾಜಶೇಖರ ಜಮದಂಡಿ.(2023), ವಚನ ಸಾಹಿತ್ಯ ಅಧ್ಯಯನಗಳ ಸಮೀಕ್ಷೆ, ಡಾ. ಎಂ.ಎಂ. ಕಲಬುರ್ಗಿಅಧ್ಯಯನ ಸಂಸ್ಥೆ, ಎಡೆಯೂರು ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠಡಂಬಳ–ಗದಗಪು ಸಂ. 125
6. ವೀರಣ್ಣ ರಾಜೂರ (2010), ಬಸವಪುರಾಣ ಪರಂಪರೆ, ಶ್ರೀ ಮ.ನಿ.ಪ್ರ ಮುರಗೋಡ ಮಹಾಂತ ಶಿವಯೋಗೀಶ್ವರ ಶತಮಾನೋತ್ಸವ ಸ್ಮಾರಕಶ್ರೀ ಬಸವೇಶ್ವರಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಪು ಸಂ. 64.
7. ಅದೇ ಪು ಸಂ. 66
8. ಅದೇ ಪ. ಸಂ. 69

ಆಕರ ಕೃತಿಗಳು:

1. ರಾಜೇಗೌಡ, ಹ. ಕ. 1982 (ಸಂ), ಗರಣಿಯ ಬಸವಲಿಂಗ ವಿರಚಿತ ಬಸವೇಶ್ವರ ಕಾವ್ಯ, ಕನ್ನಡ ಅಧ್ಯಯನಸಂಸ್ಥೆ ಮೈಸೂರ ವಿಶ್ವವಿದ್ಯಾಲಯ
2. ಚಂದ್ರಯ್ಯಬಿ. ನಂ.1967(ಸಂ), ಗುರುಚೆನ್ನಬಸವ ಶಿಷ್ಯ ಅದೃಶ್ಯ ಕವಿ ಬಸವಪವಾಡ ಕಾವ್ಯಶ್ರೀ ಪ್ರಕಾಶನಮೈಸೂರು.
3. ಸಣ್ಣಯ್ಯ ಬಿ. ಎಸ್. 1985 (ಸಂ), ಕವಿ ಕಾಡ ವಿರಚಿತ ಬಸವಶಿಖಾಮಣಿ,ಕನ್ನಡ ಅಧ್ಯಯನ ಸಂಸ್ಥೆ ಮೈಸೂರ ವಿಶ್ವವಿದ್ಯಾಲಯ
4. ರಾಜೂರ ವೀರಣ್ಣ, 1994,(ಸಂ) ಬಸವಪುರಾಣ ಪರಂಪರೆ (ಬಸವಮಾರ್ಗ–8)– ಕನ್ನಡ ಅಧ್ಯಯನ ಪೀಠ , ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
5.ಉಮಾಪತಿ, ಎಸ್.(ಸಂ), ಓದಿಸುವ ವೀರಯ್ಯ ದೇವರ ಕುಮಾರ ಸಂಗಯ್ಯ ದೇವರು ವಿರಚಿಸಿದ ಬಸವ ಸಾಂಗತ್ಯ, ಸ್ನೇಹಾ ಪಬ್ಲಿಷಿಂಗ್ ಹೌಸ್ ಬೆಂಗಳೂರು,
6. ಭಕ್ತಿರಸಸೋನೆ ಪಂಚಯ್ಯ
7. ಬಸವ ಸಂಪಾದನೆ : ಪರುವ(ಪರ್ವತದೇವ)
8. ಬಸವಪವಾಡ ಪುರಾಣ : ವಿಠ್ಠಲ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಕುವೆಂಪು ಅವರ ಕಾವ್ಯದಲ್ಲಿ ಪರಿಸರ ಪ್ರಜ್ಞೆ

ಡಾ. ಭಾರತಿ ಎಸ್. ಗದ್ದಿ
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗದ ಮುಖ್ಯಸ್ಥರು
ಕೆ.ಎಲ್.ಇ. ಸಂಸ್ಥೆಯ. ಎಸ್.ಎಸ್.ಎಮ್.ಎಸ್.
ಮಹಾವಿದ್ಯಾಲಯ, ಅಥಣಿ.

Manuscript ID:
JRD -2026-180404
ISSN: 2230-9578
Volume 18
Issue 4(II)
Pp.12-14
April 2026
Submitted:05 Mar. 2026
Revised:20Mar. 2026
Accepted:05Apr.2026
Published:30 April2026

ಸಾರಲೇಖ :

ಮಲೆನಾಡಿನ ಐಸಿರಿಯನ್ನು ವರ್ಣಿಸಿದ ಕನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಕುವೆಂಪು ಅವರುಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕಕ್ಕೆ ಮಹತ್ವದಕೊಡುಗೆ ನೀಡಿದ ಕವಿ, ಕತೆಗಾರ, ಕಾದಂಬರಿಕಾರ, ನಾಟಕಕಾರ, ವಿಮರ್ಶಕ ಮುಂತಾದ ಬಹುಮುಖ ಪ್ರತಿಭೆವುಳ್ಳವರು.ಅವರ ಸಾಹಿತ್ಯ ಮೇಲ್ಕಂಡ ವಿವಿಧ ಪ್ರಕಾರಗಳಲ್ಲಿ ರಚಿತವಾಗಿದ್ದರೂ, ಕವಿಯಾಗಿಅವರ ಸಾಧನೆ, ಇಪ್ಪತ್ತನೆಯ ಶತಮಾನದಕನ್ನಡಕಾವ್ಯ ಮಹತ್ವದಾಗಿದೆ. ಕುವೆಂಪು ಅವರಕಾವ್ಯದಲ್ಲಿ ನಿಸರ್ಗಾನುಭೂತಿಗೆ ಪ್ರಾಮುಖ್ಯತೆ ನೀಡಿದ್ದಾರೆ. 'ಪರಿಸರಇವರ ಉಸಿರು. ನಿಸರ್ಗಇವರುಆರಾಧಿಸುವದೇವರು' "ಮಾನವನಿಗೆ ಪ್ರಕೃತಿಯಅಗತ್ಯವಿದೆ. ಹೊರತು ಪ್ರಕೃತಿಗೆ ಮಾನವನಅಗತ್ಯವಿಲ್ಲ" ಎಂಬ ಮಹೋನ್ನತ ಸಂದೇಶವನ್ನು ಸಾರಿದಕನ್ನಡದ ಪರಿಸರ ಪ್ರೇಮಿ, ಪ್ರಕೃತಿಯಆರಾಧಕ, ಪ್ರೇಮದಆರಾಧಕ, ಕ್ರಾಂತಿಯ ಹರಿಕಾರ, ದರ್ಶನ ಮತ್ತು ಅನುಭಾವಗಳನ್ನು ಸಿದ್ಧಿಸಿಕೊಂಡ ತಪಸ್ವಿ ಮೂರು ನಾಲ್ಕು ದಶಕಗಳಿಗೂ ಹೆಚ್ಚುಕಾಲ ನಿರಂತರವಾಗಿ ಪ್ರಕೃತಿಯಆರಾಧನೆಯಲ್ಲಿ ನಿರತರಾಗಿ, ಸೃಷ್ಟಿ ಸೌಂದರ್ಯದಅವರ್ಣನೀಯಗಾಂಭೀರ್ಯವನ್ನು ವೀಕ್ಷಿಸಿ ಸವಿದು ಪ್ರಕೃತಿಯಅಗಾಧ ವಿಶ್ವರೂಪದರ್ಶನದ ಮಹತ್ವದೆದುರು ವಿನೀತರಾಗಿದ್ದಾರೆ, ಪುನೀತರಾಗಿದ್ದಾರೆ. ಪ್ರಕೃತಿಯನ್ನುಕಂಡಾಗತಮಗಾದಆನಂದವನ್ನುಅತ್ಯಂತ ಸಹಜ ಮತ್ತು ಸರಳವಾಗಿ ವರ್ಣಿಸಿದ್ದಾರೆ.

ಮುಖ್ಯ ಪದಗಳು : ಮಲೆನಾಡು, ಹೂಮಾಲೆ, ಸೊಬಗು, ದೇಗುಲ

ನೆನಹು ಬಾಳಿನ ಬುತ್ತಿ, ಅನುಭವಗಳ ಅಕ್ಷಯ ನಿಧಿ' ಎನ್ನುತ್ತಾರೆ ಕುವೆಂಪು. ಅವರ ನೆನಪಿನ ಬುತ್ತಿಯಲ್ಲಿ, ಊಟದಲ್ಲಿಅನ್ನಕ್ಕಿರುವ ಸ್ಥಾನದಂತೆಅಗ್ರಸ್ಥಾನ ಪಡೆದಿರುವುದು ಮಲೆನಾಡು. ಅಲ್ಲಿಯಕಾಡು, ತೊರೆ, ನದಿಗಳು, ಅಲ್ಲಿಯ ಪ್ರಕೃತಿ ಸೌಂದರ್ಯ, ಅಲ್ಲಿಯಜನರು, ಭಾಷೆ, ಕುವೆಂಪು ಅವರ ಬಹುತೇಕ ಕೃತಿಗಳಲ್ಲಿ ಹಿನ್ನೆಲೆಯಾಗಿ ನಿಲ್ಲುವುವು. ಅವರ ಪ್ರತಿಭೆಯನ್ನು ಪುಟಕ್ಕಿಟ್ಟು ಅಪರಂಜಿಯಾಗಿಸಿದ ಅವರ ಸಾಹಿತ್ಯದ ಒಲವುಗಳಿಗೆ ವಿಶಾಲ ಭಿತ್ತಿ ಒದಗಿಸಿದ ಮಲೆನಾಡಿನ ಬಗ್ಗೆ ಅವರಿಗೆಕೊನೆಯವರಿಗೂಅತೀವವಾದ ಮಮಕಾರವಿತ್ತು. ಮಲೆನಾಡನ್ನು ಬಿಟ್ಟು ಬಂದು ಬಯಲುಸೀಮೆಯಲ್ಲಿದ್ದಾಗ ನನ್ನ ಮನಸ್ಸು ಆಗಾಗ ತವರು ನಾಡಿನ ಚೆಲುವು ಗೆಲುವುಗಳನ್ನು, ದೃಶ್ಯಗಳನ್ನು, ವ್ಯಕ್ತಿಗಳನ್ನು, ಸನ್ನಿವೇಶಗಳನ್ನು ನೆನೆದು ಸುಖಪಡುತ್ತದೆ. ನನ್ನಆಪ್ತಮಿತ್ರರಿಗೆ ಅವುಗಳನ್ನು ಹೋಳಿ ನಲಿಯುತ್ತದೆಅವರ ಪರಿಣಾಮವೇ ಈ ಕಾವ್ಯಗಳಲ್ಲಿ, ಕಥೆಗಳಲ್ಲಿ, ಕಾದಂಬರಿಗಳಲ್ಲಿ ಮಲೆನಾಡಿನ ಚಿತ್ರಗಳನ್ನು ಕುವೆಂಪು ರವರು ಹೇಳಿದ್ದಾರೆ.

ಕಾಡಿನ ಕೊಳಲಿದು,ಕಾಡ ಕವಿಯು ನಾ
ನಾಡಿನಜನರೊಲಿದಾಲಿಪುದು,
ಬೃಂದೆಯ ನಂದನಕಂದನೆ ಬಂದು
ಗೊಲ್ಲನ ಕೊಳಲಲಿ ನಿಮದಿಹನೆಂದು
ಭಾವಿಸಿ ಮನ್ನಿಸಿ ಲಾಲಿಪುದು'

ಎಂದುಕವನದಲ್ಲಿ ಮಲೆನಾಡಿನ ಸುತ್ತಲೂಕವಿದದಟ್ಟವಾದಕಾಡು, ನೀರವ ಮೌನವನ್ನು ಭೇದಿಸಿ ಅಲೆಯಲೆಯಾಗಿ ಬರುವ ಗಿಳಿಕೋಗಿಲೆ ಗಾನ, ಮುಗಿಲು ಮುಟ್ಟುವತವಕದಿಂದೆಂಬಂತೆಎದ್ದು ನಿಂತಿರುವ ಬೆಟ್ಟ ಗುಡ್ಡಗಳ ಸಾಲು, ಪ್ರಕೃತಿಯ ಸಂಗೀತಕ್ಕೆ ಜುಳುಜುಳು ಶೃತಿ ಹಿಡಿಯುವತಾಯಿತುಂಗೆ, ಮತ್ತಿತರ ಹೊಳೆಹಳ್ಳಗಳು, ಬಡವರಾದರೂ ಹೃದಯ ಶ್ರೀಮಂತಿಕೆ ಹೊಂದಿದ ಸುಸಂಸ್ಕೃತ ಜನಗಳ ನೆಲೆವೀಡಾದ ಮಲೆನಾಡಿನಚಿತ್ರವನ್ನು ವರ್ಣಿಸಿದ್ದಾರೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ. ಭಾರತಿಎಸ್. ಗದ್ದಿ ಸಹ ಪ್ರಾಧ್ಯಾಪಕರುಕನ್ನಡ ವಿಭಾಗದ ಮುಖ್ಯಸ್ಥರುಕೆ.ಎಲ್.ಇ. ಸಂಸ್ಥೆಯ.
ಎಸ್.ಎಸ್.ಎಮ್.ಎಸ್. ಮಹಾವಿದ್ಯಾಲಯ, ಅಥಣಿ.

How to cite this article:
ಡಾ. ಭಾರತಿಎಸ್. ಗದ್ದಿ *(2026).* ಕುವೆಂಪು ಅವರಕಾವ್ಯದಲ್ಲಿ ಪರಿಸರ ಪ್ರಜ್ಞೆ, *Journal of Research and Development, 18(4(II)), 12–14. https://doi.org/10.5281/zenodo.19394546*

Quick Response Code:

Website:
https://jrdrvb.org/

DOI:
10.5281/zenodo.19394546

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಕೆರೆಗಳು, ತೆರೆಗಳು ಹೊಳೆಗಳು ಕೊಳಗಳು
ಜನಗಳು ಬನಗಳು ಬೆಟ್ಟಗಳು:
ಬಾನು ಮುಗಿಲು ಹೊಳೆ ಹೊಳೆಯುವ ನೇಸರು,
ಮಾಲೆ ಮಾಲೆಯಲಿ ಘಟ್ಟಗಳು:
ಹಸುರುಕಡಲ ಪೆರ್ದೆರೆಗಲ ತೆರೆದಲಿ
ಹಬ್ಬಿರುವಡೆಕೆಯ ತೋಟಗಳು:
ಹಾಡುವ ಹಕ್ಕಿಗಳೆಸುವ ಹೂಗಳು:
ನೆರೆಮನ ಮೋಹಿಪ ನೋಟಗಳು:
ಮುಚ್ಚಿದ ಕಣ್ಣೊಳು ತೊಳೆಯುವವು
ಬೆಚ್ಚಿದ ಮಾನವನು ಸೆಳೆಯುವವು:
ಕರೆಯುತಕೈಬೀಸಭಯವ ನೀಡಿ
ಜೀವಕೆ ಶಾಂತಿಯ ಮಾಲೆಯ ಸೂಡಿ
ತಲ್ಲಣಿಪೆಡೆಯನು ಸಂತೈಸಿ ಮದ್ದಿಪನ್ನನು ಓಲೈಸಿ!'

ಎಂದು ಈ ಕವನದಲ್ಲಿ ಮಲೆನಾಡಿನ ಪರಿಸರಅಗಾಧವಾದ ಪ್ರಭಾವವನ್ನು ಬೀರಿದೆ.ಅವರ ಮನೆ ಇರುವ ಕುಪ್ಪಳ್ಳಿಯ ಪ್ರದೇಶವಂತೂ ಹಸಿರು ವನರಾಶಿಯ ನಡುವೆ ಕಂಗೊಳಿಸುವ ಚೆಲುವಿನ ತಾಣವಾಗಿದೆ.ವರ್ಷದಅರ್ಧಭಾಗ ಸುರಿಯುವಕುಂಭದ್ರೋಣ.ಮಳೆ, ದಟ್ಟವಾದರಣ್ಯದ ಮಧ್ಯೆಜೀವಿಸುತ್ತಿದ್ದ ಹಲವು ಹತ್ತು ಬಗೆಯಕಾಡು ಪ್ರಾಣಿಗಳು, ಬಗೆಬಗೆಯ ಹಕ್ಕಿಗಳು, ಸೂರ್ಯನಉದಯ ಮತ್ತು ಅಸ್ತಗಳ ರಮಣೀಯ ಚೆಲುವು ಕುವೆಂಪುರವರು ಅಚ್ಚಳಿ ಮುಡಿಸುವರೀತಿಯಲ್ಲಿ ವರ್ಣಿಸಿದ್ದಾರೆ.

ಕುವೆಂಪು ಅವರು ಮಾನವ ಶಕ್ತಿಗೂ ಪ್ರಕೃತಿಗೂ ಪರಸ್ಪರಗಾಢವಾದ ಸಂಬಂಧವಿದೆ.ಎರಡೂಒಂದೇ ಅಲೌಕಿಕ ಶಕ್ತಿಯ ಬೇರೆ ಬೇರೆ ಮುಖಗಳು.ಜೀವನದಜತೆಗೆ ಅವುಗಳ ಸಂಬಂಧಅವಿರತವಾಗಿದೆಎಂದು ಸಾಧಿಸಿದ ಕುವೆಂಪು ತಮ್ಮಚೇತನಕ್ಕೆರಮಣೀಯವಾಗಿ, ಪ್ರಿಯವಾಗಿ, ಆಕರ್ಷಕವಾಗಿ, ಆದರ್ಶವಾಗಿಕಂಡ ಪ್ರಕೃತಿಯನ್ನುತಮ್ಮಜೀವನದುದ್ದಕ್ಕೂ ಉಪಾಸನೆ ಮಾಡಿದರು, ಪೂಜಿಸಿದರು. ಸೃಷ್ಟಿಕರ್ತನೆಒಬ್ಬ ಮಹಾಕವಿ, ಅವನ ಮಹಾಕಾವ್ಯವೇ ಈ ಸೃಷ್ಟಿ ಎಂಬ ನಂಬುಗೆಯನ್ನುತಮ್ಮ ಸಾಹಿತ್ಯದುದ್ದಕ್ಕೂಎತ್ತಿಹಿಡಿದರು. ಪ್ರಕೃತಿಯಾರಾಧನೆಯೇ ಪರಮಾರಾಧನೆಯುಎಂದು ನಂಬಿ ಬದುಕಿದರು. ಹೀಗೆ ವಿಭಿನ್ನವಾಗಿ ಮತ್ತು ವಿಶಿಷ್ಟವಾಗಿ ಪರಿಸರ ಪ್ರಜ್ಞೆಯನ್ನು ಬೆಳೆಸಿಕೊಂಡು ಸಾಹಿತ್ಯ ರಚಿಸಿದವರು ಕುವೆಂಪುರವರು.

ಕವಿ ಪ್ರಕೃತಿಯನ್ನು ವಿವರಿಸುತ್ತಿದ್ದಾಗತಮಗೆ ಸೌಂದರ್ಯದರ್ಶನವಾಯಿತೆಂದೂಜತೆಯಲ್ಲೇಕಾವ್ಯದ ಸಾಕ್ಷಾತ್ಕಾರವಾಯಿತೆಂದೂ ಈ ಕವಿತೆಯಲ್ಲಿ ಹೇಳಿದ್ದಾರೆ.

ಮಲೆನಾಡಿನ ಬನಗಳಲ್ಲಿ
ಮುಗುದಬಾಲನಲೆಯುತಿರಲು
ಅರಿಯದಂತೆ ಹೆಜ್ಜೆಯಿಟ್ಟು
ಬೆನ್ನ ಹಿಂದೆ ನೀನು ಬಂದೆಕಬ್ಬದಂಗನೆ,
ಹೂವುಗಳಲಿ ಅಡಗಿ ನೀನು
ಕರೆದೆಎನ್ನನು
ತುಂಗೆಯಲ್ಲಿ ಮೀಯುತಿರಲು
ಅಲೆಗಳಲ್ಲಿ ಹುದುಗಿ ನೀನು
ಮುತ್ತುಕೊಟ್ಟೆ ಕೆನ್ನೆಗಳಿಗೆ
ಚೆನ್ನೆಕವಿತೆಯೇ:

ಎಂದು ಪ್ರಕೃತಿಯ ಚೆಲುವು ನೀಡಿದಆನಂದಾನುಭೂತಿಯನ್ನುಕಾವ್ಯದಲ್ಲಿ ಸೆರೆಹಿಡಿದಿದ್ದಾರೆ.ಸೌಂದರ್ಯದ ಪರಮಆರಾಧಕರಾಗಿದ್ದ ಕವಿ ಕುವೆಂಪು ಕಲಾದೃಷ್ಟಿಎಂದರೆಚೆಲುವನ್ನು ಲೌಕಿಕ ದೃಷ್ಟಿಯಿಂದ ವೀಕ್ಷಿಸುವುದಲ್ಲ. ಲೌಕಿಕ ಸಂಗವನ್ನು ಬಿಡಿಸಿಕೊಂಡು ನೋಡುತ್ತ ನಿಸ್ಸಂಗ ಪರಿಭಾವನೆಯಿಂದಧ್ಯಾನಿಸುವುದು.ಅದೊಂದುರೀತಿಯತಪಸ್ಸು.ಅಂತಹ ಸಿದ್ಧಿ ಕುವೆಂಪುರವರಿಗೆ ಒಲಿದಿತ್ತು.ನಮ್ಮೆದುರಿಗೇ ರಾಶಿ ಬಿದ್ದಿರುವ ಪ್ರಕೃತಿಯಚೆಲುವನ್ನುಅರಿಯುವ ಶಕ್ತಿಯಿಲ್ಲಕುರುಡಾಗಿರುವಜನಕ್ಕೆ ಸೌಂದರ್ಯಾನುಭವವನ್ನುಗ್ರಹಿಸುವ ಶಕ್ತಿ ಲಭಿಸುವುದೆಂದು ಕವಿ ನೋವಿನಿಂದ ಹೇಳಿದ್ದುವುಂಟು.

ಪೃಥ್ವಿಯಲಿ ಕ್ಲೇಶ ಕಷ್ಟಗಳೆಲ್ಲ ಕೊನೆಮುಟ್ಟಿ
ಸರ್ವರೂರಸದೃಷ್ಟರಾಗಿದರ್ಶನ ಪಡೆದು
ಕಾವ್ಯದಾಸ್ವಾದನೆಗೆ ಸೌಂದರ್ಯ ಸಾಧನೆಗೆ
ಕಲೆಯಆರಾಧನೆಗೆ ಮನವೀಯುವಾ ಪುಣ್ಯ
ಸ್ವರ್ಗವೆಂದೈತರುವುದೋಕಾಣೆ'

ಪ್ರಕೃತಿಯನ್ನು ಕುವೆಂಪು ವರ್ಣಿಸಿರುವ ರೀತಿಅನೇಕರಿಗೆ ಸ್ಫೂರ್ತಿದಾಯಕವಾಗಿದೆ.ಸೃಷ್ಟಿಯಲ್ಲಿ ಶಿವನನ್ನು, ಭಗವತಿಯನ್ನುಕಾಣುವಅವರ ಪ್ರಯತ್ನಗಳ ಓರ್ವತಪೋನಿರತನ ಸಿದ್ಧಿಯಂತಿದೆ ಎಂದು ಹೇಳಿದ್ದಾರೆ.

ಸುಂದರ ದಿನ ಸುಂದರ ಇನ,
ಸುಂದರ ವನ ನೋಡು ಬಾ
ಎಳೆಬಿಸಿಲೊಳು ತಿಳಿಗೊಳದೊಳು
ಜಲದಲೆಗಳು ನಲಿನಲಿಯಲು
ನೋಡು ಬಾ ಕೂಡು ಬಾ
ಬೇಗ ಬಾ! ಬಾ! ಬಾ! ಬಾ!'

ಈ ಮೇಲಿನ ಕವನದಲ್ಲಿ ಕವಿ, ಪ್ರಕೃತಿಗೆಜೀವನವನ್ನೇ ಮರೆಸುವಶಕ್ತಿ ಇದೆ ಪ್ರಕೃತಿಯ ಸೊಬಗಿನ ಆನಂದಾನುಭವ ಸವಿಯಲು ಬಾ ಎಂದುಆಹ್ವಾನಿಸುತ್ತಾರೆ.

ಸೊಬಗೆ ಪರಮ ಸಂತಸಂ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಸುಖವೆ ಸೌಂದರಂ
ವಿಶ್ವಲೀಲೆಯಿಂದಜಲಿಗ್ಪಿ
ನೋಟವಿದು ಮನೋಹರಂ
ಕೌಮುದಿಯ ವಿಲಾಸದಿಂ
ರಚಿಸಿ ಸೇತುವಂ
ಪರವನಿಹಕೆ ಬಂಧಿಸಿಹುದು
ತೋರಿ ವಿಶ್ವದೈಕ್ಯಮಂ'

ಎಂದು ಭೂಮಿಯಲ್ಲಿಕಾಣುವ ಚೆಲುವು ಆ ಪರಮಾತ್ಮನಒಂದು ಪ್ರಕಾಶಎನ್ನುವತತ್ವವನ್ನು ಕವಿ ನಿವೇದಿಸುತ್ತಾರೆ.ಶಿವ ಕಾಣದ ಕವಿ ಕುರುಡನೋ ಶಿವ ಕಾವ್ಯದಕಣ್ಣೋ!ಎನ್ನುತ್ತ 'ಸೊಬಗೇ ಶಿವ' ಎನ್ನುವತತ್ವವನ್ನು ಈ ಪ್ರಕೃತಿ ಸಾರುತ್ತದೆಎನ್ನುತ್ತಾರೆ ಕವಿ.ಈ ಪ್ರಪಂಚವೇಒಂದುದೇಗುಲ, ಸೂರ್ಯ, ಚಂದ್ರ, ನಕ್ಷತ್ರಗಳೇ ಇಲ್ಲಿಉರಿಯುವ ದೀಪಗಳು. ಕಾನನಗಳೇ ಇಲ್ಲಿ ಹೂಮಾಲೆ, ಮೇಲೆ ಆವರಿಸಿದ ನೀಲಗಗನವೇ ಗೋಪುರ, ಕಡಲು, ತೊರೆಗಳೇ ಇಲ್ಲಿ ಪಂಚಪಾತ್ರೆ, ವಿವಿಧ ದಿವ್ಯ ಪುಷ್ಪಗಳ ಗಂಧವೇಧೂಪ, ಗಿಳಿಕೋಗಿಲೆ ಮೊದಲಾದ ಪಕ್ಷಿಗಳಿಂಚರವೇ ವಾದ್ಯ, ಹೃದಯದ ಪ್ರೇಮವೇಧರ್ಮಶಾಸ್ತ್ರಎಂದು ಪ್ರಕೃತಿಯಆರಾಧನೆಯ ಪರಶಿವನ ಆರಾಧನೆ ಎಂಬ ತತ್ವವನ್ನು ಪ್ರತಿಪಾದಿಸಿದ್ದಾರೆ.

ಹೀಗೆ ಮಲೆನಾಡಿನಕಾಡು, ಜನಜೀವನ, ಪ್ರಕೃತಿಯ ಸಮೃದ್ಧ ಚಿತ್ರಗಳನ್ನು ವರ್ಣಿಸುವ ಕವಿ ಇಂದಿನ ಪಿಳಿಗೆಗೆ ಮಾದರಿಯಾಗಲಿ.

ಆಕರ ಗ್ರಂಥಗಳು:

1. ರಸಋಷಿ ಕುವೆಂಪು : ಮಂಜುನಾಥ ಮೇಗರವಳ್ಳಿ ಪ್ರಕಟಣೆ –2000 ಮೊದಲ ಮುದ್ರಣ
2. ಅಣ್ಣನ ನೆನಪು : ಲೇ ಪೂರ್ಣಚಂದ್ರ ತೇಜಸ್ವಿ
3. .ಕುವೆಂಪು ಕಾದಂಬರಿಗಳಲ್ಲಿ ಪರಿಸರ : ಡಾ.ಗುರುಪಾದ ಮರಿಗುದ್ದಿ ಪ್ರಕಟಣೆ 1999

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ತೇಜಸ್ವಿಯವರ ಸಾಹಿತ್ಯದಲ್ಲಿ ಪರಿಸರದ ವಾಸ್ತವ ಪ್ರಜ್ಞೆ

ಸಂತೋಷ ಉಂಡಾಡಿ[1] ಪ್ರೊ.ಎಸ್.ಎಮ್.ಗಂಗಾಧರಯ್ಯ[2]
[1]ಸಂಶೋಧನಾ ವಿದ್ಯಾರ್ಥಿ ಹಾಗೂ
ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಅಥಣಿ, ಬೆಳಗಾವಿ– 591304
[2]ಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

Manuscript ID:
JRD -2026-180405
ISSN: 2230-9578
Volume 18
Issue 4(II)
Pp. 15-18
April 2026
Submitted:05 Mar. 2026
Revised:20 Mar. 2026
Accepted:05Apr.2026
Published:30 April 2026

ಸಾರಲೇಖ :

ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಒಟ್ಟು ಸಾಹಿತ್ಯದ ಕೃಷಿಯನ್ನು ಅವಲೋಕಿಸಿದಾಗ ನಮಗೆ ಕಾಣುವುದು ಗಾಢವಾದ ಪರಿಸರದ ಪ್ರಜ್ಞೆ. ಸಾಮಾನ್ಯವಾಗಿ ಕವಿಗಳುಪರಿಸರವನ್ನು ತುಂಬಾ ಆಕರ್ಷಕ ಪದ ಪುಂಜಗಳ ಮೂಲಕ ವರ್ಣಿಸಿರುವುದನ್ನು ನೋಡಬಹುದು, ಅಲ್ಲಿ ಭಾಷೆ ವಾಸ್ತವದಿಂದ ದೂರ ಸರಿದು ವರ್ಣನಾತ್ಮಕ ನೆಲೆಯಲ್ಲಿಯೆ ವಿಹಾರಿಸುತ್ತದೆ.ಅದೇ ರೀತಿಯಲ್ಲಿ ಹಲವು ಲೇಖಕರು ತಮ್ಮ ಲೇಖನಗಳಲ್ಲಿ, ಕಾದಂಬರಿ, ಕಥೆಗಳಲ್ಲಿ ಪ್ರಕೃತಿಯನ್ನು ನಾನಾ ಬಗೆಯಲ್ಲಿ ವರ್ಣನೆ ಮಾಡಿರುವುದು ಕಂಡುಬರುತ್ತದೆ.ಇನ್ನು ಸೃಜನೇತರ ಕೃತಿಗಳನ್ನು ರಚಿಸಿದವರು ಪ್ರಕೃತಿಯ ಬಿಕ್ಕಟ್ಟುಗಳ ಬಗ್ಗೆ ಚರ್ಚಿಸಿರುವುದನ್ನು ಕಾಣಬಹುದು.ಆದರೆ ಕೆಲವೇ ಕೆಲವು ಲೇಖಕರು, ಕವಿಗಳು ತಮ್ಮ ಕಾವ್ಯ ಮತ್ತು ಕೃತಿಗಳಲ್ಲಿ ಮಾನವನಿಂದ ಪರಿಸರದ ಮೇಲೆ ಆಗಿರುವ ಮತ್ತು ಆಗುತ್ತಿರುವ ದೌರ್ಜನ್ಯಗಳ ಕುರಿತು ತಮ್ಮ ರಚನೆಗಳಲ್ಲಿ ಚಿತ್ರಿಸಿರುವುದನ್ನು, ಚರ್ಚಿಸಿರುವುದನ್ನು ಕಾಣಬಹುದು.ಆದರೆ ಇಡೀ ಕನ್ನಡ ಸಾಹಿತ್ಯವನ್ನು ಅವಲೋಕಿಸಿದಾಗ, ತೇಜಸ್ವಿ, ಉಳಿದ ಇತರ ಲೇಖಕರಿಗಿಂತ ಭಿನ್ನವಾಗಿ ಸೃಜನಶೀಲ ಸಾಹಿತ್ಯದ ಮೂಲಕವೂ ಒಂದು ವಿಭಿನ್ನ ಪ್ರಯತ್ನ ಈ ನಿಟ್ಟಿನಲ್ಲಿ ಮಾಡಿದ್ದಾರೆ.ಅವರು ಪ್ರಕೃತಿಯನ್ನು ಕೇವಲ ಆರಾಧಿಸುವುದಿಲ್ಲ, ಪ್ರಕೃತಿಯ ಮಡಿಲಿನ ರಹಸ್ಯಗಳನ್ನು ಕುತೂಹಲದ ಕಣ್ಣುಗಳಿಂದ ನೋಡುತ್ತ, ನೈಸರ್ಗಿಕ ಬಿಕ್ಕಟ್ಟುಗಳ ಕುರಿತು ಚರ್ಚಿಸುತ್ತಲೇ ಅವುಗಳ ಹಿಂದಿನ ಕಾರಣಗಳನ್ನು ವಿಶ್ಲೇಷಣೆ ಮಾಡುತ್ತ, ಅದರ ಪರಿಣಾಮಗಳನ್ನು ವಿವರಿಸುತ್ತಾರೆ ಹಾಗೂ ಕಾರ್ಯಸಾಧ್ಯವಾದ ಪರಿಹಾರಗಳನ್ನು ಹುಡುಕುವ ಪ್ರಯತ್ನ ಮಾಡುತ್ತಾರೆ.ಆ ಹಿನ್ನೆಲೆಯಲ್ಲಿ ತೇಜಸ್ವಿಯವರ ಆಯ್ದ ಕೃತಿಗಳನ್ನು ಇಟ್ಟುಕೊಂಡು, ತೇಜಸ್ವಿಯವರ ಸಾಹಿತ್ಯದಲ್ಲಿ ಕಾಣುವ ಪರಿಸರದ ವಾಸ್ತವ ಪ್ರಜ್ಞೆಯನ್ನು ವಿಶ್ಲೇಷಣೆಗೆ ಒಳಪಡಿಸುವ ಪ್ರಯತ್ನ ಈ ಲೇಖನದ್ದಾಗಿದೆ.

ಮುಖ್ಯ ಪದಗಳು : ಪ್ರಕೃತಿ, ನಿಸರ್ಗ, ವಾಸ್ತವ ಪ್ರಜ್ಞೆ, ಪರಿಸರ

ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ತಮ್ಮ ಕಥೆ, ಕಾದಂಬರಿ, ಪ್ರವಾಸ ಕಥನ, ಅನುಭವ ಕಥನ ಹಾಗೂ ಮತ್ತಿತರ ಸೃಜನೇತರ ಕೃತಿಗಳ ಮೂಲಕ ಪರಿಸರಕ್ಕೆ ಸಂಬಂಧಿಸಿದ ಹಸಿರು ಸಾಹಿತ್ಯವನ್ನು ಸೃಷ್ಟಿಸಿದ್ದಾರೆ.ತೇಜಸ್ವಿಯವರ 'ಕರ್ವಾಲೊ', 'ಪರಿಸರದ ಕಥೆ', 'ಮಾಯಾಲೋಕ', 'ಚಿದಂಬರ ರಹಸ್ಯ', 'ಜುಗಾರಿ ಕ್ರಾಸ್', 'ಅಲೆಮಾರಿ ಅಂಡಮಾನ್ ಮತ್ತು ಮಹಾನದಿ ನೈಲ್', ಇವುಗಳಲ್ಲದೆ ಇತರ ಕೃತಿಗಳಲ್ಲೂ ಕೂಡ ಅವರು ಪರಿಸರದ ಕುರಿತು ಆಳವಾದ, ವಿಶ್ಲೇಷಣಾತ್ಮಕ, ವಾಸ್ತವದ ಚಿತ್ರಣವನ್ನು ಕಂಡರಿಸಿದ್ದಾರೆ.ಸಾಮಾನ್ಯವಾಗಿ ಕವಿಗಳು, ಲೇಖಕರು ಪ್ರಕೃತಿ ವರ್ಣನೆ ಮಾಡಿದರೆ, ತೇಜಸ್ವಿ ಪ್ರಕೃತಿಯನ್ನು ಚಿಕಿತ್ಸಕ ದೃಷ್ಟಿಯಿಂದ ನೋಡುತ್ತಾರೆ.ಅವರ ಬರೆಹ, ಮಾತು ಮತ್ತು ಚಿಂತನೆಗಳಲ್ಲಿ ಪರಿಸರದ ಕುರಿತು ಒಳನೋಟಗಳು, ವಾಸ್ತವದ ವಿಚಾರಗಳು ತುಂಬಿಕೊಂಡಿರುತ್ತವೆ. ಮೂಲತಃ ಅವರ ಎಲ್ಲಾ ಚಿಂತನೆಗಳು ವಾಸ್ತವದ ನೆಲೆಗಟ್ಟಿನಲ್ಲಿಯೇ ರೂಪಗೊಂಡಿದ್ದು, ಅದಕ್ಕೆ ಪರಿಸರದ ಚಿಂತನೆಗಳು ಹೊರತಾಗಿಲ್ಲ. ಅವರೊಬ್ಬ ನಿಷ್ಠುರವಾದಿ ಪರಿಸರ ವಿಜ್ಞಾನಿ, ವಾಸ್ತವವಾದಿ ಬರಹಗಾರ.ಸಹಜ ಚಿಂತಕ.

ತೇಜಸ್ವಿಯವರೆ ಹೇಳಿಕೊಂಡಂತೆ ಅವರ ಬದುಕು ಮತ್ತು ಬರೆಹದ ಮೇಲೆ ಲೋಹಿಯಾರ ತತ್ವಚಿಂತನೆ, ಕುವೆಂಪುರವರ ಕಲಾ ದೃಷ್ಟಿ, ಕಾರಂತರ ಜೀವನದ ಪ್ರಯೋಗಶೀಲತೆ ಮತ್ತು ಸಾಹಸಪ್ರಿಯತೆಯ ಪ್ರಭಾವವಾಗಿದೆ. ಕುವೆಂಪು ಅವರ ಮಗನಾಗಿದ್ದರು ಕೂಡ ಅವರ ಸಾಹಿತ್ಯದ ಪ್ರಭಾವಳಿಯಿಂದ ದೂರ ಸರಿದು ತಮ್ಮದೇ ವಿನೂತನ ಶೈಲಿಯನ್ನು ಕಂಡುಕೊಂಡ ತೇಜಸ್ವಿ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಸಂತೋಷ ಉಂಡಾಡಿ ಸಂಶೋಧನಾ ವಿದ್ಯಾರ್ಥಿ ಹಾಗೂ , ಸಹಾಯಕ ಪ್ರಾಧ್ಯಾಪಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಅಥಣಿ, ಬೆಳಗಾವಿ

How to cite this article:
ಸಂತೋಷ ಉಂಡಾಡಿ & ಪ್ರೊ.ಎಸ್.ಎಮ್.ಗಂಗಾಧರಯ್ಯ.(2026). ತೇಜಸ್ವಿಯವರ ಸಾಹಿತ್ಯದಲ್ಲಿ ಪರಿಸರದ ವಾಸ್ತವ ಪ್ರಜ್ಞೆ. Journal of Research and Development, 18(4(II)), 15–18. https://doi.org/10.5281/zenodo.19394581

Quick Response Code:
Website: https://jrdrvb.org/
DOI: 10.5281/zenodo.19394581
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಪರಿಸರ ಜಿಜ್ಞಾಸೆಯನ್ನು, ಕಾಳಜಿಯನ್ನು ಕೇಂದ್ರವಾಗಿಟ್ಟುಕೊಂಡು ಕೃತಿ ರಚಿಸಿದರು. ನರೇಂದ್ರ ರೈ ದೇರ್ಲ ಅವರಿಗೆ ಸಂದರ್ಶನದಲ್ಲಿ ತೇಜಸ್ವಿಯವರೆ ಹೇಳಿದಂತೆ "ಇಕಾಲಜಿಯ ಸತ್ಯಗಳನ್ನು ಅರಿಯಲು ಸಂಶ್ಲೇಷಣಾತ್ಮಕ ಪ್ರತಿಭೆ ಅಗತ್ಯ. ಅದು ಒಂದನ್ನೊಂದು ಸಂಯೋಜಿಸುವ, ಖಂಡ ಖಂಡವಾಗಿ ಕಂಡದ್ದನ್ನು ಅಖಂಡವಾಗಿ ಗ್ರಹಿಸುವ ಸಂಶ್ಲೇಷಣ ಕ್ರಿಯೆ."(1) ತೇಜಸ್ವಿಯವರುಮೈಸೂರಿನಿಂದ ಮೂಡಿಗೆರೆಗೆ ಮರಳಿ 'ನಿರುತ್ತರ'ದಲ್ಲಿ ಕುಳಿತು ಪ್ರಕೃತಿಯ ಜಟಿಲ ಸವಾಲುಗಳಿಗೆ ಉತ್ತರ ಹುಡಕುವ ಪ್ರಯತ್ನ ಮಾಡಿದರು. ಇಕಾಲಜಿ ಅಥವಾ ಜೀವ ಪರಿಸರ ವ್ಯವಸ್ಥೆ ತುಂಬಾ ಜಟಿಲವಾದ, ಸಂಕೀರ್ಣವಾದ ಒಂದು ಜಾಲ, ಅದನ್ನು ಅರಿಯಲು ವ್ಯವಧಾನ ಹಾಗೂ ಕುತೂಹಲ ಬೇಕು ಅವು ತೇಜಸ್ವಿಯವರಲ್ಲಿದ್ದವು. ಈ ಹಿನ್ನೆಲೆಯಲ್ಲಿ ಅವರು ಅತ್ಯಂತ ವಾಸ್ತವ ಪ್ರಜ್ಞೆಯ ಮೂಲಕ ನಿಸರ್ಗವನ್ನು ಅರಿಯುವ ಪ್ರಯತ್ನ ಮಾಡಿದರು. "ಪರಿಸರದ ಬಗ್ಗೆ ಬೂಟಾಟಿಕೆಯ ಕಳವಳ ಸೂಚಿಸುವುದೂ ಇವತ್ತಿನ ಫ್ಯಾಷನ್ ಆಗಿರುವುದರಿಂದ ಈ ಬಗ್ಗೆ ಹೆಚ್ಚು ಮಾತಾಡಲು ನನಗೆ ಇಷ್ಟವಿಲ್ಲ. ನಮ್ಮ ನದಿ ಝರಿಗಳನ್ನೆಲ್ಲಾ ಹಾಳು ಮಾಡಿ ಈಗ ಆ ಕೈಗಾರಿಕೋದ್ಯಮಿಗಳೇ ಕುಡಿಯುವ ನೀರನ್ನು ಸೀಸೆಗಳಲ್ಲಿ ಮಾರಿ ಲಾಭ ಮಾಡುತ್ತಿದ್ದಾರೆ".(2) ತೇಜಸ್ವಿಯವರ ಈ ನೇರ ನುಡಿಗಳು ವಾಸ್ತವದ ಪರಿಸ್ಥಿತಿಯನ್ನು ಹಾಗೂ ಸನ್ನಿವೇಶದ ಗಂಭೀರತೆಯನ್ನು ಸೂಚಿಸುತ್ತಿದೆ. ತೇಜಸ್ವಿ ಬಹಳ ಹಿಂದೆ ಆಡಿದ ಈ ಮಾತುಗಳು ಇಂದಿಗೂ ಅನ್ವಯವಾಗುತ್ತವೆ. ಇಂದು ಕೂಡ ಪರಿಸರದ ಬಗ್ಗೆ ಮಾತನಾಡುವುದು ಒಂದು ಫ್ಯಾಷನ್ ಆಗಿದೆ.ಕೆಲವರು ಗುರುತಿಸುವಿಕೆಗಾಗಿ, ಇನ್ನೂ ಕೆಲವರು ಹುದ್ದೆಗಳಿಗಾಗಿ, ಜನಪ್ರಿಯತೆಯ ಗೀಳಿಗಾಗಿ ಕೆಲವರು ಪರಿಸರದ ಆಸಕ್ತಿ ತೋರಿಸುವುದನ್ನು ಕಾಣಬಹುದು.ಇಂದೂ ಕೂಡ ರಾಜಕಾರಣಿಗಳು, ಕೈಗಾರಿಕೋದ್ಯಮಿಗಳು ನದಿ, ಝರಿಗಳನ್ನು ಹಾಳು ಮಾಡಿ ಸೀಸೆಗಳಲ್ಲಿ ನೀರು ಮಾರಿ ಲಾಭ ಮಾಡಿಕೊಳ್ಳುವುದನ್ನು ನೋಡಬಹುದು.

"ಅವರು ನಾಯಿಗೆ ನಮ್ಮಂತೆ ಮಾನವೀಯ ವ್ಯಕ್ತಿತ್ವವನ್ನು ಆರೋಪಿಸುತ್ತಿರಲಿಲ್ಲ ಎಂದು, ನಾಯನ್ನು ನಾಯಿಯಂತೆಯೂ, ಮನುಷ್ಯರನ್ನು ಮನುಷ್ಯರಂತೆಯೂ, ಪ್ರಾಣಿಗಳನ್ನು ಪ್ರಾಣಿಗಳಂತೆಯೂ ನೋಡುತ್ತಿದ್ದರಷ್ಟೆ."(3) ಬೈರ ಮತ್ತು ಮಾಸ್ತಿ ಕುರಿತು ಪರಿಸರದ ಕತೆಯಲ್ಲಿ ಬರುವ ಈ ವಿವರಣೆ ತೇಜಸ್ವಿಯವರ ವಾಸ್ತವದ ದೃಷ್ಟಿಕೋನಕ್ಕೆ ಮತ್ತೊಂದು ಉದಾಹರಣೆ. ನಿರೂಪಕರಿಗೆ ಸಾಧ್ಯವಾಗದಿರುವುದು ಬೈರ ಮತ್ತು ಮಾಸ್ತಿಯವರಿಗೆ ಸಾಧ್ಯವಾಗಿದೆ.ನಿಸರ್ಗದ ಜೊತೆಗೆ ಬೆಳೆದಿರುವ ಬೈರ ಮತ್ತು ಮಾಸ್ತಿಯವರಿಗೆ ಅದೊಂದು ಅತ್ಯಂತ ಸಹಜವಾದ ನಡವಳಿಕೆ.ಆದರೆ ನಿರೂಪಕರಿಗೆ ಅದು ವಿಶೇಷವಾದುದು.ಇಲ್ಲಿ ಮನುಷ್ಯನನ್ನು ಮನುಷ್ಯನಾಗಿಯು, ಪ್ರಾಣಿಗಳನ್ನು ಪ್ರಾಣಿಗಳನ್ನಾಗಿಯು ಕಾಣುವುದು ಬಹಳ ಮುಖ್ಯವೆಂದು ತೇಜಸ್ವಿ ಗುರುತಿಸುತ್ತಾರೆ.

"ಕುವೆಂಪುರವರ ಕಾನೂರು ಹೆಗ್ಗಡತಿ, ಕಾರಂತರ ಮರಳಿ ಮಣ್ಣಿಗೆ ಕಾಲದ ಸಹ್ಯಾದ್ರಿಯ ಕಾಡುಗಳಿಗೂ ಇವತ್ತಿನ ಪರಿಸ್ಥಿತಿಗೂ ಇರುವ ಅಜಗಜಾಂತರ ವ್ಯತ್ಯಾಸಕ್ಕೆ ಈ ಕಾದಂಬರಿಯೇ ಉದಾಹರಣೆ"(4) ಎಂದು ತೇಜಸ್ವಿ ಜುಗಾರಿಕ್ರಾಸ್ ಕಾದಂಬರಿಯ ಮುನ್ನುಡಿಯಲ್ಲಿ ಹೇಳುತ್ತಾರೆ. ತೇಜಸ್ವಿ ಗಮನಿಸಿದಂತೆ ಕುವೆಂಪು, ಕಾರಂತ ಕಾಲದ ಅರಣ್ಯ ಅವರ ಕಾಲಕ್ಕೆ ಇರಲಿಲ್ಲ. ದಟ್ಟ ಅರಣ್ಯ ತೆಳುವಾಗಿರುವುದು, ನಾನಾ ಕಾರಣಗಳಿಗಾಗಿ ಅರಣ್ಯ ಮಾಯಾ ಆಗಿರುವುದನ್ನು ತೇಜಸ್ವಿ ಕಾದಂಬರಿಯಲ್ಲಿ ಚರ್ಚಿಸುತ್ತಾರೆ.ಕಾಳದಂಧೆ, ಲಾಭಕೋರತನ, ರಾಜಕಾರಣ, ದುರಾಸೆ, ಅಜ್ಞಾನ ಎಲ್ಲವೂ ಸೇರಿ ಅರಣ್ಯ ನಾಶಕ್ಕೆ ಕಾರಣವಾಗಿರುವುದನ್ನು ತೇಜಸ್ವಿ ಮತ್ತೆ ಮತ್ತೆ ಹೇಳುತ್ತಾರೆ. "ಕಾಡುಗಳು ಇವತ್ತು ಬಾಗಿಲು ತೆರೆದಿಟ್ಟ ಖಜಾನೆಗಳಾಗಿವೆ. ಇಲ್ಲಿ ಕಟ್ಟುವ ಆಣೆಕಟ್ಟುಗಳಾಗಲಿ, ಮುಳುಗಡೆಯಾಗುವ ಕಾಡುಗಳಾಗಲಿ, ಕಲ್ಲು ಅದುರುಗಳನ್ನು ತೆಗೆಯುವುದಾಗಲೀ, ಜನಗಳಿಗಿಂತ ಹೆಚ್ಚಾಗಿ ರಾಜಕಾರಣಿಗಳಿಗೂ ರಾಜಕೀಯಕ್ಕೂ ಅಗತ್ಯವಾಗತೊಡಗಿದೆ"(5) ಇವು ಕೂಡ ತೇಜಸ್ವಿಯವರ ಮುನ್ನುಡಿ ಮಾತುಗಳೆ, ನಮ್ಮ ನಾಡಿನ ಮಟ್ಟಿಗೆ ಈ ಮಾತುಗಳು ಸಾರ್ವಕಾಲಿಕ ಸತ್ಯವಾಗಿ ಪರಿಣಮಿಸಿವೆ. ಇಂದು ಕೂಡ 2026 ರಲ್ಲಿ, ಜನರ ವಿರೋಧದ ನಡುವೆಯು 20 ಸಾವಿರ ಕೋಟಿಗೂ ಅಧಿಕ ಮೊತ್ತದ ಎತ್ತಿನಹೊಳೆ ತಿರುವು ಯೋಜನೆಯು ಜಾರಿಗೊಳ್ಳುತ್ತಿರುವುದನ್ನು ಮತ್ತು ಅದರ ಅವಾಂತರಗಳನ್ನು ಕಾಣುತ್ತಿದ್ದೇವೆ. ಅದೇ ರೀತಿಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯ ಜಾರಿಗೆ ಪಣತೊಟ್ಟಿರುವುದನ್ನು, ಬೇಡ್ತಿ–ಅಘನಾಶಿನಿ ನದಿಗಳ ಜೋಡಣೆಗೆಗಾಗಿ ರೂಪರೇಷೆ ಸಿದ್ಧಪಡಿಸಿರುವುದನ್ನು ನೋಡಬಹುದು. ಇಲ್ಲೆಲ್ಲಾ ಕಾಣುತ್ತಿರುವುದು ಸಮಷ್ಟಿ ಹಿತ ಅಲ್ಲಾ, ಜನರ ಏಳ್ಗೆ ಅಲ್ಲಾ, ಇಲ್ಲಿರುವುದು ಕೇವಲ ರಾಜಕೀಯ ಅಗತ್ಯ.ಹಾಗಾಗಿ ಇವುಗಳ ವಿರುದ್ಧ ಜನರೇ ಚಳುವಳಿ ರೂಪಿಸಿ ಹೋರಾಡುತ್ತಿದ್ದಾರೆ.ತಾವು ಬದುಕಿ ಬಾಳಿದ ಮಳೆಕಾಡುಗಳನ್ನು ಉಳಿಸಿಕೊಳ್ಳಲು ಹೆಣಗುತ್ತಿದ್ದಾರೆ.ತೇಜಸ್ವಿಯವರು ಕೂಡ ಕಾದಂಬರಿಯ ಮುನ್ನುಡಿಯಲ್ಲಿ ಜನಚಳುವಳಿಯ ಕುರಿತು ಪ್ರಸ್ತಾಪಿಸುವುದನ್ನು ಕಾಣಬಹುದು.ಜೊತೆಗೆ ಜನರೇ ಚಳುವಳಿಗಳ ಮೂಲಕ ವಿನಾಶಕಾರಕ ಅಭಿವೃದ್ಧಿಯನ್ನು ತಡೆಗಟ್ಟಿರುವುದನ್ನು ಉಲ್ಲೇಖಿಸುತ್ತಾರೆ.

"ನಾಗರೀಕತೆಯೊಳಗೆ ಪ್ಲಾಸ್ಟಿಕ್ ಕಾಲಿಟ್ಟಾಗ ಈ ತೆಳ್ಳಗೆ ಪಾರದರ್ಶಕವಾಗಿ ಮಿಂಚುವ ಮೋಹಿನಿಯ ವಿಶ್ವರೂಪ ಯಾರಿಗೂ ಗೊತ್ತಿರಲಿಲ್ಲ."(6)'ಜುಗಾರಿ ಕ್ರಾಸ್' ಕಾದಂಬರಿಯ ಮೇದರವಳ್ಳಿಯ ಅವಸಾನ ಎಂಬ ಅಧ್ಯಾಯದಲ್ಲಿ ಬರುವ ಈ ಸಾಲು ಪ್ಲಾಸ್ಟಿಕ್ ನಿಂದ ಆಗುವ ಅನಾಹುತದ ಕುರಿತು ವಿವರಿಸುತ್ತದೆ. ಮೇದರವಳ್ಳಿ ಒಂದು ಕಾಲದಲ್ಲಿ ಉತ್ಕೃಷ್ಟಮಟ್ಟದ ಬಿದಿರಿನ ವಸ್ತುಗಳಿಗೆ ಖ್ಯಾತಿ ಪಡೆದದ್ದು, ಪ್ಲಾಸ್ಟಿಕ್‌ನ ಪ್ರವೇಶದೊಂದಿಗೆ ಹೇಗೆ ಹಾಳೂರು ಆಯ್ತು ಎಂದು, ಜೊತೆಗೆ ಇದು ಕೇವಲ ಊರಿನ ಅವಸಾನವಲ್ಲ, ಒಂದು ಸಮುದಾಯದ, ಪರಂಪರೆಯ, ಸಂಸ್ಕೃತಿಯ ಅವಸಾನವೆಂದು, ಒಂದು ಹೊಸ ಅನ್ವೇಷಣೆಯು, ಹೊಸ ವಸ್ತುವು ಹೇಗೆ ಒಂದು ಸಮುದಾಯದ ಜೀವನೋಪಾಯವನ್ನು ಕೊಲ್ಲುವ ಮೂಲಕ, ಆ ಸಮುದಾಯವನ್ನು, ಅದರ ಸಂಸ್ಕೃತಿಯನ್ನು ಬಲಿತೆಗೆದುಕೊಂಡಿತು ಎನ್ನುವುದನ್ನು ವಾಸ್ತವ ದೃಷ್ಟಿಯಿಂದ ಚರ್ಚಿಸುತ್ತಾರೆ.ಒಟ್ಟಿನಲ್ಲಿ ತೇಜಸ್ವಿ ಪ್ಲಾಸ್ಟಿಕ್‌ನಿಂದಾಗುವ ಸರಣಿ ಸಮಸ್ಯೆಗಳನ್ನುಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ತಮ್ಮ ಸೃಜನಶೀಲ ಪ್ರತಿಭೆಯ ಮೂಲಕ 'ಜುಗಾರಿಕ್ರಾಸ್' ಕಾದಂಬರಿಯ ಬಹುಮುಖ್ಯ ಅಧ್ಯಾಯವಾಗಿ ರೂಪಿಸಿದ್ದಾರೆ.

"ಅನೇಕ ಶತಮಾನಗಳಿಂದ ಶೇಖರವಾಗಿದ್ದ ಅಂತರ್ಜಲವನ್ನೆಲ್ಲಾ ಸಿಕ್ಕಾಪಟ್ಟೆ ಗುಂಡಿ ಕೊರೆದು ಯದ್ವಾತದ್ವಾ ಉಪಯೋಗಿಸಿದ್ದೇವೆ. ಅಂತರ್ಜಲಕ್ಕೆ ಆಗಿರುವ ಹಾನಿ ಒಂದೆರೆಡು ಮಳೆಗಾಲದಿಂದ ರಿಪೇರಿಯಾಗುತ್ತದೆ ಎಂದು ಖಂಡಿತಾ ತಿಳಿಯಬೇಡಿ.. . . ಬರದ ಬಿಸಿ ಕೇವಲ ಬಯಲುಸೀಮೆಗೆ ಮಾತ್ರ ಪರಿಮಿತವಾಗಿರಲಿಲ್ಲ. ನಿಧಾನವಾಗಿ ಮಲೆನಾಡಿನಲ್ಲೂ ಗುಡ್ಡದ ಕಣಿವೆಗಳ ದಟ್ಟ ಕಾಡಿನಿಂದ ಹರಿದು ಬರುತ್ತಿದ್ದ ಝರಿ, ತೊರೆ, ಹಳ್ಳಗಳ ನೀರು ಕಡಿಮೆಯಾಗಲು ಶುರುವಾಯ್ತು."(7) 2006 ರಲ್ಲಿ ಪ್ರಕಟವಾಗಿರುವ ಮಾಯಾಲೋಕ ಕಾದಂಬರಿಯಲ್ಲಿ ಬರುವ ಈ ಮಾತುಗಳು ಅಂತರ್ಜಲದ ಭೀಕರ ಸಮಸ್ಯೆಯನ್ನು ಎತ್ತಿ ತೋರಿಸುವ ಪ್ರಸಂಗದಲ್ಲಿ ಉಲ್ಲೇಖವಾಗಿವೆ. ಬೋರ್‌ವೆಲ್ ಮೂಲಕ ಜನರು ಅಂತರ್ಜಲವನ್ನು ಯಥೇಚ್ಛವಾಗಿ ಬಳಸಿ ಸಾವಿರಾರು ವರ್ಷಗಳಿಂದ ಶೇಖರವಾಗಿದ್ದ ನೀರನ್ನು ಬರಿದು ಮಾಡಿದ್ದಾರೆ. ಇಂದು ಕೋಲಾರ, ಚಿಕ್ಕಬಳ್ಳಾಪುರ ಮುಂತಾದ ಕಡೆ 1000 ಅಡಿಗಿಂತ ಹೆಚ್ಚು ಆಳದ ಕೊಳವೆ ಬಾವಿ ಕೊರೆದರೂ ನೀರು ಸಿಗುತ್ತಿಲ್ಲ. ನೀರು ಸಿಕ್ಕರೂ ಕುಡಿಯಲು ಯೋಗ್ಯವಾಗಿಲ್ಲ. ಹಾಗಾಗಿ ಇಂದು ಬೋರ್‌ವೆಲ್ ಮರುಪೂರಣದ ಕುರಿತು ಮಾತನಾಡುತ್ತಿದ್ದೇವೆ. ಒಂದೆರೆಡು ವರ್ಷಗಳ ಮಳೆಯಿಂದ ಅಂತರ್ಜಲ ಮೊದಲ ಸ್ಥಿತಿಗೆ ಬರುವುದಿಲ್ಲ. ಬರಗಾಲದ ಬಿಸಿ ಇಂದು ಬಯಲು ಸೀಮೆಗೆ ಮಾತ್ರ ಸೀಮಿತವಾಗಿಲ್ಲ. ಇಂದು ಮಲೆನಾಡಿನಲ್ಲು ಕೂಡ ಮಳೆ ಕಡಿಮೆಯಾಗುತ್ತಿದ್ದು, ಬೇಸಿಗೆಯಲ್ಲಿ ಬಿಸಿಲ ಝಳ ಹೆಚ್ಚಾಗಿ ನದಿ, ತೊರೆಗಳು ಬತ್ತುತ್ತಿರುವುದನ್ನು ಕಾಣಬಹುದು.ತೇಜಸ್ವಿ ಇಲ್ಲಿ ಪ್ರಕೃತಿಯ ಯಥಾವತ್ತಾದ ಚಿತ್ರಣ ನೀಡುತ್ತಾರೆ.ಅಂದು ತೇಜಸ್ವಿ ಚಿತ್ರಿಸಿರುವ ಈ ಸನ್ನಿವೇಶ ವರ್ಷದಿಂದ ವರ್ಷಕ್ಕೆ ಮಲೆನಾಡಿನಲ್ಲಿ ಭೀಕರವಾಗುತ್ತ ಸಾಗುತ್ತಿದೆ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

"ಸಹ್ಯಾದ್ರಿ ಕಾಡುಗಳಿಗೆ ಯುಪೆಟೋರಿಯಂ ಕಳೆ ಕಾಲಿಟ್ಟಮೇಲೆ ಕಾಳ್ಗಿಚ್ಚಿನಿಂದಾಗುವ ಅನಾಹುತದ ಪ್ರಮಾಣ ಹೆಚ್ಚುತ್ತಾ ಬಂದಿದ್ದು... ಹಿಂದೆಲ್ಲಾ ಕಾಡಿಗೆ ಬೆಂಕಿ ಬಿದ್ದಾಗ ಕೇವಲ ನೆಲಮಟ್ಟದಲ್ಲಿದ್ದ ಹುಲ್ಲು ಸುಡುತ್ತಿದ್ದುದರಿಂದ ದೊಡ್ಡದೊಡ್ಡ ಎತ್ತರದ ಮರಗಳಿಗೆ ಹೆಚ್ಚು ಘಾಸಿಯಾಗುತ್ತಿರಲಿಲ್ಲ. ಆದರೆ ಈಗ ಮರ ತಬ್ಬಿ ಹಿಡಿದಿರುವ ಯುಪೆಟೋರಿಯಂ ಜ್ವಾಲೆ ಕಾರುತ್ತಾ ಉರಿದರೆ ದೊಡ್ಡ ಮರಗಳ ತೊಗಟೆ ಬಹಳ ಎತ್ತರದವರೆಗೂ ಸುಟ್ಟು ಸಾಯುತ್ತಿದ್ದವು."(8) ಈ ಸಮಸ್ಯೆ ಇಂದು ಕೂಡ ಮಲೆನಾಡನ್ನು ಕಾಡುತ್ತಿದ್ದು, ಮಾಯಾಲೋಕದಲ್ಲಿ ಉಲ್ಲೇಖಿಗೊಂಡಂತೆ ಇಂದು ಮಲೆನಾಡಿನ ಮಳೆ ಕಾಡುಗಳಲ್ಲಿ ಅನ್ಯ ಜಾತೀಯ, ಅನ್ಯ ದೇಶದ ಸಸ್ಯವರ್ಗ, ಕಳೆಗಳು ಸ್ಥಳೀಯ ಸಸ್ಯಪ್ರಬೇಧಗಳಿಗೆ ಮಾರಕವಾಗಿ ಪರಿಣಮಿಸಿವೆ. ಜೊತೆಗೆ ಬೇಸಿಗೆಯಲ್ಲಿ ಕಾಡಿಗೆ ನಾನಾ ಕಾರಣಗಳಿಂದ ಬೆಂಕಿ ಬಿದ್ದು ಕಾಡು ನಾಶವಾಗುವುದನ್ನು ಪ್ರತಿವರ್ಷ ನೋಡುತ್ತಿದ್ದೇವೆ. ಬಂಡೀಪುರ, ಆಗುಂಬೆ, ಮುತ್ತೋಡಿ, ಕುದುರೆಮುಖ ಮುಂತಾದ ಕಾಡುಗಳಿಗೆ ಬೆಂಕಿ ಬಿದ್ದ ಉದಾಹರಣೆಗಳಿವೆ. ಇದರಿಂದ ಅಪರೂಪದ ಸಸ್ಯ ಸಂಪತ್ತು, ಅಪಾರ ಜೀವವೈವಿಧ್ಯ ನಾಶವಾಗಿದೆ.ಕಾದಂಬರಿಯಲ್ಲಿ ತೇಜಸ್ವಿಯವರು, ಜಿಂಕೆ, ಕಾಡುಕೋಣದಂತಹ ವೇಗವಾಗಿ ಓಡುವ ಪ್ರಾಣಿಗಳು ಸಹ ಬೆಂಕಿಗೆ ಆಹುತಿಯಾಗಿದ್ದನ್ನು ಉಲ್ಲೇಖಿಸುತ್ತಾರೆ.ಇಂದು ಕೂಡ ಪ್ರತಿವರ್ಷವೂ ನೂರಾರು ಹೆಕ್ಟೇರ್ ಕಾಡು ಬೆಂಕಿಗೆ ಆಹುತಿಯಾಗುತ್ತಿದೆ.

"ಒಂದೇ ರಾತ್ರಿಯಲ್ಲಿ ಲಕ್ಷಾಂತರ ಲೋಡು ಮಣ್ಣನ್ನು ಕರಗಿಸಿ ಸಾಗಿಸಿದ ನೀರಿನ ರಾಕ್ಷಸ ಶಕ್ತಿಯನ್ನು ಕಣ್ಣಾರೆ ಕಾಣದೆ ಯಾರೂ ನಂಬುವಂತಿರಲಿಲ್ಲ. ಅಲ್ಲಿ ಹರಿಯುತ್ತಿದ್ದ ಹಳ್ಳವೇ ಪಾತ್ರ ಬದಲಿಸಿ ಬಲಕ್ಕೆ ತಿರುಗಿ ಸುಮಾರು ಒಂದು ಕಿಲೋಮೀಟರು ಅಂತರದಲ್ಲಿ ಹರಿಯುತ್ತಿದೆ."(9) ಮಾಯಾಲೋಕ ಕಾದಂಬರಿಯ ಅಂತಿಮಘಟ್ಟದಲ್ಲಿ ಬರುವ ಈ ಸನ್ನಿವೇಶದಲ್ಲಿ ತೇಜಸ್ವಿ ವಿಪರೀತ ಮಳೆಯಿಂದ ಹಳ್ಳ ಉಕ್ಕಿ ಹರಿದು, ಕಲ್ಲಿನ ಒಡ್ಡಿಗೆ ಕಸ ಒಟ್ಟಾಗಿ ಬೆಟ್ಟದಂತೆ ಶೇಖರವಾಗಿದ್ದರಿಂದಹಳ್ಳದ ಪಾತ್ರದಲ್ಲಿ ದೊಡ್ಡ ಕಮರಿ ನಿರ್ಮಾಣವಾಗಿ, ಅದರಿಂದ ಹಳ್ಳದ ಪಾತ್ರವೇ ಬದಲಾಗಿ, ಅಲ್ಲಿಯ ಮಣ್ಣನ್ನು ಕೊಚ್ಚಿಕೊಂಡುಸಾಗಿ ಹಳ್ಳ, ನದಿಯ ರೂಪ ಪಡೆದಿದ್ದನ್ನು ವಿವರಿಸುತ್ತಾರೆ. ಈ ಒಟ್ಟಾರೆ ಸನ್ನಿವೇಶಇಂದು ನಾವು ಕಾಣುತ್ತಿರುವ ಅತಿವೃಷ್ಟಿ, ಮೇಘ ಸ್ಫೋಟದಿಂದ ಹಳ್ಳಗಳು, ನದಿಗಳು ಇದ್ದಕ್ಕಿದ್ದಂತೆ ಉಕ್ಕಿ ಹರಿದು ಹಳ್ಳಿಗಳನ್ನು ಆಪೋಶನ ತೆಗೆದುಕೊಳ್ಳುತ್ತಿರುವುದನ್ನು, ನದಿಗಳು ತಮ್ಮ ಪಾತ್ರ ಬದಲಿಸುವುದನ್ನು, ವಿಪರೀತ ಮಳೆಯಿಂದ ಭೂ ಕುಸಿತದಂತಹ ಅವಘಡಗಳು ಸಂಭವಿಸುತ್ತಿರುವುದನ್ನು ನೆನಪಿಸುತ್ತದೆ.ಒಂದು ಕಾಲದಲ್ಲಿ ಕೇವಲ ಹವಾಮಾನ ಬದಲಾವಣೆ ಎಂದು ಪರಿಗಣಿಸಲ್ಪಟ್ಟಿದ್ದು ನಂತರ ಹವಾಮಾನ ಬಿಕ್ಕಟ್ಟು ಎಂದು ವಿವರಿಸಲ್ಪಡುತ್ತಿತ್ತು, ಆದರೆ ಇಂದು ಅದು ಹವಾಮಾನ ತುರ್ತು ಆಗಿ ಬದಲಾಗಿದ್ದು ಕಳವಳಕಾರಿಯಾಗಿದೆ.ಪ್ರಕೃತಿಯ ಮೇಲೆ ಮಾನವನ ನಿರಂತರ ದೌರ್ಜನ್ಯದ ಫಲವಾಗಿ ಇಂದು ಮಾನವ ಹಲವಾರು ಪ್ರಾಕೃತಿಕ ಬಿಕ್ಕಟ್ಟುಗಳಿಗೆ, ಏರುಪೇರುಗಳಿಗೆ ಸಾಕ್ಷಿಯಾಗುತ್ತಿದ್ದಾನೆ. ಮಾನವ ಕೇಂದ್ರಿತ ಅಭಿವೃದ್ಧಿಯ ಪರಿಕಲ್ಪನೆಯನ್ನು ಇಂದು ಮರುವ್ಯಾಖ್ಯಾನಿಸಬೇಕಿದೆ.ತೇಜಸ್ವಿ ಹೇಳುವಂತೆ ಅದು ಜೀವಕೇಂದ್ರಿತವಾಗ ಬೇಕಿದೆ.ಈ ಮೇಲೆ ವಿವರಿಸಿರುವ ಮಾಯಾಲೋಕ ಕಾದಂಬರಿಯ ಪ್ರಸಂಗ ಇತ್ತೀಚಿಗೆ ಕೇರಳದಲ್ಲಿ ನಡೆದಿದ್ದನ್ನು ನೆನಪಿಸಿಕೊಳ್ಳಬಹುದು.

"ಕಾಡುಗಳಿಲ್ಲದ, ಕಾಡುಪ್ರಾಣಿಗಳಿಲ್ಲದ ಪರಿಸರವು ಶ್ಮಶಾನಕ್ಕಿಂತ ಭೀಕರವಾಗಿ ಕಾಣುತ್ತದೆ.ಕಾಡುಗಳನ್ನು ನಾಶ ಮಾಡಿದಾಗ ಅಲ್ಲಿರುವ ಪ್ರಾಣಿಗಳನ್ನೂ, ಅವುಗಳ ಪರಿಸರವನ್ನೂ ಧ್ವಂಸ ಮಾಡಿದಾಗ ರಹಸ್ಯ, ಗೌಪ್ಯ, ಅದ್ಭುತಗಳ ನಿರಂತರ ನಿಧಿಯೊಂದನ್ನು ನಮ್ಮ ಕಿರಿಯ ಜನಾಂಗ ಕಳೆದುಕೊಂಡಂತಾಗಿ ಮನಸ್ಸು ಖಿನ್ನವಾಗುತ್ತದೆ."(10) ತೇಜಸ್ವಿ ಹೇಳುವಂತೆ ಕಾಡಿಲ್ಲದ ನಾಡು ಸ್ಮಶಾನವೇ ಸರಿ. ಕಾಡು ಮತ್ತು ಕಾಡಿನ ಪ್ರಾಣಿಗಳು ನಾಡಿನ ಅಥವಾ ಭೂಮಿಯ ಅವಿಭಾಜ್ಯ ಅಂಗ, ಕಾಡಿದ್ದರೆ ನಾಡು, ನಾಡಿದ್ದರೆ ನಾವು.ಕಾಡಿನ ಜೀವ ವೈವಿಧ್ಯವನ್ನು ಮನುಷ್ಯ ನಾಶ ಮಾಡಿದರೆ, ಅವನು ತನ್ನ ವಿನಾಶವನ್ನು ತಾನೇ ಮಾಡಿಕೊಂಡಂತೆ, ಅದು ಮಾನವ ಕುಲದ ವಿನಾಶದ ಮುನ್ನುಡಿ.ಮಾನವನಿಗೆ ಬೇಕಿರುವ ಶುದ್ಧ ಗಾಳಿಗೆ ಕಾಡೇ ಮೂಲ. ಕಾಡು ಧರೆಯ ಮೇಲಿನ ಶ್ವಾಸಕೋಶಗಳಿದ್ದಂತೆ, ಅವು ನಾಶವಾದರೆ ಭೂ ತಾಪ ಏರಿ, ಪ್ರಕೃತಿಯ ಸಂಕಟಗಳು ಇನ್ನೂ ಬಿಗಡಾಯಿಸಿ ಸರ್ವನಾಶ ಶತಸಿದ್ಧ. ಕಾಡು ಮತ್ತು ಅಲ್ಲಿರುವ ಜೀವಜಾಲವು ಕೇವಲ ನಮ್ಮ ಆಸ್ತಿಯಲ್ಲ, ಅದು ಭಾವಿ ಜನಾಂಗದ ಆಸ್ತಿ.ಅದು ಅದ್ಭುತಗಳ ನಿಧಿ, ಅದನ್ನು ಅವರಿಗೂ ತಲುಪಿಸುವುದು ನಮ್ಮ ಜವಾಬ್ದಾರಿ.ಈ ಹಿನ್ನೆಲೆಯಲ್ಲಿ 1962 ರಲ್ಲಿ ಪ್ರಕಟವಾದ ರಾಚೆಲ್ ಕಾರ್ಸನ್ ಅವರ ಕೃತಿ 'ಸೈಲೆಂಟ್ ಸ್ಪ್ರಿಂಗ್', ಡಿಡಿಟಿ ಕೀಟನಾಶಕಗಳ ಅತಿಯಾದ ಬಳಕೆಯಿಂದ ಪರಿಸರ ಮತ್ತು ಮಾನವನ ಆರೋಗ್ಯದ ಮೇಲಾಗುವ ಹಾನಿಕಾರಕ ಪರಿಣಾಮಗಳನ್ನು ಎತ್ತಿತೋರಿಸಿತು. ಹಕ್ಕಿಗಳ ಕಲರವವಿಲ್ಲದ, ನಿರ್ಜೀವ ವಸಂತಕಾಲದ ಕಲ್ಪನೆಯನ್ನು ಮೂಡಿಸಿದ ಈ ಪುಸ್ತಕ, ಜಾಗತಿಕ ಪರಿಸರ ಚಳುವಳಿಗೆ ನಾಂದಿ ಹಾಡಿತು ಜೊತೆಗೆ ಕೀಟನಾಶಕಗಳ ನಿಯಂತ್ರಣಕ್ಕೆ ಕಾರಣವಾಯಿತು.

"ಈ ಪ್ರಕೃತಿ ನಮ್ಮ ಊಹೆಗೂ ನಿಲುಕದ ಎಂಥ ಜಟಿಲವಾದ ಜಾಲ ಎಂದು ಅಚ್ಚರಿಯಾಗುತ್ತದೆ."(11) ತೇಜಸ್ವಿ ಹಕ್ಕಿಗಳ ಆಹಾರ ಕ್ರಮವನ್ನು ಕುರಿತು ಚರ್ಚಿಸುತ್ತ ಹೇಳುವ ಈ ಮಾತು ಸಾರ್ವಕಾಲಿಕ ಸತ್ಯ. ಪ್ರಕೃತಿಯಲ್ಲಿನ ಜೀವಸಂಬಂಧಗಳು ಮಾನವನಿಗೆ ಸಂಪೂರ್ಣವಾಗಿ ಅರ್ಥವಾಗಿಲ್ಲ. ಪ್ರಕೃತಿಯೊಂದು ಜೇಡರಬಲೆ ಇದ್ದಂತೆ, ಅದೊಂದು ಸಂಕೀರ್ಣವಾದ ಹೆಣಿಗೆ.ನಾವು ಅದರ ಯಾವುದಾದರೂ ಭಾಗಕ್ಕೆ ನಾಶ ಮಾಡಿದರೆ, ಅದರಿಂದ ಮತ್ತೆಲ್ಲೊ ಅನಾಹುತಕ್ಕೆ ಕಾರಣವಾಗುತ್ತದೆ. 1970 ರ ದಶಕದಲ್ಲಿ, ಚೀನಾದಲ್ಲಿ, ಮಾವೊನ ಆಡಳಿತ ಅವಧಿಯಲ್ಲಿ, ಬೆಳೆನಾಶ ಮಾಡುತ್ತವೆಂದು ಗುಬ್ಬಿಗಳ ಮಾರಣಹೋಮ ಮಾಡಿದ್ದರಿಂದ ಆಹಾರ ಭದ್ರತೆಗೆ ಧಕ್ಕೆಯಾಗಿ ಪಕ್ಕದ ರಾಷ್ಟ್ರಗಳಿಂದ ಗುಬ್ಬಿಗಳನ್ನು ಆಮದು ಮಾಡಿಕೊಂಡು ಚೀನಾದಲ್ಲಿ ಸಾಕಿದ್ದನ್ನು ನೋಡಿದ್ದೆವೆ. ಪ್ರಕೃತಿಯಲ್ಲಿ ಮಾನವನ ಅತಿಯಾದ ಹಸ್ತಕ್ಷೇಪದಿಂದ ಆಗಿರುವ ಅನಾಹುತಗಳು ಹಲವಾರು. ಹಾಗಾಗಿ ಮಾನವ ಪ್ರಕೃತಿಯ ದೈನಂದಿನ ವ್ಯಾಪಾರಗಳು, ವಿಸ್ಮಯಗಳನ್ನು ಅರಿತಕೊಂಡು ಅದರೊಂದಿಗೆ ಸಹಬಾಳ್ವೆ ಮಾಡಬೇಕೆ ಹೊರತು ಪ್ರಕೃತಿಯ ಮೆಲೆ ಸವಾರಿ ಮಾಡಬಾರದು. ನಮ್ಮೆಲ್ಲ ಜ್ಞಾನ, ವಿಜ್ಞಾನವನ್ನು ಒರೆಗೆ ಹಚ್ಚಿದ ನಂತರವೂ ಪ್ರಕೃತಿ ನಿಗೂಢವಾಗೆ ಉಳಿಯುತ್ತದೆ.

"ಕಾಡಿನ ಜೀವಸಂಕುಲದೊಳಗೆ ನಾವು ಕೈಹಾಕಿದರೆ ಸಾಕು, ಅದು ಸಹಾಯಹಸ್ತವಾದರೂ ಅವುಗಳ ನಾಶ ತಪ್ಪಿದ್ದಲ್ಲ".(12) ಇದು ತೇಜಸ್ವಿಯವರಿಗೆ ಧಕ್ಕಿರುವ ಅನುಭವಜನ್ಯವಾದ ಜ್ಞಾನ. ಪ್ರಕೃತಿಯನ್ನು ಮೇಲ್ನೋದರದಲ್ಲಿ ನೋಡಿ ನಾವು ಅರ್ಥೈಸಿಕೊಳ್ಳುವುದು ಕಷ್ಟ. ಇತ್ತೀಚಿಗೆ ತೀರಿಕೊಂಡ 'ಜೇನ್‌ಗುಡಾಲ್' ಎಂಬ ಚಿಂಪಾಂಜಿ ತಜ್ಞೆಯನ್ನು ಕೂಡ ನೋಡಿದಾಗ, ಅವರು ಚಿಂಪಾಂಜಿಗಳ ಅಧ್ಯಯನಕ್ಕಾಗಿ ತಮ್ಮ ಜೀವಿತಾವಧಿಯನ್ನೇ ಮುಡುಪಿಟ್ಟರು. ಹಾಗಾಗಿ ಅವರು ಪ್ರಕೃತಿಯ ಭಾಗವಾಗಿ ಬದುಕಿ ಅದನ್ನು ಅರ್ಥೈಸಿಕೊಂಡರು. ಪ್ರಕೃತಿಯನ್ನು ಅದರಷ್ಟಕ್ಕೆ ಬಿಡುವುದು ನಿಜವಾದ ಪ್ರಕೃತಿ ಪ್ರೇಮ.ನಾವು ಕೋವಿಡ್ ಕಾಲದಲ್ಲಿ ನಿಸರ್ಗ ತಾನೇ, ಮನುಷ್ಯನ ಯಾವುದೇ ಹಸ್ತಕ್ಷೇಪವಿಲ್ಲದೆ ಪುನಶ್ಚೇತನಗೊಂಡಿದ್ದನ್ನು ನೆನಪಿಸಿಕೊಳ್ಳಬಹುದು.ಪರಿಸರ ತಜ್ಞರು, ಪ್ರಕೃತಿ ಆರಾಧಕರಾಗಿರುವ ಕೃಪಾಕರ ಮತ್ತು ಸೇನಾನಿ, ಸಂಜಯ ಗುಬ್ಬಿ ಮುಂತಾದವರು ಕೂಡ ಇವೇ ಮಾತುಗಳನ್ನು ಅನುಮೋದಿಸುತ್ತಾರೆ.ತೇಜಸ್ವಿ ಕೂಡ ಪ್ರಕೃತಿಯಲ್ಲಿ ಮಾನವನ ಹಸ್ತಕ್ಷೇಪವನ್ನು ಖಂಡಿಸುತ್ತಾರೆ. ಒಟ್ಟಾರೆ ನಿಸರ್ಗ ತನ್ನಷ್ಟಕ್ಕೆ ಸ್ವಯಂಪೂರ್ಣ.ಮಾನವನೇ ನಿಸರ್ಗದ ಮೊದಲ ಶತ್ರು ಎಂಬುದರಲ್ಲಿ ಅನುಮಾನವಿಲ್ಲ. ಹಾಗಾಗಿ ಮಾನವ ತನ್ನ ಅತಿಯಾದ ಚಟುವಟಿಕೆಗಳನ್ನು ತ್ಯಜಿಸಿ, ಸರಳವಾದ, ಪ್ರಕೃತಿಗೆ ಹತ್ತಿರವಾದ ಹಾಗೂ ಸುಸ್ಥಿರ ಮತ್ತು ಹೊಂದಾಣಿಕೆಯ ಜೀವನ ವಿಧಾನವನ್ನು ಅನುಸರಿಸಬೇಕು.

ಒಟ್ಟಾರೆ ತೇಜಸ್ವಿ ಚಿತ್ರಿಸುವ ಪರಿಸರ ಕೇವಲ ಮೋಹಕವಾಗಿ, ಆಕರ್ಷಕವಾಗಿ, ರಮ್ಯವಾಗಿ ಮಾತ್ರವಿಲ್ಲ. ಅದು ಪರಿಸರದ ಸವಾಲುಗಳಿಗೆ ಮುಖಾಮುಖಿಯಾಗಿದೆ.ನಮ್ಮ ಪತ್ರಿಕೆಗಳಲ್ಲಿ ಓದುವ ಸಾಕಷ್ಟು ಪರಿಸರ ಸಂಬಂಧಿ ಸಂಗತಿಗಳು ತೇಜಸ್ವಿಯವರ ಕಾಡ ನಡುವಿನ ಅನುಭವದಲ್ಲಿ, ಆ ಧ್ಯಾನಸ್ಥ ಸ್ಥಿತಿಯಲ್ಲಿ, ಆ ಏಕಾಂತದ ಕುಸುರಿ ಕಲೆಯಲ್ಲಿ ಸಹಜವಾಗಿ ಅರಳಿ, ಕಾದಂಬರಿಗಳಲ್ಲಿ ಪರಿಸರದ ಇನ್ನೊಂದು ಮುಖವನ್ನು, ಮತ್ತೊಂದು ಮಗ್ಗಲನ್ನು ತೆರೆದು

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ತೋರಿಸುವುದರ ಮೂಲಕ ಪ್ರಕೃತಿಯ ಭೀಷಣತೆಯನ್ನು, ರೌದ್ರ ರೂಪವನ್ನು ವಾಸ್ತವದ ಹಿನ್ನೆಲೆಯಲ್ಲಿ ತೆರೆದಿಡುತ್ತವೆ.ತೇಜಸ್ವಿಯವರು ಪ್ರಕೃತಿಯ ಮಧ್ಯದಲ್ಲಿ ಬದುಕುತ್ತ ಅವರ ಅರಿವನ್ನು ಸದಾ ಹೆಚ್ಚಿಸಿಕೊಳ್ಳುತ್ತ, ಹರಿತಗೊಳಿಸಿಕೊಳ್ಳುತ್ತ, ಆ ಮೂಲಕ ತಮಗೆ ದಕ್ಕಿದ್ದನ್ನು ಅಷ್ಟೆ ಸಹಜವಾಗಿ ಓದುಗರಿಗೆ ದಾಟಿಸಿದರು. ಅವರು ಕನ್ನಡದ ಹಸಿರು ಸಾಹಿತ್ಯದ ಪ್ರಮುಖ ಹರಿಕಾರರು.ಜೊತೆಗೆ ವಾಸ್ತವ ಮಾರ್ಗದಲ್ಲಿಯೆ ಪರಿಸರದ ಸಂಗತಿಗಳನ್ನು ಚಿತ್ರಿಸುವಲ್ಲಿ ಸಿದ್ಧಹಸ್ತರು.ಕನ್ನಡ ಸಾಹಿತ್ಯ ಲೋಕದಲ್ಲಿ ತೇಜಸ್ವಿಯಷ್ಟು ಪರಿಸರದ ವಾಸ್ತವ ಚಿತ್ರಣ ಕಟ್ಟಿಕೊಟ್ಟವರು ತುಂಬಾ ವಿರಳ.ಅವರ ಕೃತಿಗಳು ಸ್ಥಳೀಯ ಕಥಾ ಹಂದರದ ಮಧ್ಯದಲ್ಲಿಯೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಯಾಗುವ ಅನೇಕ ಪರಿಸರ ಸಂಬಂಧಿ ಸಮಸ್ಯೆ, ಸವಾಲುಗಳನ್ನು ಮತ್ತು ಅವುಗಳಿಗೆ ಉತ್ತರಗಳನ್ನು ಒಳಗೊಂಡಿರುವುದನ್ನು ಕಾಣಬಹುದು.

ಕೊನೆ ಟಿಪ್ಪಣಿಗಳು:

1) ನರೇಂದ್ರ ರೈ ದೇರ್ಲ,(2012) ನಮ್ಮೆಲ್ಲರ ತೇಜಸ್ವಿ, ಪುಟ ಸಂಖ್ಯೆ – 2
2) ಅದೇ, ಅದೇ ಪುಟ
3) ಕೆ.ಪಿ.ಪೂರ್ಣಚಂದ್ರ ತೇಜಸ್ವಿ(2022) ಪರಿಸರದ ಕತೆ, ಪುಟ ಸಂಖ್ಯೆ–29
4) ಕೆ.ಪಿ.ಪೂರ್ಣಚಂದ್ರ ತೇಜಸ್ವಿ(2016) ಜುಗಾರಿ ಕ್ರಾಸ್‌ನ ಮುನ್ನುಡಿ
5) ಕೆ.ಪಿ.ಪೂರ್ಣಚಂದ್ರ ತೇಜಸ್ವಿ(2016) ಜುಗಾರಿ ಕ್ರಾಸ್‌ನ ಮುನ್ನುಡಿ
6) ಕೆ.ಪಿ.ಪೂರ್ಣಚಂದ್ರ ತೇಜಸ್ವಿ(2016) ಜುಗಾರಿ ಕ್ರಾಸ್, ಪುಟ ಸಂಖ್ಯೆ–10
7) ಕೆ.ಪಿ.ಪೂರ್ಣಚಂದ್ರ ತೇಜಸ್ವಿ(2018) ಮಾಯಾಲೋಕ, ಪುಟ ಸಂಖ್ಯೆ–12
8) ಕೆ.ಪಿ.ಪೂರ್ಣಚಂದ್ರ ತೇಜಸ್ವಿ(2018) ಮಾಯಾಲೋಕ, ಪುಟ ಸಂಖ್ಯೆ–89
9) ಕೆ.ಪಿ.ಪೂರ್ಣಚಂದ್ರ ತೇಜಸ್ವಿ(2018) ಮಾಯಾಲೋಕ, ಪುಟ ಸಂಖ್ಯೆ–356
10) ಕೆ.ಪಿ.ಪೂರ್ಣಚಂದ್ರ ತೇಜಸ್ವಿ(2022) ಪರಿಸರದ ಕತೆ, ಪುಟ ಸಂಖ್ಯೆ–2
11) ಕೆ.ಪಿ.ಪೂರ್ಣಚಂದ್ರ ತೇಜಸ್ವಿ(2022) ಪರಿಸರದ ಕತೆ, ಪುಟ ಸಂಖ್ಯೆ–41
12) ಕೆ.ಪಿ.ಪೂರ್ಣಚಂದ್ರ ತೇಜಸ್ವಿ(2022) ಪರಿಸರದ ಕತೆ, ಪುಟ ಸಂಖ್ಯೆ–42

ಪರಾಮರ್ಶನ ಗ್ರಂಥಗಳು :

1) ನಾಯಕ ಜಿ.ಎಚ್, (2011) ಮೌಲ್ಯ ಮಾರ್ಗ: ಸಂಪುಟ 1, ಸಿರಿವರ ಪ್ರಕಾಶನ, ಬೆಂಗಳೂರು.
2) ಕೆ.ವಿ.ಎನ್, (2020) ತೊಂಡುಮೇವು : ಕಂತೆ ಮೂರು, ಪ್ರಗತಿ ಗಾಫಿಕ್ಸ್, ಬೆಂಗಳೂರು.
3) ವಡ್ಡು ಚಂದ್ರಕಾಂತ (ಸಂ), (2024) ವಿಸ್ಮಯ ವಿಮರ್ಶೆ, ಸಮಾಜಮುಖಿ ಪ್ರಕಾಶನ, ಬೆಂಗಳೂರು.
4) ನರೇಂದ್ರ ರೈ ದೇರ್ಲ, (2024), ಪೂರ್ಣಚಂದ್ರ ತೇಜಸ್ವಿ, ಕನಸು ಪ್ರಕಾಶನ, ಪುತ್ತೂರು.
5) ರಹಮತ್ ತರೀಕೆರೆ, (2016), ಕತ್ತಿಯಂಚಿನ ದಾರಿ, ಅಭಿನವ, ಬೆಂಗಳೂರು.
6) ವಿಜಯಶಂಕರ ಎಸ್.ಆರ್, (2019), ಅಪ್ರಮೇಯ, ಸಪ್ನ ಬುಕ್ ಹೌಸ್, ಬೆಂಗಳೂರು.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಕನ್ನಡ ಸಾಹಿತ್ಯದಲ್ಲಿ ಅನುವಾದದ ಹೆಜ್ಜೆ

ಶ್ರೀಮತಿ ಲಕ್ಷ್ಮೀ ಎಲ್. ಪೂಜಾರಿ
ಕನ್ನಡ ಉಪನ್ಯಾಸಕಿ
ಕೆ.ಎಲ್.ಇ ಸಂಸ್ಥೆಯ ಎಸ್.ಎಸ್.ಎಮ್.ಎಸ್
ಮಹಾವಿದ್ಯಾಲಯ ಅಥಣಿ.591304
Email:pujarilaxmi467@gmail.com

Manuscript ID:
JRD -2026-180406
ISSN: 2230-9578
Volume 18
Issue 4(II)
Pp.19-20
April 2026
Submitted:05 Mar. 2026
Revised:20 Mar. 2026
Accepted:05Apr.2026
Published:30 April 2026

ಸಾರಲೇಖ :

ಅನುವಾದವು ಸಾಹಿತ್ಯದಷ್ಟೆ ಧೀರ್ಘವಾದ ಇತಿಹಾಸವನ್ನು ಹೊಂದಿದ್ದು ಆದರೆ ಭಾಷೆಗಳ ಇತಿಹಾಸವನ್ನು ರಚಿಸುವಷ್ಟು ನಡೆದ ಪ್ರಯತ್ನಗಳು ಅನುವಾದದಲ್ಲಿ ಆಗಿಲ್ಲ ಯಾವುದೇ ಭಾಷೆ ಬೆಳೆದಿರುವುದು ಭಾಷಾಂತರದ ಸಹಾಯದಿಂದಲೇ ಎಲ್ಲಾ ಭಾಷೆಗಳಿಗೆ ಪ್ರೋತ್ಸಾಹ ನೀಡುತ್ತಾ ಬಂದಿದೆ ಕನ್ನಡ ಭಾಷೆಗೂ ಅನುವಾದವೇ ಮೂಲ ಮತ್ತು ಯಾವ ಯಾವ ಕಾಲದಲ್ಲಿ ಎಷ್ಟು ಎನ್ನುವುದನ್ನು ತಿಳಿಯುವಂತ ಪ್ರಯತ್ನ ನಡೆದಿಲ್ಲ. 'ಗಿಡ ಬೆಳೆದು ಮರವಾಗಿ ಕೊಡುವ ಹಣ್ಣುಗಳ ಲೆಕ್ಕ ಇಡಬಹುದು ಆದರೆ ಅದಕ್ಕೆ ಕಾರಣವಾದ ಅಂಶಗಳನ್ನು ನಾವು ಲೆಕ್ಕಿಸುವುದಿಲ್ಲ ಹಾಗೆ ನಾವು ಅನುವಾದ ಕೃತಿಗಳು ಮತ್ತು ಅನುವಾದಕರ ಬಗ್ಗೆ ಯಾವುದೇ ಲೆಕ್ಕವಿಟ್ಟಿಲ್ಲ' ಕನ್ನಡ ಭಾಷೆಗೆ ಅನುವಾದ ಮೂಲ ರೂಪವಾದರು ಯಾವುದೇ ದಾಖಲೆಗಳಿಲ್ಲ.

ಕನ್ನಡ ಸಾಹಿತ್ಯದ ಅನುವಾದ ಪರಂಪರೆಯನ್ನು ಪ್ರಾಚೀನ ಕಾಲದಿಂದಲೂ ಕಾಣಬಹುದು.ಕೃತಿಯನ್ನು ಓದಿದಾಗ ಮೂಲ ಕೃತಿಗೂ ಅನುವಾದ ಕೃತಿಗೂ ಸಾಕಷ್ಟು ವ್ಯತ್ಯಾಸಗಳಿರುವುದನ್ನು ಗುರ್ತಿಸಬಹುದು. ಇದರಿಂದ ಬೇರೆ ಭಾಷೆಯ ಕೃತಿಯಲ್ಲಿ ವ್ಯಕ್ತವಾದ ಸಂಸ್ಕೃತಿಯ ಬಗ್ಗೆ ಅರಿವು ಮೂಡುತ್ತದೆ. ಬೇರೆ ಭಾಷೆಯ ಲೇಖಕರ ಬಗ್ಗೆ ತಿಳಿಯಬಹುದು. ಕನ್ನಡ ಸಾಹಿತ್ಯಕ್ಕೆ ಅನ್ಯ ಭಾಷಾಸಾಹಿತ್ಯ ಪ್ರಭಾವ ಸಾಕಷ್ಟಿರುವುದನ್ನು ಕಾಣಬಹುದು. ಕನ್ನಡ ಸಾಹಿತ್ಯವನ್ನು ಅವಲೋಕಿಸಿದಾಗ ಸ್ಪಷ್ಟವಾಗುತ್ತದೆ. ಮೈಸೂರು ವಿಶ್ವ ವಿದ್ಯಾಲಯ ಪ್ರಕಟಿಸಿದ ಅನುವಾದ ಕೃತಿಯೇ ಮೊದಲ ಆಕರ 1984 ರಲ್ಲಿ ಪ್ರಕಟವಾಗಿದೆ. 1999 ಕನ್ನಡ ವಿಶ್ವ ವಿದ್ಯಾಲಯದ ದ್ರಾವಿಡ ಅಧ್ಯಯನ ವಿಭಾಗವು ಪ್ರಕಟಿಸಿದ "ದ್ರಾವಿಡ ಭಾಷಾನುವಾದ ಕೃತಿ ಸೂಚಿ" ಮುಖ್ಯವಾದದ್ದು. ತಮಿಳು, ತೆಲುಗು, ಮಲಯಾಳಂ, ತುಳುವಿನಿಂದ ಕನ್ನಡಕ್ಕೆ ಬಂದ ಕೃತಿಯ ವಿವರಣೆಯನ್ನು ನೀಡುತ್ತದೆ. ಅನುವಾದವನ್ನು ಅಧ್ಯಯನದ ಅನುಕೂಲಕ್ಕಾಗಿ ವಿಭಾಗ ಕ್ರಮವನ್ನು ಮಾಡಿಕೊಂಡು ಅಭ್ಯಸಿಸಲಾಗುವುದು.

ಮುಖ್ಯಪದಗಳು : ಅನುವಾದ, ಸಾಹಿತ್ಯ, ಕೃತಿಗಳು, ಭಾಷೆ, ಕನ್ನಡ, ಪರಂಪರೆ

ಅನುವಾದ ಎನ್ನುವ ಪದ ಇಂಗ್ಲಿಷ್‌ನ ಟ್ರಾನ್ಸಲೇಷನ್ ಎಂಬ ಪದಕ್ಕೆ ಸಂವಾಯಾಗಿ ಬಳಸಲಾಗುತ್ತದೆ. ಕನ್ನಡದಲ್ಲಿ ಬರೆ, ಕನ್ನಡಿಕರಿಸು, ಎಂಬ ಪದಗಳನ್ನು ಬಳಕೆ ಮಾಡಲಾಗುತ್ತಿದೆ. ಯಾವುದೇ ಭಾಷೆ ಬೆಳೆಯಲು ಅನುವಾದ ಬಹಳ ಮುಖ್ಯ ಕನ್ನಡ ಅನುವಾದ ಪರಂಪರೆಯನ್ನು ಪ್ರಾಚೀನ ಕೃತಿಗಳ ಜೊತೆಗೆ ಗುರುತಿಸಬಹುದು. ಪರಸ್ಪರ ವ್ಯವಹಾರ ಮತ್ತು ಕೊಡುಕೊಳ್ಳುವಿಕೆಯು ಕನ್ನಡ ಭಾಷೆಯಲ್ಲಿ ಅನುವಾದಕ್ಕೆ ಒಂದು ಮೈಲಿಗಲ್ಲು ಎಂದು ಹೇಳಬಹುದು ರಾಜರ ಯುದ್ಧ, ವ್ಯಾಪಾರ ಇಂತಹ ಸಂದರ್ಭದಲ್ಲಿ ಅನ್ಯ ಭಾಷೆಯ ಸಂಪರ್ಕವು ಕಾರಣವಾಯಿತು. ಕನ್ನಡ ಪ್ರಾರಂಭದಲ್ಲಿ ಜೈನ ಧರ್ಮ ಪ್ರಾಬಲ್ಯ ಪಡೆದಿತ್ತು. ಜೈನ ಧರ್ಮದ ತತ್ವ ಸಿದ್ಧಾಂತಗಳನ್ನು ಕನ್ನಡದಲ್ಲಿ ಬರೆಯಲು ಪ್ರಾರಂಭಿಸಿದರು ಜೈನ ಧರ್ಮದ ಕವಿಗಳು ಪ್ರಾಕೃತ ಮತ್ತು ಸಂಸ್ಕೃತಗಳಿಂದ ಜೈನ ಧರ್ಮದ ತತ್ವಗಳನ್ನು ಬರೆಯುವ ಮೂಲಕ ಕನ್ನಡ ಅನುವಾದ ಪರಂಪರೆ ಆರಂಭವಾಯಿತು. ಕನ್ನಡ ನಾಡಿನ ಬಹುಭಾಷಿಕ ಸಂಸ್ಕೃತಿಯೇ ಅನುವಾದಕ್ಕೆ ಪ್ರೇರಣೆಯಾಯಿತು. ಕನ್ನಡ, ತಮಿಳು, ತೆಲುಗು, ಮಲಯಾಳಂ, ಮರಾಠಿ, ಕೊಂಕಣಿ, ಅನ್ಯ ಭಾಷೆಗಳ ಸಂಪರ್ಕದ ಪರಿಣಾಮದಿಂದಲೇ ಕನ್ನಡಕ್ಕೆ ಅನುಕೂಲವಾಯಿತು. ಶಾಸನಗಳಲ್ಲಿನ ಅನ್ಯ ಭಾಷೆಯನ್ನು ಕನ್ನಡ ಜನ ಅನುವಾದ ಮೂಲಕ ಅರ್ಥಮಾಡಿಕೊಂಡಿರುವುದು ಮತ್ತು ಕನ್ನಡ ಅನುವಾದ ಚರಿತ್ರೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಎಮ್ ಉಷಾ ಅವರು ಗುರುತಿಸಿದಂತೆ 5–6 ನೇ ಶತಮಾನದಿಂದ ಶಾಸನಗಳ ದಾಖಲೆಗಳು ದೊರೆಯುತ್ತವೆ. ಅಶೋಕನ ಶಾಸನ ಮತ್ತು ಚಂದ್ರವಳ್ಳಿ ಶಾಸನಗಳು ಪಾಲಿ ಭಾಷೆಯ ಬ್ರಾಹ್ಮೀ ಲಿಪಿಯಲ್ಲಿ ದಾಖಲಿಸಲಾಗಿದೆ. ಕನ್ನಡದ ಮೊದಲ ಶಾಸನವಾದಂತಹ ಕ್ರಿಸ್ತಶಕ 450ರಲ್ಲಿ ದೊರೆತ ಹಲ್ಮಿಡಿ ಶಾಸನ ಲಿಪಿ ಕನ್ನಡದಲ್ಲಿದೆ ಅಷ್ಟೇ ಅಲ್ಲದೆ ಐಹೊಳೆ ಶಾಸನವು ಕನ್ನಡ ಲಿಪಿಯಲ್ಲಿದೆ ಹೀಗೆ ಬೇರೆ ಭಾಷೆಯಾದರೂ ಲಿಪಿ ಕನ್ನಡದಾದುದ್ದನ್ನು ನೋಡಬಹುದು ಪ್ರಾರಂಭದ ಜೈನ ಕೃತಿಗಳು ಪ್ರಮುಖ ಜೈನ ಆಚಾರ್ಯರು ಸಂಸ್ಕೃತಕ್ಕೆ ಭಾಷಾಂತರಿಸುವ ವ್ಯಾಖ್ಯಾನಿಸುವ ಕೆಲಸ ಮಾಡಿದರು ಇದೇ ಕನ್ನಡ ಸಾಹಿತ್ಯಕ್ಕೆ ದಾರಿಯಾಯಿತು. ಜೈನ ಸಾಹಿತ್ಯ ಕೃತಿಗಳ ಮೂಲಕ ಪ್ರಾರಂಭವಾದ ಅನುವಾದ ವೀರಶೈವ, ವೈದಿಕ, ಕವಿಗಳು ಮುಂದುವರಿಸಿದರು. ಅನುವಾದದ ಮೂಲಕ ಕನ್ನಡ ಸಾಹಿತ್ಯ ಸಮೃದ್ಧವಾಗಿ ಬೆಳೆದಿದೆ ಎನ್ನಬಹುದು. ಕನ್ನಡದ ಮೊದಲ ಅಲಂಕಾರ ಗ್ರಂಥ ದಂಡಿಯ ಕಾವ್ಯದರ್ಶದ ಆಧಾರದಿಂದ ರಚನೆಯಾದದ್ದು,

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಶ್ರೀಮತಿ ಲಕ್ಷ್ಮೀ. ಎಲ್.ಪೂಜಾರಿ ಕನ್ನಡ ಉಪನ್ಯಾಸಕಿ ಕೆ.ಎಲ್.ಇ ಸಂಸ್ಥೆಯ ಎಸ್.ಎಸ್.ಎಮ್.ಎಸ್ಮಹಾವಿದ್ಯಾಲಯ ಅಥಣಿ.591304

How to cite this article:
ಶ್ರೀಮತಿ ಲಕ್ಷ್ಮೀ. ಎಲ್.ಪೂಜಾರಿ,*(2026).* ಕನ್ನಡ ಸಾಹಿತ್ಯದಲ್ಲಿ ಅನುವಾದದ ಹೆಜ್ಜೆ. *Journal of Research and Development, 18(4(II)), 19–20. https://doi.org/10.5281/zenodo.19394614*

Quick Response Code:
Website: https://jrdrvb.org/
DOI: 10.5281/zenodo.19394614
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಅಲ್ಲದೆ ಭರತನ ನಾಟ್ಯಶಾಸ್ತ್ರದಿಂದ ರಸಪ್ರಕರಣವನ್ನು ಬಾಮಹನಿಂದ ಅಲಂಕಾರವನ್ನು ಕವಿರಾಜಮಾರ್ಗದಲ್ಲಿ ಅನುವಾದಿಸಿದ್ದಾನೆ. ಸಂಸ್ಕೃತ ಪ್ರಭಾವ ದಟ್ಟವಾಗಿದ್ದು ಅನೇಕ ಲಕ್ಷ ಪದ್ಯಗಳನ್ನು ನೇರವಾಗಿ ಅನುವಾದ ಮಾಡಿರಿವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಸಂಸ್ಕೃತ ವಿದ್ವಾಂಸರು ಅನೇಕ ಸಿದ್ಧಾಂತಗಳನ್ನು ಅನುವಾದದ ಮೂಲಕ ಕನ್ನಡಿಗರಿಸಿದನ್ನು ಕಾಣುತ್ತೇವೆ. ಕನ್ನಡದ ಮೊದಲ ಗದ್ಯ ಕೃತಿಯಾದಂತಹ ವಡ್ಡಾರಾಧನೆಯು ಕೂಡಾ ಪ್ರಾಕೃತದ ಬೃಹತ್ ಆರಾಧನಾ ಕೃತಿ ಆಧರಿಸಿದೆ ಅನೇಕ ಗಾದೆಗಳು ಯಥಾವತ್ತಾಗಿ ಬಳಕೆಯಾಗಿರುವುದನ್ನು ಕಾಣಬಹುದು.

ಕನ್ನಡಕ್ಕೆ ಒಂದು ಶಾಶ್ವತವಾದ ನೆಲೆಯನ್ನು ಕೊಟ್ಟಂತಹ ಕನ್ನಡದ ಆದಿಕವಿ ಪಂಪ ತನ್ನ ಎರಡೂ ಕೃತಿಗಳನ್ನು ಒಂದಲ್ಲ ಒಂದು ರೀತಿಯಲ್ಲಿ ಅನುವಾದ ಮಾಡಿದ್ದಾನೆ. ಆದಿಪುರಾಣಕ್ಕೆ ಜೀನಸೇನಾಚಾರ್ಯರ ಪೂರ್ವ ಪುರಾಣ ಮತ್ತು ಗುಣಭದ್ರನ ಉತ್ತರಪುರಾಣದ ಕೆಲವು ಪದ್ಯಗಳನ್ನು ಮೂಲದ ಭಾವವನ್ನು ಅನುವಾದಿಸಿ ಬರೆದಿದ್ದಾನೆ ಪಂಪ ಭಾರತದಲ್ಲಿ ವ್ಯಾಸಭಾರತವನ್ನು ಆಧರಿಸಿ ರಚಿಸಿದ ಈತ ವ್ಯಾಸಭಾರತವನ್ನು ತನ್ನದೇ ಆದ ಶೈಲಿಯಲ್ಲಿ ರಚಿಸಿ ಸಂಗ್ರಹಿಕರಿಸಿದ್ದನ್ನು ಗುರುತಿಸಬಹುದು. ಅವನೇ ವ್ಯಾಸನಿಗೆ ಗೌರವ ಸೂಚಿಸಿರುವುದನ್ನು ಕಾಣುತ್ತೇವೆ.ಕಾಳೀದಾಸನ ರಘುವಂಶದ ಇಂದುಮತಿಯ ಸ್ವಯಂವರದ ವರ್ಣನೆಯ ಪದ್ಯಗಳ ಅನುವಾದವನ್ನು ಪೊನ್ನನ ಶಾಂತಿಪುರಾಣದಲ್ಲಿ ಗುರುತಿಸಲಾಗುತ್ತದೆ ರನ್ನನ ಗದಾಯುದ್ಧದ ಕಾವ್ಯಕ್ಕೆ ಪಂಪನ ಕೃತಿ ಆಕಾರವಾಗಿದ್ದು ರನ್ನ ತನ್ನ ಶಕ್ತಿ ಸಾಮರ್ಥ್ಯದ ಪ್ರತೀಕವಾಗಿ ಗದಾಯುದ್ಧವನ್ನು ಕನ್ನಡ ಸಾಹಿತ್ಯಕ್ಕೆ ಕೊಟ್ಟಂತ ಶಕ್ತಿ ಕವಿ, ಕ್ರಾಂತಿ ಕವಿ, ಭಟ್ಟನಾರಾಯಣ ವೇಣಿ ಸಂಹಾರದ ಅನೇಕ ಪದಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾನೆ.

ಮೊದಲನೆಯ ನಾಗವರ್ಮನು ಕಮಲ ಮತ್ತು ಪಿಂಗಲನ ಅನುಸರಿಸಿ ಸಂಸ್ಕೃತ, ಪ್ರಾಕೃತ, ಕನ್ನಡ ಛಂದಸ್ಸುಗಳನ್ನು ಸಂಗ್ರಹಿಸಿ ಛಂದೋಂಬುದಿಯನ್ನು ರಚಿಸಿದ್ದಾನೆ. ಚಾವುಂಡರಾಯನು ಗುಣಭದ್ರರ ಸಂಸ್ಕೃತ ಮಹಾ ಪುರಾಣಗಳನ್ನು ಆಧರಿಸಿ ಕನ್ನಡದಲ್ಲಿ 64 ಶಲಾಕಾಪುರುಷರು ಮತ್ತು 24 ತೀರ್ಥಂಕರರ ಕಥೆಗಳನ್ನು ಚಾವುಂಡರಾಯ ಪುರಾಣದಲ್ಲಿ ಕನ್ನಡದಲ್ಲಿ ರಚಿಸಿದ್ದಾನೆ. ಕನ್ನಡದ ಪ್ರಮುಖ ಕಥೆಗಳ ಗುಚ್ಛ ಎಂದು ಕರೆಯಿಸಿಕೊಳ್ಳುವ ಪಂಚತಂತ್ರ ಕಥೆಯು ವಸುಭಾಗಭಟ್ಟನ ಸಂಸ್ಕೃತ ಪಂಚತಂತ್ರದ ಅನುವಾದವಾಗಿದ್ದು ಸಾಕಷ್ಟು ಸಂಸ್ಕೃತದ ಉದಾಹರಣೆಗಳನ್ನು ಈ ಕೃತಿಯಲ್ಲಿ ಗುರುತಿಸಬಹುದು. ಭಾಣಭಟ್ಟನ ಸಂಸ್ಕೃತದ ಕಾದಂಬರಿಯನ್ನು ಆಧರಿಸಿ ನಾಗವರ್ಮನು ಕರ್ನಾಟಕ ಕಾದಂಬರಿ ಎಂದು ಕನ್ನಡಿಕರಿಸಿದ್ದಾನೆ. ಬಾಣನ ಕಾದಂಬರಿಯ ನಿಷ್ಠವಾದ ಅನುವಾದ ಜೈನ ರಾಮಾಯಣವೆಂದೇ ಹೆಸರುವಾಸಿಯಾದಂತಹ 'ರಾಮಚಂದ್ರಚರಿತಪುರಾಣ'ವನ್ನು ನಾಗಚಂದ್ರನು ವಿಮಾಲ ವಿಮಲಸೂರಿಯ ಬಹುಮಚರಿಯ ಅನುಸರಿಸಿ ಬರೆದಿದ್ದ ಇದು ಪ್ರಾಕೃತ ಕಾವ್ಯ ಕೆಲವೊಂದು ಸಣ್ಣಪುಟ್ಟ ಬದಲಾವಣೆ ಮಾಡಿದ್ದನ್ನು ಕಾಣುತ್ತೇವೆ. ಜನ್ನನ 'ಯಶೋಧರಚರಿತೆ'ಯು ವಾದಿರಾಜನ ಸಂಸ್ಕೃತ ಕೃತಿಯಾದ ಯಶೋಧರದ ಅನುವಾದ ಯಥಾವತಾಗಿ ಅನುವಾದಿಸಿದ್ದು ಪ್ರತಿ ಪದ್ಯವನ್ನ ಅನುವಾದ ಮಾಡಿದರು ತನ್ನದೇ ಆದಂತಹ ಸ್ವತಂತ್ರತೆಯನ್ನು ಅದರಲ್ಲಿ ಕಾಣುವ ಹಾಗೆ ಕಾವ್ಯವನ್ನು ರಚಿಸಿರುವನು. ಗುಣಭದ್ರನ ಉತ್ತರಪುರಾಣವನ್ನು ಇಟ್ಟುಕೊಂಡು ಅನಂತನಾಥ ಪುರಾಣ ರಚಿಸಿರುವನು. ಹರಿಹರನು ತಮಿಳಿನ ಪೆರಿಯಪುರಾಣದ 63 ಜನ ಪುರಾತನರನ್ನು ಕನ್ನಡದಲ್ಲಿ ರಗಳೆ ಸಾಹಿತ್ಯವನ್ನು ಕಟ್ಟಿ ಕೊಟ್ಟಿದ್ದಾನೆ. ರಗಳೆಕಾರನಷ್ಟ ಅಲ್ಲದೆ ಕಾಳಿದಾಸನ ಕುಮಾರಸ್ವಾಮಿ ಆದರಿಸಿ ಗಿರಿಜಾ ಕಲ್ಯಾಣ ಎಂಬ ಚಂಪೂ ಕೃತಿಯನ್ನು ರಚಿಸಿದ್ದಾನೆ. ತೆಲುಗುವಿನ ಪಾಲ್ಕುರಿಕೆ ಸೋಮನಾಥನ ಬಸವ ಪುರಾಣವನ್ನು ಭೀಮ ಕವಿ ಬಸವ ಪುರಾಣವೆಂದು ಕನ್ನಡಕ್ಕೆ ಅನುವಾದಿಸಿದ್ದಾನೆ. ಕನ್ನಡದ ಮೊದಲ ನಾಟಕ ವಾದಂತಹ ಸಿಂಗರಾರ್ಯನ ಮಿತ್ರಾವಿಂದ ಗೋವಿಂದ ಹರ್ಷನ ರತ್ನಾವಳಿ ನಾಟಕದ ಅನುವಾದ ಹೀಗೆ ಅನೇಕ ಕೃತಿಗಳ ಅನುವಾದದ ಮೂಲಕ ಕನ್ನಡ ಸಾಹಿತ್ಯ ಬೆಳೆಯಲು ಪ್ರಾರಂಭಿಸಿತು. ಸಂಸ್ಕೃತ ಪ್ರಾಕೃತ ತಮಿಳು ಬೇರೆಬೇರೆ ಭಾಷೆಗಳಿಂದ ಪ್ರಾಚೀನ ಸಾಹಿತ್ಯಕ್ಕೆ ಆಕರಗಳು ದೊರೆತಿವೆ. ಆದರೆ ಕನ್ನಡಿಗರು ಯಥಾವತ್ತಾಗಿ ಅನುಕರಿಸಲಿಲ್ಲ ತಮ್ಮದೇ ಆದಂತಹ ಸ್ವಂತಿಗೆ ತೋರಿದರು. ಅನುವಾದ ಮೂಲಕ ಪ್ರತಿಯೊಬ್ಬರು ಕೃತಿಯು ಮುಂದಿನವರೆಗೆ ಜೀವಂತವಾಗಿ ಉಳಿವಂತೆ ಮಾಡಿದರು.

1880 ರ ನಂತರ ಹೊಸಗನ್ನಡ ಸಾಹಿತ್ಯದ ಉದಯ ಕಾಲ ಪ್ರಾರಂಭವಾಯಿತು ಹೊಸಗನ್ನಡದ ಅರುಣೋದಯದಲ್ಲಿ ಸ್ವತಂತ್ರ ಕೃತಿಗಳು ಮೊದಲು ರಚನೆ ಆಗಲಿಲ್ಲ ಅನುವಾದವೇ ಮೂಲ. 1920 ರಲ್ಲಿ ಬಿ. ಎಂ.ಶ್ರೀ ಅವರೇ 1921 ರಲ್ಲಿ ಇಂಗ್ಲಿಷ್ ಗೀತೆಗಳು ಕೃತಿಯನ್ನು ರಚಿಸಿದರು ಈ ಕೃತಿ ಆಧುನಿಕ ಸಾಹಿತ್ಯದ ಹೆದ್ದಾರಿ ತೆರೆಯಿತು ಎನ್ನಬಹುದು 19ನೇ ಶತಮಾನದಲ್ಲಿ ಆದಂತಹ ಬದಲಾವಣೆಗಳು ಇದಕ್ಕೆ ಮೂಲ ಕಾರಣ ಇಂಗ್ಲೀಷ್ ಸಂಸ್ಕೃತ ಭಾಷೆಯಲ್ಲಿನ ಕೃತಿಗಳ ಅನುವಾದ ಕಾರ್ಯ ನಡೆಯಿತು ಕಥೆ, ಕಾದಂಬರಿ, ನಾಟಕ, ಪದ್ಯಗಳ ಅನುವಾದ ಕಾರ್ಯದ ಮೂಲಕ ಕನ್ನಡ ಸಾಹಿತ್ಯ ರಚನೆ ಆರಂಭವಾಯಿತು ಎಂದು ಹೇಳಬಹುದು. ವರ್ಡ್ಸ್‌ವರ್ತ, ಷೇಕ್ಸಪೀಯರ್‌ರರ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದರು. ಇಬ್ಸನನ್ ದಿ.ಡಾಲ್ಸ್ ಹೌಸ್ ಕೃತಿಯನ್ನು ಎಸ್. ಜಿ ಶಾಸ್ತ್ರಿ 'ಸೂತ್ರದ ಗೊಂಬೆ' ಎಂದು ಅನುವಾದಿಸಿದರು ರೆವೆಂಡ್ ಪಿಗಲ್ ಬನ್ಸನನ ದಿ ಪಿಲ್ಗ್ರೀನ್ ಪ್ರೋಗ್ರೆಸ್ ಪುಸ್ತಕವನ್ನು 'ಯಾತ್ರಿಕನ ಸಂಚಾರ' ಎಂದು ಅನುವಾದಿಸಿದರು. ಸುಬ್ಬರಾಯರು ಇಂಗ್ಲೀಷನ ಲಿಟಲ್ ಡ್ರಾಪ್ಸ್ ಆಫ್ ವಾಟರ್ ಎನ್ನುವ ಪದ್ಯವನ್ನು ಕಂ / ತುಂತುರ್ನಿರ್ವನಿಯಂ ಎಂದು ಅನುವಾದಿಸಿದರು. ಷೇಕ್ಸಪೀಯರನ ಅಥೆಲೋ ನಾಟಕವನ್ನು 'ಶೂರಸೇನಚರಿತ'ಯೆಂದು ಡಿ ಮರ್ಚೆಂಟ್ ಆಫ್ ವೆನಿಸ್ 'ಪಾಂಚಾಲಿ ಪರಿಣಯ' ಎಂದು ಎಂ. ಆನಂದರಾವ ಹಾಗೂ ಮ್ಯಾಕ್ಬೆತ್ ನಾಟಕವನ್ನು 'ಪ್ರತಾಪ ರುದ್ರದೇವ' ಎಂದು ಅನುವಾದಿಸಿದರು. ಅನುವಾದ ಸಂದರ್ಭ ಶಬ್ದಗಳ ವ್ಯತ್ಯಾಸವನ್ನು ಕಾಣುತ್ತೇವೆ. ನರಸಿಂಹಾಚಾರ್ಯರು ಟ್ವಿಂಕಲ್ ಟ್ವಿಂಕಲ್ ಲಿಟಲ್ ಸ್ಟಾರ್ ಎಂಬ ಕಂದನ ಹಾಡನ್ನು 'ಮಿರು ಮಿರುಗುವೆ ಹಾ ಕಿರು ತಾರೆ' ಎಂದು ಬರೆದರು ಅದೇ ಬಂಗಾಳಿಯ ಬಂಕಿಮರ ದುರ್ಗೇಶ ನಂದಿನಿಯನ್ನು ವೆಂಕಟಾಚಾರ್ಯರು ಕನ್ನಡಕ್ಕೆ ಅನುವಾದಿಸುವ ಮೂಲಕ ಬಂಗಾಳಿಯಿಂದ ಕಥೆ ನಾಟಕ, ಕಾದಂಬರಿಗಳು, ಅನುವಾದಗೊಂಡವೆಂದು ಹೇಳಬಹುದು. ಪರಿಮಳ, ಆನಂದ್‌ಮಠ್, ದೇವಿ ಚೌದರಾಣಿ ಮೂರು ಕಾದಂಬರಿಗಳು ಕನ್ನಡದಲ್ಲಿ ಪ್ರಸಿದ್ಧಿ ಪಡೆದವು. ತಮಿಳು, ತೆಲುಗು, ಇಂಗ್ಲಿಷ್ ಅನುವಾದಗಳು ಮುಂದುವರಿದಿವೆ ಹೀಗೆ 1920 ರವರೆಗೆ ಅನುವಾದವೇ ಕನ್ನಡ ಸಾಹಿತ್ಯದ ಮೂಲ ಹೆಜ್ಜೆ ಬೇರೆ ಭಾಷೆಯ ಕೃತಿಗಳ ಅನುವಾದ ಮೂಲಕ ನಮ್ಮ ಸಾಹಿತ್ಯ ಬೆಳೆಯಲು ಪ್ರಾರಂಭವಾಯಿತು ನವೋದಯ ಅನುವಾದ ಪ್ರೇರಣೆಯಾದರು ಸ್ವತಂತ್ರ ಕೃತಿಗಳ ರಚನೆ ನಡೆಯಿತು.

ಅನುವಾದವು ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಸಾಹಿತ್ಯವನ್ನು ಬೆಳೆಯಲು ಸಹಾಯಕವಾದ ಒಂದು ಮಾರ್ಗ ಎಂದು ಹೇಳಬಹುದು ಒಂದು ಮುಖ್ಯಘಟ್ಟ ಪ್ರಾಚೀನ ಮತ್ತು ಆಧುನಿಕವರೆಗೆ ಕನ್ನಡ ಸಾಹಿತ್ಯವನ್ನು ಗಮನಿಸಿದಾಗ ಅನ್ಯ ಭಾಷೆಯ ಕೃತಿಗಳ ಅನುವಾದ ಕಾರ್ಯದ ಮೂಲಕ ಸಾಹಿತ್ಯ ರಚನೆ ಪ್ರಾರಂಭವಾಯಿತು. ಇಂದಿಗೂ ಅನುವಾದ ಕಾರ್ಯ ಮುಂದುವರೆದಿದೆ ಇದರಿಂದ ಎಲ್ಲಾ ಭಾಷೆಗಳ ಹೊಂದಾಣಿಕೆ ಮತ್ತು ಸಂಸ್ಕೃತಿಯನ್ನು ತಿಳಿಯಲು ಓದುಗರಿಗೆ ದಾರಿಯಾಗುತ್ತದೆ ಪ್ರತಿ ರಚನೆ ಮಾತ್ರವಲ್ಲ ಓದುವರಿಗೂ ಜ್ಞಾನ ವಿಸ್ತಾರವಾಗಲಿಕೆ ಸಹಾಯಕಾರಿಯಾಗುತ್ತದೆ.

ಆಧಾರ ಗ್ರಂಥಗಳು :

1.ಅನುವಾದ ಸಾಹಿತ್ಯ – ಡಾ.ಮೋಹನ್ ಕುಂಟಾರ ಕನ್ನಡ ಸಾಹಿತ್ ಪರಿಷತ್ತಿ 2015

2.ಅನುವಾದ ಅನುಸೃಷ್ಟಿ, ರೂಪಾಂತರ –ಡಾ.ಮೋಹನ್ ಕುಂಟಾರ ಕರ್ನಾಟಕ ಸಾಹಿತ್ಯ ಅಕಾಡಮಿ 2021

3.ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ – ಡಾ. ಹರಿಕೃಷ್ಣ ಭರಣ್ಯ ಸಪ್ನ ಬುಕ್ ಹೌಸ 2016

4. ಹೊಸಗನ್ನಡ ಸಾಹಿತ್ಯ ಚರಿತ್ರೆ –ಎಲ್.ಎಸ್.ಶೇಷಗಿರಾವ್

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಕನ್ನಡದಲ್ಲಿ ನವ್ಯ ಸಾಹಿತ್ಯದ ಪರಿಭಾಷೆ ಹಾಗೂ ಇತಿಹಾಸ

ಡಾ. ಸಂಗಪ್ಪ ಪಟ್ಟೇದ
ಕನ್ನಡಉಪನ್ಯಾಸಕರು
ಎಸ್.ಎಸ್.ಎಮ್.ಎಸ್. ಮಹಾವಿದ್ಯಾಲಯಅಥಣಿ
Email-Sangappa.patted511@gmail.com

Manuscript ID:
JRD -2026-180407
ISSN: 2230-9578
Volume 18
Issue 4(II)
Pp.21-22
April 2026
Submitted:05 Mar. 2026
Revised:20 Mar. 2026
Accepted:05Apr.2026
Published:30 April2026

ಸಾರಲೇಖ :

ಕನ್ನಡ ವಿದ್ವಾಂಸರು ಕನ್ನಡ ಸಾಹಿತ್ಯ ಚರಿತ್ರೆಯನ್ನು ಭಾಷೆ, ಕಾಲ, ಕವಿಗಳ ಹೆಸರು, ಮತ, ಧರ್ಮಗಳ ಆಧರಿಸಿ ವಿಭಜಿಸಿದ್ದಾರೆ. ಸಹೃದಯರಿಗೆ ಕನ್ನಡ ಸಾಹಿತ್ಯ ಚರಿತ್ರೆಯ ಓದು ಸರಳವಾಗಿ ಎಂಬ ಉದ್ದೇಶದಿಂದ, ಹಳೆಗನ್ನಡ, ನಡುಗನ್ನಡ, ಹೊಸಗನ್ನಡವೆಂದು ಹಾಗೆ ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಕನ್ನಡಸಾಹಿತ್ಯವೆಂದು ಅಲ್ಲದೆ ಪಂಪಯುಗ, ಬಸವಯುಗ, ಕುಮಾರವ್ಯಾಸಯುಗ, ಜೈನಯುಗ, ವೀರಶೈವಯುಗ, ಬ್ರಾಹ್ಮಣಯುಗವೆಂದು ಕನ್ನಡ ಸಾಹಿತ್ಯ ಚರಿತೆಯನ್ನು ವಿಭಾಗಿಸಿದ್ದಾರೆ. ಆದರೆ ಹೊಸಗನ್ನಡ ಸಾಹಿತ್ಯ ಚರಿತ್ರೆಯನ್ನು ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯಸಾಹಿತ್ಯವೆಂದು ವಿಭಾಗಿಸಲಾಗಿದೆ. ಕವಿಗಳು ಕಾವ್ಯದ ರಚನೆಗೆ ಬಳಸಿದ ಕಾವ್ಯದವಸ್ತು ಪ್ರಾಧಾನ್ಯತೆಯೇ ಈ ರೀತಿಯ ವಿಭಜನೆಗೆ ಕಾರಣವಾಗಿದೆ. ಸಾಮಾನ್ಯವಾಗಿ ನವೋದಯ ಹಾಗೂ ನವ್ಯ ಎಂಬ ಪರಿಭಾಷೆಯು ಒಂದೇ ಅರ್ಥವನ್ನು ಮೇಲ್ನೋಟಕ್ಕೆ ಸೂಚಿಸುತ್ತದೆ. ಆದರೆ ಪಾಶ್ಚಾತ್ಯ ಆಧುನಿಕ ಸಾಹಿತ್ಯ ಚರಿತ್ರೆಯ ರೋಮ್ಯಾಂಟಿಸಂ, ಮಾರ್ಡನಿಸಮ್‌ಗೆ ಪರ್ಯಾಯವಾಗಿ ಇವುಗಳನ್ನು ಬಳಸಲಾಗುತ್ತಿದೆ. ಆದ್ದರಿಂದ ನವೋದಯ ಹಾಗೂ ನವ್ಯಸಾಹಿತ್ಯ ಪರಿಭಾಷೆಯ ನಡುವಿನ ವ್ಯತ್ಯಾಸ ಹಾಗೂ ಕನ್ನಡದಲ್ಲಿ ನವ್ಯಸಾಹಿತ್ಯದ ಇತಿಹಾಸದ ಕುರಿತು ಈ ಲೇಖನದಲ್ಲಿ ವಿವರಿಸಲಾಗಿದೆ.

ಮುಖ್ಯ ಪದಗಳು :ನವೋದಯ, ನವ್ಯ, ಪ್ರಗತಿಶೀಲ, ದಲಿತ, ಬಂಡಾಯ, ರೋಮ್ಯಾಂಟಿಸಂ, ಮಾರ್ಡನಿಸಂ

ಕನ್ನಡದಲ್ಲಿ ನವ್ಯ ಸಾಹಿತ್ಯ

ನವ್ಯಸಾಹಿತ್ಯವು ಆಧುನಿಕ ಸಾಹಿತ್ಯ ಚರಿತ್ರೆಯ ಪ್ರಮುಖ ಘಟ್ಟವಾಗಿದೆ. ಪಾಶ್ಚಿಮಾತ್ಯ ಸಾಹಿತ್ಯದ Neo-Modernism (ನಿಯೋ ಮಾರ್ಡನಿಸಂ) ಕನ್ನಡ ನವ್ಯ ಸಾಹಿತ್ಯ ರಚನೆಗೆ ಪ್ರೇರಣೆ ಆಯಿತು. ಸಾಂಪ್ರದಾಯಿಕ ಮನೋಭಾವನೆಗಳನ್ನು ತೊರೆದು, ತನ್ನದೇ ಆದ ಹೊಸ ರೀತಿಯ ಮನೋ ಧೋರಣೆಗಳೊಂದಿಗೆ, ಸುಮಾರು 20 ನೇ ಶತಮಾನದ 40ರ ದಶಕದಲ್ಲಿ ಆರಂಭವಾಯಿತು. ಛಂದಸ್ಸಿನ ನಿಯಮಗಳಿಗೆ ಬದ್ಧರಾಗದೆ, ಸಹೃದಯದಲ್ಲಿ ಹೊಸ ಆಲೋಚನೆಗಳನ್ನು ಹುಟ್ಟುಹಾಕಿದವು. ಮನುಷ್ಯನ ಅಂತರಾಳ ಹಾಗೂ ಬಾಹ್ಯ ಸ್ವರೂಪದಲ್ಲಿ ಅಡಗಿರುವ ವಿಚಾರಗಳನ್ನು, ಮುಚ್ಚು ಮರೆಯಿಲ್ಲದೆ ಅಭಿವ್ಯಕ್ತಿಸುವ ಮಾರ್ಗವನ್ನು ಕಂಡುಕೊಂಡಿತು. ಸಮಾಜಕ್ಕಿಂತಲೂ ವ್ಯಕ್ತಿ ಪ್ರಧಾನ ಸಾಹಿತ್ಯ ಇದಾಗಿದೆ. ಮಾನವ ಬದುಕಿನ ಭಾಗವಾದ ಒಂಟಿತನ, ಆಸೆ, ನಿರಾಸೆ, ದ್ವೇಷ, ಅಸೂಹೆ, ಭಯ, ಕಾಮ, ಅಳಲು, ಹುಟ್ಟು, ಸಾವು, ಮಡಿ– ಮೈಲಿಗೆ, ಅಹಂಕಾರ ಹೀಗೆ ವಿಭಿನ್ನ ರೀತಿಯ ಸಾಮಾಜಿಕ ವ್ಯವಸ್ಥೆಯ ಭಾಗವಾಗಿ ವ್ಯಕ್ತಿಯ ಅನುಭವಗಳು ನವ್ಯಸಾಹಿತ್ಯದ ತಳಹದಿಯಾದವು. ಆದರ್ಶವಾದ ಸೃಜನಾತ್ಮಕ ರಚನೆಗಳನ್ನು ಟೀಕಿಸುತ್ತಾ, ನೈಜ ವಾಸ್ತವವಾದ ಸಂಗತಿಗಳನ್ನು ತಿಳಿಸಲು ಮುಂದಾಯಿತು. ತನ್ನ ಮೂಲ ಧೋರಣೆಗಳಿಂದ ಸುಮಾರು 1950 ರಿಂದ 1980ರ ಮೂರು ದಶಕಗಳ ಕಾಲ ಅಸ್ತಿತ್ವವನ್ನು ಉಳಿಸಿಕೊಂಡು ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಹಂತವಾಗಿಯೇ ಉಳಿದುಕೊಂಡಿದೆ.

ಪರಿಭಾಷೆಯ ಅರ್ಥ

ನಿಯೋ ಮಾರ್ಡನಿಸಂ ಎಂಬುವಲ್ಲಿ ನಿಯೋ ಎಂದರೆ ಹೊಸದು. ಅಂದರೆ ಈ ನವ್ಯಸಾಹಿತ್ಯ ರಚನೆಗಿಂತಲೂ ಪೂರ್ವದಲ್ಲಿ ಸಾಹಿತ್ಯಕಾರರು ಪ್ರಯತ್ನಿಸದ, ಆಲೋಚಿಸದ ಹೊಸ ಆಲೋಚನೆಗಳನ್ನು ಅಭಿವ್ಯಕ್ತಿಸುವುದು ಎಂಬರ್ಥವನ್ನು ನೀಡುತ್ತದೆ. ಮಾಡರ್ನಿಸಂ ಎಂಬುದು ಕನ್ನಡ ಸಂದರ್ಭದಲ್ಲಿ ಆಧುನಿಕವಾದ ಎಂಬರ್ಥವಿದೆ. ಅಂದರೆ ಆಧುನಿಕ ಸಂದರ್ಭದಲ್ಲಿ ರಚನೆಗೊಂಡ ನವ್ಯಸಾಹಿತ್ಯವೆಂದು ಪರಿಭಾವಿಸಬಹುದು. ಪಾಶ್ಚಿಮಾತ್ಯ ಸಾಹಿತ್ಯವನ್ನು ಓದಿದ ಕನ್ನಡ ಸಾಹಿತಿಗಳು, ಕನ್ನಡದಲ್ಲಿ ಈ ಬಗೆಯ ಸಾಹಿತ್ಯ ಕ್ರಾಂತಿ ಉಂಟಾಗುವಿಕೆಗೆ ಕಾರಣರಾದರು. ಪಾಶ್ಚಿಮಾತ್ಯ ಆಧುನಿಕ ಸಾಹಿತ್ಯವಾದ ರೊಮ್ಯಾಂಟಿಸಂ ಕನ್ನಡದಲ್ಲಿ ರಮ್ಯವಾದ ಅಥವಾ ನವೋದಯ ಸಾಹಿತ್ಯವೆಂದು ಕರೆಯಲ್ಪಟ್ಟಿದೆ. ಆದರೆ ನವೋದಯ ಪದಶ: ಅರ್ಥದೊಂದಿಗೆ ಯೋಚಿಸಿದಾಗ ನವ+ಉದಯ ನವೋದಯವಾಗಿದೆ. ಅಂದರೆ ಸಾಹಿತ್ಯದಲ್ಲಿ ಹೊಸದಾದ ರಚನೆ, ಹೊಸ ಉದಯ ಎಂದರ್ಥವಾಗುವುದು. ಆದರೆ ಕನ್ನಡ ಸಾಹಿತಿಗಳು, ವಿಮರ್ಶಕರು ಇದು ಕನ್ನಡ ಸಾಹಿತ್ಯ ರಚನೆಗೆ ಪೂರ್ವ ಸಾಹಿತ್ಯಕ್ಕಿಂತಲೂ ಹೊಸತಾಗಿದೆ ಎಂಬರ್ಥವನ್ನು ನೀಡುತ್ತಿದೆ. ಏಕೆಂದರೆ ಅಂದು ಆದಿಕವಿ ಪಂಪನಿಂದ–ಮುದ್ದಣ್ಣನ ಕಾಲದವರೆಗೂ ಸಂಸ್ಕೃತ ಭೂಹಿಷ್ಟವಾದ ಜೈನಧರ್ಮ, ವೈದಿಕಧರ್ಮ, ವೀರಶೈವಧರ್ಮ, ಶೈವಧರ್ಮ ಹೀಗೆ ಧರ್ಮಪ್ರಧಾನ, ದೈವಪ್ರಧಾನ, ಆಶ್ರಯದಾತ ರಾಜಪ್ರಧಾನ ಸಾಹಿತ್ಯ ಕೃತಿಗಳೇ ಕಂಡುಬರುತ್ತವೆ. ಆದ್ದರಿಂದ ಇದಕ್ಕೆ ಭಿನ್ನವಂತೆ, ವಚನ ಸಾಹಿತ್ಯದಲ್ಲಿ ಶಿವಪ್ರಧಾನ ಅವನನ್ನು ಆರಾಧಿಸುವ ವ್ಯಕ್ತಿಪ್ರಧಾನ, ಸಾಮಾಜಿಕ ಮೌಡ್ಯಗಳು, ಆದರ್ಶವಾದ ನಿಲುವಿನ ವಿಚಾರಗಳು ಕಂಡು ಬರುತ್ತವೆ. ದೈವತ್ವ ಪ್ರಧಾನ ವ್ಯವಸ್ಥೆಯನ್ನು ಬಹು ಹಿಂದಿನಿಂದಲೂ ಕಾಣಬಹುದು. ಇದಕ್ಕೆ ಹೊರತಾದ ಹೊಸ ಬಗೆಯ ಕಾವ್ಯ ಸಾಹಿತ್ಯದ ಹುಟ್ಟು ನವೋದಯ ಸಾಹಿತ್ಯದ ಸಂದರ್ಭದಲ್ಲಿ ಕಂಡುಬರುವುದು.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ. ಸಂಗಪ್ಪ ಪಟ್ಟೇದಕನ್ನಡಉಪನ್ಯಾಸಕರುಎಸ್.ಎಸ್.ಎಮ್.ಎಸ್. ಮಹಾವಿದ್ಯಾಲಯಅಥಣಿ

How to cite this article:
ಡಾ. ಸಂಗಪ್ಪ ಪಟ್ಟೇದ,*(2026).* **ಕನ್ನಡದಲ್ಲಿ ನವ್ಯ ಸಾಹಿತ್ಯದ ಪರಿಭಾಷೆ ಹಾಗೂ ಇತಿಹಾಸ**.*Journal of Research and Development, 18(4(II)), 21–22. https://doi.org/10.5281/zenodo.19394637*

Quick Response Code:
Website:
https://jrdrvb.org/
DOI:
10.5281/zenodo.19394637
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಇದರಂತೆ ನವೋದಯದಲ್ಲಿ ಪ್ರಯತ್ನಿಸದ, ಹೊಸ ಬಗೆಯ ಆಲೋಚನೆಗಳಿಗೆ ಮುಂದಾದವರು ನವ್ಯ ಸಾಹಿತ್ಯಕಾರರು. ಆದ್ದರಿಂದ ಇದನ್ನು ಪರಿಭಾಷೆಯದಿಂದ ನವ್ಯಸಾಹಿತ್ಯವೆಂದು ಕರೆಯಬಹುದು.

ನವೋದಯ ಸಾಹಿತ್ಯವು ಪ್ರಕೃತಿ, ಪ್ರೀತಿ, ಒಲುಮೆ, ಸೌಂದರ್ಯ ಬದುಕಿಗೆ ಆದರ್ಶವಾದ ಸಿದ್ಧಾಂತ ರೂಡಿಗೆ ಬದ್ಧವಾಯಿತು. ಆದರೆ ನವ್ಯಸಾಹಿತ್ಯದಲ್ಲಿ ಅತಿವಾಸ್ತವವಾದ(Surialism) ಹಾಗೂ ವ್ಯಕ್ತಿನಿಷ್ಠವಾದ ಅಂಶಗಳಿಗೆ ಬದ್ಧವಾದ ರಚನೆಗಳು ಕಂಡುಬರುತ್ತವೆ. ಹೀಗೆ ಪ್ರತಿಯೊಂದು ಸಾಹಿತ್ಯ ಘಟ್ಟವು ಒಂದು ತಾತ್ವಿಕ ಸಿದ್ಧಾಂತಕ್ಕೆ ಬದ್ಧವಾಗಿ, ಉಳಿದ ಸಾಹಿತ್ಯ ಘಟ್ಟಗಳಿಗಿಂತಲೂ ಭಿನ್ನವೆಂದು ಗುರುತಿಸಿಕೊಂಡಿವೆ. ಸಹೃದಯರು ನವ್ಯಸಾಹಿತ್ಯ ಕವಿಗಳು, ನವೋದಯ ಸಾಹಿತ್ಯದ ಕಾವ್ಯಗಳ ರಚನೆ ಮಾಡಿರುವುದಿಲ್ಲ ಎಂದು ಪರಿಭಾವಿಸಬಾರದು. ಏಕೆಂದರೆ ಸಾಹಿತ್ಯ ಘಟ್ಟಗಳನ್ನು ಕವಿಗಳ ವಿಷಯವಸ್ತು ಆಧರಿಸಿ ಗುರುತಿಸುತ್ತೇವೆ. ಕವಿ ಪ್ರಧಾನವಾಗುವುದಿಲ್ಲ. ಕವಿ ಏನಾದರೂ ಒಂದೇ ತತ್ವ ಬದ್ಧನಾಗಿ ಕಾವ್ಯ ರಚಿಸಿದರೆ, ಕವಿಗಳ ಹೆಸರಿನಿಂದ ಗುರುತಿಸುವುದು ಸೂಕ್ತ. ಆದರೆ ಕವಿಯು ಕಾವ್ಯ ರಚಿಸುವಲ್ಲಿ ಸ್ವತಂತ್ರನು. ಅದು ಆತನ ವೈಯಕ್ತಿಕ ಬಯಕೆ ಆಗಿರುತ್ತದೆ. ಸಾಹಿತ್ಯ ರಚನೆಯಲ್ಲಿ ಕವಿ ಎಷ್ಟು ಸ್ವತಂತ್ರ ಎನ್ನುವುದಕ್ಕೆ ಕುವೆಂಪು ಅವರ ಹೇಳಿಕೆ ಇಲ್ಲಿ ಪ್ರಧಾನವಾಗುವುದು.

ನಾನೇರುವ ಮಟ್ಟಕ್ಕೆ ನೀ ಏರಬಲ್ಲೆಯಾ?
ನಾ ಇಳಿಯುವ ಮಟ್ಟಕ್ಕೆ ನೀಳಿಯಬಲ್ಲೆಯಾ?

ಈ ಮೇಲಿನ ಮಾತು ಕವಿ ಕಾವ್ಯ ರಚನೆಯಲ್ಲಿ ಸ್ವತಂತ್ರ. ಅದು ಅವನ ವೈಯಕ್ತಿಕ ಅಭಿವ್ಯಕ್ತಿ ಸಾಹಿತ್ಯದ ಸಿದ್ಧಾಂತಕ್ಕೆ ಕವಿ ಬದ್ಧನಾಗಿರಬಹುದು ಇಲ್ಲದೆ ಇರಬಹುದು. ಆದ್ದರಿಂದ ಸಾಹಿತ್ಯ ಘಟ್ಟಗಳನ್ನು ಕವಿ ಬರೆದ ಕಾವ್ಯದ ವಿಷಯವಸ್ತು, ಸಿದ್ಧಾಂತ ಬದ್ಧತೆಯ ಮೇಲೆ ವಿಭಜಿಸಲಾಗುವುದು ಎಂದು ಸಹೃದಯರು ತಿಳಿದಿರಬೇಕು.

ಕನ್ನಡದಲ್ಲಿ ನವ್ಯ ಸಾಹಿತ್ಯದ ಇತಿಹಾಸ

ವಿ.ಕೃ.ಗೋಕಾಕರು ತಮ್ಮ **"ಸಮುದ್ರಗೀತೆಗಳು"**(1940) ಎಂಬ ಕಾವ್ಯ ಸಂಕಲನದಲ್ಲಿ **"ಕೊಡದಿರು ಶರಧಿಗೆ ಷಟ್ಪದೀಯ ದೀಕ್ಷೆಯನ್ನು"** ಎನ್ನುವ ಮೂಲಕ ಮುಕ್ತ ಛಂದಸ್ಸನ್ನು ಬಳಸಿ, ಹೊಸತನ ತರಲು ಮುಂದಾದರು. ಷಟ್ಪದಿಯ ನಿಯಮಗಳಿಗೆ ಅಂದರೆ ಹಳೆಯ ಕಾವ್ಯಕಾರರು ಹಾಕಿಕೊಟ್ಟ ಷಟ್ಪದಿಯ ಸಂಪ್ರದಾಯವನ್ನು ತೊರೆಯಬೇಕು, ಷಟ್ಪದಿಯ ನಿಯಮ ಲಕ್ಷಣಗಳನ್ನು ಯಥಾವತ್ತಾಗಿ ಅನುಸರಿಸದೇ ಅಥವಾ ಕಟುಬದ್ಧರಾಗದೆ ಹೊಸ ಛಂದಸ್ಸಿನ ಹಾದಿಯಲ್ಲಿ ಕಾವ್ಯ ರಚಿಸಬೇಕು ಎಂದು ವಿ.ಕೃ.ಗೋಕಾಕ್ ಅವರು ತಮ್ಮ **ಸಮುದ್ರಗೀತೆಗಳು** ಕಾವ್ಯದಲ್ಲಿ ತಿಳಿಸಿದ್ದಾರೆ. ಹೀಗೆ ಅವರ **ಅಭ್ಯುದಯ** 1946 ಕಾವ್ಯದಲ್ಲಿ

ಹೋಗಿ ಬರುವೆನು ನನ್ನ ಎಳೆ ಗನಸುಗಳೇ
ನಿಮ್ಮ ತಳಿರಿರ್ಗೆಂಪು ಹೂಗುಂಪು ತಂಗಾಳಿ
ಮುಗಿದು ಸಮರವನ್ನು ಸಾರಿಹುದು ಅಮರ ಶಕ್ತಿಯದೊಂದು

ಎಂದು ನವೋದಯ ಸಾಹಿತ್ಯಕ್ಕೆ ಬಿಳ್ಕೊಟ್ಟರು. ಇವರ ನವ್ಯ ಕವಿತೆಗಳು 1950 ಹೊಸ ರೀತಿಯ ಪ್ರಯೋಗಗಳಾಗಿವೆ.

ನವ್ಯ ಸಾಹಿತ್ಯದಲ್ಲಿ ಕಂಡುಬರುವ ಸಾಮಾನ್ಯ ಧೋರಣೆಗಳು

- ಸಮಕಾಲಿನ ಸಂದರ್ಭದಲ್ಲಿ ಪ್ರಜ್ಞೆ ಹಾಗೂ ಕಾಳಜಿ
- ವೈಯಕ್ತಿಕ ಅನುಭವ ಸಂವೇದನೆ ಹಾಗೂ ಅಭಿವ್ಯಕ್ತಿ
- ಭಾಷೆ ವೆಂದಗಿನ ಹೋರಾಟ ಮತ್ತು ಪ್ರಮಾಣಿಕತೆ
- ಸ್ವತಂತ್ರ ಮುಕ್ತ ಅಭಿವ್ಯಕ್ತಿಗೆ ಸೂಕ್ತ ಲಯವನ್ನು ಗುರುತಿಸಿಕೊಂಡರು

ಹೀಗೆ ಸಾಮಾನ್ಯವಾದ ಅಭಿಪ್ರಾಯಗಳನ್ನು ಹೊಂದಿದ್ದ ನವ್ಯಸಾಹಿತ್ಯಗಾರರು ಕಾಲಕ್ರಮೇಣವಾಗಿ ಅವರ ಅಭಿಪ್ರಾಯಗಳಲ್ಲಿ ಸಂಕೀರ್ಣತೆಗಳು ಕಂಡುಬಂದಿವೆ.

ಗೋಕಾಕರು ನವೋದಯ ಮಾದರಿಯನ್ನು ಪೂರ್ಣವಾಗಿ ಬಿಡದೆ ಮತ್ತು ನವ್ಯದ ಧೋರಣೆಯಲ್ಲಿ ಕಾವ್ಯ ರಚಿಸಿದರು. ಇದೇ ಮಾದರಿಯಲ್ಲಿ ಚನ್ನವೀರಕಣವಿ ಮತ್ತು ಜಿ.ಎಸ್.ಶಿವರುದ್ರಪ್ಪ ಹೊಸ ಧೋರಣೆಯ ಜೊತೆಗೆ ಸಮತ್ವದ ದಾರಿಯಲ್ಲಿ ನಡೆದರು. ಆದರೆ ಗೋಪಾಲಕೃಷ್ಣ ಅಡಿಗ ನವ್ಯ ಮಾದರಿಯಲ್ಲಿ ರಾಮಚಂದ್ರ ಶರ್ಮ, ನಾಡಿಗ ಮುಂತಾದವರು ಬರೇ ತೊಡಗಿದರು. ಮುಂದೆ ನಿಸಾರ್ ಅಹ್ಮದ್, ಚಂದ್ರಶೇಖರ್ ಕಂಬಾರ, ಚಂದ್ರಶೇಖರ ಪಾಟೀಲ, ಪಿ.ಲಂಕೇಶ, ಪೂರ್ಣಚಂದ್ರ ತೇಜಸ್ವಿ, ಚೆನ್ನಯ್ಯ, ರಾಜಗೋಪಾಲ ಮುಂತಾದವರು ನವ್ಯ ಮಾರ್ಗದಲ್ಲಿ ಸಾಹಿತ್ಯ ರಚನೆ ಆರಂಭಿಸಿದರು. ಆದರೆ ಬಹಳಷ್ಟು ಕವಿಗಳು ಗೋಕಾಕರ, ಚನ್ನವೀರ ಕಣಿವೆಯವರ ಹಾಗೂ ಶಿವರುದ್ರಪ್ಪನವರ ಕಾವ್ಯ ಮಾದರಿಯಲ್ಲಿನ ಕಾವ್ಯ ಸಾಹಿತ್ಯಕ್ಕೆ ರಚನೆಗೆ ಮುಂದಾದರು. ಮುಂದೆ ಕೆ.ವಿ.ತಿರುಮಲೇಶ, ಲಕ್ಷ್ಮೀನಾರಾಯಣ ಭಟ್ಟ, ಸೋಮಶೇಖರ ಇಮ್ರಾಪುರ, ಚನ್ನಣ್ಣ ವಾಲಿಕಾರ, ಕಾಳೇಗೌಡವ ನಾಗವಾರ, ಅರವಿಂದ ಚೊಕ್ಕಾಡಿ ಅವರ ರಚನೆಗಳಲ್ಲಿ ನವ್ಯ ಕಾವ್ಯಸಾಹಿತ್ಯ ಹೆಚ್ಚು ಸಂಕೀರ್ಣಗೊಳ್ಳುತ್ತಾ ಬಂದಿದೆ. ಶಂಕರ್ ಮುಕಾಶಿ ಪುಣೆಕರರ **ಮಾಯಿಯ ಮೂರು ಮುಖಗಳು,** ರಾಮಾನುಜನ್ ಅವರ **ಹೊಕ್ಕಳಲ್ಲಿ ಹೂವಿಲ್ಲ,** ಹೊಸ ಅಭಿಪ್ರಾಯದ ನವ್ಯ ಸಾಹಿತ್ಯ ರಚನೆ ಇದಾಗಿದೆ. ನವ್ಯ ಸಾಹಿತ್ಯ ಧೋರಣೆಯಲ್ಲಿ ಗೋಕಾಕರ **ನವ್ಯಧ್ವನಿ** ಸಂಕಲನ ಮೊದಲ ದಾಖಲೆಯಾಗಿದೆ. ಅದರಂತೆ **ಅಕ್ಷರ ಹೊಸಕಾವ್ಯ** ಪಿ ಲಂಕೇಶ್, **ಗೊಂದಲಪುರ, ಗೋಪಿ ಮತ್ತು ಗಾಂಡಲಿನ, ಏಳು ಸುತ್ತಿನ ಕೋಟೆ, ಹೆಸರಗತೆ, ಅವ್ವ, ಹಾವಾಡಿಗರ ಹುಡುಗ, ಅಂಜುಮಲ್ಲಿಗೆ, ವಠಾರ, ಗಂಡಸರು, ಕಾಲದಕೆರೆ, ಪ್ರಕೃತಿ, ಮುಕ್ತ, ಹೇಳತೇನ ಕೇಳ, ಮಾವೋತ್ಸೆತುಂಗ** ಹಲವು ಕೃತಿಗಳು ನವ್ಯಸಾಹಿತ್ಯ ಹಲವು ಧೋರಣೆಗಳ ಹಿನ್ನೆಲೆಯಲ್ಲಿ ರಚನೆಗೊಂಡಿವೆ. ಹೀಗೆ ಕಾಲದ ಗತಿಸುವಿಕೆಯೊಂದಿಗೆ ತನ್ನ ಅಸ್ತಿತ್ವ ಕಳೆದುಕೊಳ್ಳುವುದನ್ನು, ಗಮನಿಸಿದ ಕವಿಗಳು ಹೊಸ ಕ್ಷೇತ್ರ ಅಥವಾ ಮಾದರಿಗೆ ಮುಂದಾದರು. ಅದರಲ್ಲಿ ಇಂಗ್ಲಿಷ್ ಕಾವ್ಯ ಮಾರ್ಗದಿಂದ ಭಿನ್ನವಾದ ಆಫ್ರಿಕನ್, ನೀಗ್ರೋ, ರಷ್ಯನ್ ಮುಂತಾದ ಕಾವ್ಯ ರಚನಗಳು ಮಾದರಿಯಿಂದ ದಲಿತ, ವಿಪ್ಲವ, ಭಂಡಾಯ ಕಾವ್ಯ ಮಾದರಿಗಳು ಕಾಣಿಸಿಕೊಂಡವು.

ಪರಾಮರ್ಶನ ಗ್ರಂಥಗಳು

1. ಬುದ್ದಣ್ಣ ಹಿಂಗಮಿರೆ, ನವ್ಯಕಾವ್ಯ : ಹೊಸಧೋರಣೆ,ಆಧುನಿಕ ಕನ್ನಡ ಸಾಹಿತ್ಯ ರೂಪಗಳು, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, 2014
2. ಶೇಷಗಿರಿರಾವ್ ಎಲ್.ಎಸ್. ಹೊಸಗನ್ನಡ ಸಾಹಿತ್ಯಚರಿತ್ರೆ , ಅಂಕಿತಪುಸ್ತಕ, 2014
3. ರಂ.ಶ್ರೀ. ಮುಗಳಿ, ಕನ್ನಡ ಸಾಹಿತ್ಯಚರಿತ್ರೆ , ಗೀತಾಬುಕ್ ಹೌಸ್, ಮೈಸೂರು 2014
4. ತ.ಸು. ಶಾಮರಾಯ, ಹಳಗನ್ನಡ ಸಾಹಿತ್ಯಚರಿತ್ರೆ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, 2014

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಹೊರನಾಡು–ಗಡಿನಾಡ ಕನ್ನಡ ಶಾಲೆಗಳ ಸಮಸ್ಯೆ ಮತ್ತು ಸವಾಲುಗಳು

ಡಾ. ನಾಗಪ್ಪ
ಅಧ್ಯಾಪಕರು
ಸ್ನಾತಕೋತ್ತರ ಕೇಂದ್ರ, ಯಲಬುರ್ಗಾ
Email- drnagappalecture@gmail.com

Manuscript ID:
JRD -2026-180408
ISSN: 2230-9578
Volume 18
Issue 4(II)
Pp.23-25
April 2026
Submitted:05 Mar. 2026
Revised:20Mar. 2026
Accepted:05Apr.2026
Published:30 April2026

ಸಾರಲೇಖ :

ಹೊರನಾಡುಕನ್ನಡಿಗರು, ಗಡಿನಾಡಕನ್ನಡಿಗರುಇದ್ದಾರೆ. ಇವರುಕನ್ನಡಿಗರಾಗಿಇರಲಿಕ್ಕೆಒಂದು ಹೋರಾಟವನ್ನೇ ನಡೆಸಿದ್ದಾರೆ.ಬೇರೆ ರಾಜ್ಯಗಳಲ್ಲಿ ಕನ್ನಡಿಗರ ಸ್ಥಿತಿಗತಿಗಳು ತೃಪ್ತಿಕರವಾಗಿಇಲ್ಲ. ಇವರ ಮಕ್ಕಳಿಗೆ ಅಲ್ಲಿಕನ್ನಡ ಶಾಲೆಗಳಿಲ್ಲ, ವಿದ್ಯಾರ್ಥಿಗಳಿಗೆ ಅಲ್ಲಿಯ ಸರಕಾರ, ಜನರ ಬೆಂಬಲವಿಲ್ಲ. ಕೇರಳದಲ್ಲಿ ಕನ್ನಡ ಕಾರ್ಯಕ್ರಮಗಳ ನೋಟಿಸನ್ನು ಬೋರ್ಡಗಳು ಮೇಲೆ ಹಾಕಿದರೆಅದನ್ನ ಹರಿದು ಹಾಕುವಂತಹಾ ಪರಿಸ್ಥಿತಿ ಇದೆ.ಇಲ್ಲಿ ಬೇರೆ ಭಾಷಿಕರ ಮೇಲೆ ಏನಾದರೂ ಹಲ್ಲೆಯಾದರೆಅಲ್ಲಿಯಕನ್ನಡಜನಆತಂಕದಿಂದ ಬದುಕುವ ಸ್ಥಿತಿ ಇದೆ. ಅಲ್ಲಿಯ ಸರಕಾರಗಳು ಗಡಿನಾಡಕನ್ನಡಿಗರ, ಹೊರನಾಡಕನ್ನಡಿಗರ ಹಿತವನ್ನಕಾಪಾಡುವುದಿಲ್ಲ. ಕರ್ನಾಟಕದ ಸರಕಾರಕೂಡಎಷ್ಟೋ ವಿಷಯಗಳಲ್ಲಿ ತಮ್ಮನ್ನದೂರ ಇರಿಸಿದೆ ಅನ್ನುವ ವ್ಯಥೆಇವರದ್ದು. ಗಡಿನಾಡು ಹಾಗೂ ಹೊರನಾಡಕನ್ನಡಿಗರಿಗೆಆಗುತ್ತಿರುವ ಅನ್ಯಾಯಗಳ ಒಂದುಯಾದಿಯೇಇದೆ. ಅಲ್ಲಿಯ ಪ್ರತಿಭಾವಂತರನ್ನುಗುರುತಿಸದೇಇರುವುದು, ವಿದ್ಯಾರ್ಥಿಗಳ ಪ್ರವಾಸ, ಅಶಕ್ತರಿಗೆ ಮಾಶಾಸನಅಲ್ಲಿಕನ್ನಡಜಾನಪದಉತ್ಸವ, ಕವಿಗೋಷ್ಠಿ, ಉಪನ್ಯಾಸಗಳ ಏರ್ಪಡಿಸುವುದು, ಈ ಕನ್ನಡಿಗರು ಬರೆದ ಪುಸ್ತಕಗಳ ಪ್ರಕಟಣೆ, ಶಾಸ್ತ್ರೀಯ ಕನ್ನಡ ಸ್ಥಾನಮಾನದಿಂದದೊರೆಯುವ ಸೌಲಭ್ಯಗಳನ್ನ ಇವರಿಗೆ ನೀಡುವುದು. ಇಂತಹಾ ಹಲವು ಕೆಲಸಗಳು ಆಗಬೇಕಿದೆ. ಅಲ್ಲಿಯ ಸರಕಾರಗಳು ಇವರುಕನ್ನಡಿಗರುಅನ್ನುವಕಾರಣಕ್ಕೆಇವರನ್ನದೂರ ಮಾಡಿದರೆ. ಇವರುಗಡಿನಾಡಿನವರು, ಇಲ್ಲ ಹೊರನಾಡಿನವರುಅನ್ನುವಕಾರಣಕ್ಕೆ ನಮ್ಮ ಆಡಳಿತದಿಂದ ಹೊರಗೆ ಉಳಿಯುತ್ತಾರೆ.

ಒಂದು ಕಾಲಕ್ಕೆ ಕನ್ನಡ ಶಾಲೆಗಳು ಮುಂಬೈಯಲ್ಲಿ ನೂರಾರಿದ್ದವು. ಈಗಲೂ ಮುಂಬೈಯಿಯ ನಗರಪಾಲಿಕೆ ನೆರವಿನಿಂದ ೬೩ ಕನ್ನಡ ಶಾಲೆಗಳು ನಡೆಯುತ್ತಿದ್ದವು. ಆದರೆ ಭಾರತದಎಲ್ಲಾ ಪ್ರಾಂತಗಳಂತೆ ಇಲ್ಲಿಯೂಇಂಗ್ಲಿಷ್ ಶಾಲೆಗಳು ಹಬ್ಬುತ್ತಕನ್ನಡ ಶಾಲೆಗಳನ್ನು ಕಬಳಿಸುತ್ತಿವೆ. ಗೋವಾದಲ್ಲಿ ಇಂದಿಗೂ ಕನ್ನಡ ಶಾಲೆಗಳಿವೆಯಾದರೂ ಅವರಿಗೆ ಬೇಕಾದ ಪಠ್ಯಪುಸ್ತಕಗಳು ಸಿಗುತ್ತಿಲ್ಲ.ಕನ್ನಡ ಪಠ್ಯಗಳನ್ನು ಉಚಿತವಾಗಿ ಪೂರೈಸುವ ಮೂಲಕ ಅಲ್ಲಿಕನ್ನಡದ ಕಲಿಕೆ ಬತ್ತದಂತೆ ನಿಲ್ಲಿಸಬಹುದು. ಮುಂಬಯಿ ಕಾಸರಗೋಡುಕನ್ನಡಿಗರ ಪ್ರತಿನಿಧಿಗಳು ಸಾಹಿತ್ಯ ಪರಿಷತ್ತಿನಲ್ಲಿದ್ದಾರೆ. ಇದರಂತೆ ಅಕಾಡೆಮಿಗಳಲ್ಲಿಯೂ ಒಬ್ಬೊಬ್ಬರು ಸದಸ್ಯರುಇರುವುದು ಸೂಕ್ತ.ಗೋವಾಕ್ಕೂ ಒಂದು ಪ್ರಾತಿನಿಧ್ಯವಿರಲಿ.ಸಾಂಸ್ಕೃತಿಕ ಪರಂಪರೆಯ ಬೇರುಗಳ ಪಸಿಮೆ ಒಣಗದೆಇರಬೇಕಾದರೆಇಲ್ಲಿಂದಗೊಬ್ಬರ ನೀರು ಸರಬರಾಜು ನಿಲ್ಲಬಾರದು. ತೇವಇದ್ದರೆಜೀವ ಉಸಿರಾಡುತ್ತದೆ.

ಮುಖ್ಯ ಪದಗಳು : ಕನ್ನಡ, ಗಡಿನಾಡು, ಹೊರನಾಡು, ಶಾಲೆಗಳು, ಸರ್ಕಾರ, ಬೆಳಗಾವಿ, ಕಾಸರಗೋಡು, ಮಹಾರಾಷ್ಟ್ರ, ಪಠ್ಯಪುಸ್ತಕ

ಕರ್ನಾಟಕದಗತವೈಭವವನ್ನು ಹೊಗಳಿ ಹೊರಗುಳಿದ ಕನ್ನಡ ಪ್ರದೇಶಗಳನ್ನು ಕರ್ನಾಟಕಕ್ಕೆ ಸೇರಿಸಿಕೊಳ್ಳುವ ಸಾಮರ್ಥ್ಯ ನಮಗಿಲ್ಲ. ಇದನ್ನುಒಪ್ಪಿಕೊಂಡುಗಡಿನಾಡು, ಹೊರನಾಡಿನಕನ್ನಡಿಗರಕನ್ನಡದ ಹಿತರಕ್ಷಣೆ ಮಾಡಬೇಕು. ಈಗಲೂ ನೆರೆ ರಾಜ್ಯಗಳಲ್ಲಿರುವ ಕನ್ನಡ ಶಾಲೆಗಳನ್ನು ಉಳಿಸಿಕೊಳ್ಳುವ ಉಪಾಯ ಮಾಡಬೇಕು. ಅಲ್ಲಿಕನ್ನಡ ಪಠ್ಯಪುಸ್ತಕಒದಗಿಸಲುಆಯಾರಾಜ್ಯ ಸರ್ಕಾರಗಳನ್ನು ಒಪ್ಪಿಸಲೇಬೇಕು. ಆ ಕೆಲಸವನ್ನುಇಲ್ಲಿರಾಮಕೃಷ್ಣಹೆಗ್ಡೆಅವರ ಸರ್ಕಾರದಲ್ಲಿಆಂದ್ರದಅಂಜಯ್ಯಅವರ ಸರ್ಕಾರಇದ್ದಾಗಆಂಧ್ರರಾಜ್ಯದಕನ್ನಡ ಶಾಲೆಗಳಿಗೆ ಕನ್ನಡ ಪಠ್ಯ ಪುಸ್ತಕಗಳನ್ನು ಒದಗಿಸಲಾಯಿತು. ಹೇಗಾಯಿತುಎಂಬುದನ್ನುಅವರೇ ಬರೆದ ಬಳ್ಳಾರಿ ಲೋಹಿಯಾ ಪ್ರಕಾಶನ ಪ್ರಕಟಿಸಿದ "ಕರ್ನಾಟಕಏಕೀಕರಣ ಬಳ್ಳಾರಿ ಜಿಲ್ಲೆಯ ಹಿನ್ನೆಲೆಯಲ್ಲಿ" ಎಂಬ ಕಿರುಹೊತ್ತಿಗೆಯಲ್ಲಿ ವಿವರವಾಗಿ ಪ್ರಸ್ತಾಪಿಸಿದ್ದಾರೆ. ಫಿಲಿಫೈನ್‌ದೇಶದ ತಮಿಳು ಶಾಲೆಗಳಿಗೆ ತಮಿಳುನಾಡು ಸರ್ಕಾರ ತಮಿಳು ಪಠ್ಯಗಳನ್ನು ಚೆನ್ನೈನಲ್ಲಿ ಮುದ್ರಿಸಿ ಸರಬರಾಜು ಮಾಡುತ್ತಾರೆಂದರೆ ನಮಗೇಕೆ ಸಾಧ್ಯವಿಲ್ಲ? ಸರ್ಕಾರದಲ್ಲಿಕನ್ನಡಕ್ಕಾಗಿದುಡಿಯುವ ಮಿಡಿಯುವ ಮಂತ್ರಿಗಳು ಶಾಸಕರುಚಿರಂಜೀವಿ ಸಿಂಗ್, ಗೋರೆ ಮುಂತಾದ ನಿಷ್ಠಾವಂತ ಅಧಿಕಾರಿಗಳಿದ್ದರೆ ಇದುಕಷ್ಟದ ಕೆಲಸವಲ್ಲ. ಹೊರನಾಡಕನ್ನಡದ ಹಿತರಕ್ಷಣೆಗಾಗಿ ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ, ಸ್ವತಂತ್ರಉದ್ಯಾನದಲ್ಲಿ ಪ್ರದರ್ಶನ ನಡೆದರು ಪ್ರಯೋಜನಕಾರಿಯಲ್ಲ.

ವಿದೇಶಗಳಲ್ಲಿ ಕನ್ನಡ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಬೆಳೆಸಲು ನಾವು ಅಲ್ಲಿಗೆ ಹೋಗಬೇಕಾಗಿಲ್ಲ. ಅಲ್ಲಿರುವಕರ್ನಾಟಕದಿಂದ ಹೋದತೆಲುಗರು, ತೌಳರು, ತಮಿಳರು, ಕೊಡವರು ಕೆಲವು ತಮಿಳರು ಕರ್ನಾಟಕರಾಜ್ಯೋತ್ಸವವನ್ನು ಪ್ರತಿವರ್ಷ ವಿಜೃಂಭಣೆಯಿಂದಆಚರಿಸುತ್ತಾರೆ. ಅಲ್ಲಿಯೇ ಹುಟ್ಟಿ ಬೆಳೆದ ಕನ್ನಡಿಗರ ಮಕ್ಕಳು 'ಡ್ಯಾಡಿ–ಮಮ್ಮಿ' ಎನ್ನುವುದಿಲ್ಲ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ. ನಾಗಪ್ಪ ಅಧ್ಯಾಪಕರು ಸ್ನಾತಕೋತ್ತರ ಕೇಂದ್ರ, ಯಲಬುರ್ಗಾ

How to cite this article:
ಡಾ. ನಾಗಪ್ಪ,*(2026).* ಹೊರನಾಡು–ಗಡಿನಾಡಕನ್ನಡ ಶಾಲೆಗಳ ಸಮಸ್ಯೆ ಮತ್ತು ಸವಾಲುಗಳು.. *Journal of Research and Development, 18(4(II)), 23–25. https://doi.org/10.5281/zenodo.19394704*

Quick Response Code:
Website: https://jrdrvb.org/
DOI: 10.5281/zenodo.19394704

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಅವರಿಗೆ ನೀವು ಕನ್ನಡಭಿಮಾನವನ್ನು ಹೇಳಿಕೊಡಬೇಕಾಗಿಲ್ಲ. ಯಕ್ಷಗಾನ ನಾಟಕವನ್ನುಕರ್ನಾಟಕ ಸಂಗೀತವನ್ನು ಕಲಿಸಬೇಕಾಗಿಲ್ಲ. ಯುಗಾದಿ ಹಬ್ಬ, ನವರಾತ್ರಿ, ಗಣೇಶ ಚತುರ್ಥಿಗಳನ್ನು ತಪ್ಪದೆಆಚರಿಸುತ್ತಾರೆ.ಅವರಿಗೆ ನಾವು ಕನ್ನಡ ಸಂಸ್ಕೃತಿ ಪಾಠ ಕಲಿಸಬೇಕಾಗಿಲ್ಲ. ಆದ್ದರಿಂದರಾಜ್ಯ ಬೊಕ್ಕಸದಖರ್ಚಿನಿಂದಅಮೆರಿಕದಲ್ಲಿಕನ್ನಡವಾಹಕವನ್ನು ಕಳಿಸಬೇಕು.ಅದೇದುಡ್ಡಿನಿಂದಇಲ್ಲಿಯಕನ್ನಡ ಶಾಲೆಗಳನ್ನು ಕಟ್ಟಿ ಬೆಳೆಸಬೇಕ

ಮುಂಬೈ ನಗರದಲ್ಲಿ ಹಾಗೂ ಮಹಾರಾಷ್ಟ್ರದ ಬೇರೆ ನಗರಗಳಲ್ಲಿ ಕನ್ನಡಿಗರುಎಲ್ಲೆಲ್ಲಿಗಣನೀಯ ಸಂಖ್ಯೆಯಲ್ಲಿಇರುವರೋಅಲ್ಲಿಕನ್ನಡವನ್ನು ದ್ವಿತೀಯ ಭಾಷೆಯಾಗಿ ಕಲಿಸಬಹುದು.ಇನ್ನುಳಿದ ಕಡೆಗಳಲ್ಲಿ ಕನ್ನಡಿಗರುತಮ್ಮ ಶಾಲೆಗಳನ್ನು ಸ್ಥಾಪಿಸಿಕೊಂಡು ಅಲ್ಲಿಕನ್ನಡವನ್ನುಒಂದು ಭಾಷೆಯನ್ನಾಗಿ ಕಲಿಸುತ್ತಿದ್ದರೆ.ಅಂತಹ ಶಾಲೆಗಳಿಗೂ ಕೂಡ ನೆರವನ್ನು ನೀಡಬೇಕಾಗಿರುವಅವಶ್ಯಕತೆಇದೆಎನ್ನುವುದನ್ನು ಸರಕಾರ ಗಮನಿಸಬೇಕು.ಈ ಕನ್ನಡಿಗರುಇರುವ ನಗರದಲ್ಲೇ ಸಾಂಸ್ಕೃತಿಕ ಚಟುವಟಿಕೆಗಳು ಹೆಚ್ಚು ಹೆಚ್ಚಾಗಿ ನಡೆಯುವಂತೆ ಪ್ರೋತ್ಸಾಹ ಹಾಗೂ ಪುರಸ್ಕಾರಗಳನ್ನು ನೀಡಬೇಕು.ಅವರಿರುವ ಸ್ಥಳಗಳಲ್ಲಿ ಅವರು ಗ್ರಂಥಾಲಯಗಳನ್ನು ಸ್ಥಾಪಿಸಿಕೊಂಡಿದ್ದರೆ, ಗ್ರಂಥಾಲಯಗಳಿಗೆ ಪತ್ರಿಕೆ ಹಾಗೂ ಪುಸ್ತಕಗಳನ್ನು ಒದಗಿಸಿಕೊಡುವ ಕ್ರಮವನ್ನು ಕೈಗೊಳ್ಳಬೇಕು.

ಕಾಸರಗೋಡಿನಚಂದ್ರಗಿರಿ ನದಿಯಉತ್ತರಭಾಗಕರ್ನಾಟಕಕ್ಕೆ ಸೇರಬೇಕೆಂದು ಮಹಾಜನ್‌ಆಯೋಗ ಶಿಫಾರಸು ಮಾಡಿದೆ.ಇದುಕಾರ್ಯಗತವಾಗಬೇಕು ಕೇರಳದ ಕಾಸರಗೋಡು, ಮಹಾರಾಷ್ಟ್ರ, ಸೊಲ್ಲಾಪುರ, ಸಾಂಗ್ಲಿ ಮತ್ತುಆಂಧ್ರದಕರ್ನೂಲ್, ಮೆಹಬೂಬ್ನಗರ ಜಿಲ್ಲೆಗಳ ಕನ್ನಡ ಪ್ರದೇಶಗಳು ಹಾಗೂ ತಮಿಳುನಾಡಿನ ತಾಳವಾಡಿ ಕರ್ನಾಟಕಕ್ಕೆ ಸೇರಬೇಕಾಗಿದೆ.ಈಗ ಇರುವಕರ್ನಾಟಕವನ್ನು ನಾವು ನಿಜವಾದಕನ್ನಡ ನಾಡನ್ನಾಗಿ ಮಾಡುವುದು ನಮ್ಮ ಮೊದಲನೆಯಕರ್ತವ್ಯವಾಗಿದೆ.ಜೊತೆಗೆ ಗಡಿಭಾಗಗಳಲ್ಲಿ ಹೊರಗುಳಿದಿರುವ ಕನ್ನಡಿಗರು ಮತ್ತು ಹೊರನಾಡಕನ್ನಡಿಗರುತಮ್ಮಕನ್ನಡತನವನ್ನು ಉಳಿಸಿಕೊಂಡಿರುವಂತೆ ಮಾಡುವುದುಅಗತ್ಯ. ಆ ಕನ್ನಡಿಗರು ಆಡಳಿತಾತ್ಮಕವಾಗಿ ಮಾತ್ರಕರ್ನಾಟಕದ ಹೊರಗೆ ಉಳಿದಿದ್ದಾರೆ.ಆದರೆ ಭಾಷಿಕವಾಗಿ, ಸಾಂಸ್ಕೃತಿಕವಾಗಿಕರ್ನಾಟಕದಜೊತೆಗೇಇರುತ್ತಾರೆ.ಇಂಥದೊಂದು ಪರಿಸರವನ್ನು ನಾವು ನಿರ್ಮಿಸಬೇಕಾಗಿದೆ.ಕಾರ್ಯಕ್ರಮಗಳು ಇನ್ನೂ ತೀವ್ರಗೊಳ್ಳಬೇಕಿದೆ.ಗಡಿನಾಡುಕನ್ನಡಿಗರ ಮಕ್ಕಳ ಶಿಕ್ಷಣಕನ್ನಡದಲ್ಲಿ ಮುಂದುವರೆಯಲು ಸರ್ಕಾರಎಲ್ಲರೀತಿಯ ಸೌಲಭ್ಯವನ್ನುಒದಗಿಸಬೇಕು.“ಮಹಾಜನ ವರದಿ ಮರಾಠಿಗರಿಗೆ ಬೇಡವಾದರೆ ನಮಗೂ ಬೇಡ” ಎಂದುಯಾರು ಹೇಳಬಾರದು.ವರದಿ ಜಾರಿಗೆ ಬಂದರೆ ನಮ್ಮಕಾಸರಗೋಡು ನಮಗೆ ಬರುತ್ತದೆಎಂದು ಹೇಳಿದ್ದಾರೆ.ಕರ್ನಾಟಕ ಸರಕಾರ ಹಾಗೂ ಕನ್ನಡಧುರೀಣರುಒಗ್ಗಟ್ಟಾಗಿಕೇಂದ್ರ ಸರ್ಕಾರವನ್ನುಎಚ್ಚರಿಸಬೇಕು.ದಕ್ಷಿಣಕನ್ನಡದ ವಿಶಿಷ್ಟ ಕಲೆಯಾದಯಕ್ಷಗಾನದ ಮಾರ್ಗಕರ್ತರಲ್ಲಿ ಮುಖ್ಯನಾದ ಪಾರ್ತಿಸುಬ್ಬನ ನಾಡು ಕೇರಳ ಹೇಗಾದೀತು? ಕರ್ನಾಟಕವುಕಾಸರಗೋಡನ್ನು ಕೈ ಬಿಡಬಾರದು.ಕರ್ನಾಟಕದಅಪ್ಪಟಕನ್ನಡ ಸಂಸ್ಕೃತಿಕಾಸರಗೋಡಿನಲ್ಲಿಯೂಇದೆ.ಅದುತಮ್ಮದೆಂದು ಸಾಧಿಸುವಯಾವ ಸಾಕ್ಷಿ ಪುರಾವೆಗಳೂ ಕೇರಳದ ಬಳಿ ಇಲ್ಲ. ಭಾಷಾಅಲ್ಪಸಂಖ್ಯಾತರಿಗೆ ಸಂವಿಧಾನಾತ್ಮಕವಾಗಿಕಲ್ಪಿತವಾದ ಸವಲತ್ತುಗಳೂ ಕಾಸರಗೋಡುಜಿಲ್ಲಾದ್ಯಂತ ಹಾಗೂ ಕೇರಳದ ಎಲ್ಲಾಕನ್ನಡಿಗರಿಗೂ ಸಿಗಬೇಕು.ಕಾಸರಗೋಡುಜಿಲ್ಲೆಇಡಿಯಾಗಿಕನ್ನಡ ನಾಡಿನೊಂದಿಗೆಕೂಡಲಸಂಗಮವಾಗುವವರೆಗೆ ಈ ಎಲ್ಲಾ ಹಕ್ಕೊತ್ತಾಯಜೀವಂತವಾಗಿಜಾರಿಯಲ್ಲಿರಬೇಕು.

“ಬೆಳಗಾವಿಯ ಮೇಲೆ ಮಹಾರಾಷ್ಟ್ರದ ಹಕ್ಕುದಾರಿಕೆಯಾವುದೂಇಲ್ಲ. ಅದುಕರ್ನಾಟಕದ್ದೇ,“ಮರಾಠಿಜನರುಇಲ್ಲಿವರೆಗೆಕನ್ನಡವನ್ನುಕಲಿಯದೇಇದ್ದರೆಅದುಅವರತಪ್ಪು. ಅವರುಇನ್ನು ಮೇಲಾದರೂಕನ್ನಡಕಲಿತುಕನ್ನಡಜನರೊಂದಿಗೆ ಬೆರೆತು ಹೋಗಬೇಕು.ಉಭಯ ಪಕ್ಷಗಳ ಸಮ್ಮತಿಯಿಂದರಚನೆಗೊಂಡ ಮಹಾಜನಆಯೋಗದ ವರದಿಯನ್ನುಜಾರಿಗೆತರದಿರುವುದು ಸರ್ಕಾರದದೌರ್ಬಲ್ಯಕ್ಕೆ ಸಾಕ್ಷಿಯಾಗಿದೆ; ಕನ್ನಡಿಗರ ಮುಖಕ್ಕೆಸೆದ ಸವಾಲಾಗಿದೆ.ಕನ್ನಡಿಗರುತಮ್ಮತಮ್ಮ ಭಿನ್ನತೆಗಳನ್ನು ತೊರೆದು, ಸ್ವಾರ್ಥವನ್ನು ಮರೆತು, ಒಟ್ಟುಗೂಡಿ, ಧೈರ್ಯದಿಂದ ವರ್ತಿಸದಿದ್ದರೆ ಬೆಳಗಾವಿ ಕಳಚಿಹೋದಿತು.ಲೋಕಮಾನ್ಯ ಬಾಲಗಂಗಾಧರಟಿಲಕರು ಹೇಳುವಂತೆ ಮರಾಠಿಭಾಷೆ, ಪ್ರಾಕೃತಕನ್ನಡ ಭಾಷೆಗಳ ಸಂಘರ್ಷದಲ್ಲಿ ಜನಿಸಿತು.ಮೊದಲುಕನ್ನಡ ಭಾಷೆಯನ್ನೇಆಡುತ್ತಿದ್ದ ಮಹಾರಾಷ್ಟ್ರದಜನತೆ ಆಮೇಲೆ ಮರಾಠಿ ಭಾಷೆಯನ್ನು ಸ್ವೀಕರಿಸಿದರು.ಇವು ಮಾತ್ರವಲ್ಲದೆ ಬೆಳಗಾವಿಯ ಪ್ರಶ್ನೆಯನ್ನು ಪರಿಶೀಲಿಸಿದ ಎಲ್ಲಾ ಸಮಿತಿಗಳೂ ಬೆಳಗಾವಿಯು ಕರ್ನಾಟಕದ್ದೇಎನ್ನುವ ಮಾತನ್ನುರುಜುವಾತು ಪಡಿಸಿವೆ ಎಂದು ಹೇಳಿದ್ದಾರೆ.

ಕರ್ನಾಟಕದಲ್ಲಿರುವಇತರ ಭಾಷೆಗಳಾದ ತುಳು, ಕೊಡವ, ಕೊಂಕಣಿ, ಉರ್ದು, ಹಿಂದಿ, ಮರಾಠಿ, ಗುಜರಾಥಿ ಭಾಷೆಗಳ ಆಳವಾದ ಅಧ್ಯಯನವೂ ನಡೆಯಬೇಕು.ಎಲ್ಲ ಭಾಷೆಗಳವರಿಗೂ ಕನ್ನಡ ವಿಶ್ವವಿದ್ಯಾಲಯವುಅಭಿಮಾನದಕೇಂದ್ರವಾಗಬೇಕು.ಕನ್ನಡ ವಿಶ್ವವಿದ್ಯಾಲಯಕನ್ನಡಚೈತ್ಯ ಪುರುಷನ ಮಸ್ತಕವೂ ಆಗಬೇಕು; ಹೃದಯವೂ ಆಗಬೇಕು; ಕಾಣುವಕಣ್ಣು, ಮಾಡುವ ಕೈ, ಬಿತ್ತರಿಸುವ ಬಾಯಿಯಾಗಬೇಕುಎಂದು ಸಾರಿ ಹೇಳಿದ್ದಾರೆ.

ಹೊರನಾಡುಗಳಲ್ಲಿ ಮುಖ್ಯವಾಗಿಆಗಬೇಕಾದುದುಕನ್ನಡ ಶಾಲೆಗಳ ಸ್ಥಾಪನೆ. ಹೊರನಾಡುಗಳಲ್ಲಿರುವ ಕನ್ನಡ ಮಕ್ಕಳು ಮನೆಯಲ್ಲಿಕನ್ನಡ ಮಾತನಾಡುತ್ತಿದ್ದರೂಅವರಿಗೆ ಬರೆಯುವುದಕ್ಕೆಓದುವುದಕ್ಕೆ ಬಾರದು.ಜನರಲ್ಲಿಜಾಗೃತಿಯನ್ನು ಮೂಡಿಸುವದೃಷ್ಟಿಯಿಂದಒಂದು ಸರಕಾರೇತರ ಸಂಘಟನೆ ರಚನೆಗೊಳ್ಳುವುದನ್ನು ಸರ್ಕಾರವು ಪುರಸ್ಕರಿಸಬೇಕು. ಈ ಸರ್ಕಾರೇತರ ಸಂಘಟನೆ, ಕರ್ನಾಟಕದ ನೆರೆಯ ರಾಜ್ಯಗಳಲ್ಲಿ ಭಾಷಾಅಲ್ಪಸಂಖ್ಯಾತರಿಗೆ ಸಿಗಬೇಕಾದ ಸವಲತ್ತುಗಳು, ಅಲ್ಲಿಯಕನ್ನಡಜನರಿಗೆ ಸಿಗುವಂತೆ ಕ್ರಮಗಳನ್ನು ಕೈಗೊಳ್ಳುತ್ತದೆ.ಸಂಘಟನೆಗೆ ಕರ್ನಾಟಕವು ಬಹುದೊಡ್ಡರೀತಿಯಿಂದ ನೆರವು ಒದಗಿಸಿಕೊಡಬೇಕು.ಕರ್ನಾಟಕದ ಸರಕಾರಇನ್ನಾದರೂಗಟ್ಟಿ ಮನಸ್ಸು ಮಾಡಿ, ಮೇಲಿನ ವಿಷಯಗಳ ಬಗ್ಗೆ ದಿಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು.

ಗಡಿನಾಡು, ಹೊರನಾಡಿನಕನ್ನಡಿಗರಕನ್ನಡದ ಹಿತರಕ್ಷಣೆ ಮಾಡಬೇಕು.ಈಗಲೂ ನೆರೆರಾಜ್ಯಗಳಲ್ಲಿರುವ ಕನ್ನಡ ಶಾಲೆಗಳನ್ನು ಉಳಿಸಿಕೊಳ್ಳುವ ಉಪಾಯ ಮಾಡಬೇಕು.ಬೇರೆ ರಾಜ್ಯಗಳಲ್ಲಿ ಕನ್ನಡಿಗರ ಸ್ಥಿತಿಗತಿಗಳು ತೃಪ್ತಿಕರವಾಗಿಇಲ್ಲ. ಅವರ ಮಕ್ಕಳಿಗೆ ಅಲ್ಲಿಕನ್ನಡ ಶಾಲೆಗಳಿಲ್ಲ, ಅಲ್ಲಿಯ ಸರಕಾರಗಳು ಇವರುಕನ್ನಡಿಗರುಅನ್ನುವಕಾರಣಕ್ಕೆಇವರನ್ನದೂರ ಮಾಡಿದರೆ.ಇವರುಗಡಿನಾಡಿನವರು, ಇಲ್ಲ ಹೊರನಾಡಿನವರುಅನ್ನುವಕಾರಣಕ್ಕೆ ನಮ್ಮ ಆಡಳಿತದಿಂದ ಹೊರಗೆ ಉಳಿಯುತ್ತಾರೆ.ಕರ್ನಾಟಕದಿಂದ ಹೊರಗುಳಿದಗಡಿನಾಡಕನ್ನಡಿಗರ ಸಾಂಸ್ಕೃತಿಕಉನ್ನತಿಗೆ ಸ್ಪಷ್ಟವಾದ ಮತ್ತು ಬಲವಾದ ಸಾಂಸ್ಕೃತಿಕ ನೀತಿಯೊಂದನ್ನುಕರ್ನಾಟಕ ಸರಕಾರಕೂಡಲೇರೂಪಿಸಬೇಕು.ಗಡಿನಾಡಕನ್ನಡಿಗರನ್ನು ಹಾಗೂ ಹೊರನಾಡಕನ್ನಡಿಗರನ್ನುಒಂದೇ ಮಾನದಂಡದಿಂದ ಅಳೆಯುವ ಧೋರಣೆತಪ್ಪು.ಗಡಿನಾಡಕನ್ನಡಿಗರ ಸಮಸ್ಯೆಗಳಿಗೆ ಪರಿಹಾರಒದಗಿಸುವುದಕ್ಕೆಆದ್ಯತೆಕೊಡುವ ನೆಲೆಯಲ್ಲಿ ಹೊರನಾಡಕನ್ನಡಿಗರಿಗೆ ಸೂಕ್ತ ಪ್ರಾತಿನಿಧ್ಯಇರಬೇಕು.

ಒಂದು ಪ್ರಾಂತದಜನರು ಮತ್ತೊಂದು ಪ್ರಾಂತದಅಲ್ಪಸಂಖ್ಯಾತರ ಮೇಲೆ ಹಲ್ಲೆ ಮಾಡುವುದುಅವರ ಮನೆಗಳಿಗೆ ಬೆಂಕಿ ಹಚ್ಚುವುದುಇವೆಲ್ಲ ಮಾನವೀಯತೆಗೇ ವಿರೋಧ. ಕರ್ನಾಟಕಅಥವಾ ಮಹಾರಾಷ್ಟ್ರ ಸರಕಾರಗಳು ಗಡಿಅಭಿವೃದ್ಧಿಗೆಒತ್ತುಕೊಡುವುದಕ್ಕಿಂತಲೂ ಹೆಚ್ಚಾಗಿ ಗಡಿ ವಿವಾದಗಳನ್ನು ರಾಜಕೀಯ ದಾಳ ಮಾಡಿಕೊಂಡಿವೆ. ಮಧ್ಯಸ್ಥಿಕೆ ವಹಿಸಿ ಶಾಶ್ವತ ಪರಿಹಾರೋಪಾಯಗಳನ್ನು ಜಾರಿಯಲ್ಲಿತರಬೇಕಾದಕೇಂದ್ರ ಸರ್ಕಾರಕೂಡಾ ಈ ದಿಸೆಯಲ್ಲಿ ಪಕ್ಷರಾಜಕಾರಣ ಪಿಡುಗಿಗೆ ಬಲಿಯಾಗಿಕೈಚೆಲ್ಲಿ ಕುಳಿತಿದೆ ಇದುಇಲ್ಲಿಗೆಅಂತ್ಯವಾಗಬೇಕು.ಕರ್ನಾಟಕ ಸರಕಾರ ಬೆಳಗಾವಿಯಂಥ ಗಡಿಭಾಗಗಳ ವಿವಾದಗಳನ್ನು ರಾಜಕೀಯ ದಾಳವಾಗಿ ಬಳಸಿಕೊಳ್ಳುವುದನ್ನು ನಿಲ್ಲಿಸಿ ತಕ್ಷಣಅಲ್ಲಿಅಭಿವೃದ್ಧಿಪರ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕು.ಗಡಿ ಭಾಗದ ಸಮಗ್ರಅಭಿವೃದ್ಧಿಗಾಗಿಒಂದು ಸಚಿವಖಾತೆಯನ್ನು ಆರಂಭಿಸಿ ಯುದ್ಧೋಪಾದಿಯಲ್ಲಿಅಭಿವೃದ್ಧಿ ಕೆಲಸಗಳು ನಡೆಯುವಂತೆ ನೋಡಿಕೊಳ್ಳಬೇಕು.ಇವತ್ತಿಗೂ ನಮ್ಮ ಗಡಿಭಾಗಗಳಲ್ಲಿ ಸುಸಜ್ಜಿತವಾದಕನ್ನಡ ಮಾಧ್ಯಮ ಶಾಲೆಗಳು ಇಲ್ಲ. ನೆಪಕ್ಕಾಗಿ ಇದ್ದ ಶಾಲೆಗಳಲ್ಲಿ ಕನ್ನಡ ಕಲಿಸುವ ಶಿಕ್ಷಕರಿಲ್ಲ. ಗಡಿ ಭಾಗದಲ್ಲಿರಸ್ತೆ, ಆಸ್ಪತ್ರೆ, ಕುಡಿಯುವ ನೀರಿನ ಸೌಲಭ್ಯ, ಉದ್ಯೋಗ, ವಸತಿ, ಸಾಂಸ್ಕೃತಿಕಐಡೆಂಟಿಟಿ ಹೀಗೆ ಎಲ್ಲಾ ಅಂಶಗಳು ತುಂಬಾದಯನೀಯ ಸ್ಥಿತಿಯಲ್ಲಿವೆ.

ಆಕರ ಗ್ರಂಥಗಳು

೧. ಅಶೋಕಕುಮಾರರಂಜೇರೆ(ಸಂ), ೨೦೧೩, ಶಿಕ್ಷಣದಲ್ಲಿ ಭಾಷಾ ಮಾಧ್ಯಮದ ವಾಗ್ವಾದಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨. ಕರಿಭರಮಗೌಡರುಎಸ್.ಬಿ., ೨೦೧೨, ಕನ್ನಡಕಟ್ಟಿದವರ ಮಾಲೆ, ಆರ್.ಸಿ ಹಿರೇಮಠ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
೩. ಕೆರಿಮನಿ ಸಿ.ವಿ.,(ಸಂ), ೨೦೧೨, ಚೆಲುವ ಕನ್ನಡ, ಸಪ್ನ ಬುಕ್ ಹೌಸ್, ಬೆಂಗಳೂರು.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

೪. ಚಂದ್ರಶೇಖರರಾ.ನಂ., ೨೦೧೭, ಕನ್ನಡವೆನ್ನಿಜೊತೆಯಲ್ಲಿ ಬನ್ನಿ, ಸಪ್ನ ಬುಕ್ ಹೌಸ್, ಬೆಂಗಳೂರು.
೫. ಜಗದೀಶ್ ಎ.ಬಿ., ೨೦೧೦, ಕರ್ನಾಟಕದಲ್ಲಿ ಶಿಕ್ಷಣ ಮಾಧ್ಯಮ ನೀತಿ, ನಿರಂತರ ಪ್ರಕಾಶನ, ಬೆಂಗಳೂರು.
೬. ಸಿದ್ಧರಾಮಯ್ಯ ಎಸ್.ಜಿ., ೨೦೧೯, ಕನ್ನಡ ಭಾಷೆ–ಬದುಕು, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಕನ್ನಡ ಸಾಹಿತ್ಯದಲ್ಲಿ ನಾಟಕ ಪರಂಪರೆ

ಶ್ರೀ ತುಕ್ಕಪ್ಪ
ಸಹಾಯಕ ಪ್ರಾಧ್ಯಾಪಕರು ಕನ್ನಡ ವಿಭಾಗ
ಬಿಬಿಎಂಪಿ ಪ್ರಥಮ ದರ್ಜೆ ಮಹಿಳಾ ಕಾಲೇಜ

Manuscript ID:
JRD -2026-180409
ISSN: 2230-9578
Volume 18
Issue 4(II)
Pp.26-30
April 2026
Submitted:05 Mar. 2026
Revised:20Mar. 2026
Accepted:05Apr.2026
Published:30 April2026

ಸಾರಲೇಖ :

ಸೃಷ್ಟಿಕೃತನು ಜಗತ್ತನ್ನು ಸೃಷ್ಟಿ ಮಾಡುವಾಗಲೇ ಶೃಂಗಾರ ಕಲೆಯನ್ನು ಸೃಷ್ಟಿಸಿದ್ದಾನೆ. ಸೃಷ್ಟಿಯೇ ರಂಗಭೂಮಿಯಂತೆ ಇದೆ ಅಲ್ಲಿರುವ ನಿರ್ಜಿವ ಪಾತ್ರಗಳಲ್ಲಿ ಸೂರ್ಯ, ಚಂದ್ರ, ಭೂಮಿ, ನಕ್ಷತ್ರ, ಗಾಳಿ, ಜಲ ಸಜಿವ ಪಾತ್ರಗಳಾದ ಗಿಡಮರ, ಹೂ ಬಳ್ಳಿಗಳು ಮತ್ತು ಪ್ರಾಣಿ ಪಕ್ಷಿಗಳು, ಇವುಗಳ ಬದುಕಿನ ಕ್ರಮದಲ್ಲಿ ರಂಗವನ್ನು ನಾವು ಕಾಣುತ್ತೇವೆ. ದಿನನಿತ್ಯ ಬದಲಾಗುವ ಸೃಷ್ಟಿಯೊಳಗೆ ರಂಗವನ್ನು ನಾವು ಗಮನಿಸಿದರೆ ಜಗತ್ತೇ ಒಂದು ರಂಗಭೂಮಿಯಾಗಿದೆ. ಪ್ರಾಣಿಗಳಲ್ಲಿ ಮಾನವನು ಬುದ್ದಿವಂತ ಪ್ರಾಣಿಯಾಗಿದ್ದು ಆದಿ ಮಾನವನಿಂದ ಬೆಳೆದು ಬಂದ ಈ ಮನುಷ್ಯಪ್ರಾಣಿ ಮೂಲದಲ್ಲಿ ಮೂಕನಾಗಿದ್ದ, ಯಾವಾಗ ಅವನಲ್ಲಿ ಭಾಷೆಯ ಅಂಕುರವಾಯ್ತೊ ತನ್ನ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಬಂದಿದ್ದಾನೆ. ತನ್ನ ಬುದ್ದಿವಂತಿಕೆಯನ್ನು ಬಳಸಿಕೊಂಡು ಜೀವನ ಮಾಡುವಾಗ ಸಹಜವಾಗಿ ನಗು, ಅಳು, ಹಾಸ್ಯ ಇತ್ಯಾದಿ ತನ್ನ ಮನೋಲ್ಲೇಷಗಳನ್ನು ವ್ಯಕ್ತಪಡಿಸಲು ಪ್ರಾರಂಭಿಸಿದನು, ಅದನ್ನು ಅನುಕರಣೆ ಮಾಡಿ ವ್ಯಕ್ತಪಡಿಸಿದಾಗ ನಾಟಕವಾಯ್ತು. ನಾಟಕ ಮೊದಲು ಅಲಿಖಿತಾವಿಗಿದ್ದು ಭಾಷೆಯೊಂದಿಗೆ ನಾಟಕ ಮತ್ತು ಹಾಡುಗಳು ಹುಟ್ಟಿಕೊಂಡಿರುತ್ತವೆ. ಕಾಲಕ್ರಮೇಣ ಲಿಪಿಗಳು ಕಂಡು ಹಿಡಿದ ಮೇಲೆ ಕೃತಿಗಳ ರಚನೆ ಪ್ರಾರಂಭವಾಯ್ತು. ಎಲ್ಲಾ ನಾಗರಿಕತೆಗಳಿಗೆ ತವರೂರಾದ ಗ್ರೀಕ್‌ನಲ್ಲೇ ಮೊದಲು ನಾಟಕ ರಚನೆ ಮತ್ತು ರಂಗಭೂಮಿಯ ಪ್ರದರ್ಶನವಾಗಿದೆ. ಗ್ರೀಕ್ ನಾಟಕಕಾರರು ಕಾಲೈಕ್ಯ, ಕ್ರಿಯೈಕ್ಯ, ಸ್ಥಳೈಕ್ಯ ಎಂಬ ಮೂರು ಅಂಶಗಳನ್ನು ಮುಖ್ಯವಾಗಿರಿಸಿಕೊಂಡು ನಾಟಕಗಳನ್ನು ರಚನೆ ಮಾಡಿದ್ದಾರೆ. ಗ್ರೀಕ್ ರುದ್ರನಾಟಕದ ರತ್ನತ್ರೈಯರಲ್ಲಿ ಈಸ್ಕಿಲಸ್ ಮೊದಲಿಗನು. ಉಳಿದಿಬ್ಬರೆಂದರೆ ಸೊಫೋಕ್ಲಿಸ್ ಮತ್ತು ಯೂರಿಪಿಡೀಸ್. ತದನಂತರ ಜಗತ್ತಿನಾದ್ಯಂತ ಇಂದು ನಾಟಕ ರಂಗ ಕ್ಷೇತ್ರಗಳು ಬೆಳೆದು ಕಾಲಕ್ಕೆ ತಕ್ಕಂತೆ ಬದಲಾಗುತ್ತ ಬಂದಿವೆ. ಇದರಲ್ಲಿ ಭಾರತ ದೇಶದಲ್ಲಿ ಭರತನು ತನ್ನ ನಾಟ್ಯಶಾಸ್ತ್ರದಲ್ಲಿ ನಾಟಕಕ್ಕೆ ಸಂಬಂಧಿಸಿದ ವಿಚಾರಗಳನ್ನು ವ್ಯಕ್ತಪಡಿಸಿದ್ದಾನೆ. ಶೂದ್ರಕನು ಮೃಚ್ಛಕಟಿಕ, ಕಾಳಿದಾಸನ ಮೊದಲ ನಾಟಕ' 'ಮಾಲವಿಕಾಗ್ನಿ ಮಿತ್ರ' ಇವನಿಗಿಂತ ನೂರು ವರ್ಷಗಳ ಹಿಂದೆ ಜೀವಿಸಿದ್ದ, ಭಾಸನ ಕೃತಿಗಳೇ ಸಂಸ್ಕೃತದಲ್ಲಿ ಪ್ರಾಚೀನವಾದವು. ಭವಭೂತಿಯೂ ಪ್ರಾಚೀನ ನಾಟಕಕರಾನೆ. ಕರ್ನಾಟಕದ ಮೊದಲ ನಾಟಕವನ್ನು ಸಿಂಗರಾರ್ಯನ 'ಮಿತ್ರ ವಿಂದ ಗೋವಿಂದ' ನಾಟಕ ಕಂಡುಬರುತ್ತದೆ. ನಾಟಕೀಯ ಸಂಪೂರ್ಣ ಅಂಶಗಳು ಕಂಡು ಬರದಿದ್ದರು ಇದೇ ಕನ್ನಡದ ಮೊದಲ ನಾಟಕ, ನಾಟಕೀಯ ಅಂಶಗಳನ್ನು ಒಳಗೊಂಡಿರುವ ಕೃತಿ ರನ್ನನ "ಗದಾಯುದ್ಧ" ಈ ಕೃತಿ ಚಂಪೂ ಶೈಲಿಯಲ್ಲಿ ಇದ್ದರೂ, ಇದರಲ್ಲಿನ ಪಾತ್ರಗಳು ನಾಟಕದ ಪಾತ್ರಗಳಂತೆ ಅಭಿನಯಿಸಿ ಮಾತಾಡಿದ ಹಾಗೆ ಭಾಸವಾಗುತ್ತದೆ. ಹೀಗೆ ರಂಗಭೂಮಿಗೆ ಜಗತ್ತಿನಿಂದ ನಮ್ಮ ಕರ್ನಾಟಕದವರೆಗೆ ಅದರ ವಿಸ್ತಾರ ವಿಸ್ತೀರ್ಣ ವಿಶಾಲವಾಗಿದ್ದರು ನಾಟಕ ರಂಗಭೂಮಿ ಇಂದು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿರುವುದು ಶೋಚನೀಯವಾಗಿದೆ. ಇಂದು ನಾವು ನಾಟಕ ರಂಗಭೂಮಿಯನ್ನು ಉಳಿಸಿಕೊಳ್ಳಲು ಹೊಸಹೊಸ ತಂತ್ರಗಳನ್ನು ಅಳವಡಿಸಿಕೊಂಡು ಕೃತಿಗಳನ್ನು ರಚಿಸಿ ರಂಗಪ್ರಯೋಗಗಳ ಅವಶ್ಯಕತೆ ಇದೆ.

ರಂಗಭೂಮಿಯ ಪರಿಕಲ್ಪನೆ

ಪ್ರಾಚೀನ ಪರಂಪರೆಯನ್ನು ಹೊಂದಿರುವ ರಂಗಭೂಮಿಯು ಸಂಕೀರ್ಣ ಕಲೆಯಾಗಿರುತ್ತದೆ. ಈ ಕಲೆಯು ಓದದೆ ಇರುವವರಿಗೆ ನಾಟಕಕಾರನ ವಿಚಾರಗಳನ್ನು ತಿಳಿಸುತ್ತದೆ. ಸಾಹಿತ್ಯದ ಎಲ್ಲಾ ಪ್ರಕಾರಗಳು ಅಕ್ಷರ ಬಲ್ಲವರು ಮಾತ್ರ ಓದಿ ತಿಳಿದುಕೊಳ್ಳುತ್ತಾರೆ. ಆದರೆ ಇದರಲ್ಲಿ ತಿಳಿಯದೆ ಇರುವವರು ಪಾತ್ರಗಳ ನೈಜ್ಯ ಸೃಷ್ಟಿಯನ್ನು ಅನುಕರಿಸಿ ತೊರಿಸುವುದರಿಂದ ದೃಶಾವಳಿಗಳ ಮೂಲಕ ಪ್ರತಿಯೊಬ್ಬರಿಗೂ ಇದು ಅರಿವು ಮೂಡಿಸುವಂತೆ ಮಾಡುತ್ತದೆ. ದೇಶದ ಮತ್ತು ಸಾಮಾಜಿಕ ಅಂಕುಡೊಂಕುಗಳನ್ನು ತಿದ್ದುವ, ಆನಂದವನ್ನು ಕೊಡುವ ಹೊಸ ಕ್ರಾಂತಿಯನ್ನು ಮಾಡುವಂಥ ಜನಜಾಗೃತಿ ಮೂಡಿಸುವ ಎಚ್ಚರಿಸುವ ಕೆಲಸ ರಂಗಭೂಮಿಗೆ ಇರುವುದರಿಂದ ಅದು ಚಲನಚಿತ್ರಕ್ಕೆ ಹೋಲಿಸದರೆ ಮಿತವಾದ ಖರ್ಚಿನಲ್ಲಿ ನೋಡುಗರಿಗೆ ತಲುಪಿಸುವ ಕೆಲಸ ಮಾಡುತ್ತದೆ. ಈ ಕರಾಣದಿಂದ ರಂಗಭೂಮಿಯನ್ನು ಇಂದಿನ ಮೊಬೈಲ್ ಜನಾಂಗದಲ್ಲಿ ರಂಗನಾವಿನ್ಯಗೊಳಿಸಿಕೊಂಡು ಉಳಿಸಿಕೊಳ್ಳಲು ಯುವಪೀಳಿಗೆಯನ್ನು ಸೆಳೆದು ನೋಡುಗರನ್ನಾಗಲಿ, ಕೃತಿ ರಚನೆ ಮಾಡುವವರನ್ನಾಗಲಿ ಪಾತ್ರಗಳನು ಮಾಡುವವರನ್ನಾಗಲಿ ಸೆಳೆದುಕೊಂಡು ಅವರನ್ನು ನಾವು ಇಂದಿನ ವಾಸ್ತವತೆಯ ಮೇಲೆ ಮುಂದಿನ ಭವಿಷ್ಯಕ್ಕಾಗಿ ಸಮಾಜವನ್ನು ಅಣಿಗೊಳಿಸುವ ಬಹುದೊಡ್ಡ ಜವಾಬ್ದಾರಿ ರಂಗಭೂಮಿಗಿದೆ. ನಾಟಕ ಮತ್ತು ರಂಗಭೂಮಿಯನ್ನು ತಾತ್ಸರದಿಂದ ನೋಡುವವರು ಇದ್ದಾರೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ತುಕ್ಕಪ್ಪ ,ಸಹಾಯಕ ಪ್ರಾಧ್ಯಾಪಕರು ಕನ್ನಡ ವಿಭಾಗಬಿಬಿಎಂಪಿ ಪ್ರಥಮ ದರ್ಜೆ ಮಹಿಳಾ ಕಾಲೇಜ

How to cite this article:
ತುಕ್ಕಪ್ಪ, *(2026).* ಕನ್ನಡ ಸಾಹಿತ್ಯದಲ್ಲಿ ನಾಟಕ ಪರಂಪರೆ.. *Journal of Research and Development, 18(4(II)), 26–30. https://doi.org/10.5281/zenodo.19394731*
.

Quick Response Code:
Website: https://jrdrvb.org/
DOI: 10.5281/zenodo.19394731
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಅದರ ಆಳವನ್ನು ಅರಿತರೆ ಮಹತ್ವವನ್ನು ನಾವು ಇನ್ನು ಅರಿತುಕೊಳ್ಳಬೇಕು.ಸ್ವಾತಂತ್ರಪೂರ್ವದಲ್ಲಿ ಬಂದ ನಾಟಕಗಳಾಗಲಿ ಮತ್ತು ಸ್ವಾತಂತ್ರ ಪಡೆಯುವಲ್ಲಿ ರಂಗಭೂಮಿಯ ಪಾತ್ರವನ್ನು ಹೇಳತಿರದು ಇದರಲ್ಲಿ ಏಣಗಿಬಾಳಪ್ಪನವರ ಕೊಡುಗೆಯನ್ನು ಸ್ಮರಿಸಲೇಬೇಕು.ಚಲನಚಿತ್ರದಲ್ಲಿ ಪಾತ್ರ ಮಾಡುವವರು ನೇರವಾಗಿ ಚಿತ್ರೀಕರಣಕ್ಕೆ ಬಂದು ನಿಂತಿರುತ್ತಾರೆ.ರಂಗಭೂಮಿಯಲ್ಲಿ ತೊಡಗಿಸಿಕೊಂಡವರು ಚಲನಚಿತ್ರದಲಿ ಅಭಿನಯಿಸಿದರೆ ಪರಿಪೂರ್ಣವಾದ ಅಭಿನಯ ಬರುತ್ತದೆ ಇದು ಇಂದಿನ ಕಲಾವಿದರು ಅರಿಯುತ್ತಿಲ್ಲ. ಡಾ.ರಾಜಕುಮಾರವರು ದೊಡ್ಡ ಅಭಿನಯಗಾರರಾಗಿ ಬಂದ ಬುನಾದಿ ರಂಗಭೂಮಿಯೇ! ಎಷ್ಟೋ ಜನ ಕಲಾವಿದರು ರಂಗಭೂಮಿಯಿಂದ ಬಂದಿರುತ್ತಾರೆ. ನೇರವಾಗಿ ಚಲನಚಿತ್ರಗಳಲ್ಲಿ ಭಿನಯಿಸುವ ಕಲಾವಿದನಿಗೂ ರಂಗಭೂಮಿಯಲ್ಲಿ ನಾಟಕಗಳ ಮೂಲಕ ಅಭಿನಯಿಸುತ್ತಾ ಬಂದಿರುವ ಕಲಾವಿದನು ರಂಗಭೂಮಿಯ ವಾತವರಣ ಹಲವು ರೀತಿಯ ಅನುಭವಗಳು ಪಡೆದಿರುತ್ತಾನೆ. ಮುಂದೆ ಎಂಥಾ ಸಮಸ್ಯೆಗಳು ಬಂದರು ಆತನು ಹಿಂಜರಿಯುವುದಿಲ್ಲ ಎದೆಗೊಟ್ಟು ಮುನ್ನುಗ್ಗುವ ಸಾಹಸದ ಮೆಟ್ಟಿಲನ್ನು ಏರುವಲ್ಲಿ ಯಶಸ್ವಿಯಾಗುತ್ತಾನೆ. ಸಮಾಜದ ಅವ್ಯವಸ್ಥೆಯನ್ನು ಸರಿಪಡಿಸಲು ಕ್ರಾಂತಿಯುತವಾದ ಬದಲಾವಣೆಗೆ, ಜಾಗೃತಿ ಮೂಡಿಸಲು ರಂಗಭೂಮಿಯ ಅವಶ್ಯಕತೆ ಇರುವುದರಿಂದ ರಂಗಭೂಮಿ, ನಾಟಕ, ನಿರ್ದೇಶಕ, ಅಭಿನಯಗಾರನನ್ನು ಉಳಿಸಿಕೊಳ್ಳುವ ಜವ್ದಾರಿ ನಮ್ಮೆಲ್ಲರ ಮೇಲಿದೆ.

ನಾಟಕ ರಚನೆಕಾರನು ತಾನು ರಚಿಸುವ ನಾಟಕಕ್ಕೆ ಹಲವು ಮಗ್ಗುಲುಗಳಲ್ಲಿ ಯೋಚಿಸಬೇಕಾಗುತ್ತದೆ.ನಾಟಕಗಳು ಓದುಗರನ್ನು ಓದುತ್ತಾ ತನ್ನ ಮನೋರಂಗದಲ್ಲಿ ನಾಟಕದ ಎಲ್ಲಾ ಪಾತ್ರಗಳಾಗಿ ಕಾಲ್ಪನಿಕ ರಂಗಭೂಮಿಯನ್ನು ಸೃಷ್ಟಿಸಿ, ರಂಗದ ಮೇಲೆ ಪಾತ್ರಗಳಾಗಿ ಸಂಭಾಷಣೆ ಮಾಡುತ್ತಾ, ಕುಣಿಯುತ್ತಾ ಸೃಷ್ಟಿ ಮಾಡಿದಾಗ ಮಾತ್ರ ಪರಿಪೂರ್ಣವಾದ ನಾಟಕವಾಗಿ ಹೊರಗೆ ಬರುತ್ತದೆ.ನಾಟಕ ಮಾಡಲು ಇದು ರಂಗಯೋಗ್ಯವಾಗಿದೇಯೇ ನಿರ್ದೇಶಕನಿಗೆ ಸಹಾಯಕವಾಗುತ್ತದೆಯೇ ಎಂದು ಯೋಚಿಸಬೇಕಾಗುತ್ತದೆ.ಇದರಲ್ಲಿ ನಾಟಕಕಾರನು ತನ್ನ ಪಾಡಿಗೆ ತಾನು ಬರೆದರು, ನಿರ್ದೇಶಕನಿಗೆ ಸ್ವಾತಂತ್ರವನ್ನು ಕೊಡುವವನಾಗಿರಬೆಕು.ಜಟಿಲತೆಯನ್ನು ಸೃಷ್ಟಿ ಮಾಡಬಾರದು ಇಲ್ಲಿ ಓದುಗ ನಾಟಕ ಮತ್ತು ರಂಗಪ್ರಯೋಗ ನಾಟಕಗಳನ್ನು ನಾವು ರಚನೆ ಮಾಡುವಲ್ಲಿ ಅವನ ಮನಸ್ಥಿತಿಯ ಮೇಲೆ ಅವಲಂಬಿಸಿರುತ್ತದೆ. ರಾಷ್ಟ್ರಕವಿ ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಮತ್ತು 'ಶ್ರೀ ರಾಮಾಯಣ ದರ್ಶನಂ' ಮಹಾಕೃತಿಗಳನ್ನು ನವೀನ ಮಾದರಿಯಲ್ಲಿ ಪ್ರಯೋಗೊಳ್ಳುವಂತೆ ಮಾಡಿದ ಬುದ್ದಿವಂತ ಸೃಜನಶೀಲ ನಿರ್ದೇಶಕರು ನಮ್ಮಲ್ಲಿ ಇದ್ದಾರೆ.ನಾಟಕವನ್ನು ಇನ್ನು ಹೊಸ ರೀತಿಯಲ್ಲಿ ಕೊಂಡೊಯ್ಯಬೇಕು ಇನ್ನು ಅನೇಕ ವಿಚಾರಗಳು ನಾಟಕದಲ್ಲಿ ಇವೆ ನಾಟಕ ರಚನೆಕಾರನ್ನು ಅವುಗಳನ್ನು ಓದಬೇಕು. ಹಳೆ ಬೇರಿನ ಮೇಲೆ ಹೊಸ ಚಿಗುರನ್ನು ಆತನು ಸೃಷ್ಟಿ ಮಾಡಬೇಕು. ಆತನು ಪ್ರಚಲಿತ ಘಟನೆಗಳನ್ನು ತಿಳಿದುಕೊಳ್ಳುವವನಾಗಿರಬೇಕು.ಪರಂಪರೆಯನ್ನು ಅರಿತು ವಾಸ್ತವಿಕತೆಯಲ್ಲಿ ಹೊಸ ಸೃಷ್ಟಿಯನ್ನು ನಾಟಕಕಾರ, ನಿರ್ದೇಶಕ ಇಬ್ಬರು ಮಾಡಬೇಕಾಗಿದೆ.

ಹೊಸ ತಲೆಮಾರಿನ ಬಿಕ್ಕಟ್ಟುಗಳು:

21 ಶತಮಾನದ ಹೊಸ ತಲೆಮಾರಿನ ಬಿಕ್ಕಟ್ಟುಗಳು ನಾಟಕಕಾರನನ್ನು ಪ್ರಭಾವಿಸುತ್ತವೆ. ಹೊಸ ತಲೆಮಾರಿನ ನಾಟಕ ರಚನೆಗಾರರ ಮನಸುಗಳಲ್ಲಿ ಧಾರ್ಮಿಕ ಸಂಘರ್ಷಗಳು, ಹಿಂದೂ, ಮುಸ್ಲಿಂ ನಡುವೆ ನಡೆಯುವ ಕೋಮುಗಲಭೆ ಸಂಘರ್ಷಗಳ ಭಾವನೆಗಳು ನಾಟಕಗಳಲ್ಲಿ ಕಂಡು ಬರುತ್ತವೆ. ಈ ಶತಮಾನದ ನಾಟಕಕಾರರಲ್ಲಿ ಹಿಂದಿನ ಶತಮಾನದ ನಾಟಕ ವಿಜ್ಞಾನ ತಂತ್ರಜ್ಞಾನ ಜಾಗತಿಕ ಪ್ರಭಾವಗಳು ಹೆಚ್ಚಾದಂತೆ ಸಾಮಾಜಿಕ ಮಾಧ್ಯಮಗಳ ಪ್ರಭಾವದೊಳಗಡೆ ನಾಟಕಕಾರರು ಚಿಂತಿಸುವ ಯೋಚಿಸುವ ಕ್ರಮ ವಿಭಿನ್ನವಾಗಿದೆ. ಈ ನಾಟಕಕಾರರ ರಚನೆಗಳು ತಮ್ಮ ರಚನೆಗಳಲ್ಲಿ ಪರಿಸರ ಪ್ರಜ್ಞೆ, ಮಹಿಳಾ ನಾಟಕಕಾರರು ಮಹಿಳಾ ಪರವಾದ ಸಂವೇದನೆಗಳು, ದಲಿತ ಬಂಡಾಯ ನಾಟಕಾರರು ಅಸ್ಮಿತೆಯ ನೆಲೆಗಳು, ಮತ್ತು ವೈಚಾರಿಕ ಪ್ರಜ್ಞೆಯಲ್ಲಿ ವೈಜ್ಞಾನಿಕ ನೆಲೆಗಳ ಹಿನ್ನೆಲೆಯಲ್ಲಿ ನಾಟಕಗಳು ರಚನೆಯಾಗಿದ್ದು ಈ ಶತಮಾನದಲ್ಲಿ ಕಂಡುಬರುತ್ತವೆ. ತಮ್ಮ ತಮ್ಮ ಪ್ರಾದೇಶಿಕ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ತಮ್ಮ ತಮ್ಮ ನಾಡಿನ ಗ್ರಾಮಭೂಯಷ್ಟವಾದ ಭಾಷೆಗಳನ್ನು ಬಳಸಿ, ನಾಟಕಗಳು ರಚನೆ ಮಾಡಿದ್ದಾರೆ. ಭಯೋತ್ಪಾದನೆ ಜಾಗತೀಕರಣ ಉಕ್ರೇನ್–ರಷ್ಯಾ ಯುದ್ಧದ ಬಿಕ್ಕಟ್ಟು, ಕರೋನ ಮಹಾಮರಿ ಕಾಯಿಲೆಯಿಂದ ತತ್ತರಗೊಂಡ ಸಮಾಜದ ವಿಷಯಗಳು ಸಹ ನಾಟಕಗಳಲ್ಲಿ ಪ್ರಸ್ತಾಪವಾಗಿವೆ. ಪ್ರಸ್ತುತ ಸಮಾಜಕ್ಕೆ ಸಂಬಂಧಿಸಿದ ವಾಸ್ತವ ನೆಲೆಗಟ್ಟಿನ ಮೇಲೆ ನಾಟಕಗಳು ರಚನೆ ಮಾಡಿದ ನಾಟಕಾರರು ಕೆಲವರಾದರೆ, ಇನ್ನೂ ಕೆಲವು ನಾಟಕಕಾರರು ಪುರಾಣ ಐತಿಹಾಸಿಕ ಅಂಶಗಳನ್ನು ಇಟ್ಟುಕೊಂಡು ನಾಟಕಗಳು ರಚನೆ ಮಾಡಿದ್ದಾರೆ. ಕೆಲವು ಅನುವಾದಿತ ನಾಟಕಗಳಾಗಿ ಕೆಲವು ಲೇಖನ ಮತ್ತು ಕಥೆಗಳ ಆಧಾರಿತ ನಾಟಕಗಳಾಗಿ ಈ ಶತಮಾನದಲ್ಲಿ ಹೊರಬಂದಿವೆ. ಸಾಕಷ್ಟು ನಾಟಕಕಾರರು ವಾಸ್ತವ ಮತ್ತು ಪ್ರಚಲಿತ ವಿದ್ಯಮಾನಗಳ ಆದರದ ಮೇಲೆ ನಾಟಕಗಳು ರಚನೆ ಮಾಡಿರುವ ನೆಲೆಗಳು ಕಂಡುಬರುತ್ತವೆ. ಹೆಚ್ಚು ಪ್ರಭಾವ ಗೊಂಡಿರುವಂಥ ಅಂಶಗಳೆಂದರೆ ಕೋಮು ಗಲಭೆ, ಕೋಮು ಸಾಮರಸ್ಯ, ಸೌಹಾರ್ದತೆ ಸ್ತ್ರೀ ಪರವಾದ ಮತ್ತು ವಿರುದ್ಧವಾದ ಘಟನೆಗಳು, ಅತ್ಯಾಚಾರ, ವರದಕ್ಷಣೆ, ಮಹಿಳಾ ಸಂವೇದನೆಯ ವಿವಿಧ ಮುಖಗಳ ಸಮಸ್ಯೆಗಳು ನಾಟಕಗಳಲ್ಲಿ ಕಂಡು ಬರುತ್ತವೆ. ಹಾಗೆ ಮಹಿಳೆಯರ ನೋವುಗಳು ಈ ನಾಟಕಗಳಲ್ಲಿ ಕಂಡುಬರುವುದಲ್ಲದೆ ಸಮಾಜದ ವಿಡಂಬನೆಯಲ್ಲಿ ತೊಡಗಿರುವಂತಹ ವಿಡಂಬನಕಾರರು ಪ್ರಸ್ತುತ ವ್ಯವಸ್ಥೆಯನ್ನು ವಿನಂಬಿಸಿದ್ದಾರೆ. ಸಮಾಜದ ಸಾಧನೆ ಮಾಡಿರುವಂತಹ ಸಾಲುಮರದ ತಿಮ್ಮಕ್ಕ ಅವರ ಕುರಿತು ಡಾ.ಬೆಲೂರು ರಘುನಂದನರವರು ನಾಟಕ ರಚನೆ ಮಾಡಿದ್ದಾರೆ. 20 ಮತ್ತು 21ನೇ ಶತಮಾನದ ಆದರ್ಶ ಪುರುಷರ ಕಥೆಗಳನ್ನಾಧರಿಸಿ ನಾಟಕಗಳು ರಚನೆಯಾಗಿವೆ. ಸಮಾಜದಲ್ಲಿ ಕಣ್ಣಿಗೆ ಕಾಣದಂತೆ ಮಾಯವಾಗಿ ಹೋಗಿದ ಮಂಗಳಮುಖಿಯರು ಮತ್ತು ಜೋಗತಿಯರ ಪ್ರಸಂಗಗಳು ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಈ ಕುರಿತು ನಾಟಕಗಳು ರಚನೆಯಾಗಿ ರಂಗ ಪ್ರಯೋಗವಾಗಿವೆ. ಸಾಕಷ್ಟು ನಾಟಕಕಾರರು ತಮ್ಮ ಪ್ರಾದೇಶಿಕ ವಾತಾವರಣ ಸಂಸ್ಕೃತಿ ಪರಿಸರ ಅಲ್ಲಿನ ಬಿಕ್ಕಟ್ಟುಗಳನ್ನು ಹೆಚ್ಚು ಹೆಚ್ಚು ತಮ್ಮ ನಾಟಗಳಲ್ಲಿ ದೃಶ್ಯಗಳಾಗಿ ಪ್ರಸ್ತಾಪಗೊಂಡಿರೋದು ಕಾಣುತ್ತಿವೆ. ಒಟ್ಟಾರೆಯಾಗಿ 21ನೇ ಶತಮಾನದ ಮೊಬೈಲ್ ಮತ್ತು ಮಾಹಿತಿ ತಂತ್ರಜ್ಞಾನದಿಂದ ಬದಲಾಗುತ್ತಿರುವ ಸಾಮಾಜಿಕ ಅಂಶಗಳು ಹೊಸ ತಲೆಮರಿನ ಬಿಕ್ಕಟ್ಟುಗಳಲ್ಲಿ ಪ್ರಸ್ತಾಪಗೊಂಡಿದಾವೆ.

ಹೊಸ ತಲೆಮಾರಿನ ನಾಟಕಗಳಲ್ಲಿ ಸಾಮಾಜಿಕ ಪ್ರಜ್ಞೆ ವಿಭಿನ್ನವಾಗಿ ಕಂಡು ಬರುತ್ತದೆ. ವಿಭಕ್ತ ಕುಟುಂಬ, ಅನೈತಿಕ ಸಂಬಂಧ, ವಿವಾಹ ವಿಚ್ಛೇದನ, ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಮುಂತಾದ ವಿಷಯಗಳ ಮೇಲೆ ನಾಟಕಕಾರರು ಚಿಂತಿಸುತ್ತಾರೆ.ಎಸ್ ಸುರೇಂದ್ರನಾಥ್ ರಚನೆಯ ಬೀದಿಯೊಳಗೊಂಡು ಮನೆಯ ಮಾಡಿ ನಾಟಕದಲ್ಲಿ ಗಣಪತಿ ಉತ್ಸವವನ್ನು ನೋಡಬೇಕು ಎಂಬ ಸುಕನ್ಯಾಳ ಹಂಬಲವಾಗಿರುತ್ತದೆ.ಎಲ್ಲಾ ಬಾಗಿಲು ಕಿಡಕಿಗಳು ಮುಚ್ಚು ಎಂದು ತಾಕಿತ್ತು ಮಾಡುತ್ತಾನೆ. ಅವಳ ಪತಿ ಶ್ರೀಪಾದ.ಗಣಪತಿ ಮೆರವಣಿಗೆ ಅತ್ಯಂತ ವಿಜ್ರಂಭಣೆಯಿಂದ ನಡೆಯುತ್ತದೆ ಆದರೆ ಈ ವಿಜೃಂಭಣೆಯನ್ನು ಮನೆಯೊಳಗೆ ಕಲ್ಪಸಿಕೊಂಡು ನೋಡಲಾರದೆ ತಳಮಳಗಳೊಳಗೆ ಸುಕನ್ಯಾ ಇರುತ್ತಾಳೆ.ಶ್ರೀಪಾದ ಹೇಳಿದಂತೆ ಕಿಡಕಿಗಳು ಮುಚ್ಚುತ್ತಾಳೆ.ಗಂಡಿನ ಅಂಕೆಯಂತೆ ನಡೆದುಕೊಂಡು ಹೋಗುವುದು ಕಂಡು ಬರುತ್ತದೆ.ಶತಶತಮಾನಗಳಿಂದ ಹೆಣ್ಣನ್ನು ಪುರುಷನ ಅಡಿಯಾಳಾಗಿ ಶೋಷಣೆ ಮಾಡಿರುವುದನ್ನು ಇಂದಿಗೂ ಮುಖಗಳು ಬದಲಾಗಿ ಹೆಣ್ಣಿನ ಶೋಷಣೆ ನಡೆಯುತ್ತಿದೆ.ಇಂದು ಪ್ರಜ್ಞಾವಂತ ಸಮಸಮಾಜ ನಿರ್ಮಾಣದ ನಾಟಕಕಾರರು ಪುರುಷರಾಗಿದ್ದು ಹೆಣ್ಣಿನ ಪರವಾಗಿ ನಿಂತು ಸ್ತ್ರೀ ಸಬಲೀಕರಣಕ್ಕಾಗಿ ನಾಟಕಗಳು ರಚನೆಯಾಗಿರುವುದನ್ನು ಸ್ತ್ರೀ ಪ್ರದಾನವಾದ ಪಾತ್ರಗಳು ನಿರ್ಮಿತವಾದ ನಾಟಕಗಳು ಎಸ್. ಸುರೇಂದ್ರನಾಥ್, ಜಿತುರೇಶಾ, ಬೇಲೂರು ರುಘನಂದನ್, ಡಾ.ನಟರಾಜ್ ತಲಘಟ್ಟಪುರ, ಶಿವಕುಮಾರ ಮಾವಲಿ, ಸಂತೋಷ ನಾಯಕ್ ನಾಟಕಗಳಲ್ಲಿ ಕಂಡು ಬರುತ್ತವೆ.

ರಾಜಕೀಯ ಪ್ರತಿರೋಧದ ಬಿಕ್ಕಟ್ಟುಗಳು

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಹೊಸ ತಲೆಮಾರಿನ ಕನ್ನಡ ನಾಟಕಗಳು ಗಮನಿಸಿದಾಗ ಪ್ರಸ್ತುತ ರಾಜಕೀಯ ವ್ಯವಸ್ಥೆಯಿಂದ ಕೊರಗಿರುವ ಅಂಶಗಳು ಕಂಡುಬರುತ್ತವೆ. ರಾಜಕೀಯದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಒಳಸಂಚು, ಸುಪಾರಿ ಕೊಲೆ ಅರ್ಥವಿಲ್ಲದ ಯೋಜನೆಗಳು, ಪ್ರಗತಿಪರ ರಾಜ್ಯ ರಾಷ್ಟ್ರವನ್ನಾಗಿ ನಿರ್ಮಾಣ ಮಾಡಲು ಬೇಕಾಗಿರುವಂತಹ ಅಭಿವೃದ್ಧಿ ಕಾರ್ಯಗಳ ಕಡೆಗೆ ಸರ್ಕಾರ ಕ್ರಮ ಕೈಗೊಳ್ಳದೆ ಅರ್ಥಹೀನವಾದ ಅಭಿವೃದ್ಧಿ ಕಾರ್ಯಗಳ ಕಡೆಗೆ ಸರಕಾರಗಳು ಕೈಗೊಳ್ಳುತ್ತಿರುವುದನ್ನು ಪ್ರಜ್ಞಾವಂತ ನಾಟಕ ಯುವ ಸಮುದಾಯ ಈ ಮೇಲಿನ ಅಂಶಗಳನ್ನು ವಿರೋಧಿಸುವುದು ಕಂಡುಬರುತ್ತದೆ. ಶಿವಕುಮಾರ್ ಮಾವಲಿ 'ಸುಪಾರಿ ಕೊಲೆ' ನಾಟಕದಲ್ಲಿ ಚಿತ್ರಿಸಿದ್ದಾರೆ. ಒಂದು ಕಾನೂನಾತ್ಮಕ ಕೊಲೆ, ಕಾನೂನನ್ನು ಸರ್ಕಾರವೇ ಜಾರಿಗೆ ತಂದಿದ್ದು, ಯಾರಾದರೂ ಕೊಲೆ ಮಾಡುವವರು ಕಾನೂನಾತ್ಮಕವಾಗಿ ಕೊಲೆ ಮಾಡಬಹುದೆಂಬ ಒಂದು ಹೊಸ ಕಾಯ್ದೆಯನ್ನು ಜಾರಿಗೆ ತರುತ್ತದೆ. ಈ ಕಾಯ್ದೆಯಿಂದ ಅರ್ಜಿಯನ್ನು ಸಲ್ಲಿಸಬಹುದು ಯಾರು ಯಾರಿಗೆ ಕೊಲೆ ಮಾಡುತ್ತಾರೆಂಬ ವರದಿಯನ್ನು ಸರ್ಕಾರಕ್ಕೆ ಅರ್ಜಿ ಸಲ್ಲಿಸಿ, ಕೊಲೆ ಮಾಡಬೇಕೆಂಬ ನಿರ್ಧಾರಕ್ಕೆ ಬರುತ್ತಾರೆ.ಕೊನೆಯಲ್ಲಿ ಸಾಕಷ್ಟು ಜನ ಅರ್ಜಿಗಳನ್ನು ಹಾಕಿ ಅರ್ಜಿ ಸಲ್ಲಿಸಲು ಸಾಲು ಸಾಲು ಯುವಕರು ನಿಂತಿರುತ್ತಾರೆ.ಅದರಲ್ಲಿ ಮುಖ್ಯಮಂತ್ರಿಯನ್ನೇ ಕೊಲೆ ಮಾಡಬೇಕೆಂಬ ಅರ್ಜಿ ಸಲ್ಲಿಸುವವರು ಹೆಚ್ಚು ಜನ ಇದ್ದಾರೆ.ನ್ಯಾಯಾಧೀಶರನ್ನು ಸರ್ಕಾರಿ ಅಧಿಕಾರಿಗಳನ್ನು ಕೊಲೆ ಮಾಡಲು ಎಷ್ಟೋ ಜನ ಯುವಕರು ಅರ್ಜಿ ಸಲ್ಲಿಸಲು ನಿಂತಿರುತ್ತಾರೆ.ಅದರಲ್ಲಿ ಒಂದು ಕಾನೂನಾತ್ಮಕವಾದ ಕೊಲೆಯನ್ನು ಮಾಡ್ಲೇಬೇಕು ಅಂತ ಹಠ ಹಿಡಿದಾಗ ಮುಖ್ಯಮಂತ್ರಿಯ ಪತ್ನಿ ಆ ಕಾನೂನನ್ನು ಹಿಂಪಡೆಯಿರಿ, ನಿಮ್ಮ ಕೊಲೆಗಾಗಿ ಅರ್ಜಿಯನ್ನು ಸಲ್ಲಿಸುತ್ತಿದ್ದಾರೆ ಎಂದು ಹೇಳುತ್ತಾಳೆ.ನಾಟಕದ ಅಂತ್ಯದಲ್ಲಿ ಈ ಕಾನೂನನ್ನು ಹಿಂಪಡೆಯಬೇಕು ರದ್ದು ಪಡಿಸಬೇಕೆಂದು ಮುಖ್ಯ ನ್ಯಾಯಾಧೀಶರು ಸರ್ಕಾರದ ಅಧಿಕಾರಿಗಳು ಮತ್ತು ಮುಖ್ಯಮಂತ್ರಿಗಳೊಂದಿಗೆ ಚರ್ಚೆಯನ್ನು ಮಾಡುತ್ತಾರೆ. ಈ ನಾಟಕದಲ್ಲಿ ಜನರ ಮನಸ್ಥಿತಿ ಸರ್ಕಾರದ ಅವ್ಯವಸ್ಥೆಯನ್ನು ಕೊಲ್ಲಬೇಕು ಎಂಬ ಮನಸ್ಥಿತಿ ಹೊಸ ತಲೆಮಾರಿನಲ್ಲಿ ರಾಜಕೀಯ ಅವ್ಯವಸ್ಥೆಯ ವಿರುದ್ಧವಾಗಿ ಕಾಡುವ ತಲ್ಲಣಗಳು ಹೆಚ್ಚು ಸರಕಾರದ ನ್ಯಾಯಯುತವಾದ ಆಡಳಿತ ಇಲ್ಲದೆ ಇರುವಂತಹ ಸರ್ಕಾರಗಳನ್ನು ಇಲ್ಲವಾಗಿಸಬೇಕು ಎಂಬ ಮನಸ್ಥಿತಿ ಇರುವುದು ಕಂಡುಬರುತ್ತದೆ.

21ನೇ ಶತಮಾನದಲ್ಲಿ ಎಂ. ಎಂ. ಕಲಬುರ್ಗಿ, ಪಾನ್ಸರೆ ಮತ್ತು ಗೌರಿ ಲಂಕೇಶ್ ಸಮಾಜ ಪರಿವರ್ತನೆಯ ವಿಚಾರವಂತರನ್ನು ಸರಕಾರದ ಒಳಸಂಚಿನಲ್ಲಿ ಕೊಲೆಯಾಗಿರುವ ಕೊಲೆಗಳನ್ನು ಮುಚ್ಚಿಟ್ಟು ಕೊಲೆಗಾರರು ಯಾರು ಅಂತ ಗೊತ್ತಿದ್ದರೂ ಸಹ ಅವರನ್ನು ಬಂಧಿಸದೆ ಸರಕಾರ ಪೋಷಿಸಿಕೊಂಡು ಬರುತಿದೆ ವೈಚಾರಿಕವಾದಿಗಳನ್ನು ವಿಚಾರವಂತರನ್ನು ಕೊಲ್ಲಿರುವುದನ್ನು ನಾಟಕದ ಮನಸ್ಸಿಗೆ ನೋವು ತಂದಿದೆ.

ಅವಕಾಶ ಸಿಕ್ಕರೆ ಭ್ರಷ್ಟ ಅನೀತಿವಂತರು ನಿರ್ಮಾಣ ಮಾಡಿರುವ ಕೆಟ್ಟ ವ್ಯವಸ್ಥೆಯಲ್ಲಿ ಇರುವವರೆಲ್ಲರನ್ನು ಕೊಲ್ಲುವುದರಲ್ಲಿ ಯುವಕರು ಮುಂದಾಗುತ್ತಾರೆ.ಎಂಬ ಅಂಶವನ್ನು ಶಿವಕುಮಾರ ಮಾವಲಿಯವರು ಅಭಿಪ್ರಾಯವಾಗಿದೆ.ಯುವಕರು ಇವತ್ತು ಉದ್ಯೋಗವಿಲ್ಲದೆ ಬಳಲುತ್ತಿದ್ದಾರೆ.ಸಾಮಾಜಿಕ ಶೋಷಣೆಯನ್ನು ಯುವ ಸಮುದಾಯ ಅನುಭವಿಸುತ್ತಿದೆ. ಯುವಕರ ಆಶೋತ್ತರಗಳಿಗೆ ಸರಕಾರಗಳು ಗಮನ ಕೊಡುವುದಿಲ್ಲ. ಅವರ ಆಸೆ ಆಮಿಸೆಗಳನ್ನು ಪರೀಕ್ಷಿಸಿ ಅದಕ್ಕೆ ಸಂಬಂಧಿಸಿದ ಹಲವಾರು ಯೋಜನೆಗಳು ಜಾರಿಗೆ ತರುವುದನ್ನು ಬಿಟ್ಟು ಯುವ ಸಮುದಾಯವನ್ನು ತಿರಸ್ಕರಿಸಿ ಯೋಜನೆಗಳು ಜಾರಿಗೆ ತರುವುದರಿಂದ ಉನ್ನತ ಅಭ್ಯಾಸಗಳನ್ನು ಮಾಡಿರುವ ಲಕ್ಷಾಂತರ ಯುವ ಸಮುದಾಯ ನಿರುದ್ಯೋಗಿಗಳಾಗಿ ಕೆಲಸಕ್ಕಾಗಿ ಕಾಯುತ್ತಿದ್ದಾರೆ. ಸರಕಾರದ ಇಲಾಖೆಯಲ್ಲಿ ಸಾಕಷ್ಟು ಕೆಲಸಗಳು ಖಾಲಿ ಇದ್ದರೂ ಅವುಗಳನ್ನು ತುಂಬಿಕೊಳ್ಳದೆ ಕಾಲಯಾಪನೆ ಮಾಡುತ್ತಾ ಬೇಕಾದ ಬೇಡವಾದ ಯೋಜನೆಗಳು ತಮ್ಮ ಸರಕಾರಗಳನ್ನು ಉಳಿಸಿಕೊಳ್ಳಲು, ಮತ್ತು ಮುಂದಿನ ಅವಧಿಗಳಿಗೂ ಕೂಡ ತಮ್ಮ ಸರ್ಕಾರವೇ ಮುಂದುವರಿಯುವಂತೆ ನಡೆದುಕೊಳ್ಳುವಂಥ ಮನಸ್ಥಿತಿಯನ್ನು ಈ ಜನಗಳಲ್ಲಿ ಕಂಡು ಬರುತ್ತವೆ. ಇಂತಹ ಮನಸ್ಥಿತಿ ಇರುವಂತ ಯುವಕರನ್ನು ಸರ್ಕಾರ ತಿರಸ್ಕರಿಸಿದರಿಂದ ಕೊಲೆ ಮಾಡುವ ಮನಸ್ಥಿತಿಯನ್ನು ಬರುವುದು ಸಹಜ. ಇಡೀ ವ್ಯವಸ್ಥೆಯನ್ನು ಬಂಡಾಯದ ಮೂಲಕ ಸರಿಪಡಿಸುವ ನಿಟ್ಟಿನಲ್ಲಿ ಈ ನಾಟಕದ ಪಾತ್ರ ಮುಖ್ಯವಾಗಿದೆ.ರಂಗಭೂಮಿಯಲ್ಲಿ ಪ್ರಯೋಗಗೊಳ್ಳಲು ಯೋಗ್ಯವಾದ ಈ ನಾಟಕ ಶಿವಕುಮಾರ್ ಮಾವಲಿ ಅವರ ಮನದಾಳದ ನೋವಾಗಿದೆ.ಅವರ ಒಳನೋಟವನ್ನು ಸರ್ಕಾರದ ವ್ಯವಸ್ಥೆಯ ವಿರುದ್ಧವಾದ ಮನಸ್ಥಿತಿಯನ್ನು ನಾಟಕಗಳಲ್ಲಿ ವ್ಯಕ್ತಪಡಿಸಿದ್ದಾರೆ.ಈಗಾಗಲೇ ಅನೇಕ ಪ್ರದರ್ಶನಗಳಾಗಿ ರಾಜ್ಯದ ಜನತೆಯಲ್ಲಿ ಮನೆಮಾತಾಗಿದ ಬಿ. ವಿ. ರಾಜರಾಮ್ ರಚನೆ ಮಾಡಿರುವ 'ಮುಖ್ಯಮಂತ್ರಿ' ನಾಟಕ ಅಂದಿನ ಮುಖ್ಯಮಂತ್ರಿಯ ದುರಾಡಳಿತವನ್ನು ನಾಟಕದ ಮೂಲಕ ಸಮಾಜಕ್ಕೆ ತೋರಿಸಿದ ಹಾಗೆ ಶಿವಕುಮಾರ್ ಮಾವಲಿ ಮತ್ತು ಜಿತುರೇಶಾ ರವರ ನಾಟಕಗಳಲ್ಲಿ ವ್ಯಕ್ತವಾಗಿದೆ.

'ಭ್ರಷ್ಟಾಚಾರಿ' ನಾಟಕದಲ್ಲೂ ಭ್ರಷ್ಟಾಚಾರಿ ಎಂಬ ದೈತ್ಯ ರಾಕ್ಷಸನ ರೂಪದಲ್ಲಿ ಚಿತ್ರಿಸಿ, ಆ ಪಾತ್ರದಲ್ಲಿ ಇಡೀ ಸರಕಾರದ ಅವ್ಯವಸ್ಥೆಯನ್ನು ಜಿತುರೇಶಾ ತಿಳಿಸಿದ್ದಾರೆ. ರಾಜಕೀಯ ನಾಯಕರನ್ನು ಕೊಂದು ತಮ್ಮ ಸರಕಾರವನ್ನು ಸರಿಪಡಿಸಬೇಕು ಎಂಬ ನಿಟ್ಟಿನಲ್ಲಿ ಹಳ್ಳಿಯಿಂದ ದಿಲ್ಲಿವರೆಗೂ ಇರುವ ಭ್ರಷ್ಟಾಚಾರ ಮತ್ತು ನಿರುದ್ಯೋಗಿಗಳು ಅನುಭವಿಸುವ ಭ್ರಷ್ಟಾಚಾರ, ಭ್ರಷ್ಟಾಚಾರದಿಂದ ಬಡತನದಲ್ಲಿ ಬಡ ರಾಷ್ಟ್ರ ಬಡ ರಾಷ್ಟ್ರವಾಗಿಯೇ ಇರಲು ಕಾರಣೀಕೃತರಾಗಿರುವಂಥ ಭ್ರಷ್ಟಾಚಾರದ ವ್ಯವಸ್ಥೆಯನ್ನು ಗಾಳಿಗೆ ತೂರಲು ಜನಜಾಗ್ರತೆಯನ್ನು ಮೂಡಿಸಿ ಭ್ರಷ್ಟಾಚಾರದಿಂದ ಭಾರತ ಮುಕ್ತಿಗೊಳಿಸಬೇಕು ಎಂಬ ಆಸೆ ಜಿತುರೇಶಾ ಅವರದು. ಅಣ್ಣಾ ಹಜಾರೆ, ಅರವಿಂದ್ ಕೇಜ್ರಿವಾಲ್, ಕಿರಣ್ ಬೇಡಿ, ಸಂತೋಷ ಹೆಗಡೆ, ಈ ನಾಯಕರ ಮುಂದಾಳತ್ವದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಭ್ರಷ್ಟಾಚಾರದ ವಿರುದ್ಧ ಬಹಳ ದೊಡ್ಡ ಹೋರಾಟವನ್ನು ದೆಹಲಿಯಲ್ಲಿ ನಡೆದಿರುತ್ತದೆ.ಜಿತುರೇಶಾ ಉಪನ್ಯಾಸಕನಾಗಿದ್ದು ಯುವ ಸಮುದಾಯವನ್ನು ಒಗ್ಗೂಡಿಸಿ ಭ್ರಷ್ಟಾಚಾರದ ವಿರುದ್ಧ ಪ್ರತಿಭಟನೆ ಮತ್ತು ಹೋರಾಟಗಳನ್ನು ಮಾಡಿರುತ್ತಾರೆ. ಆ ಸಂದರ್ಭದಲ್ಲಿ ಈ ನಾಟಕವನ್ನು ರಚಿಸಿ ಅಣ್ಣಾ ಹಜಾರೆಯವರಿಗೆ ಅರ್ಪಣೆ ಮಾಡಿರುತ್ತಾರೆ. ಭ್ರಷ್ಟಾಚಾರದ ವಿರುದ್ಧ ಕ್ರಾಂತಿಯುಕ್ತವಾದ ಮತ್ತು ಜನಜಾಗೃತಿ ನಾಟಕ ಇದಾಗಿದೆ.

ಕೋಮುಸಾಮರಸ್ಯದ ಬಿಕ್ಕಟ್ಟು

'ವಂದೇ ಮಾತರಂ' ನಾಟಕದಲ್ಲಿ ವಿಚಾರವಾದಿಗಳ ಕೊಲೆಯನ್ನು ಖಂಡಿಸಿ, ನಾಟಕದಲ್ಲಿ ಕೋಮು ಗಲಭೆ ವೈಚಾರಿಕತೆ ಇವುಗಳನ್ನು ಇಲ್ಲವಾಗಿಸಿ ಸಾಮರಸ್ಯದ ಸಮ ಸಮಾಜವನ್ನು ನಿರ್ಮಿಸಲು ಹಿಂದೂ ಮತ್ತು ಮುಸ್ಲಿಂ ಪಾತ್ರಗಳ ಮೂಲಕ ಜಿತುರೇಶಾ ಕೋಮು ಗಲಭೆಗಳನ್ನು ತಡೆದು ಹಿಂದೂ ಮತ್ತು ಮುಸ್ಲಿಂರ ನಡುವೆ ಸಾಮರಸ್ಯ ಸೌಹಾರ್ದತೆಯನ್ನು ಷಹನಾಯಿ ಬಿಸ್ಮಿಲ್ಲಾ ಖಾನ್ ಮತ್ತು ಭೀಮ್ ಸೇನ್ ಜೋಶಿ ವ್ಯಕ್ತಿತ್ವಗಳನ್ನು ಹೊಂದಿರುವ ಎರಡು ಪಾತ್ರಗಳನ್ನು ಸೃಷ್ಟಿಸಿ, ಮಾದರಿ ವ್ಯಕ್ತಿತ್ವಗಳನ್ನು ನಾಟಕಗಳಲ್ಲಿ ಕಂಡುಬರುವ ಹಾಗೆ ನಿಸಾರ್ ಅಹ್ಮದ್, ಅಬ್ದುಲ್ ಕಲಾಂ ಇಂತಹ ಮಹಾನ್ ಮುಸ್ಲಿಂ ವ್ಯಕ್ತಿಗಳ ಕೊಡುಗೆಯನ್ನು ದೇಶಕ್ಕೆ ಇರುವುದನ್ನು ಪರಿಗಣಿಸಿ, ಎರಡು ಧರ್ಮಗಳ ನಡುವಿನ ದ್ವೇಷ ಅಸೂಯೆಯನ್ನು ಅಳಿಸಿ ಸಮ ಸಮಾಜವನ್ನು ನಿರ್ಮಾಣ ಮಾಡಲು ಶಾಂತಿಯುತವಾದ ರಾಷ್ಟ್ರ ನಿರ್ಮಿಸಿ, ಅಭಿವೃದ್ಧಿ ಕಡೆಗೆ ಗಮನ ಹರಿಸಬೇಕು ಎಂಬ ಅಂಶಗಳು ಕಂಡುಬರುತ್ತವೆ. ಧರ್ಮದ ವೈರತ್ವದ ಭಾವನೆಗಳು ಇಲ್ಲದೆ ಒಟ್ಟಾಗಿ ಒಗ್ಗಟ್ಟಾಗಿ ಅಭಿನಯಿಸುವ 'ಅನುಕರಣೆ ಅನಂತ' ಮಕ್ಕಳ ನಾಟಕದ ಮೂಲಕ ಮಕ್ಕಳಲ್ಲಿ ಕೋಮು ಸೌಹಾರ್ದತೆ ಭಾವನೆ ಮೂಡಿಸುವ ನಾಟಕ ಇದಾಗಿದೆ.ರಾಜಕೀಯದಲ್ಲಿ ಧಾರ್ಮಿಕ ಕಲಹಗಳನ್ನು ಇಟ್ಟುಕೊಂಡು ತಮ್ಮ ಲಾಭಿಯನ್ನು ಮಾಡಿಕೊಳ್ಳುವುದನ್ನು ಶಿವಕುಮಾರ ಮಾವಲಿ ರಚಿಸಿದ ನಾಟಕಗಳು ಪ್ರಸ್ತುತವಾಗಿದೆ.

ಟಿ. ಹೆಚ್. ಲವಕುಮಾರ್ ತಿಪ್ಪೂರು ಅವರ 'ಕಿಚ್ಚಿಲ್ಲದ ಬೇಗೆ' ನಾಟಕದಲ್ಲಿ ಮತೀಯ ಗಲಭೆಗಳಿಗೆ ರಾಜಕೀಯವೇ ಪ್ರೇರಣೆ ಮತ್ತು ಪೋಷಕವಾಗಿರುತ್ತದೆ. ಹಿಂದೂ ಮತ್ತು ಕ್ರೈಸ್ತ ಧರ್ಮದ ನಡುವೆ ನಡೆಯುವ ಗಲಭೆಗಳು ಇಲ್ಲಿ ಪ್ರಸ್ತಾಪವಾಗಿವೆ. ಆದರೆ ದೇಶದಲ್ಲಿ ಹಿಂದು ಮುಸ್ಲಿಂ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಗಲಭೆಗಳು ಹೆಚ್ಚಾಗಿ ಕಂಡುಬರುತ್ತವೆ. ಟಿ. ಹೆಚ್. ಲವಕುಮಾರ್ ಅವರು ಕ್ರೈಸ್ತ ಶಿಕ್ಷಣ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವುದರಿಂದ ಕ್ರಿಶ್ಚಿಯನ್ ಮತ್ತು ಹಿಂದೂ ಮತೀಯ ಗಲಭೆಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಗಲಭೆಗಳು ಇಂದಿಗೂ ನಡೆಯುತ್ತವೆ. ಅವುಗಳ ಹಿಂದೆ ರಾಜಕೀಯವೆ ಬೆಂಕಿಹೊಟ್ಟಣದಂತೆ ಶ್ರೀಮಂತ ವ್ಯಕ್ತಿಯಾದ ಶ್ರೀನಿವಾಸ, ಇಂದಿನ ರಾಜಕೀಯ ನಾಯಕರ ಪರವಾಗಿ ನಿಲ್ಲುತ್ತಾನೆ. ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿರುವ ನಾಯಕರಗಳ ರಾಸ ಲೀಲೆಗಳು, ಅನೈತಿಕ ಸಂಬಂಧಗಳು, ನೈತಿಕ ಎಂಬಂತೆ, ಶ್ರೀನಿವಾಸ ಪತಿಯನ್ನು ಕಳೆದುಕೊಂಡ ಪ್ರೇಮಳೊಂದಿಗೆ ಮನೆಯಲ್ಲಿ ಇರುತ್ತಾನೆ, ಮನೆಯನ್ನು ಬಾರ್ ಮಾಡಿಕೊಂಡು ಪ್ರೇಮಳ ಪ್ರೇಮವನ್ನು ಸವಿಯುತ್ತಾನೆ. ಇದನ್ನೆಲ್ಲ ಮೊದಲಿನ ಗಂಡನ ಮಗಳಾದ ನಕ್ಷಾ ವಸತಿ ನಿಯಲಗಳಲ್ಲಿ ವಾಸವಿದ್ದು ವಿದ್ಯಾರ್ಥಿಗಳ ಸಮುದಾಯವನ್ನು ಕಟ್ಟಿಕೊಂಡು ಪ್ರತಿಭಟನೆ ಮಾಡುತ್ತಾಳೆ. ವ್ಯವಸ್ಥೆಯನ್ನು ಪ್ರಶ್ನಿಸುವ ನಕ್ಷಾ ತನ್ನ ತಾಯಿ ಮತ್ತು ಶ್ರೀನಿವಾಸನ ಸಬಂಧಗಳ ಬಗ್ಗೆ ಕಿಡಿಕಾರುತ್ತಾಳೆ. ಆದ್ದರಿಂದ ಶ್ರೀನಿವಾಸ ಮತ್ತು ನಕ್ಷಾಗಳ ನಡುವೆ ಸಂಘರ್ಷದ ಪ್ರಸ್ತುತ ರಾಜಕೀಯ ಸಂಭಾಷಣೆಗಳು ವ್ಯಕ್ತವಾಗುತ್ತವೆ. ಲೇಖಕನೊಬ್ಬನು ಸತ್ಯವನ್ನು ಬಿಟ್ಟು ಸುಳ್ಳನ್ನು ಬರೆಯುವಾಗ ಮನದೊಳಗಿನ ಆಕೃತಿಗಳು ಹೊರಬಂದು ಅವನನ್ನು ಕೊಲ್ಲಲು ಪ್ರಯತ್ನಿಸುತ್ತಿವೆ. ಇಂದಿನ ರಾಜಕೀಯ ಮತ್ತು ಕುಟುಂಬದೊಳಗೆ ವ್ಯಕ್ತವಾಗಿರುವ ತಂತ್ರ ಕುತಂತ್ರಗಳು ನಾಟಕದೊಳಗೆ ವ್ಯಕ್ತವಾಗಿವೆ.

ಗ್ರಾಮಗಳ ಶುದ್ದೀರಣದ ಬಿಕ್ಕಟ್ಟುಗಳು

ಚಿನ್ನುಪ್ರಕಾಶ್ ಶ್ರೀರಾಮನಹಳ್ಳಿ ರಚನೆಯ 'ಪಡುವಣ ದಿಕ್ಕಿನಲ್ಲಿ' ಗ್ರಾಮಪಂಚಾಯ್ತಿಯ ರಾಜಕೀಯವನ್ನು ಗೌಡರ ಆತ್ಮ ಬೀರಪ್ಪನ ಆತ್ಮಗಳು ತಮ್ಮ ಗ್ರಾಮದ ಆಡಳಿತ ಹಿಂದೆ ಹೇಗಿತ್ತು, ಈಗ ಹೇಗೆ ಆಗಿದೆ ಎಂಬುದನ್ನು ಕುರಿತು ಮಾತನಾಡುತ್ತಾರೆ.ಗ್ರಾಮಾಡಳಿತದ ನಿಯಮಗಳೇ ಬೇರೆ ಆದರೆ ಆಡಳಿತ ನಡೆಯುತ್ತಿರುವುದೇ ಬೇರೆ, ದುರಾಡಳಿತದಿಂದ ಗ್ರಾಮೀಣ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರ ಬದಲಾಣೆಯಾಗಿರುವುದನ್ನು ಚಿನ್ನುಪ್ರಕಾಶ್ ಶ್ರೀ ರಾಮನ ಹಳ್ಳಿ ನಾಟಕದಲ್ಲಿ ವ್ಯಕ್ತವಾಗಿದೆ.ಪೊಲೀಸ್ ಇನ್‌ಸ್ಪೆಕ್ಟರ್, ಹೆಡ್ ಕಾನ್‌ಸ್ಟೇಬಲ್ ಗ್ರಾಮದೊಳಗೆ ಆಗುವ ಅಪರಾಧಗಳನ್ನು ಮಾಡಿರುವ ಅಪರಾದಿಗಳನ್ನು ಬಂಧಿಸಲು ಬಂದಾಗ ಗ್ರಾಮ ಪಂಚಾಯ್ತಿಯ ಮಹತ್ವ, ಅರಳಿ ಕಟ್ಟೆಯ ನ್ಯಾಯ ತೀರ್ಮಾನ ನಿಂತು ಹೋಗಿದೆ.ಪೊಲೀಸರು ಗ್ರಾಮಗಳಿಗೆ ಬಂದಾಗ ಜನರ ಮನದೊಳಗಿನ ತಲ್ಲಣಗಳು ಹೆಚ್ಚಾಗಿವೆ. ಹಳ್ಳಿಗ್ರಾಮದೊಳಗೆ ಇರುವ ಆತ್ಮೀಯತೆ ಮಾಯವಾಗಿವೆ.

ಸ್ತ್ರೀ ಸಂವೇದನಾ ಬಿಕ್ಕಟ್ಟುಗಳು

ಹೊಸತಲೆಮಾರಿನ ನಾಟಕಕಾರರು ಪುರುಷನಾಗಲಿ ಸ್ತ್ರೀಯಾಗಲಿ ಇಬ್ಬರು ಹೆಣ್ಣಿನ ಪರವಾದ ನಿಲುವನ್ನು ತಮ್ಮ ನಾಟಕಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಕೆಲವರು ಹೆಣ್ಣನು ಶ್ರೇಷ್ಠವೆಂದು ಹೆಣ್ಣೆ ಕಥಾ ನಾಯಕಿಯಂತೆ ಕಂಡು ಹೆಚ್ಚು ಸಂಭಾಷಣೆಗಳು ನಾಟಕಗಳಲ್ಲಿ ಸ್ತ್ರೀಯದೆ ಆಗಿದೆ.ಕೆಲವು ಸ್ತ್ರೀಯರು ಚಾರಿತ್ರ್ಯವನ್ನು ಬಿಟ್ಟು ಬದುಕುತ್ತಿರುವುದು ರಾಜಕೀಯಕ್ಕಾಗಿ ಲಾಬಿ ಮಾಡಿಕೊಳ್ಳುತ್ತಿರುವ, ವ್ಯಭಿಚಾರಿ ಮಹಿಳೆಯರನ್ನು ಕೀಳಾಗಿ ಕಂಡಿರುವುದನ್ನು ಈ ನಾಟಕಗಳಲ್ಲಿ ವ್ಯಕ್ತವಾಗಿರುತ್ತವೆ.

ಎಸ್ ಸುರೇಂದ್ರನಾಥ್ ರಚನೆಯ 'ಬೀದಿಯೊಳಗೊಂದು ಮನೆಯ ಮಾಡಿ' ನಾಟಕದ, ಸುಕನ್ಯಾ ಮತ್ತು ಅಂಬಕ್ಕ, ಟಿ.ಹೆಚ್ ಲವಕುಮಾರ್ ಅವರ 'ಕಿಚ್ಚಿಲ್ಲದ ಬೇಗೆ' ನಾಟಕದ ಪ್ರೇಮ, ಚಿನ್ನು ಪ್ರಕಾಶ್ ಶ್ರೀರಾಮನಹಳ್ಳಿ ರಚನೆಯ 'ಪಡುವಣ ದಿಕ್ಕಿನಲ್ಲಿ' ನಾಟಕದ ಸುಂದರಮ್ಮ, ಸಂತೋಷ ನಾಯಕ ರಚನೆಯ 'ಚಂಚಲೆ' ನಾಟಕದ ಕಾಂಚಾನ, ಡಾ. ನಟರಾಜ ತಲಘಟ್ಟಪುರ ರಚನೆ 'ಬಣ್ಣ ಮೆಚ್ಚಿದವರು' ನಾಟಕದ ದೇವಿಕಾರಾಣಿ, ಬೇಲೂರು ರಘುನಂದನ್ 'ರಚನೆಯ ರಕ್ತವರ್ಣೆ' ಈ ನಾಟಕಗಳಲ್ಲಿ ಕಂಡು ಬರುವ ಪಾತ್ರಗಳು ಹೊಸ ತಲೆಮಾರಿನ ನಾಟಕಕಾರರು ಸ್ತ್ರೀಪರವಾದ ಸಂವೇದನೆ ಮತ್ತು ನಿಲುವುಗಳನ್ನು ಹೊಂದಿದ್ದಾರೆ.ತಮ್ಮ ನಿಲುವುಗಳನ್ನು ತಮ್ಮ ಪಾತ್ರಗಳ ಮೂಲಕ ವ್ಯಕ್ತಪಡಿಸಿದ್ದಾರೆ.

ಸಂತೋಷ್ ನಾಯಕ್ ರಚಿಸಿರುವ 'ಚಂಚಲೆ' ನಾಟಕದಲ್ಲಿ ಕಾಂಚನ ಎಂಬ ಸ್ತ್ರೀ ಅತ್ಯಾಚಾರಕೊಳ್ಳಗಾಗಿ ನೋವಿಂದ ಬಗೆಯನ್ನು ಈ ನಾಟಕದಲ್ಲಿ ಪ್ರಸ್ತಾಪ ಮಾಡಿದ್ದಾರೆ.ಪುರುಷ ಪ್ರಧಾನ ಸಮಾಜ ಹೆಣ್ಣಿನ ಮೇಲೆ ಕಾಮುಕ ಭಾವನೆಯಿಂದ ಹೆಣ್ಣಿಗೆ ಇಷ್ಟವಿರದಿದ್ದರೂ ಕೂಡ ಅತ್ಯಾಚಾರ ಗೊಳಿಸಿ ಅವಳನ್ನು ಮಾನಸಿಕವಾಗಿ ಹಿಂಸೆ ಕೊಟ್ಟಿರುವುದನ್ನು ಇಲ್ಲಿ ಕಂಡುಬರುತ್ತದೆ.'ಚಂಚಲೆ' ನಾಟಕದ ಬಗ್ಗೆ ಹೇಳುವುದಾದರೆ ಕಾಲ್ಪನಿಕವಾಗಿ ಒಂದು ಹೆಣ್ಣಿನ ನೋವು ಆಕ್ರೋಶ ಸೇಡಿನ ಕಥೆ ಇದಾಗಿದೆ.

'ಬಣ್ಣಮೆಚ್ಚಿದವರು' ಈ ನಾಟಕವನ್ನು ಡಾ.ನಟರಾಜ್ ತಲಘಟ್ಟಪುರ ರಚನೆಯಾಗಿದೆ. ದೇಶದ ಮೊದಲ ನಟಿ ದೇವಿಕರಾಣಿ ಅವರ ಎರಡನೇ ದಾಂಪತ್ಯ ಜೀವನಕ್ಕೆ ಕಾಲಿಟ್ಟಾಗ ಸ್ವೆತಾಸ್ಲೋವ್ ರೋರಿಕ್ ಎಂಬ ಚಿತ್ರಕಲಾವಿದನೊಂದಿಗೆ ಮದುವೆಯಾಗಿ ತನ್ನ ಎರಡನೆಯ ದಾಂಪತ್ಯ ಬದುಕನ್ನು ಬೆಂಗಳೂರಿನ ಬಣ್ಣ ಮೆಚ್ಚಿದವರು ದೇವಿಕರಾಣಿ ವಯಸ್ಸಾಗುತ್ತಿದ್ದರು ಸಹ ಸೌಂದರ್ಯ ಅಲಂಕಾರದಲ್ಲಿ ಮುಳುಗಿರುತ್ತಾಳೆ. ಚಲನಚಿತ್ರದ ಮೊದಲ ಮಹಿಳಾ ನಿರ್ಮಾಪಕಿಯಾಗಿದ್ದು ಮುಂಬೈನಲ್ಲಿರುವ ಚಲನಚಿತ್ರ ಅಕಾಡೆಮಿ ಸಂಸ್ಥೆಯನ್ನು ನೋಡಿಕೊಳ್ಳುತ್ತಾಳೆ.ಅದು ಒಂದು ರೀತಿಯ ಬಣ್ಣದ ಲೋಕ ಹಾಗೆ ತನ್ನ ಬಗ್ಗೆ ಅರಿವಿಲ್ಲದೆ ಗಮನವಿಲ್ಲದೆ ಇರುವ ರೋರಿಕ್ ಚಿತ್ರಕಲೆಯಲ್ಲಿ ಪ್ರಸಿದ್ಧಿಯಾಗಿದ್ದಾರೆ.ಇಬ್ಬರು ಬಣ್ಣ ಮೆಚ್ಚಿದವರು. ಹಾಗಾಗಿ ಬಣ್ಣ ಮೆಚ್ಚಿದವರು ಎಂಬ ಶೀರ್ಷಿಕೆ ನಾಟಕಕ್ಕೆ ಸರಿಯಾಗಿ ಹೊಂದಾಣಿಕೆಯಾಗುತ್ತದೆ ರೋರಿಕ್ ಒಬ್ಬ ಸುಪ್ರಸಿದ್ಧ ರಷ್ಯಾದ ಪ್ರತಿಷ್ಠಿತ ನೋಬೆಲ್ ಪ್ರಶಸ್ತಿ ವಂಶಕ್ಕೆ ಸೇರಿದವನಾಗಿದ್ದು ರೋರಿಕಿನ ತಂದೆ ರಷ್ಯದಲ್ಲಿ ನಡೆಯುವ ಗಲಭೆಯನ್ನು ಎದುರಿಸಲಾಗದೆ ಭಾರತದಲ್ಲಿ ಬಂದು ನೆಲೆಸಿರುತ್ತಾರೆ. ರೋರಿಕ್ ತಂದೆಯು ಉತ್ತಮ ಚಿತ್ರಕಲಾವಿದನಾಗಿರುವುದರಿಂದ ರೋರಿಕ್ ಸಹಜವಾಗಿ ತನ್ನ ತಂದೆಯ ಚಿತ್ರವನ್ನು ಮುಂದುವರೆಸುತ್ತಾ ಚಿತ್ರ ಪ್ರದರ್ಶನವನ್ನು ನಡೆಸುತ್ತಾ ಬಂದಿರುತ್ತಾರೆ. ಜಗತ್ತಿನ ತುಂಬೆಲ್ಲ ಉತ್ತಮವಾದ ಚಿತ್ರಗಳನ್ನು ಪ್ರದರ್ಶನಗಳನ್ನು ಮಾಡುತ್ತ ಬಂದಿರುವ ರೋರಿಕ್ ದೇವಿಕ ರಾಣಿಯೊಂದಿಗೆ ಸಹ ಜೀವನ ನಡೆಸುತ್ತಿರುವುದು ಇಬ್ಬರಲ್ಲಿ ಹೊಂದಾಣಿಕೆಯ ಬದುಕನ್ನು ಕಂಡುಬರುತ್ತದೆ.

ದೇವಿಕ ರಾಣಿ ರೋರಿಕನೊಂದಿಗೆ ಮದುವೆಯಾದಾಗ ಇನ್ನು ಪ್ರಾಯದ ವಯಸ್ಸಾಗಿರುತ್ತದೆ. ನನಗೆ ಒಂದು ಮಗು ಇದ್ದರೆ ತಾಯಿ ನನ್ನದು ಒಂದು ವಂಶ ಇದೆ ಎಂದು ಗೊತ್ತಾಗುತ್ತಿತ್ತು.ದೂರದೂರಿನ ಪ್ರದೇಶ ಅಂತೆ ನೋಡುತ್ತಿದ್ದಾರೆ ನನ್ನ ಮಕ್ಕಳು. ನೀವು ನನಗೆ ಮಕ್ಕಳು ಬೇಡ ಎಂದರೆ ಈಗ ನಮಗೆ ದೂರತನದ, ಒಬ್ಬಂಟಿತನ ಕಾಡುತ್ತದೆ ಎಂದು ಹೇಳುತ್ತಾಳೆ.ಅದಕ್ಕೆ ರೋರಿಕ ಜಗತ್ತನ್ನು ಎತ್ತರವಾಗಿ ನೋಡಿರುವಂಥ ನಿನ್ನಂಥವಳು ಮಗುವಿಗಾಗಿ ಹಂಬಲಿಸುವುದು ಸರಿ ಇದೆ. ಯಾಕೆಂದರೆ ಈ ಮಕ್ಕಳು ಅವರಿಗಿಂತಲೂ ದೊಡ್ಡ ದುಃಖವನ್ನು ನೀಡುತ್ತಿದ್ದಾರೆ.ಏನು ಮಾಡುತ್ತೀಯಾ ಎಂಬ ಮಾತನ್ನು ಹೇಳಿ ತನ್ನ ಪ್ರೀತಿಯ ಮಾತಿನಿಂದ ಸಮಾಧಾನ ಪಡಿಸುತ್ತಾನೆ.

ಕೆವೈಎನ್ ಅವರ 'ಬಾರಮ್ಮ ಭಾಗಿರತಿ' ನಾಟಕವು ಇಂದು ಪ್ರಸ್ತುತವಾಗಿದೆ.ಈಗಾಗಲೇ ಜನಜನಿತವಾದ 'ಕೆರೆಗೆ ಹಾರ' ಭಾಗಿರತಿ ಜನಪದದ ಕಥಾ ಸಾರಾಂಶದೊಳಗೆ ಹೊಸ ರೀತಿಯ ನಾಟಕವನ್ನು ರಚಿಸಿದ್ದಾರೆ.ಇಂದು ಕೆರೆಗಳು ಬತ್ತಿ ಹೋಗುತ್ತಿರುವುದು ಹಾಗೆ ಭಾಗೀರಥಿ ಕೆರೆನು ಸಹ ಬತ್ತಿ ಹೋಗಿದ್ದು ಆ ಕೆರೆಯನ್ನು ಒತ್ತುವರಿ ಮಾಡಿಕೊಂಡು ಅಲ್ಲಿನ ಜಮೀನನ್ನು ಮನೆ ಕಟ್ಟಿಕೊಳ್ಳಲು ಕೃಷಿ ಕೆಲಸ ಮಾಡಲು ಮತ್ತು ಸ್ಮಶಾನಕ್ಕಾಗಿ ಹಂಚಿಕೊಳ್ಳಲು ಜನರು ಹಾತೊರಿಯುತ್ತಾರೆ.ಊರಿನ ಕೊಳಕು ನೀರನ್ನು ಕೆರೆಗೆ ಬಿಡುವುದರಿಂದ ಕೆರೆಯು ಸಾಕಷ್ಟು ಮಲಿನವಾಗಿರುತ್ತದೆ.ಈ ಎಲ್ಲಾ ಅಂಶಗಳನ್ನು ತಿಳಿದಿರುವಂತಹ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಭಾಗಿರತಿ ಆ ಊರನ್ನು ಬಿಟ್ಟು ಬೇರೆ ಕಡೆಗೆ ಹೋಗಲು ಮುಂದಾಗುತ್ತಾಳೆ.ಇದನ್ನು ನೋಡಿರುವ ಊರ ದೇವ ಕಾಪಟರಾಯನು ಊರಿನ ದ್ವಾರಬಾಗಿಲಿನಲ್ಲಿ ತಡಿದು ನಿಲ್ಲಿಸುತ್ತಾನೆ. ಮೀನು ಹಿಡಿಯಲು ಬಂದಿರುವ ಗಂಗಜ್ಜನ್ನು ಭಾಗಿರತಿ ಮತ್ತು ಮಹಾದೇವ ಮತ್ತು ಕಾಪಟರಾಯನ ಮಾತುಗಳು ಕೇಳಿ ಭಾಗಿರತಿ ಊರು ಬಿಟ್ಟು ಹೋದರೆ, ಊರು ನೀರು ಇಲ್ಲದೆ ಒಣಗಬೇಕಾಗುತ್ತದೆ.ನೀರಿಲ್ಲದೆ ಬರಗಾಲದಿಂದ ಸಾಯಬೇಕಾಗುತ್ತದೆ ಎಂಬ ವಿಚಾರವನ್ನು ಚಾವಡಿಯಲ್ಲಿ ನಡೆಯುವಂತಹ ಸಭೆಯಲ್ಲಿ ಪ್ರಸ್ತಾಪ ಮಾಡುತ್ತಾರೆ.ಅಲ್ಲಿ ಯುವಕರು ಕೆರೆಯ ಸಂರಕ್ಷಣೆ ಬಗ್ಗೆ ಮಾತನಾಡಿದರೆ, ಗೌಡನಾಗಲಿ ಕಂಟ್ರಾಕ್ಟರ್ ಆಗಲಿ ಮತ್ತಿತರರು ಕೂಡ ಬದಲಾವಣೆಯಾಗಿ ಕೆರೆಯನ್ನು ಉಳಿಸಿಕೊಳ್ಳಲು ಮತ್ತೆ ಕೆರೆಯ ಹೂಳನ್ನು ಎತ್ತಿ ಮೊದಲಿನಂತೆ ಇಡಲು ಪ್ರಯತ್ನಿಸುತ್ತಾರೆ.ಕೆರೆಯನ್ನು ಉಳಿಸಿಕೊಳ್ಳಬೇಕು ಅಂತರ್ಜಲ ಮಟ್ಟವನ್ನು ಹೆಚ್ಚಾಗಬೇಕು, ಎಂಬ ಅವರ ಮನದಲ್ಲಿನ ಭಾವನೆಯನ್ನು, 'ಬಾರಮ್ಮ ಭಾಗಿರತಿ' ನಾಟಕದ ಮೂಲಕ ಕಟ್ಟಿಕೊಟ್ಟಿದ್ದಾರೆ.ಆನಪದ ಕತೆಯಿಂದ ಪರಿಸರದ ಸಂರಕ್ಷಣೆಯ ಜಲಜಾಗೃತಿ ಮೂಡಿಸುವ ಉದ್ದೇಶ ಕೆವೈಎನ್ ಅವರದಾಗಿದೆ.

ಭಾಗಿರತಿ, ದೇವಿಕರಾಣಿ, ಪ್ರೇಮ, ಸುಕನ್ಯಾ, ಕಾಂಚನ ಈ ಸ್ತ್ರೀ ಪಾತ್ರಗಳು ಇಂದಿನ ಸಮಾಜದ ಹೆಣ್ಣಿನ ಸಂವೇದನಗಳ ವಿವಿಧ ಮಜಲುಗಳಲ್ಲಿ ಪ್ರತಿನಿಧಿಸುತ್ತವೆ.

ಪರಾಮರ್ಶನ ಕೃತಿಗಳು ಮತ್ತು ಅಧ್ಯಯನ ಮಾಡಿರುವ ನಾಟಕಗಳು

1. ಶತಮಾನದ ನಾಟಕ– ಕೆ ಮರುಳಸಿದ್ದಪ್ಪ
2. ಬಣ್ಣ ಮೆಚ್ಚಿದವರು– ಡಾ. ನಟರಾಜ ತಲಘಟ್ಟಪುರ
3. ರಕ್ತವರ್ಣ – ಬೇಲೂರು ರಘುನಂದನ್
4. ಕಿಚ್ಚಿಲ್ಲದ ಬೇಗೆ – ಟಿ. ಹೆಚ್ ಲವಕುಮಾರ್ ತಿಪ್ಪೂರು
5. ಸಾವಿರದ ರಾತ್ರಿ – ಡಾ. ನಟರಾಜ ತಲಘಟ್ಟಪುರ
6. ಅಭಿನವ ಚಾಪ್ಲಿನ್ (ಮತ್ತೆರಡು ನಾಟಕಗಳು – ಎನ್. ಸಿ. ಮಹೇಶ್
7. ಯುಗಧರ್ಮ ಹಾಗೂ ಸಾಹಿತ್ಯ ದರ್ಶನ – ಕೀರ್ತಿನಾಥ ಕುರ್ತಕೋಟಿ
8. ನಟನೆಯ ಪಾಠಗಳು – ಪ್ರಸನ್ನ
9. ಬೀದಿಯೊಳಗೊಂದು ಮನೆಯ ಮಾಡಿ–ಎಸ್ ಸುರೇಂದ್ರನಾಥ್
10. ಸುಮಾರಿ ಕೊಲೆ–ಶಿವಕುಮಾರ ಮಾವಲಿ
11. ಒಂದು ಕಾನೂನಾತ್ಮಕ ಕೊಲೆ–ಶಿವಕುಮಾರ ಮಾವಲಿ
12. ಇಲ್ಲಿರುವುದು ಸುಮ್ಮನೆ– ವಿವೇಕ ಶಾನಭಾಗ
13. ಭ್ರಷ್ಟಚಾರಿ– ಜಿತುರೇಶಾ
14. ವಂದೇ ಮಾತರಂ–ಜಿತುರೇಶಾ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರದಲ್ಲಿ ಧರ್ಮ ಸಂಘರ್ಷದ ನೆಲೆಗಳು

ಡಾ. ಮೈಲಾರಪ್ಪ ಎನ್. ಶಿದ್ದಗಿರಿ
ಸಹಾಯಕ ಪ್ರಾದ್ಯಾಪಕರು
ಸಿ ಎಸ್ ಬೆಂಬಳಗಿ ಮಹಾವಿದ್ಯಾಲಯ
ರಾಮದುರ್ಗ

Manuscript ID:
JRD -2026-180410
ISSN: 2230-9578
Volume 18
Issue 4(II)
Pp.31-34
April 2026
Submitted:05 Mar. 2026
Revised:20Mar. 2026
Accepted:05Apr.2026
Published:30 April2026

ಸಾರಲೇಖ

ಭಾರತದ ಇತಿಹಾಸವನ್ನು ಅವಲೋಕಿಸಿದಾಗ ಭಾರತ ದೇಶವು ಧಾರ್ಮಿಕ ಸಹಿಷ್ಣುತೆಗೆ ಹೆಸರಾಗಿದ್ದು ಕಂಡು ಬರುತ್ತದೆ. ಇದಕ್ಕೆ ಕರ್ನಾಟಕವೂ ಹೊರತಾಗಿಲ್ಲ. ರಾಜಮಹಾರಾಜರ ಕಾಲದಲ್ಲಿಯೂ ಒಬ್ಬ ರಾಜ ಯಾವುದೇ ಒಂದು ಧರ್ಮದವನಾಗಿದ್ದರೂ ತನ್ನ ರಾಜ್ಯದಲ್ಲಿರುವ ಎಲ್ಲ ಧರ್ಮಗಳನ್ನು ಸಮಾನ ದೃಷ್ಟಿಯಿಂದ ಕಾಣುವ ಎಲ್ಲ ಜನರಿಗೂ ತಮ್ಮ ತಮ್ಮ ಧರ್ಮಕ್ಕನುಸಾರವಾಗಿ ಬದುಕುವ ಸ್ವಾತಂತ್ರ್ಯ ಕೊಟ್ಟು ಎಲ್ಲ ಧರ್ಮಗಳಿಗೂ ಪ್ರೊತ್ಸಾಹ ಕೊಟ್ಟಿದ್ದನ್ನು ಕಾಣುತ್ತೇವೆ. ಆದರೂ ಕೂಡ ಧರ್ಮದ ವಿಷಯಕ್ಕೆ ಬಂದಾಗ ಕೆಲವೊಮ್ಮೆ ಧರ್ಮ–ಧರ್ಮಗಳ ನಡುವೆ ಸಂಘರ್ಷಣೆಗಳಾಗಿರುವುದನ್ನು ಕಾಣುತ್ತೇವೆ. ತಮ್ಮ ತಮ್ಮ ಧರ್ಮವೇ ಶ್ರೇಷ್ಠವೆಂದು ಒಂದು ಧರ್ಮದವರು ಮತ್ತೊಂದು ಧರ್ಮವನ್ನು ಹಿಯಾಳಿಸುವುದು, ಬೇರೆ ಧರ್ಮದ ಧರ್ಮ ಸಂಖ್ಯೆತಗಳನ್ನು ಹಾಳು ಮಾಡುವುದು. ಇನ್ನೊಂದು ಧರ್ಮದ ಮೇಲೆ ದಂಡೆತ್ತಿ ಹೋಗಿ ನಾಶ ಮಾಡುವುದು. ಹೀಗೆ ತಮ್ಮ ತಮ್ಮ ಧರ್ಮವೇ ಶ್ರೇಷ್ಠವೆಂದು ಹೊಡೆದಾಡುವುದನ್ನು ಕಾಣುತ್ತೇವೆ.

ಶೈವ, ವೈಷ್ಣವ ಬೌದ್ಧ, ಜೈನ ಮುಂದಾದ ಧರ್ಮಗಳ ನಡುವೆ ಸಂಘರ್ಷಗಳು ನಡೆದು. ಶೈವರು ಜೈನರನ್ನು ಸಂಹರಿಸಿ ಜಿನಾಲಯಗಳನ್ನು ಒಡೆದು ಅಲ್ಲಿ ಶಿವಲಿಂಗಗಳನ್ನು ಪ್ರತಿಷ್ಟಾಪಿಸುವುದು. ವೈಷ್ಣವರು ಹರಿಯ ಹೊರತು ದೇವರಿಲ್ಲ ಹರಿಯೇ ಸರ್ವೋತ್ತಮನೆಂದು ವಾದಿಸುವುದು. ಶೈವರು ಶಿವನ ಹೊರತು ಬೇರೆ ದೇವರಿಲ್ಲ ಎಂದು ಹೇಳುವುದು. ಕೊನೆಗೆ ವಾದದಲ್ಲಿ ಸೋತವರನ್ನು ಸಂಹರಿಸುವುದು ಇಲ್ಲವೆ ತಮ್ಮ ಧರ್ಮಕ್ಕೆ ಮತಾಂತರ ಮಾಡಿಕೊಳ್ಳುವುದು ಹೀಗೆ ಧರ್ಮಧರ್ಮಗಳ ನಡುವೆ ಸಂಘರ್ಷಗಳು ನಡೆಯುತ್ತವೆ.

ಪ್ರಮುಖ ಪದಗಳು : ಜೈನ, ವೈಷ್ಣವ, ಬೌದ್ಧ, ಶೈವ

ಕ್ರಿಶ, 1672 ರಲ್ಲಿ ಕವಿ ಶಾಂತಲಿಂಗ ದೇಶಿಕನಿಂದ ರಚನೆಯಾದ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ ಗ್ರಂಥವು ಮುಖ್ಯವಾಗಿ ಶೈವ ಧರ್ಮವನ್ನು ಪ್ರತಿಪಾದಿಸುವ ಕಾವ್ಯವಾಗಿರುವುದರಿಂದ ಶೈವ ಧರ್ಮವೇ ಶ್ರೇಷ್ಠವೆಂದು ಆ ಮೂಲಕ ಶಿವನೊಬ್ಬನೆ ದೇವರೆಂದು ಅವನ ಹೊರತು ಬೇರೆ ದೇವರಿಲ್ಲ ಎಂದು ಪ್ರತಿಪಾದಿಸುತ್ತದೆ. ಆ ನಿಟ್ಟಿನಲ್ಲಿ ಇಲ್ಲಿ ಶೈವರಿಗೆ ವೈಷ್ಣವರಿಗೆ ಬ್ರಾಹ್ಮಣರಿಗೆ, ಜೈನರಿಗೆ ಸಂಘರ್ಷಗಳಾಗುವುದು ಸಾಮಾನ್ಯ, ಅಂತಹ ಅನೇಕ ಧರ್ಮಸಂಘರ್ಷದ ಅಂಶಗಳನ್ನು ಈ ಕಾವ್ಯದಲ್ಲಿ ಕಾಣುತ್ತೇವೆ.

*** ಆದಯ್ಯನೊಡನೆ ಬಂದ ಸೌರಾಷ್ಟ್ರ ಸೋಮೇಶ್ವರ :**

"ಬಂದಂ ತಾಪಸರೂಪಿ
ಲೆಂದ ನಾದಯ್ಯನ
ಹಿಂದೆ ಸೌರಾಷ್ಟ್ರಸೋಮೇಶಾ"[1]

ಉತ್ತರದೇಶದೊಳೊಪ್ಪುವ ಸೌರಾಷ್ಟ್ರಪುರದಲ್ಲಿ ಆನಂದಿ ಗಣೇಶ್ವರನೆಂಬಾತನೆ ಶಿವಭಕ್ತರ ಉದರದಲ್ಲಿ ಜನಿಸಿ ಆದಯ್ಯನೆಂಬ ಹೆಸರಿನಿಂದ ಪುಲಗೆರೆಗೆ ವ್ಯವಹಾರಕ್ಕೆ ಬಂದು ಲಕ್ಷ್ಮೇಶ್ವರದ ಗುಹೆಯಲ್ಲಿರುವಾಗ ಸುರಹೊನ್ನೆಯ ಬಸ್ತಿಯಲ್ಲಿರುವ ಜಿನನ ಕಣ್ಣಲ್ಲಿ ನೀರು ಸುರಿಯಲು ಜೈನರು ಇದನ್ನು ನೋಡಿ ನಮಗೆ
ಹಲಾಯುಧ, ಸಾಮವೇದಿಗಳಿಗೆ ಇಷ್ಟಾರ್ಥವನ್ನು ಕೊಟ್ಟ ಶಿವನೇ ಎಂದು ಶಿವನನ್ನು ನೆನೆಯುತ್ತ ಹೋಗುವಾಗ ವೃದ್ಧ ಜಂಗಮನಾಗಿ ಬಿಲ್ವವೃಕ್ಷದಲ್ಲಿ ನಿಂತು ಆದಯ್ಯನಿಗೆ ಎಲ್ಲಿಗೆ ಹೋಗುತ್ತಿರುವಿ ಭಕ್ತ ಎಂದು ಕೇಳಲು ಆದಯ್ಯ ಜಿನವಾದದಿಂದ ಸೌರಾಷ್ಟ್ರ ಸೋಮೇಶ್ವರನನ್ನು ಪುಲಿಗೆರೆಗೆ ತರಲಿಕ್ಕೆ ಹೋಗುತ್ತಿರುವೆನೆನಲು ಆಗ ಆ ವೃದ್ಧ ಸೋಮೇಶ್ವರ ನಾನೇ ಎಂದು ಹೇಳಲು ನೀವು ಚರಲಿಂಗವು ಲಿಂಗರೂಪವಾಗಿ ಬರಬೇಕೆನಲು ಸೋಮವಾರ

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ. ಮೈಲಾರಪ್ಪ ಎನ್. ಶಿದ್ದಗಿರಿಸಹಾಯಕ ಪ್ರಾದ್ಯಾಪಕರು ಸಿ ಎಸ್ ಬೆಂಬಳಗಿ ಮಹಾವಿದ್ಯಾಲಯ
ರಾಮದುರ್ಗ

How to cite this article:
ಡಾ. ಮೈಲಾರಪ್ಪ ಎನ್. ಶಿದ್ದಗಿರಿ,*(2026).* ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರದಲ್ಲಿ ಧರ್ಮ ಸಂಘರ್ಷದ ನೆಲೆಗಳು..
Journal of Research and Development, 18(4(II)), 31–34. https://doi.org/10.5281/zenodo.19394809

Quick Response Code:
Website: https://jrdrvb.org/
DOI: 10.5281/zenodo.19394809
OPEN ACCESS

[1] ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ, ಸಂ: ಡಾ॥ ಆರ್.ಸಿ. ಹಿರೇಮಠ, ಪು.ಸಂ.೭೧, ಪದ್ಯ ೧೦೮.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಸುರಹೊನ್ನೆಯ ಬಸ್ತಿಯಲ್ಲಿ ನಂದಿಯನೇರಿ ನಿಂತುದ್ದೆ ಗುರುತು ಹೋಗು ಎಂದು ಹೇಳಿ ಪುಲಿಗೆರೆಗೆ ಬಂದಾಗ ಇತ್ತ ಜೈನರು ಶಿವನ ಕರೆದು ತಂದೆಯಾ ಆದಯ್ಯ ಕುರುಹೆನು? ಎಂದು ಕೇಳಿದಾಗ ಮುಂದೆ ತೋರಿಸುವೆನೆನುವಾಗ ಪೂಜಾರಿ ಬಂದು ಬಸ್ತಿಯ ಬಾಗಿಲು ತೆಗೆದರೆ ಅದ ತೆಗೆಯದಿರಲು ಆಗ ಆದಯ್ಯ ಬರಲು ಶಿವನು ಬಾಗಿಲನು ತೆರೆಯಲೆಂದು ಸುರಿಗೆಯ ಕೊಡಲು ಅದರಿಂದ ಏಳುಸಾವಿರ ಜಿನರನ್ನು ಸಂಹರಿಸಿ ಎಲ್ಲಾ ಬಸದಿಗಳನೊಡೆದು ಸೋಮೇಶ್ವರನ ಪ್ರತಿಷ್ಠಾಪಿಸಿ ನಂದಿಯಿಂದ ಸುರಹೊನ್ನೆಯ ಬಸದಿಯ ತುಳಿಸಿ ಶಿವಭಕ್ತಿಯ ಮಹಿಮೆಯನ್ನು ಮೆರೆದು ಭಕ್ತಿದಾಸೋಹವನ್ನು ಮಾಡುತ್ತಿದ್ದು ಆದಯ್ಯನು ಸೌರಾಷ್ಟ್ರ ಸೋಮೇಶ್ವರನೆಂಬ ತಮ್ಮ ಇಷ್ಟಲಿಂಗದಲ್ಲಿ ನಿರವಲಯವಾಗುವಲ್ಲಿ ಗುರು ಲಿಂಗ ಜಂಗವ ಮೊದಲಾದ ಅಷ್ಟಾವರಣ ಸ್ಥಳಕುಳ ಅಂಗಲಿಂಗ ಸಂಬಂಧ ಭಕ್ತಿ ನಿಷ್ಠೆಯುಳ್ಳವರಿಗೆ ಎಂದೆಂದೂ ಒಂದೇ ಎಂದು ಗೀತವನ್ನು ನಿರೂಪಿಸಿ ಲಿಂಗದಲ್ಲಿ ನಿರವಲಯವಾದರು.

* **ಶಿವಭಕ್ತಿ ಮಹಿಮೆಯಿಂದ ವಿಪ್ರರ ಕುಷ್ಠರೋಗ ಕಳೆದ ಗುಡ್ಡವ್ವೆ :**

ನಾವದಿಗೆಯೆಂಬ ಪುರದಲ್ಲಿ ಹಿರಿಯ ಕುಲದೊಳು ಹುಟ್ಟಿ ಗುಡ್ಡವ್ವೆ ಎಂಬ ಶಿವಶರಣೆ ಇದ್ದು ಅವಳಿಗೆ ಮೈಯೆಲ್ಲಾ ಕುಷ್ಠಾಗಿ ಆ ಭಕ್ತೆಯೊಂದು ದಿನ ಬೀದಿಯಲ್ಲಿ ಹೋಗುವಾಗ ನಾವದಿಗೆಯ ಬ್ರಾಹ್ಮಣರ ಅಗ್ರಹಾರದಲ್ಲಿ ವಿಪ್ರರು ಅವಳಿಗೆ ಮೈಗೆಟ್ಟವಳು ವೊಲತಿ ನೀನು ಉತ್ತಮ ದ್ವಿಜರಿಪ್ಪ ಅಗ್ರಹಾರಕ್ಕೆ ಬರಬೇಡ ಎಂದು ತಡೆದು ನಿಂದೆಯನ್ನು ಮಾಡಲು ಅವಳು ಶಿವಶಿವಾ ಎಂದು ಸೌರಾಷ್ಟ್ರ ಸೋಮೇಶ್ವರನನ್ನು ಕರೆದು ತರುವೆನೆಂದು ಹೋಗುವಾಗ ದಾರಿಯಲ್ಲಿ ಶಿವ ಬಂದು ಮಗಳೇ ನೀನೇಕೆ ಬಳಲಿ ಬಂದೆ? ನಾನೇ ಬರುತ್ತೆನೆಂದು ಹೇಳಿ ಅವಳ ಭಕ್ತಿಯನ್ನು ಮನ್ನಿಸಿ ಮೈದಡಹಿ ಬಳಲಿಕೆಯನ್ನು ನಿವಾರಿಸಿ ಮರಳಿ ಕಳುಹಿಸಿ, ಶಿವನು ಬಂದು ನಾವದಿಗೆಯಲ್ಲಿ ಸ್ಥಾಪ್ಯವಾದನು.ಆ ಶಿವನನ್ನು ಕಂಡಾಗ ಗುಡ್ಡವ್ವನ ಕುಷ್ಠರೋಗ ಹೋಗಿ ದಿವ್ಯ ಶರೀರಿಯಾದಳು.ಅಲ್ಲಿದ್ದ ವಿಪ್ರರೆಲ್ಲರು ಕುಷ್ಠ ಶರೀರಿಗಳಾಗಿ ಕಂದಿ ಕುಂದುತ್ತಿರಲು ಆ ಕುಷ್ಠ ವಿಪ್ರರು ಮೊದಲಾದ ಅನಂತ ಕುಲದವರೆಲ್ಲ ಬಂದು ಗುಡ್ಡವ್ವನ ಅಂಗಳಲ್ಲಿ ಸಾಷ್ಟಾಂಗವೆರಗಿ ಸ್ತುತಿಸಲು ಅವರಿಗೆ ಅಭಯವಿತ್ತು ಶಿವಭಕ್ತಿ ಮಹಿಮೆಯಿಂದ ಸಮಸ್ತ ಜಾತಿಗಳಿಗೆ ಅಂಗದ ರೋಗವ ಪರಿಹರಿಸಿ ಸೋಮೇಶ್ವರ ಲಿಂಗದಲ್ಲಿ ಬೆರೆದಳು.

ಪರಸಮಯದ ಚಕ್ರವರ್ತಿಯ ಕೊಂದ ವೀರಬ್ರಹ್ಮಯ್ಯ :

ಚಕ್ರವರ್ತಿಯ ಧರಾ
ಚಕ್ರವಜೆಯಲು ಪ
ರಾಕ್ರಮಿ ವೀರಬ್ರಹ್ಮಯ್ಯ
ಚಕ್ರದಿಂ ಪೊಡೆದ
ಘಚಕ್ರಕ್ಕೆ ಕಳುಪಿದ
ವಿಕ್ರಮವೆಂತೆನೆ ಪೇಳ್ವೆಂ"[2]

ಗಂಡಗತ್ತರಿಯ ನಾಚಯ್ಯಗಳು ಕೈಲಾಸಕ್ಕೆ ಹೋಗಲು ಇತ್ತ ಅವರ ಕೂಡೆ ವಾದಿಸಿದ ವೈಷ್ಣವಾಚಾರ್ಯನ ಶಿಷ್ಯ ಪಾಲ್ಯಚಕ್ರವರ್ತಿಯೆಂಬುವನು ಶಿವಭಕ್ತರು ಗೆದ್ದರೆ ನಮ್ಮ ಸಮಯವ ಕೊಂದಾರೆಂದು ವಿಷ್ಣುವಿನ ಮೆರವಣಿಗೆ ಮಾಡುವೆನೆಂಬ ನೆಪದಿಂದ ಚತುರಂಗ ಬಲವಕೂಡಿ ಗೋಪ್ಯದಲ್ಲಿರಲು ಇತ್ತ ವೀರ ಬ್ರಹ್ಮಯ್ಯನೆಂಬ ಭಕ್ತನು ಆ ವೈಷ್ಣವನನ್ನು ಸಂಹರಿಸಬೇಕೆಂದು ಅವನನ್ನು ಹುಡುಕುತ್ತಾ ಬರುತ್ತಿರಲು ಪಾಲ್ಯಚಕ್ರವರ್ತಿಯು ಅವರನ್ನು ಕರೆಸಿ ಶ್ರೀನಾಥನ ಉತ್ಸವದಲ್ಲಿ ಕದನ ಬೇಡ ಮೆರವಣಿಗೆಯ ನೋಡಿ ಎನಲು ಶಿವಭಕ್ತರು ನೋಡಲಾಗದು ಎನಲು ಅವನು ತನ್ನ ಚತುರಂಗಬಲದೊಡಗುಡಿ ಅವರನ್ನು ಹಿಡಿದು ಬಂಧಿಸುವೆನೆಂದು ಬರಲು ವೀರಬ್ರಹ್ಮಯ್ಯ ನಾರಾಯಣನ ಗುಡಿಯನ್ನೇರಿ ಚಕ್ರವ ತಿರುಹಿ ಬಿಡಲು ಪಾಲ್ಯ ಚಕ್ರವರ್ತಿಯ ಬಲವನ್ನು ಮತ್ತು ಎಲ್ಲ ವೈಷ್ಣವರನ್ನು ಸಂಹರಿಸುತ್ತ ಬರಲು ಕಂಡು ಹೆದರಿ ವೈಷ್ಣವರು ಶರಣಹೋದರು. ಶರಣು ಹೊಕ್ಕವರಿಗೆ ಅಭಯಕೊಟ್ಟು ರಕ್ಷಿಸಿ ವೀರಬ್ರಹ್ಮಯ್ಯನು ಶಿವಭಕ್ತಿ ಪ್ರಭಾಮಹಿಮೆಯ ಮೆರೆದು ತಮ್ಮಿಷ್ಟಲಿಂಗದಲ್ಲಿ ಬೆರೆದರು.

* **ಎಲೆನಾಡ ಚೋಳನ ತಲೆಗೊಂಡ ಗಂಡನು ವೀರಬಲದೇವ :**

"ಎಲೆನಾಡ ಚೋಳನ
ತಲೆಗೊಂಡ ಗಂಡನು
ಜ್ವಲ ವೀರ ಬಲದೇವನಂತೆ
ಬಲುಕ್ಷಪನನ ಕೊಂದ
ಸಲೆ ಸಗರದ ಬ್ರಹ್ಮ
ನೊಲು ವೀರಬ್ರಹ್ಮ ನಿರಿದನು"[3]

ಎಲೆನಾಡ ಚೋಳನು ತನ್ನ ಗುರುವಾದ ಬೌದ್ಧನನ್ನು ಮಲ್ಲಿಕಾರ್ಜುನ ಪಂಡಿತರು ಕೊಲ್ಲಿಸಿದರೆಂದು ಅವರ ಕಣ್ಣುಗಳನ್ನು ಕೀಳಲು ಆಜ್ಞೆಯನ್ನು ಮಾಡಲು ಅವರು ಶಿವಗಣಗಳ ಸ್ಮರಣೆ ಮಾಡಿ ಕಣ್ಣುಗಳನ್ನು ಪಡೆದು ದ್ರಾಕ್ಷಾರಾಮಕ್ಕೆ ಹೋಗಲು ಇತ್ತ ಅವರ ಶಿಷ್ಯನಾದ ಬಲದೇವಯ್ಯನೆಂಬ ವೀರಭಕ್ತನು ಕೊಲ್ಲಬೇಕೆಂದು ಹೋಗುವಾಗ ಶಿವನು ಅವನ ತ್ರಿಶೂಲದಿಂದಿರಿದು ಸ್ವಪ್ನದಲ್ಲಿ ಬಂದು ಬಲದೇವನಿಗೆ ಹೇಳಿದನು ಭೂಪನ ಮರಳಿ ಕರೆದುಕೊಂಡು ಬರಹೇಳು ಎನಲು ಅವರು ಒಲ್ಲೆವೆನಲು ಅತ್ತ ಆ ಚೋಳನು ಸತ್ತನು. ಬಲದೇವಯ್ಯಗಳು ತಮ್ಮ ಗುರುಪಂಡಿತರಾಧ್ಯರ ಬಳಿಗೆ ಹೋಗಿ ಸುಖದಲ್ಲಿದ್ದರು.

* **ಬಲಕ್ಷಪಣನ ಕೊಂದ ಸಗರದ ಬ್ರಹ್ಮಯ್ಯ :**

ಸಗರದ ಬ್ರಹ್ಮಯ್ಯನೊಡನೆ ಜೈನರು ಜಿನ್ನನೆ ದೈವವೆಂದು ವಾದಿಸಲು ಶಿವನೆ ದೈವವೆಂದು ಬ್ರಹ್ಮಯ್ಯ ವಾದಿಸಲು ಆ ಜೈನರು ದೃಷ್ಟವ ತೋರಿಸು ಎನಲು ನಾವು ದೃಷ್ಟವ ತೋರಿದೊಡೆ ನಿಮ್ಮ ಸಮಯವ ಸಂಹರಿಸುವೆವು ಎಂದಾಗ ಆಗಲಿ ಎಂದು ಜೈನರು ಹೇಳಿದಾಗ ಉಕ್ಕಿನ ಘಟ್ಟಿಯ ಕಾಯಿಸಿ ಕೊಪ್ಪರಿಗೆ ಎಣ್ಣೆ ಕಾದಿರಲು ಅದರೊಳಗೆ ಅದ್ದಿ, ಕರದಲ್ಲಿ ಹಿಡಿದು ಜೈನರಿಗೆ ಕೊಡಲು ಅವರು ಹಿಡಿಯಲಾರದೆ ಬೆದರಿ ಓಡಿ ಹೋದರು. ಬಳಿಕ ಬ್ರಹ್ಮಯ್ಯ ಒಡೆಯ ತನುಮನಸಂಗಮೇಶ್ವರನಲ್ಲದೆ ಬೇರೆದೈವವಿಲ್ಲವೆಂದು ದ್ವಜವನೆತ್ತಿಸಿ, ಮೆರೆಸುತ್ತ ಡಂಗುರವನ್ನು ಸಾರಿಸಿ ಜೈನ ಪಡೆಯನೆಲ್ಲವನ್ನು ಸಂಹರಿಸಿ ಸಗರದ ಬ್ರಹ್ಮಯ್ಯನಂತೆ ವೀರಬ್ರಹ್ಮಯ್ಯನು ವೈಷ್ಣವ ಮತವನ್ನು ಸಂಹರಿಸಿದನು.

* **ಮಾಕಾಂತನಮಿತನಂದೇಕಾಂತ ರಾಮಯ್ಯ :**

"ಮಾಕಾಂತನಮಿತನಂ
ದೇಕಾಂತ ರಾಮಯ್ಯ
ಗಾಕಸ್ಮಿಕದಿ ನುಡಿದಂತೆ
ಪ್ರಕಟವೆಸೆಯಲಂ
ಬಾಕಾಂತನ ಶರೀರ
ವಾಕಾಗಿ ಪಗಲ್ತೊಣೆಯಾಂಡಿ"[4]

---

[2] ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ, ಸಂ: ಡಾ॥ ಆರ್.ಸಿ. ಹಿರೇಮಠ, ಪು.ಸಂ.೨೫೯, ಪದ್ಯ ೩೩೪.

[3] ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ,ಸಂ: ಡಾ॥ ಆರ್.ಸಿ. ಹಿರೇಮಠ, ಪು.ಸಂ. ೨೬೧, ಪದ್ಯ ೩೩೬

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ರಜತಾದ್ರಿಗೆ ದಕ್ಷಿಣ ಭಾಗದಲ್ಲಿ ಒಪ್ಪುವ ಅಬ್ಬಲೂರೆಂಬ ಪುರವು ಸರ್ವಶೃಂಗಾರದಿಂದೊಪ್ಪುತಿರಲು ಅಲ್ಲಿ ಅನಂತ ಜೈನಮತ ಜಿನಾಲಯವಿರಲು ಅದರ ಮಧ್ಯದಲ್ಲಿ ಅಂದರೆ ಏಳುನೂರು ಬಸ್ತಿಗಳ ನಡುವೆ ಬ್ರಹ್ಮೇಶ್ವರ ಲಿಂಗದ ಗುಡಿ ಇದ್ದಿತ್ತು. ಅದಕ್ಕೆ ಮಜ್ಜನ ಪೂಜೆಗಳು ತಡೆದಿರಲು ಆ ಲಿಂಗವು ಮಹಿಮೆಯುಳ್ಳ ಸದ್ಭಕ್ತನ ತಂದು ಜೈನರ ಮರ್ದಿಸುವೆನೆಂದು ನೆನೆದು ಉರಿಗಣ್ಣಿನಿಂದ ಕೊಲ್ಲದೆ ಭಕ್ತರಿಂದ ಕೊಲ್ಲಿಸುವೆನೆಂದು ಇರಲು, ಇತ್ತ ಉತ್ತರ ದಿಶಾಭಾಗದೋಳು ಶಿವಪುರದಲ್ಲಿ ಏಕಾಂತ ರಾಮಯ್ಯನೆಂಬ ಭಕ್ತನಿದ್ದು, ದಿಶಾಭಾಗದಲ್ಲುಳ್ಳ ಶಿವಭಕ್ತರಿದ್ದ ಶಿವಕ್ಷೇತ್ರವ ನೋಡುವೆನೆಂದು ನೆನೆಯಲು ಅಬ್ಬಲೂರಿನ ಜಿನ ಪ್ರತಿಮೆಗಳು ನಡುಗಲು ಆ ಊರಿನಿಂದ ಹೊರಗೆ ಬರುತ್ತಾ ಭವಿಗಳನ್ನು ಭಕ್ತರನ್ನಾಗಿ ಮಾಡುತ್ತ ಸಕಲ ದೇಶವ ನೋಡುತ್ತ ಬರುವಾಗ ಮುಂದೆ ಅಬ್ಬಲೂರಿನಲ್ಲಿ ಜಿನಬಸ್ತಿಗಳು ಕಣ್ಣಿಗೆ ಬೀಳದಾಗಿ ತೋರಲು ಅದರ ಮುಂದೆ ಹರಭಕ್ತನ ಕಂಡು ಕೈಯನೆತ್ತಿ ಪೊಡಮೊಡುತಿರಲಾಗ ಜಿನಪ್ರತಿಮೆಗಳೆಲ್ಲಾ ನಡುಗಿ ಕಣ್ಣೀರಿಕ್ಕುತ್ತ ತಲ್ಲಣಿಸುತ್ತ ಉತ್ಪಾತವಾಗಲು ಊರಹೊಕ್ಕು ನೋಡಿದಾಗ ಅಲ್ಲೆಲ್ಲಾ ಜಿನ ಬಸ್ತಿಗಳಿರಲು ಮನದಲ್ಲಿ ಖತಿಗೊಂಡು ಕತ್ತಲೆಯಾದಾಗ ಅಲ್ಲೆ ಉಳಿದಿರಲು ಹರನು ಭಕ್ತನ ವೇಷದಲ್ಲಿ ಬಂದು ಬ್ರಹ್ಮೇಶ್ವರನ ಗುಡಿ ಇದೆ ಎಂದು ಹೇಳಿ ಹೋಗಲು, ಗುಡಿಗೆ ಬಂದು ಲಿಂಗವ ನೋಡುವಾಗ ಒಬ್ಬ ಜೈನನು ಕೆರಹುಗಾಲಿನಲ್ಲಿ ಗುಡಿಗೆ ಬರಲು ಅದನ್ನು ಕಂಡು ರಾಮಯ್ಯ ಕೆರವುಗಾಲಿನಲ್ಲಿ ಹರನಿಳಯವನ್ನು ಹೋಗುವರೆ? ಅರಿಯದೆ ಹೋದೆನೆಂದು ಶರಣುಮಾಡಿ ನಿನ್ನ ಶಿರವನುಳಿಸಿಕೊ.ಇಲ್ಲವಾದರೆ ನಿನ್ನ ತಲೆಯ ಹೊಡೆಯುವೆನೆನಲು, ನನ್ನ ತಲೆಯ ಹೊಡೆದೊಡೆ ನಿನ್ನ ಬಿಂಕವ ನೋಡುವರಾರು? ಮೊದಲು ನಿನ್ನ ತಲೆಯ ನೀನೆ ಹೊಡೆದುಕೊಂಡು ಮರಳಿ ಪಡೆದರೆ ನಾವೆಲ್ಲ ಜಿನನಬಿಟ್ಟು ಗೊರವನ ಪೂಜಿಸುವೆವು ಎನಲು ಒಡಂಬಟ್ಟು ಭುವನದೊಳಗೆ ಭಕ್ತರ ಮುಂದೆ ಭಾಷಾ ಪತ್ರವನ್ನು ಬರೆದು ಅಬ್ಬಲೂರು ಅಣ್ಣಿಗೇರಿ ಪುಲಿಗೆರೆ ಸೊನ್ನಲಿಗೆ, ಹೇಮಕೂಟ, ಕಪ್ಪಡಿ ಕೆಂಬಾವಿ, ಕಲ್ಯಾಣ ಮೊದಲಾದ ಊರಲ್ಲಿ ಒಂದೆ ದಿನ ಪವಾಡ ಮೆರೆವಂತೆ ಭಾಷೆ ಪತ್ರವನ್ನು ಬರೆದು ಬಿಜ್ಜಳನ ಕರದಲ್ಲಿತ್ತು. ತನ್ನ ಶಿವರಿದು ಮತ್ತೆ ಪಡೆದುಕೊಂಡು ಜಿನರಕೊಂದು ಬಸ್ತಿಗಳ ಕೆಡಹುವೆನೆಂದು ಸಭೆಯಲ್ಲಿ ನುಡಿಯಲು ಬಸವಣ್ಣ ಮೊದಲಾದ ಪುರಾತನರು ಜಯಜಯವೆನಲಾಗ ಎಡದ ಕೈಯಲ್ಲಿ ತನ್ನ ಶಿರವ ಹಿಡಿದು ಬಲದ ಕೈಯಲ್ಲಿದ್ದ ಅಲಗಿನಿಂದ ಶಿರವನರಿದುಕೊಂಡು ಭಲರೆ ಭಲರೆ ಶಿವಭಕ್ತರದೆ ಗೆಲವು ಎಂದು ನುಡಿದು ವೀರಭಕ್ತಿಯೊಳೊಪ್ಪಿ ಕಲ್ಯಾಣದ ಮೂನ್ನೂರ ಅರವತ್ತು ಬೀದಿಯಲ್ಲಿ ಮೆರೆದು ಭಕ್ತ ಸಭೆಗೆ ಬಂದು ಶಿರವ ಪಡೆದಿರಲು ಭೂಮಿಶ ಮೊದಲಾದವರು ಅಡ್ಡಬಿದ್ದು ವಂದಿಸುವಾಗ ಶರಣರು ಉಘೆ ಎಂದು ಕೀರ್ತಿಸಲು ಜಿನಮತವನ್ನು ಸಂಹರಿಸಿ ಬಸ್ತಿಗಳನೊಡೆದು ಅಬ್ಬಲೂರು ಬಸ್ತಿಗಳಲ್ಲಿ ಲಿಂಗವ ಪ್ರತಿಷ್ಠಿಸಿ ಶಿವಭಕ್ತಿಯನ್ನು ಮೆರೆದು ಏಕಾಂತರಾಮಯ್ಯನು ಎನ್ನಯ್ಯಪ್ರಿಯ ಚನ್ನರಾಮೇಶ್ವರನೆಂಬ ತಮ್ಮ ಇಷ್ಟಲಿಂಗದಲ್ಲಿ ನಿಜಸುಖ ಪಡೆದರು.

*** ಸೋತ ಜೈನರನ್ನು ಕೊಲ್ಲಲು ಶೂಲವನ್ನು ರಚಿಸಿದ ಕುಲಚ್ಚರಿ :**

"ಕಜಿಕಂಠನಾ ಕುಲ
ಚ್ಚಜಿಯರ್ಗೆ ಶೂಲವ
ನೆಱೆ ರಚಿಸೆಂದುಸುರ್ದಂತೆ
ಬಿಜುದನಿಯಂ ಧರ್ಮ
ಗುಜಿ ಸಾಜಿ ದೃಷ್ಟವ
ಮೆಱೆದ ಖಚರವಾಕಿನಂತೆ"[5]

ಚೋಳದೇಶದ ಕರವ್ಹೂರದಲ್ಲಿದ್ದ ರಾಜೆಂದ್ರಚೋಳರಾಯನ ಮಗಳು ಮಂಗಾಯಕ್ಕರಸಿಯನು ಪಾಂಡ್ಯಮಂಡಲದ ಮದುರೆಯೆಂಬ ಪಟ್ಟಣದಲ್ಲಿದ್ದ ಸೌಂದರಪಾಂಡ್ಯನಿಗೆ ಮದುವೆಯ ಮಾಡಿ ರಾಜೇಂದ್ರ ಚೋಳ ತನ್ನ ಮಗಳಿಗೆ ಸಕಲಸಾಧನ ನಡೆಸುವುದಕ್ಕೆ ಕುಲಚ್ಚೆರಿಯರೆಂಬ ನಿಯೋಗಿಯನ್ನು ಮದುರೆಗೆ ಕಳುಹಿಸಲು ಸೌಂದರ್ಯಪಾಂಡ್ಯನು ಆತನಿಗೆ ಮಂತ್ರಿಪದವಿಯನ್ನು ಕೊಡಲು ಸರ್ವಪಾರುಪತ್ಯವನ್ನು ನಡೆಸುತ್ತ ಲಿಂಗಪೂಜೆಯನ್ನು ಮಾಡುವಾಗ ಆಕಾಶವಾಣಿಯಿಂದ ಶಿವನು ನುಡಿದನು. ಎಲೆ ಕುಲಚ್ಚೆರಿಯೆ ಮುಂದೆ ಜೈನರ ವಾದ ಬರುತ್ತದೆ. ಉದಯದಲ್ಲೆದ್ದು ಐದು ಪಂಚಲೋಹದ ಶೂಲವನ್ನು ಮಾಡಿಸಿ ಭೈನಿಗೆಯೆಂಬ ಹೊಳೆಯ ಮಳಲೊಳಗೆ ಮುಚ್ಚಿಟ್ಟು ದಿನಂಪ್ರತಿಯಲ್ಲಿ ತಪ್ಪದೆ ಲಿಂಗ ಪೂಜೆಯನ್ನು ಮಾಡು ಎಂಬ ವಾಕ್ಯವನ್ನು ಕೇಳಿ ಶಿವನು ಹೇಳಿದಂತೆ ಹದಿನೆಂಟು ಸಾವಿರ ಶೂಲವನ್ನು ಮಾಡಿಸಿ ಇಟ್ಟಿರಲು ಬಳಿಕ ತಿರುಜ್ಞಾನ ಸಂಬಂಧಿಗಳು ಮಂಗಾಯಕ್ಕರಿಸಿಯರ ಬಿನ್ನಹದಿಂದ ಮಧುರೆಗೆ ಬಂದು ಪುತನಂದಿ ಮೊದಲಾದ ಜೈನರ ಸೋಲಿಸಿ ಭವಿಯಾಗಿದ್ದ ಕೂನಪಾಂಡ್ಯನ ಶಿವ ಭಕ್ತನಾದ ಸೌಂದರಪಾಂಡ್ಯನನ್ನಾಗಿ ಮಾಡಿ ಸೋತ ಶ್ರವಣರನು ಆ ಕುಲಚ್ಚೆರಿಯರು ಮಾಡಿದ ಶೂಲವ ತರಸಿ ಹದಿನೆಂಟು ಸಾವಿರ ಶ್ರವಣರನು ಶೂಲಕ್ಕೆ ಹಾಕಿಸಿ ಮೆರೆದರು.

*** ಜೈನಕುಲದಲ್ಲಿ ಹುಟ್ಟಿ ಶಿವಭಕ್ತನಾದ ಸಾಂಖ್ಯತೊಂಡ :**

ಶಾಂತಮಂಡಲದಲ್ಲಿ ಕಾಳಬೌದ್ಧನೆಂಬ ಜೈನನ ಹೊಟ್ಟೆಯಲ್ಲಿ ಸಾಂಖ್ಯತೊಂಡನೆಂಬ ಭಕ್ತನು ಹುಟ್ಟಿ, ಈ ಪಾಪಿ ಮಲಧಾರಿಗಳ ಕುಲದಲ್ಲಿ ಎನ್ನನೇಕೆ ಹುಟ್ಟಿಸಿದೆ ದೇವಾ ಎಂದು ಶಿವಭಕ್ತನಾದಡೆ ಎನ್ನ ಬಾಳಗೊಡರು.ಇಪ್ಪತ್ತೈದು ಗಾವುದದಲ್ಲಿ ಭಕ್ತರ ಕುರುಹಿಲ್ಲ. ನಿನ್ನ ಪೂಜಿಸದೆ ನಾನಿರಲಾರೆನೆಂದು ಜೈನ ಚಾರ್ವಾಕ ಬೌದ್ಧ ಮತಗಳು ಹಾಳಾಗುವಂತೆ ಮೂರು ವೇಳೆಯಲ್ಲಿ ಮೂರು ಕಲ್ಲಿನಿಂದ ನಿನ್ನನಿಡುವೆ ಅದು ನಿನಗೆ ಪುಷ್ಪದ ಪೂಜೆಯೆಂದು ಭಾವಿಸಿ ದಿನ ಮೂರು ಕಲ್ಲಿನಲ್ಲಿ ಗೊರವನ ಇಟ್ಟಲ್ಲದೆ ಉಣ್ಣುವುದಿಲ್ಲವೆಂಬ ನೇಮವ ಹಿಡಿದಿರಲು ಅವನ ತಂದೆ ಕಂಡು ಇಂತಹ ಕುಲಪುತ್ರನುಂಟೆ? ಎಂದು ಹಿಗ್ಗುತ್ತಿರಲು ಕೆಲವು ಕಾಲ ಹೀಗೆ ನಡೆಯಲು ಬಳಿಕ ಲಿಂಗದ ಗುಡಿಗೆ ಹೋಗುವಾಗ ಅಲ್ಲಿ ಹೊಳೆಕಟ್ಟಿರಲು ಮೂರು ದಿನ ಉಪವಾಸವಿದ್ದು. ಹೊಳೆಯಿಳಿದ ನಂತರ ಸಾಂಖ್ಯ ಮುನ್ನಿನ ದೇವಾಲಯಕ್ಕೆ ಹೋಗಿ ಮೂರೊಂಬತ್ತುಗಳು ಇಪ್ಪತ್ತೇಳು ಕಲ್ಲಿನಿಂದ ಇಡುವದೇನೆಂದು ದೊಡ್ಡದೊಂದೆ ಕಲ್ಲಿನಿಂದ ಸಾಕೆಂದು ಎತ್ತಿಕೊಂಡು ಬಂದು ಶಿವನೆ ಕಲ್ಲಪೂಜೆಯ ಕೈಕೊ ಎಂದು ಹಾಕುವಾಗ ಲಿಂಗವು ನಗುತ ಲಿಂಗದೊಳಗಿಂದ ಹಸ್ತವನ್ನು ನೀಡಿ ಕಲ್ಲನೊಂದ ಕಡೆಗೆ ತೊಲಗಿಸಿ ಮೇಲೆ ಬಿಳದಂತೆ, ಪ್ರಸನ್ನವಾಗಿ ಶಿವನು ಮೆಚ್ಚಿದೆ ಬೇಡು ಎನಲು ಸಾಂಖ್ಯನು ವೇದಗಳರಿಯದ ಮೂರ್ತಿಯೇ ಅಹಿತವ ಮಾಡಿದರೂ ಹಿತವ ಮಾಡುವ ಶಾಶ್ವತಮೂರ್ತಿಯೆ ಅಪರಾಧಿಗಳಿಗೆ ಕೃಪೆಯಾಗುವಂತಹ ಸದ್ಗುರು ಮೂರ್ತಿಯೇ ನಿನ್ನ ಶ್ರೀಪಾದವ ಕಂಡು ಕೃತಾರ್ಥನಾದೆನು, ನನ್ನನ್ನು ಪಾಲಿಸುವ ಕೃಪೆ ನಿನಗುಂಟಾದುದರಿಂದ ಈ ಕಲ್ಲಿನಿಂದ ಮುಡಿಗೆ ಪುಷ್ಪಕಲ್ಲ ಮಾಡಿ ಧರಿಸಿಕೋ ನೀ ಎನಲು ಶಂಕರನು ಎಲ್ಲಾ ದೇಗುಲಕ್ಕೆ ಪೊಗಲ್ಲಾಗಿರುವಂತೆ ಆಗ ಮೋಕ್ಷವ ಮಾಡಿ ಧರಿಸಿದನು. ಕಲ್ಲಲ್ಲಿಟ್ಟ ಸಾಂಖ್ಯನ ತನ್ನ ಪಾದಕಮಲದಲ್ಲಿಟ್ಟುಕೊಂಡನು.

*** ಜೈನರ ಪಡೆಯ ಶಿರವನಿರಿದು ಕೊಂದ ವರದಂಡಿ :**

"ಕುರುಪಿನ ಪಾಶವ
ಪರಿದೆಲ್ಲ ಜೈನರು
ಜರಿಯಲದನು ಕೇಳ್ದು ಶಿವಗೆ
ಮೊರೆಯಿಟ್ಟು ಕಂ
ಪ್ಪೆತ್ತು ಕುಜಿದಜಿ ಮಾಡಿದ
ನೆಱೆವೀರ ವರದಂಡಿಯಜಿಯಾ"[6]

---

[5] ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ, ಸಂ: ಡಾ॥ ಆರ್.ಸಿ. ಹಿರೇಮಠ ಪು.ಸಂ.೪೨, ಪದ್ಯ ೬೧.
[6]ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ, ಸಂ: ಡಾ॥ ಆರ್.ಸಿ. ಹಿರೇಮಠ ಪು.ಸಂ.೫೧೧, ಪದ್ಯ ೬೩.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ವರದಂಡಿ ಎಂಬ ಭಕ್ತನು ಜಾತ್ಯೆಂಧಕನಾಗಿದ್ದು, ಲಿಂಗದ ಗುಡಿಗೆ ಕೊಣಕು ಮಿಣಿಯ ಕಟ್ಟಿ ಆ ಮಿಣಿಯ ಬೆಳಕಿನಲ್ಲಿ ಲಿಂಗಕ್ಕೆ ಅಗ್ಗಣಿಯ ತಂದು ಮಜ್ಜನಕ್ಕೆರವಾಗ ಜೈನರು ಆ ಮಿಣಿಯ ಹರಿಯಲು ಹನ್ನೊಂದು ದಿನ ಉಪವಾಸವಿದ್ದು ಶಿವನಿಗೆ ಮೊರೆಯಿಟ್ಟು ಕಣ್ಣಪಡೆದು ಹರಕೆಯ ಕುರಿಯ ಹಬ್ಬಕ್ಕೆ ಹೊಡವಂತೆ ಜೈನರ ಪಡೆಯ ಶಿರವರಿದ ವರದಂಡಿಭಕ್ತನು.

* **ಶ್ರವಣರ ಪಡೆಯ ಕಡಿದ ನಿಡುಮಾರಯ್ಯ :**

"ಮೃಡನ ಮೋಹದ ಭಕ್ತ
ನಿಡುಮಾರದೆವಯ್ಯ
ನೊಡನೆ ವಾದಿಸಿ ಸೋಲ್ದಶ್ರವಣ
ಪಡೆಯನೆಲ್ಲವ ತಲೆ
ಗಡಿದನೆಂಬುದ ಕೇಳಿ
ನಿಡಿಯ ಮಾತೇನೆಲೊ ನಿನಗೆ"[7]

ಪಿಳ್ಳೆನೈನಾರು ಶ್ರವಣರ ಕೊಂದುದ ಕೇಳಿ ನಿಡುಮಾರನೆಂಬ ಭೂಪನು ತನ್ನ ದೇಶದೊಳ್ಳುಳ್ಳ ಜಿನಸಮುದಾಯವನ್ನು ಹಿಡಿದು ತರಿಸಿ ಜರಿದು ಝಂಕಿಸಿ ಸೆರೆಯಲ್ಲಿಟ್ಟು, ಶಿವಭಕ್ತರಾದವರ ಮನ್ನಿಸಿ ಬಿಟ್ಟು ಒಲ್ಲದವರ ಕಡಿಕಡಿದೊಟ್ಟಿದ ನಿಡುಮಾರದೇವನು.

* **ಜೈನರ ಹಲ್ಲುಕಿತ್ತ ವೀರಕಲ್ಲಯ್ಯ :**

"ಗೆಲ್ಲಸೋಲದಿ ಶಿವ
ನಲ್ಲವೆಮ್ಮಯ ಜಿನ
ನಲ್ಲವೆಯೆಂದು ವಾದಿಸಿದಾ
ಕುಲ್ಲ ಜನರ ಕೊಂದು
ಹಲ್ಲು ಕಿತ್ತನು ವೀರ
ಕಲ್ಲಯ್ಯನದ ನೀ ಮರದೆಯಾ"[8]

ಕಲ್ಲಂಬಾಳೆಯೆಂಬ ಪುರದಲ್ಲಿ ವೀರಕಲ್ಲಯ್ಯನಿರುವಾಗ ಒಬ್ಬ ಜೈನನು ಉತ್ಪತ್ತಿ ಸ್ಥಿತಿ ಲಯಕ್ಕೆ ಕರ್ತ ಜಿನನಲ್ಲದೆ ಶಿವನಲ್ಲವೆಂದು ವಾದಿಸಿ ಸೋಲಲು ಆಗ ಅವರ ಹಲ್ಲುಗಳನ್ನು ಕಿತ್ತು ವೀರಗಣಗಳಿಗಿತ್ತು ಜೈನರನ್ನು ಕೊಂದನು ವೀರಕಲ್ಲಯ್ಯ.

* **ಜೈನರ ಶಿರವರಿದ ಕಲಿಸೋಮ :**

"ಹರ ಬಹು ಸಂಸಾರಿ
ಯರುಹ ನಿಸ್ಸಂಸಾರಿ
ಪಿರಿದೆಮ್ಮ ಸಮಯವೆಂಬರ
ನಿರದೆ ತಿಳುಹಲೊಲ್ಲ
ದಿರೆ ಕೋಪದಿಂ ಶಿರ
ವರಿದಿಟ್ಟ ಕಲಿ ಸೋಮನಜಿಯಾ"[9]

ವಿಶ್ವರಾಪೂರದಲ್ಲಿ ವೀರಸೋಮಯ್ಯನಿರುವಾಗ ಒಬ್ಬ ಜೈನನು ಹರನು ಬಹು ಸಂಸಾರಿ, ಸತಿ ಸುತರು ದೇಶಕೋಶ ಸಕಲೈಶ್ವರ್ಯವುಂಟು.ಹಸಿದು ಹರದನ ಶಿಶುವನುಂಡು ಅಹಿಂಸಾ ಧರ್ಮವೆಂಬುದನರಿಯಾ, ಬ್ರಹ್ಮಹತ್ಯವನ್ನು ಮಾಡಿ ಕುಲಗೆಟ್ಟು ಹೊಲೆಯನೊಡಗುಡಿದನು.ನಮ್ಮ ಜಿನನಾಥನೆ ಯತಿ, ಸಿಸ್ಸಂಸಾರಿ, ನಿರಾಳನೆನಲು ಅವನೊಡನೆ ವಾದಿಸಿ ಹರನು ಸಕಲ ನಿಃಕಲ ನಿರ್ಮಲನೆಂದು ವೇದದಲ್ಲಿ ಹೇಳಿದೆ.ಜಿನಮಹಿಮೆಯ ತೊರಿಸಿ ಎನಲು ಅವನು ಸೋಲಲು ಜೈನನ ಶಿರವ ತರಿದು ಮೆಟ್ಟುಗಲ್ಲಡಿಗಿಟ್ಟು ಜಿನನ ಒಡೆದು ಆ ಗುಡಿಯಲ್ಲಿ ವೀರಸೋಮಯ್ಯನೆಂಬ ಲಿಂಗವ ನಿಲಿಸಿ ಮೆರೆದನು.

---

[6] ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ, ಸಂ: ಡಾ॥ ಆರ್.ಸಿ. ಹಿರೇಮಠ, ಪು.ಸಂ.೪೦೫, ಪದ್ಯ ೬೦.
[7] ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ, ಸಂ: ಡಾ॥ ಆರ್.ಸಿ. ಹಿರೇಮಠ, ಪು.ಸಂ.೪೦೬, ಪದ್ಯ ೬೧.
[8] ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ,. ಸಂ: ಡಾ॥ ಆರ್.ಸಿ. ಹಿರೇಮಠ, ಪು.ಸಂ.೪೦೬, ಪದ್ಯ ೬೨.
[9] ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ,. ಸಂ: ಡಾ॥ ಆರ್.ಸಿ. ಹಿರೇಮಠ, ಪು.ಸಂ.೪೦೭, ಪದ್ಯ ೬೩.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಅನುಪಮಾ ನಿರಂಜನರ 'ಮಾಧವಿ'

ಡಾ. ಆರತಿ ತಮದಡ್ಡಿ
ಕನ್ನಡ ಉಪನ್ಯಾಸಕರು
ಕೆ.ಎಲ್.ಇ ಸಂಸ್ಥೆಯ
ಬಸವಪ್ರಭು ಕೋರೆ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಮಹಾವಿದ್ಯಾಲಯ ಚಿಕ್ಕೋಡಿ.
ಇಮೇಲ್– arutamadaddi@gmail.com

Manuscript ID:
JRD -2026-180411
ISSN: 2230-9578
Volume 18
Issue 4(II)
Pp.35-36
April 2026
Submitted:05 Mar. 2026
Revised:20Mar. 2026
Accepted:05Apr.2026
Published:30 April2026

ಸಾರಲೇಖ :

ಪ್ರಾಚೀನ ಕಾಲದಿಂದಲೂ ಸ್ತ್ರೀ ತನ್ನ ಬದುಕಿನುದ್ದಕ್ಕೂ ಮಗಳಾಗಿ, ಸಹೋದರಿಯಾಗಿ, ಹೆಂಡತಿಯಾಗಿ, ಅಜ್ಜಿಯಾಗಿ ಪುರುಷ ಸಮಾಜದಲ್ಲಿಅಚ್ಚುಕಟ್ಟಾದ ಪಾತ್ರವನ್ನು ನಿರ್ವಹಿಸುತ್ತಾ ಬಂದಿದ್ದಾಳೆ. ಆದರೆಇಂತಹ ಸಮಾಜದ ಮಧ್ಯದಲ್ಲಿಯೇ ಅನೇಕ ನೋವು, ಸಂಕಟಗಳನ್ನು ಅನುಭವಿಸುತ್ತಾತನ್ನ ಅಳಿದುಳಿದ ಅಸ್ತಿತ್ವಕ್ಕಾಗಿ ಹೋರಾಡಿದ್ದಾಳೆ. ಅವಳನ್ನು ಕೇವಲ ಲಿಂಗಾಧಾರದ ಮೇಲೆ ಕೌಟುಂಬಿಕ ನಿರ್ವಹಣೆಗೆ, ದೈಹಿಕ ಸುಖಕ್ಕೆ, ಒಂದಾದ ಮೇಲೊಂದರಂತೆಗಂಡು ಮಗುವಾಗುವವರೆಗೂ ಸಂತಾನ ಹೇರುವ ಪ್ರಾಣಿಯಂತೆ ಬಳಕೆಯಾಗುವ ಸಾಮಗ್ರಿಯಾಗಿದ್ದಳು. ಈ ಜಗತ್ತಿನಲ್ಲಿ ಸಾಮಾನ್ಯ ಮಹಿಳೆಯರನ್ನೊಳಗೊಂಡಂತೆ ರಾಜಮನೆತನದ ಸ್ತ್ರೀಯರು ದೌರ್ಜನ್ಯಕ್ಕೆ ಒಳಗಾಗಿರುವುದಕ್ಕೆ ನಮ್ಮ ಭಾರತದ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತದಲ್ಲಿ ಬರುವ ಸೀತೆ, ದ್ರೌಪದಿಯಂತಹ ಸ್ತ್ರೀ ಪಾತ್ರಗಳೇ ಸಾಕ್ಷಿ. ಕಾಲಾನಂತರದಲ್ಲಿ ಸ್ತ್ರೀ ತನ್ನ ಅಸ್ತಿತ್ವವನ್ನು ಶಿಕ್ಷಣ, ಸಾಮಾಜಿಕ, ರಾಜಕೀಯ ಹೀಗೆ ಹಲವಾರು ರಂಗಗಳಲ್ಲಿ ಹುಡುಕಲಾರಂಭಿಸಿದಳು. ಆದರೂಇವತ್ತಿಗೂ ಸ್ತ್ರೀ ತನ್ನ ಅಸ್ತಿತ್ವವನ್ನು ಸಂಪೂರ್ಣವಾಗಿ ಕಂಡುಕೊಳ್ಳಲಾಗಿಲ್ಲ.

ಮುಖ್ಯ ಪದಗಳು :ಹೆಣ್ಣಿನ ಅಸ್ತಿತ್ವ, ದೌರ್ಜನ್ಯ, ಮತ್ಸರ, ಸಂತಾನದಅಪೇಕ್ಷೆ, ತಿರಸ್ಕಾರ.

ಪೀಠಿಕೆ :

ದಲಿತರಲ್ಲಿಯೇದಲಿತರೆಂದು ಕರೆಯಿಸಿಕೊಳ್ಳುವ ಸ್ತ್ರೀಯು ಪ್ರಾಚೀನ ಕಾಲದಿಂದಲೂದೌರ್ಜನ್ಯ, ದಬ್ಬಾಳಿಕೆ, ಅವಮಾನಕ್ಕೆ ಒಳಗಾಗಿದ್ದಾಳೆ. ಇಂತಹದಲಿತೆ ಕೇವಲ ಲಿಂಗ, ಜಾತಿಯಿಂದಷ್ಟೇ ಶೋಷಣೆಗೊಳಗಾಗಿಲ್ಲ, ಚಿಲುಮಿಕೆಯಿಂದಾಗಿ, ಅಸಹಾಯಕತೆ, ಮತ್ಸರ, ಸಂತಾನದಅಪೇಕ್ಷೆ, ತಿರಸ್ಕಾರ ಅಂಶಗಳ ಕಾರಣವಾಗಿ ಹಲ್ಲೆಗೊಳಗಾಗಿದ್ದಾಳೆ. ಅಂತಹದಲಿತರಲ್ಲಿಅನುಪಮಾ ನಿರಂಜನರ 'ಮಾಧವಿ'ಯು ಒಬ್ಬಳು. ಆಕೆ ಹುಟ್ಟಿದಾಗಿನಿಂದಅರಮನೆಯನ್ನುತೊರೆಯುವವರೆಗೂಅನುಭವಿಸುವ ಯಾತನೆಯನ್ನು ಈ ಕಾದಂಬರಿಯುದ್ದಕ್ಕೂಕಾಣುತ್ತೇವೆ.'ಮಾಧವಿ' ಕಾದಂಬರಿಯಕಥಾ ನಾಯಕಿ ಮಾಧವಿ, ಚಂದ್ರವಂಶದಅರಸನಾದಯಯಾತಿಯ ಪುತ್ರಿ. ಇಂತಹರಾಜವಂಶದಕುಡಿಯಾಗಿ ಜನಿಸಿದ ಈಕೆಯು ಸಾಮಾನ್ಯ ಹೆಣ್ಣೊಬ್ಬಳಂತೆ ಅನುಭವಿಸುವ ಸಂಕಟ, ದೌರ್ಜನ್ಯ, ತಿರಸ್ಕಾರ, ಮತ್ಸರಗಳನ್ನು ಇಲ್ಲಿಗುರುತಿಸಬಹುದು. ಈಕೆಯಜನನವಾದ ಕೆಲ ಹೊತ್ತಿನಲ್ಲಿಯೇ ದಾಸಿಯೊಬ್ಬಳು ಯಯಾತಿ ಮಹಾರಾಜನಿಗೆ ನಿಮಗೆ ಹೆಣ್ಣು ಮಗುವಾಯಿತುಎಂದಾಗ " ಹೆಣ್ಣೆ? ಗಂಡಲ್ಲವೆ?"೧ ಎಂದು ಪ್ರಶ್ನಿಸಿ ಮಹಾರಾಣಿಯ ಬರುವಿಕೆಯ ವಿನಂತಿಯನ್ನುತಿರಸ್ಕರಿಸುವನು. ಈ ತಿರಸ್ಕಾರಕ್ಕೆ ಮುಖ್ಯಕಾರಣ ಹುಟ್ಟಿದ ಮಗು ಹೆಣ್ಣೆಂದು. ಇಲ್ಲಿಂದಲ್ಲೇ 'ಮಾಧವಿಯ' ತಿರಸ್ಕಾರದ ಹೆಜ್ಜೆ ಪ್ರಾರಂಭವಾದದ್ದು. ಮಾರನೇ ದಿನ ಮಹಾರಾಣಿಗೆ ಪ್ರಸವ ಸಂದರ್ಭದಲ್ಲಿ ಕಾಣಿಸಿಕೊಂಡ ಅನಾರೋಗ್ಯದಿಂದ ಆಕಸ್ಮಿಕವಾಗಿ ಆಕೆಯ ಸಾವು ಸಂಭವಿಸಿದಾಗ ತಾಯಿಯಅಪಮೃತ್ಯುವಿಗೆ ಮಗು ಮಾಧವಿ ನೇರಕಾರಣವಾಗಿತಂದೆಗೆಅಪಶಕುನದ ಮುದ್ದೆಯಾದಳು. ಅಲ್ಲದೇ ವಿಶ್ವಾಮಿತ್ರರ ಶಿಷ್ಯರಲ್ಲೊಬ್ಬನಾದ ಗಾಲವನು ನೀಡಬೇಕಾದಗುರುದಕ್ಷಿಣೆಗೆ ೮೦೦ ಕುದುರೆಗಳ ಬದಲಾಗಿ ಇವಳನ್ನೇ ದಾನ ಮಾಡಲು ಮನಸ್ಸು ಮಾಡುವನು, ಏಕೆಂದರೆ" ತನ್ನ ವೃದ್ಧಾಪ್ಯಕ್ಕೆ ಆಗುವ ಗಂಡುಮಕ್ಕಳು ಯದು, ದ್ರುಹ್ಯು, ಪುರು ಇವರುಗಳಿರುವಾಗ ಯ:ಕಶ್ಚಿತ್ ಈ ಹುಡುಗಿಯ ಬಗ್ಗೆ ತಾನೇಕೆ ಮರುಗಬೇಕು?"೨ ಹೀಗೆ ಆತ ವಿಚಾರಿಸುವ ಸಂದರ್ಭದಲ್ಲಿ ಆಗಿನ ಸಮಾಜದಲ್ಲಿಗಂಡು ಮಕ್ಕಳಿಗಿರುವ ಪ್ರಾಶಸ್ತ್ಯ ಹೆಣ್ಣುಮಕ್ಕಳ ಬಗೆಗಿರುವತಿರಸ್ಕಾರದ ಭಾವನೆ ಈ ಕಾದಂಬರಿಯಲ್ಲಿಎದ್ದುಕಾಣುತ್ತದೆ. ತಾಯಿಯಿಲ್ಲದೇ, ತಂದೆಇದ್ದುಇಲ್ಲದಂತೆ ದಿನದಿಂದ ದಿನಕ್ಕೆ ತುಂಬುಯೌವ್ವನದ ಸೌಂದರ್ಯ ರಾಶಿಯಾಗಿ ಬೆಳೆದ ಮಾಧವಿಯು ಮಲತಾಯಿಯಾದದೇವಯಾನಿಯಕಣ್ಣನ್ನುಕುಕ್ಕುವಂತೆ ಮಾಡಿತು. ಇಲ್ಲಿಅರಸನು ಸ್ವಂತ ಮಗಳನ್ನು ದಾನ ಮಾಡುವುದರ ಬದಲುಯಾಗ ಮಾಡಿದ್ದರಿಂದ ನನ್ನಲ್ಲಿ ಸಂಪತ್ತಿಲ್ಲವೆಂದು ಹೇಳಿದ್ದರೆ ಆಗುತ್ತಿರಲಿಲ್ಲವೇ? ಇತನ ಸ್ಥಾನದಲ್ಲಿಯಾವುದೇ ಮಹಾದಾನಿ ರಾಜನುಕೂಡ ಮಗಳನ್ನು ದಾನ ಮಾಡಲು ಒಪ್ಪಿಕೊಳ್ಳುತ್ತಿರಲ್ಲಿಲ್ಲ. ಮಾಧವಿಯತಾಯಿ ಬದುಕಿದಿದ್ದರೆಯಯಾತಿಅರಸನು ವಿಶ್ವಾಮಿತ್ರನ ಶಿಷ್ಯನಿಗೆ ಈಕೆಯನ್ನುಒಪ್ಪಿಸುತ್ತಿದ್ದನೇ?

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ. ಆರತಿ ತಮದಡ್ಡಿ, ಕನ್ನಡ ಉಪನ್ಯಾಸಕರು, ಕೆ.ಎಲ್.ಇ ಸಂಸ್ಥೆಯ, ಬಸವಪ್ರಭು ಕೋರೆ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಮಹಾವಿದ್ಯಾಲಯ ಚಿಕ್ಕೋಡಿ.

How to cite this article:
ಡಾ. ಆರತಿ ತಮದಡ್ಡಿ.*(2026).*ಅನುಪಮಾ ನಿರಂಜನರ 'ಮಾಧವಿ'.. *Journal of Research and Development, 18(4(II)), 35–36. https://doi.org/10.5281/zenodo.19394866*

Quick Response Code:
Website: https://jrdrvb.org/
DOI: 10.5281/zenodo.19394866
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ತನ್ನದೈಹಿಕ ಸುಖಕ್ಕಾಗಿ ಮಾಧವಿಯತಾಯಿ ಸತ್ತ ಮೇಲೆ ದೇವಯಾನಿಯನ್ನು, ಶರ್ಮಿಷ್ಠೆಯನ್ನುಈತ ಮದುವೆಯಾಗಿಲ್ಲವೇ? ಹಾಗೆಯೇ ಮಾಧವಿಯದಾನದ ಬದಲಾಗಿಏನನ್ನಾದರೂದಾನ ಮಾಡಬಹುದಿತ್ತಲ್ಲವೇ? ಅದೇದೇವಯಾನಿ ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗಳನ್ನು ದಾನವಾಗಿ ನೀಡಲುಅರಸನಿಗೆ ಸಲಹೆ ನೀಡುತ್ತಿದ್ದಳೆ?ಖಂಡಿತವಾಗಿಯೂಇಲ್ಲ. ಹೀಗೆ ಅನುಕ್ರಮವಾಗಿಯಯಾತಿ ಮತ್ತು ಸಮಯ ಸಾಧಕಿದೇವಯಾನಿಯರತಿರಸ್ಕಾರ ಮತ್ತು ಮಾತ್ಸರ್ಯಗಳು ಗುರುದಕ್ಷಿಣೆಯ ಭಿಕ್ಷಾರ್ಥಿಯಾದ ಗಾಲವನಿಗೆ ಮಾಧವಿ ದಾನದ ವಸ್ತುವಾಗುವಂತೆ ಮಾಡಿದವು.ಹಾಗೆಯೇ ಗಾಲವನು ಮಾಧವಿಯ ಸ್ಥಾನದಲ್ಲಿತನ್ನಕುಟುಂಬದತಾಯಿಯೋ?ಅಕ್ಕ – ತಂಗಿಯೋ? ಹೆಂಡತಿಯೋ? ಮಗಳೋ? ಇದ್ದಿದ್ದರೆಯಾವನೊಬ್ಬನುದಾನ ಕೇಳಿದ ತಕ್ಷಣ ನೀಡುತ್ತಿದ್ದನೇ?ಇಲ್ಲ. ದಾನಕೊಡುವುದಿರಲಿ ಅದರ ಬಗ್ಗೆ ಚಿಂತನೆಕೂಡ ಮಾಡುತ್ತಿರಲ್ಲಿಲ್ಲ. ಆದರೆ ಗಾಲವ ಯಯಾತಿದೊರೆತನ್ನ ಮಗಳನ್ನು ದಾನವಾಗಿ ನೀಡಿದತಕ್ಷಣ ಆ ದಾನವನ್ನು ಸ್ವೀಕರಿಸಿದ್ದು ಎಷ್ಟರ ಮಟ್ಟಿಗೆ ಸರಿ?ತನ್ನ ಸ್ವಾರ್ಥಕ್ಕಾಗಿಒಂದು ಹೆಣ್ಣಿನ ಬದುಕನ್ನು ಹಾಳುಗೆಡುವುದು ಪುಣ್ಯದ ಕೆಲಸವೇ? ಸಂಪ್ರದಾಯ, ಧರ್ಮ, ದೇವರು, ಅಧಿಕಾರ, ಹಣೆಬರಹದ ಹೆಸರಿನಲ್ಲಿ ಶೋಷಿಸುವುದು ಸರಿಯೇ?

ಈ ಕಾದಂಬರಿಯಲ್ಲಿ ಬರುವಐವತ್ತು ವರ್ಷದಅಯ್ಯೋಧ್ಯಾಪತಿ ಹರ್ಯಶ್ವ, ಕಾಶೀರಾಜ ದಿವೋದಾಸ, ಭೋಜದೇಶದಅರಸ ಉಶೀನ ಇವರೆಲ್ಲ ಬ್ರಾಹ್ಮಣನಾದ ಗಾಲವನಿಗೆ ಮೈಯಲ್ಲಾ ಬಿಳಿ ಹಾಗೂ ಒಂದು ಕಿವಿ ಮಾತ್ರಕಪ್ಪು ಬಣ್ಣದಿಂದಕೂಡಿದತಲಾ ೨೦೦ ಅಶ್ವಗಳನ್ನು ಕೊಡುವುದರ ಹಿಂದೆಎರಡು ಉದ್ದೇಶಗಳಿದ್ದವು. ಮಾಧವಿಯದೇಹದ ಮೇಲಿನ ಆಸೆ ಮತ್ತುಗಂಡು ಸಂತಾನದಅಪೇಕ್ಷೆ. ಹೀಗಾಗಿ ಚಕ್ರವರ್ತಿಯಾಗುವಯೋಗವಿರುವಒಂದೊಂದು ಮಗುವನ್ನು ಪಡೆದುಇವರೆಲ್ಲಒಂದು ಸಂವತ್ಸರದ ನಂತರಆಕೆಯನ್ನುಅರಮನೆಯಿಂದ ಹೊರಹಾಕುವರು.ಇಲ್ಲಿ ಪಶುಗಳ ವ್ಯಾಪಾರ ಮಾಡುವಂತೆ ಗಾಲವ ಆಕೆಯಒಪ್ಪಿಗೆಯಿಲ್ಲದೇ ಮೂರುಜನರಾಜರಿಗೆಒಪ್ಪಿಸುವನು.ಕೊನೆಗೆ ಇನ್ನೂ ೨೦೦ ಅಶ್ವಗಳು ಗುರುದಕ್ಷಿಣೆಗೆಕಡಿಮೆ ಬಿದ್ದಾಗ ಗಾಲವ ನೇರವಾಗಿ ವಿಶ್ವಾಮಿತ್ರನಿಗೆ ಅಶ್ವಗಳ ಬದಲು ಮಾಧವಿಯನ್ನೇ ನಿಮಗೆ ಗುರುದಕ್ಷಿಣೆಯಾಗಿಒಪ್ಪಿಸುತ್ತಿದ್ದೇನೆಎಂದನು.ಅದಕ್ಕೆ ವಿಶ್ವಾಮಿತ್ರ "ಎಂಟನೂರು ಅಶ್ವಗಳಿಗೆ ಬದಲಾಗಿ ಈ ಮಾಧವಿಯನ್ನೇ ಸ್ವೀಕರಿಸಿ ಅಂತ ಹೇಳಿ ಇವಳನ್ನು ನನ್ನಲ್ಲಿತಂದು ಬಿಟ್ಟಿದ್ದರೆ ಎಷ್ಟು ಚೆನ್ನಾಗಿತ್ತು!ನಾನೇ ಇವಳನ್ನು ಜೀವಮಾನ ಪರ್ಯಂತ ಭೋಗಿಸಿ ಜಗತ್ತಿಗೆ ಶ್ರೇಷ್ಠರಾದ ನಾಲ್ವರು ಪುತ್ರರನ್ನು ಪಡೀತಿದ್ದೆ"೩ ಎನ್ನುವನು.ಈ ಮಾತನ್ನು ಗಮನಿಸಿದಾಗ ಕಾಮ, ಕ್ರೋಧ, ಲೋಭ, ಮದ, ಮೋಹ, ಮತ್ಸರಗಳೆಂಬ ಅರಿಷಡ್ವರ್ಗಗಳನ್ನು ಗೆದ್ದರಾಜರ್ಷಿ, ಮಹಾತಪಸ್ವಿ ಎನಿಸಿಕೊಂಡ ವೃದ್ಧ ವಿಶ್ವಾಮಿತ್ರನಿಗೆ ಹೆಣ್ಣಿನ ಸೌಂದರ್ಯ ಮತ್ತು ಪುತ್ರ ಸಂತಾನದ ಬಗ್ಗೆ ಅದೆಷ್ಟೋ ವರ್ಷಗಳಿಂದ ಮೋಹವಿದ್ದಿತುಎಂಬುವುದುಗೊತ್ತಾಗುತ್ತದೆ.ಅಲ್ಲದೇ ಮಾಧವಿಯು ಗಾಲವ ನೀಡಿದ ಅಶ್ವಗಳನ್ನು ಸ್ವೀಕರಿಸಿ ಅವುಗಳನ್ನು ಏನು ಮಾಡಿದ್ದೀರಿ?ಎಂದು ವಿಶ್ವಾಮಿತ್ರನಿಗೆ ಕೇಳಿದಾಗ "ನಾನೇನೂ ಮಾಡಿಲ್ಲ. ಅವು ಕಾಡುಮೇಡುಗಳಲ್ಲಿ ಅಲೀತಿರಬಹುದು. ಅದನ್ನು ನೋಡಿದರೆ ನೆರೆರಾಜ್ಯದರಾಜರು ಹೊಡಕೊಂಡು ಹೋಗ್ತಾರೆ, ಇಲ್ಲೇ ಉಳಿದುವನ್ನ ಇಲ್ಲಿಗೆಯಾರಾದರೂರಾಜರು ಬಂದಾಗಕೊಟ್ಟು ಬಿಡೋದು"೪ ಎಂದು ವಿಶ್ವಾಮಿತ್ರನು ಹೇಳುವನು.ಅದಕ್ಕೆ ನಿಮಗೆ ಉಪಯೋಗವಿಲ್ಲದಿರುವ ವಸ್ತುವನ್ನುಯಾಕೆ ಕೇಳಿದ್ದೀರಿ?ಎನ್ನುವಳು.ಗಾಲವ ಗುರುದಕ್ಷಿಣೆ ನೀಡಬೇಕೆಂದು ಹಟ ಹಿಡಿದಿದ್ದಕ್ಕಾಗಿಅವನಿಂದ ಸಾಧ್ಯವಾಗಬಾರದೆಂದು ಈ ರೀತಿ ಹೇಳಿದೆ ಎಂದಾಗತಾನು ಅವುಗಳನ್ನು ಸಂಪಾದಿಸಲು ಪಟ್ಟಪಾಡಿಗಾಗಿ ಸಿಟ್ಟಿನಿಂದ ವಿಶ್ವಾಮಿತ್ರನಿಗೆ ನೀವಿಬ್ಬರು ಸೇರಿ ನನ್ನ ಬದುಕನ್ನು ಹಾಳುಗೆಡಿವಿದ್ದೀರಿ ಎಂದು ಬಯ್ಯುವಲ್ಲಿ ಅವಳಿಗಾದ ನೋವಿಲ್ಲಿ ಬಯಲಾಗುತ್ತದೆ.

ಉಪಸಂಹಾರ :

ಒಟ್ಟಿನಲ್ಲಿ 'ಮಾಧವಿ' ಕಾದಂಬರಿಯಲ್ಲಿ ಬರುವ ಮಾಧವಿಯುತಂದೆಯತಿರಸ್ಕಾರ ಹಾಗೂ ಮಲತಾಯಿಯ ಮತ್ಸರದಿಂದಾಗಿ ಗಾಲವನಿಗೆ ೮೦೦ ಅಶ್ವಗಳ ಗುರುದಕ್ಷಿಣೆಯ ಬದಲು ಇವಳೇ ದಾನವಾಗುವಳು.ದಾನ ಪಡೆದಾತಕನ್ಯಾಶುಲ್ಕರೂಪದಲ್ಲಿ ಮೂರುಜನರಾಜರಿಗೆ, ಒಬ್ಬರಾಜರ್ಷಿಗೆಒಪ್ಪಿಸಲು, ಅವರಿಂದದೇಹ ಮತ್ತು ಸಂತಾನದ ಹೆಸರಿನಲ್ಲಿದೈಹಿಕ ಹಿಂಸೆಯನ್ನು ಅನುಭವಿಸುವಳು. ಪ್ರಸ್ತುತ ಸಂದರ್ಭದಲ್ಲೂಕೂಡ ಸ್ತ್ರೀ ಮೇಲೆ ನಾನಾ ರೀತಿಯಅನ್ಯಾಯ, ದೌರ್ಜನ್ಯ, ದಬ್ಬಾಳಿಕೆಗಳು ಅತ್ಯಾಚಾರ, ಕೌಟುಂಬಿಕ ಹಿಂಸೆ, ಮರ್ಯಾದಾ ಹತ್ಯೆ, ಬಂಜೆತನ, ಧರ್ಮ, ದೇವರು, ಸಂಪ್ರದಾಯ, ಅಧಿಕಾರ, ಹಣೆಬರಹದ ಹೆಸರಿನಲ್ಲಿ ನಡೆಯುತ್ತಿವೆ. ಇಂತಹ ಘಟನೆಗಳು ಜರುಗಿದಾಗಅಥವಾಜರುಗುವ ಸಂದರ್ಭಗಳಲ್ಲಿ ಸ್ತ್ರೀ ಮುಕ್ತವಾಗಿ ಅದನ್ನು ಪ್ರತಿಭಟಿಸಿದರೆ ಅವಳ ಮೇಲಾಗುವ ದೌರ್ಜನ್ಯಗಳು ಅಲ್ಪ – ಸ್ವಲ್ಪವಾದರೂಕಡಿಮೆಯಾದಿತುಎಂಬುದು ಈ ಲೇಖನದಉದ್ದೇಶ.

ಅಡಿ ಟಿಪ್ಪಣಿಗಳು

೧. ಡಾ. ಅನುಪಮಾ ನಿರಂಜನ ; ಮಾಧವಿ ; ೨೦೧೮ ; ಪುಟ– ೧೭

೨. ಅದೇ ; ಪುಟ– ೩೫

೩. ಅದೇ ; ಪುಟ– ೧೫೬

೪. ಅದೇ ; ಪುಟ– ೧೭೨

ಆಕರ ಗ್ರಂಥಗಳು

೧. ಡಾ. ಅನುಪಮಾ ನಿರಂಜನ ; (೨೦೧೮) ; ಮಾಧವಿ ; ಡಿ.ವಿ.ಕೆ. ಮೂರ್ತಿ ಪ್ರಕಾಶನ ; ಮೈಸೂರು.
೨ . ವಿ. ಎಂ.ಇನಾಂದಾರ್ ; (೨೦೦೭) ; ಯಯಾತಿ ; ಅಂಕಿತ ಪುಸ್ತಕ ಪ್ರಕಾಶನ ; ಬೆಂಗಳೂರು.
೩ . ವಂಶಿ ; ಮಹಾಭಾರತ ; (೧೯೮೭) ; ಸಾಹಿತ್ಯ ನಂದನ ಪ್ರಕಾಶನ ; ಬೆಂಗಳೂರು.
೪ .ಗಿರೀಶಕಾರ್ನಾಡ ; ಸಮಗ್ರ ನಾಟಕ ; (೨೦೧೧) ; ಮನೋಹರಗ್ರಂಥ ಮಾಲಾ ; ಧಾರವಾಡ.
೫ . ಬೆನಗಲ್‌ರಾಮರಾವ್ ಮತ್ತು ಪಾನ್ಯಂ ಸುಂದರಶಾಸ್ತ್ರೀ ; (೧೯೪೧) ; ಪುರಾಣನಾಮಚೂಡಾಮಣಿ ; ಬೆಂಗಳೂರು.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ರವೀಂದ್ರನಾಥ ಠಾಕೂರರ ಚಾರಿತ್ರಿಕ ನಾಟಕಗಳ ವಸ್ತುವಿನ್ಯಾಸ (ಠಾಕೂರರ ಕನ್ನಡಾನುವಾದ ನಾಟಕಗಳನ್ನು ಅನುಲಕ್ಷಿಸಿ)

ಡಾ. ಶಮಂತಕುಮಾರ ಕೆ.ಎಸ್
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಕೆ.ಎಲ್.ಇ. ಸಂಸ್ಥೆಯ
ಗುದ್ಲೆಪ್ಪ ಹಳ್ಳಿಕೇರಿ ಪದವಿ ಮಹಾವಿದ್ಯಾಲಯ, ಹಾವೇರಿ

Manuscript ID:
JRD -2026-180412
ISSN: 2230-9578
Volume 18
Issue 4(II)
Pp.37-39
April 2026
Submitted:08 Mar. 2026
Revised:24Mar. 2026
Accepted:10Apr.2026
Published:30 April2026

ಪೀಠಿಕೆ:

ಏಷ್ಯಾದ ಮೊದಲ ಸಾಹಿತ್ಯಿಕ ನೊಬೆಲ್ ಪಾರಿತೊಷಕದ ಗೌರವಕ್ಕೆ ಪಾತ್ರರಾದ ಕೀರ್ತಿ ರವೀಂದ್ರನಾಥ ಠಾಕೂರರದು. ಇವರು ಭಾರತದ ಒಂದು ಸಾಹಿತ್ಯ ಶಕ್ತಿಯಾಗಿ ಗುರುತಿಸಿ ಕೊಂಡವರು. ಮಹಾತ್ಮ ಗಾಂಧೀಜಿ ಅವರಿಂದ 'ಗುರುದೇವ' ಎಂಬ ಬಿರುದನ್ನು ಅವರು ಹೊಂದಿದರು. ಠಾಕೂರರು ಕಾವ್ಯ, ಕತೆ, ಕಾದಂಬರಿ, ನಾಟಕ, ಅನುವಾದ ಹೀಗೆ ಹತ್ತು ಹಲವು ಸಾಹಿತ್ಯಿಕ ಕ್ಷೇತ್ರಗಳಲ್ಲಿ ಅದ್ವಿತೀಯ ಕೃಷಿ ಮಾಡಿದವರು. ಅವರ ಒಂದೊಂದು ಸಾಹಿತ್ಯ ಬಗೆಯು, ಒಂದೊಂದು ತಾತ್ವಿಕ ಚಿಂತನೆಯನ್ನು ಪ್ರತಿನಿಧಿಸುತ್ತದೆ. ಚಿತ್ರಕಲೆ, ನಾಟಕ ನಿರ್ದೇಶನದಲ್ಲೂ ಠಾಕೂರರು ಆಸಕ್ತಿಯನ್ನು ಹೊಂದಿದ್ದರು.ಓರ್ವ ವ್ಯಕ್ತಿ ದೊಡ್ಡ ಸಾಧಕನಾಗಿ ಹೊರಹೊಮ್ಮಬೇಕಾದರೆ ಆತನ ಬೆಳವಣಿಗೆಯಲ್ಲಿ ಆತನ ಬಾಲ್ಯದ ಪರಿಸರ ಬಹುಮುಖ್ಯ ಪಾತ್ರ ವಹಿಸುತ್ತದೆ.ಠಾಕೂರರ ಜೀವನ ಸಾಧನೆಯಲ್ಲಿ, ಅವರ ಬೆಳವಣಿಗೆಯಲ್ಲಿ ಅವರ ಕೌಟುಂಬಿಕ ಪರಿಸರ ಬಹಳ ಪರಿಣಾಮ ಬೀರಿರುವುದನ್ನು ಅವರ ಕೃತಿಗಳ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳಬಹುದಾಗಿದೆ.

ಠಾಕೂರರ ನಾಟಕಗಳಲ್ಲಿ ಅನಿಕೇತನದ ಪರಿಕಲ್ಪನೆ ಇದ್ದು ಅವು ಸದಾ ಹೊಸತನದಡೆಗೆ ತುಡಿಯುತ್ತವೆ ಹಳೆಯದನ್ನು ಗಾಳಿಗೆ ತೂರಿ, ಅಲ್ಲಿ ನೂತನತೆಯ ತೋರಣವನ್ನು ಕಟ್ಟುವಂತಹವುದಾಗಿವೆ. ಅವರ ಚಾರಿತ್ರಿಕ ನಾಟಕಗಳಲ್ಲೂ ಈ ಮಾದರಿಯನ್ನು ಗುರುತಿಸಬಹುದಾಗಿದೆ. ಅವುಗಳಲ್ಲಿ ಮಾನವಪ್ರೇಮ, ಮಾನವಸ್ವಾತಂತ್ರ್ಯ, ಅಭಿವ್ಯಕ್ತಿತ್ವ, ಸೋದರತ್ವ, ಧರ್ಮಸಮನ್ವಯತೆ, ವಿಶ್ವಭ್ರಾತೃತ್ವ, ಸ್ತ್ರೀಸಂವೇದನೆ, ದಲಿತ ಸಂವೇದನೆ, ಕಾಮ, ಮೋಕ್ಷ ಹೀಗೆ ಮಾನವರ ಬದುಕಿನ ಹಲವು ಮಜಲುಗಳನ್ನು ನಾಟಕಗಳಲ್ಲಿ ತೆರೆದಿಟ್ಟಿದ್ದಾರೆ.ಚಾರಿತ್ರಿಕತೆಯು ಪುರಾಣಗಳಿಗಿಂತಲೂ ಹೆಚ್ಚು ಖಚಿತವಾದದ್ದು.ಸತ್ಯಕ್ಕಿಂತಲೂ ಇಮ್ಮಡಿ ದೂರವೇನೂ ಚಾರಿತ್ರಿಕತೆ ಉಳಿದಿಲ್ಲ. ಕಾಲಗರ್ಭದಲ್ಲಿ ನೈಜ ಕಥನವಾಗಿರುವ ಅದೆಷ್ಟೋ ಪಳೆಯುಳಿಕೆಗಳನ್ನು ಹೊರತೆಗೆದು ಅವುಗಳಿಗೆ ವರ್ಣರಂಜಿತವಾಗಿರುವ ಲೇಪವನ್ನು ಅಥವಾ ಸ್ಪರ್ಶವನ್ನು ನೀಡಿದಾಗ ಅವು ಐತಿಹಾಸಿಕ ಅಥವಾ ಚಾರಿತ್ರಿಕ ನೆನಪುಗಳಿಗೆ ಸಾಕ್ಷಿಯಾಗಿ ನಿಲ್ಲಬಲ್ಲವು. ಪುರಾಣನಾಟಕಗಳಿಗೆ ಹೋಲಿಸಿದರೆ ಐತಿಹಾಸಿಕ ನಾಟಕಗಳ ಸಂಖ್ಯೆ ಬಹಳ ಕಡಿಮೆ ಎನ್ನಬಹುದು. ಬಹುತೇಕ ನಾಟಕ ರಚನಾಕಾರರ ಆಸಕ್ತಿ ಪೌರಾಣಿಕ ವಸ್ತುವಿನ ಕಡೆಗೆ ಇತ್ತು ಈ ಕುರಿತು ಕೆ.ಮರುಳಸಿದ್ದಪ್ಪ ಅವರು ಈ ಕೆಳಗಿನ ಕೆಲವು ಕಾರಣವನ್ನು ನೀಡುತ್ತಾರೆ.

ಮುಖ್ಯ ಪದಗಳು :
ಮಾನವಪ್ರೇಮ, ಮಾನವಸ್ವಾತಂತ್ರ್ಯ, ಅಭಿವ್ಯಕ್ತಿತ್ವ, ಸೋದರತ್ವ, ಧರ್ಮಸಮನ್ವಯತೆ, ವಿಶ್ವಭ್ರಾತೃತ್ವ, ಸ್ತ್ರೀಸಂವೇದನೆ, ದಲಿತ ಸಂವೇದನೆ, ಕಾಮ, ಮೋಕ್ಷ

1. ಪುರಾಣಗಳಂತೆ ಸಮೃದ್ಧವಾಗಿ ಚಾರಿತ್ರಿಕ ದಾಖಲೆಗಳು ನಾಟಕಕಾರನಿಗೆ ದೊರೆಯದೆ ಹೋಗಿರುವುದರಿಂದ ಚಾರಿತ್ರಿಕ ನಾಟಕಗಳ ರಚನೆಯಲ್ಲಿ ಹಿನ್ನೆಡೆ ಉಂಟಾಯಿತು.

ಭಾರತ ಪುರಾಣ ಸಾಹಿತ್ಯದಲ್ಲಿ ಬಹಳ ಶ್ರೀಮಂತಿಕೆಯನ್ನು ಹೊಂದಿ ಜನಮಾನಸದೊಂದಿಗೆ ಬೆರತಿರುವುದರಿಂದ ಬೇಕಾದಷ್ಟು ದಾಖಲೆಗಳು ನಾಟಕಕಾರನಿಗೆ ಲಭ್ಯವಾದ್ದರಿಂದ ಪೌರಾಣಿಕ ನಾಟಕಗಳ ಸಂಖ್ಯೆ ಅಧಿಕವಾಗಿ ರಚನೆಯಾಯಿತು. ಮರುಳಸಿದ್ದಪ್ಪನವರ ಅಭಿಪ್ರಾಯ ಸ್ವಲ್ಪಮಟ್ಟಿಗೆ ಸತ್ಯವೆನಿಸಬಹುದು. ಆದರೆ ಕ್ರಮೇಣ ಐತಿಹಾಸಿಕವಾಗಿ ನಾಟಕಗಳಲ್ಲಿ ಬೆಳಕನ್ನು ಕಂಡಿರುವುದು ಕಂಡುಬರುತ್ತದೆ. ಒಂದು ಕಾಲದಲ್ಲಿ ಇತಿಹಾಸವನ್ನು ಕುರಿತ ಭಾರತೀಯರ ಜ್ಞಾನ ಕಡಿಮೆ ಇತ್ತೆಂಬುದನ್ನು ಸತ್ಯ. ಬೆರಳೆಣಿಕೆಯಷ್ಟು ನಾಟಕಕಾರರು ಚರಿತ್ರೆಯ ಪ್ರಮುಖ ಘಟನೆಗಳನ್ನು ದಾಖಲಿಸಿ, ಅದಕ್ಕೆ ನಾಟಕ ರೂಪವನ್ನು ನೀಡಿ ಜನರ ಬಳಿ ಮುಕ್ತವಾಗಿಸಿದರು.ಠಾಕೂರರ ಸುಪ್ತಪ್ರಜ್ಞೆ ಕೇವಲ ಪುರಾಣಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಅವರು ಇತಿಹಾಸದ ಪುಟಗಳ ಅದೆಷ್ಟೋ ಚಾರಿತ್ರಿಕ ಅಂಶಗಳ ಕಡೆ ತಮ್ಮ ಗಮನವನ್ನು ಹರಿಸಿ ನಾಟಕದ ರೂಪಕ್ಕಿಳಿಸಿದ್ದಾರೆ. ಅವುಗಳಲ್ಲಿ ಈ ಮೂರು ನಾಟಕಗಳು ಮುಖ್ಯವಾದವುಗಳು–

1. ನರ್ತಕಿಯ ಪೂಜೆ, 2..ರಾಜ, 3. ಮುಕ್ತಧಾರ

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ. ಶಮಂತಕುಮಾರ ಕೆ.ಎಸ್, ಕನ್ನಡ ಸಹಾಯಕ ಪ್ರಾಧ್ಯಾಪಕರು, ಕೆ.ಎಲ್.ಇ. ಸಂಸ್ಥೆಯ
ಗುದ್ಲೆಪ್ಪ ಹಳ್ಳಿಕೇರಿ ಪದವಿ ಮಹಾವಿದ್ಯಾಲಯ, ಹಾವೇರಿ

How to cite this article:
ಡಾ. ಶಮಂತಕುಮಾರ ಕೆ.ಎಸ್ *(2026).*ರವೀಂದ್ರನಾಥ ಠಾಕೂರರ ಚಾರಿತ್ರಿಕ ನಾಟಕಗಳ ವಸ್ತುವಿನ್ಯಾಸ (ಠಾಕೂರರ ಕನ್ನಡಾನುವಾದ ನಾಟಕಗಳನ್ನು ಅನುಲಕ್ಷಿಸಿ). *Journal of Research and Development, 18(4(II)), 37–39. https://doi.org/10.5281/zenodo.19394913*

Quick Response Code:

Website:
https://jrdrvb.org/

DOI:
10.5281/zenodo.19394913

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

1. ನರ್ತಕಿಯ ಪೂಜೆ

1927ರಲ್ಲಿ ರಚಿಸಿದ ನರ್ತಕಿಯ ಪೂಜೆ(ನಟಿರ್ ಪೂಜಾ) ನಾಟಕವು ರವೀಂದ್ರ ಅವರ ಅಚ್ಚುಮೆಚ್ಚಿನ ನಾಟಕಗಳಲ್ಲೊಂದು. ಕಲ್ಕತ್ತದಲ್ಲಿ ಇದನ್ನು ಮೊದಲು ಪ್ರದರ್ಶಿಸಿದಾಗ ಎಲ್ಲರೂ ಆಶ್ಚರ್ಯಗೊಂಡರು.ಆ ನಾಟಕದಲ್ಲಿ ಮೊದಲ ಬಾರಿಗೆ ಬಂಗಾಳದ ಉಚ್ಚಕುಟುಂಬಕ್ಕೆ ಸೇರಿದ ಕನ್ನಿಕೆಯರು ಭಾಗವಹಿಸಿ ನರ್ತನ ಮಾಡಿದರು.ಕೆಲವರು ಇದನ್ನು ಕಟುವಾಗಿ ಟೀಕಿಸಿದರು.ಆದರೆ "ನಾಟಕದಲ್ಲಿನ ಉದಾತ್ತ ಭಾವನೆಗಳು, ಸುಂದರ ದೃಶ್ಯಗಳು ಅವರ ಟೀಕೆಯನ್ನು ಕೂಡಲೇ ಅಣಗಿಸಿದವು.ಭಾರತದ ದಿವ್ಯಕಲೆಗಳಲ್ಲಿ ಒಂದಾದ ನೃತ್ಯಕಲೆಗೆ ಉನ್ನತ ಸ್ಥಾನವೂ ಲಭಿಸಿತು."ಈ ಮಾತುಗಳಿಂದ ಠಾಕೂರರು ತಮ್ಮ ನಾಟಕದ ಮೂಲಕ ನೃತ್ಯಕಲೆಯನ್ನು ಪೋಷಿಸಿರುವುದು ವ್ಯಕ್ತವಾಗುತ್ತದೆ ಜೊತೆಗೆ ನಾಟಕದಲ್ಲಿಯ ವಸ್ತು ಉದಾತ್ತ ಚಿಂತನೆಗಳನ್ನು ಒಳಗೊಂಡಿರುವುದನ್ನು ಗಮನಿಸಬಹುದು.

ಭಾರತದಲ್ಲಿ ವಸಾಹತುಶಾಹಿ ವ್ಯವಸ್ಥೆ ರೂಪುಗೊಂಡ ಮೇಲೆ ಎಂದರೆ ಇಂಗ್ಲಿಷರ ಆಗಮನದಿಂದಾಗಿ ಅನೇಕ ಆವಿಷ್ಕಾರಗಳು ನಡೆದವು. ಅಂತವುಗಳಲ್ಲಿ ಭಾರತದ ಇತಿಹಾಸದ ಆಕರಗಳನ್ನು ಸಂಗ್ರಹಣೆ ಸಾಹಿತ್ಯ ಕೃತಿಗಳ ಶೋಧನೆ ಮುಖ್ಯವಾಗುತ್ತದೆ. ಶಾಸನಗಳ ಸಂಗ್ರಹ ಮತ್ತು ವಿಶ್ಲೇಷಣೆ ಪುರಾತತ್ವ ಶೋಧನೆ ಸ್ಮಾರಕಗಳ ಬಗ್ಗೆ ನಡೆದ ಅಧ್ಯಯನಗಳು, ಉತ್ಖನನಗಳು ಇತಿಹಾಸದ ಮೇಲೆ ಹೊಸ ಬೆಳಕನ್ನು ಚೆಲ್ಲಿದವು. ಕ್ರಮೇಣ ಇತಿಹಾಸ ರಚನೆ ಆರಂಭವಾಯಿತು.ರಾಜ–ಮಹಾರಾಜರ, ಮಂತ್ರಿಗಳು, ರಾಣಿಯರ ಸಾಹಸಗಳು, ಹೋರಾಟಗಳು ನಾಟಕರೂಪದಲ್ಲಿಯೂ ರಚನೆಯಾಗತೊಡಗಿದವು.

ರವೀಂದ್ರನಾಥ ಠಾಕೂರರ ನೃತ್ಯನಾಟಕದಲ್ಲಿ 'ನರ್ತಕಿಯ ಪೂಜೆ' ನಾಟಕವು ಮಹತ್ವದ್ದಾಗಿದೆ. ಈ ನಾಟಕವು ಬೌದ್ಧಧರ್ಮದ ಹಿನ್ನೆಲೆಯಲ್ಲಿ ರಚಿತವಾಗಿದೆ.ನಾಟ್ಯರಾಣಿ ಶ್ರೀಮತಿ ಮಗಧೆಯ ಆಸ್ಥಾನದ ನರ್ತಕಿ.ಬೌದ್ಧಧರ್ಮದ ಚಿಂತನೆಯ ಪ್ರಭಾವಕ್ಕೆ ಒಳಗಾದ ಮಗಧೆಯ ರಾಜ ಬಿಂಬಸಾರನು ಬುದ್ಧನ ಚಿಂತನೆಯ ಅನುಯಾಯಿಯಾಗುತ್ತಾನೆ. ಅವನ ಕುಮಾರನೂ ಬೌದ್ಧಬಿಕ್ಷುವಾಗುವನು.ಆದರೆ ಅವನ ಎರಡನೇ ಮಗನಾದ ಅಜಾತಶತ್ರು ಹಿಂದುಗಳನ್ನೆಲ್ಲ ತನ್ನ ಪಕ್ಷಕ್ಕೆ ಸೇರಿಸಿಕೊಂಡು ರಾಜ್ಯವನ್ನು ತನಗೆ ಬಿಟ್ಟು ಕೊಡಬೇಕೆಂದು ತಂದೆಯನ್ನು ಕೇಳುವನು. ಬುದ್ಧನ ಆದೇಶದಂತೆ ರಾಜನು ಸಂತೋಷದಿಂದ ಮಗನಿಗೆ ರಾಜ್ಯವನ್ನು ಒಪ್ಪಿಸಿ ತಾನು ತಪಸ್ಸು ಮಾಡುವುದಕ್ಕಾಗಿ ಕಾಡಿಗೆ ಹೋಗುವನು. ರಾಣಿ ಲೋಕೇಶ್ವರಿ ಒಮ್ಮೆ ಬುದ್ಧನ ಮೇಲಿನ ಭಕ್ತಿಯಿಂದಲೂ ಇನ್ನೊಮ್ಮೆ ಪತಿ–ಪುತ್ರರನ್ನು ಅಗಲಿದ ದುಃಖದಿಂದಲೂ ಕೊರಗುವಳು.

ನಾಟಕ ಆರಂಭದಲ್ಲಿ ಬೌದ್ಧಬಿಕ್ಷು ಒಬ್ಬನು ರಾಜಧಾನಿಗೆ ಬಂದು ಶ್ರೀಮತಿಯನ್ನು ಆಶೀರ್ವದಿಸಿ "ಶೀಘ್ರದಲ್ಲಿ ಬುದ್ಧನು ನಿನ್ನನ್ನು ಕಾಣುವನು, ನೀನು ಅಮೂಲ್ಯವಾದ ಕಾಣಿಕೆಯನ್ನು ಆತನಿಗೆ ಅರ್ಪಿಸು" ಎನ್ನುವನು.ಶ್ರೀಮತಿ ಆತನು ಏನನ್ನು ಕೇಳಿದರೂ ಕೊಡಲು ಸಿದ್ಧವಾಗಿರುವೆನು.ಆದರೆ ನಾನು ಕೊಡಬೇಕಾದ ಅಮೂಲ್ಯ ಕಾಣಿಕೆ ಯಾವುದೆಂದು ನನಗೆ ತಿಳಿಯದು ಎಂದು ಹೇಳುವಳು.ಈ ನಾಟಕ ಹಿಂದೂಧರ್ಮಚಾರಿಗಳು ಮತ್ತು ಬೌದ್ಧಮತ ವಿರಕ್ತಿಗಳ ಘರ್ಷಣೆಯನ್ನು ಸ್ಪಷ್ಟವಾಗಿ ಗಮನಿಸಬಹುದು.ಅಶೋಕ ವೃಕ್ಷದ ಅಡಿಯಲ್ಲಿ ಬುದ್ಧನ ಸಾಯಂಕಾಲದ ಪೂಜೆಯನ್ನು ಶ್ರೀಮತಿ ಸ್ವತಃ ಮಾಡಬೇಕೆಂದು ಬೌದ್ಧ ಸಂಘವು ಅಜ್ಞಾಪಿಸುವುದು.ಅಜಾತಶತ್ರು ಶ್ರೀಮತಿ ಪೂಜೆ ಮಾಡಲು ಸಾಧ್ಯವಿಲ್ಲವೆಂದೂ, ಮಾಡಿದರೆ ಮರಣದಂಡನೆ ವಿಧಿಸಲಾಗುವುದೆಂದು ಸಾರುವನು ಮತ್ತು ಎಲ್ಲಿ ಪೂಜೆ ಮಾಡಬೇಕಾಗಿತ್ತೋ ಅದೇ ಸ್ಥಳದಲ್ಲಿ ಸಾಯಂಕಾಲ ನಾಟ್ಯವಾಡಬೇಕೆಂದು ಹೇಳುವನು.ಇದು ಬಹಳ ಅವಮಾನಕರವೆಂದು ಎಲ್ಲರೂ ಭಾವಿಸುವರು.ಏನು ಮಾಡಲು ತೋಚಿದ ಶ್ರೀಮತಿ ಬಾಧೆ ಪಡುತ್ತಿದ್ದಾಗ ಆಕೆಗೆ ಅಶರೀರವಾಗಿ ಬುದ್ಧನ ಮಾತು ಕೇಳಿಸುವುದು.ಆತನಿಗೆ ಕೊಡಬೇಕಾದ ಕಾಣಿಕೆ ತನ್ನ ಸಂಗೀತ ನೃತ್ಯವೇ ಎಂದು ಆಕೆಗೆ ಗೋಚರವಾಗುತ್ತದೆ.ಮರುಕ್ಷಣದಲ್ಲಿ ಅಂದವಾಗಿ ಅಲಂಕರಿಸಿಕೊಂಡು ಬಿಚ್ಚುಗತ್ತಿಯ ಭಟರನ್ನು ಲೆಕ್ಕಿಸದೆ ಅಶೋಕ ವೃಕ್ಷದ ಬಳಿಗೆ ಹೋಗುವಳು.ಆ ದಿನ ಅವಳ ನೃತ್ಯ ಗೀತೆಗಳು ಪರಮಾತ್ಮನ ಸೇವೆಯಾಗಿ ಮಾರ್ಪಡುವುದೆಂದು, ನಾಟ್ಯವಾಡುತ್ತಾ ತಾನು ಧರಿಸಿದ ಆಭರಣಗಳನ್ನೆಲ್ಲ ಒಂದೊಂದಾಗಿ ತೆಗೆದು ಬುದ್ಧನಿಗೆ ಕಾಣಿಕೆಯಾಗಿ ಸಮರ್ಪಿಸುವಳು.ಕೊನೆಯಲ್ಲಿ ಸನ್ಯಾಸಿನಿಯಾಗಿ ಬುದ್ಧನ ಮುಂದೆ ಮೊಣಕಾಲೂರಿ ಧ್ಯಾನ ಮಾಡುವಳು.ಆ ಸಮಯದಲ್ಲಿ ರಾಜಭಟರು ಬಂದು ಆಕೆಯ ಶಿರಚ್ಛೇಧವನ್ನು ಮಾಡುವರು. ಆದರೆ ಅಲ್ಲಿ ಆಕೆಯ ಭಕ್ತಿ ವಿಜಯ ಹೊಂದುವುದು. ಆಕೆಯನ್ನು ಕೊಲ್ಲಲು ಅಸೂಯೆಯಿಂದ ಕುತಂತ್ರವನ್ನು ಹೂಡಿದ ರಾಜಕುಮಾರಿಯರು ಪಶ್ಚಾತ್ತಾಪ ಹೊಂದಿ, ಆಕೆಯ ಆತ್ಮಸೌಂದರ್ಯವು ತಮ್ಮ ರಾಜತ್ವಕ್ಕಿಂತ ಎಷ್ಟು ಉದಾತ್ತವಾದುದೆಂದು ಒಪ್ಪಿಕೊಳ್ಳುವರು.ಆಗ ರಾಣಿಗೆ ಶಾಂತಿ ಲಭಿಸಿ ಆಕೆಯೂ ಬೌದ್ಧ ಧರ್ಮವನ್ನು ಅಂಗೀಕರಿಸಿ ಭಿಕ್ಷುಣಿಯಾಗುತ್ತಾಳೆ.

ಈ ನಾಟಕ ಬೌದ್ಧಧರ್ಮದ ಅಹಿಂಸೆ ತತ್ವದ ಹಿನ್ನೆಲೆ ರಚಿತವಾಗಿದೆ.ಮೇಲ್ನೋಟಕ್ಕೆ ಸರಳ ರೇಖಾತ್ಮಕವಾಗಿರುವ ನಾಟಕವಾದರೂ ಒಂದು ಮನ ಕಲಕುವ, ಮನಮಿಡಿಯುವ ಹಾಗೂ ಮನಸೂರೆಗೊಳ್ಳುವ ನಾಟಕವಾಗಿದೆ.ಬೆರಗುಗೊಳಿಸುವ ಭಾಷೆ, ಅಚ್ಚರಿ ಹುಟ್ಟಿಸುವ ಕಲ್ಪನಾಶಕ್ತಿ ನಾಟಕದ ಒಟ್ಟಂದವನ್ನು ಅಧಿಕಗೊಳಿಸಿದೆ.ಜೊತೆಗೆ ನಡುನಡುವೆ ಜಾತಿ ಅಸ್ಪೃಶ್ಯತೆ ಪ್ರಶ್ನಿಸುತ್ತಲೇ ಸಾಮರಸ್ಯದ ಬದುಕನ್ನು ಪ್ರತಿಪಾದಿಸಿ ಮುಕ್ತಾಯಗೊಳ್ಳುತ್ತದೆ. .

2. ರಾಜ

'ರಾಜ' ಇದು ಚಾರಿತ್ರಿಕ ವಸ್ತುವುಳ್ಳ ಒಂದು ಸಾಂಕೇತಿಕ ನಾಟಕ. ಅನುವಾದಕರಾಗಿರುವ ಸ್ವಾಮಿ ಶಂಕರಾನಂದ ಸರಸ್ವತಿಯವರ ಪ್ರಕಾರ 'ರವೀಂದ್ರರು ಈ ನಾಟಕದ ಮೂಲಕ ವಿಶ್ವದ ಅರಸನು ಇಂದ್ರಿಯಗ್ರಾಹ್ಯನಲ್ಲ. ಹಾಗೆಯೇ ಇಂದ್ರಿಯಾತೀತನೂ ಅಲ್ಲ. ವಿಶ್ವದ ಎಲ್ಲ ಸೌಂದರ್ಯದಲ್ಲೂ ಆತನ ವಿಭೂತಿ ಹರಡಿಕೊಂಡಿದೆ.ಕೇವಲ ಚರ್ಮಚಕ್ಷುಗಳಿಂದ ಆತನನ್ನು ಯಾವ ದೃಷ್ಟಿಯಿಂದ ನೋಡಬಾರದೋ ಅದರಿಂದಲೇ ನೋಡಹೋಗಿ ತಂದುಕೊಂಡ ಸಂಕಟವೇ 'ರಾಜ' ನಾಟಕದ ತಿರಳು" ಎಂದಿದ್ದಾರೆ.ಕತ್ತಲೆಯ ಸುರಂಗದ ಕೊಠಡಿಯಲ್ಲಿ ನಾಟಕ ಆರಂಭವಾಗುತ್ತದೆ.ಸುರಂಗವನ್ನು ಕಾಯುವವಳು ಸುರಂಗವ್ವೆ.ಸುರಂಗದಲ್ಲಿ ವಾಸಿಸುವ ರಾಣಿ ಸುದರ್ಶನೆ. ಸುದರ್ಶನೆ ದಾಸಿ ಸುರಂಗವ್ವೆಯನ್ನು ನನ್ನ ರಾಜ ಹೇಗಿದ್ದಾನೆ?ಅವನು ಬಹಳ ಸುಂದರನೇ?ಎಂದು ಕೇಳಿದಾಗ ಸುರಂಗವ್ವೆ ನಾನು ನೋಡಿದ ಬೇರೆ ಗಂಡಸರಿಗಿಂತ ಅಷ್ಟೇನೂ ಸುಂದರನಲ್ಲ ಎಂದು ಹೇಳುತ್ತಾಳೆ.ಹೀಗಿರುವಾಗ ರಾಜ ಸುದರ್ಶನೆಯಲ್ಲಿ ಕೂಡಲು ಬಂದಾಗ ಮೊದಲು ರಾಣಿ ಮತ್ತು ರಾಜರ ಸರಸ ಸಲ್ಲಾಪದ ಮಾತುಗಳು ಆರಂಭವಾಗುತ್ತವೆ. ಇಬ್ಬರ ಕಲ್ಪನೆಯಲ್ಲಿ ರಾಣಿಯ ರೂಪ ಹೇಗಿದೆಯೆಂದು ರಾಜನೂ, ರೂಪಲಾವಣ್ಯ ಹೇಗಿದೆ ಎಂದು ರಾಣಿಯೂ ಪರಸ್ಪರ ವರ್ಣಿಸಿಕೊಳ್ಳುತ್ತಾರೆ. ಹಬ್ಬದ ಬೆಳಕಿನಲ್ಲಿ ರಾಜನ ಮುಖವನ್ನು ನೋಡಬೇಕೆಂದು ರಾಣಿ ಆಸೆಪಡುತ್ತಾಳೆ. ಆದರೆ ರಾಜ ನನ್ನ ರೂಪವನ್ನು ನೀನು ಕಂಡು ಸಹಿಸಲಾರೆ ಎಂದೇಳುತ್ತಾನೆ. ನಾನು ನಿನ್ನ ದಿವ್ಯರೂಪವನ್ನು ನೋಡಲೇಬೇಕೆಂದು ಹಠ ಹಿಡಿದಾಗ ಆಗಲಿ ಹಬ್ಬದ ಜನಜಂಗುಳಿಯಲ್ಲಿ ನೀನು ನನ್ನನ್ನು ಹುಡುಕಬೇಕು ಎಂದು ಹೊರಟುಹೋಗುತ್ತಾನೆ.

ಕುಂಜನ ವನದ ಹಬ್ಬದಲ್ಲಿ ಅಲ್ಲೊಬ್ಬ ರಾಜವೇಷಧಾರಿಯಾಗಿ ಓಡಾಡುತ್ತಿರುವುದನ್ನು ಕಂಡು, ಇತರ ರಾಜರು ಅವನನ್ನು ಅವಮಾನಿಸುತ್ತಾರೆ.ಕಂಚಿಯ ರಾಜ ತುಂಬ ಸುಂದರನೂ ಆಗಿರುವುದರಿಂದ ಆತನನ್ನೇ ನನ್ನ ರಾಜ ಎಂದು ಭಾವಿಸಿ, ರಾಣಿ ಸುದರ್ಶನೆ ಆತನಿಗೆ ತಾನು ಧರಿಸಿದ ಹಾರವನ್ನು ಕೊಟ್ಟು ಕಳುಹಿಸುತ್ತಾಳೆ.ಆತ ತನ್ನ ಒಡೆಯನಲ್ಲ ಎಂದು ತಿಳಿದಾಗ ತೀವ್ರವಾಗಿ ಅಪಮಾನಿತಳಾಗುತ್ತಾಳೆ.ರಾಣಿ ಸುದರ್ಶನೆಯ ಮೇಲೆ ಮೋಹಗೊಂಡ ಕಂಚಿಯ ರಾಜ ಆಕೆಯನ್ನು ನೋಡಬೇಕೆಂದು ರಾಣಿ ಅರಮನೆಗೆ ಬೆಂಕಿಯನ್ನು ಇಡುತ್ತಾನೆ. ತದನಂತರ ನಿಜ ರಾಜ ಆಕೆಯನ್ನು ರಕ್ಷಿಸಿ ಸುರಂಗದೊಳಗೆ ಕರೆದುಕೊಂಡು ಹೋಗುತ್ತಾನೆ. ರಾಜ ಅತ್ಯಂತ ಕುರೂಪಿ, ಕಪ್ಪು ವರ್ಣದವನು. ರಾಣಿ ಸುದರ್ಶನೆ ನೀನು ಕುರೂಪಿ ಎಂದು ಅವನನ್ನು ಧಿಕ್ಕರಿಸಿ, ತನ್ನ ತವರುರಾಜ್ಯಕ್ಕೆ ಹೋಗುತ್ತಾಳೆ. ಇದಾದ ನಂತರ ಸುತ್ತಮುತ್ತಲಿನ ಸಾಮಂತ ಅರಸರು ಕಾನ್ಯಕುಬ್ಜನ ಮೇಲೆ ದಂಡೆತ್ತಿ ಬಂದು ಆತನನ್ನು ಸೋಲಿಸಿ, ರಾಣಿ ಸುದರ್ಶನೆಯನ್ನು ಮದುವೆ ಮಾಡಿಕೊಳ್ಳಲು ಹಪಹಪಿಸುತ್ತಾರೆ.ಇದೇ ಸಂದರ್ಭದಲ್ಲಿ ಸುತ್ತಮುತ್ತಲ ಸಾಮಂತ ಅರಸರನ್ನು ಸ್ವಯಂವರದಲ್ಲಿ ಸುದರ್ಶನೆಗೆ ಆರಿಸಿಕೊಳ್ಳಲೆಂದು ಅವಳ ಆಯ್ಕೆಗೆ ಬಿಡುತ್ತಾರೆ.ನನ್ನ ರಾಜ ನನ್ನನ್ನು ರಕ್ಷಿಸಲು ಬರಲಿಲ್ಲ ಎಂದು ರಾಣಿ ಕೋಪಗೊಳ್ಳುತ್ತಾಳೆ.ರಾಜ ಕೆಲವು ವ್ಯಕ್ತಿಗಳೊಂದಿಗೆ ಬಂದು ಸಾಮಂತ ಅರಸರನ್ನೆಲ್ಲ ಹಿಮ್ಮೆಟ್ಟಿಸಿ ಮರಳಿ ತನ್ನ ಸಾಮ್ರಾಜ್ಯಕ್ಕೆ ಹಿಂದಿರುಗುತ್ತಾನೆ. ರಾಣಿ ರಾಜನಿಗೆ ಸೋತು ಬರಲಿಲ್ಲವಲ್ಲ ಎಂದು ಮರುಗುತ್ತಿರುವಾಗ ನಾನೇ ಏಕೆ ರಾಜನ ಬಳಿ ಹೋಗಬಾರದೆಂದು ತೀರ್ಮಾನಿಸಿಕೊಂಡು ತನ್ನ ಪತಿ ಕುರೂಪಿಯಾದರೂ ಕೂಡ ಅವನ ಬಳಿ ತೆರಳಿ ಕ್ಷಮಾಪಣೆಯನ್ನು ಕೇಳುತ್ತಾಳೆ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಬೌದ್ಧ ಜಾತಕಕತೆಯಿಂದ ಆರಿಸಲಾದ ಈ ಕತೆಯನ್ನು ಠಾಕೂರರು ಆಧ್ಯಾತ್ಮಿಕತೆಯ ಹಿನ್ನೆಲೆಯಲ್ಲಿ ಸಂಕೇತ ನಾಟಕವಾಗಿ ರಚಿಸಿದ್ದಾರೆ.ರಾಜ ದೇವರು, ರಾಣಿ ಜೀವಾತ್ಮ, ಕತ್ತಲೆಯ ಕೋಣೆ ಹೃದಯ ಹೀಗೆ ವಿವಿಧ ಪಾತ್ರಗಳನ್ನು ನಿರೂಪಿಸುತ್ತಾರೆ. ಜೀವಾತ್ಮವು ಪರಮಾತ್ಮನಿಗೆ ಮದುವೆಯಾದ ಪತ್ನಿ.ಆತನನ್ನು ಹೃದಯದಲ್ಲೇ ಕಾಣಬೇಕು.ಜೀವನದಲ್ಲಿ ಕಷ್ಟಪಟ್ಟು, ಪರದೇಶಿಯಾದಾಗ ದೇವರು ಕತ್ತಲೆಯ ಕೋಣೆಯನ್ನು ಬಿಟ್ಟು ಹೊರಗೆ ಜೀವಾತ್ಮಕ್ಕೆ ಕಾಣಿಸಿಗುತ್ತಾನೆ. ರಾಣಿ ಸುದರ್ಶನೆಯೂ ಆತನನ್ನು ಯಾವ ದೃಷ್ಟಿಯಿಂದ ನೋಡಬಾರದೋ ಅದರಿಂದಲೇ ನೋಡಹೋಗಿ ತಂದುಕೊಂಡ ಸಂಕಟವೇ ಈ 'ರಾಜ' ನಾಟಕದ ವಸ್ತು.ಇದು ಬಿಡುಗಡೆಯ ಇನ್ನೊಂದು ಮಜಲನ್ನು ಅಭಿವ್ಯಕ್ತಿಸುತ್ತದೆ.ಇಲ್ಲಿ ಪ್ರೀತಿ ಮತ್ತು ತ್ಯಾಗಗಳ ಮಧ್ಯೆ ಪ್ರೀತಿಯೇ ಗೆಲ್ಲುತ್ತದೆ.ತ್ಯಾಗವು ಕೊನೆಗೆ ಪ್ರೀತಿಯನ್ನು ಸೋಲಿಸಿಬಿಡುತ್ತದೆ. ಬುದ್ಧನ ತ್ಯಾಗಗಳು ಇಲ್ಲಿ ಎದ್ದುಕಾಣುತ್ತದೆ.

3. **ಮುಕ್ತಧಾರ**

ಮುಕ್ತಧಾರ 1922ರಲ್ಲಿ ಬರೆದ ನಾಟಕವಿದು. 'ಮುಕ್ತಧಾರ' ಚಾರಿತ್ರಿಕ, ರಾಜಕೀಯ, ಧಾರ್ಮಿಕ ಶೈಕ್ಷಣಿಕ ವೈಜ್ಞಾನಿಕ ಮುಂತಾದ ಕ್ಷೇತ್ರಗಳನ್ನು ಪ್ರತಿಬಿಂಬಿಸುವ ಸಾಂಕೇತಿಕ ರೂಪದ ನಾಟಕ. ಹಿಮಾಲಯ ಪರ್ವತಗಳ ತಪ್ಪಲಿನಲ್ಲಿ ಸ್ವಲ್ಪ ಮೇಲ್ಮಟ್ಟದಲ್ಲಿರುವ ರಾಜ್ಯ ಉತ್ತರಕೂಟ.ಅದರ ಕೆಳಗಿದೆ ಅಧೀನರಾಜ್ಯ ಶಿಯುತರಾಯಿ. ಶಿಯುತರಾಯಿಗೆ ಜೀವನಾಡಿಯಾಗಿರುವ ಮುಕ್ತಧಾರ ನದಿ ಉತ್ತರಕೂಟದಿಂದ ಹರಿದುಬರುತ್ತದೆ.ಇದಕ್ಕೆ ತನ್ನ ರಾಜ್ಯದಲ್ಲೇ ಅಣೆಕಟ್ಟೆಯೊಂದನ್ನು ನಿರ್ಮಿಸಿ ಅದರ ನೀರು ಶಿಯುತರಾಯಿಗೆ ಬರದಂತೆ ಮಾಡಿ, ಆ ದೇಶದ ಜನ ತನಗೆ ಅಡಿಯಾಳಾಗುವ ಹಾಗೆ ಬಲವಂತಪಡಿಸಬೇಕೆಂದು ಉತ್ತರಕೂಟದ ದೊರೆ ರಣಜಿತನ ದುರಾಕಾಂಕ್ಷೆ.ಮೇಧಾವಿಯಾದ ಅವನ ರಾಜ್ಯದ ಶಿಲ್ಪಿ ವಿಭೂತಿ ತನ್ನ ಬುದ್ಧಿಶಕ್ತಿಯನ್ನೆಲ್ಲ ಉಪಯೋಗಿಸಿ ರಾಜ್ಯಕ್ಕೆ ಅಣೆಕಟ್ಟು ಯೋಜನೆಯನ್ನು ಕಾರ್ಯರೂಪಕ್ಕೆ ತರುತ್ತಾನೆ. ಶಿಯುತರಾಯಿಯಲ್ಲಿ ನೀರಿಲ್ಲದೆ ಹಾಹಾಕಾರವೇಳುತ್ತದೆ.ಅಷ್ಟಲ್ಲದೇ ಶಿಯುತರಾಯಿನಲ್ಲಿ ಸಿಗುವ ಅಕ್ಕಿ ಮತ್ತು ಉಣ್ಣೆ ಎಲ್ಲ ಉತ್ತರಕೂಟಕ್ಕೆ ಬರುವಂತೆ ರಣಜಿತ್ ಉಪಾಯ ಹೂಡುತ್ತಾನೆ. ಶಿಯುತರಾಯಿನ ಆಡಳಿತ ಸೂತ್ರಗಳನ್ನು ಹಿಡಿದಿರುವ ಹಿರಿಯ ಅಧಿಕಾರಿಗಳೆ ಉತ್ತರಕೂಟದವರೇ.ಆದಕಾರಣ ರಣಜಿತನ ಆಜ್ಞೆಯನ್ನು ಅವರು ಶಿರಸಾವಹಿಸಿ ಪಾಲಿಸುತ್ತಾರೆ.ತತ್ಪದವಾಗಿ ಶಿಯುತರಾಯಿನ ಜನಕ್ಕೆ ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳ ಎರಡರಲ್ಲೂ ಕಿರುಕುಳ ವಿಪರೀತವಾಗುತ್ತದೆ.ಆದರೆ ಅಲ್ಲಿಯ ಜನ ತಮ್ಮ ಉದ್ಧಾರಕ್ಕಾಗಿ ತಾವೇ ಹೋರಾಡಲಾರದ ನತದೃಷ್ಟರು.ಇವರನ್ನು ಹುರಿದುಂಬಿಸಿ ಎತ್ತಿಕಟ್ಟಲು ಪ್ರಯತ್ನಿಸುವವನು ನಿಸ್ವಾರ್ಥ ದೇಶಭಕ್ತನಾದ ಧನಂಜಯ.ಇವನನ್ನು, ಇವನ ಅನುಯಾಯಿಗಳನ್ನು ಸದೆಬಡಿಯಲು ರಣಜಿತ ತನ್ನ ಅಧಿಕಾರಿಗಳನ್ನು ಉಪಯೋಗಿಸುತ್ತಾನೆ. ಇಷ್ಟರಲ್ಲಿ ಮುಕ್ತಧಾರ ನದಿಯ ಅಣೆಕಟ್ಟು ಒಡೆದುಹೋಗುತ್ತದೆ.ಅದನ್ನು ಸರಿಪಡಿಸಲು ಉತ್ತರಕೂಟದ ಸಾಮಾನ್ಯ ಪ್ರಜೆಗಳೇ, ಬಲಾತ್ಕಾರ ಪ್ರಯೋಗಕ್ಕೆ ಗುರಿಯಾಗಿ ದುಡಿಯಬೇಕಾಗುತ್ತದೆ.ಕೆಲವರು ನೀರಿನಲ್ಲಿ ಕೊಚ್ಚಿಹೋಗುತ್ತಾರೆ.ರಾಜನ ದುರಾಸೆಯನ್ನು ತೀರಿಸುವ ಸಲುವಾಗಿ ಎಷ್ಟೋ ತರುಣರು ಶ್ರಮಿಸಿ ಸಾಯುತ್ತಾರೆ. ಸಾಮ್ರಾಜ್ಯದ ಲಾಲಸೆ ಇರುವವನಿಗೆ ತನ್ನವರಾದರೇನು?ಪರದೇಶದವರಾದರೇನು?ಎಲ್ಲರೂ ಅವನ ಆಸೆಯ ಅಗ್ನಿಜ್ವಾಲೆಗೆ ಆಹುತಿಗಳಾಗುತ್ತಾರೆ. ಕಡೆಗೆ ಮುಕ್ತಧಾರ ನದಿಯ ಕಟ್ಟೆಯನ್ನು ಒಡೆದು ನೀರನ್ನು ಹರಿಯ ಬಿಟ್ಟ ಹೊರತು ಶಿಯುತರಾಯಿ ಜನರು ಕಷ್ಟ ತಪ್ಪುವಂತಿಲ್ಲ. ಆದ್ದರಿಂದ ರಣಜಿತ ಸಾಕುಮಗ, ಮಾನಸಪ್ರೇಮಿಯೂ, ದೀನರ ಬಂಧು, ದಲಿತ ಜನರ ಉದ್ಧಾರಕನೂ ಆದ ರಾಜಕುಮಾರ ಅಭಿಜಿತ್ ತಾನೇ ಹೋಗಿ ಕಟ್ಟೆ ದುರ್ಬಲವಾಗಿರುವ ಒಂದು ಭಾಗವನ್ನು ಪತ್ತೆ ಹಚ್ಚಿ ಅದನ್ನು ಒಡೆದುಹಾಕುತ್ತಾನೆ. ಆ ಪ್ರವಾಹದ ರಭಸಕ್ಕೆ ಹೊಂದಿರುವ ನೀರಿನಲ್ಲಿ ಅವನು ಕೊಚ್ಚಿ ಹೋಗುತ್ತಾನೆ.

"ವಿಶ್ವದ ತುಂಬೆಲ್ಲ ಸಂಚಾರ ಮಾಡಿದ ರವೀಂದ್ರರು, ಪಾಶ್ಚಾತ್ಯರ ಯಾಂತ್ರಿಕ ಪ್ರಗತಿಯ ಕುರಿತು ಈ ಯಾಂತ್ರಿಕ ಸುಧಾರಣೆಯ ಜೀವನ ಒಳ್ಳೆಯದೆ?ಇದರಿಂದ ಕೆಲವೇ ಅಲ್ಪರು ಬಲಿತು ಮಿಕ್ಕವರ ಬಲಿದಾನವಾಗುವ ಸಮಾಜ ಪದ್ಧತಿ ಒಳ್ಳೆಯದೆ?ವ್ಯಕ್ತಿಯ ಜೀವನ, ಇಂದಿನ ಸಮಾಜ ಪದ್ಧತಿ ಇವುಗಳಲ್ಲಿ ಹೋರಾಟ ಅನಿವಾರ್ಯವಾಗಿದೆಯಲ್ಲ?ಈ ವಿಚಾರಗಳೇ ಮುಕ್ತಧಾರ ನಾಟಕದ ಆಶಯಗಳಾಗಿ ಕಾಣಬಹುದು' ಎಂದು ಆದ್ಯ ರಂಗಾಚಾರ್ಯರು ಹೇಳಿದ ಮಾತು ನಿಜವೆನಿಸುತ್ತದೆ." ಜೊತೆಗೆ ಠಾಕೂರರು ಈ ನಾಟಕದಲ್ಲಿ ಅಂದಿನ ರಾಜಕೀಯ ಪರಿಸ್ಥಿತಿಯನ್ನು ಚಿತ್ರಿಸುತ್ತಾರೆ.ಉತ್ತರಕೂಟ ಇಂಗ್ಲೆಂಡನ್ನು ಸಂಕೇತಿಸಿದರೆ, ಶಿಯುತರಾಯಿ ಭಾರತವನ್ನು ಸಂಕೇತಿಸುತ್ತದೆ.ನದಿ ನೀರಿನ ಹೋರಾಟ ಸ್ವಾತಂತ್ರ್ಯ ಹೋರಾಟದ ರೀತಿಯಲ್ಲಿ ಚಿತ್ರಿತವಾಗಿದೆ.ಧನಂಜಯನೆಂಬ ಬೈರಾಗಿಯ ಪಾತ್ರದ ಹೋರಾಟದ ಚಿತ್ರಣ ಮಹಾತ್ಮ ಗಾಂಧಿಜಿ ಹೋರಾಟಕ್ಕೆ ಸಮಾನವಾಗಿದೆ. ಈ ನಾಟಕವನ್ನು ಭಾರತದ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ಗುರುತಿಸಬಹುದಾಗಿದೆ.ಅಹಿಂಸಾ ಮಾರ್ಗದಲ್ಲಿಯೇ ಸ್ವಾತಂತ್ರ್ಯವನ್ನು ಗಳಿಸಬಹುದೆಂಬ ಭವಿಷ್ಯ ವಾಣಿ ಈ ನಾಟಕದಲ್ಲಿದೆ.

ಹೀಗೆ ಠಾಕೂರರು ಈ ಮೂರು ನಾಟಕಗಳಲ್ಲದೆ ಮಾಲಿನಿ, ವಿಸರ್ಜನ, ರಾಜ ರಾಣಿ ಹೀಗೆ ಅನೇಕ ನಾಟಕಗಳಲ್ಲಿ ಚಾರಿತ್ರಿಕ ಅಂಶಗಳನ್ನು ಗುರುತಿಸಬಹುದಾಗಿದೆ.ಚರಿತ್ರೆಯನ್ನು ಕಟ್ಟಲು ದಾಖಲೆಗಳು ಬಹಳ ಮುಖ್ಯವಾಗುತ್ತವೆ. ರಾಜನೋರ್ವನ ಸಾಮ್ರಾಜ್ಯ, ಅವನಿಂದ ಕೆತ್ತಿಸಲಾದ ಶಿಲ್ಪ–ಶಾಸನಸಂಪತ್ತು, ಭವ್ಯವಾದ ದೇವಾಲಯಗಳು ಇವುಗಳಿಂದಲೇ ನಮಗೆ ಖಚಿತತೆ ದೊರೆಯುತ್ತದೆ.ಭಾರತ ಇಂತಹ ಶ್ರೀಮಂತ ಚರಿತ್ರೆಯನ್ನು ಒಳಗೊಂಡಿರುವ ರಾಷ್ಟ್ರ.ಸಂಸ್ಕೃತದ ಪ್ರಭಾವದಿಂದ ಪುರಾಣಗಳಿಗೆ ಸೀಮಿತವಾಗಿದ್ದ ಭಾರತೀಯ ಸಾಹಿತ್ಯಪರಂಪರೆಯನ್ನು ಅವಲೋಕಿಸಿದರೆ ಭಾರತದ ಭವ್ಯಚರಿತ್ರೆಯನ್ನು ದಾಖಲಿಸಿ, ವಿಶ್ವದ ಮುಂದೆ ತಮ್ಮ ಸಂಸ್ಕೃತಿಯನ್ನು ತೋರ್ಪಡಿಸುವ ಗೋಜಿಗೆ ಹೋಗಿಲ್ಲ ಎಂಬುದು ತಿಳಿದುಬರುತ್ತದೆ.ಆದರೆ ಕೆಲವು ನಾಟಕಕಾರರು ಚಾರಿತ್ರಿಕ ಪುರುಷರನ್ನು ತೆಗೆದುಕೊಂಡು ಕಾವ್ಯ, ಕಾದಂಬರಿ, ನಾಟಕಗಳಲ್ಲಿ ಚಿತ್ರಿಸಲಾರಂಭಿಸಿರುವುದು ಆಶಾದಾಯಕ ಸಂಗತಿ.ಈ ಹಿನ್ನೆಲೆಯಲ್ಲಿ ಠಾಕೂರರ ಚಾರಿತ್ರಿಕ ನಾಟಕಗಳು ಮುನ್ನಲೆಯಲ್ಲಿ ಕಾಣಬಹುದಾಗಿದೆ.

ಪರಾಮರ್ಶನ ಗ್ರಂಥ:

1. ಮರುಳಸಿದ್ದಪ್ಪ ಕೆ., (2013), ಆಧುನಿಕ ಕನ್ನಡ ನಾಟಕ, ಅಂಕಿರ ಪುಸ್ತಕ, ಬೆಂಗಳೂರು.
2. ಸುಬ್ಬಣ್ಣ ಕೆ.ವಿ.(ಅನು), (2011), ಕೆಂಪುಕಣಗಿಲೆ ಮತ್ತು ರಾಜ ಮತ್ತು ರಾಣಿ, ಅಕ್ಷರ ಪ್ರಕಾಶನ ಹೆಗ್ಗೋಡು.
3. ಸ್ವಾಮಿ ಶಂಕರಾನಂದ ಸರಸ್ವತಿ, (1961), ಎರಡು ಸಾಂಕೇತಿಕ ನಾಟಕಗಳು, ರಾಜ್ಯ ಸಾಹಿತ್ಯ ಅಕಾಡೆಮಿ, ನವದೆಹಲಿ
4. ಹಾ ಮಾ ನಾಯಕ, (1970), ರವೀಂದ್ರನಾಥ ಠಾಕೂರ., ಮೈಸೂರು ವಿಶ್ವವಿದ್ಯಾಲಯ ಮೈಸೂರು.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಕನ್ನಡ ಸಾಹಿತ್ಯ ಮತ್ತು ಧರ್ಮ

ಡಾ. ಗಾಯತ್ರಿ ಕುಲಕರ್ಣಿ
ಕನ್ನಡ ಉಪನ್ಯಾಸಕರು
ಜಿ, ಎಫ್, ಜಿ, ಸಿ, ವಮೆನ್ಸ್ ಕಾಲೇಜು ಧಾರವಾಡ

Manuscript ID:
JRD -2026-180413
ISSN: 2230-9578
Volume 18
Issue 4(II)
Pp.40-43
April 2026
Submitted:08 Mar. 2026
Revised:24Mar. 2026
Accepted:10Apr.2026
Published:30 April2026

ಸಾರಲೇಖ

ಪ್ರಸ್ತುತ ಸಂಶೋಧನಾ ಲೇಖನವು ಕನ್ನಡ ಸಾಹಿತ್ಯ ಮತ್ತು ಧರ್ಮದ ನಡುವಿನ ಅವಿನಾಭಾವ ಸಂಬಂಧವನ್ನು ಐತಿಹಾಸಿಕ, ತಾತ್ತ್ವಿಕ ಹಾಗೂ ಸಾಮಾಜಿಕ ನೆಲೆಗಳಲ್ಲಿ ವಿಶ್ಲೇಷಿಸುವ ಸಮಗ್ರ ಉದ್ದೇಶವನ್ನು ಹೊಂದಿದೆ. ಪ್ರಾಚೀನ ಕಾಲದಿಂದ ಆಧುನಿಕ ಯುಗದವರೆಗೆ ಕನ್ನಡ ಸಾಹಿತ್ಯವು ಕೇವಲ ಸೌಂದರ್ಯಾತ್ಮಕ ಅಭಿವ್ಯಕ್ತಿಯಾಗಿರದೆ, ಧಾರ್ಮಿಕ ತತ್ತ್ವಗಳ ಪ್ರಸಾರ, ವಿಮರ್ಶೆ ಮತ್ತು ಸಾಮಾಜಿಕ ಪರಿವರ್ತನೆಯ ಪ್ರಬಲ ಮಾಧ್ಯಮವಾಗಿ ಕಾರ್ಯನಿರ್ವಹಿಸಿದೆ ಎಂಬುದನ್ನು ಈ ಅಧ್ಯಯನವು ಶೋಧಿಸುತ್ತದೆ. ಈ ಲೇಖನದ ವ್ಯಾಪ್ತಿಯು ಹತ್ತನೇ ಶತಮಾನದ ಜೈನ ಕಾವ್ಯಗಳಿಂದ ಮೊದಲ್ಗೊಂಡು, ಹನ್ನೆರಡನೇ ಶತಮಾನದ ಶೈವ ಮತ್ತು ವೀರಶೈವ ಸಾಹಿತ್ಯ, ಹದಿನೈದನೇ ಶತಮಾನದ ವೈಷ್ಣವ ಭಕ್ತಿ ಸಾಹಿತ್ಯ, ಮಧ್ಯಕಾಲೀನ ಸೂಫಿ ಸಮನ್ವಯ, ಹಾಗೂ ಆಧುನಿಕ ಕಾಲದ ಧರ್ಮ–ವಿಮರ್ಶಾತ್ಮಕ ಸಾಹಿತ್ಯದವರೆಗೆ ವಿಸ್ತರಿಸಿದೆ. ಸಾಹಿತ್ಯಿಕ ಪಠ್ಯಗಳ ವಿಶ್ಲೇಷಣಾತ್ಮಕ ಹಾಗೂ ತೌಲನಿಕ ವಿಧಾನವನ್ನು ಅಳವಡಿಸಿಕೊಂಡು, ಧರ್ಮವು ಸಾಹಿತ್ಯವನ್ನು ಹೇಗೆ ಪೋಷಿಸಿತು ಮತ್ತು ಸಾಹಿತ್ಯವು ಧರ್ಮವನ್ನು ಹೇಗೆ ಮಾನವೀಕರಿಸಿತು ಎಂಬುದನ್ನು ತರ್ಕಬದ್ಧವಾಗಿ ಮಂಡಿಸಲಾಗಿದೆ. ಜೈನ ಧರ್ಮದ ಅಹಿಂಸೆ, ಅನೇಕಾಂತವಾದ, ಶೈವ ಧರ್ಮದ ಕಾಯಕ ಮತ್ತು ಸಮಾನತೆ, ವೈಷ್ಣವ ಧರ್ಮದ ಶರಣಾಗತಿ ಭಕ್ತಿ ಹಾಗೂ ಆಧುನಿಕ ಸಾಹಿತ್ಯದ ವಿಶ್ವಮಾನವ ಸಂದೇಶಗಳು ಸಾಹಿತ್ಯದ ಮೂಲಕ ಸಮಾಜಮುಖಿಯಾದ ಬಗೆಯನ್ನು ಇಲ್ಲಿ ಪ್ರತಿಪಾದಿಸಲಾಗಿದೆ.ಲೇಖನದ ಮೂಲ ತರ್ಕವೆಂದರೆ, ಕನ್ನಡ ಸಾಹಿತ್ಯವು ಧರ್ಮವನ್ನು ಕೇವಲ ಸಾಂಸ್ಥಿಕ ಕರ್ಮಕಾಂಡವಾಗಿ ಉಳಿಸದೆ, ಅದನ್ನು ಬದುಕಿನ ನೈತಿಕ, ಸಾಮಾಜಿಕ ಮತ್ತು ಸಾರ್ವತ್ರಿಕ ಮಾನವೀಯ ಮೌಲ್ಯಗಳನ್ನಾಗಿ ರೂಪಾಂತರಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ.

ಮುಖ್ಯ ಪದಗಳು : ಧರ್ಮ, ವಚನಸಾಹಿತ್ಯ, ಆಗಮ, ಭಕ್ತಿ ಪ್ರಸ್ಥಾನ ,ಕಾವ್ಯ ನೀತಿ

ಪ್ರಸ್ತಾವನೆ

"ಬೆಳಗುವೆನಿಲ್ಲಿ ಲೌಕಿಕಮನ್ ಅಲ್ಲಿ ಜಿನಾಗಮಮುಂ" ಎಂಬ ಆದಿಕವಿ ಪಂಪನ ಉದ್ಗಾರವು ಕನ್ನಡ ಸಾಹಿತ್ಯ ಮತ್ತು ಧರ್ಮದ ನಡುವಿನ ದ್ವಿಮುಖ ಸಂಬಂಧಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಲೌಕಿಕ ಬದುಕು ಮತ್ತು ಆಗಮಿಕ (ಧಾರ್ಮಿಕ) ಮೌಲ್ಯಗಳನ್ನು ಸಮನ್ವಯಗೊಳಿಸುವ ಈ ಪ್ರವೃತ್ತಿ ಕನ್ನಡ ಸಾಹಿತ್ಯದ ಉದ್ದಕ್ಕೂ ಹರಿದುಬಂದಿದೆ. ಕನ್ನಡ ಸಾಹಿತ್ಯದ ಚರಿತ್ರೆಯು ಸುದೀರ್ಘವಾದ ಕಾಲಘಟ್ಟಗಳನ್ನು ಹೊಂದಿದ್ದು, ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಎಂದು ಮೂರು ಪ್ರಮುಖ ಘಟ್ಟಗಳಲ್ಲಿ ವಿಕಾಸಗೊಂಡಿದೆ. ಈ ಪ್ರತಿಯೊಂದು ಘಟ್ಟದಲ್ಲೂ ಸಾಹಿತ್ಯವು ಅಂದಿನ ಪ್ರಬಲ ಧರ್ಮಗಳಾದ ಜೈನ, ಶೈವ, ವೈಷ್ಣವ ಹಾಗೂ ಇಸ್ಲಾಂ (ಸೂಫಿ) ಧರ್ಮಗಳ ತಾತ್ತ್ವಿಕತೆಯಿಂದ ಪೋಷಿತವಾಗಿದೆ. ಧರ್ಮ ಮತ್ತು ಸಾಹಿತ್ಯದ ನಡುವಿನ ಈ ಅವಿನಾಭಾವ ಸಂಬಂಧವು ಕೇವಲ ಏಕಮುಖಿಯಾಗಿರದೆ, ಸಾಹಿತ್ಯವು ಧರ್ಮದ ಕಂದಾಚಾರಗಳನ್ನು ಟೀಕಿಸಿ, ಅದನ್ನು ಸರಳೀಕರಿಸಿ ಸಾಮಾನ್ಯರ ಬಳಿಗೆ ತರುವ ಕೆಲಸವನ್ನೂ ಮಾಡಿದೆ.

ಪ್ರಸ್ತುತ ಲೇಖನವು 'ಧರ್ಮವು ಕನ್ನಡ ಸಾಹಿತ್ಯದ ವಸ್ತು, ಶೈಲಿ ಮತ್ತು ಸಾಮಾಜಿಕ ಉದ್ದೇಶಗಳನ್ನು ಹೇಗೆ ರೂಪಿಸಿದೆ ಹಾಗೂ ಸಾಹಿತ್ಯವು ಸಾಂಸ್ಥಿಕ ಧಾರ್ಮಿಕ ಕಲ್ಪನೆಗಳನ್ನು ಹೇಗೆ ಮರುವ್ಯಾಖ್ಯಾನಿಸಿದೆ?' ಎಂಬುದನ್ನು ಶೋಧಿಸುವುದಾಗಿದೆ. ಕನ್ನಡ ಸಾಹಿತ್ಯವು ಕ್ರಿ.ಶ. 9ರಿಂದ 12ನೇ ಶತಮಾನದ ಪ್ರಾಚೀನ ಕಾಲದಲ್ಲಿ ಜೈನ ಧರ್ಮದ ಪ್ರಭಾವದಡಿ ಪಂಪ, ಪೊನ್ನ, ರನ್ನರಂಥ ಮಹಾಕವಿಗಳು ಚಂಪೂ ಕಾವ್ಯ ಪ್ರಕಾರದ ಮೂಲಕ ಅಹಿಂಸೆ, ಅನೇಕಾಂತವಾದ ಮತ್ತು ಅಪರಿಗ್ರಹದ ಮೌಲ್ಯಗಳನ್ನು ಪ್ರತಿಪಾದಿಸಿದರು; ಕ್ರಿ.ಶ.12ರಿಂದ 16ನೇ ಶತಮಾನದ ಮಧ್ಯಕಾಲೀನ ಘಟ್ಟದಲ್ಲಿ ವೀರಶೈವ ಚಳವಳಿಯ ಪ್ರೇರಣೆಯಿಂದ ಬಸವಣ್ಣ ಮತ್ತು ಅನೇಕ ಶರಣರು ವಚನ ಹಾಗೂ ರಗಳೆ ಸಾಹಿತ್ಯದ ಮೂಲಕ ಕಾಯಕ, ಜಂಗಮ ತತ್ತ್ವ ಮತ್ತು ಧಾರ್ಮಿಕ ಸಮಾನತೆಯನ್ನು ಸಾರಿದರು; ಮುಂದೆ ಕ್ರಿ.ಶ. 15ರಿಂದ 18ನೇ ಶತಮಾನದಲ್ಲಿ ವೈಷ್ಣವ ಮತ್ತು ಸೂಫಿ ಪರಂಪರೆಗಳ ಸಮ್ಮಿಲನದಿಂದ ದಾಸ ಸಾಹಿತ್ಯ, ಕೀರ್ತನೆ, ಸಾಂಗತ್ಯ ಮತ್ತು ತತ್ತ್ವಪದಗಳ ಮೂಲಕ ಭಕ್ತಿ, ಶರಣಾಗತಿ ಮತ್ತು ಅಂತರ್ಧಾರ್ಮಿಕ ಸಹಿಷ್ಣುತೆಯ ಸಂದೇಶ ಹರಡಿತು; ಅಂತಿಮವಾಗಿ 19ನೇ ಶತಮಾನದ ನಂತರದ ಆಧುನಿಕ ಕಾಲದಲ್ಲಿ ನವೋದಯ, ನವ್ಯ ಮತ್ತು ದಲಿತ ಸಾಹಿತ್ಯ ಚಳವಳಿಗಳು ಜಾತ್ಯತೀತ ಮತ್ತು ಸರ್ವಧರ್ಮ ದೃಷ್ಟಿಕೋನದೊಂದಿಗೆ ವಿಶ್ವಮಾನವತ್ವ, ಧರ್ಮದ ಮರುವ್ಯಾಖ್ಯಾನ ಮತ್ತು ಸಾಮಾಜಿಕ ನ್ಯಾಯದ ಮೌಲ್ಯಗಳನ್ನು ಮುನ್ನೆಲೆಗೆ ತಂದವು.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ. ಗಾಯತ್ರಿ ಕುಲಕರ್ಣಿ, ಕನ್ನಡ ಉಪನ್ಯಾಸಕರು ಜಿ, ಎಫ್, ಜಿ, ಸಿ, ವಮೆನ್ಸ್ ಕಾಲೇಜು ಧಾರವಾಡ

How to cite this article:
ಡಾ. ಗಾಯತ್ರಿ ಕುಲಕರ್ಣಿ.*(2026).*ಕನ್ನಡ ಸಾಹಿತ್ಯ ಮತ್ತು ಧರ್ಮ. Journal of Research and Development, 18(4(II)), 40–43. https://doi.org/10.5281/zenodo.19395029

Quick Response Code:
Website: https://jrdrvb.org/
DOI: 10.5281/zenodo.19395029
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಕನ್ನಡ ಸಾಹಿತ್ಯ ಮತ್ತು ಧರ್ಮ

1. ಪ್ರಾಚೀನ ಕನ್ನಡ ಸಾಹಿತ್ಯ ಮತ್ತು ಜೈನ ಧರ್ಮ

ಕನ್ನಡ ಸಾಹಿತ್ಯದ ಸುವರ್ಣಯುಗವೆಂದು ಕರೆಯಲ್ಪಡುವ ಹತ್ತನೇ ಶತಮಾನವು ಸಂಪೂರ್ಣವಾಗಿ ಜೈನ ಧರ್ಮದ ಪ್ರಭಾವಕ್ಕೆ ಒಳಪಟ್ಟಿದೆ.ಈ ಕಾಲಘಟ್ಟದಲ್ಲಿ ಕಾವ್ಯ ರಚಿಸಿದ ಪಂಪ, ರನ್ನ ಮತ್ತು ಪೊನ್ನ ಎಂಬ ಮೂರು ಮಹಾನ್ ಕವಿಗಳನ್ನು ಕನ್ನಡ ಸಾಹಿತ್ಯದ "ರತ್ನತ್ರಯರು" ಎಂದು ಕರೆಯಲಾಗುತ್ತದೆ.ಇವರು ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಲ್ಲಿದ್ದ ಜೈನ ಆಗಮಗಳನ್ನು ಮತ್ತು ತೀರ್ಥಂಕರರ ಪುರಾಣಗಳನ್ನು ಕನ್ನಡಕ್ಕೆ ತರುವ ಮೂಲಕ ಕನ್ನಡ ಭಾಷೆಗೆ ಶಾಸ್ತ್ರೀಯ ಘನತೆಯನ್ನು ತಂದುಕೊಟ್ಟರು.ಪಂಪನ "ಆದಿಪುರಾಣ" ಮತ್ತು "ವಿಕ್ರಮಾರ್ಜುನ ವಿಜಯ" (ಪಂಪಭಾರತ) ಕೃತಿಗಳು ಜೈನ ತತ್ತ್ವಗಳ ಸಾಹಿತ್ಯಿಕ ಅಭಿವ್ಯಕ್ತಿಯ ಅತ್ಯುತ್ತಮ ಉದಾಹರಣೆಗಳಾಗಿವೆ.

ಆದಿಪುರಾಣವು ಮೊದಲ ಜೈನ ತೀರ್ಥಂಕರನಾದ ವೃಷಭನಾಥನ (ಪುರುದೇವ) ಕಥೆಯನ್ನು ಹೊಂದಿದ್ದು, ಇದರಲ್ಲಿ ಭೋಗದಿಂದ ಯೋಗದ ಕಡೆಗಿನ ಪಯಣವನ್ನು ಚಿತ್ರಿಸಲಾಗಿದೆ. ಜೈನ ಧರ್ಮದ ಮೂಲಭೂತ ತತ್ತ್ವಗಳಾದ ಅಹಿಂಸೆ (ಯಾವ ಜೀವಕ್ಕೂ ಹಿಂಸೆ ಮಾಡದಿರುವುದು), ಅನೇಕಾಂತವಾದ (ಯಾವುದೇ ಎರಡು ದರ್ಶನಗಳ ವಿಷಯಗಳು ತೀರ ವಿರುದ್ಧವಾಗಿದ್ದರೂ, ಅವುಗಳ ಭಾವ–ಅಭಾವಾತ್ಮಕ ಅಂಶಗಳನ್ನು ಸಮನ್ವಯಗೊಳಿಸುವ ಸಪ್ತಭಂಗಿ ಸಿದ್ಧಾಂತ) ಮತ್ತು ಅಪರಿಗ್ರಹ (ಭೌತಿಕ ವಸ್ತುಗಳ ಮೇಲಿನ ವ್ಯಾಮೋಹ ತ್ಯಜಿಸುವಿಕೆ) ತತ್ತ್ವಗಳು ಈ ಕಾವ್ಯಗಳಲ್ಲಿ ಅತ್ಯಂತ ಸೂಕ್ಷ್ಮವಾಗಿ ಸಾಹಿತ್ಯಿಕ ರೂಪಾಂತರ ಪಡೆದಿವೆ. ರನ್ನನ 'ಗದಾಯುದ್ಧ'ದಲ್ಲಿ ದುರ್ಯೋಧನನ ಪಾತ್ರವು ಜೈನ ಧರ್ಮದ 'ಶಲ್ಯ' (ತಪ್ಪು) ಕಲ್ಪನೆಯನ್ನು ಬಿಂಬಿಸಿದರೆ, ಪಂಪನ ಕಾವ್ಯದಲ್ಲಿ ಅರ್ಜುನನ ಪಾತ್ರವು ಲೌಕಿಕ ಮತ್ತು ಧಾರ್ಮಿಕ ಸಂಘರ್ಷವನ್ನು ಎದುರಿಸುತ್ತದೆ.

ಪಂಪನು ಕೇವಲ ಧರ್ಮಬೋಧಕನಾಗಿರದೆ ಸಮಾಜಮುಖಿ ಕವಿಯಾಗಿದ್ದ.ಆತನ ಕಾವ್ಯದಲ್ಲಿ ಲೌಕಿಕ ಮತ್ತು ಆಗಮಿಕ ಸತ್ಯಗಳು ಪರಸ್ಪರ ಪೂರಕವಾಗಿ ನಿಲ್ಲುತ್ತವೆ.ಉದಾಹರಣೆಗೆ, ಪಂಪನ ಆದಿಪುರಾಣದ ಈ ಕೆಳಗಿನ ಸಾಲುಗಳನ್ನು ವಿಶ್ಲೇಷಿಸಬಹುದು.

ಪುಸಿಯದುದು ಪರಾಂಗನೆಗಾ
ಟಿಸದುದು ಕೊಲ್ಲದುದು ಮೋಹಮಿಲ್ಲದುದರಿವಂ
ಪೊಸಯಿಸುವುದು ವೈರಾಗ್ಯದ
ದೆಸೆಗೆಸಪುದು ಧರ್ಮಮದರ ತಡೆವುದಧರ್ಮಂ (ಆದಿಪು 5.79)

(ಸುಳ್ಳು ಹೇಳದಿರುವುದು, ಪರಸ್ತ್ರೀಯನ್ನು ಬಯಸದಿರುವುದು, ಹಿಂಸೆ ಮಾಡದಿರುವುದು, ಮೋಹವಿಲ್ಲದಿರುವುದು, ಜ್ಞಾನವನ್ನು ವಿಸ್ತರಿಸುವುದು ಮತ್ತು ವೈರಾಗ್ಯವನ್ನು ಬೆಳೆಸಿಕೊಳ್ಳುವುದು ಧರ್ಮ; ಇವುಗಳಿಗೆ ಅಡ್ಡಿಯಾಗುವುದು ಅಧರ್ಮ). ಈ ಸಾಲುಗಳಲ್ಲಿ ಪಂಪನು ಜೈನ ತತ್ತ್ವಗಳನ್ನು ಅತ್ಯಂತ ಸರಳವಾಗಿ, ಸಾರ್ವತ್ರಿಕ ಮಾನವ ಮೌಲ್ಯಗಳಾಗಿ ರೂಪಾಂತರಿಸಿದ್ದಾನೆ. ಆಳುವ ವರ್ಗವು ಲೌಕಿಕ ವೈಭವವನ್ನು ಅನುಭವಿಸಿದರೂ ಅಂತಿಮವಾಗಿ ಅಪರಿಗ್ರಹ ಮತ್ತು ತ್ಯಾಗದ ಮೂಲಕವೇ ಮುಕ್ತಿ ಪಡೆಯಬೇಕು ಎಂಬ ಜೈನ ತಾತ್ತ್ವಿಕತೆಯನ್ನು ಪಂಪನ ಕಾವ್ಯಗಳು ಎತ್ತಿಹಿಡಿಯುತ್ತವೆ.

2. ಶೈವ ಧರ್ಮ ಮತ್ತು ವಚನ ಸಾಹಿತ್ಯ

ಹನ್ನೆರಡನೇ ಶತಮಾನವು ಕನ್ನಡ ಸಾಹಿತ್ಯ ಮತ್ತು ಧರ್ಮದ ಇತಿಹಾಸದಲ್ಲಿ ಒಂದು ಅಭೂತಪೂರ್ವ ಕ್ರಾಂತಿಯ ಕಾಲ. ಕಲ್ಯಾಣದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ಶರಣ ಚಳವಳಿಯು ಶೈವ (ವೀರಶೈವ) ಧರ್ಮವನ್ನು ಪ್ರಜಾಸತ್ತಾತ್ಮಕಗೊಳಿಸಿತು.ಈ ಚಳವಳಿಯ ಗರ್ಭದಿಂದಲೇ 'ವಚನ ಸಾಹಿತ್ಯ' ಎಂಬ ವಿಶಿಷ್ಟ ದೇಶಿ ಸಾಹಿತ್ಯ ಪ್ರಕಾರ ಜನ್ಮತಾಳಿತು.ಅಕ್ಕಮಹಾದೇವಿ, ಅಲ್ಲಮಪ್ರಭು, ಸಿದ್ಧರಾಮ, ಚೆನ್ನಬಸವಣ್ಣ ಮುಂತಾದ ನೂರಾರು ಶರಣರು ಸಂಸ್ಕೃತದ ಪ್ರಾಬಲ್ಯವನ್ನು ಧಿಕ್ಕರಿಸಿ, ಸಾಮಾನ್ಯ ಜನರ ಆಡುಮಾತಿನಲ್ಲಿ ತಮ್ಮ ಆಧ್ಯಾತ್ಮಿಕ ಅನುಭಾವವನ್ನು ಮತ್ತು ಧಾರ್ಮಿಕ ಪ್ರತಿಭಟನೆಯನ್ನು ಅಭಿವ್ಯಕ್ತಪಡಿಸಿದರು.

ವಚನ ಸಾಹಿತ್ಯದ ಕೇಂದ್ರ ಬಿಂದುಗಳು ಲಿಂಗ, ಜಂಗಮ ಮತ್ತು ಪ್ರಸಾದ ತತ್ತ್ವಗಳು.ಶರಣರು ದೇವರನ್ನು ಗುಡಿಯಿಂದ ಹೊರತಂದು 'ಇಷ್ಟಲಿಂಗ'ದ ರೂಪದಲ್ಲಿ ಪ್ರತಿಯೊಬ್ಬನ ಅಂಗೈಯಲ್ಲಿರಿಸಿದರು."ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ" ಎಂದು ಸಾರುವ ಮೂಲಕ ಮರದ, ಕಲ್ಲಿನ ಗುಡಿಗಳಿಗಿಂತ ಚಲನಶೀಲವಾದ ಮಾನವ ದೇಹವೇ ದೇವಾಲಯವೆಂದು ಪ್ರತಿಪಾದಿಸಿದರು.ಇಲ್ಲಿ 'ಜಂಗಮ' ಎಂದರೆ ಕೇವಲ ಅಲೆದಾಡುವ ಸನ್ಯಾಸಿಯಲ್ಲ, ಬದಲಾಗಿ ಜನನ–ಮರಣ ರಹಿತವಾದ, ಸದಾ ಚಲನಶೀಲವಾದ ಶಿವಚೈತನ್ಯ.ಜಾತಿ ವ್ಯವಸ್ಥೆ ಮತ್ತು ಲಿಂಗಭೇದದ ವಿರುದ್ಧದ ದಂಗೆ ವಚನ ಸಾಹಿತ್ಯದ ಬಹುಮುಖ್ಯ ಧಾರ್ಮಿಕ ನಿಲುವು. ಎಲ್ಲರೂ ಒಂದೇ ಎಂಬ ಅರಿವು ಮೂಡಿಸಿ, ಕಾಯಕವೇ ಕೈಲಾಸ ಎಂಬ ತತ್ತ್ವವನ್ನು ಬೋಧಿಸಿದರು.

ಸೋದಾಹರಣವಾಗಿ, ಲಿಂಗ ಮತ್ತು ಜಂಗಮದ ನಡುವಿನ ಸಂಬಂಧವನ್ನು ವಿಶ್ಲೇಷಿಸುವ ಬಸವಣ್ಣನವರ ಈ ವಚನ ಅತ್ಯಂತ ಮಾರ್ಮಿಕವಾಗಿದೆ:

"ಉದಯದ ಮಾಗಿಯ ಬಿಸಿಲು ಅಂಗಕ್ಕೆ ಹಿತವಾಯಿತ್ತು;
ಮಧ್ಯಾಹ್ನದ ಬಿಸಿಲು ಅಂಗಕ್ಕೆ ಕರ ಕಠಿಣವಾಯಿತ್ತು!
ಮೊದಲಲ್ಲಿ ಲಿಂಗಭಕ್ತಿ ಹಿತವಾಯಿತ್ತು;
ಕಡೆಯಲ್ಲಿ ಜಂಗಮಭಕ್ತಿ ಕಠಿಣವಾಯಿತ್ತು!
ಇದು ಕಾರಣ ಕೂಡಲಸಂಗಮದೇವನವರ ಬಲ್ಲನಾಗಿ ಒಲ್ಲನಯ್ಯಾ"

ಈ ವಚನದಲ್ಲಿ ಬಸವಣ್ಣನವರು ಲಿಂಗಪೂಜೆಯನ್ನು ಬೆಳಗಿನ ಎಳೆಯ ಬಿಸಿಲಿಗೆ ಹೋಲಿಸಿದ್ದಾರೆ; ಅದು ಸುಲಭ ಹಾಗೂ ಹಿತಕರ.ಆದರೆ ಜಂಗಮ ಭಕ್ತಿ (ಸಮಾಜದ ಸೇವೆ ಮತ್ತು ಮಾನವೀಯತೆಯ ಆಚರಣೆ) ಮಧ್ಯಾಹ್ನದ ಬಿಸಿಲಿನಂತೆ ಕಠಿಣವಾದದ್ದು. ಏಕೆಂದರೆ ಲಿಂಗವು ಭಕ್ತನನ್ನು ಕಾಡುವುದಿಲ್ಲ, ಆದರೆ ಜಂಗಮವು ಸಂದರ್ಭಾನುಸಾರವಾಗಿ ಭಕ್ತನನ್ನು ಪರೀಕ್ಷಿಸುತ್ತದೆ ಮತ್ತು ಸಮಾಜದ ಒಳಿತಿಗಾಗಿ ಸದಾ ತುಡಿಯುವಂತೆ ಮಾಡುತ್ತದೆ.ಇದೇ ರೀತಿ ಅಕ್ಕಮಹಾದೇವಿಯು ಲೌಕಿಕ ಗಂಡನನ್ನು ಧಿಕ್ಕರಿಸಿ ಚನ್ನಮಲ್ಲಿಕಾರ್ಜುನನನ್ನೇ ಪತಿಯೆಂದು ಸ್ವೀಕರಿಸುವ ಮೂಲಕ, ಪಿತೃಪ್ರಧಾನ ಧಾರ್ಮಿಕ ವ್ಯವಸ್ಥೆಯ ವಿರುದ್ಧ ಪ್ರಬಲ ಸಾಹಿತ್ಯಿಕ ಪ್ರತಿಭಟನೆಯನ್ನು ದಾಖಲಿಸಿದಳು.

3. ವೈಷ್ಣವ ಧರ್ಮ ಮತ್ತು ಕನ್ನಡ ಭಕ್ತಿ ಸಾಹಿತ್ಯ

ಹದಿನೈದು ಮತ್ತು ಹದಿನಾರನೇ ಶತಮಾನದ ವೇಳೆಗೆ ವಿಜಯನಗರ ಸಾಮ್ರಾಜ್ಯದ ಆಶ್ರಯದಲ್ಲಿ ವೈಷ್ಣವ ಧರ್ಮವು ಪ್ರಬಲವಾಯಿತು. ಕುಮಾರವ್ಯಾಸ ಮತ್ತು ಲಕ್ಷ್ಮೀಶರಂತಹ ಕವಿಗಳು ಮಹಾಕಾವ್ಯಗಳ ಮೂಲಕ ವೈಷ್ಣವ ಪ್ರಭಾವವನ್ನು ಪಸರಿಸಿದರು.ಕುಮಾರವ್ಯಾಸನ "ಕರ್ಣಾಟ ಭಾರತ ಕಥಾ ಮಂಜರಿ" (ಗದುಗಿನ ಭಾರತ) ಸಂಪೂರ್ಣವಾಗಿ ಕೃಷ್ಣ ಭಕ್ತಿಯನ್ನು ಕೇಂದ್ರವಾಗಿಟ್ಟುಕೊಂಡಿದೆ.ಮಹಾಭಾರತದ ಕಥೆಯನ್ನು ನಿರೂಪಿಸುತ್ತಲೇ ಆತನು "ವೀರನಾರಾಯಣನೆ ಕವಿ, ಲಿಪಿಕಾರ ಕುಮಾರವ್ಯಾಸ" ಎಂದು ಹೇಳಿಕೊಳ್ಳುವ ಮೂಲಕ ತನ್ನ ಕಾವ್ಯ ರಚನೆಯೇ ಒಂದು ಧಾರ್ಮಿಕ ಆರಾಧನೆ ಎಂದು ಸಾರಿದ್ದಾನೆ. ಭಕ್ತಿ ಮಾರ್ಗವನ್ನು ತಳಮಟ್ಟದ ಜನರಿಗೆ ತಲುಪಿಸುವಲ್ಲಿ ಹರಿದಾಸರ ಪಾತ್ರ ಅದ್ವಿತೀಯ.

ಪುರಂದರದಾಸರು ಮತ್ತು ಕನಕದಾಸರು ಕೀರ್ತನೆ, ಉಗಾಭೋಗ, ಸುಳಾದಿಗಳ ಮೂಲಕ ಭಕ್ತಿ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು.ಪುರಂದರದಾಸರ ಕೀರ್ತನೆಗಳು ಕೇವಲ ಕೃಷ್ಣನ ಲೀಲೆಗಳನ್ನು ವರ್ಣಿಸದೆ, ಸಮಾಜದ ಡಾಂಭಿಕತೆಯನ್ನು ಕಟುವಾಗಿ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಟೀಕಿಸಿದವು.ಕನಕದಾಸರ "ಮೋಹನ ತರಂಗಿಣಿ", "ಹರಿಭಕ್ತಿಸಾರ" ಮತ್ತು "ರಾಮಧಾನ್ಯ ಚರಿತೆ" ಕೃತಿಗಳು ಧಾರ್ಮಿಕ–ಸಾಹಿತ್ಯಿಕ ಮೌಲ್ಯಗಳ ಆಗರಗಳಾಗಿವೆ. ಶೂದ್ರ ಸಮುದಾಯದಿಂದ ಬಂದ ಕನಕದಾಸರು ಸಮಾಜದ ಜಾತಿ ಪದ್ಧತಿಯನ್ನು ಕಟುವಾಗಿ ವಿಮರ್ಶಿಸಿದರು. 'ರಾಮಧಾನ್ಯ ಚರಿತೆ'ಯಲ್ಲಿ ರಾಗಿ (ಕೆಳವರ್ಗ) ಮತ್ತು ಭತ್ತದ (ಮೇಲ್ವರ್ಗ) ನಡುವಿನ ಸಂವಾದದ ಮೂಲಕ ಸಾಮಾಜಿಕ ಅಸಮಾನತೆಯ ಧಾರ್ಮಿಕ ಆಯಾಮವನ್ನು ವಿಶ್ಲೇಷಿಸಲಾಗಿದೆ.

ಸೋದಾಹರಣವಾಗಿ, ಪುರಂದರದಾಸರ ಈ ಕೆಳಗಿನ ಕೀರ್ತನೆಯ ಸಾಲುಗಳು ಧಾರ್ಮಿಕ ಡಾಂಭಿಕತೆಯ ವಿಮರ್ಶೆಯಾಗಿ ಮೂಡಿಬಂದಿವೆ: "ಮಡಿ ಮಡಿಯೆಂದಡಿಗಡಿಗ್ಗಾರುವಿ, ಉದರ ವೈರಾಗ್ಯವಿದು". ಅಂದರೆ, ಬರೀ ಹೊರಗಿನ ಬಟ್ಟೆಯನ್ನು ಒಗೆದು ಮಡಿ ಮಾಡಿಕೊಂಡರೆ ಸಾಲದು, ಒಳಗಿನ ಮನಸ್ಸು ಶುದ್ಧವಾಗಿರಬೇಕು. ಹೊಟ್ಟೆಪಾಡಿಗಾಗಿ ಮಾಡುವ ಡಾಂಬಿಕ ಭಕ್ತಿಯನ್ನು ಖಂಡಿಸುತ್ತಾ, ಶುದ್ಧ ಮನಸ್ಸಿನಿಂದ ಮಾಡುವ ಭಕ್ತಿಯೊಂದೇ ಭಗವಂತನಿಗೆ ಪ್ರಿಯ ಎಂದು ಪುರಂದರದಾಸರು ಎಚ್ಚರಿಸುತ್ತಾರೆ. ಈ ಭಕ್ತಿ ಸಾಹಿತ್ಯವು ಧರ್ಮವನ್ನು ಮನುಷ್ಯನ ಅಂತರಂಗದ ಶುದ್ಧಿಗೆ ಮತ್ತು ಸಾಮಾಜಿಕ ನೈತಿಕತೆಗೆ ಕೊಂಡೊಯ್ಯುವ ಬಲವಾದ ಸಾಹಿತ್ಯಿಕ ಸೇತುವೆಯಾಗಿ ಕಾರ್ಯನಿರ್ವಹಿಸಿತು.ಜಾತಿ ಭೇದವಿಲ್ಲದೆ ಸರ್ವರೂ ಹರಿಭಕ್ತಿಗೆ ಅರ್ಹರು ಎಂಬ ಸಂದೇಶವನ್ನು ಈ ಸಾಹಿತ್ಯವು ಸಾರಿತು.

4. ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಧರ್ಮ

ಮಧ್ಯಕಾಲೀನ ಸಾಹಿತ್ಯವು ಶೈವ ಮತ್ತು ವೈಷ್ಣವ ಧರ್ಮಗಳ ಪೈಪೋಟಿಯ ಜೊತೆಗೆ, ಹೊಚ್ಚಹೊಸ ಧಾರ್ಮಿಕ ಪ್ರಭಾವಗಳನ್ನು ಮೈಗೂಡಿಸಿಕೊಂಡ ಸಂಧಿಕಾಲವಾಗಿದೆ.ಚಾಮರಸ, ಹರಿಹರ ಮತ್ತು ರಾಘವಾಂಕರು ಈ ಯುಗದ ಪ್ರಮುಖ ಕವಿಗಳು. ಹರಿಹರನು ಚಂಪೂ ಶೈಲಿಯ ಸಂಸ್ಕೃತದ ಬಿಗಿಮುಷ್ಟಿಯಿಂದ ಹೊರಬಂದು 'ರಗಳೆ' ಎಂಬ ಹೊಸ ದೇಶಿ ಛಂದೋರೂಪವನ್ನು ಬಳಸಿದನು. ಆತನು ಪುರಾಣದ ಕಲ್ಪಿತ ರಾಜರುಗಳ ಬದಲಾಗಿ, ಶ್ರಮಜೀವಿಗಳಾದ ಮತ್ತು ಸಾಮಾನ್ಯ ಮನುಷ್ಯರಾದ 'ಶಿವಭಕ್ತ'ರನ್ನು (ಉದಾಹರಣೆಗೆ ಕುಂಬಾರ ಗುಂಡಯ್ಯ, ಮಾದಾರ ಚೆನ್ನಯ್ಯ) ತನ್ನ ಕಾವ್ಯದ ನಾಯಕರನ್ನಾಗಿ ಮಾಡಿದನು.ಇದು ಧರ್ಮ ಮತ್ತು ಸಾಹಿತ್ಯದ ಪ್ರಜಾಸತ್ತೀಕರಣದ ಮುಂದಿನ ಹಂತವಾಗಿತ್ತು.

ಚಾಮರಸನ "ಪ್ರಭುಲಿಂಗ ಲೀಲೆ"ಯು ಶರಣ ಪರಂಪರೆಯ ಕೇಂದ್ರ ಬಿಂದುವಾದ ಅಲ್ಲಮಪ್ರಭುವಿನ ಅಧ್ಯಾತ್ಮಿಕ ಪಯಣವನ್ನು ನಿರೂಪಿಸುತ್ತದೆ.ಇದರಲ್ಲಿ ಶಿವಭಕ್ತನೊಬ್ಬನ ಪಾತ್ರ ಚಿತ್ರಣವು ಮಾಯೆ ಮತ್ತು ವೈರಾಗ್ಯದ ನಡುವಿನ ಸಂಘರ್ಷವನ್ನು ಅತ್ಯಂತ ತಾರ್ಕಿಕವಾಗಿ ಕಟ್ಟಿಕೊಡುತ್ತದೆ.ರಾಘವಾಂಕನ "ಹರಿಶ್ಚಂದ್ರ ಕಾವ್ಯ"ವು ಸತ್ಯವೆಂಬ ಧರ್ಮವನ್ನು ಪಾಲಿಸಲು ನಾಯಕನು ಪಡುವ ಪಾಡುಗಳನ್ನು ವಾಸ್ತವಿಕ ಮತ್ತು ಷಟ್ಪದಿಯ ರಂಜನೀಯ ಶೈಲಿಯಲ್ಲಿ ಚಿತ್ರಿಸಿದೆ. ವಿಶ್ವಾಮಿತ್ರನ ಮಾಯೆಯ ಬಲೆಯರ ಪ್ರಸಂಗದಲ್ಲಿ ವರ್ಣಧರ್ಮ ಮತ್ತು ಜಾತಿ ಮಡಿವಂತಿಕೆಯ ಕಟು ವಿಮರ್ಶೆಯನ್ನು ಕವಿ ತಂದಿದ್ದಾನೆ.

ಇದೇ ಅವಧಿಯಲ್ಲಿ ಇಸ್ಲಾಂ ಧರ್ಮದ 'ಸೂಫಿ' ಪಂಥದ ಪ್ರಭಾವವು ಕರ್ನಾಟಕವನ್ನು ಪ್ರವೇಶಿಸಿತು.ಸೂಫಿ ಪಂಥವು ಹಿಂದೂ ಮತ್ತು ಮುಸ್ಲಿಮರ ನಡುವೆ ಧಾರ್ಮಿಕ ಸಹೋದರತ್ವ ಮತ್ತು ಭಾವೈಕ್ಯತೆಯನ್ನು ಬೆಳೆಸಿತು.ಗುಲ್ಬರ್ಗಾದ ಬಂದೇ ನವಾಜ್ ಅವರಂತಹ ಸೂಫಿ ಸಂತರು ಮಾನವರೆಲ್ಲರೂ ಸರಿಸಮಾನರು ಎಂದು ಬೋಧಿಸಿದರು.ನಂತರದ ದಿನಗಳಲ್ಲಿ ಸಂತ ಶಿಶುನಾಳ ಶರೀಫರು ಸೂಫಿ ತತ್ತ್ವ ಮತ್ತು ವೀರಶೈವ ತತ್ತ್ವಗಳನ್ನು ಸಮನ್ವಯಗೊಳಿಸಿ 'ತತ್ತ್ವಪದ'ಗಳನ್ನು ರಚಿಸಿದರು.ಈ ತ್ರಿಭಾಷಾ (ಕನ್ನಡ, ಉರ್ದು, ಮರಾಠಿ) ಮತ್ತು ಬಹುಧರ್ಮೀಯ ಸಾಹಿತ್ಯ ಪ್ರಕ್ರಿಯೆಯು ಮಧ್ಯಕಾಲೀನ ಸಾಹಿತ್ಯವನ್ನು ಹೆಚ್ಚು ಸಹಿಷ್ಣುವಾಗಿಸಿತು.ಇಸ್ಲಾಂ ಮತ್ತು ಹಿಂದೂ ಧರ್ಮದ ಸೈದ್ಧಾಂತಿಕ ಮುಖಾಮುಖಿಯು ಒಂದು ಆರೋಗ್ಯಕರ ಅಂತರ್ಧಾರ್ಮಿಕ ಸಂವಾದಕ್ಕೆ ಸಾಹಿತ್ಯದ ಮೂಲಕ ನಾಂದಿ ಹಾಡಿತು.

5. ಆಧುನಿಕ ಕನ್ನಡ ಸಾಹಿತ್ಯ ಮತ್ತು ಧಾರ್ಮಿಕ ವಿಮರ್ಶೆ

ಪಾಶ್ಚಿಮಾತ್ಯ ಶಿಕ್ಷಣ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳ ಪ್ರವೇಶದೊಂದಿಗೆ ಆಧುನಿಕ ಕನ್ನಡ ಸಾಹಿತ್ಯವು ನವೋದಯ, ನವ್ಯ, ಪ್ರಗತಿಶೀಲ ಮತ್ತು ದಲಿತ ಸಾಹಿತ್ಯ ಎಂದು ವಿವಿಧ ಮಜಲುಗಳಲ್ಲಿ ಬೆಳೆಯಿತು.ಈ ಘಟ್ಟದಲ್ಲಿ ಧರ್ಮವು ಕೇವಲ ಆರಾಧನೆಯ ವಿಷಯವಾಗಿ ಉಳಿಯದೆ, ತೀವ್ರ ವಿಮರ್ಶೆ ಮತ್ತು ಮರುವ್ಯಾಖ್ಯಾನಕ್ಕೆ ಒಳಪಟ್ಟಿತು.ನವೋದಯದ ಯುಗಪ್ರವರ್ತಕ ಕವಿ ಕುವೆಂಪು ಅವರು ತಮ್ಮ ಮಹಾಕಾವ್ಯ "ಶ್ರೀ ರಾಮಾಯಣ ದರ್ಶನಂ" ಕೃತಿಯಲ್ಲಿ ವಾಲ್ಮೀಕಿ ರಾಮಾಯಣವನ್ನು 'ವಿಶ್ವಮಾನವ ಧರ್ಮ'ದ ನೆಲೆಯಲ್ಲಿ ಮರುಸೃಷ್ಟಿಸಿದರು.

ದ.ರಾ. ಬೇಂದ್ರೆಯವರ ಕಾವ್ಯದಲ್ಲಿ ಅರಬಿಂದೋ ಅವರ ಆಧ್ಯಾತ್ಮಿಕ ದರ್ಶನ ಮತ್ತು ದೇಸಿ ಜಾನಪದ ಮೌಲ್ಯಗಳ ಸಮ್ಮಿಲನವನ್ನು ಕಾಣಬಹುದು.ಅವರ "ಬೆಳಗು" ಕವಿತೆಯು ನಿಸರ್ಗದಲ್ಲೇ ದೈವತ್ವವನ್ನು ಕಾಣುವ ಆಧ್ಯಾತ್ಮಿಕ ತುಡಿತವನ್ನು ಹೊಂದಿದೆ.ಆದರೆ ನವ್ಯ ಕಾವ್ಯದ ಪಿತಾಮಹ ಗೋಪಾಲಕೃಷ್ಣ ಅಡಿಗರು ಧಾರ್ಮಿಕ ಅಂಧಾನುಕರಣೆಯನ್ನು ಕಟುವಾಗಿ ಪ್ರಶ್ನಿಸಿದರು. ಅವರ "ಭೂಮಿಗೀತ" ಮತ್ತು ಇತರ ಕವನಗಳು ಸಾಂಪ್ರದಾಯಿಕ ಧರ್ಮದ ಬಿಗಿಮುಷ್ಟಿಯಿಂದ ಬಿಡಿಸಿಕೊಳ್ಳುವ ತವಕವನ್ನು ತೋರುತ್ತವೆ. ಮುಂದೆ ದಲಿತ ಸಾಹಿತ್ಯದ ಉಗಮದೊಂದಿಗೆ, ದೇವನೂರ ಮಹಾದೇವರಂತಹ ಲೇಖಕರು "ಒಡಲಾಳ", "ಕುಸುಮಬಾಲೆ" ಮುಂತಾದ ಕೃತಿಗಳ ಮೂಲಕ ಹಿಂದುಳಿದ ವರ್ಗಗಳ ಮೇಲೆ ಸಾಂಸ್ಥಿಕ ಧರ್ಮವು ಹೇರಿದ ಶೋಷಣೆ ಮತ್ತು ಜಾತಿ–ಧರ್ಮಗಳ ಕ್ರೌರ್ಯವನ್ನು ವಿಮರ್ಶಾತ್ಮಕವಾಗಿ ಅನಾವರಣಗೊಳಿಸಿದರು.

ಸೋದಾಹರಣವಾಗಿ, ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಕೃತಿಯ ಈ ಸಾಲುಗಳನ್ನು ಗಮನಿಸಬಹುದು: "ಚರಿತ್ರೆಯಲ್ಲಿರುವ, ಅಲೌಕಿಕ ನಿತ್ಯ ಸತ್ಯಂಗಳ ಪ್ರತಿಮಿಸುವ ಸತ್ಯ ಕಥನ ಕಣಾ". ಕುವೆಂಪು ಅವರು ರಾವಣನನ್ನೂ ಉದಾತ್ತೀಕರಿಸಿ, ಕೊನೆಯಲ್ಲಿ ರಾಮ–ಸೀತೆ–ರಾವಣರೆಲ್ಲರೂ ಬೆಂಕಿಯಲ್ಲಿ ಬೆಂದು ಶುದ್ಧರಾಗುವ 'ಅಭಿಷೇಕ ವಿರಾಡ್ದರ್ಶನಂ' ಕಲ್ಪನೆಯನ್ನು ನೀಡಿದ್ದಾರೆ. "ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ" ಎಂಬ ಪಂಚಸೂತ್ರಗಳು ಸಾಹಿತ್ಯದ ಮೂಲಕ ಅವರು ಪ್ರತಿಪಾದಿಸಿದ ಹೊಸ ಧರ್ಮವಾಗಿದೆ.ಇದು ಹಳೆಯ ಕಂದಾಚಾರಗಳನ್ನು ನಿರಾಕರಿಸಿ, ಆಧುನಿಕ ಪ್ರಜ್ಞೆಗೆ ತಕ್ಕಂತೆ ಧರ್ಮವನ್ನು ಮರುವ್ಯಾಖ್ಯಾನಿಸಿದ ಸಾಹಿತ್ಯಿಕ ಸಾಧನೆಯಾಗಿದೆ.

ಸಮಾರೋಪ

ಕನ್ನಡ ಸಾಹಿತ್ಯದ ಚರಿತ್ರೆಯನ್ನು ಸಮಗ್ರವಾಗಿ ಅವಲೋಕಿಸಿದಾಗ, ಧರ್ಮವು ಕಾವ್ಯದ ಕೇವಲ ವಸ್ತುವಾಗದೆ, ಕಾವ್ಯದ ನೈತಿಕ ಪ್ರಜ್ಞೆಯಾಗಿ ವಿಕಾಸಗೊಂಡಿರುವುದು ಸ್ಪಷ್ಟವಾಗುತ್ತದೆ.ಜೈನ ಕವಿಗಳು ಲೌಕಿಕ–ಆಗಮಗಳ ನಡುವೆ ಸಮತೋಲನ ಸಾಧಿಸಿದರೆ, ವಚನಕಾರರು ಧರ್ಮವನ್ನು ದೇವಾಲಯಗಳಿಂದ ಶ್ರಮಜೀವಿಗಳ ಗುಡಿಸಲುಗಳಿಗೆ ತಂದರು. ದಾಸ ಸಾಹಿತ್ಯವು ಭಕ್ತಿಯ ಮೂಲಕ ಜಾತಿ ವ್ಯವಸ್ಥೆಯನ್ನು ಪ್ರಶ್ನಿಸಿದರೆ, ಆಧುನಿಕ ಸಾಹಿತ್ಯವು ಸಂಕುಚಿತ ಧರ್ಮವನ್ನು ನಿರಾಕರಿಸಿ ವಿಶ್ವಮಾನವ ಸಂದೇಶವನ್ನು ಸಾರಿತು.ಈ ಸುದೀರ್ಘ ಪಯಣದಲ್ಲಿ ಕನ್ನಡಸಾಹಿತ್ಯವು ಧರ್ಮವನ್ನು ಕೇವಲ ಆಚರಣೆಯಾಗುಳಿಯಲು ಬಿಡದೆ, ಅದನ್ನು ಸರ್ವಕಾಲಿಕ ಮಾನವ ಮೌಲ್ಯಗಳಾಗಿ ಯಶಸ್ವಿಯಾಗಿ ರೂಪಾಂತರಿಸಿದೆ. ಕನ್ನಡದ ಸಾಂಸ್ಕೃತಿಕ ಗುರುತನ್ನು ರೂಪಿಸುವಲ್ಲಿ ಧಾರ್ಮಿಕ ಸಾಹಿತ್ಯದ ಪಾತ್ರವು ಅಳಿಸಲಾಗದಷ್ಟು ಆಳವಾಗಿದೆ.ಅಂತಿಮವಾಗಿ ಹೇಳುವುದಾದರೆ–ಕನ್ನಡ ಸಾಹಿತ್ಯದ ಗರ್ಭದಲ್ಲಿ ಅರಳಿದ ಧರ್ಮವು ದೇವರಿಗಿಂತ ಮನುಷ್ಯನನ್ನೇ ಹೆಚ್ಚು ಪ್ರೀತಿಸುವ, ಮನುಷ್ಯತ್ವವನ್ನೇ ಅಂತಿಮ ದೈವವೆಂದು ಆರಾಧಿಸುವ ಒಂದು ದಿವ್ಯ ಸಾಹಿತ್ಯಿಕ ಮೌಲ್ಯವಾಗಿದೆ.

ಪರಾಮರ್ಶನ ಗ್ರಂಥಗಳು

1. ಮುಗಳಿ, ರಂ. ಶ್ರೀ. (1953).ಕನ್ನಡ ಸಾಹಿತ್ಯ ಚರಿತ್ರೆ,ಗೀತಾ ಬುಕ್ ಹೌಸ್.
2. ನರಸಿಂಹಾಚಾರ್ಯ, ಆರ್. (1907–1929). ಕರ್ನಾಟಕ ಕವಿಚರಿತೆ (ಸಂಪುಟ 1, 2, 3).ಕನ್ನಡ ಸಾಹಿತ್ಯ ಪರಿಷತ್ತು.
3. ಚಿದಾನಂದಮೂರ್ತಿ, ಎಂ. (1966). ವಚನ ಸಾಹಿತ್ಯ.ಬೆಂಗಳೂರು ವಿಶ್ವವಿದ್ಯಾಲಯ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

4. ತಿಪ್ಪೇರುದ್ರಸ್ವಾಮಿ, ಎಚ್. (1968). ಕರ್ನಾಟಕ ಸಂಸ್ಕೃತಿ ಸಮೀಕ್ಷೆ.ಡಿ.ವಿ.ಕೆ. ಮೂರ್ತಿ ಪ್ರಕಾಶನ.
5. ಕುವೆಂಪು. (1949). ಶ್ರೀ ರಾಮಾಯಣ ದರ್ಶನಂ.ಉದಯರವಿ ಪ್ರಕಾಶನ.
6. ಶಿವರುದ್ರಪ್ಪ, ಜಿ. ಎಸ್. (1974).ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ (ಸಂಪುಟಗಳು).ಬೆಂಗಳೂರು ವಿಶ್ವವಿದ್ಯಾಲಯ.
7. ನಾಗರಾಜ್, ಡಿ. ಆರ್. (1999). ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ.ಅಕ್ಷರ ಪ್ರಕಾಶನ.
8. ವೆಂಕಟಾಚಲಶಾಸ್ತ್ರೀ, ಟಿ. ವಿ. (2000). ಹಳಗನ್ನಡ ಸಾಹಿತ್ಯ ವಿಮರ್ಶೆ.ಅಭಿನವ ಪ್ರಕಾಶನ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಕನ್ನಡ ಸಾಹಿತ್ಯ ಮತ್ತು ತಂತ್ರಜ್ಞಾನ: ಡಿಜಿಟಲ್ ಯುಗದಲ್ಲಿ ಭಾಷಾ ಅಸ್ತಿತ್ವ, ಸಾಹಿತ್ಯಿಕ ಅಭಿವ್ಯಕ್ತಿ ಮತ್ತು ಸಾಂಸ್ಕೃತಿಕ ಪರಿವರ್ತನೆ

ಕೃಷ್ಣಮೂರ್ತಿ.ಜಿ[1] [2]ಶೃತಿ.ಕೆ.ಎಸ್
[1]ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ತ್ರಿವೇಣಿ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್ಮೆಂಟ್,
ನಂ.28/29, ಹೆಸರಘಟ್ಟ ಮುಖ್ಯರಸ್ತೆ, ಮಲ್ಲಸಂದ್ರ, ಬೆಂಗಳೂರು–560057
Email ID: Krishnamurthy.info2018@gmail.com
[2]ಸಹಾಯಕ ಪ್ರಾಧ್ಯಾಪಕಿ,ಕನ್ನಡ ವಿಭಾಗ
ಆರ್.ಆರ್. ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಮೆಂಟ್ ಸ್ಟಡೀಸ್ ಬೆಂಗಳೂರು
Email ID :shruthis609@gmail.com

Manuscript ID:
JRD -2026-180414
ISSN: 2230-9578
Volume 18
Issue 4(II)
Pp.44-49
April 2026
Submitted:08 Mar. 2026
Revised:24Mar. 2026
Accepted:10Apr.2026
Published:30 April2026

ಸಾರಲೇಖ :

ಇಪ್ಪತ್ತೊಂದನೆಯ ಶತಮಾನವನ್ನು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳ ಯುಗವೆಂದುಗುರುತಿಸಲಾಗುತ್ತದೆ. ಡಿಜಿಟಲ್ ತಂತ್ರಜ್ಞಾನಗಳ ವೇಗದ ಬೆಳವಣಿಗೆ ಮಾನವಜೀವನದಎಲ್ಲ ಕ್ಷೇತ್ರಗಳಲ್ಲಿಯೂ ಮಹತ್ವದ ಬದಲಾವಣೆಗಳನ್ನುಂಟುಮಾಡಿದೆ. ಸಾಹಿತ್ಯವೂ ಈ ಬದಲಾವಣೆಯಿಂದ ಹೊರತಾಗಿಲ್ಲ. ಕನ್ನಡ ಸಾಹಿತ್ಯವು ದೀರ್ಘಇತಿಹಾಸ ಮತ್ತು ಸಮೃದ್ಧ ಪರಂಪರೆಯನ್ನು ಹೊಂದಿದ ಭಾರತೀಯ ಭಾಷಾ ಸಾಹಿತ್ಯವಾಗಿದ್ದು, ಕಾಲಾನುಸಾರವಾಗಿ ಸಾಮಾಜಿಕ, ಸಾಂಸ್ಕೃತಿಕ ಮತ್ತುತಾಂತ್ರಿಕ ಬದಲಾವಣೆಗಳಿಗೆ ಹೊಂದಿಕೊಳ್ಳುತ್ತ ಬಂದಿದೆ. ಡಿಜಿಟಲ್ತಂತ್ರಜ್ಞಾನದ ಬೆಳವಣಿಗೆಯೊಂದಿಗೆ ಸಾಹಿತ್ಯದ ಸೃಷ್ಟಿ, ಪ್ರಕಟಣೆ ಮತ್ತು ವಿತರಣೆಯ ವಿಧಾನಗಳಲ್ಲಿ ಮಹತ್ತರ ಬದಲಾವಣೆಗಳು ಸಂಭವಿಸಿವೆ. ಇಪುಸ್ತಕಗಳು, ಆನ್‌ಲೈನ್ ಪತ್ರಿಕೆಗಳು, ಸಾಮಾಜಿಕ ಮಾಧ್ಯಮಗಳು, ಬ್ಲಾಗ್‌ಗಳು ಮತ್ತುಡಿಜಿಟಲ್ ಗ್ರಂಥಾಲಯಗಳು ಸಾಹಿತ್ಯದ ವ್ಯಾಪ್ತಿಯನ್ನು ವಿಸ್ತರಿಸಿವೆ. ಇದರಿಂದ ಸಾಹಿತ್ಯವುಜಾಗತಿಕ ಮಟ್ಟದಲ್ಲಿಓದುಗರನ್ನುತಲುಪುವಅವಕಾಶವನ್ನು ಪಡೆದಿದೆ. 'ಈ ಸಂಶೋಧನಾ ಲೇಖನವು ಕನ್ನಡ ಸಾಹಿತ್ಯ ಮತ್ತುತಂತ್ರಜ್ಞಾನದ ನಡುವಿನ ಸಂಬಂಧವನ್ನು ವಿಶ್ಲೇಷಿಸುವುದರಜೊತೆಗೆಡಿಜಿಟಲ್‌ಯುಗದಲ್ಲಿಕನ್ನಡ ಸಾಹಿತ್ಯದರೂಪಾಂತರಅದರ ಸಾಧ್ಯತೆಗಳು ಮತ್ತು ಸವಾಲುಗಳನ್ನು ಪರಿಶೀಲಿಸುತ್ತದೆ. ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕ ವಿಧಾನಗಳನ್ನು ಬಳಸಿಕೊಂಡು ಈ ಅಧ್ಯಯನತಂತ್ರಜ್ಞಾನವುಕನ್ನಡ ಸಾಹಿತ್ಯಕ್ಕೆ ಹೊಸ ವೇದಿಕೆಗಳನ್ನು ಒದಗಿಸಿರುವುದನ್ನು ತೋರಿಸುತ್ತದೆ. ಡಿಜಿಟಲ್‌ತಂತ್ರಜ್ಞಾನವು ಸಾಹಿತ್ಯದ ಪ್ರಜಾಪ್ರಭುತ್ವೀಕರಣಕ್ಕೆ ಸಹಕಾರಿಯಾಗಿದ್ದು, ಹೊಸ ಬರಹಗಾರರುತಮ್ಮ ಕೃತಿಗಳನ್ನು ಸುಲಭವಾಗಿ ಪ್ರಕಟಿಸಲು ಅವಕಾಶ ನೀಡುತ್ತಿದೆ. ಆದರೆಕನ್ನಡ ಭಾಷೆಗೆತಾಂತ್ರಿಕ ಸಂಪನ್ಮೂಲಗಳ ಕೊರತೆ, ಡಿಜಿಟಲ್ ಸಾಹಿತ್ಯದಗುಣಮಟ್ಟದ ಪ್ರಶ್ನೆಗಳು ಮತ್ತುಓದುವಅಭ್ಯಾಸದ ಬದಲಾವಣೆಗಳು ಪ್ರಮುಖ ಸವಾಲುಗಳಾಗಿವೆ. ಈ ಅಧ್ಯಯನದಅಂತಿಮ ನಿರ್ಣಯವೆಂದರೆತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಂಡರೆ ಕನ್ನಡ ಸಾಹಿತ್ಯವುಜಾಗತಿಕ ಮಟ್ಟದಲ್ಲಿತನ್ನ ಸ್ಥಾನವನ್ನುಇನ್ನಷ್ಟು ಬಲಪಡಿಸಬಹುದು ಮತ್ತು ಭವಿಷ್ಯದಲ್ಲಿಡಿಜಿಟಲ್ ಸಾಹಿತ್ಯದ ಪ್ರಮುಖ ಭಾಷೆಗಳಲ್ಲೊಂದು ಆಗಬಹುದು.

ಮೂಲಪದಗಳು : ಕನ್ನಡ ಸಾಹಿತ್ಯ, ತಂತ್ರಜ್ಞಾನ, ಡಿಜಿಟಲ್ ಸಾಹಿತ್ಯ, ಇಪುಸ್ತಕಗಳು, ಸಾಮಾಜಿಕ ಮಾಧ್ಯಮ, ಡಿಜಿಟಲೀಕರಣ

1. ಪರಿಚಯ

ಮಾನವ ಸಮಾಜದಇತಿಹಾಸವನ್ನು ಗಮನಿಸಿದರೆ ಪ್ರತಿಯೊಂದು ಯುಗವೂತನ್ನದೇ ಆದ ತಾಂತ್ರಿಕ ಸಾಧನಗಳನ್ನು ಹೊಂದಿರುತ್ತದೆ. ಇಂದಿನ ಕಾಲವನ್ನು ಮಾಹಿತಿ ತಂತ್ರಜ್ಞಾನಯುಗವೆಂದು ಕರೆಯಲಾಗುತ್ತದೆ. ಇಂಟರ್ನೆಟ್, ಕಂಪ್ಯೂಟರ್ ಮತ್ತು ಮೊಬೈಲ್ ತಂತ್ರಜ್ಞಾನಗಳು ಮಾನವಜೀವನದಎಲ್ಲ ಕ್ಷೇತ್ರಗಳಲ್ಲಿಯೂ ಪ್ರಭಾವ ಬೀರಿವೆ.ಸಾಹಿತ್ಯವು ಮಾನವ ಸಮಾಜದಚಿಂತನೆ, ಸಂಸ್ಕೃತಿ ಮತ್ತುಜೀವನದ ಪ್ರತಿಬಿಂಬವಾಗಿದೆ. ಆದ್ದರಿಂದತಂತ್ರಜ್ಞಾನದಲ್ಲಿಉಂಟಾಗುವ ಬದಲಾವಣೆಗಳು ಸಾಹಿತ್ಯದರೂಪ ಮತ್ತುಅಭಿವ್ಯಕ್ತಿಯ ಮೇಲೂ ಪರಿಣಾಮ ಬೀರುತ್ತವೆ.ಕನ್ನಡ ಸಾಹಿತ್ಯವು ಸುಮಾರುಎರಡು ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿದೆ. ಹಳಗನ್ನಡದಿಂದ ಪ್ರಾರಂಭವಾದ ಈ ಸಾಹಿತ್ಯ ಪರಂಪರೆ ಮಧ್ಯಯುಗದಲ್ಲಿ ಭಕ್ತಿ ಮತ್ತು ವಚನ ಸಾಹಿತ್ಯಗಳ ಮೂಲಕ ಸಮೃದ್ಧಿಯತ್ತ ಸಾಗಿತು.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಕೃಷ್ಣಮೂರ್ತಿ. ಈ' ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗತ್ರಿವೇಣಿ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್ಮೆಂಟ್,ನಂ.28/29, ಹೆಸರಘಟ್ಟ ಮುಖ್ಯರಸ್ತೆ, ಮಲ್ಲಸಂದ್ರ, ಬೆಂಗಳೂರು–560057

How to cite this article:
ಕೃಷ್ಣಮೂರ್ತಿ. ಈ' ಶೃತಿ.ಕೆ.ಎಸ್,*(2026).*ಕನ್ನಡ ಸಾಹಿತ್ಯ ಮತ್ತು ತಂತ್ರಜ್ಞಾನ: ಡಿಜಿಟಲ್ ಯುಗದಲ್ಲಿ ಭಾಷಾ ಅಸ್ತಿತ್ವ, ಸಾಹಿತ್ಯಿಕಅಭಿವ್ಯಕ್ತಿ ಮತ್ತು ಸಾಂಸ್ಕೃತಿಕ ಪರಿವರ್ತನೆ. *Journal of Research and Development, 18(4(II)), 44–49.*
https://doi.org/10.5281/zenodo.19395060

Quick Response Code:
Website: https://jrdrvb.org/
DOI: 10.5281/zenodo.19395060
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಆಧುನಿಕಯುಗದಲ್ಲಿಕಾದಂಬರಿ, ಕಥೆ, ಕಾವ್ಯ ಮತ್ತು ನಾಟಕಗಳ ಮೂಲಕ ಕನ್ನಡ ಸಾಹಿತ್ಯವು ಹೊಸ ರೂಪಗಳನ್ನು ಪಡೆದಿದೆ.ಡಿಜಿಟಲ್‌ತಂತ್ರಜ್ಞಾನದ ಬೆಳವಣಿಗೆಯೊಂದಿಗೆ ಸಾಹಿತ್ಯದ ಪ್ರಸಾರ ಮತ್ತುಓದುಗರ ಸಂಪರ್ಕದಲ್ಲಿ ಮಹತ್ತರ ಬದಲಾವಣೆಗಳು ಸಂಭವಿಸಿವೆ. ಇಪುಸ್ತಕಗಳು, ಡಿಜಿಟಲ್ ಗ್ರಂಥಾಲಯಗಳು ಮತ್ತು ಸಾಮಾಜಿಕ ಮಾಧ್ಯಮಗಳು ಸಾಹಿತ್ಯವನ್ನು ಹೊಸ ಓದುಗರಿಗೆತಲುಪಿಸುತ್ತಿವೆ.

2. ಕನ್ನಡ ಸಾಹಿತ್ಯದ ಐತಿಹಾಸಿಕ ಹಿನ್ನೆಲೆ

ಕನ್ನಡ ಸಾಹಿತ್ಯವು ಭಾರತದಅತ್ಯಂತ ಪ್ರಾಚೀನ ಸಾಹಿತ್ಯ ಪರಂಪರೆಗಳಲ್ಲಿ ಒಂದಾಗಿದೆ.ಹಲ್ಮಿಡಿಶಾಸನದಿಂದಆರಂಭವಾದಕನ್ನಡ ಸಾಹಿತ್ಯವು ಪಂಪ, ರನ್ನ ಮತ್ತು ಪೊನ್ನ ಮುಂತಾದ ಮಹಾಕವಿಗಳ ಮೂಲಕ ಅಭಿವೃದ್ಧಿಯತ್ತ ಸಾಗಿತು.ಮಧ್ಯಯುಗದಲ್ಲಿ ಬಸವಣ್ಣ ಮತ್ತುಇತರ ವಚನಕಾರರು ವಚನ ಸಾಹಿತ್ಯದ ಮೂಲಕ ಸಾಮಾಜಿಕ ಮತ್ತುಧಾರ್ಮಿಕ ಚಿಂತನೆಗಳನ್ನು ವ್ಯಕ್ತಪಡಿಸಿದರು.ದಾಸ ಸಾಹಿತ್ಯವು ಭಕ್ತಿಯ ಚಿಂತನೆಗಳನ್ನು ಜನಸಾಮಾನ್ಯರಿಗೆ ತಲುಪಿಸಿತು.ಆಧುನಿಕಕಾಲದಲ್ಲಿಕನ್ನಡ ಸಾಹಿತ್ಯವು ಹೊಸ ಪ್ರಕಾರಗಳನ್ನು ಅಳವಡಿಸಿಕೊಂಡಿತು.ಕಾದಂಬರಿ, ಕಥೆ ಮತ್ತು ನಾಟಕಗಳು ಸಮಾಜದ ಬದಲಾವಣೆಗಳನ್ನು ಪ್ರತಿಬಿಂಬಿಸಿವೆ.

3. ತಂತ್ರಜ್ಞಾನ ಮತ್ತು ಸಾಹಿತ್ಯ

ಮಾನವ ನಾಗರಿಕತೆಯ ಬೆಳವಣಿಗೆಯ ಇತಿಹಾಸವನ್ನು ಗಮನಿಸಿದರೆ ತಂತ್ರಜ್ಞಾನ ಮತ್ತುಜ್ಞಾನ ಪ್ರಸಾರದ ವಿಧಾನಗಳು ಪರಸ್ಪರ ಸಂಬಂಧ ಹೊಂದಿರುವುದನ್ನು ಸ್ಪಷ್ಟವಾಗಿಕಾಣಬಹುದು. ಸಾಹಿತ್ಯವು ಮಾನವ ಸಮಾಜದ ಅನುಭವಗಳು, ಭಾವನೆಗಳು, ಸಂಸ್ಕೃತಿ ಮತ್ತು ಚಿಂತನೆಗಳನ್ನು ಅಭಿವ್ಯಕ್ತಿಸುವ ಪ್ರಮುಖ ಮಾಧ್ಯಮವಾಗಿದ್ದು, ಅದುಯಾವಾಗಲೂಕಾಲಾನುಸಾರವಾಗಿತಾಂತ್ರಿಕ ಬದಲಾವಣೆಗಳಿಗೆ ಹೊಂದಿಕೊಳ್ಳುತ್ತ ಬಂದಿದೆ.ಪ್ರಾಚೀನಕಾಲದಲ್ಲಿ ಸಾಹಿತ್ಯವು ಮುಖ್ಯವಾಗಿ ಮೌಖಿಕ ಪರಂಪರೆಯ ಮೂಲಕ ಹರಡುತ್ತಿತ್ತು.ಜನಪದ ಕಾವ್ಯಗಳು, ಪುರಾಣ ಕಥೆಗಳು ಮತ್ತು ಗಾಥೆಗಳು ಗುರು–ಶಿಷ್ಯ ಪರಂಪರೆಯ ಮೂಲಕ ತಲೆಮಾರುಗಳಿಂದ ತಲೆಮಾರಿಗೆ ಸಾಗುತ್ತಿದ್ದವು. ನಂತರ ಬರವಣಿಗೆಯಅಭಿವೃದ್ಧಿಯೊಂದಿಗೆ ಸಾಹಿತ್ಯವು ತಾಳೆಲೆಗಳು, ಹಸ್ತಪ್ರತಿಗಳು ಮತ್ತು ತಾಮ್ರಪತ್ರಗಳ ರೂಪದಲ್ಲಿ ಸಂಗ್ರಹಿಸಲ್ಪಡತೊಡಗಿತು.ಮುದ್ರಣಯಂತ್ರದ ಆವಿಷ್ಕಾರವು ಸಾಹಿತ್ಯದಇತಿಹಾಸದಲ್ಲಿ ಮಹತ್ತರತಿರುವನ್ನುತಂದಿತು.ಮುದ್ರಣತಂತ್ರಜ್ಞಾನವು ಸಾಹಿತ್ಯವನ್ನುದೊಡ್ಡ ಪ್ರಮಾಣದಲ್ಲಿ ಪ್ರಕಟಿಸಲು ಮತ್ತು ಸಮಾಜದ ವಿವಿಧ ವರ್ಗಗಳ ಓದುಗರಿಗೆತಲುಪಿಸಲು ಸಹಾಯ ಮಾಡಿತು.ಇದರಿಂದ ಸಾಹಿತ್ಯವು ಕೇವಲ ಸೀಮಿತ ವಲಯಕ್ಕೆ ಸೀಮಿತವಾಗಿರದೆ ವ್ಯಾಪಕವಾಗಿ ಹರಡುವುದಕ್ಕೆ ಅವಕಾಶ ದೊರೆಯಿತು.

ಇಪ್ಪತ್ತನೇ ಶತಮಾನದಕೊನೆಯ ಭಾಗದಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಸಾಹಿತ್ಯವು ಮತ್ತೊಂದು ಮಹತ್ತರ ಪರಿವರ್ತನೆಯನ್ನು ಅನುಭವಿಸಿತು.ಕಂಪ್ಯೂಟರ್, ಇಂಟರ್ನೆಟ್ ಮತ್ತುಡಿಜಿಟಲ್ ಮಾಧ್ಯಮಗಳ ಬೆಳವಣಿಗೆಯು ಸಾಹಿತ್ಯದ ಸೃಷ್ಟಿ, ಸಂರಕ್ಷಣೆ ಮತ್ತು ಪ್ರಸಾರದ ವಿಧಾನಗಳನ್ನು ಸಂಪೂರ್ಣವಾಗಿ ಬದಲಿಸಿತು.ಇಂದಿನ ಡಿಜಿಟಲ್‌ಯುಗದಲ್ಲಿ ಸಾಹಿತ್ಯವು ಕೇವಲ ಮುದ್ರಿತ ಪುಸ್ತಕಗಳ ಮೂಲಕ ಮಾತ್ರವಲ್ಲದೆ ಇಪುಸ್ತಕಗಳು, ಆಡಿಯೋ ಪುಸ್ತಕಗಳು, ಪಾಡ್‌ಕಾಸ್ಟ್‌ಗಳು ಮತ್ತು ವಿವಿಧಡಿಜಿಟಲ್ ವೇದಿಕೆಗಳ ಮೂಲಕವೂ ಓದುಗರನ್ನುತಲುಪುತ್ತಿದೆ.ಡಿಜಿಟಲ್‌ತಂತ್ರಜ್ಞಾನವು ಸಾಹಿತ್ಯವನ್ನು ಬಹುಮಾಧ್ಯಮೀಯ ಸ್ವರೂಪಕ್ಕೆ ಪರಿವರ್ತಿಸಿದೆ.ಪಠ್ಯ, ಧ್ವನಿ, ಚಿತ್ರ ಮತ್ತು ವಿಡಿಯೋಗಳ ಸಂಯೋಜನೆಯ ಮೂಲಕ ಸಾಹಿತ್ಯದಅನುಭವವನ್ನುಇನ್ನಷ್ಟು ಸಮೃದ್ಧಗೊಳಿಸುವ ಸಾಧ್ಯತೆಗಳನ್ನು ತಂತ್ರಜ್ಞಾನ ಒದಗಿಸಿದೆ.

ತಂತ್ರಜ್ಞಾನವು ಸಾಹಿತ್ಯದ ಪ್ರಜಾಪ್ರಭುತ್ವೀಕರಣಕ್ಕೂ ಮಹತ್ವದ ಪಾತ್ರವಹಿಸಿದೆ.ಹಿಂದಿನ ಕಾಲದಲ್ಲಿ ಪುಸ್ತಕಗಳನ್ನು ಪ್ರಕಟಿಸಲು ಲೇಖಕರು ಪ್ರಕಾಶಕರ ಮೇಲೆ ಅವಲಂಬಿತರಾಗಬೇಕಾಗಿತ್ತು.ಆದರೆ ಇಂದಿನ ಡಿಜಿಟಲ್‌ಯುಗದಲ್ಲಿ ಲೇಖಕರುತಮ್ಮ ಬರಹಗಳನ್ನು ಬ್ಲಾಗ್‌ಗಳು, ಇಪುಸ್ತಕ ವೇದಿಕೆಗಳು ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ನೇರವಾಗಿಓದುಗರಿಗೆತಲುಪಿಸಬಹುದು.ಇದರ ಮೂಲಕ ಸಾಹಿತ್ಯಕ್ಷೇತ್ರದಲ್ಲಿ ಹೊಸ ಬರಹಗಾರರ ಪ್ರವೇಶ ಹೆಚ್ಚಾಗಿದೆ.ವಿಶೇಷವಾಗಿಯುವ ಬರಹಗಾರರು ಮತ್ತು ಹವ್ಯಾಸಿ ಲೇಖಕರುಡಿಜಿಟಲ್ ವೇದಿಕೆಗಳನ್ನು ಬಳಸಿಕೊಂಡು ತಮ್ಮ ಕವನಗಳು, ಕಥೆಗಳು ಮತ್ತು ಲೇಖನಗಳನ್ನು ಪ್ರಕಟಿಸುತ್ತಿದ್ದಾರೆ.ಇದರಿಂದ ಸಾಹಿತ್ಯದ ವ್ಯಾಪ್ತಿ ವಿಸ್ತಾರಗೊಂಡಿರುವುದರಜೊತೆಗೆ ಸಾಹಿತ್ಯದ ವಿವಿಧತೆಯೂ ಹೆಚ್ಚಾಗಿದೆ.
ಡಿಜಿಟಲ್‌ತಂತ್ರಜ್ಞಾನವುಓದುವ ಸಂಸ್ಕೃತಿಯ ಮೇಲೂ ಮಹತ್ವದ ಪ್ರಭಾವ ಬೀರಿದೆ.ಮೊಬೈಲ್ ಫೋನ್, ಟ್ಯಾಬ್ಲೆಟ್ ಮತ್ತು ಇ–ರೀಡರ್ ಸಾಧನಗಳ ಬಳಕೆಯಿಂದ ಓದುಗರುಯಾವುದೇ ಸ್ಥಳದಲ್ಲಿಯೂ ಸಾಹಿತ್ಯವನ್ನುಓದಲು ಸಾಧ್ಯವಾಗುತ್ತಿದೆ.ಡಿಜಿಟಲ್ ವೇದಿಕೆಗಳ ಮೂಲಕ ಸಾವಿರಾರು ಪುಸ್ತಕಗಳು ಮತ್ತು ಲೇಖನಗಳನ್ನು ಒಂದೇ ಸಮಯದಲ್ಲಿ ಪ್ರವೇಶಿಸಲು ಸಾಧ್ಯವಾಗುತ್ತಿದೆ.ಆದರೆ ಈ ಬದಲಾವಣೆ ಕೆಲವು ಸವಾಲುಗಳನ್ನೂ ಉಂಟುಮಾಡಿದೆ.ಸಾಮಾಜಿಕ ಮಾಧ್ಯಮಗಳ ವೇಗದ ಸಂವಹನ ಸಂಸ್ಕೃತಿ ದೀರ್ಘ ಪಠ್ಯಗಳನ್ನು ಓದುವಅಭ್ಯಾಸವನ್ನುಕಡಿಮೆ ಮಾಡುತ್ತಿದೆ ಎಂಬ ಅಭಿಪ್ರಾಯವೂ ವ್ಯಕ್ತವಾಗುತ್ತದೆ.ಆದಾಗ್ಯೂಡಿಜಿಟಲ್ ವೇದಿಕೆಗಳು ಹೊಸ ಓದುಗರನ್ನು ಸಾಹಿತ್ಯದತ್ತಆಕರ್ಷಿಸುತ್ತಿವೆಎಂಬುದು ಸಹ ಸತ್ಯವಾಗಿದೆ.

ಕನ್ನಡ ಸಾಹಿತ್ಯಕ್ಷೇತ್ರದಲ್ಲಿಯೂತಂತ್ರಜ್ಞಾನವು ಮಹತ್ವದ ಪ್ರಭಾವವನ್ನುಉಂಟುಮಾಡಿದೆ.ಇತ್ತೀಚಿನ ವರ್ಷಗಳಲ್ಲಿ ಅನೇಕ ಕನ್ನಡ ಪತ್ರಿಕೆಗಳು ಮತ್ತು ಸಾಹಿತ್ಯಿಕ ವೇದಿಕೆಗಳು ಡಿಜಿಟಲ್‌ರೂಪದಲ್ಲಿ ಲಭ್ಯವಾಗುತ್ತಿವೆ. ಕನ್ನಡ ಬ್ಲಾಗ್‌ಗಳು, ಆನ್‌ಲೈನ್ ಪತ್ರಿಕೆಗಳು ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ಕನ್ನಡ ಸಾಹಿತ್ಯವು ಹೊಸ ಅಭಿವ್ಯಕ್ತಿಗಳನ್ನು ಪಡೆದುಕೊಂಡಿದೆ.ಇವುಗಳ ಮೂಲಕ ಕನ್ನಡ ಸಾಹಿತ್ಯವು ಕೇವಲ ಕರ್ನಾಟಕದೊಳಗೆ ಮಾತ್ರವಲ್ಲದೆ ವಿಶ್ವದಾದ್ಯಂತಇರುವಕನ್ನಡಿಗರನ್ನುತಲುಪುತ್ತಿದೆ. ವಿಶೇಷವಾಗಿ ವಿದೇಶಗಳಲ್ಲಿ ವಾಸಿಸುವ ಕನ್ನಡಿಗರಿಗೆಡಿಜಿಟಲ್ ವೇದಿಕೆಗಳು ಕನ್ನಡ ಸಾಹಿತ್ಯದೊಂದಿಗೆ ಸಂಪರ್ಕ ಸಾಧಿಸಲು ಸಹಾಯ ಮಾಡುತ್ತಿವೆ.

ಈ ಹಿನ್ನೆಲೆಯಲ್ಲಿತಂತ್ರಜ್ಞಾನವು ಸಾಹಿತ್ಯದರೂಪ, ವ್ಯಾಪ್ತಿ ಮತ್ತುಅಭಿವ್ಯಕ್ತಿಯನ್ನು ಮಹತ್ತರವಾಗಿ ಬದಲಿಸಿದೆ.ತಂತ್ರಜ್ಞಾನವು ಸಾಹಿತ್ಯಕ್ಕೆ ಹೊಸ ಮಾಧ್ಯಮಗಳನ್ನು ಒದಗಿಸಿದರೆ, ಸಾಹಿತ್ಯವುತಂತ್ರಜ್ಞಾನಯುಗದಲ್ಲಿಯೂ ಮಾನವೀಯ ಮೌಲ್ಯಗಳು ಮತ್ತು ಸಾಂಸ್ಕೃತಿಕ ಅನುಭವಗಳನ್ನು ಪ್ರತಿಬಿಂಬಿಸುವ ಪ್ರಮುಖ ಮಾಧ್ಯಮವಾಗಿಯೇ ಉಳಿಯುತ್ತದೆ.ಆದ್ದರಿಂದತಂತ್ರಜ್ಞಾನ ಮತ್ತು ಸಾಹಿತ್ಯವನ್ನು ಪರಸ್ಪರ ವಿರೋಧಿ ಕ್ಷೇತ್ರಗಳೆಂದು ನೋಡುವುದಕ್ಕಿಂತ ಅವು ಪರಸ್ಪರ ಪೂರಕವಾಗಿರುವ ಸಾಂಸ್ಕೃತಿಕ ವ್ಯವಸ್ಥೆಗಳೆಂದು ಪರಿಗಣಿಸುವುದು ಸೂಕ್ತವಾಗಿದೆ.ಕನ್ನಡ ಸಾಹಿತ್ಯವೂತನ್ನ ದೀರ್ಘ ಪರಂಪರೆಯನ್ನು ಉಳಿಸಿಕೊಂಡು ಡಿಜಿಟಲ್‌ಯುಗದ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವ ಮೂಲಕ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿದೆ ಮತ್ತು ಭವಿಷ್ಯದಲ್ಲಿಇನ್ನಷ್ಟು ಸಮೃದ್ಧವಾಗುವ ಸಾಧ್ಯತೆಗಳನ್ನು ಹೊಂದಿದೆ.

4. ಡಿಜಿಟಲ್‌ಯುಗದಲ್ಲಿಕನ್ನಡ ಸಾಹಿತ್ಯ

ಡಿಜಿಟಲ್ ತಂತ್ರಜ್ಞಾನಗಳ ಬೆಳವಣಿಗೆಯು ಸಾಹಿತ್ಯದ ಸೃಷ್ಟಿ, ಸಂರಕ್ಷಣೆ ಮತ್ತು ಪ್ರಸಾರದ ವಿಧಾನಗಳಲ್ಲಿ ಮಹತ್ತರ ಬದಲಾವಣೆಗಳನ್ನುಂಟುಮಾಡಿದೆ. ಹಿಂದಿನ ಕಾಲದಲ್ಲಿ ಸಾಹಿತ್ಯವು ಮುಖ್ಯವಾಗಿ ಮುದ್ರಿತ ಪುಸ್ತಕಗಳ ಮೂಲಕ ಓದುಗರನ್ನುತಲುಪುತ್ತಿತ್ತು.ಆದರೆ ಇಂದಿನ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಡಿಜಿಟಲ್‌ಯುಗದಲ್ಲಿಇಂಟರ್ನೆಟ್ ಮತ್ತು ಮಾಹಿತಿ ತಂತ್ರಜ್ಞಾನಗಳ ಸಹಾಯದಿಂದ ಸಾಹಿತ್ಯವು ವಿವಿಧಡಿಜಿಟಲ್ ಮಾಧ್ಯಮಗಳ ಮೂಲಕ ವಿಶ್ವದಾದ್ಯಂತ ಹರಡುತ್ತಿದೆ.

ಕನ್ನಡ ಸಾಹಿತ್ಯವೂ ಈ ಡಿಜಿಟಲ್ ಪರಿವರ್ತನೆಯ ಪರಿಣಾಮವನ್ನುಅನುಭವಿಸುತ್ತಿದೆ.ಇಪುಸ್ತಕಗಳು, ಡಿಜಿಟಲ್ ಗ್ರಂಥಾಲಯಗಳು ಮತ್ತು ಸಾಮಾಜಿಕ ಮಾಧ್ಯಮಗಳು ಕನ್ನಡ ಸಾಹಿತ್ಯದ ಹೊಸ ವೇದಿಕೆಗಳಾಗಿ ರೂಪುಗೊಂಡಿವೆ. ಇವುಗಳ ಮೂಲಕ ಸಾಹಿತ್ಯವು ಕೇವಲ ಭೌಗೋಳಿಕ ಮಿತಿಗಳನ್ನು ಮೀರಿಜಾಗತಿಕ ಮಟ್ಟದಲ್ಲಿಓದುಗರನ್ನುತಲುಪುವ ಸಾಧ್ಯತೆಯನ್ನು ಪಡೆದಿದೆ.

4.1 ಇಪುಸ್ತಕಗಳು (E-books)

ಡಿಜಿಟಲ್‌ತಂತ್ರಜ್ಞಾನವು ಸಾಹಿತ್ಯದ ಪ್ರಕಟಣೆ ಮತ್ತುಓದುವಿಕೆಯಲ್ಲಿ ಮಹತ್ತರ ಬದಲಾವಣೆಯನ್ನುತಂದಿದೆ.ಇಪುಸ್ತಕಗಳು ಅಥವಾಎಲೆಕ್ಟ್ರಾನಿಕ್ ಪುಸ್ತಕಗಳು ಈ ಬದಲಾವಣೆಯ ಪ್ರಮುಖ ಉದಾಹರಣೆಗಳಾಗಿವೆ. ಇಪುಸ್ತಕಗಳು ಡಿಜಿಟಲ್‌ರೂಪದಲ್ಲಿ ಸಂಗ್ರಹಿಸಲಾದ ಪುಸ್ತಕಗಳಾಗಿದ್ದು, ಅವನ್ನುಕಂಪ್ಯೂಟರ್, ಮೊಬೈಲ್ ಫೋನ್, ಟ್ಯಾಬ್ಲೆಟ್ ಮತ್ತು ಇ–ರೀಡರ್ ಸಾಧನಗಳ ಮೂಲಕ ಓದಲು ಸಾಧ್ಯವಾಗುತ್ತದೆ.

ಕನ್ನಡ ಸಾಹಿತ್ಯಕ್ಷೇತ್ರದಲ್ಲಿಯೂ ಇಪುಸ್ತಕಗಳ ಬಳಕೆ ಕ್ರಮೇಣ ಹೆಚ್ಚುತ್ತಿದೆ.ಅನೇಕ ಕನ್ನಡ ಪ್ರಕಾಶನ ಸಂಸ್ಥೆಗಳು ತಮ್ಮ ಪುಸ್ತಕಗಳನ್ನು ಇಪುಸ್ತಕ ರೂಪದಲ್ಲಿ ಪ್ರಕಟಿಸಲು ಆರಂಭಿಸಿವೆ. ಇದರ ಮೂಲಕ ಓದುಗರಿಗೆ ಪುಸ್ತಕಗಳನ್ನು ಸುಲಭವಾಗಿ ಹಾಗೂ ತ್ವರಿತವಾಗಿ ಪಡೆಯಲು ಸಾಧ್ಯವಾಗುತ್ತಿದೆ.ವಿಶೇಷವಾಗಿ ವಿದೇಶಗಳಲ್ಲಿ ವಾಸಿಸುವ ಕನ್ನಡಿಗರಿಗೆ ಇಪುಸ್ತಕಗಳು ಕನ್ನಡ ಸಾಹಿತ್ಯವನ್ನುಓದಲು ಮಹತ್ವದ ಮಾಧ್ಯಮವಾಗಿವೆ.

ಇಪುಸ್ತಕಗಳ ಕೆಲವು ಪ್ರಮುಖ ಪ್ರಯೋಜನಗಳು ಹೀಗಿವೆ:

1. **ಸುಲಭ ಲಭ್ಯತೆ:**ಓದುಗರುಯಾವುದೇ ಸ್ಥಳದಲ್ಲಿದ್ದರೂ ಇಂಟರ್ನೆಟ್ ಮೂಲಕ ಪುಸ್ತಕಗಳನ್ನು ತಕ್ಷಣವೇಡೌನ್‌ಲೋಡ್ ಮಾಡಿಕೊಳ್ಳಬಹುದು.
2. **ವೆಚ್ಚದಕಡಿತ:**ಮುದ್ರಣ ವೆಚ್ಚವಿಲ್ಲದಕಾರಣ ಇಪುಸ್ತಕಗಳು ಕಡಿಮೆದರದಲ್ಲಿ ಲಭ್ಯವಾಗುತ್ತವೆ.
3. **ಸಂಗ್ರಹಣೆಯ ಸುಲಭತೆ:**ಒಂದೇ ಸಾಧನದಲ್ಲಿ ನೂರಾರು ಪುಸ್ತಕಗಳನ್ನು ಸಂಗ್ರಹಿಸಬಹುದು.
4. **ಪರಿಸರ ಸಂರಕ್ಷಣೆ:**ಕಾಗದ ಬಳಕೆ ಕಡಿಮೆಯಾಗುವುದರಿಂದ ಪರಿಸರ ಸಂರಕ್ಷಣೆಗೆ ಸಹಾಯವಾಗುತ್ತದೆ.

ಆದರೆ ಇಪುಸ್ತಕಗಳ ಬಳಕೆಗೆ ಕೆಲವು ಸವಾಲುಗಳೂ ಇವೆ. ಕನ್ನಡ ಭಾಷೆಯಲ್ಲಿಗುಣಮಟ್ಟದಡಿಜಿಟಲ್ ಫಾಂಟ್‌ಗಳು ಮತ್ತು ಲೇಔಟ್ ವ್ಯವಸ್ಥೆಗಳು ಇನ್ನೂ ಸಂಪೂರ್ಣವಾಗಿಅಭಿವೃದ್ಧಿಯಾಗಿಲ್ಲ. ಜೊತೆಗೆ ಕೆಲವು ಓದುಗರು ಮುದ್ರಿತ ಪುಸ್ತಕಗಳ ಓದುವಅನುಭವವನ್ನು ಹೆಚ್ಚು ಇಷ್ಟಪಡುತ್ತಾರೆ.ಇದ್ರಲ್ಲಿಯೂ, ಇಪುಸ್ತಕಗಳ ಬೆಳವಣಿಗೆ ಕನ್ನಡ ಸಾಹಿತ್ಯವನ್ನುಜಾಗತಿಕ ಮಟ್ಟದಲ್ಲಿ ಹರಡಿಸಲು ಪ್ರಮುಖ ಪಾತ್ರವಹಿಸುತ್ತಿದೆ.

4.2 ಡಿಜಿಟಲ್ ಗ್ರಂಥಾಲಯಗಳು (Digital Libraries)

ಡಿಜಿಟಲ್ ಗ್ರಂಥಾಲಯಗಳು ಆಧುನಿಕ ಮಾಹಿತಿತಂತ್ರಜ್ಞಾನಯುಗದ ಮಹತ್ವದ ಸಾಧನೆಗಳಲ್ಲಿ ಒಂದಾಗಿದೆ. ಡಿಜಿಟಲ್‌ಗ್ರಂಥಾಲಯಎಂದರೆ ಪುಸ್ತಕಗಳು, ಲೇಖನಗಳು, ಸಂಶೋಧನಾ ಪತ್ರಿಕೆಗಳು ಮತ್ತುಇತರ ಮಾಹಿತಿಗಳನ್ನು ಡಿಜಿಟಲ್‌ರೂಪದಲ್ಲಿ ಸಂಗ್ರಹಿಸಿ ಇಂಟರ್ನೆಟ್ ಮೂಲಕ ಲಭ್ಯವಾಗುವ ವ್ಯವಸ್ಥೆ.ಕನ್ನಡ ಸಾಹಿತ್ಯ ಸಂರಕ್ಷಣೆ ಮತ್ತು ಪ್ರಸಾರದಲ್ಲಿಡಿಜಿಟಲ್ ಗ್ರಂಥಾಲಯಗಳು ಪ್ರಮುಖ ಪಾತ್ರವಹಿಸುತ್ತಿವೆ. ಅನೇಕ ಅಪರೂಪದಕನ್ನಡ ಕೃತಿಗಳು, ಶಾಸನಗಳು ಮತ್ತು ಹಳೆಯ ಪುಸ್ತಕಗಳು ಡಿಜಿಟಲ್‌ರೂಪದಲ್ಲಿ ಸಂಗ್ರಹಿಸಲಾಗುತ್ತಿವೆ. ಇದರ ಮೂಲಕ ಭವಿಷ್ಯದ ಪೀಳಿಗೆಗಳಿಗೆ ಈ ಸಾಹಿತ್ಯವನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತಿದೆ.

ಡಿಜಿಟಲ್ ಗ್ರಂಥಾಲಯಗಳ ಪ್ರಮುಖ ಲಕ್ಷಣಗಳು ಹೀಗಿವೆ:

1. ಸಾಹಿತ್ಯ ಸಂರಕ್ಷಣೆ: ಹಳೆಯ ಕಾಲದ ಅನೇಕ ಅಪರೂಪದ ಪುಸ್ತಕಗಳು ಕಾಲಕ್ರಮೇಣ ನಾಶವಾಗುವ ಅಪಾಯವನ್ನುಎದುರಿಸುತ್ತವೆ. ಡಿಜಿಟಲ್ ಗ್ರಂಥಾಲಯಗಳ ಮೂಲಕ ಅವುಗಳನ್ನು ಸ್ಕ್ಯಾನ್ ಮಾಡಿಡಿಜಿಟಲ್‌ರೂಪದಲ್ಲಿ ಸಂಗ್ರಹಿಸಬಹುದು.ಇದರಿಂದ ಸಾಹಿತ್ಯವನ್ನು ದೀರ್ಘಕಾಲದವರೆಗೆ ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ.

2. ಜ್ಞಾನ ಪ್ರಸಾರ: ಡಿಜಿಟಲ್ ಗ್ರಂಥಾಲಯಗಳು ಜ್ಞಾನವನ್ನುಎಲ್ಲರಿಗೂ ಸುಲಭವಾಗಿ ಲಭ್ಯವಾಗುವಂತೆ ಮಾಡುತ್ತವೆ. ವಿದ್ಯಾರ್ಥಿಗಳು, ಸಂಶೋಧಕರು ಮತ್ತುಓದುಗರುಇಂಟರ್ನೆಟ್ ಮೂಲಕ ಸಾಹಿತ್ಯವನ್ನು ಸುಲಭವಾಗಿ ಪಡೆಯಬಹುದು.

3. ಸಂಶೋಧನೆಗೆ ಸಹಾಯ: ಡಿಜಿಟಲ್ ಗ್ರಂಥಾಲಯಗಳು ಸಂಶೋಧಕರಿಗೆಅತ್ಯಂತಉಪಯುಕ್ತವಾಗಿವೆ. ವಿವಿಧ ಕೃತಿಗಳು ಮತ್ತು ಲೇಖನಗಳನ್ನು ಒಂದೇ ಸ್ಥಳದಲ್ಲಿ ಹುಡುಕಿಅಧ್ಯಯನ ಮಾಡಲು ಸಾಧ್ಯವಾಗುತ್ತದೆ.

4. ಜಾಗತಿಕ ಪ್ರವೇಶ: ಡಿಜಿಟಲ್ ಗ್ರಂಥಾಲಯಗಳ ಮೂಲಕ ಕನ್ನಡ ಸಾಹಿತ್ಯವುಜಗತ್ತಿನಾದ್ಯಂತಓದುಗರಿಗೆತಲುಪುತ್ತದೆ. ಇದರಿಂದಕನ್ನಡ ಭಾಷೆಯ ಪ್ರಸಾರ ಹೆಚ್ಚಾಗುತ್ತದೆ.

ಆದರೆಡಿಜಿಟಲ್ ಗ್ರಂಥಾಲಯಗಳ ಅಭಿವೃದ್ಧಿಗೆ ಕೆಲವು ಸವಾಲುಗಳೂ ಇವೆ.

- ಹಳೆಯ ಪುಸ್ತಕಗಳನ್ನು ಡಿಜಿಟಲ್‌ರೂಪಕ್ಕೆ ಪರಿವರ್ತಿಸುವತಾಂತ್ರಿಕ ಸಮಸ್ಯೆಗಳು
- ಗುಣಮಟ್ಟದOCRತಂತ್ರಜ್ಞಾನಕೊರತೆ
- ಡಿಜಿಟಲ್ ಹಕ್ಕುಸ್ವಾಮ್ಯದ ಸಮಸ್ಯೆಗಳು

ಈ ಸವಾಲುಗಳನ್ನು ಪರಿಹರಿಸಿದರೆ ಡಿಜಿಟಲ್ ಗ್ರಂಥಾಲಯಗಳು ಕನ್ನಡ ಸಾಹಿತ್ಯದ ಸಂರಕ್ಷಣೆ ಮತ್ತು ಪ್ರಸಾರದಲ್ಲಿಇನ್ನಷ್ಟು ಮಹತ್ವದ ಪಾತ್ರವಹಿಸಬಹುದು.

4.3 ಸಾಮಾಜಿಕ ಮಾಧ್ಯಮಗಳು ಮತ್ತು ಸಾಹಿತ್ಯ

ಸಾಮಾಜಿಕ ಮಾಧ್ಯಮಗಳು ಆಧುನಿಕ ಸಮಾಜದಲ್ಲಿ ಸಂವಹನದ ಪ್ರಮುಖ ಸಾಧನಗಳಾಗಿವೆ. ಫೇಸ್‌ಬುಕ್, ಟ್ವಿಟ್ಟರ್, ಯೂಟ್ಯೂಬ್, ಇನ್‌ಸ್ಟಾಗ್ರಾಮ್ ಮತ್ತು ಬ್ಲಾಗ್‌ಗಳಂತಹ ವೇದಿಕೆಗಳು ಸಾಹಿತ್ಯದ ಪ್ರಸಾರದಲ್ಲಿ ಮಹತ್ವದ ಪಾತ್ರವಹಿಸುತ್ತಿವೆ.ಕನ್ನಡ ಸಾಹಿತ್ಯಕ್ಷೇತ್ರದಲ್ಲಿಯೂ ಸಾಮಾಜಿಕ ಮಾಧ್ಯಮಗಳು ಹೊಸ ಬರಹಗಾರರಿಗೆ ವೇದಿಕೆಯನ್ನು ಒದಗಿಸಿವೆ. ಹಿಂದಿನ ಕಾಲದಲ್ಲಿ ಲೇಖಕರುತಮ್ಮ ಬರಹಗಳನ್ನು ಪ್ರಕಟಿಸಲು ಪ್ರಕಾಶಕರ ಮೇಲೆ ಅವಲಂಬಿತರಾಗಬೇಕಾಗಿತ್ತು. ಆದರೆ ಈಗ ಅವರುತಮ್ಮ ಕವನಗಳು, ಕಥೆಗಳು ಮತ್ತು ಲೇಖನಗಳನ್ನು ನೇರವಾಗಿ ಸಾಮಾಜಿಕ ಮಾಧ್ಯಮಗಳ ಮೂಲಕ ಪ್ರಕಟಿಸಬಹುದು.

ಸಾಮಾಜಿಕ ಮಾಧ್ಯಮಗಳ ಕೆಲವು ಪ್ರಮುಖ ಪರಿಣಾಮಗಳು ಹೀಗಿವೆ:

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

1. **ಹೊಸ ಬರಹಗಾರರಉದಯ:** ಅನೇಕ ಯುವ ಬರಹಗಾರರು ಸಾಮಾಜಿಕ ಮಾಧ್ಯಮಗಳ ಮೂಲಕ ಸಾಹಿತ್ಯಕ್ಷೇತ್ರಕ್ಕೆ ಪ್ರವೇಶಿಸುತ್ತಿದ್ದಾರೆ.
2. **ಓದುಗರೊಂದಿಗೆ ನೇರ ಸಂಪರ್ಕ:** ಲೇಖಕರುತಮ್ಮಓದುಗರೊಂದಿಗೆ ನೇರವಾಗಿ ಸಂವಹನ ನಡೆಸಬಹುದು.
3. **ಸಾಹಿತ್ಯದ ವೇಗದ ಪ್ರಸಾರ:** ಸಾಮಾಜಿಕ ಮಾಧ್ಯಮಗಳ ಮೂಲಕ ಸಾಹಿತ್ಯವುತಕ್ಷಣವೇ ಸಾವಿರಾರುಓದುಗರಿಗೆತಲುಪುತ್ತದೆ.
4. **ಸಾಹಿತ್ಯ ಚರ್ಚೆಗಳ ವಿಸ್ತರಣೆ**: ಸಾಮಾಜಿಕ ಮಾಧ್ಯಮಗಳಲ್ಲಿ ಸಾಹಿತ್ಯ ಚರ್ಚೆಗಳು ಮತ್ತು ವಿಮರ್ಶೆಗಳು ಹೆಚ್ಚು ನಡೆಯುತ್ತಿವೆ.

ಆದರೆ ಸಾಮಾಜಿಕ ಮಾಧ್ಯಮಗಳ ಪರಿಣಾಮವಾಗಿ ಕೆಲವು ಸಮಸ್ಯೆಗಳೂ ಎದುರಾಗುತ್ತಿವೆ.

- ಸಾಹಿತ್ಯದಗುಣಮಟ್ಟದ ಪ್ರಶ್ನೆ
- ತಕ್ಷಣದ ಪ್ರತಿಕ್ರಿಯೆಗಳ ಪರಿಣಾಮ
- ಆಳವಾದ ಓದುವಅಭ್ಯಾಸದಲ್ಲಿಕಡಿತ

ಆದರೂ ಸಾಮಾಜಿಕ ಮಾಧ್ಯಮಗಳು ಕನ್ನಡ ಸಾಹಿತ್ಯವನ್ನು ಹೊಸ ಪೀಳಿಗೆಗೆ ತಲುಪಿಸುವಲ್ಲಿ ಮಹತ್ವದ ಪಾತ್ರವಹಿಸುತ್ತಿವೆ

5. ತಂತ್ರಜ್ಞಾನ ಮತ್ತುಕನ್ನಡ ಭಾಷೆಯ ಸವಾಲುಗಳು

ಮಾಹಿತಿತಂತ್ರಜ್ಞಾನವುಕನ್ನಡ ಸಾಹಿತ್ಯ ಮತ್ತು ಭಾಷೆಗೆ ಹೊಸ ಅವಕಾಶಗಳನ್ನು ಒದಗಿಸಿದರೂ, ಅದರಜೊತೆಗೆ ಹಲವಾರು ಸವಾಲುಗಳನ್ನೂ ತಂದಿದೆ.ಡಿಜಿಟಲ್‌ಯುಗದಲ್ಲಿ ಭಾಷೆಯ ಬೆಳವಣಿಗೆ ಕೇವಲ ಸಾಹಿತ್ಯಿಕ ಸೃಷ್ಟಿಗೆ ಮಾತ್ರ ಸೀಮಿತವಾಗಿಲ್ಲ; ಅದುತಾಂತ್ರಿಕ ಮೂಲಸೌಕರ್ಯ, ಭಾಷಾ ಸಂಪನ್ಮೂಲಗಳು, ಡಿಜಿಟಲ್ ವೇದಿಕೆಗಳು ಮತ್ತು ಬಳಕೆದಾರರ ಓದು ಸಂಸ್ಕೃತಿಯೊಂದಿಗೆ ನೇರವಾಗಿ ಸಂಬಂಧ ಹೊಂದಿದೆ.

ಕನ್ನಡ ಭಾಷೆ ಮತ್ತು ಸಾಹಿತ್ಯವುಡಿಜಿಟಲ್ ವೇದಿಕೆಗಳಲ್ಲಿ ಬೆಳೆಯಲು ಪ್ರಯತ್ನಿಸುತ್ತಿರುವಾಗ ಕೆಲವು ಪ್ರಮುಖ ಅಡಚಣೆಗಳು ಎದುರಾಗುತ್ತಿವೆ. ಇವುಗಳನ್ನು ಸಮಗ್ರವಾಗಿ ಪರಿಶೀಲಿಸುವುದುಕನ್ನಡ ಭಾಷೆಯ ಭವಿಷ್ಯವನ್ನು ಅರ್ಥಮಾಡಿಕೊಳ್ಳಲು ಅಗತ್ಯವಾಗಿದೆ.

5.1 ತಾಂತ್ರಿಕ ಸಂಪನ್ಮೂಲಗಳ ಕೊರತೆ

ಡಿಜಿಟಲ್‌ತಂತ್ರಜ್ಞಾನದಲ್ಲಿ ಒಂದು ಭಾಷೆಯ ಬೆಳವಣಿಗೆಗೆ ಅತ್ಯಂತ ಅಗತ್ಯವಾದ ಅಂಶವೆಂದರೆ ತಾಂತ್ರಿಕ ಸಂಪನ್ಮೂಲಗಳು. ಇವುಗಳಲ್ಲಿ ಫಾಂಟ್‌ಗಳು, ಕೀಲಿಮಣೆ ವಿನ್ಯಾಸಗಳು, ಭಾಷಾ ಕಾರ್ಪಸ್‌ಗಳು, ಅನುವಾದ ತಂತ್ರಾಂಶಗಳು, ಧ್ವನಿ ಸಂಸ್ಕರಣೆ ವ್ಯವಸ್ಥೆಗಳು ಮತ್ತು ಯಂತ್ರಾನುವಾದ ವ್ಯವಸ್ಥೆಗಳು ಸೇರಿವೆ.ಕನ್ನಡ ಭಾಷೆಗೆ ಇವುಗಳ ಅಭಿವೃದ್ಧಿಇನ್ನೂ ಸಂಪೂರ್ಣವಾಗಿಆಗಿಲ್ಲ. ಇಂಗ್ಲಿಷ್ ಭಾಷೆಗೆ ಲಭ್ಯವಿರುವಷ್ಟು ಪ್ರಮಾಣದಲ್ಲಿ ಡಿಜಿಟಲ್ ಸಂಪನ್ಮೂಲಗಳು ಕನ್ನಡಕ್ಕೆ ಲಭ್ಯವಿಲ್ಲ. ಉದಾಹರಣೆಗೆ, ಸಹಜ ಭಾಷಾ ಸಂಸ್ಕರಣೆ (Natural Language Processing) ಕ್ಷೇತ್ರದಲ್ಲಿಕನ್ನಡದ ಡೇಟಾಸೆಟ್‌ಗಳು ಮತ್ತು ಪಠ್ಯಕಣಜಗಳ ಕೊರತೆ ಇದೆ. ಇದರಿಂದಕೃತಕ ಬುದ್ಧಿಮತ್ತೆಆಧಾರಿತ ಭಾಷಾ ತಂತ್ರಜ್ಞಾನಗಳ ಅಭಿವೃದ್ಧಿ ನಿಧಾನಗತಿಯಲ್ಲಿ ನಡೆಯುತ್ತಿದೆ.ಮತ್ತೊಂದು ಪ್ರಮುಖ ಸಮಸ್ಯೆಯೆಂದರೆಕನ್ನಡ ಭಾಷೆಗೆ ಸಂಬಂಧಿಸಿದ ಅನೇಕ ತಂತ್ರಜ್ಞಾನಗಳು ಸಂಶೋಧನಾ ಹಂತದಲ್ಲೇ ಉಳಿದಿವೆ. ವಿಶ್ವದ ಪ್ರಮುಖ ಭಾಷೆಗಳಾದ ಇಂಗ್ಲಿಷ್, ಚೀನಿ ಮತ್ತು ಸ್ಪಾನಿಷ್ ಭಾಷೆಗಳೊಂದಿಗೆ ಹೋಲಿಸಿದರೆ ಕನ್ನಡದಡಿಜಿಟಲ್‌ಅಭಿವೃದ್ಧಿ ನಿಧಾನವಾಗಿದೆ.ಈ ಸಮಸ್ಯೆಯನ್ನು ಪರಿಹರಿಸಲು ಸರಕಾರ, ಶಿಕ್ಷಣ ಸಂಸ್ಥೆಗಳು ಮತ್ತುತಂತ್ರಜ್ಞರುಒಟ್ಟಾಗಿಕಾರ್ಯನಿರ್ವಹಿಸುವುದುಅಗತ್ಯವಾಗಿದೆ.

5.2 ಡಿಜಿಟಲ್ ಪ್ರಕಟಣೆಯಲ್ಲಿಗುಣಮಟ್ಟದ ಸಮಸ್ಯೆಗಳು

ಡಿಜಿಟಲ್ ಮಾಧ್ಯಮಗಳ ಬೆಳವಣಿಗೆಯಿಂದ ಸಾಹಿತ್ಯ ಪ್ರಕಟಣೆಯ ಪ್ರಕ್ರಿಯೆ ಸುಲಭವಾಗಿದೆ.ಯಾವುದೇ ವ್ಯಕ್ತಿತನ್ನ ಬರಹಗಳನ್ನು ಇಂಟರ್ನೆಟ್ ಮೂಲಕ ತಕ್ಷಣವೇ ಪ್ರಕಟಿಸಬಹುದು.ಇದು ಸಾಹಿತ್ಯದ ಪ್ರಜಾಪ್ರಭುತ್ವೀಕರಣಕ್ಕೆ ಸಹಾಯ ಮಾಡಿದರೂ, ಅದರೊಂದಿಗೆ ಗುಣಮಟ್ಟದ ಪ್ರಶ್ನೆಯೂಎದುರಾಗಿದೆ.ಪಾರಂಪರಿಕ ಪ್ರಕಟಣಾ ವ್ಯವಸ್ಥೆಯಲ್ಲಿ ಪುಸ್ತಕಗಳು ಸಂಪಾದಕರು ಮತ್ತು ವಿಮರ್ಶಕರ ಪರಿಶೀಲನೆಯ ನಂತರ ಪ್ರಕಟವಾಗುತ್ತವೆ. ಆದರೆಡಿಜಿಟಲ್ ಪ್ರಕಟಣೆಯಲ್ಲಿ ಈ ಪ್ರಕ್ರಿಯೆಕಡಿಮೆಯಾಗುತ್ತದೆ. ಪರಿಣಾಮವಾಗಿ ಕೆಲವು ಸಂದರ್ಭಗಳಲ್ಲಿ ಸಾಹಿತ್ಯದಗುಣಮಟ್ಟ ಕುಸಿಯುವ ಸಾಧ್ಯತೆ ಇದೆ.ಡಿಜಿಟಲ್ ಮಾಧ್ಯಮಗಳಲ್ಲಿ ಪ್ರಕಟವಾಗುವ ಬರಹಗಳಲ್ಲಿ ವ್ಯಾಕರಣ ದೋಷಗಳು, ಅಸಂದಿಗ್ಧ ಭಾಷೆ ಮತ್ತುತಾಂತ್ರಿಕ ತಪ್ಪುಗಳು ಕಾಣಿಸಿಕೊಳ್ಳುತ್ತವೆ. ಜೊತೆಗೆ, ಸಾಹಿತ್ಯಿಕ ಮೌಲ್ಯಗಳಿಗಿಂತ ವೇಗದ ಪ್ರಕಟಣೆಗೆ ಹೆಚ್ಚು ಮಹತ್ವ ನೀಡಲಾಗುತ್ತಿದೆ.ಇದರಿಂದಕನ್ನಡ ಸಾಹಿತ್ಯದಗುಣಮಟ್ಟವನ್ನುಕಾಪಾಡಲು ಹೊಸ ಸಂಪಾದಕೀಯ ವ್ಯವಸ್ಥೆಗಳು ಮತ್ತುಡಿಜಿಟಲ್ ವಿಮರ್ಶಾ ವಿಧಾನಗಳನ್ನು ಅಭಿವೃದ್ಧಿಪಡಿಸುವಅಗತ್ಯವಿದೆ.

5.3 ಓದುವಅಭ್ಯಾಸದಲ್ಲಿ ಬದಲಾವಣೆ

ಡಿಜಿಟಲ್‌ತಂತ್ರಜ್ಞಾನವುಓದುವ ಸಂಸ್ಕೃತಿಯ ಮೇಲೂ ಮಹತ್ತರ ಪರಿಣಾಮ ಬೀರಿದೆ.ಹಿಂದಿನ ಕಾಲದಲ್ಲಿಓದುಗರು ಪುಸ್ತಕಗಳನ್ನು ಕ್ರಮಬದ್ಧವಾಗಿಓದುತ್ತಿದ್ದರು. ಆದರೆ ಇಂದಿನ ಡಿಜಿಟಲ್‌ಯುಗದಲ್ಲಿಓದುವಿಕೆ ಹೆಚ್ಚು ವೇಗದ ಮತ್ತುತುಂಡುತುಂಡಾದ ಸ್ವರೂಪವನ್ನು ಪಡೆದುಕೊಂಡಿದೆ.ಸಾಮಾಜಿಕ ಮಾಧ್ಯಮಗಳು ಮತ್ತುಇಂಟರ್ನೆಟ್ ಬಳಕೆಯ ಹೆಚ್ಚಳದಿಂದ ಜನರು ದೀರ್ಘ ಲೇಖನಗಳು ಅಥವಾ ಪುಸ್ತಕಗಳನ್ನು ಓದುವ ಬದಲುಚಿಕ್ಕ ಸಂದೇಶಗಳು ಮತ್ತು ಸಂಕ್ಷಿಪ್ತ ವಿಷಯಗಳನ್ನು ಓದುವಅಭ್ಯಾಸವನ್ನು ಹೊಂದಿದ್ದಾರೆ.ಈ ಬದಲಾವಣೆ ಸಾಹಿತ್ಯದ ಸ್ವರೂಪಕ್ಕೂ ಪರಿಣಾಮ ಬೀರುತ್ತಿದೆ. ಕೆಲವು ಸಂದರ್ಭಗಳಲ್ಲಿ ಸಾಹಿತ್ಯವುಕೂಡಚಿಕ್ಕ ರೂಪಗಳಲ್ಲಿ ಪ್ರಕಟವಾಗುತ್ತಿದೆ.ಇದರಿಂದ ಆಳವಾದ ಓದುವಿಕೆ ಮತ್ತು ಸಾಹಿತ್ಯಿಕಅನುಭವಕಡಿಮೆಯಾಗುವ ಸಾಧ್ಯತೆ ಇದೆ.ಆದರೆ ಈ ಬದಲಾವಣೆ ಸಂಪೂರ್ಣವಾಗಿ ನಕಾರಾತ್ಮಕವಲ್ಲ. ಡಿಜಿಟಲ್ ವೇದಿಕೆಗಳು ಹೊಸ ಓದುಗರನ್ನು ಸಾಹಿತ್ಯದತ್ತಆಕರ್ಷಿಸುತ್ತಿವೆ. ವಿಶೇಷವಾಗಿಯುವ ಪೀಳಿಗೆಯವರು ಸಾಮಾಜಿಕ ಮಾಧ್ಯಮಗಳ ಮೂಲಕ ಕನ್ನಡ ಸಾಹಿತ್ಯದೊಂದಿಗೆ ಪರಿಚಿತರಾಗುತ್ತಿದ್ದಾರೆ.

5.4 ಇಂಗ್ಲಿಷ್ ಭಾಷೆಯ ಪ್ರಾಬಲ್ಯ

ಡಿಜಿಟಲ್‌ತಂತ್ರಜ್ಞಾನಕ್ಷೇತ್ರದಲ್ಲಿಇಂಗ್ಲಿಷ್ ಭಾಷೆಯ ಪ್ರಾಬಲ್ಯ ಇನ್ನೊಂದು ಪ್ರಮುಖ ಸವಾಲಾಗಿದೆ.ಇಂಟರ್ನೆಟ್‌ನಲ್ಲಿ ಲಭ್ಯವಿರುವ ಹೆಚ್ಚಿನ ವಿಷಯಗಳು ಇಂಗ್ಲಿಷ್ ಭಾಷೆಯಲ್ಲಿವೆ.ಇದರ ಪರಿಣಾಮವಾಗಿ ಅನೇಕ ಬಳಕೆದಾರರು ಡಿಜಿಟಲ್ ಸಂವಹನದಲ್ಲಿಇಂಗ್ಲಿಷ್ ಭಾಷೆಯನ್ನು ಹೆಚ್ಚು ಬಳಸುತ್ತಾರೆ.ಇದರಿಂದಕನ್ನಡ ಭಾಷೆಯ ಬಳಕೆ ಕಡಿಮೆಯಾಗುವ ಸಾಧ್ಯತೆ ಇದೆ.ಮತ್ತೊಂದು ಪ್ರಮುಖಅಂಶವೆಂದರೆತಂತ್ರಜ್ಞಾನಕ್ಷೇತ್ರದಲ್ಲಿ ಬಳಸುವ ಪಾರಿಭಾಷಿಕ ಪದಗಳ ಬಹುಪಾಲು ಇಂಗ್ಲಿಷ್ ಮೂಲದವುಗಳಾಗಿವೆ. ಅವುಗಳನ್ನು ಕನ್ನಡಕ್ಕೆ ಸರಿಯಾಗಿ ಅನುವಾದಿಸುವುದು ಕೆಲವೊಮ್ಮೆ ಕಷ್ಟವಾಗುತ್ತದೆ.ಆದರೂ ಇತ್ತೀಚಿನ ವರ್ಷಗಳಲ್ಲಿ ಕನ್ನಡ ಯುನಿಕೋಡ್, ಕನ್ನಡ ಕೀಲಿಮಣೆಗಳು ಮತ್ತು ವಿವಿಧ ಡಿಜಿಟಲ್ ತಂತ್ರಾಂಶಗಳ ಅಭಿವೃದ್ಧಿಯಿಂದ ಕನ್ನಡ ಭಾಷೆಯ ಬಳಕೆ ಹೆಚ್ಚುತ್ತಿದೆ.ಸರಿಯಾದ ನೀತಿಗಳು ಮತ್ತು ಪ್ರಯತ್ನಗಳ ಮೂಲಕ ಕನ್ನಡ ಭಾಷೆಯ ಪ್ರಾಬಲ್ಯವನ್ನುಡಿಜಿಟಲ್ ವೇದಿಕೆಗಳಲ್ಲಿ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಹೆಚ್ಚಿಸಬಹುದು.ಒಟ್ಟಾರೆ ನೋಡಿದರೆ ತಂತ್ರಜ್ಞಾನವು ಕನ್ನಡ ಸಾಹಿತ್ಯಕ್ಕೆ ಹೊಸ ಅವಕಾಶಗಳನ್ನು ನೀಡಿದರೂ, ಅದರಜೊತೆಗೆ ಹಲವು ಸವಾಲುಗಳನ್ನೂ ತಂದಿದೆ.ತಾಂತ್ರಿಕ ಸಂಪನ್ಮೂಲಗಳ ಕೊರತೆ, ಡಿಜಿಟಲ್ ಪ್ರಕಟಣೆಯ ಗುಣಮಟ್ಟದ ಸಮಸ್ಯೆಗಳು, ಓದುವ ಸಂಸ್ಕೃತಿಯಲ್ಲಿ ಬದಲಾವಣೆ ಮತ್ತುಇಂಗ್ಲಿಷ್ ಭಾಷೆಯ ಪ್ರಾಬಲ್ಯ ಇವುಗಳಲ್ಲಿ ಪ್ರಮುಖವಾಗಿವೆ.ಆದರೆ ಈ ಸವಾಲುಗಳನ್ನು ಸರಿಯಾದ ಯೋಜನೆ ಮತ್ತು ಸಂಶೋಧನೆಯ ಮೂಲಕ ಎದುರಿಸಬಹುದು. ಕನ್ನಡ ಭಾಷೆಗೆ ಸಂಬಂಧಿಸಿದ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವುದು, ಡಿಜಿಟಲ್ ಗ್ರಂಥಾಲಯಗಳನ್ನು ವಿಸ್ತರಿಸುವುದು ಮತ್ತುಕನ್ನಡದಲ್ಲಿ ಹೆಚ್ಚಿನಡಿಜಿಟಲ್ ವಿಷಯಗಳನ್ನು ಸೃಷ್ಟಿಸುವುದು ಈ ದಿಸೆಯಲ್ಲಿ ಪ್ರಮುಖ ಹೆಜ್ಜೆಗಳಾಗಬಹುದು.

6. ಭವಿಷ್ಯದ ಸಾಧ್ಯತೆಗಳು: ಡಿಜಿಟಲ್ ಹ್ಯೂಮ್ಯಾನಿಟೀಸ್ ಮತ್ತುಕೃತಕ ಬುದ್ಧಿಮತ್ತೆಯುಗದಲ್ಲಿಕನ್ನಡ ಸಾಹಿತ್ಯ

ಡಿಜಿಟಲ್ ತಂತ್ರಜ್ಞಾನಗಳ ವೇಗದ ಅಭಿವೃದ್ಧಿಯೊಂದಿಗೆ ಭಾಷೆಗಳು ಮತ್ತು ಸಾಹಿತ್ಯವು ಹೊಸ ಅವಕಾಶಗಳನ್ನು ಎದುರಿಸುತ್ತಿವೆ. ಕನ್ನಡ ಭಾಷೆ ಮತ್ತು ಸಾಹಿತ್ಯವೂ ಈ ಪರಿವರ್ತನೆಯ ಭಾಗವಾಗಿದ್ದು, ಭವಿಷ್ಯದಲ್ಲಿ ತಂತ್ರಜ್ಞಾನಕ್ಷೇತ್ರದಲ್ಲಿ ಮಹತ್ತರ ಸಾಧ್ಯತೆಗಳನ್ನು ಹೊಂದಿದೆ. ವಿಶೇಷವಾಗಿ ಡಿಜಿಟಲ್ ಹ್ಯೂಮ್ಯಾನಿಟೀಸ್ (Digital Humanities), ಕೃತಕ ಬುದ್ಧಿಮತ್ತೆ (Artificial Intelligence) ಮತ್ತು ಸಹಜ ಭಾಷಾ ಸಂಸ್ಕರಣೆ (Natural Language Processing – NLP) ಕ್ಷೇತ್ರಗಳಲ್ಲಿ ಕನ್ನಡ ಭಾಷೆಯಅಭಿವೃದ್ಧಿ ಅತ್ಯಂತ ಮಹತ್ವದ್ದಾಗಿದೆ.ಡಿಜಿಟಲ್ ಹ್ಯೂಮ್ಯಾನಿಟೀಸ್ ಎಂಬುದು ಸಾಹಿತ್ಯ, ಸಂಸ್ಕೃತಿ ಮತ್ತು ಮಾನವಶಾಸ್ತ್ರ ಅಧ್ಯಯನಗಳನ್ನು ಡಿಜಿಟಲ್ ತಂತ್ರಜ್ಞಾನಗಳೊಂದಿಗೆ ಸಂಯೋಜಿಸುವ ಅಧ್ಯಯನ ಕ್ಷೇತ್ರವಾಗಿದೆ.ಈ ಕ್ಷೇತ್ರದ ಮೂಲಕ ಸಾಹಿತ್ಯವನ್ನು ಹೊಸ ದೃಷ್ಟಿಕೋನಗಳಿಂದ ವಿಶ್ಲೇಷಿಸಲು ಸಾಧ್ಯವಾಗುತ್ತದೆ.ಉದಾಹರಣೆಗೆ, ದೊಡ್ಡ ಪ್ರಮಾಣದ ಸಾಹಿತ್ಯ ಪಠ್ಯಗಳನ್ನು ಡಿಜಿಟಲ್‌ರೂಪದಲ್ಲಿ ಸಂಗ್ರಹಿಸಿ ಅವುಗಳ ಭಾಷಾ ವಿನ್ಯಾಸ, ಶೈಲಿ ಮತ್ತು ವಿಷಯವನ್ನುಗಣಕದ ಸಹಾಯದಿಂದ ವಿಶ್ಲೇಷಿಸಬಹುದು.

6.1ಕೃತಕ ಬುದ್ಧಿಮತ್ತೆ ಮತ್ತುಕನ್ನಡ ಭಾಷಾತಂತ್ರಜ್ಞಾನ

ಕೃತಕ ಬುದ್ಧಿಮತ್ತೆತಂತ್ರಜ್ಞಾನವು ಭಾಷಾ ಸಂಸ್ಕರಣೆಯಲ್ಲಿ ಮಹತ್ತರ ಬದಲಾವಣೆಗಳನ್ನು ತಂದಿದೆ.ಇಂದಿನ ಕಾಲದಲ್ಲಿ ಅನೇಕ ಭಾಷೆಗಳಿಗೆ ಧ್ವನಿ ಗುರುತಿಸುವಿಕೆ, ಯಂತ್ರಾನುವಾದ ಮತ್ತು ಪಠ್ಯ ವಿಶ್ಲೇಷಣೆಯಂತಹ ತಂತ್ರಜ್ಞಾನಗಳು ಲಭ್ಯವಿವೆ.
ಕನ್ನಡ ಭಾಷೆಯಿಗೂ ಈ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವುದುಅತ್ಯಂತಅಗತ್ಯವಾಗಿದೆ. ಉದಾಹರಣೆಗೆ:

- ಕನ್ನಡಧ್ವನಿ ಗುರುತಿಸುವಿಕೆ ವ್ಯವಸ್ಥೆಗಳು
- ಕನ್ನಡ ಪಠ್ಯದಿಂದಧ್ವನಿಗೆ ಪರಿವರ್ತನೆ (Text to Speech)
- ಧ್ವನಿಯಿಂದ ಪಠ್ಯಕ್ಕೆ ಪರಿವರ್ತನೆ (Speech to Text)
- ಯಂತ್ರಾನುವಾದ ವ್ಯವಸ್ಥೆಗಳು

ಈ ತಂತ್ರಜ್ಞಾನಗಳ ಅಭಿವೃದ್ಧಿಯಿಂದಕನ್ನಡ ಭಾಷೆಯ ಬಳಕೆ ಡಿಜಿಟಲ್ ವೇದಿಕೆಗಳಲ್ಲಿ ಇನ್ನಷ್ಟು ವಿಸ್ತಾರಗೊಳ್ಳಬಹುದು.

6.2 ಸಹಜ ಭಾಷಾ ಸಂಸ್ಕರಣೆ ಮತ್ತು ಪಠ್ಯಕಣಜಗಳ ಅಭಿವೃದ್ಧಿ

ಸಹಜ ಭಾಷಾ ಸಂಸ್ಕರಣೆ (NLP) ಕ್ಷೇತ್ರದಲ್ಲಿ ಕನ್ನಡ ಭಾಷೆಯ ಅಭಿವೃದ್ಧಿಗೆದೊಡ್ಡ ಪ್ರಮಾಣದ ಪಠ್ಯಕಣಜಗಳ (Copus) ಅಗತ್ಯವಿದೆ.ಪಠ್ಯ ಕಣಜ ಎಂದರೆ ಒಂದು ಭಾಷೆಯ ವಿವಿಧ ಪಠ್ಯಗಳನ್ನು ಸಂಗ್ರಹಿಸಿದ ಡಿಜಿಟಲ್ ಡೇಟಾಬೇಸ್.ಈ ಪಠ್ಯ ಕಣಜಗಳ ಮೂಲಕ ಭಾಷೆಯ ವ್ಯಾಕರಣ, ಪದಪ್ರಯೋಗ ಮತ್ತು ಶೈಲಿಯನ್ನುಗಣಕದ ಸಹಾಯದಿಂದ ವಿಶ್ಲೇಷಿಸಬಹುದು. ಇದರಿಂದ ಯಂತ್ರಾನುವಾದ, ಪದಪರೀಕ್ಷೆ(spell checker) ಮತ್ತು ವ್ಯಾಕರಣ ಪರೀಕ್ಷೆ (grammar checker) ಮುಂತಾದ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತದೆ.

6.3ಜಾಗತಿಕ ವೇದಿಕೆಗಳಲ್ಲಿ ಕನ್ನಡ ಸಾಹಿತ್ಯ

ಡಿಜಿಟಲ್ ತಂತ್ರಜ್ಞಾನವು ಕನ್ನಡ ಸಾಹಿತ್ಯವನ್ನು ಜಾಗತಿಕ ಮಟ್ಟದಲ್ಲಿ ಪ್ರಸಾರ ಮಾಡಲು ಮಹತ್ವದ ಅವಕಾಶವನ್ನು ಒದಗಿಸಿದೆ. ಇಂಟರ್ನೆಟ್ ಮೂಲಕ ಕನ್ನಡ ಸಾಹಿತ್ಯವು ವಿಶ್ವದಾದ್ಯಂತಓದುಗರನ್ನು ತಲುಪಬಹುದು. ವಿದೇಶಗಳಲ್ಲಿ ವಾಸಿಸುವ ಕನ್ನಡಿಗರು ಮತ್ತುಇತರ ಭಾಷೆಯ ಓದುಗರು ಕನ್ನಡ ಸಾಹಿತ್ಯವನ್ನು ಸುಲಭವಾಗಿ ಓದಲು ಸಾಧ್ಯವಾಗುತ್ತದೆ.ಜೊತೆಗೆ ಯಂತ್ರಾನುವಾದ ತಂತ್ರಜ್ಞಾನಗಳ ಮೂಲಕ ಕನ್ನಡ ಸಾಹಿತ್ಯವನ್ನುಇತರ ಭಾಷೆಗಳಿಗೆ ಅನುವಾದಿಸುವುದು ಸಹ ಸುಲಭವಾಗಬಹುದು.

ಉಪಸಂಹಾರ (Conclusion)

ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳ ವೇಗದ ಬೆಳವಣಿಗೆಯೊಂದಿಗೆ ಮಾನವ ಸಮಾಜದಜ್ಞಾನ ವ್ಯವಸ್ಥೆಗಳು, ಸಂವಹನ ವಿಧಾನಗಳು ಮತ್ತು ಸಾಂಸ್ಕೃತಿಕ ಅಭಿವ್ಯಕ್ತಿಗಳು ಹೊಸ ರೂಪಗಳನ್ನು ಪಡೆದುಕೊಂಡಿವೆ. ಸಾಹಿತ್ಯವೂ ಈ ಪರಿವರ್ತನೆಯಿಂದ ಹೊರತಾಗಿಲ್ಲ. ಪ್ರಾಚೀನ ಕಾಲದಲ್ಲಿ ಮೌಖಿಕ ಪರಂಪರೆಯ ಮೂಲಕ ಹರಡುತ್ತಿದ್ದ ಸಾಹಿತ್ಯವು ನಂತರ ಮುದ್ರಣತಂತ್ರಜ್ಞಾನದ ಮೂಲಕ ವ್ಯಾಪಕವಾಗಿ ಪ್ರಸಾರಗೊಂಡಿತು. ಇಂದಿನ ಡಿಜಿಟಲ್ ಯುಗದಲ್ಲಿ ಕಂಪ್ಯೂಟರ್, ಇಂಟರ್ನೆಟ್ ಮತ್ತು ಮೊಬೈಲ್ ತಂತ್ರಜ್ಞಾನಗಳ ಸಹಾಯದಿಂದ ಸಾಹಿತ್ಯವುಜಾಗತಿಕ ಮಟ್ಟದಲ್ಲಿ ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತಿದೆ.

ಕನ್ನಡ ಸಾಹಿತ್ಯವೂ ಈ ಡಿಜಿಟಲ್ ಪರಿವರ್ತನೆಯ ಪರಿಣಾಮವನ್ನು ಸ್ಪಷ್ಟವಾಗಿ ಅನುಭವಿಸುತ್ತಿದೆ.ಇಪುಸ್ತಕಗಳು, ಡಿಜಿಟಲ್ ಗ್ರಂಥಾಲಯಗಳು, ಆನ್‌ಲೈನ್ ಪತ್ರಿಕೆಗಳು, ಬ್ಲಾಗ್‌ಗಳು ಮತ್ತು ಸಾಮಾಜಿಕ ಮಾಧ್ಯಮಗಳು ಕನ್ನಡ ಸಾಹಿತ್ಯದ ಹೊಸ ಅಭಿವ್ಯಕ್ತಿಗಳಿಗೆ ವೇದಿಕೆಯನ್ನು ಒದಗಿಸುತ್ತಿವೆ. ಇದರ ಮೂಲಕ ಕನ್ನಡ ಸಾಹಿತ್ಯವು ಭೌಗೋಳಿಕ ಮಿತಿಗಳನ್ನು ಮೀರಿಜಾಗತಿಕ ಓದುಗರನ್ನು ತಲುಪುವ ಸಾಧ್ಯತೆಯನ್ನು ಪಡೆದಿದೆ. ವಿಶೇಷವಾಗಿ ವಿದೇಶಗಳಲ್ಲಿ ವಾಸಿಸುವ ಕನ್ನಡಿಗರಿಗೆ ಡಿಜಿಟಲ್ ವೇದಿಕೆಗಳು ಕನ್ನಡ ಸಾಹಿತ್ಯದೊಂದಿಗೆ ಸಂಪರ್ಕ ಸಾಧಿಸಲು ಮಹತ್ವದ ಸಾಧನಗಳಾಗಿವೆ.

ಆದಾಗ್ಯೂ ತಂತ್ರಜ್ಞಾನವು ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಕೆಲವು ಸವಾಲುಗಳನ್ನೂ ತಂದಿದೆ.ತಾಂತ್ರಿಕ ಸಂಪನ್ಮೂಲಗಳ ಕೊರತೆ, ಡಿಜಿಟಲ್ ಪ್ರಕಟಣೆಯ ಗುಣಮಟ್ಟದ ಸಮಸ್ಯೆಗಳು, ಓದುವ ಸಂಸ್ಕೃತಿಯಲ್ಲಿ ಉಂಟಾಗುತ್ತಿರುವ ಬದಲಾವಣೆಗಳು ಮತ್ತುಇಂಗ್ಲಿಷ್ ಭಾಷೆಯ ಪ್ರಾಬಲ್ಯ ಇವು ಪ್ರಮುಖ ಸವಾಲುಗಳಾಗಿವೆ. ಈ ಸವಾಲುಗಳನ್ನು ಸಮರ್ಥವಾಗಿಎದುರಿಸಲು ಸರಕಾರ, ಶಿಕ್ಷಣ ಸಂಸ್ಥೆಗಳು, ಸಂಶೋಧಕರು ಮತ್ತುತಂತ್ರಜ್ಞರುಒಟ್ಟಾಗಿಕಾರ್ಯನಿರ್ವಹಿಸುವುದುಅತ್ಯಂತಅಗತ್ಯವಾಗಿದೆ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಭವಿಷ್ಯದ ದೃಷ್ಟಿಯಿಂದ ನೋಡಿದರೆ ಡಿಜಿಟಲ್ ಹ್ಯೂಮ್ಯಾನಿಟೀಸ್, ಕೃತಕ ಬುದ್ಧಿಮತ್ತೆ ಮತ್ತು ಸಹಜ ಭಾಷಾ ಸಂಸ್ಕರಣೆ ಮುಂತಾದ ಕ್ಷೇತ್ರಗಳಲ್ಲಿ ಕನ್ನಡ ಭಾಷೆಯ ಅಭಿವೃದ್ಧಿಗೆಅಪಾರ ಸಾಧ್ಯತೆಗಳಿವೆ. ದೊಡ್ಡ ಪ್ರಮಾಣದ ಪಠ್ಯಕಣಜಗಳ ನಿರ್ಮಾಣ, ಕನ್ನಡಕ್ಕೆ ಸಂಬಂಧಿಸಿದ ತಂತ್ರಾಂಶಗಳ ಅಭಿವೃದ್ಧಿ ಮತ್ತುಡಿಜಿಟಲ್ ಸಂಪನ್ಮೂಲಗಳ ವಿಸ್ತರಣೆ ಈ ದಿಸೆಯಲ್ಲಿ ಮಹತ್ವದ ಹೆಜ್ಜೆಗಳಾಗಬಹುದು.

ಒಟ್ಟಾರೆ ನೋಡಿದರೆ ತಂತ್ರಜ್ಞಾನ ಮತ್ತು ಸಾಹಿತ್ಯ ಪರಸ್ಪರ ಪೂರಕವಾಗಿರುವ ಕ್ಷೇತ್ರಗಳಾಗಿವೆ. ತಂತ್ರಜ್ಞಾನವು ಸಾಹಿತ್ಯಕ್ಕೆ ಹೊಸ ಮಾಧ್ಯಮಗಳನ್ನು ಒದಗಿಸಿದರೆ, ಸಾಹಿತ್ಯವು ತಂತ್ರಜ್ಞಾನಯುಗದಲ್ಲಿಯೂ ಮಾನವೀಯ ಮೌಲ್ಯಗಳು ಮತ್ತು ಸಾಂಸ್ಕೃತಿಕ ಅನುಭವಗಳನ್ನು ಪ್ರತಿಬಿಂಬಿಸುತ್ತದೆ.ಆದ್ದರಿಂದ ಡಿಜಿಟಲ್‌ಯುಗದಲ್ಲಿ ಕನ್ನಡ ಸಾಹಿತ್ಯವುತನ್ನ ದೀರ್ಘ ಪರಂಪರೆಯನ್ನು ಉಳಿಸಿಕೊಂಡು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವ ಮೂಲಕ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಬೇಕು.ಈ ರೀತಿಯ ಸಮನ್ವಯದ ಮೂಲಕ ಕನ್ನಡ ಭಾಷೆ ಮತ್ತು ಸಾಹಿತ್ಯವು ಭವಿಷ್ಯದಲ್ಲಿಇನ್ನಷ್ಟು ಸಮೃದ್ಧವಾಗುವ ಸಾಧ್ಯತೆಯನ್ನು ಹೊಂದಿದೆ.

ಉಲ್ಲೇಖಗಳು (References)

1. ಅನಂತರಾಮುಟಿ.ಆರ್., ವಿಜ್ಞಾನ–ತಂತ್ರಜ್ಞಾನ, ಕನ್ನಡಸಾಹಿತ್ಯಪರಿಷತ್ತು, ಬೆಂಗಳೂರು, 2020
2. ಶ್ರೀನಿಧಿ ಟಿ.ಜಿ., ಕನ್ನಡತಂತ್ರಜ್ಞಾನ (ನೆನ್ನೆಇಂದು ನಾಳೆ), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2020
3. ಶಂಕರಪ್ಪತೋರಣಗಲ್ಲು, ತಂತ್ರಜ್ಞಾನದ ದೇಶಿಕರಣ ಕನ್ನಡದಜಾಗತೀಕರಣಅರಹುಕುರುಹು, 2022
4. ಸಂ.ಡಾ.ಸಾಂಬಮೂರ್ತಿ, ಭಾಷಾತಂತ್ರಜ್ಞಾನ:ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2009
5. ಸಂ.ಕೆ.ವಿ ನಾರಾಯಣ, ಕನ್ನಡ ನುಡಿಆಕರ ಕೋಶ: ಕುವೆಂಪು ಭಾಷಾ ಭಾರತಿ.
6. ಆನಂತರಾಮು.ಟಿ.ಆರ್, ವಿಜ್ಞಾನ–ತಂತ್ರಜ್ಞಾನ (ಸಂಪುಟ–14), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
7. Crystal, David, Language and the Internet. Cambridge: Cambridge University Press, 2006
8. Levy, Pierre, Collective Intelligence: Mankind’s Emerging World in Cyberspace. Cambridge: Perseus Books, 1997
9. UNESCO, Digital Preservation of Languages and Cultural Heritage. Paris: UNESCO Publications 2011

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಕನ್ನಡ ನವೋದಯ ಕಾದಂಬರಿ: ಆಧುನಿಕ ಶಿಕ್ಷಣ ಚಿಂತನೆ

ಕುಮಾರ ತಳವಾರ
ಸಂಶೋಧನಾ ವಿದ್ಯಾರ್ಥಿ ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ
ಡಾ. ಗಜಾನನ ನಾಯ್ಕ
ಮಾರ್ಗದರ್ಶಕರು ಶಾಸ್ತ್ರೀಯ ಕನ್ನಡ ಭಾಷಾಅಧ್ಯಯನ ಸಂಸ್ಥೆಸಹ ಪ್ರಾಧ್ಯಾಪಕರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

Manuscript ID:
JRD -2026-180415
ISSN: 2230-9578
Volume 18
Issue 4(II)
Pp.50-52
April 2026
Submitted:08 Mar. 2026
Revised:24Mar. 2026
Accepted:10Apr.2026
Published:30 April2026

ಸಾರಲೇಖ :

ಭಾರತೀಯ ಇತಿಹಾಸ ಪರಂಪರೆಯಲ್ಲಿ ಶೈಕ್ಷಣಿಕವಾಗಿ ಶಿಕ್ಷಣವು ಕೂಡಾ ಸಾಹಿತ್ತಿಕ ಪರಂಪರೆಯನ್ನು ಹೊಂದಿದೆ. ಪ್ರಾಚೀನ ಮತ್ತು ಆಧುನಿಕ ಕಾಲದಲ್ಲಿಯ ಶಿಕ್ಷಣ ಬೆಳೆದು ಬಂದ ಪರಂಪರೆಯ ಕುರಿತು ಚರ್ಚಿಸಲಾಗಿದೆ.ಶಿಕ್ಷಣವೆಂಬ ಪರಿಕಲ್ಪನೆಯು ಶೈಕ್ಷಣಿಕ ಕಲಿಕೆಯ ಮುಖಾಂತರ ಪ್ರಾಚೀನ ಕಾಲದಿಂದ ಹಂತ ಹಂತವಾಗಿ ವಿವಿಧ ಆಯಾಮದಲ್ಲಿ ಬೆಳೆಯುತ್ತಾ, ಆಧುನಿಕ ಕಾಲದಲ್ಲಿ ಕನ್ನಡ ಸಾಹಿತ್ಯದಲ್ಲಿ ಬೆರೆತಿರುವಂತಾಗಿದೆ ಹಾಗೂ ಭಾರತದ ಶ್ರೇಷ್ಠ ಗ್ರಂಥಗಳಲ್ಲೊಂದಾದ ಭಗವದ್ಗೀತೆಯಲ್ಲಿ 'ನಹಿ ಜ್ಞಾನೇನ ಸದೃಶಂ' ಎಂದು ಘೋಷಿಸಿ ನೈಜ ಶಿಕ್ಷಣದ ಆವಶ್ಯಕತೆಯನ್ನು ತಿಳಿಸಿದ್ದಾರೆ. ಅದರಂತೆಯೇ ನವೋದಯ ಕಾಲಘಟ್ಟದ ಶೈಕ್ಷಣಿಕ ರಂಗದಲ್ಲಿ ಶಿಕ್ಷಣ ಮತ್ತು ಸಾಹಿತ್ಯ ಎರಡು ಅವಿನಾಭಾವವಾದಂತಹ ಸಂಬಂಧವನ್ನು ಹೊಂದಿವೆ. ಸಾಹಿತ್ಯದ ಕಲಿಕೆಯ ಮುಖಾಂತರ ಭಾಷೆ ಮತ್ತು ಪಠ್ಯವನ್ನು ಬೋಧಿಸುವುದೇ ಶಿಕ್ಷಣದ ಕೇಂದ್ರ ಬಿಂದುವಾಗಿದೆ. ಅದೇ ರೀತಿಯಾಗಿ ಸಾಹಿತ್ಯ ಕೃತಿಗಳು ಶೈಕ್ಷಣಿಕ ಸ್ವರೂಪವನ್ನು ತಮ್ಮಲ್ಲಿ ರೂಪಿಸುವ ಪ್ರಯತ್ನವನ್ನು ಮಾಡುತ್ತಾ ಬಂದಿವೆ. ಇಂದಿನ ಹೊಸಗನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಪ್ರಮುಖ ಪ್ರಕಾರವಾದ ಕಾದಂಬರಿಗಳಲ್ಲಿ ಶಿಕ್ಷಣ ಪರಂಪರೆಯು ಮೂಡಿಬಂದಿರುವಂಥದ್ದು ಗಮನಾರ್ಹ ವಿಷಯವಾಗಿದೆ.ನವೋದಯ ಕಾಲಘಟ್ಟದ ಕಾದಂಬರಿಯಲ್ಲಿ ಆಧುನಿಕ ಶಿಕ್ಷಣ ಪರಂಪರೆ ಮೂಡಿ ಬಂದಿರುವ ವಿಷಯವನ್ನು ಗಮನಿಸಲಾಗಿದೆ.ನವೋದಯ ಕಾಲಘಟ್ಟದ ಮೊದಲ ಕಾದಂಬರಿಗಾರ್ತಿ ನಂಜನಗೂಡು ತಿರುಮಲಾಂಬ ಅವರ ಸುಶೀಲೆ ಕಾದಂಬರಿಯಲ್ಲಿ ಆಧುನಿಕ ಶಿಕ್ಷಣ, ಸ್ತ್ರೀ ಶಿಕ್ಷಣ, ಬಾಲ್ಯ ವಿವಾಹ, ವಿಧವಾ ಸಮಸ್ಯೆ, ಶಿಕ್ಷಣ ನೀತಿ, ವಿಧವಾ ಸಮಸ್ಯೆ, ಪುನರ್ ವಿವಾಹದಂತಹ ವಿಷಯದ ಕುರಿತು ಚರ್ಚಿಸಲಾಗಿದೆ.

ಮುಖ್ಯ ಪದಗಳು: ಪ್ರಾಚೀನ ಕಾಲದ ಶಿಕ್ಷಣ ಮತ್ತು ಆಧುನಿಕ ಕಾಲದ ಶಿಕ್ಷಣ ಪರಂಪರೆ, ನವೋದಯ ಕಾಲಘಟ್ಟದ ಸಾಹಿತ್ಯ, ಬ್ರಿಟಿಷರ ಇಂಗ್ಲಿಷ್ ಶಿಕ್ಷಣ, ನಂಜನಗೂಡು ತಿರುಮಲಾಂಬ, ಆಧುನಿಕ ಶಿಕ್ಷಣ, ಸ್ತ್ರೀ ಶಿಕ್ಷಣ ಚಿಂತನೆ

ಭಾರತೀಯ ಇತಿಹಾಸ ಪರಂಪರೆಯಲ್ಲಿ ಶೈಕ್ಷಣಿಕವಾಗಿ ಶಿಕ್ಷಣವು ಕೂಡಾ ಸಾಹಿತ್ತಿಕವಾಗಿ ತನ್ನದೇಯಾದ ಪರಂಪರೆಯನ್ನು ಹೊಂದಿದೆ. ಭಾರತ ಶೈಕ್ಷಣಿಕ ರಂಗದಲ್ಲಿ ಶಿಕ್ಷಣ ಎಂಬುದು ಪ್ರಾಚೀನ ವೇದಕಾಲದಿಂದ ಪ್ರಾರಂಭವಾಗಿ ಆಧುನಿಕ ಕಾಲದವರೆಗೂಬೆಳೆದು ಬಂದು ಮಾನವನಲ್ಲಿ ಒಳ್ಳೆಯ ವಿಚಾರಗಳು ಮತ್ತು ಜ್ಞಾನ, ಶಿಸ್ತು, ಮಾನವೀಯ ಮೌಲ್ಯಗಳನ್ನು ಬೆಳೆಸುವಂತಾಗಿದೆ.ಹಾಗೆಯೇ ಮಾನವನ ಸರ್ವತೋಮುಖ ಬೆಳವಣಿಗೆಯ ಶೈಕ್ಷಣಿಕ ಸಾಹಿತ್ಯದ ಪ್ರಮುಖ ಗುರಿಯಾಗಿದೆ.ಶಿಕ್ಷಣದಿಂದ ಪ್ರಾಚೀನಗನ್ನಡ, ನಡುಗನ್ನಡ, ಆಧುನಿಕ ಕನ್ನಡ, ಕಾಲಘಟ್ಟದ ಜನರಲ್ಲಿ ಅರ್ಥವಿಸ್ತಾರವಾದಂತಹ ವಿಚಾರಗಳನ್ನು ಮಾನವ ಸಮಾಜದಲ್ಲಿ ಬದಲಾವಣೆಯ ಹಂತವನ್ನು ತಲುಪುವ ಹಾಗೆ ಶೈಕ್ಷಣಿಕವಾಗಿ ಶಿಕ್ಷಣವು ಮಾಡಿದೆ.ಅದರಂತೆ "ಭಾರತದ ಶ್ರೇಷ್ಠ ಗ್ರಂಥಗಳಲ್ಲೊಂದಾದ ಭಗವದ್ಗೀತೆಯಲ್ಲಿ 'ನಹಿ ಜ್ಞಾನೇನ ಸದೃಶಂ"[೧] ಎಂಬ ವಾಕ್ಯವು ಪ್ರಾಚೀನ ಕಾಲದ ನೈಜಶಿಕ್ಷಣದ ಹಿನ್ನೆಲೆಯನ್ನು ತಿಳಿಸುತ್ತದೆ.'ಗುರುವಿನ ಗುಲಾಮನಾಗುವ ತನಕ ದೊರೆಯುದನ್ನ ಮುಕುತಿ' ಎನ್ನುವಪುರಂದರದಾಸರು ಹೇಳಿರುವ ವಾಕ್ಯವು ಗುರುವಿನ ಮಹತ್ವವನ್ನುತಿಳಿಸಿದೆ ಹಾಗೂ ಆಧುನಿಕ ಶಿಕ್ಷಣ ಪರಂಪರೆಯಲ್ಲಿ ಈ ಮಾತು ಗ್ರಾಮೀಣ ಪ್ರದೇಶದ ಮನೆ–ಮನಗಳಲ್ಲಿಮನೆ ಮಾತಾಗಿರುವಂತಾಗಿದೆ.ಸರಿಸುಮಾರು ೧,೫೦೦ ವರ್ಷಗಳ ಇತಿಹಾಸ ಚರಿತ್ರೆಯನ್ನು ಗಮನಿಸಿದಾಗ ಶಾಸನಗಳಲ್ಲಿಯೂ ಸಹ ಶಿಕ್ಷಣ ಪರಂಪರಯನ್ನುಕಾಣಲಾಗಿದೆ. ಪ್ರಮುಖವಾಗಿ ತಾಳಗುಂದ ಶಾಸನ, ಸಲೋಟಗಿ ಶಾಸನ, ಮನ್ನೆ ಶಾಸನ, ನಾಗಾಯಿ ಶಾಸನ, ಬಳ್ಳಿಗಾವೆ ಶಾಸನ, ಜಟ್ಟಿಗ ರಾಮೇಶ್ವರ ಶಾಸನ ಹೀಗೆ ಕರ್ನಾಟಕದ ಹಲವಾರುಶಾಸನಗಳಲ್ಲಿ ಪ್ರಾಚೀನ ಶಿಕ್ಷಣ ಪರಂಪರೆಯಮೂಲತಳಹದಿಯನ್ನು ತಿಳಿಯಲಾಗಿದೆ. ಇವುಗಳಲ್ಲಿ ಧಾನದತ್ತಿ, ವಿದ್ಯಾಭ್ಯಾಸ, ಜನಜೀವನ, ಸಂಸ್ಕೃತಿ, ವಿದ್ಯಾಕೇಂದ್ರಗಳು, ಘಟಿಕಾಸ್ಥಾನ, ಪ್ರಾಚೀನ ಕಾಲದ ಶಿಕ್ಷಣ, ಗುರು–ಶಿಷ್ಯರ ಸಂಬಂಧದ ವಿಷಯಗಳು ಈ ಶಾಸನಗಳಲ್ಲಿ ಮುಖ್ಯವೆನಿಸಿಕೊಂಡಿವೆ. "ಪ್ರಾಚೀನ ಕರ್ನಾಟಕ ವಿದ್ಯಾಭ್ಯಾಸ ಪದ್ಧತಿಯು ಬಹುಪಾಲು ಭಾರತದ ಇತರ ಭಾಗಗಳಲ್ಲಿರುವಂತೆ ಧಾರ್ಮಿಕವಾದುದೇ ಆಗಿತ್ತು.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಕುಮಾರ ತಳವಾರ, ಸಂಶೋಧನಾ ವಿದ್ಯಾರ್ಥಿ ಶಾಸ್ತ್ರೀಯ ಕನ್ನಡ ಭಾಷಾಅಧ್ಯಯನ ಸಂಸ್ಥೆರಾಣಿಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

How to cite this article:
ಕುಮಾರ ತಳವಾರ, ಡಾ. ಗಜಾನನ ನಾಯ್ಕ.*(2026).*ಕನ್ನಡ ನವೋದಯಕಾದಂಬರಿ: ಆಧುನಿಕ ಶಿಕ್ಷಣ ಚಿಂತನೆ
. Journal of Research and Development, 18(4(II)). https://doi.org/10.5281/zenodo.19395130

Quick Response Code:
Website: https://jrdrvb.org/
DOI: 10.5281/zenodo.19395130

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

"ವಿದ್ಯಾ" ಎಂಬುವುದು ಮಾನವನ ಜೀವನದ ಮುಖ್ಯ ಗುರಿ. ಆತ್ಮಜ್ಞಾನ ಅಥವಾ ಮೋಕ್ಷ ಇಂಥ ಮೋಕ್ಷ ಸಿದ್ಧಿಯನ್ನು ಎಂದರೆ ಆತ್ಮಜ್ಞಾನವನ್ನು ಪಡೆಯಲು ವಿದ್ಯೆ ಒಂದು ಮುಖ್ಯ ಸಾಧನ"[೨] ಹೀಗೆ ವಿದ್ಯಾಭ್ಯಾಸ ಎನ್ನುವುದು ಕರ್ನಾಟಕದ ಶಿಕ್ಷಣ ಪರಂಪರೆಗೆ ಹೆಸರುವಾಸಿಯಾಗಿ ಸಾಹಿತ್ಯದ ಹೆಬ್ಬಾಗಿಲು ತೆರೆಯುವಂತಾಯಿತ್ತು ಇದರಿಂದಶೈಕ್ಷಣಿಕ ರಂಗದಲ್ಲಿ ಶಿಕ್ಷಣ ಮತ್ತು ಸಾಹಿತ್ಯ ಎರಡು ಅವಿನಾಭಾವವಾದಂತಹ ಸಂಬಂಧವನ್ನು ಹೊಂದಿವೆ. ಸಾಹಿತ್ಯದ ಕಲಿಕೆಯ ಮುಖಾಂತರ ಭಾಷೆ ಮತ್ತು ಪಠ್ಯವನ್ನು ಬೋಧಿಸುವುದೇ ಶಿಕ್ಷಣದ ಕೇಂದ್ರ ಬಿಂದುವಾಗಿದೆ.

ಭಾರತದಲ್ಲಿ ಬ್ರಿಟಿಷ ಅಧಿಕಾರಿಗಳಾದಲಾರ್ಡ್ ಮೇಕಾಲೆ ಮತ್ತು ಲಾರ್ಡ್ ವಿಲಿಯಂ ಬೆಂಟಿಕ್ ಇವರಿಬ್ಬರು ಇಂಗ್ಲೀಷ್ ಶಿಕ್ಷಣವನ್ನು ಜಾರಿಗೆ ಮಾಡಿದ ನಂತರ ಇಂಗ್ಲಿಷ್ ಶಿಕ್ಷಣ ಭಾರತೀಯರಲ್ಲಿ ಹೊಸತನವನ್ನು ಮೂಡಿಸಿತ್ತು ಆದರಿಂದತಮ್ಮ ಸ್ಥಳಿಯ ಭಾಷೆಗಳಯಲ್ಲಿ ಆಧುನಿಕ ಶಿಕ್ಷಣ ಪಡೆಯಬೇಕೆನ್ನುವ ವಿಷಯವು ಬ್ರಿಟಿಷರು ಮತ್ತು ಭಾರತೀಯರ ನಡುವೇಗಂಭೀರವಾಗಿ ಚರ್ಚೆಗೆ ಗ್ರಾಸವಾಯಿತ್ತು.ಇದರಲ್ಲಿ ಭಾರತೀಯರು ಯಶಸ್ವಿಯಾದರು.ನಂತರ ಪ್ರಾಚೀನ ಕಾಲದ ಸಾಹಿತ್ಯ ಕೃತಿಗಳು ಆಯಾ ಪ್ರದೆಶಕ್ಕೆ ಅನುಗುಣವಾಗಿ ಅಧ್ಯಯನದ ಪಠ್ಯಗಳಾದವು.ಇದರಿಂದ ಭಾಷೆ–ಭಾಷೆಗಳ ನಡುವೆ ಬಾಂಧವ್ಯ ಬೆಳೆಯತೊಡಗಿತ್ತುಆದರಿಂದ ಕನ್ನಡ ಕವಿಗಳು ಕನ್ನಡ ಇಂಗ್ಲಿಷ್, ಸಂಸ್ಕೃತ ಮತ್ತು ಬಂಗಾಳಿ ಭಾಷೆಗಳಲ್ಲಿ ಅಧ್ಯಯನದಲ್ಲಿ ನಿರತರಾದರು ಅದರ ಪ್ರತಿಫಲವಾಗಿ ನವೋದಯ ಕಾಲಘಟ್ಟದಲ್ಲಿ ಕನ್ನಡ ಸಾಹಿತ್ಯ ಸೃಜನಾತ್ಮಕ ಸಾಹಿತ್ಯದ ಕಾರ್ಯ ಆರಂಭವಾಯಿತ್ತು.ಕನ್ನಡ ಕವಿಗಳು ಪ್ರಾಚೀನ ಮತ್ತು ಆಧುನಿಕ ಶಿಕ್ಷಣದ ಮೇಲೆ ಹೆಚ್ಚು ಕೇಂದ್ರೀಕೃತವಾಗಿ ಜ್ಞಾನಪರಂಪರೆಯನ್ನು ಪಡೆದುಕೊಂಡು ಪ್ರಾಚೀನ ಕಾಲದಲ್ಲಿಯ ಕನ್ನಡ ಕೃತಿಗಳ ಸಂರಕ್ಷಣೆಯ ಕಾರ್ಯದ ಕಡೆಗೆ ಗಮನಹರಿಸಿದರು.ಆ ಕಾಲಘಟ್ಟವೇ ನವೋದಯ ಕಾಲಘಟ್ಟವೆಂದು ಹೆಸರುವಾಸಿಯಾಯಿತು.ಬಂಗಾಳಿ ಭಾಷೆಯಿಂದ ಕನ್ನಡಕ್ಕೆ ಬಿ. ವೆಂಕಟಾಚಾರ್ಯ ಅವರು ಬಂಕಿಮಚಂದ್ರ ಚಟರ್ಜಿ, ರವೀಂದ್ರನಾಥ ಠಾಕೂರ್ ಅವರ ಕಾದಂಬರಿಗಳನ್ನು ಭಾಷಾಂತರಿಸಿ ಕಾದಂಬರಿ ಸಾಹಿತ್ಯ ಪ್ರಕಾರಕ್ಕೆ ಭದ್ರ ಬುನಾದಿ ಹಾಕಿದರು.ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡುವ ಕವಿಗಳಿಗೆಆಧುನಿಕ ಶಿಕ್ಷಣ ದಾರಿದೀಪವಾಯಿತು.ಇದರಿಂದ ಕವಿಗಳ ಮನಸ್ಸಿನಲ್ಲಿ ಹೊಸ–ಹೊಸ ಸಾಹಿತ್ಯಿಕ ವಿಚಾರಗಳು ಚಿಗುರೊಡೆದವು.ಅದರಂತೆ ಬ್ರಿಟಿಷರ ಜೊತೆಗೂಡಿ ಕನ್ನಡ ಕವಿಗಳು ಸಾಹಿತ್ಯದ ಕೃಷಿಯನ್ನು ಮಾಡುವ ಕಾರ್ಯದಲ್ಲಿ ನಿರತರಾದರು.ತದನಂತರ ಕನ್ನಡ ನವೋದಯ ಸಾಹಿತ್ಯದಲ್ಲಿ ಆಧುನಿಕ ಶೈಕ್ಷಣಿಕ ವಿಚಾರಗಳ ಕುರಿತುಕವಿಗಳು ತಮ್ಮ ಕೃತಿಗಳಲ್ಲಿ ದಾಖಲಿಸುವ ಮೂಲಕ ಭದ್ರಬುನಾದಿ ಹಾಕುವಂತಕಾರ್ಯ ಆರಭವಾಯಿತ್ತು. ಈ ರೀತಿಯಾಗಿ ನವೋದಯ ಕಾಲಘಟ್ಟದಲ್ಲಿ ಶಿಕ್ಷಣ ಸಾಹಿತ್ತಿಕ ಪರಂಪರೆಯನ್ನು ಪಡೆದುಕೊಂಡಿತು.ನಂತರನವೋದಯ ಕಾಲಘಟ್ಟದಲ್ಲಿ ಕನ್ನಡ ಸಾಹಿತ್ಯವು ಮಹತ್ವವಾದ ಸ್ಥಾನವನ್ನು ಪಡೆಯುವಲ್ಲಿ ಮುಖ್ಯವಾಯಿತು.ಪಾಶ್ಚಿಮಾತ್ಯರಜ್ಞಾನಪರಂಪರೆ ಮತ್ತುಆಧುನಿಕ ಶಿಕ್ಷಣದ ಕಲಿಕೆಯಿಂದ ಜನಗಳುಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಪ್ರಗತಿಯನ್ನು ಹೊಂದಬೇಕೆನ್ನುವವಿಚಾರಗಳುಕವಿಗಳಲ್ಲಿ ಮೂಡಿಬಂದವು.ಅದರ ಪರಿಣಾಮವಾಗಿ ಸಾಹಿತ್ಯ ಕೃತಿಗಳುಆಧುನಿಕದ ಶಿಕ್ಷಣದ ವಿಷಯಗಳಾಗಿ ತಲೆದೂರಿದವು.ಜೊತೆಗೆಪ್ರಾಚೀನ ಶಿಕ್ಷಣದ ಮತ್ತು ಆಧುನಿಕ ಶಿಕ್ಷಣ ಪ್ರಭಾವದಿಂದಾಗಿ ಹೊಸ–ಹೊಸ ಚಿಂತನೆಗಳನ್ನು ಸಾಹಿತ್ಯದ ಕೃತಿಗಳಲ್ಲಿ ದಾಖಲಾದವು.

ಹೊಸಗನ್ನಡ ಸಾಹಿತ್ಯ ಪ್ರಕಾರಗಳಾದ ಕಥೆ, ನಾಟಕ, ಕಾದಂಬರಿಗಳಲ್ಲಿ ಗ್ರಾಮೀಣ ಜನರ ಚಿತ್ರಣ ಮತ್ತು ನಗರದಲ್ಲಿ ವಾಸಿಸುವ ಜನರ ಚಿತ್ರಣ, ಬಾಲ್ಯ ವಿವಾಹ, ಬಾಲ್ಯ ವಿವಾಹ, ವಿಧವಾ ಸಮಸ್ಯೆ.ಮಾನವತವಾದ, ವಾಸ್ತವವಾದದ, ಆಧುನಿಕ ಶಿಕ್ಷಣ, ಸ್ತ್ರೀಶಿಕ್ಷಣದ ವಿಚಾರಗಳನ್ನು ಕವಿಗಳು ತಮ್ಮ ಕೃತಿಗಳಲ್ಲಿ ದಾಖಲು ಮಾಡಿದರು.ಅವರಲ್ಲಿ ಗುಲ್ವಾಡಿ ವೆಂಕಟರಾಯರು, ಕುವೆಂಪು, ಎಂ.ಎಸ್ ಪುಟ್ಟಣ್ಣ, ಶಾಂತಾಬಾಯಿ ನೀಲಗಾರ, ಶಿವರಾಮ ಕಾರಂತ, ಕೆರೂರು ವಾಸುದೇವಾಚಾರ್ಯ, ನಂಜನಗೂಡು ತಿರುಮಲಾಂಬ, ಮುಂತಾದ ಅನೇಕ ಕನ್ನಡ ಕವಿಗಳು ನವೋದಯ ಕಾಲಘಟ್ಟದಲ್ಲಿ ತಮ್ಮ ಸುತ್ತಮುತ್ತ ನಡೆದಿರುವ ವಾಸ್ತವದ ಆಧುನಿಕ ಶಿಕ್ಷಣದ ವಿಚಾರಗಳನ್ನು ಕಾದಂಬರಿಗಳಲ್ಲಿ ಮೂಲವಿಷಯವಾಗಿ ದಾಖಲಿಸಿದ್ದಾರೆ.ಸ್ತ್ರೀ ಶಿಕ್ಷಣ, ಬಾಲ್ಯ ವಿವಾಹ ಪುನರ್ ವಿವಾಹ, ಆಧುನಿಕ ಶಿಕ್ಷಣ, ವಿಧವಾ ಸಮಸ್ಯೆ, ಶಿಕ್ಷಣ ನೀತಿ, ಬಂಡವಾಳಶಾಹಿ ಮತ್ತು ಶಿಕ್ಷಣ ಸಂಸ್ಕಾರದಂತ ವಿಷಯಗಳು ನವೋದಯ ಕಾದಂಬರಿಗಳಲ್ಲಿ ಚರ್ಚಿಸಲಾಗಿದೆಅದರಂತೆ ನಂಜನಗೂಡು ತಿರುಮಲಾಂಬ ಅವರು ಕಾದಂಬರಿಗಳಲ್ಲಿ ಸ್ತ್ರೀಶಿಕ್ಷಣದ ಕುರಿತು ಬರೆದಿರುವದು ಗಮನಾರ್ಹ ವಿಷಯವಾಗಿದೆ.

ನಂಜನಗೂಡು ತಿರುಮಲಾಂಬ

ನವೋದಯ ಕಾಲಘಟ್ಟವನ್ನು ವಸಹಾತುಶಾಹಿಗಳು ಆಗಮಿಸಿದ ಕಾಲಘಟ್ಟವೆಂದು ಕರೆಯಲಾಗಿದೆ.ಈ ಕಾಲಘಟ್ಟದ ಮೊದಲ ಮಹಿಳಾ ಕಾದಂಬರಿಗಾರ್ತಿ ನಂಜನಗೂಡು ತಿರುಮಲಾಂಬ.ತಂದೆ ವೆಂಕಟಪ್ಪ ಅಯ್ಯಂಗಾರ್, ತಾಯಿ ಆಲಮೇಲಮ್ಮ ತಿರುಮಲಾಂಬವರ ಮನೆಯ ಮೂಲಭಾಷೆ ತಮಿಳು ಆದರೂ ಕನ್ನಡ ಸಾಹಿತ್ಯದ ಕೃತಿಗಳನ್ನು ಬರೆಯುವುದರ ಮೂಲಕ ಅಪಾರವಾದ ಕೀರ್ತಿಯನ್ನು ಗಳಿಸಿದ್ದಾರೆ.'ಮನೆಯೇ ಮೊದಲ ಪಾಠಶಾಲೆ' ಎನ್ನುವ ಮಾತಿನಂತೆ ಇವರ ಮನೆಯ ಪರಿಸರವು ಶಾಲೆಯಾಗಿ ರೂಪಗೊಂಡಿತ್ತು.ಅದರಂತೆ ತಿರುಮಲಾಂಬರವರು ಆಧುನಿಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿರುವ ಪ್ರತಿಫಲದಿಂದ ಸಾಹಿತ್ಯ ಕ್ಷೇತ್ರದಲ್ಲಿ ಇವರ ಹೆಸರು ಅಜರಾಮರವಾಗಿದೆ."ಡಾ. ಎಲ್. ಜಿ. ಮೀರಾ ಹೇಳುವಂತೆ ಮೊದಲ 'ಸರಸ್ವತಿ (ಭಾರತಿ) ಪೊರೆಯನ್ನನು' ಎಂಬ ಮಾತು ನುಡಿಯ ಗೀತೆ ಅವರ ಬಾಯಿಯಿಂದ ಹೊರಹೊಮ್ಮಿತು.ಇದೇ ಅವರ ಬರಹಗಳಿಗೆ ನಾಂದಿಯಾಯಿತು"[೩] ಅದರಂತೆ ನವೋದಯ ಕಾಲದಲ್ಲಿಯ ಸ್ತ್ರೀಯರಿಗೆ ಶಿಕ್ಷಣವನ್ನು ನೀಡಿ ಮತ್ತು ಅವರ ಜೀವನದಲ್ಲಿ ನಡೆದಘಟ್ಟನೆಗಳನ್ನು ಮತ್ತು ಸ್ತ್ರೀ ಶಿಕ್ಷಣ, ಬಾಲ್ಯ ವಿವಾಹ, ವಿಧವಾ ಸಮಸ್ಯೆ, ಶಿಕ್ಷಣ ನೀತಿ, ವಿಧವಾ ಸಮಸ್ಯೆ, ಪುನರ್ ವಿವಾಹದಂತಹವಿಷಯಗಳನ್ನು ತಮ್ಮ ಕೃತಿಗಳಲ್ಲಿ ದಾಖಲಿಸಿದ್ದಾರೆ. ತಿರುಮಲಾಂಬರವರ ವಿದ್ಯುಲ್ಲತಾ, ವಿರಾಗಿಣಿ, ದಕ್ಷಕನ್ಯಾ, ಮಾತೃನಂದಿನಿ, ನಭಾ ಮತ್ತು ಸುಶೀಲೆ'ಯಂತ ಮುಂತಾದ ಕೃತಿಗಳಲ್ಲಿ ಪ್ರಮುಖವಾಗಿ ಸ್ತ್ರೀ ಶಿಕ್ಷಣ ಕೇಂದ್ರಿತ ನೆಲೆಯನ್ನು ಕಾಣಲಾಗಿದೆ.ಹಾಗೆ ಸುಶೀಲೆ ಕಾದಂಬರಿಯಲ್ಲಿಆಧುನಿಕ ಸ್ತ್ರೀ ಶಿಕ್ಷಣದ ಪರಂಪರೆಯನ್ನು ಸಂಕ್ಷಿಪ್ತವಾಗಿ ಚರ್ಚೆಯನ್ನು ಮಾಡಲಾಗಿದೆ.

ಸುಶೀಲೆ : ನಂಜನಗೂಡು ತಿರುಮಲಾಂಬ ಅವರು ಬರೆದಿರುವ ಕಾದಂಬರಿ ಇದಾಗಿದ್ದು.ಈ ಕಾದಂಬರಿಯಲ್ಲಿ ಸ್ತ್ರೀಶಿಕ್ಷಣವು ಸಾಹಿತ್ತಿಕ ಪರಂಪರೆಯನ್ನು ಪಡೆದುಕೊಂಡಿದೆ.ಸುಶೀಲೆಯು ಶಿಕ್ಷಣವಂತ ಮತ್ತು ಸಂಸ್ಕಾರವಂತ ಸ್ತ್ರೀಯಳಾಗಿದ್ದು ಕಾದಂಬರಿಲ್ಲಿ ಇವಳು ಕೇಂದ್ರಬಿಂದುವಾಗಿದ್ದಾಳೆ.ಇವಳ ಗಂಡನಾದ ವಿನೋದ ಮಲಯಪುರದ ಶ್ರೀಮಂತ ವ್ಯಕ್ತಿ.ಶಿಕ್ಷಣವನ್ನು ಪಡೆದರು ಯಾವುದೇ ಸರಕಾರಿ ಕೆಲಸ ಸಿಗುವುದಿಲ್ಲ. ಮದುವೆಯಾದರೂ ಪರಸ್ತ್ರೀಯಾದ ಚಂಚಲೆಯ ಜೊತೆಗೆ ಅನೈತಿಕ ಸಂಬಂಧ ಇರುತ್ತದೆ.ಸುಶೀಲೆ ಪ್ರಜ್ಞಾವಂತ ಸ್ತ್ರೀಯಳಾಗಿದ್ದು ಆಧುನಿಕ ಶಿಕ್ಷಣವನ್ನು ಪಡೆದವಳು ಹಾಗಾಗಿ ಪ್ರತಿದಿನ ಸಂಧ್ಯಾಕಾಲ ಮುಗಿಯುವ ಸಮಯದಲ್ಲಿ ಓದವ ಹವ್ಯಾಸವಿರುತ್ತದೆ.ಮುಖ್ಯವಾಗಿ ಇವಳು ಶಿಕ್ಷಣವಂತ ಸ್ತ್ರೀಯಳು ಹಾಗಾಗಿ ಶಿಕ್ಷಣಕ್ಕೆ ಆದ್ಯತೆಯನ್ನು ನೀಡಿ ಪುಸ್ತಕವನ್ನು ಓದುವುದಕ್ಕೆ ಹೆಚ್ಚಿನ ಮಹತ್ವವನ್ನು ಕೊಡುತ್ತಾಳೆ.ಆದರೆ ಪಕ್ಕದ ಮನೆಯ ಗಿರಿಯಮ್ಮ ಎನ್ನುವ ಸ್ತ್ರೀಯಳು ಇವಳ ಪುಸ್ತಕ ಓದುವುದನ್ನು ವಿರೋಧ ಮಾಡುತ್ತಾ ಅಪಹಾಸ್ಯದ ಮಾತುಗಳನ್ನಾಡುತ್ತಾಳೆ.ಆದರೆ ಸುಶೀಲೆ ಯಾವುದೇ ಕಾರಣಕ್ಕೂ ಅವಳ ಮಾತಿಗೆ ಹೆದರದೆ ಎದುರುತ್ತರವಾಗಿ ಆಧುನಿಕ ಶಿಕ್ಷಣ ಪರಂಪರೆಯ ಮಹತ್ವವನ್ನು ಅವಳಿಗೆ ತಿಳಿಸುತ್ತಾಳೆ.ನಂತರ ಓದುವುದನ್ನು ಮುಂದುವರಿಸುತ್ತಾಳೆ.ಆದರೆ ಗಿರಿಯಮ್ಮಳು "ಓದು! ಒಳ್ಳೆಯ ಓದು! ವಿರಾಮ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ದೊರೆತು, ಹೋಗದಿದ್ದರೆ ಹಾಳು ಪುಸ್ತಕವನ್ನೇ ಓದಬೇಕು"[೪]ಎಂದು ಶಿಕ್ಷಣದ ಕುರಿತು ಅಪಹಾಸ್ಯದ ಮಾತುಗಳು ಕಾದಂಬರಿಯಲ್ಲಿ ವ್ಯಕ್ತವಾಗಿವೆ. ಸ್ತ್ರೀಯಳ ಶಿಕ್ಷಣವನ್ನು ಸ್ತ್ರೀಯಳು ವಿರೋಧ ಮಾಡುವಂತಹ ಸನ್ನಿವೇಶಗಳನು ಕಾದಂಬರಿಯಲ್ಲಿ ಕಾಣಲಾಗಿದೆ.

ಗಿರಿಯಮ್ಮಳ ಪ್ರಕಾರ ಪುಸ್ತಕವನ್ನು ಓದುವುದೆಂದರೆ ಸಮಯವನ್ನು ವ್ಯರ್ಥ ಮಾಡಿದಂತೆ ಮತ್ತು ಶಿಕ್ಷಣವನ್ನು ತಿರಸ್ಕಾರ ಮಾಡಿರುವುದು ಗಮನಾರ್ಹ ಸಂಗತಿ.ಗಂಡನಾದ ವಿನೋದನಿಗೆ ಪರಸ್ತ್ರೀಯ ಸಹವಾಸವಿರುವ ವಿಷಯ ಗಿರಿಯಮ್ಮಳಿಂದ ತಿಳಿದ ತಕ್ಷಣ ಸುಶೀಲೆ ತನ್ನ ಗಂಡನ ಮೇಲಿನ ಆರೋಪವನ್ನು ಅಲ್ಲಗಳೆದು ಅವನ ಪರವಾದ ಹಿತನುಡಿಗಳನ್ನಾಡುತ್ತಾಳೆ.ಏಕೆಂದರೆ ಸುಶೀಲೆ ಸುಂದರವಾದ ರೂಪ ಲಾವಣ್ಯ, ವಿದ್ಯೆಯನ್ನು ಹೊಂದಿರುವವಳು ಹಾಗಾಗಿ ಶಿಕ್ಷಣದ ಮೂಲಕ ಸರಿಯಾದದಾರಿಯಲ್ಲಿ ಸಾಗಿಬಂದವಳು. ಹೀಗಿರುವಾಗ ಇವಳ ಮೇಲೆ ಹೇಗಾದರೂ ಸೇಡು ತೀರಿಸಿಕೊಳ್ಳಬೇಕೆಂದು ಸುಶೀಲೆಯ ವ್ಯಕ್ತಿತ್ವವು ಸರಿಯಾಗಿಲ್ಲ ಮತ್ತು ತಂತ್ರನಾಥ ಎನ್ನುವ ವ್ಯಕ್ತಿಯ ಜೊತೆಗೆ ಅನೈತಿಕ ಸಂಬಂಧವಿದೆಯೆಂದು ಸುಳ್ಳು ವಿಷಯವನ್ನು ವಿನೋದನಿಗೆ ಗಿರಿಯಮ್ಮಳು ತಿಳಿಸುತ್ತಾಳೆ.ತಂತ್ರನಾಥನಿಗೆ ಸುಶೀಲೆಯ ಮೇಲೆ ಮನಸಾಗಿರುತ್ತದೆ ಆದರೆ ಅವಳು ಗಂಡನೇ ಸರ್ವಸ ಎಂದು ನಂಬಿರುವವಳು ಹಾಗಾಗಿ ಯಾವುದೇ ಕಾರಣಕ್ಕೂ ಪರಪುರುಷರನ್ನು ಬಯಸುವುದಿಲ್ಲ. ಆದರೆ ಸುಶೀಲೆಯ ಪೂರ್ವಾಪರ ತಿಳಿಯದೆ ಅವಳ ಗಂಡನಾದ ವಿನೋದ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಾ ಅವಳಿಗೆ ಹೊಡೆಯುತ್ತಾನೆ. ಯಾವುದೇ ತಪ್ಪು ಮಾಡಲಾರದ ಸುಶೀಲೆ ನೋವನ್ನು ಅನುಭವಿಸುತ್ತಾಳೆ. ಮುಖ್ಯವಾಗಿ ವಿನೋದನಿಗೆ ಚಂಚಲೆ ಎನ್ನುವ ಹೆಣ್ಣಿನೊದಿಗೆ ಸಂಬಂಧವಿರುತ್ತದೆ.ತದನಂತರ ಚಂಚಲೆಯೂ ತಂತ್ರನಾಥನಿಂದ ಸಾವನ್ನು ಹೊಂದುತ್ತಾಳೆ. ಆದರೆ ಇವಳ ಸಾವಿಗೆ ವಿನೋದನ್ನು ಅಪರಾಧಿಯಾಗಿ ಜೈಲು ಸೇರುತ್ತಾನೆ. ಅಪರಾಧಿಯಾದ ತಂತ್ರನಾಥ ಆ ಸ್ಥಳದಿಂದ ಪರಾರಿಯಾಗುತ್ತಾನೆ. ಇದೇ ಸರಿಯಾದ ಸಮಯವೆಂದು ತಿಳಿದ ತಂತ್ರನಾಥ ಸುಶೀಲೆಯ ಹತ್ತಿರ ಬಂದು ಅವಳನ್ನು ಹೇಗಾದರೂ ಅನುಭವಿಸಬೇಕೆನ್ನುವ ಆತುರದಲ್ಲಿರುತ್ತಾನೆ. ಚಂಚಲೆಯು ಸಾವಿನ ಸಂಗತಿಯನ್ನು ಅವನಿಂದ ತಿಳಿದ ಸುಶೀಲೆ ತನ್ನಗಂಡ ನಿರಪರಾಧಿ ಎಂದು ಗೊತ್ತಾದಾಗ ಸಂತೋಷವಾಗುತ್ತಾಳೆ. ಆದರೆ ಆ ಸಮಯದಲ್ಲಿ ತಂತ್ರನಾಥ ತನ್ನ ತಂತ್ರಗಾರಿಕೆಯನ್ನು ಮುಂದುವರಿಸುತ್ತಾನೆ. ಆ ಸಂದರ್ಭದಲ್ಲಿ ಸುಶೀಲೆ 'ಸಾಸಿವೆಯಷ್ಟು ಸುಖ' ಗೋಸ್ಕರ ಹೆಣ್ಣಿನ ಜೀವನ ಹಾಳು ಮಾಡವುದಕ್ಕೆ ಬಂದಿರುವೆಯ ಎಂದು ದುಃಖಭರಿತಳಾಗಿ ಮಾತುಗಳನ್ನಾಡುತ್ತಾಳೆ.ಆದರೆ ತಂತ್ರನಾಥ ಮಾತ್ರ ಸುಶೀಲೆನ್ನು ಮೋಹಿಸಬೇಕೆನ್ನುವ ಕಾಮಕ್ರೋಧ ಬುದ್ಧಿ ಅವನ ಮನಸ್ಸಿನಲ್ಲಿ ಮೂಡುತ್ತದೆ.ಸುಶೀಲೆಯನ್ನು ಬಲತ್ಕಾರ ಮಾಡಲು ಮುಂದಾಗುತ್ತಾನೆ ಆ ಸಂದರ್ಭದಲ್ಲಿ ಮಯೂರಿ ಎನ್ನುವ ಸ್ತ್ರೀಯಳು ಅವಳನ್ನು ಕಾಪಾಡುತ್ತಾಳೆ.ಆಧುನಿಕ ಸಮಾಜದಲ್ಲಿ ಸ್ತ್ರೀಯರು ಶಿಕ್ಷಣವನ್ನು ಪಡೆದರು ಸಹ ನೋವು–ನಲಿವಿನ ಜೊತೆಗೆ ಜೀವನ ನಡೆಸುತ್ತಿದ್ದಾರೆ ಎನ್ನುವುದು ಗಮನಾರ್ಹ ವಿಷಯವಾಗಿದೆ. ಸುಶೀಲೆ ತಂದೆಯಾದ ಸುಜ್ಞಾನಶರ್ಮ ಮತ್ತು ನ್ಯಾಯಸ್ಥಾನದ ಧರ್ಮವತಾರರ ಮುಂದೆ ಚಂಚಲೆಯ ಸಾವಿನ ಕುರಿತು ಸಭೆಯು ಜರಗುತ್ತದೆ. ಅಲ್ಲಿ ಗಿರಿಯಮ್ಮ, ತಂತ್ರನಾಥ, ವಿನೋದ, ಮಯೂರಿ, ಸುಜ್ಞಾನಶರ್ಮ ಭಾಗವಹಿಸುತ್ತಾರೆ. ಆ ಸಭೆಯಲ್ಲಿ ತಂತ್ರನಾಥನು ಚಂಚಲೆಯನ್ನು ಕೊಲೆ ಮಾಡಿರುವುದಾಗಿ ಆರೋಪವನ್ನು ಒಪ್ಪಿಕೊಳ್ಳುತ್ತಾನೆ. ವಿಷಯ ತಿಳಿದ ಧರ್ಮವತಾರರಿಂದ ವಿನೋದನು ಅಪರಾಧ ಸ್ಥಾನದಿಂದ ನಿರಪರಾಧಿ ಎಂದು ಘೋಷಣೆ ಮಾಡಿದ ನಂತರ ಅವನ್ನು ಸಂತೋಷ ಭರಿತನಾಗುತ್ತಾನೆ.ನಂತರ ಧರ್ಮವತಾರರು ಗಿರಿಯಮ್ಮಳಿಗೆ "ವಿದ್ಯಾ ಗಂಧವನ್ನೇ ತಿಳಿಯದ ನಿಮ್ಮಂತಹ ಸ್ತ್ರೀ ಸಾಮಾನ್ಯರಲ್ಲಿ ನೆಲೆಗೊಂಡಿರುವ ದ್ವೇಷ–ರೋಷ–ಅಭಿಮಾನ ಪ್ರತಿಷ್ಠೆಗಳಿಂದ ಎಂತಹ ಅನ್ಯಥಾ ಸಂಭವಿಸುತ್ತದೆ"[೫]ಎಂದು ಅವಳಿಗೆ ಶಿಕ್ಷಣ ಪರಂಪರೆಯನ್ನು ಮಹತ್ವದ ಕುರಿತು ಬೋಧನೆಯನ್ನು ಮಾಡುತ್ತಾರೆ.ತಂತ್ರನಾಥನಿಗೆ ಶಿಕ್ಷೆಯಾಗುತ್ತದೆ. ವಿನೋದನು ನಿರಪರಾಧಿಯಾದ ನಂತರ ಸುಶೀಲೆಯ ಹತ್ತಿರ ಕ್ಷಮೆಯನ್ನು ಕೇಳುತ್ತಾನೆ. ಹಾಗೇ ಅಕ್ಷರ ಶಿಕ್ಷಣವನ್ನು ಕಲಿತಂತವರು ಮತ್ತು ಜ್ಞಾನ ಪಡೆದವರು ಸಮಾಜದಲ್ಲಿ ಒಳ್ಳೆಯ ಕೆಲಸ ಕಾರ್ಯಗಳಿಗೆ ಗಮನ ಕೊಡುತ್ತಾರೆ ಎನ್ನುವ ವಿಷಯವು ಈ ಕಾದಂಬರಿಯಲ್ಲಿ ಕೇಂದ್ರಬಿಂದುವಾಗಿದೆ. ವಿನೋದನಂತ ವ್ಯಕ್ತಿಗಳು ಶ್ರೀಮಂತ ಕುಟುಂಬದಲ್ಲಿ ಜನಸಿ ಶಿಕ್ಷಣವನ್ನು ಪಡೆದುಕೊಂಡು ಸಮಾಜದಲ್ಲಿ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡುವುದನ್ನು ಬಿಟ್ಟು ಅಡ್ಡದಾರಿ ಹಿಡಿಯುವಂತಹ ಪ್ರಸಂಗ ಈ ಕಾದಂಬರಿಯಲ್ಲಿ ಮೂಡಿಬಂದಿದೆ.ಆದರೆ ಸುಶೀಲೆ ಶಿಕ್ಷಣವಂತ, ಅಕ್ಷರವಂತವಳಾಗಿ ಬದುಕಿನಲ್ಲಿ ಸುಖ ಸಂಸಾರದ ಜೊತೆಗೆ ನೋವು–ನಲಿವುಗಳನ್ನು ಅನುಭವಿಸುವ ಸನ್ನಿವೇಶ ನಿರ್ಮಾಣವಾದರೂ, ಸ್ತ್ರೀಯರು ಗಂಡನೇ ಸರ್ವಸ್ವ ಎನ್ನುವ ಸಾಂಪ್ರದಾಯಿಕ ನೈತಿಕ ಮೌಲ್ಯಗಳು ಈ ಕಾದಂಬರಿಯಲ್ಲಿ ಕಾಣಬಹುದಾಗಿದೆ. ಆಧುನಿಕ ಸಮಾಜದಲ್ಲಿ ಮಹಿಳೆಯು ಎಷ್ಟೇ ಶಿಕ್ಷಣವಂತಾದರೂ ಸಂಸಾರ ಎಂಬ ಸಾಗರದಲ್ಲಿ ಅವಳ ಶಿಕ್ಷಣವು ಕುಂಠಿತತೆಯನ್ನು ಕಾಣುತ್ತದೆ ಏಕೆಂದರೆ ಅವಳು ಓದುವುದು ಬರೆಯುವುದು ಸಮುದಾಯದ ಜನರಲ್ಲಿ ಒಂದು ಕೆಟ್ಟ ಮನೋಭಾವವಾಗಿ ಕಾಣುತ್ತದೆ.ಆದರೆ ಆಧುನಿಕ ಶಿಕ್ಷಣವು ಸಂಸ್ಕಾರವಂತ ಮಹಿಳೆಯರಾಗಿ ಮಾಡುವುದಕ್ಕೆ ಸಹಕಾರಿಯಾಗುತ್ತದೆ.ಜೊತೆಗೆಸಮಾಜದಲ್ಲಿ ಒಂದು ಉತ್ತಮವಾದ ವಾತಾವರಣವನ್ನು ಸೃಷ್ಟಿ ಮಾಡುವಂಥದ್ದು ಶಿಕ್ಷಣದ ಪ್ರಮುಖ ಉದ್ದೇಶವಾಗಿದೆ.

ಅಡಿ ಟಿಪ್ಪಣಿಗಳು

೧. ಎ. ಎಸ್. ನಂಜುಂಡಸ್ವಾಮಿ,ಭಾರತೀಯ ಶಿಕ್ಷಣ ಇತಿಹಾಸ, ಪುಟ.ಸಂಖ್ಯೆ.–೧

೨. ಕರ್ನಾಟಕದ ಶೈಕ್ಷಣಿಕ ಇತಿಹಾಸ, ಪುಟ.ಸಂಖ್ಯೆ ೧–೨

೩.ಹಿದಾಯತ್ ಉಲ್ಲಾ ಟಿ.ಎಂ, ನವೋದಯ ಸಂಧರ್ಭದಲ್ಲಿ ಮಹಿಳಾ ಸಾಹಿತ್ಯ ಬೆಳೆದು ಬಂದ ಬಗೆ,
ಲೇಖನಪುಟ.ಸಂಖ್ಯೆ–೮

೪.ನಂಜನಗೂಡು ತಿರುಮಲಾಂಬ,ಸುಶೀಲೆ,ಪುಟ.ಸಂಖ್ಯೆ–೩೭

೫. ನಂಜನಗೂಡು ತಿರುಮಲಾಂಬ, ಸುಶೀಲೆ, ಪುಟ.ಸಂಖ್ಯೆ–೫೨

ಪರಾಮರ್ಶನ ಗ್ರಂಥಗಳು

೧. ಎ. ಎಸ್. ನಂಜುಂಡಸ್ವಾಮಿ, ಭಾರತೀಯ ಶಿಕ್ಷಣ ಇತಿಹಾಸ, ಸಮಾಜ ಪುಸ್ತಕಾಲಯ, ಧಾರವಾಡ.
೧೯೯೪

೨.ನಂಜನಗೂಡು ತಿರುಮಲಾಂಬ, ಸುಶೀಲೆ, "ಸತೀಹಿತೈಷಿಣಿ" ಮಾತೃಮಂದಿರ ನಂಜನಗೂಡು.೧೯೨೨

೩.ಡಾ. ಜೋತ್ಸ್ನಾ ಕಾಮತ್, ಕರ್ನಾಟಕದಲ್ಲಿ ಶಿಕ್ಷಣ ಪರಂಪರೆ, ವಸಂತ ಪ್ರಕಾಶನ, ಬೆಂಗಳೂರು. ೧೯೮೮

೪. ಡಾ. ಜಿ. ಪ್ರಶಾಂತನಾಯಕ, ನವೋದಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೨೦೨೨

೫.ಅರವಿಂದ ಚೊಕ್ಕಾಡಿ, ಶಿಕ್ಷಣ ನೋಟ, ಸಪ್ನ ಬುಕ್ ಹೌಸ್ ಬೆಂಗಳೂರು. ೨೦೨೩

೬.ಕೆ. ಕೇಶವ ಶರ್ಮ, ನವೋದಯ ಸಾಹಿತ್ಯದ ಹಿನ್ನೆಲೆ, ಪ್ರೇರಣೆ ಮತ್ತು ಪ್ರಭಾವಗಳು, ದೇಸಿ ಪುಸ್ತಕ ಬೆಂಗಳೂರು. ೨೦೨೩

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ ವಾದ

ಅಕ್ಷಯಕುಮಾರ್. ಡಿ
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಶೇಷಾದ್ರಿ ಪುರಂಕಾಲೇಜುತುಮಕೂರು

Manuscript ID:
JRD -2026-180416
ISSN: 2230-9578
Volume 18
Issue 4(II)
Pp.53-55
April 2026
Submitted:08 Mar. 2026
Revised:24Mar. 2026
Accepted:10Apr.2026
Published:30 April2026

ಸಾರಲೇಖ :

ಹೊಸಗನ್ನಡ ಸಾಹಿತ್ಯದಲ್ಲಿ ಅಂಬಿಕಾತನಯದತ್ತ ಎಂಬ ಕಾವ್ಯ ನಾಮದಿಂದ ಗುರುತಿಸಿಕೊಂಡಿರುವ ದ. ರಾ. ಬೇಂದ್ರೆಯವರುತಮ್ಮಕಾವ್ಯದಲ್ಲಿ ಸ್ತ್ರೀಗೆ ವಿಶಿಷ್ಟ ಸ್ಥಾನಮಾನ ನೀಡಿದ್ದಾರೆ ಹಾಗೆ ಅವರ ಕಾವ್ಯಗಳಲ್ಲಿ ಸ್ತ್ರೀ ಪಾತ್ರಕ್ಕೆ ಬಹುಮುಖ ರೂಪವನ್ನು ಸೃಷ್ಟಿಸಿದ್ದಾರೆ. ದ.ರಾ.ಬೇಂದ್ರೆ ಅವರ ಸಾಹಿತ್ಯದಲ್ಲಿ ಸ್ತ್ರೀ ತಾಯಿಯಾಗಿ, ಪ್ರೇಮಿಯಾಗಿ, ಶಕ್ತಿಯಾಗಿ ಮತ್ತು ಪ್ರಕೃತಿಯರೂಪವಾಗಿ ಬಹುಮುಖಿ ಪಾತ್ರಗಳಲ್ಲಿ ಅಭಿವ್ಯಕ್ತಿಗೊಂಡಿದ್ದಾಳೆ. 'ಅಂಬಿಕಾತನಯದತ್ತ' ಎಂಬ ಕಾವ್ಯನಾಮವೇಅವರ ಸಾಹಿತ್ಯದಲ್ಲಿ ಸ್ತ್ರೀ ಶಕ್ತಿಯ (ಅಂಬಿಕೆ –ತಾಯಿ) ಪ್ರಾಮುಖ್ಯತೆಯನ್ನು ಎತ್ತಿಹಿಡಿಯುತ್ತದೆ. ಬೇಂದ್ರೆಯವರ ಕಾವ್ಯದಲ್ಲಿ ಹೆಣ್ಣು ಕೇವಲ ದೈಹಿಕ ಆಕರ್ಷಣೆಯಲ್ಲ, ಬದಲಾಗಿ ಬದುಕಿನ ಸಾಕ್ಷಾತ್ಕಾರ, ವಾತ್ಸಲ್ಯ ಮತ್ತು ಸೃಜನಶೀಲತೆಯ ಸಂಕೇತವಾಗಿದ್ದಾಳೆ.ಬೇಂದ್ರೆ ಸಾಹಿತ್ಯದಲ್ಲಿ ಸ್ತ್ರೀಯ ಚಿತ್ರಣದ ಪ್ರಮುಖ ಅಂಶಗಳು ಇಲ್ಲಿವೆ: ಮಾತೃತ್ವ ಮತ್ತು ವಾತ್ಸಲ್ಯ: ಬೇಂದ್ರೆಯವರಕಾವ್ಯದಲ್ಲಿತಾಯಿದೇವರಿಗಿಂತ ಮಿಗಿಲಾದ ಸ್ಥಾನವನ್ನು ಹೊಂದಿದ್ದಾಳೆ. 'ಕುರುಡುಕಾಂಚಾಣ'ದಂತಹ ಕವಿತೆಗಳಲ್ಲಿ ಬರುವ ವಾತ್ಸಲ್ಯ, ಹೆಣ್ಣಿನತ್ಯಾಗ ಮತ್ತು ಪ್ರೀತಿಯನ್ನು ಎತ್ತಿತೋರಿಸುತ್ತದೆ. ಪ್ರೇಮ ಮತ್ತು ಸೌಂದರ್ಯ: ಸ್ತ್ರೀಯು ಪ್ರೇಮದ ಸಂಕೇತವಾಗಿ, ಸೌಂದರ್ಯದಆರಾಧ್ಯದೇವತೆಯಾಗಿ ಕಾಣಿಸಿಕೊಳ್ಳುತ್ತಾಳೆ. ಅವರ ಅನೇಕ ಗೀತೆಗಳಲ್ಲಿ ಹೆಣ್ಣಿನ ಲಾವಣ್ಯ, ಭಾವನೆಗಳು ಮತ್ತು ಪ್ರೀತಿಯ ಆಳವನ್ನು ವರ್ಣಿಸಲಾಗಿದೆ.ಶಕ್ತಿ ಮತ್ತು ಪ್ರಕೃತಿ: ಸ್ತ್ರೀ ಕೇವಲ ಮೃದು ಸ್ವಭಾವದವಳಲ್ಲ, ಅವಳು ಶಕ್ತಿಯ ಸ್ವರೂಪ (ದುರ್ಗೆ/ಕಾಳಿ) ಎಂಬುದನ್ನು ಬೇಂದ್ರೆ ಗುರುತಿಸಿದ್ದಾರೆ. ಪ್ರಕೃತಿಯತಾಯಿಯಾಗಿ, ಸೃಜಿಸುವ ಶಕ್ತಿಯಾಗಿ ಹೆಣ್ಣಿನ ಪಾತ್ರವನ್ನುಅವರು ಸ್ತುತಿಸಿದ್ದಾರೆ.ಸಾಂಸ್ಕೃತಿಕ ಮತ್ತು ಸಾಮಾಜಿಕ ಪಾತ್ರ: ಜಾನಪದೀಯ ಶೈಲಿಯಲ್ಲಿ ಹೆಣ್ಣಿನಜೀವನದ ಕಷ್ಟಗಳು, ಆಸೆಗಳು ಮತ್ತು ಆಕಾಂಕ್ಷೆಗಳನ್ನು ಬೇಂದ್ರೆ ಸಹಾನುಭೂತಿಯಿಂದ ಚಿತ್ರಿಸಿದ್ದಾರೆ.ಅಂಬಿಕಾತನಯದತ್ತ: ತಮ್ಮಕಾವ್ಯನಾಮದ ಮೂಲಕವೇ, ತಾಯಿಯ ಮಗನಾಗಿ (ಅಂಬಿಕಾತನಯ) ಕಾವ್ಯರಚಿಸುವುದಾಗಿ ಹೇಳುವ ಮೂಲಕ, ಸ್ತ್ರೀಯನ್ನು ತಮ್ಮ ಸೃಜನಶೀಲತೆಯ ಮೂಲವೆಂದುಅವರುಒಪ್ಪಿಕೊಂಡಿದ್ದಾರೆ. ಒಟ್ಟಾರೆಯಾಗಿ, ಬೇಂದ್ರೆ ಸಾಹಿತ್ಯದಲ್ಲಿ ಸ್ತ್ರೀ ಎಂಬುದು ಪ್ರೇಮ, ತ್ಯಾಗ, ಮತ್ತು ಶಕ್ತಿಯತ್ರಿವೇಣಿ ಸಂಗಮವಾಗಿದೆ.ಅಂಬಿಕಾತನಯದತ್ತನಲ್ಲಿನತಾಯಿ ಮಾನವ ಸಂಸ್ಕೃತಿಯನ್ನು ರೂಪಿಸಿದ ತಾಯಿ.

ಮುಖ್ಯ ಪದಗಳು : ಸ್ತ್ರೀ, ತಾಯಿ, ಕಾಳಿ, ದುರ್ಗೆ,

ಈ ಭೂಮಿಯ ಮೇಲೆ ಪ್ರಾಣಿಯಾಗಿ ಹುಟ್ಟಿದಜೀವವನ್ನು ಮಾನವನನ್ನಾಗಿ ಮಾಡಿದ ಶಕ್ತಿ ತಾಯಿ, ಬೇಟೆ ಹಾಗೂ ಕ್ರೌರ್ಯದ ಗಂಡಸು ಪ್ರಾಣಿಯನ್ನು ಗೃಹಸ್ಥನಾಗಿ ಮಾಡಿದವಳು ತಾಯಿ ಮಕ್ಕಳನ್ನು ಪಡೆಯುವ ಸಹಜಚೈತನ್ಯ ಪಡೆದತಾಯಿ ಜೀವಿಗಳು ಆ ಕಂದಗಳನ್ನು ರೂಪಿಸುವತ್ತತಮ್ಮ ಜನ್ಮಗಳನ್ನು ಸವಿಸಿದೆ. ಹಾಗೆ ಸವಿಸುತ್ತಾ ಸಂಸ್ಕೃತಿಯನ್ನು ರೂಪಿಸಿದೆ ಹಾಗಾಗಿ ಈ ನೆಲದಲ್ಲಿ ಮೊದಲು ಮಾತೃ ಪ್ರಧಾನ ವ್ಯವಸ್ಥೆಯಿತ್ತು. ತಾಯಿ ಎಂದಿಗೂ ಉತ್ತಮಿತೆಯನ್ನು ಸಾಧಿಸಲು ಮಾನವರನ್ನುತಿದ್ದುತ್ತಲೇ ಸಾಗಿದ್ದಾಳೆ. ಹೀಗೆ ತಾಯಿ ಈ ನೆಲದ ಸಂಸ್ಕೃತಿ, ನಾಗರಿಕತೆಗೆ ತವರಾಗಿದ್ದಾಳೆ ಬೇಂದ್ರೆಅವರಿಗೆ ಹೆಣ್ಣುಎಂದರೆತಾಯಿಅವರುತಾಯಿಯ ವಿವಿಧರೂಪವೇ ಹೆಣ್ಣಾಗಿಅಕ್ಕತಂಗಿ, ಹೆಂಡತಿ, ಮಗಳು ಹಾಗೂ ಇತರ ಸ್ತ್ರೀಯರಾಗಿರುವುದನ್ನು ತಿಳಿಯುತ್ತ ತನ್ನ ಬದುಕಿನ ಶೋಧಕ್ಕೆತೊಡಗಿದ್ದಾರೆತನ್ನ ಬದುಕಿನ ಶೋಧದಿಂದ ಸಮಾಜ, ಸಂಸ್ಕೃತಿ, ಕಾವ್ಯಶೋದದ ಸೂಕ್ಷ್ಮ ವಲಯವನ್ನು ಪ್ರವೇಶಿಸಿ ದೇಶ ಕಾಲಾತೀತವಾದ ಸಾರ್ವರ್ತಿಕ ಸತ್ಯವನ್ನುತಮ್ಮಕಾವ್ಯದಲ್ಲಿ ನೀಡಿದ್ದಾರೆ.

ತಾಯೆ ಕನಿಮನೆಯೇ ನೀ, ಅಕ್ಕ ಅಕ್ಕರತೆಯೇ
ಬಾಯೆನ್ನತಂಗಿ ಬಾ ಮುದ್ದು ಬಂಗಾರವೇ
ನೀಯೆನ್ನ ಹೆಂಡತಿಯೊ ಮೈಗೊಂಡ ನನ್ನಿಯೋ
ಮಗಳೊ ನನ್ನೆದೆಯ ಮುಗುಳೊ?
ಈಯೆನ್ನಇರವಿಂಗೆಜೀವನದ ಬಾಳ್ವೆಕೆಗೆ
ಈಯುತ್ತ ಕೈಮೈಗಳಂ ಜೀವಭಾವದಿಂ
ಸ್ತ್ರೀಯೆ, ಕಾಪಾಡಿದೌ ಪಾಡಾಗಿ ಮೂಢನನು
ತಕ್ಕೈಸಿ ನೂರುತೆರದಿ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಅಕ್ಷಯಕುಮಾರ್. ಡಿ ಸಹಾಯಕ ಪ್ರಾಧ್ಯಾಪಕರುಕನ್ನಡ ವಿಭಾಗ ಶೇಷಾದ್ರಿ ಪುರಂಕಾಲೇಜುತುಮಕೂರು

How to cite this article:
ಅಕ್ಷಯಕುಮಾರ್. ಡಿ.*(2026).*ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀವಾದ. *Journal of Research and Development, 18(4(II)), 53–55. https://doi.org/10.5281/zenodo.19395380*

Quick Response Code:

Website:
https://jrdrvb.org/

DOI:
10.5281/zenodo.19395380

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಈ ಮೇಲೆನ ಸಾಲುಗಳಲ್ಲಿ ಹೇಳಿರುವ ಚಿಂತನೆಯಲ್ಲಿಗಂಡಸಾಗಿತನ್ನೆಲ್ಲ ಪುರುಷ ಪ್ರಧಾನ ಭಾವನೆಗಳನ್ನು ಬದುಗುತ್ತಿ.ಸ್ತ್ರೀಶಕ್ತಿಯನ್ನು ಅರಿತುಅಲ್ಲಿ ನೆಲೆಸಿರುವ ಕೋಮಲಾಂತಃಕರಣ ಮತ್ತುಜೀವಕೋಶಕ ಸತ್ವದಿಂದತಾನು ಪೂರ್ಣನಾಗಲು ಪ್ರಯತ್ನಿಸಿರುವುದು ಕಂಡುಬರುತ್ತದೆ.ಮಿಂಚಿನ ಹೊಳಪಿನ ಸೃಷ್ಟಿ ಹಾಗೂ ಜ್ಞಾನದ ನೆಲೆ ತಾಯಿಎಂದು ತಿಳಿದು 'ತಾಯೆ ಕನಿಮನೆಯೇ ನೀ' ಎಂದಿದ್ದಾರೆ.ಅವರಿಗೆತಾಯಿಎಂದರೆ ಬೆಳಕು ಮತ್ತುಜ್ಞಾನ. ಪ್ರೀತಿಯನ್ನು ಸದಾಒಂದಿರುವ ಅಕ್ಕನು ಅಕ್ಕರತೆಯ ಪ್ರತಿಮೂರ್ತಿ. ಪ್ರೀತಿಯತಂಗಿ ಮುದ್ದು ಬಂಗಾರ ವ್ಯಕ್ತಿ ಬೆಳೆದು ಯೌವನಸ್ಥ ನಾದಂತೆ ಹೆಣ್ಣನ್ನು ಹೆಂಡತಿಯಾಗಿಕಾಣುತ್ತಾನೆ ಆ ಹೆಂಡತಿಯೆಂಬುಗಳು ಸತ್ಯ, ಪ್ರೀತಿ, ವಿಶ್ವಾಸವನ್ನೇ ಮೈಕೊಂಡವಳು.ಅವರ ಪ್ರೀತಿಯ ಫಲ ಮಗಳು ಅವಳು ತಂದೆಯ ಮುಗುಳು ಆನಂದ ನನಗೆ ಎಂದಿದ್ದಾರೆ.

ಅಂಬಿಕೆ ಎಂಬವಳ ಹೃದಯಾಂಬರದಲ್ಲಿ
ತತ್ತಿಯನಿಟ್ಟಿತ್ತು ನವ ಮೇಘವು
ಆ ತಾಯಿ ಮಾತಾಯಿ ಈ ಬಾಯಿ ತುತ್ತಲ್ಲ
ಅವಳನ್ನು ಸ್ತುತಿಸಲುಎದೆ ಸಾಲದು
ಮೌನದಲ್ಲಿರುವದು, ಧರ್ಮಕೆ ಹೊರತೆಂದು
ಎದೆ ಮಾತು ಸಾಲಾಗಿ ಉಸಿರುವೆನು

ಈ ಸಾಲುಗಳಲ್ಲಿ ತಾಯಿ ನಂಬಿಕೆಯನ್ನುಕುರಿತು ಬೇಂದ್ರೆಯವರು ಸುಡಿಯಲೇಬೇಕಾದಧರ್ಮವನ್ನು ವ್ಯಕ್ತಪಡಿಸಿದ್ದಾರೆ.ಅವರು 'ಅಂಬಿಕಾತನಯದತ್ತ' ಕವನದ ಭಾವ ಸಂದರ್ಭದಲ್ಲಿ ನನ್ನಜೀವಯಾವ ಪಥವನ್ನು ಹಿಡಿದಿದೆ, ಏಕೆ ಇಳಿದಿದೆ ಎಂಬುದರಧ್ಯಾನದಿಂದ ಬಂದುದುಎಂದು ಹೇಳಿದ್ದಾರೆ. ತಾಯಿಯುಎದೆಹಾಲಿನ ಜೊತೆತನ್ನ ಮಾತಿನಿಂದಅದರ ತಿಳುವನ್ನು ಹೆಚ್ಚಿಸುತ್ತಾಳೆ. ಅದಕ್ಕೆ ದ್ವಿಜತ್ವವನ್ನು ನೀಡುತ್ತಾಳೆ ಎಂದು ಹಿಂದಿನ 'ತಾಯಿ' ಕವನದಿಂದ ತಿಳಿದಿದ್ದೇವೆ. ಅದರಂತೆತಾಯಿ ನಂಬಿಕೆಯನ್ನು ಮುದ್ದಿನೊಡನೆ ಮುದ್ದು ಮಾತು ಕಲಿಸಿ ಉಳಿಸಿ ನಲಿಸಿದೆ ನಿನ್ನ ತಿಳಿವ ಸಲಸಿದೆ ಎಂದಿದ್ದಾರೆ. ಹೇಗೆ ತಾಯಿಯಿಂದಕವಿಯಾಗಿರೂಪುಗೊಂಡ ಬೇಂದ್ರೆಯವರುತಾಯಿಯಜೀವನದ ಹೋರಾಟ ಬದುಕಿಗಾಗಿ ಅವಳು ಪಟ್ಟ ಪಾಡು ಅವಳು ತನ್ನ ಕರುಳಕುಡಿಗಾಗಿ ಜೀಸವೆಸಿದ ರೀತಿಯೇತನ್ನನ್ನುಕವಿಯಾಗಿ ಮಾಡಿದೆಎಂದು ಹೇಳಿಕೊಂಡಿದ್ದಾರೆ.

ಸಖೀಗೀತ, ಮನದೆನ್ನ ಮುಂತಾದ ಕವನಗಳಲ್ಲಿನ ಮಡದಿ ಕಲ್ಪನೆ

ಒಲವೆ ನಮ್ಮ ಬದುಕುಎಂದು ಸಾರಿದ ಬೇಂದ್ರೆಯವರ ಕವನಗಳು ಪತಿ –ಪತ್ನಿಯರ ಸ್ನೇಹಸಂಬಧದ, ಪರಸ್ಪರಅರಿತು ಬಾಳುವ, ಬದುಕಿನಲ್ಲಿ ನಗುತ್ತ ಬಾಳ್ವೆ ಮಾಡುವ, ಎದೆ ಹಿಗ್ಗಿಗಾಗಿ ಆಶಿಸುವ ಚಿಂತನೆಯನ್ನು ಹೊಂದಿವೆ. ಅವರುದಾಂಪತ್ಯದಚೌಕಟ್ಟಿನಲ್ಲಿ ಪ್ರೀತಿಯನ್ನುಅರಸುತ್ತಅದನ್ನು ಪ್ರೇಮಜ್ಯೋತಿಯನ್ನಾಗಿಸಿದ್ದಾರೆ.ಅವರುಅಧರ್ಮಕಾಮವು ಸಂಹಾರಿ, ಧರ್ಮಕಾಮವುಆತ್ಮವಿಹಾರಿ.ಎಂದು ನುಡಿದ್ದಿದ್ದಾರೆ.ಬೇಂದ್ರೆಯವರು ಸ್ತ್ರೀ–ಪುರುಷರೆನ್ನುವ ಭೇದಭಾವದದಂದೆಯು ಪ್ರಕೃತಿಯತಂತ್ರವಾಗಿದೆ.ಇಲ್ಲಿಯರಚನೆಯು ಈ ರೀತಿಯಲ್ಲಿದೆ.ಆದ್ದರಿಂದ ಮೇಲಿನಿಂದ ಭೂಮಿಗೆಗಿಳಿಯುವಾಗ ಸ್ತ್ರೀ –ಪುರುಷ ಬೇದದಕಲ್ಪನೆಯೇಇರುವುದಿಲ್ಲ.ಅದು ಸ್ತ್ರೀ –ಪುರುಷ ಎಂಬ ಕಲ್ಪನೆ ಮನುಷ್ಯನ ಮೆದುಳಿನಿಂದ ಬಂದಿದೆ.ಅದಕ್ಕೆ ಸ್ತ್ರೀ –ಪುರುಷಎಂಬುದುಕ್ಕಿಂತ ಬೇರೆಕಲ್ಪನೆಯೇ ಬರುವುದಿಲ್ಲ. ಮುಂದುವರೆದು ಸ್ತ್ರೀ–ಪುರುಷರುಗಂಡ –ಹೆಂಡತಿಯಾಗಿ ಬಾಳ್ವೆ ಮಾಡಲುತೊಡಗಿದಾಗ ಈ ಸಮಾನತತ್ವವನ್ನುಅರಿಯಬೇಕು.ಎಂದು ಬೇಂದ್ರೆಯವರುತಮ್ಮಕಾವ್ಯದಲ್ಲಿ ಸಾರಿದ್ದಾರೆ.ಅವರುತನ್ನ ಪತ್ನಿಯನ್ನುಜೀವದ ಗೆಳತಿ, ಸಖೀಎಂದುಕರೆದರು ಸಖ್ಯಭಾವದಆರಾಧಕರಾಗಿದ್ದಾರೆ.ಅವರು ಹೆಂಡತಿಯನ್ನು 'ನೀಯೆನ್ನ ಹೆಂಡತಿಯೂ ಮೈಗೊಂಡ ನನ್ನಿಯೋ 'ಎಂದು ಸತ್ಯ, ಪ್ರೀತಿ, ಶಾಂತಿಯೇ ಹೆಂಡತಿಎಂದಿದ್ದಾರೆ.ಗಂಡ ಹೆಂಡತಿಯ ಸ್ನೇಹದಚಿಗುರೊಡೆಯುವುದುಕಣ್ಣಿನ ಬೆಳಕಿನಲ್ಲಿ.ಪ್ರೀತಿ ಮೂಡಿ ಮನದಲ್ಲಿ ನೆಲೆಯೂರುವುದು ಮೊದಲುಕಣ್ಣಿ ನೋಟದಲ್ಲಿ.ಅದರ ಜೊತೆಜೊತೆಗೆ ಒಬ್ಬರನ್ನೊಬ್ಬರು ಅರಿಯುವ ಪ್ರಯತ್ನ ಸಾಗುತ್ತಿದೆ.ಅದನ್ನು ಬೇಂದ್ರೆಯವರು ಗಂಡಸು ಹೆಂಗಸಿಗೆ ಎಂಬ ಕವನದಲ್ಲಿ ಎದುರು ಬಂದರು ನಿಂತ ಕನ್ನಡಿಗಳ ರೂಪಕದಿಂದ ಸೃಷ್ಟಿಗೊಳಿಸಿದ್ದಾರೆ

ಕನ್ನಡಿಯ ಒಳಗೆ ಪೆರಗನ್ನಡಿಯ ಪಡಿನೆರಳು
ಕಣ್ಣಿದಿರುಗಣ್ಣಿನೊಳಗೊಬ್ಬರೊಬ್ಬರ ಗೊಂಬೆ
ಚಿನ್ನನಂತದ ಪಾಂಗು ನಮ್ಮಿಬ್ಬರೊಳಗೆ
ಹಬ್ಬಿಹುದುಅರಿದರಿದು ಹೆಣ್ಣೆ.

ಕನ್ನಡಿಯ ಒಳಗೆ ಎದುರು ಕನ್ನಡಿಯ ಪಡಿನೆಳಲು ಬಿದ್ದುಅದು ಪ್ರತಿಬಿಂಬಿಸುತ್ತದೆ.ಹಾಗೆಯೇಎದುರು ಬದುರು ನಿಂತಗಂಡು ಹೆಣ್ಣಿನ ಕಣ್ಣುಗಳಲ್ಲಿ ಅವರ ಗೊಂಬೆಗಳು ಮೂಡಿಅದು ಮೈಮನಸ್ಸಿನಲ್ಲೇಲ್ಲ ಚಿನ್ನವಾಗಿ ಹರಿದಾಡುತ್ತದೆ. ಹಾಗೆ ಹರಿದ ಭಾವಲಹರಿಯಲ್ಲಿಯೇಅವರುಒಬ್ಬರನ್ನೊಬ್ಬರುಇಟ್ಟು ತಿಳಿಯುತ್ತಾರೆ ಎಂದು ಹಬ್ಬಿಹುದುಅರಿದರಿದು ಹೆಣ್ಣೆ. ಎಂದಿದ್ದಾರೆ ಈ ಬಗೆಯ ಬಿಂಬ ಪ್ರತಿಬಿಂಬದಲ್ಲಿದಾಂಪತ್ಯದಅನಂತತೆಯನ್ನು ದರ್ಶಿಸುತ್ತಾ ಅದು ವಿಶ್ವ ವ್ಯಾಪಿ ಎಂಬುದು ಮನನವಾಗುವಂತೆ ಮಾಡಿದ್ದಾರೆ.ಅಂತರಂಗವುಕನ್ನಡಿಯಾದರೆಜೀವನವೇ ಚೆಲುವು ಎಂದುಜೀಬ್ರಾನ್ ಹೇಳಿರುವಂತೆ ಗಂಡ ಹೆಂಡತಿಯರುಅಂತರಂಗದಲ್ಲಿ ಬೆಳಕಾಗಿ ಚೆಲುವಾಗುತ್ತಾರೆ ಎಂಬ ತತ್ವವನ್ನು ಬೇಂದ್ರೆ ಕಾವ್ಯವಾಗಿಸಿದ್ದಾರೆ

ನನ್ನ ನಿನ್ನಯ ಮನದಜೊನ್ನ ಮಗ್ಗದ ಮೇಲೆ
ನಿನ್ನ ಮತ್ತೆನ್ನೆದೆಯ ಕಸೆಗೆ ಕಸೆಯನುಗೊಳಿಸಿ
ನನ್ನಿ ನೇಕಾರಿತಿಯು ಮುಗಿಯದಿಹ
ಬಟ್ಟೆಯನ್ನ ನವರತ ನೇಯುತಿಹಳು

ಈ ಕಾವ್ಯ ಭಾಗವನ್ನು ವಿವರಿಸುತ್ತಾಎಂದು ಸರ್ವವ್ಯಾಪ್ತಿಯಾದ, ಆನಂಗವಾದ, ಮಹತ್ವದ ವಸ್ತು.ದ್ವಿಲಿಂಗವಾಗಿ ಪುರುಷ ಪ್ರಕೃತಿ ಎನಿಸಿಕೊಂಡು ಮನೆಮನೆಗೆ ಬಂದು ನಡೆಸಿಕೊಂಡಿತೋ ಅಂದಿನಿಂದ ಇಂದಿನವರೆಗೆ ಈ ಮುಗಿಯದಿಹ ಬಟ್ಟೆಯನ್ನವರು ನೇಯುತಿಹರು ನನ್ನಿ ನೇಕಾರರುಎಂದು ಹೇಳಿದ್ದಾರೆ. ಬೇಂದ್ರೆಯವರುತನ್ನ ಮತ್ತು ತನ್ನ ಹೆಂಡತಿಯ ಆಂತರಿಕವಾದ ಏಕಾಂತದ ಒಲುಮೆಯನ್ನು ಲೋಕಾಂತವಾಗಿ ಹಾಡುವಾಗಒಂದು ಬಿಗುವಿನಲ್ಲಿ, ಸಂಸ್ಕೃತದರೀತಿಯಲ್ಲಿ, ಆಹ್ಲಾದಮಯವಾಗುವಂತೆ ರಚಿಸಿರುವುದು ಅವರ ಪರಿಣಿತ ಮನಸ್ಸಿಗೆ ಸಾಕ್ಷಿಯಾಗಿದೆದಾಂಪತ್ಯದಲ್ಲಿ ಕಾಮ ಸಹಜ, ಅದು ಪ್ರೇಮವಾಗಿ ಅರಳಬೇಕು.ಲೈಂಗಿಕತೆಯನ್ನು ಧೂರೀಕರಿಸಬಾರದು, ಅದರ ಕಾವಿನಲ್ಲಿ ವಿಕಾಸಗೊಳ್ಳುತ್ತಾ ಉದಾತ್ತದೃಷ್ಟಿಯನ್ನು ಪಡೆದುಅದನ್ನುಜಗತ್ತಿಗೆ ದರ್ಶಿಸಬೇಕು.ಮನೆ ಒಡತಿಇಲ್ಲದೆ ಮಾಡಿದೆಇಲ್ಲದೆಎಂಥ ಶಕ್ತಿ ಇದ್ದವನಿಗೂರಮಣೀಯತೆ ಬರಲಾರದು ಎಂಬ ಸ್ಪಷ್ಟಆಲೋಚನೆಯನ್ನು ಹೊಂದಿದ ಬೇಂದ್ರೆಯವರು ಈ ನೆಲದ ಬದುಕನ್ನು ಸವಿದುಆಧ್ಯಾತ್ಮಿಕತೆಯಚಿಂತನಕ್ಕೆ ಮನಸ್ಸುಕೊಟ್ಟುರಸಋಷಿಯಾದರು.ಶ್ರೀ ಮಾತಾಅವರು ಈ ನೆಲದ ಜೀವಿಗಳ ಸಹಜಆಕಾಂಕ್ಷೆಅರಿತು ನುಡಿದಚಿಂತನೆ ಬೇಂದ್ರೆಯವರ ನಿಲುವಿಗೆ ಸಹಕಾರಿಯಾಗಿಅವರು ಪ್ರೇಮಆರಾಧಕರಾಗಲುಇಂಬುಗೊಟ್ಟಿತುಎಂದು ಹೇಳಬಹುದು.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಉಪಸಂಹಾರ :–

ಪ್ರಕೃತಿ ಪ್ರೀತಿ, ಜೀವಪ್ರೀತಿ ಹಾಗೂ ಜನಪದ ಸೊಗಡಿನಿಂದಕೂಡಿರುವ ಬೇಂದ್ರೆಕಾವ್ಯದ ಮೂಲ ಸೆಲೆಯೇ ಹೆಣ್ಣು' ಬದುಕಿನಲ್ಲಿ ನೊಂದು ಬೆಂದವರಿಗೆ ಬೇಂದ್ರೆ ಕಾವ್ಯಗಳ ಅರಿವು ಸಾಧ್ಯ. ಪದಗಳ ಜತೆ ಪದ ಜೋಡಿಸಿ ಕಾವ್ಯದ ಮೇಲಿನ ಪ್ರಭುತ್ವ ಹೆಚ್ಚಿಸುವಅವರ ಸಾಹಿತ್ಯದಲ್ಲಿ ಪ್ರತಿ ವ್ಯಕ್ತಿಯ ಮನಸ್ಸುಅವರಿಸುವ ಶಕ್ತಿ ಇದೆ' ಎಂದು ಬಣ್ಣಿಸಿದರು. 'ಪದಗಳನ್ನು ಹಿಡಿದುಆಡಿಸುವ ಶಕ್ತಿ ಯಾವ ಸಾಹಿತ್ಯದ ನಾದಗುಣದಲ್ಲಿ ಇರುತ್ತದೋ ಅದುಅದ್ಭುತವಾಗಿ ಕಾಣುತ್ತದೆ ಇದು ಬೇಂದ್ರೆಅವರ ಸಾಹಿತ್ಯದಲ್ಲಿಅಡಗಿದೆ.ಇದರೊಂದಿಗೆ ಸಹಜ ಹಾಸ್ಯಪ್ರಜ್ಞೆ ರೂಢಿಸಿಕೊಂಡಿದ್ದ ಅವರ ಭಾಷೆಯಗುಣ ವಿಶಿಷ್ಟವಾದುದು' ಜೀವದ ಪ್ರೀತಿಯನ್ನು ತಮ್ಮ ಕಾವ್ಯದಲ್ಲಿ ಬಣ್ಣಿಸಿದ ಬೇಂದ್ರೆತಾಯಿಯ ನೋವನ್ನು ತಂದೆಯಾಗಿ ಸ್ವೀಕರಿಸಿ ಅನುಭಾವಿಸಿದ ಪರಿಯನ್ನು ಕವನದಲ್ಲಿತೆರೆದಿಟ್ಟರು.ಹಾಗಾಗಿ ಅವರಕಾವ್ಯದಲ್ಲಿ ಸಹಜವಾಗಿ ಸ್ತ್ರೀವಾದ ಚಿಂತನೆಅಡಗಿದೆ' ಎಂದರು. 'ತಾಯಿ, ಹೆಂಡತಿ, ಪ್ರೇಯಸಿ... ಹೀಗೆ ಹೆಣ್ಣಿನ ಹಲವು ಪ್ರತಿಮೆಗಳನ್ನು ತಮ್ಮಕಾವ್ಯದಲ್ಲಿಅನಾವರಣ ಮಾಡಿದ ಬೇಂದ್ರೆ 'ಒಲವು' ಪದದ ಬಳಕೆ ಮೂಲಕ ವೈಶಿಷ್ಟ್ಯ ಸಂದೇಶವನ್ನು ಸಾರುವ ಪ್ರಯತ್ನ ನಡೆಸಿ ಯಶಸ್ಸುಕಂಡವರು'.

ಪರಾಮರ್ಶನ ಗ್ರಂಥಗಳು:–

1. ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ ಒಂದುಅಧ್ಯಯನ –ಸಂಪಾದಕರು –ಡಾ. ಜಿ. ಕೃಷ್ಣಪ್ಪ
2. ಬೇಂದ್ರೆದ. ರಾ. (1990), ಸಖೀಗೀತ, ಶ್ರೀಮಾತಾ ಪ್ರಕಾಶನ. ಧಾರವಾಡ.
3. ಬೇಂದ್ರೆದ. ರಾ. (1989). ಗರಿ.ಶ್ರೀಮಾತಾ ಪ್ರಕಾಶನ, ಧಾರವಾಡ.
4. ಬೇಂದ್ರೆದ. ರಾ. (1989). ಗಂಗಾವತರಣ.ಶ್ರೀಮಾತಾ ಪ್ರಕಾಶನ. ಧಾರವಾಡ.
5. ಬೇಂದ್ರೆದ. ರಾ. (1974). ಸಾಹಿತ್ಯದ ವಿರಾಟ್ ಸ್ವರೂಪ. ಸಮಾಜ ಪುಸ್ತಕಾಲಯ.ಧಾರವಾಡ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಬರಗೂರು ರಾಮಚಂದ್ರಪ್ಪನವರ ಒಂದು ಊರಿನ ಕಥೆ ಕಾದಂಬರಿಯ ಜಾತಿ ರಾಜಕಾರಣ

ಮಲ್ಲಿಕಾರ್ಜುನ ಕಕಮರಿ[1] ಡಾ. ಮಹೇಶ ಗಾಜಪ್ಪನವರ[2]

[1]ಸಂಶೋಧನಾ ವಿದ್ಯಾರ್ಥಿ
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ.

[2]ಸಹ ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು
ಅಧ್ಯಕ್ಷರು ಶಾಸ್ತ್ರೀಯ ಕನ್ನಡ ಭಾಷಾಧ್ಯಯನ ಸಂಸ್ಥೆ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ.

Manuscript ID:
JRD -2026-180417
ISSN: 2230-9578
Volume 18
Issue 4(II)
Pp.56-59
April 2026
Submitted:08 Mar. 2026
Revised:24 Mar. 2026
Accepted:10Apr.2026
Published:30 April 2026

ಸಾರಲೇಖ :

ನಮ್ಮ ಭಾರತವನ್ನು ನಾವು ಸಾರ್ವಭೌಮ, ಪ್ರಜಾಸತ್ತಾತ್ಮಕ, ಜಾತ್ಯಾತೀತ ರಾಷ್ಟ್ರವೆಂದು ಘೋಷಿಸಿಕೊಂಡಿದ್ದೇವೆ. ಆದರೆ ನಮ್ಮಲ್ಲಿ ನಿಜಕ್ಕೂ ಇರುವುದು ಜಾತಿ ಅತೀತ ಭಾರತ. ಭಾರತೀಯ ರಾಜಕಾರಣದಲ್ಲಿ ಜಾತಿ ವ್ಯವಸ್ಥೆಯು ಅತ್ಯಂತ ಪ್ರಬಲ ಅಂಶವಾಗಿದ್ದು, ಚುನಾವಣಾ ಟಿಕೆಟ್ ಹಂಚಿಕೆ, ಮತ ಬ್ಯಾಂಕ್ ರಚನೆ ಮತ್ತು ಸಚಿವ ಸಂಪುಟ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಜಾತಿ ಆಧಾರಿತ ಒಕ್ಕೂಟಗಳು ಮೀಸಲಾತಿಗಾಗಿ ಬೇಡಿಕೆ ಮತ್ತು ಸಾಮಾಜಿಕ ನ್ಯಾಯದ ಭರವಸೆಗಳು ಜಾತಿ ರಾಜಕಾರಣದ ಮುಖ್ಯರೂಪಗಳಾಗಿವೆ. ಇದು ಸಮಾಜದಲ್ಲಿ ಒಗ್ಗಟ್ಟನ್ನು ಮೂಡಿಸಿದರೂ ಜಾತಿ ಆಧಾರಿತ ತಾರತಮ್ಯ ಮತ್ತು ಸಂಘರ್ಷಗಳಿಗೂ ಕಾರಣವಾಗುತ್ತಿದೆ. ಆದ್ದರಿಂದ ಬರಗೂರು ರಾಮಚಂದ್ರಪ್ಪನವರ ಬಹುತೇಕ ಬರಹಗಳು ಶ್ರಮ ಸಂಸ್ಕೃತಿಯ ಪರವಾಗಿ ಇವೆ. ಸಮಾಜ ಎಂಬುದು ವರ್ಗ ರಹಿತ, ವರ್ಣರಹಿತ, ಜಾತಿ ರಹಿತ, ಅಸಮಾನತೆ ಇಲ್ಲದ ಕುವೆಂಪುರವರ ಚಿಂತನೆಯಂತೆ 'ಸರ್ವ ಜನಾಂಗದ ಶಾಂತಿಯ ತೋಟ'ವಾಗಬೇಕು. ಆದರೆ ಮೇಲ್ವರ್ಗದವರು ದಬ್ಬಾಳಿಕೆ, ಶೋಷಣೆ ಮಾಡಿದಾಗ ಬಂಡಾಯದ ಮನೋಭೂಮಿಕೆ ಅನಿವಾರ್ಯವಾಗಿ ಸಿದ್ಧವಾಗುತ್ತದೆ. ಬಂಡಾಯ ಎಂಬುದು ಸಮಾಜ ಬದಲಾವಣೆಯ ಆಶಯವಾಗಿ ರೂಪುಗೊಂಡಿದೆ. ಕಾರಣ ಬರಗೂರು ರಾಮಚಂದ್ರಪ್ಪರವರ ಒಂದು ಊರಿನ ಕಥೆ ಕಾದಂಬರಿ ಹಾಗೂ ಸಿನಿಮಾದ ಒಟ್ಟಾರೆ ಆಶಯ ಶೋಷಣಾ ಸಮಾಜದಿಂದ ಮುಕ್ತರಾಗಲು ನಮ್ಮ ಅವಕಾಶಕ್ಕಾಗಿ ಹಕ್ಕೊತ್ತಾಯ ಮಾಡುವುದಾಗಿದೆ. ಇಲ್ಲಿ ಪಟೇಲ, ಬಸವಯ್ಯ, ಜೋಯಿಸ ಎಂಬ ಅಧಿಕಾರಶಾಹಿ ಹಾಗೂ ಪುರೋಹಿತಶಾಹಿ ಬಂಧನದಿಂದ ಕಳಚಿಕೊಂಡು ಅವರಿಗೆ ಸರಿ ಸಮಾನರಾಗಿ ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಳ್ಳಲು ಅವಕಾಶಕ್ಕಾಗಿ ಬಂಡಾಯವೇಳುವ ಹಾಗೆಯೇ ಹೊಸತನಕ್ಕೆ ತೆರೆದುಕೊಳ್ಳುವ ಮನಸ್ಸು ಕಾಣುತ್ತೇವೆ. ಒಟ್ಟಾರೆಯಾಗಿ ಬರಗೂರು ರಾಮಚಂದ್ರಪ್ಪನವರ ಒಂದು ಊರಿನ ಕಥೆಯಲ್ಲಿ ಬಂಡಾಯದ ಜೊತೆಗೆ ಜಾತಿ ರಾಜಕಾರಣ ವ್ಯವಸ್ಥಿತವಾಗಿ ನಡೆದದ್ದು, ಇದು ಅಂದು– ಇಂದು –ಎಂದೆಂದೂ ಮುಗಿಯದ ಜಾತ್ಯತೀತ ರಾಷ್ಟ್ರದಲ್ಲಿ ಜಾತಿಯ ವೈಭವೀಕರಣ ಮೊಳಗುವ ಕರಾಳ ಸತ್ಯದ ಪ್ರತಿಮಾ ರೂಪದ ನಿರೂಪಣೆಯಾಗಿದೆ.

ಮುಖ್ಯ ಪದಗಳು :ಊರು, ಕೋಟೆ, ಜೋಯಿಸ, ಪಟೇಲ, ದೊಣೆ, ಗಂಗೀಹಳ್ಳ, ದಲಿತ, ನಾಯ್ಕರ್, ಹಟ್ಟಿ, ಚಾವಡಿ, ಪಂಚಾಯ್ತಿ, ನ್ಯಾಯಸ್ಥರು, ಸ್ತಂಭ, ಹಜಾರ, ಜ್ಯೋತಿಷ್ಯ, ತಳವಾರ, ಕುರುಬ, ಎಡಗೈನವರು, ಬಲಗೈನವರು, ಮಂಟಪ.

ಬರಗೂರು ರಾಮಚಂದ್ರಪ್ಪನವರ ಒಂದು ಊರಿನ ಕಥೆ ಇದು ಒಂದು ಅವರ ಕಾದಂಬರಿಯೂ ಹೌದು ಜೊತೆಗೆ ಅವರೇ ಚಿತ್ರಕಥೆ, ಸಂಭಾಷಣೆ, ಸಾಹಿತ್ಯ, ನಿರ್ದೇಶನ ಮಾಡಿದ ಚಲನಚಿತ್ರ ಕೂಡ ಹೌದು. ಬರಗೂರರ ಒಂದು ಊರಿನ ಕಥೆ ಇದು ಎಲ್ಲ ಊರುಗಳಿಗೂ ಅನ್ವಯಿಸುವ ಯಜಮಾನ್ಯ ಸಂಸ್ಕೃತಿ ಹಾಗೂ ಅದಕ್ಕೆ ತೋರುವ ಪ್ರತಿರೋಧದ ಪ್ರತಿರೂಪವಾಗಿದೆ. ಈ ಕಥೆಯಲ್ಲಿ ಕೆಂಚಕ್ಕ ಮೇಲ್ವರ್ಗದವರು ಬಳಸುವ ನೀರನ್ನು ಬಳಸಿದಳು ಎಂಬ ಒಂದೇ ಒಂದು ತಪ್ಪಿಗೆ ಬಸಿರು ಹೆಣ್ಣು ಮಗಳು ಎಂಬ ಕರುಣೆ ಇಲ್ಲದೆ ಬೆತ್ತದ ಏಟು ಕೊಡುವರು. ಏಟಿನ ನೋವಿಗೆ ನರಳಿ ನರಳಿ ಒಂದು ದಿನ ಆಕೆ ತೀರಿ ಹೋಗುತ್ತಾಳೆ. ಇದು ಧರ್ಮದ ಹೆಸರಿನಲ್ಲಿ ನಡೆದ ಕೊಲೆಯಾದರೂ ಕೂಡಾ ಯಾರು ಪ್ರತಿರೋಧಿಸುವುದಿಲ್ಲ. ಊರಿನ ಯಾವುದೇ ವಿಷಯಗಳು ಇರಲಿ ಅದನ್ನು ನ್ಯಾಯ ಮಾಡುವ ಅಧಿಕಾರ ಇರುವುದು ಮೂವರಿಗೆ ಮಾತ್ರ. ಅವರು ಪಟೇಲ ಅಂದರೆ ಊರಿನ ಗೌಡ ತಿಮ್ಮೇಗೌಡ, ಬಸವಯ್ಯ , ಜೋಯಿಸ. ಈ ಮೂರೇ ಜನ ಊರಿನ ನ್ಯಾಯಸ್ಥರು. ಈ ಊರಿಗೆ ಒಮ್ಮೆ ರಾಮ ಸೀತೆಯರು ತಮ್ಮ ವನವಾಸದ ಅವಧಿಯಲ್ಲಿ ಬಂದಿದ್ದರು. ಬೆಟ್ಟದ ಮೇಲೆ ವಾಸವಾಗಿರುವ ಸೀತಾದೇವಿಗೆ ಕೆಳಗೆ ಹರಿಯೋ ಗಂಗೀಹಳ್ಳದಲ್ಲಿ ಸ್ನಾನ ಮಾಡಿ ಬರೋದು ಪ್ರಯಾಸವಾಯಿತು. ಆಗ ಶ್ರೀರಾಮಚಂದ್ರ ಸೀತೆಗಾಗಿ ಬೆಟ್ಟದ ಮೇಲೆ ನೀರು ಬೇಕಾದ್ದರಿಂದ ಹಾಸು ಬಂಡೆಗೆ ಬಾಣ ಬಿಟ್ಟು ಬಂಡೆ ಮಧ್ಯದಲ್ಲಿ ಸೀಳಿ ನೀರಿನ ದೊಣೆಯಾಯಿತು. ಅಲ್ಲಿ ಸೀತೆ ಸ್ನಾನ ಮಾಡಿದಳು, ಆದ್ದರಿಂದ ಇದು ಸೀತಮ್ಮೋರ ದೊಣೆಯಾಗಿದೆ. ಈ ದೊಣೆ, ಆ ಹಳ್ಳ ಅತ್ಯಂತ ಪವಿತ್ರ. ಅದರಲ್ಲಿ ಸ್ನಾನ ಮಾಡಿದರೆ,

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಮಲ್ಲಿಕಾರ್ಜುನ ಕಕಮರಿ, ಸಂಶೋಧನಾ ವಿದ್ಯಾರ್ಥಿ, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ.

How to cite this article:
ಮಲ್ಲಿಕಾರ್ಜುನ ಕಕಮರಿ ಡಾ. ಮಹೇಶ ಗಾಜಪ್ಪನವರ.*(2026).*ಬರಗೂರು ರಾಮಚಂದ್ರಪ್ಪನವರ ಒಂದು ಊರಿನ ಕಥೆ ಕಾದಂಬರಿಯ ಜಾತಿ ರಾಜಕಾರಣ. *Journal of Research and Development, 18(4(II)), 56–59.*
https://doi.org/10.5281/zenodo.19395528

Quick Response Code:
Website: https://jrdrvb.org/
DOI: 10.5281/zenodo.19395528

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ನೀರು ಕುಡಿದರೆ ಪುಣ್ಯ ಪ್ರಾಪ್ತಿಯಾಗುತ್ತದೆ. ಆದರೆ ಇದು ಮೇಲ್ವರ್ಗದವರಿಗೆ ಮಾತ್ರ, ಕೆಳವರ್ಗದವರಿಗೆ ಇಲ್ಲ. ಕೆಳವರ್ಗದವರಿಗೆ ಪವಿತ್ರ ನೀರು ಕೂಡಾ ವಿಷವಾಗಿರುವುದು ವ್ಯವಸ್ಥೆಯ ಕರಾಳ ರೂಪದ ಜ್ವಲಂತ ಸಾಕ್ಷಿ.

ಈ ಊರಲ್ಲಿ ಬ್ರಾಹ್ಮಣರು, ವೀರಶೈವರು, ದಲಿತ ಎಡಗೈನವರು, ದಲಿತ ಬಲಗೈನವರು, ನಾಯ್ಕರ್ ರವರು ಹಾಗೂ ಕುರುಬರು ಪ್ರಧಾನ ಸಂಖ್ಯೆಯಲ್ಲಿ ಇರುವವರಾಗಿದ್ದರು. ಶಿಕ್ಷಿತರಾಗಿದ್ದ ರಾಮು ಹಾಗೂ ಹನುಮಯ್ಯ ವ್ಯವಸ್ಥೆಯ ವಿರುದ್ಧ ಧ್ವನಿಯೆತ್ತಲು ಹೋಗಿ ಕೊನೆಗೆ ತಮ್ಮ ಸ್ವಹಿತಾಸಕ್ತಿಗಾಗಿ ಜಾತಿ ರಾಜಕಾರಣಕ್ಕೆ ಒಳಗಾಗುತ್ತಾರೆ. ದಲಿತ ರಾಮು ಮಾರಜ್ಜನ ಮಗ, ಮಾರಜ್ಜ ಚಪ್ಪಲಿ ಹೊಲಿಯುವ ಕಾಯಕದವನು. ಇವನಿಗೆ ಮಗನನ್ನು ಓದಿಸುವ ಶಕ್ತಿಯಿಲ್ಲ, ಭೈರಪ್ಪನೆ ಈತನನ್ನು ವಿದ್ಯಾಭ್ಯಾಸಕ್ಕಾಗಿ ಪಟ್ಟಣಕ್ಕೆ ಕಳುಹಿಸಿದ್ದನು. ತನ್ನ ಮಗಳಾದ ಪುಟ್ಟಿಯನ್ನು ರಾಮುವಿಗೆ ಕೊಟ್ಟು ಮದುವೆ ಮಾಡಬೇಕೆಂದು ಬಯಸಿದ್ದನು. ಆದರೆ ಪಟ್ಟಣಕ್ಕೆ ಹೋಗಿ ಕೆಟ್ಟ ರಾಮು ಈ ಊರಿನ ನಾಯ್ಕರ್ ಕೃಷ್ಣಪ್ಪನ ಮಗಳು ಗೌರಿ ಜೊತೆ ಸೇರಿ ಪ್ರಣಯದಾಟ ಆಡುವಾಗ ಊರ ಜನರ ಕೈಗೆ ಸಿಕ್ಕು ಪಂಚಾಯತಿಯ ವಿಷಯ ವಸ್ತುವಾಗುತ್ತಾನೆ. ಜನರೆಲ್ಲರೂ ಗೌಡರಿಗೆ ಈ ವಿಷಯ ತಿಳಿಸಲು ಹೋದಾಗ ಅವರು ಊರಲ್ಲಿ ಇರುವುದಿಲ್ಲ. ಇದನ್ನೇ ನೆಪ ಮಾಡಿಕೊಂಡು ಬಸವಯ್ಯ ತಾನೇ ವಿಚಾರಣೆ ಮಾಡಿ ಊರಿನ ಪ್ರಮುಖ ನಿರ್ಧಾರ ತನ್ನಿಂದಲೇ ಆಗಬೇಕು; ಗೌಡನ ಹಸ್ತಕ್ಷೇಪ, ಅಧಿಕಾರ ಮೊಟಕುಗೊಳಿಸಬೇಕೆಂದು ನಿರ್ಧರಿಸಿ ರಾಮುವನ್ನು ತಮ್ಮ ಕರೆಂಟು ರೂಮಿನಲ್ಲಿ ಕೂಡಿ ಹಾಕಲು ಹೇಳಿದರು.

ಬಸವಯ್ಯ ತನ್ನ ರಾಜಕೀಯ ಸ್ಥಾಪಿಸುವುದಕ್ಕಾಗಿ ಗೌಡನ ಪ್ರಭಾವ ತಗ್ಗಿಸುವುದಕ್ಕಾಗಿ ಜೋಯಿಸರ ಹತ್ತಿರ ಬಂದು ನಾವೇ ನ್ಯಾಯ ನಿರ್ಣಯ ಮಾಡೋಣಾ ಎನ್ನುತ್ತಾನೆ. ಆಗ ಜೋಯಿಸರು "ನಿಮ್ಮ ಆತುರ ಅರ್ಥವಾಗುತ್ತೆ ಬಸವಯ್ನೋರೆ, ಇಂಥ ವಿಷಯ ರಾತ್ರಿವರ್ಗೂ ತಳ್ಳಿದರೆ ಇನ್ನೂ ಏನೇನಾಗುತ್ತೋ ಅಂತ ಭಯ ಇರಬೇಕು ನಿಮಗೆ; ಅದು ಸರಿ; ಆದರೂ ಗೌಡರಿಲ್ಲದೆ ನ್ಯಾಯ ಮಾಡೋದು ಇಷ್ಟು ದಿನದ ಸಂಪ್ರದಾಯಕ್ಕೆ ವಿರುದ್ಧ; ಗೌಡರೂ ಇರಬೇಕು. ಮುಖ್ಯ ಅವರು ತಾನೇ ಇರಬೇಕಾದ್ದು?" (ಒಂದು ಊರಿನ ಕಥೆ, ಪುಟ ಸಂಖ್ಯೆ–12) ಎಂದು ಹೇಳಿದಾಗ ಬಸವಯ್ಯ ಒಳಗೊಳಗೆ ಜೋಯಿಸನನ್ನು ಹೀಗಳೆದು; ಗೌಡರು ಬಂದ ಮೇಲೆನೇ ತೀರ್ಮಾನ ಮಾಡೋಣ ಎಂದು ಸಮ್ಮತಿ ಸೂಚಿಸುತ್ತಾನೆ.

ಜೋಯಿಸನಿಗೂ ಬಸವಯ್ಯನ ಕಂಡರೆ ಒಳಗೊಳಗೆ ದ್ವೇಷ. ಯಾಕೆಂದರೆ ಊರಲ್ಲಿ ಜೋಯಿಸರು ಹೇಳಿದ್ದೇ ವೇದವಾಕ್ಯವಾಗಿತ್ತು. ಪುರಾಣ ಪಠಣ, ಜ್ಯೋತಿಷ್ಯ ಮುಂತಾದ ಜನತೆಯ ನಂಬಿಕೆಯ ಬೇರುಗಳಿಗೆ ಗೊಬ್ಬರ, ನೀರು ಹಾಕುವಷ್ಟು ಶಕ್ತಿ ಇದ್ದವರು ಜೋಯಿಸರು. ಊರಿನ ಧಣಿ ಅಂತ ಹೆಸರು ಪಡೆದ ಪಟೇಲ ಮನೆತನದವರೂ ಇದೊಂದು ವಿಷಯದಲ್ಲಿ ಯಾವಾಗಲೂ ಜೋಯಿಸರಿಗೆ ವಿಧೇಯರಾಗಿದ್ದರು. ಹಾಗೆಯೇ ಬಸವಯ್ಯನವರೂ ಈ ಊರಿನಲ್ಲಿ ಬುದ್ಧಿವಂತರೆಂದೇ ಹೇಳಬೇಕು. ಶಾಸ್ತ್ರ, ಪುರಾಣ ಓದಿದ್ದಾರೆ. ಆದರೆ ಭವಿಷ್ಯ ಹೇಳೋದು ಗೊತ್ತಿರಲಿಲ್ಲ. ಈಗ ಅದನ್ನು ಕಲಿತು ಜೋಯಿಸರಷ್ಟು ಮಡಿ ಮೈಲಿಗೆ ತೋರಿಸದೆ ಎಲ್ಲರನ್ನು ತಮ್ಮ ಹಜಾರದಲ್ಲಿ ಆದರದಿಂದ ಕೂಡಿಸಿ ಕೈ ಹಿಡಿದು ಭವಿಷ್ಯ ಹೇಳೋದು, ಅವರ ಜೊತೆ ಚೆನ್ನಾಗಿ ಮಾತನಾಡುವುದು, ಹೆಗಲ ಮೇಲೆ ಕೈ ಹಾಕುವುದು, ಈ ಎಲ್ಲ ವರ್ತನೆಗಳಿಂದ ಊರಲ್ಲಿ ಎಲ್ಲ ಜನಾಂಗದವರ ಪ್ರೀತಿ, ಗೌರವಗಳಿಗೆ ಪಾತ್ರರಾಗಿದ್ದು, ಊರಿನ ಗೌಡ ಹಾಗೂ ಜೋಯಿಸನ ಮತ್ಸರಕ್ಕೆ ಕಾರಣವಾಗಿತ್ತು.

ಹಾಗೆಯೇ ಗೌಡನಿಗೆ ಬಸವಯ್ಯನ ಮೇಲೆ ಒಳಗೊಳಗೆ ಕುದಿಯುವ ಕೋಪವಿತ್ತು. ಈ ಹಿಂದೆ ಗೌಡರ ಮನೆಯ ಹಜಾರವೇ ನ್ಯಾಯ ಪಂಚಾಯತಿ ಕಟ್ಟೆಯಾಗಿತ್ತು. ಊರಿನ ಸಮಸ್ಯೆಗಳ ಪರಿಹಾರ, ಜಗಳಗಳ ತೀರ್ಮಾನ, ಪ್ರತಿಯೊಂದು ಗುರುತರ ವ್ಯವಹಾರವೂ ಅಲ್ಲಿಯೇ ನಡೆಯುತ್ತಿತ್ತು. ಮುಂದೆ ಊರಲ್ಲಿ ಗ್ರಾಮ ಪಂಚಾಯಿತಿ ಕಚೇರಿ ಕಟ್ಟಡವಾದಾಗ ನ್ಯಾಯ ಪಂಚಾಯಿತಿಯು ಅಲ್ಲೇ ಅದರ ದೊಡ್ಡ ಕಂಬಗಳ ವಿಶಾಲ ಚಾವಡಿಯ ಮೇಲೆ ನಡೆಯಬೇಕು ಎಂಬುದು ಎಲ್ಲರ ಅಭಿಪ್ರಾಯವಾಗಿತ್ತು. ಆದರೆ ಹೇಳುವ ಧೈರ್ಯ ಯಾರಿಗೂ ಇರಲಿಲ್ಲ. ಆಗ ಬಸವಯ್ಯನೇ ಗೌಡನಿಗೆ "ನೋಡಿ ಗೌಡ್ರೆ, ಈಗ ಕಾಲ ಬದಲಾಗಿದೆ. ಅದು ನಿಮ್ಗೂ ಗೊತ್ತಿದೆ. ಯಾರ್ದಾದ್ರು ಒಬ್ಬರು ಮನೇತಾವ ನಡಿಬೇಕು ನ್ಯಾಯ? ಎನ್ನುವುದು ಸರಿಯಲ್ಲ. ಅಂದ್ರೆ ನಾನು ಗೌಡ್ರು ಪ್ರತಿಷ್ಠೆ ಕುಗ್ಗಬೇಕು ಅಂತಿಲ್ಲ. ಅವ್ರ ಮನೆತನಕ್ಕಿರೊ ಗೌರವ ಇದ್ದೇ ಇರುತ್ತೆ. ಅದಕ್ಕೆ ನ್ಯಾಯ ಪಂಚಾಯ್ತಿ ಇಲ್ಲೇ ಮಾಡೋದ್ ಮಾತ್ರ ಮುಖ್ಯ ಅಲ್ಲ; ಇರೋ ಮಾನ ಎಲ್ಲೋಗುತ್ತೆ ಹೇಳಿ ಮತ್ತೆ? ಹೇಗಿದ್ದರೂ ಅದು ಗ್ರಾಮ ಪಂಚಾಯಿತಿ ಆಫೀಸು. ಅಲ್ಲೇ ಎಲ್ಲಾ ನ್ಯಾಯ ತೀರ್ಮಾನ ನಡೀಲಿ." (ಅದೇ, ಪುಟ ಸಂಖ್ಯೆ–7) ಎಂದು ಹೇಳಿ ಗೌಡ ಒಳಗೊಳಗೆ ಕುದಿಯುವಂತೆ ಮಾಡಿದ್ದರು. ಆಗಿನಿಂದ ಗೌಡನಿಗೆ ಬಸವಯ್ಯನ ಕಂಡರೆ ಅಷ್ಟಕ್ಕಷ್ಟೇ.

ಈ ಇಬ್ಬರ ಒಳ ಕೋಪ, ತಾವೇ ಹೆಚ್ಚು ಎಂದು ಭಾವಿಸುವ ಗುಣ ಊರೋಳಗೆ ಜಾತಿ ರಾಜಕಾರಣಕ್ಕೆ ಅವಕಾಶ ಮಾಡಿಕೊಟ್ಟಿತು. ಈ ನಡುವೆ ಪಟ್ಟಣದಿಂದ ಕಲಿತು ಬಂದಿದ್ದ ರಾಮು 'ಬಸವೇಶ್ವರ ವೀರಶೈವರ ಕಾಫಿ ಕ್ಲಬ್' ಗೆ ಬಂದು ಶಿವಣ್ಣ ಹೋಟೆಲ್ ಮಾಲೀಕ ಕಮ್ ಸಪ್ಲೈಯರ್ ನಿಗೆ ಕಾಫಿ ಕೊಡು ಎಂದಾಗ ಅವನು ಮೂಲೆಯಲ್ಲಿರುವ ಅಲ್ಯುಮಿನಿಯಂ ಲೋಟದ ಕಡೆ ಕೈ ತೋರಿಸಿ "ತಗಳಯ್ಯ ಅದುನ್ನ" (ಅದೇ, ಪುಟ ಸಂಖ್ಯೆ–10) ಅಂದ. ರಾಮೂಗೆ ಕೋಪ ನೆತ್ತಿಗೇರಿತು. "ಅದೇ ಲೋಟ ಕೊಡ್ತಿಯೋ ಇಲ್ಲ ನಾನೇ ಕಿತ್ಕಂಬಿಡ್ಲೊ ಹೇಳು" (ಅದೇ, ಪುಟ ಸಂಖ್ಯೆ–10) ಎಂದಾಗ, ಇದು ಪ್ರಪ್ರಥಮವಾಗಿ ಈ ಊರಿನಲ್ಲಿ ತೋರಿ ಬಂದ ಅಸ್ಪೃಶ್ಯತೆಯ ವಿರುದ್ಧದ ಮೊದಲ ಹೋರಾಟ ಎಂದು ಹೇಳಬಹುದಾಗಿದೆ. ಬಸವಯ್ಯನಿಗೆ ಹೇಗಾದರೂ ಮಾಡಿ ಗೌಡನ ಮರ್ಯಾದೆ ಕಡಿಮೆ ಮಾಡಬೇಕು ಎಂದೆಣಿಸಿ; ನಾಯ್ಕರ್ ಕೃಷ್ಣಪ್ಪನಿಗೆ "ನೋಡಯ್ಯ ಕೃಷ್ಣಪ್ಪ, ವಿಷಯ ಹೇಗೆ ಹೇಗೆ ಆಗುತ್ತೇಂತ ಈಗಲೇ ಹೇಳಾಕ್ಕಾಗಲ್ಲ. ಆ ಜೋಯಿಸುನ್ನ ಹೇಗಾದ್ರು ನಂಬಕ್ಕಾಗಲ್ಲ; ಆಮೇಲೆ ರಾಮನೇನೂ ದಡ್ಡ ಅಲ್ಲ; ವಿದ್ಯೆ ಕಲ್ತೋನು. ಆ ಭೈರಪ್ಪ ಇದಾನಲ್ಲ, ಅವನು ರಾಮನ ಜತೆ **ನೇರ್ಕಂಡು** ಬದಲಾಗ್ತವ್ನೆ, ಲೀಡರ್ ಆಗ್ಬೇಕು ಅಂತ ಅವನಿಗೆ ಆಸೆ. ಅವ್ನೇನಾದ್ರೂ ಮಾಡಿದ್ರೆ ಕಷ್ಟ ನೋಡು. ಅದ್ಕೇ ಒಂದ್ ಮಾತು ಹೇಳ್ತೀನಿ, ನಿಮ್ಮ ಜಾತಿ ಕಡೆಯಿಂದ ಒಬ್ಬರು ನ್ಯಾಯಸ್ಥರಿರಬೇಕು ಅಂತ ಹಠ ಹಿಡೀಬೇಕು. ಎಲ್ಲ ರಾಮೂದೇ ತಪ್ಪು ಅಂತ ಸಾಧಿಸ್ಬೇಕು. ಇದನ್ನು ಪ್ರತಿಷ್ಠೆ ವಿಷಯ ಅಂತ ತಗೋ, ಆಗೋದು ಆಗೋಗಿದೆ" (ಅದೇ, ಪುಟ ಸಂಖ್ಯೆ–12,13) ಎಂದು ಹೇಳುತ್ತಾ ಕೃಷ್ಣಪ್ಪನ ಮಗಳ ವಿಷಯದಲ್ಲಿ ಚಳಿ ಕಾಯಿಸಿಕೊಳ್ಳುತ್ತಾನೆ.

ಕೃಷ್ಣಪ್ಪ ತನ್ನ ಅಳಿಯ ಹನುಮಯ್ಯನನ್ನು ಕರೆದು ತನ್ನ ಮಗಳು ಗೌರಿ ಪರವಾಗಿ ನ್ಯಾಯ ಮಾಡಲು ತಮ್ಮ ನಾಯ್ಕರ್ ಸಮಾಜದಿಂದ ನೀನು ನ್ಯಾಯಸ್ಥ ಆಗಬೇಕು ಎಂದು ಹೇಳುತ್ತಾನೆ. ಇತ್ತ ಬಸವಯ್ಯ ದಲಿತ ಬಲಗೈ ಭೈರಪ್ಪನಿಗೂ ನಿಮ್ಮ ಜಾತಿಯವರಿಗೂ ನ್ಯಾಯಸ್ಥನಾಗಲು ಸ್ಥಾನಕ್ಕಾಗಿ ಗೌಡ್ರು ಬಂದಾಗ ಕೇಳು, ರಾಮುನ ಪರವಾಗಿ ನೀನೇ ನ್ಯಾಯಸ್ಥನಾಗು ಎಂದು ತೆರೆಮರೆಯ ರಾಜಕಾರಣ ಮಾಡುತ್ತಾನೆ. ಊರಿಂದ ಗೌಡ್ರು ಬಂದಾಗ ಕೃಷ್ಣಪ್ಪ–ಹನುಮಯ್ಯ ಹಾಗೂ ಭೈರಪ್ಪ ನ್ಯಾಯ ಮಂಡಲೀಲಿ ನಮ್ಮ ಸಮುದಾಯದವರಿಗೂ ಅವಕಾಶ ಮಾಡಿಕೊಡಿ ಎಂದು ಕೇಳಿದಾಗ ಗೌಡನ ಕೋಪ ವಿಕೋಪಕ್ಕೆ ಹೋಯಿತು. ಇದೆಲ್ಲಾ ಬಸವಯ್ಯನ ಪಿತೂರಿ ಎಂಬುದು ಅರಿವಾಗಲು ಹೆಚ್ಚಿನ ಸಮಯ ಬೇಕಾಗಲಿಲ್ಲ. ಆಗ ಗೌಡನು "ಆಗೋಲ್ಲ.....ಆಗಲ್ಲಾಂದ್ರೆ ಆಗಾಕ್ಕಿಲ್ಲ, ಬಸವಯ್ಯನ ಅಪ್ಪ ಒಪ್ಪಿದ್ರೂ ಆಗಾಕಿಲ್ಲ. ಎಂದೂ ಇಲ್ಲದ್ದು ಇವತ್ತೇನು ನಿಮ್ಮ ಕಾರುಬಾರು? ನಾವೇನು ನ್ಯಾಯ ಸರ್ಯಾಗಿ ಹೇಳಾಕ್ಕಿಲ್ವಾ? ಸುಮ್ಸುಮ್ನೆ ಬಂದು ಇಲ್ಲಿ ಅವ್ಮಾನ ಮಾಡ್ತಿರೇನ್ರಯ್ಯ, ಯಾರ್ಯಾರ್ ಮಾತು ಕೇಳ್ಕೊಂಡು ಅದಕ್ಕೆಲ್ಲ ನಾನ್ ಜಗ್ಗಾಕ್ಕಿಲ್ಲ. ಯಾರ್ ಏನು ಹೇಳಿದ್ರೂ ಕೇಳಾಕಿಲ್ಲ. ಯಾವತ್ತಿನಂಗೆ ಇವತ್ತು ರಾತ್ರೀಕೆ ಪಂಚಾಯ್ತಿ ಕಟ್ಟೆನಾಗೆ ನ್ಯಾಯ ನಡೀತೈತೆ, ಹೊಂಟೋಗಿ ಮೊದ್ಲು" (ಅದೇ, ಪುಟ ಸಂಖ್ಯೆ–17) ಎಂದು ಖಾರವಾಗಿ ಹೇಳುತ್ತಾನೆ.

ಆಗ ಕೃಷ್ಣಪ್ಪ–ಹನುಮಯ್ಯ ಹಾಗೂ ಭೈರಪ್ಪ ನೇರವಾಗಿ ಬಸವಯ್ಯನ ಹತ್ತಿರ ಬರುತ್ತಾರೆ. ಆಗ ಹನುಮಯ್ಯ ಗೌಡನು ಬಸವಯ್ಯನ ಕುರಿತು ಹೇಳಿದ್ದು ಉಪ್ಪು– ಖಾರ ಸೇರಿಸಿ ಹೆಚ್ಚಿಗೆ ಹೇಳಿ ಬಸವಯ್ಯನಿಗೆ ಗೌಡನ ಮೇಲೆ ಮತ್ತಷ್ಟು ಸಿಟ್ಟು ಬರುವಂತೆ ಮಾಡುತ್ತಾನೆ. ರಾತ್ರಿ ಪಂಚಾಯತಿ ಸೇರಿದಾಗ ಗೌಡರು, ಬಸವಯ್ಯ, ಜೋಯಿಸರು ಪಂಚಾಯತಿ ಕಟ್ಟೆ ಮೇಲೆ ಕುಳಿತಿದ್ದರು. ಎಲ್ಲ ಸಮುದಾಯದ ಜನ ಸೇರಿದ್ದರು. ಆಗ ಗೌಡ್ರು ಏನು ದೂರು ಕೃಷ್ಣಪ್ಪ ಎಂದಾಗ ಮಧ್ಯೆ ತಡೆದ ಭೈರಪ್ಪ ಬಲಗೈ ದಲಿತರಾದ ನಮಗೂ ನ್ಯಾಯಸ್ಥರಾಗಲು ಒಂದು ಸ್ಥಾನದ ಅವಕಾಶ ಮಾಡಿಕೊಡಬೇಕೆಂದನು. ಆಗ ಹನುಮಯ್ಯ ಕೂಡಾ ನಮ್ಮ ನಾಯ್ಕರ್ ಜಾತಿಗೂ ಒಂದು ಸ್ಥಾನಬೇಕೆಂದು ಹೇಳುತ್ತಾನೆ. ಆಗ ಎಡಗೈ ದಲಿತರು ಪಾಪಣ್ಣನನ್ನು, ಕುರುಬರು ತಿಮ್ಮಜ್ಜನನ್ನು ನ್ಯಾಯಸ್ಥರಾಗಲು ಅವಕಾಶಬೇಕೆಂದು ಅವರೂ ಗಲಾಟೆ ಶುರು ಮಾಡಿದರು. ಈ ಎಲ್ಲ ಗದ್ದಲ ಗಲಾಟೆಗಳ ನಡುವೆ ಪಂಚಾಯತಿಯನ್ನು ಮೊಟಕುಗೊಳಿಸಲಾಯಿತು.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಪಂಚಾಯತಿ ಅರ್ಧಕ್ಕೆ ಮುಗಿಸಿ ಗೌಡರು, ಬಸವಯ್ಯ, ಜೋಯಿಸರು ತಮ್ಮ ಮನೆ ಕಡೆ ಹೊರಟಾಗ ಈ ಎಲ್ಲ ರಾಜಕೀಯದ ಹಿಂದಿನ ವ್ಯಕ್ತಿ ಬಸವಯ್ಯ ಎಂಬುದನ್ನರಿತ ಗೌಡರು ಬಸವಯ್ಯನನ್ನು ಮನೆಗೆ ಕರೆದು ಮಾತನಾಡಿ ನ್ಯಾಯ ತೀರ್ಮಾನ ಮಾಡುವ ನಾವು ಮೂವರು ಮಾತ್ರ. ಅದನ್ನು ಬಿಟ್ಟು ಉಳಿದ ಎಲ್ಲರಿಗೂ ಹೀಗೆ ಅವಕಾಶ ಮಾಡಿಕೊಡುತ್ತಾ ಹೋದರೆ ನಮ್ಮ ಗೌರವಕ್ಕೆ ಚ್ಯುತಿ ಬರುತ್ತದೆ ಎಂದು ಹೇಳುತ್ತಾರೆ. ಆಗ ಬಸವಯ್ಯನಿಗೆ ಇದು ಸರಿ ಅನಿಸುತ್ತದೆ. ನ್ಯಾಯಸ್ಥರಾಗಲು ತಮ್ಮ ಮೂವರ ಜೊತೆ ಕೇವಲ ಇಬ್ಬರಿಗೆ ಕೃಷ್ಣಪ್ಪ ಹಾಗೂ ಭೈರಪ್ಪನಿಗೆ ಅವಕಾಶ ಸಿಗಬೇಕೆಂಬ ನಿರ್ಣಯ ಮಾಡಿ ಆ ಇಬ್ಬರಿಗೂ ಈ ಕುರಿತು ತಿಳಿಸುತ್ತಾರೆ.

ಮಾರನೇ ದಿನ ಪಂಚಾಯತಿ ಕಟ್ಟೆಯಲ್ಲಿ ಗೌಡರು "ವಾತಾವರಣ ಸ್ವಲ್ಪ ತಂಪಾಗ್ಲಿ ಅಂಬ್ತ ಒಂದಿನ ಬಿಡುವು ಕೊಟ್ಟಿದ್ವಿ, ಈಗ ಹಿಂಗ್ ಮಾಡ್ಬವ್ದು ಅಂಬ್ತ ನಂಗನ್ನುಸ್ತೈತೆ. ಭೈರಪ್ಪನಿಗೆ ಅಮ್ಮಾಕೆ ಕೃಷ್ಣಪ್ಪನಿಗೆ ನ್ಯಾಯಸ್ಥರ ಜಾಗ ಕೊಡೋದು; ನಾವು ಮೂರು ಜನ್ರ ಜೊತ್ಗೆ ಇನ್ಮಾಕೆ ಅವರಿಬ್ಬರೂ ಸೇರ್ತಾರೆ. ಉಳ್ದೋರೂ ಕೇಳ್ಕಂಡಿದ್ದೀರಿ, ಅವರ ವಿಷಯ ಆಮೇಲೆ ಯೋಚ್ನೆ ಮಾಡ್ಬವ್ದು. ಈಗ ಅರ್ಜೆಂಟ್ ಇದ್ದಿದ್ದು ಇತ್ಯರ್ಥ ಮಾಡಿದ್ದೀವಿ; ಅವ್ಕಾಶ ಮಾಡಿಕೊಟ್ಟಿದ್ದೀವಿ. ಈ ಜಾಗ ನಾವು ಮಾತ್ರ ಹಿಡ್ಕಂಡ್ ಕುಂತ್ಕಾಬೇಕಂತ ನಮ್ಮಾಸೆ ಅಲ್ಲ ಅಂಬ್ತ ಇದ್ರಾಗೆ ಗೊತ್ತಾಗ್ಲೈತೆ. ಇದಿಷ್ಟು ವಿಷಯ..... ಏನಂಬ್ತೀರ ಬಸಯ್ನೋರೆ"?(ಅದೇ, ಪುಟ ಸಂಖ್ಯೆ –26)ಎಂದು ಹೇಳಿದಾಗ ಬಸವಯ್ಯ "ನಂಗೂ ಪಟೇಲರ ಮಾತು ಸರಿ ಅನ್ಸುತ್ತೆ. ಈ ಊರಿನ ಶಾಂತಿ, ಸುಖದ ದೃಷ್ಟಿಯಿಂದ ನಾವು ಹಾಗೆ ನಡಿಬೇಕೂಂತ ನನ್ನ ಅಭಿಪ್ರಾಯ. ಬೇರೆ ಜಾತಿಯವರ ವಿಷಯ ಇಲ್ಲಿ ಮುಖ್ಯವಾಗಿಲ್ಲದ್ದರಿಂದ ಅದನ್ನು ಅಲ್ಲಿಗೇ ಬಿಟ್ಟು ಬಿಡೋದು ಸರಿ"(ಅದೇ, ಪುಟ ಸಂಖ್ಯೆ–27) ಎಂದು ಹೇಳುತ್ತಾನೆ.

ಆದರೆ ಹನುಮಯ್ಯನಿಗೆ ಬಹಳ ನಿರಾಶೆಯಾಯಿತು. ತನ್ನ ಜಾತಿಯವರಿಗೆ ಪ್ರಾತಿನಿಧ್ಯಬೇಕೆಂದು ತಾನು ಪ್ರತಿಪಾದಿಸಿದ್ದು, ಈಗ ಕೃಷ್ಣಪ್ಪನಿಗೆ ಜಾಗ ಕೊಡೋದರ ಮೂಲಕ ಈಡೇರಿರೋದ್ರಿಂದ ತನ್ನ ಬಾಯಿ ಕಟ್ಟಿದಂತಾಗಿದೆ ಎಂದು ಚಡಪಡಿಸಿದ. ಕಲಿತವನಾದ ತಾನು ನ್ಯಾಯಸ್ಥನಾಗಬೇಕೆಂಬ ಆಸೆಯನ್ನು ಎಲ್ಲರೂ ಸೇರಿ ಹಾಳು ಮಾಡಿದವರು ಎಂದು ಗೊಣಗಿದ. ಹಾಗೆಯೇ ಜೋಯಿಸರಿಗೂ ಮನಸ್ಸು ಕದಡಿತ್ತು. ಪಟೇಲರು ಮತ್ತು ಬಸವಯ್ಯನವರು ಈ ತೀರ್ಮಾನವನ್ನು ತಮ್ಮನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಮಾಡಿದ್ದಾರೆ ಎಂಬುದು ಅವರಲ್ಲಿ ಅಸಹನೆ ಮೂಡಿಸಿತ್ತು. ಈ ಕಾರಣದಿಂದ ಅವರೂ ರಾಜಕೀಯದ ಅಖಾಡಕ್ಕೆ ಇಳಿದರು. ಜೋಯಿಸರು "ಬಲಗೈನವರು ಮತ್ತು ನಾಯ್ಕರಿಗೆ ಅವಕಾಶ ಕೊಟ್ಟ ಮೇಲೆ, ಎಡಗೈನವರು ಮತ್ತು ಕುರುಬರು ಇದಾರಲ್ಲ ಅವ್ರಿಗೂ ಕೊಡ್ಬೇಕು ಅನ್ಸುತ್ತೆ. ಇಲ್ದಿದ್ರೆ ಇದನ್ನು ಅನ್ಯಾಯ ಅಂತ ಹೇಳದಿದ್ದರೂ ಅಪೂರ್ಣ ಅಂತ ಹೇಳಬೇಕಾಗುತ್ತೆ. ಜೊತೆಗೆ ಇನ್ನೊಂದು ಗಮನಿಸಬೇಕು. ಮುಂದೆ ಹೇಗಾದ್ರೂ ಇರಲಿ. ಈಗ ಕೃಷ್ಣಪ್ಪನ ಮಗಳ ವಿಷಯ ನಮ್ಮ ಮುಂದಿರೋವಾಗ ಆತನೂ ನ್ಯಾಯಸ್ಥ ಆಗಿರೋದು ನ್ಯಾಯ ಸಮ್ಮತವಲ್ಲ ಅಂತ ನನ್ನ ಅಲ್ಪಮತಿಯ ಅಭಿಪ್ರಾಯ. ಇದನ್ನು ಯಾಕೆ ಹೇಳ್ತೀನಿ ಅಂದ್ರೆ ಹೊರಗಡೆ ಜನ ನಮ್ಮೂರ ಪಂಚಾಯ್ತಿ ಕಟ್ಟೆ ಕಡೆ ಬೆರಳು ತೋರ್ಸಿ ಆಡಿಕೊಳ್ಳೋ ಹಾಗಾಗಬಾರ್ದು ಅನ್ನೋ ಉದ್ದೇಶ ಅಷ್ಟೇ". (ಅದೇ, ಪುಟ ಸಂಖ್ಯೆ–27) ಎಂದು ಹೇಳಿದಾಗ ಸೇರಿದ ಜನರೆಲ್ಲರೂ ಇದು ಸರಿ ಎಂದು ಗದ್ದಲ ಗಲಾಟೆ ಶುರು ಮಾಡಿದರು. ಮತ್ತೇ ಪಂಚಾಯತಿ ಅರ್ಧಕ್ಕೆ ಮುಗಿಯಿತು. ಇತ್ತ ಆಸೆ ತೋರಿಸಿ ಅವನನ್ನು ನಿರಾಸೆಗೊಳಿಸಿದ್ದರಿಂದ ಹನುಮಯ್ಯ ತನ್ನ ರಾಜಕೀಯ ಶುರು ಮಾಡಿದ್ದ. ರಾಮುಗೆ ಭೇಟಿಯಾಗಿ "ನಾನು ಎಲ್ಲ ಸಪೋರ್ಟ್ ಕೊಡ್ತೀನಿ ಹೆದ್ರಬ್ಯಾಡ, ಏನಾದ್ರೂ ಜುಂ ಅನ್ಸ್ಬಡ. ನಮ್ಮ ಹುಡುಗರ್ನೆಲ್ಲ ಕಲೆ ಹಾಕ್ತೀನಿ. ನೋಡಾನ ಅವರು ಹೆಚ್ಚೊ ನಾವು ಹೆಚ್ಚೊ ಅಂಬ್ತ"(ಅದೇ, ಪುಟ ಸಂಖ್ಯೆ–29) ಎಂದು ಹೇಳಿದನು.

ಪಂಚಾಯತಿದಾರರು ಹೇಳಿ ಕಳಿಸಿದಾಗ ಊರ ಹೊರಗಿನ ಹಳೆ ಮಂಟಪದಿಂದ ತಳವಾರನ ಜೊತೆಯಲ್ಲಿ ರಾಮು ಬಂದು ನ್ಯಾಯಸ್ಥರ ಎದುರು ನಿಂತ. ಪಟೇಲರು, ಬಸವಯ್ಯ, ಜೋಯಿಸರು, ಕೃಷ್ಣಪ್ಪ, ಭೈರಪ್ಪ ಕುಳಿತಿದ್ದರು. ಹನುಮಯ್ಯ ತನ್ನ ಎಲ್ಲ ಜನರನ್ನು ಸಂಘಟಿಸಿದ್ದು ರಾಮುವಿಗೆ ಖುಷಿಯಾಗಿತ್ತು. ಆಗ ಹನುಮಯ್ಯ "ನಿಮ್ಗೆ ಬೇಕ್ ಬೇಕಾದೋರ್ನೆಲ್ಲ ಸೇರಿಸ್ಕೊಂಡು ಬ್ಯಾಡ್ವಾದರ್ನೆಲ್ಲ ಮಟ್ಟ ಹಾಕಾಕ್ ನೋಡ್ತಿರಲ್ಲ? ಇದೇನ್ ನಿಮ್ಮ ನ್ಯಾಯ? ಊರಿನ ಹುಡುಗ್ರು ಅಂದ್ರೆ ಏನಂದ್ಕಂಡಿದ್ದೀರಾಂಬ್ತ ನೀವೆಲ್ಲ? ಮುಂದೆ ಊರ್ ಆಳ್ಬೇಕಾದೋರು ನಾವು. ಏನ್ ಊರು ಅಂದ್ರೆ ಎಲ್ಲ ನಿಮ್ಮ ಸೊತ್ತು ಅಂದ್ಕಂಡಿದ್ದೀರಲ್ಲ? ಅದು ಹೆಂಗ್ ನಮ್ಮುನ್ನೆಲ್ಲಾ ಮಟ್ಟ ಹಾಕ್ತೀರೋ ಹಾಕ್ರಿ" (ಅದೇ, ಪುಟ ಸಂಖ್ಯೆ–30) ಎಂದು ಸವಾಲು ಹಾಕಿದನು. ಆಗ ಪಾಪಣ್ಣ, ತಿಮ್ಮಜ್ಜ ಕೂಡ ನಮಗೂ ನ್ಯಾಯಸ್ಥರಾಗಲು ಅವಕಾಶ ಬೇಕೇ ಬೇಕು ಎಂದು ವಾದಿಸಿದರು. ನ್ಯಾಯಸ್ಥರು ಎಷ್ಟೇ ಹೇಳಿದರೂ ಯಾರು ಕೇಳಲಿಲ್ಲ. ಕೊನೆಗೆ ಬಸವಯ್ಯನವರೇ ಪಂಚಾಯತಿದಾರರ ಪರವಾಗಿ "ಹಾಗಾದ್ರೆ ನಾವು ಪಂಚಾಯ್ತಿ ಆಫೀಸ್ ಒಳ್ಗಡೆ ಕೂತು ಚರ್ಚೆ ಮಾಡ್ಕಂಡ್ ಬರ್ತೀವಿ ಅಲ್ಲೀವರ್ಗೂ ಸಾವಧಾನದಿಂದ ಇರಿ" (ಅದೇ, ಪುಟ ಸಂಖ್ಯೆ–31) ಎಂದು ಹೇಳಿದರು. ಮತ್ತೇ ಚಾವಡಿಗೆ ಬಂದು ಪಂಚಾಯತಿದಾರರು ಉಪಸ್ಥಿತರಾದ ಮೇಲೆ ಪಟೇಲರು ಪ್ರಕಟಿಸಿದರು.

"ನಾವೆಲ್ಲ ಚರ್ಚೆ ಮಾಡಿದ್ದೀವಿ, ಈ ಊರು ಮುಖ್ಯ ನಮ್ಗೆ, ಊರು ಶಾಂತಿ ಸಮಾಧಾನದಿಂದ ಯಾವತ್ತಿನಂಗೆ ಇರಾದ್ ಮುಖ್ಯ. ನಿಮ್ಮನ್ನ ಯಾರ್ನೂ ನಾವು ಕೀಳು ಅಂಬ್ತ ಭಾವಿಸಿಲ್ರಪ್ಪ; ಯಾಕ್ ನೀವು ಹಂಗಂದ್ಕಂಡಿದ್ದೀರೋ ನಮ್ಗಂತೂ ಗೊತ್ತಿಲ್ಲ. ನಮ್ಗಂತೂ ನಿಮ್ಮ ಮ್ಯಾಲೆ ನಮ್ಮೂರ ಹುಡುಗ್ರು ಅಂಬ್ತ ಪ್ರೀತಿ ಐತೆ. ಇರ್ಲಿ ಈಗ ನಾವೆಲ್ಲ ಒಂದು ತೀರ್ಮಾನಕ್ಕೆ ಬಂದಿದ್ದೀವಿ. ನೀವೆಲ್ಲ ಕೇಳ್ಬೇಕು, ಜೋಯಿಸರು ಹೇಳ್ತಾರೆ ಎಲ್ಲ". (ಅದೇ, ಪುಟಸಂಖ್ಯೆ–31) ಎಂದು ಹೇಳಿ ಈಗ ಜೋಯಿಸರನ್ನು ದೊಡ್ಡವರನ್ನಾಗಿ ಮಾಡುತ್ತಾರೆ. ಆಗ ಜೋಯಿಸರು "ನೋಡಿ ನ್ಯಾಯಸಮ್ಮತವಾದ ತೀರ್ಮಾನಕ್ಕೆ ನಾವು ಬಂದಿದ್ದೇವೆ. ಈಗ ಇರೋ ಐದು ಜನವೂ ಪಂಚಾಯ್ತಿದಾರರಾಗಿ ಮುಂದುವರೀತೇವೆ. ಇನ್ನು ಗ್ರಾಮ ಪಂಚಾಯ್ತಿನಾಗೆ ತುಂಬಾ ವರ್ಷದಿಂದ ಮೆಂಬರಾಗಿರೋ ಯಾರನ್ನಾದ್ರು ಉದಾಹರಣೆಗೆ ಹೆಬ್ಬೆಟ್ಟು ಒತ್ತೋರು ಅಂತ ಬೇಕಾದ್ರೆ ತಿಳ್ಕೋಬಹುದು, ಅಂಥೋರನ್ನು ಊರಿನ ಒಳ್ಳೇದಕ್ಕಾಗಿ ಒಪ್ಪಿಸಿ ಹನುಮಯ್ಯ ಮತ್ತು ರಾಮೂಗೆ ಜಾಗ ಮಾಡಿಕೊಡೋದೂಂತ ತೀರ್ಮಾನಿಸಿದ್ದೇವೆ. ಇನ್ನು ನ್ಯಾಯ ತೀರ್ಮಾನದಲ್ಲಿ ದೊಡ್ಡ ಕೇಸು ಯಾವುದಾದ್ರೂ ಇದ್ದರೆ ಪಾಪಣ್ಣ ಮತ್ತು ತಿಮ್ಮಜ್ಜ ಇಬ್ರು ನಮ್ಮ ಜೊತೆಗೆ ನ್ಯಾಯಸ್ಥರಾಗಿರಬಹುದು; ಏಳು–ಬೀಳು ಅನ್ನಿಸಿದರೆ ಗ್ರಾಮ ಪಂಚಾಯ್ತಿ ಮೆಂಬರುಗಳಲ್ಲೇ ಯಾರಾದ್ರೂ ಒಬ್ರು ಸುಮ್ನೆ ಕೂತ್ಕೊಂಡಿರಬಹುದು....."(ಅದೇ, ಪುಟ ಸಂಖ್ಯೆ–31,32) ಎಂದು ಅಂತಿಮ ನಿರ್ಧಾರ ಪ್ರಕಟಿಸಿದರು.

ಈ ನಿರ್ಧಾರದಿಂದ ಎಲ್ಲರಿಗೂ ಖುಷಿಯಾಯಿತೇನೋ ನಿಜ, ಆದರೆ ರಾಮು– ಗೌರಿ ವಿಷಯ ನ್ಯಾಯ ಪಂಚಾಯತಿ ಆಗಲೇ ಇಲ್ಲ. ಕೊನೆಗೆ ಕೃಷ್ಣಪ್ಪನ ಬಲವಂತದ ಮೇರೆಗೆ ಪಂಚಾಯತಿದಾರರು ಕೃಷ್ಣಪ್ಪನ ಮಗಳು ಗೌರಿಯನ್ನು ಹನುಮಯ್ಯ ಹಾಗೂ ಭೈರಪ್ಪನ ಮಗಳು ಪುಟ್ಟಿಯನ್ನು ರಾಮು ಮದುವೆಯಾಗಬೇಕು ಎಂಬ ನಿರ್ಣಯ ಮಾಡಿದರು. ಆದರೆ ಕಂಡವರ ಹೆಣ್ಣುಮಗಳ ಮೈಮುಟ್ಟಿದ ರಾಮುನ ಬಗ್ಗೆ ಈಗ ಪುಟ್ಟಿಗೆ ಮನಸ್ಸಿರಲಿಲ್ಲ, ಆಕೆ ಬೇಡ ಅಂತ ಹೇಳಿದರೂ ಪಂಚಾಯತಿ ತೀರ್ಮಾನ ಕೇಳಲೇಬೇಕು ಎಂದು ಎಲ್ಲರೂ ವಾದಿಸಿದಾಗ ನೊಂದ ಆಕೆ ಮಾರನೇ ದಿನ ಗಂಗೀಹಳ್ಳದಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಕೊನೆಗೆ ಬರಗೂರರವರ ಪುಟ್ಟಿಯ ಹೆಣ ತೇಲುತ್ತಿತ್ತು , ಒಂದು ಊರಿನ ಕತೆಯನ್ನು ಹೇಳುತ್ತಿತ್ತು! ಎಂಬ ಉದ್ಗಾರದೊಂದಿಗೆ ಕಾದಂಬರಿ ಮುಕ್ತಾಯಗೊಳ್ಳುತ್ತದೆ.

ಈ ಕಾದಂಬರಿಯೂ ಆರಂಭದೊಂದಿಗೆ ಜಾತಿ ರಾಜಕಾರಣ, ಓಲೈಕೆ ರಾಜಕಾರಣ, ಬಗ್ಗಿದರೆ ಜುಟ್ಟು ಹಿಡಿ ಎದ್ದರೆ ಕಾಲು ಹಿಡಿ ಎಂಬ ಮಾತಿನಂತೆ ಪ್ರತಿರೋಧ ವ್ಯಕ್ತವಾದಾಗ ಮಾತ್ರ ಅವಕಾಶ ನೀಡುವ ಹಾಗೆಯೇ ಹೆಣ್ಣಿನ ಮೂಕ ವೇದನೆಯನ್ನು ಅರ್ಥಮಾಡಿಕೊಳ್ಳದ ಧಾರುಣತೆಯನ್ನು ಕಾಣುತ್ತೇವೆ. ಈ ರಾಜಕೀಯ ಸರ್ವಕಾಲಕ್ಕೂ ನಮ್ಮ ದೇಶದಲ್ಲಿ ನಿರಾತಂಕವಾಗಿ ಸಾಗುತ್ತಿದೆ. ಇತ್ತೀಚೆಗೆ ನಾವು ನೋಡುತ್ತಿರುವ ಮುಖ್ಯಮಂತ್ರಿ ಬದಲಾವಣೆ ಎಂಬ ಕೂಗು ಕೇಳಿ ಬಂದಾಗಲೆಲ್ಲ ದಲಿತ ಮುಖ್ಯಮಂತ್ರಿ, ಲಿಂಗಾಯತ ಮುಖ್ಯಮಂತ್ರಿ, ಒಕ್ಕಲಿಗ ಮುಖ್ಯಮಂತ್ರಿ, ಅಹಿಂದ ವರ್ಗದ ಮುಖ್ಯಮಂತ್ರಿ ಹೀಗೆ ನಾನಾ ರೀತಿಯ ಜಾತಿ ರಾಜಕಾರಣವನ್ನು ನಾವು ಕಾಣುತ್ತೇವೆ. ಜಾತೀಯತೆ ಅಳಿದು ನಾವೆಲ್ಲರೂ ಒಂದೇ, 'ಮನುಷ್ಯ ಜಾತಿ ತಾನೊಂದೆ ವಲಂ'ಎಂಬ ಪಂಪನ ಮಾತಿನಂತೆ ಜಾತಿ, ಧರ್ಮ ಎಂಬ ಪದಗಳನ್ನು ಬೇರುಸಹಿತ ಕಿತ್ತೆಸೆದಾಗ ಮಾತ್ರ ಸಮಾನತೆಯ ಭಾರತದ ನಿರ್ಮಾಣ ಸಾಧ್ಯ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಪರಾಮರ್ಶನ ಗ್ರಂಥಗಳು

1) ಬರಗೂರು ರಾಮಚಂದ್ರಪ್ಪ, ಸಮಗ್ರ ಸಾಹಿತ್ಯ ಸಂಪುಟ 10 ಕಿರು ಕಾದಂಬರಿಗಳು, (2021), ಅಭಿರುಚಿ ಪ್ರಕಾಶನ, ಮೈಸೂರು.
2) ಗಿರಡ್ಡಿ ಗೋವಿಂದರಾಜ, ಸಮಗ್ರ ವಿಮರ್ಶೆ ಸಂಪುಟ –2, (2001), ಸಪ್ನ ಬುಕ್ ಹೌಸ್, ಬೆಂಗಳೂರು.
3) ಡಾ. ನಾಗೇಂದ್ರ, ಸಿನಿಮಾ ಜಗತ್ತು, (2017), ಶ್ರೀ ಚನ್ನಕೇಶವ ಪ್ರಕಾಶನ, ತುಮಕೂರು.
4) ಡಾ. ಪುರುಷೋತ್ತಮ ಬಿಳಿಮಲೆ, ಬಂಡಾಯ – ದಲಿತ ಚಳುವಳಿ ಮತ್ತು ಸಾಹಿತ್ಯ, (1990), ಅಭಿನವ ಪ್ರಕಾಶನ, ಬೆಂಗಳೂರು.
5) ರಹಮತ್ ತರೀಕೆರೆ, ಸಾಂಸ್ಕೃತಿಕ ಅಧ್ಯಯನ, (2004), ಅಭಿನವ ಪ್ರಕಾಶನ, ಬೆಂಗಳೂರು.
6) ನಾಗರಾಜ ಡಿ.ಆರ್, ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ, (1999), ಅಕ್ಷರ ಪ್ರಕಾಶನ, ಹೆಗ್ಗೋಡು.
7) ಕುಂ ವೀರಭದ್ರಪ್ಪ, ಗಾಂಧಿ ಕ್ಲಾಸು, (2010), ಸಪ್ನ ಬುಕ್ ಹೌಸ್, ಬೆಂಗಳೂರು.
8) ಸರಜೂ ಕಾಟ್ಕರ್, ದೇವರಾಯ, (2002), ಯಾಜಿ ಪ್ರಕಾಶನ, ಹೊಸಪೇಟೆ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸೊಬಗು

ನಮ್ರತ ಡಿ.ಎನ್.
ಸಂಶೋಧನಾ ವಿದ್ಯಾರ್ಥಿ
(ಶ್ರೀನಿವಾಸ ವಿಶ್ವವಿದ್ಯಾಲಯ ಮಂಗಳೂರು)
ಬೆಂಗಳೂರು.

Manuscript ID:
JRD -2026-180418
ISSN: 2230-9578
Volume 18
Issue 4(II)
Pp.60-62
April 2026
Submitted:08 Mar. 2026
Revised:24Mar. 2026
Accepted:10Apr.2026
Published:30 April2026

ಸಾರಲೇಖ :

ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಎಂಬ ಪದಕ್ಕೆ ಸಿಕ್ಕ ಗೌರವ ಹಾಗೂ ಆಕೆಯನ್ನು ಸಾಮಾಜಿಕವಾಗಿ ನಡೆಸಿಕೊಂಡ ಆಳ ಎಷ್ಟು ಎಂಬ ಪ್ರಶ್ನೆಯ ಮೂಲಕ ಈ ಸಮಾಜವನ್ನು ಪ್ರಶ್ನಿಸುತ್ತಾ ಹೋದಂತೆ ಸಾಹಿತ್ಯಕ್ಕೆ ಸೀಮಿತವಾಗದ ಹೆಣ್ಣು ಸಾಹಿತ್ಯದ ಮೂಲಕ ತನ್ನ ಅಂತರಾಳದ ಮಾರ್ಮಿಕ ತೊಳಲಾಟಗಳನ್ನು ಸಮಾಜದಎದುರು ಹೇಗೆಲ್ಲಾ ತೆರೆದಿಡುತ್ತಾಳೆ ಎಂಬುದನ್ನು ಪ್ರಾಚೀನ ಸಾಹಿತ್ಯದಿಂದಹಿಡಿದು ಇಂದಿನ ಎದೆಯ ಹಣತೆಯವರೆಗೆ ವಿಸ್ತಾರವಾಗಿ ಹೇಳುವಾಗ ಅದರ ನಡುವಿನ ಕಾಲದಘಟ್ಟದಲ್ಲಿ ಹೆಣ್ಣಿನ ಸಾಧನೆಯಾವಕ್ಷೇತ್ರಕ್ಕೂ ಸೀಮಿತವಲ್ಲ ಎಂಬುದು, ಹಾಗೇ ಇಂದು ಸ್ತ್ರೀ ಹೇಗೆ ಜೀವಿಸಿದ್ದಾಳೆ ಅವಳ ಆಸೆ ಆಕಾಂಕ್ಷೆಗಳನ್ನು ಬದುಗೊತ್ತಿ ಉದ್ಯಮಗಳ ಕಡೆ ಮುಖಮಾಡಿ ಆದಿಶಕ್ತಿಯಂತೆತನ್ನೆಲ್ಲಾ ಸಾಮರ್ಥ್ಯವನ್ನು ಸಮಾಜಕ್ಕೆತ್ಯಾಗ ಮಾಡುತ್ತಿದ್ದಾಳೆ ಎನ್ನುವುದು ಮುಖ್ಯವಾಗುತ್ತದೆ. ಅಲ್ಲದೆ ಬೌದ್ಧಿಕವಾಗಿ ಮಾನಸಿಕವಾಗಿ ಸಾಮಾಜಿಕವಾಗಿಜೊತೆಗೆ ಸಾಹಿತ್ಯಿಕವಾಗಿಯೂ ಹೆಣ್ಣು ಹೇಗೆ ಮುಖ್ಯವಾಗುತ್ತಾಳೆ ಎಂಬ ಸತ್ಯದಅರಿವಿಲ್ಲದೆ ಅವಳನ್ನು ತುಚ್ಛವಾಗಿಕಂಡುಕಾಣುವ ಈ ಮನುಕುಲಕ್ಕೆ ನನ್ನದೊಂದು ಧಿಕ್ಕಾರವನ್ನು ತಿಳಿಸುತ್ತಾ ಸಮಾಜದ ಮುಂದೆ ಹೆಣ್ಣುದೇವತೆಎಂದು ಪೂಜಿಸಿ ಅವರವರ ಮನೆಗಳಲ್ಲಿನ ಹೆಣ್ಣು ಮಕ್ಕಳನ್ನು ಯಾವುದೋಒಂದುಕ್ಷೇತ್ರಕ್ಕೆ ಸೀಮಿತಗೊಳಿಸುವ ಈ ಪುರುಷ ಪ್ರಧಾನ ಸಮಾಜಕ್ಕೆತಿಳಿಸಲು ಇಚ್ಛಿಸಿರುವುದೇನೆಂದರೆ ಅವಳ ಇಚ್ಛೆಗಳನ್ನು ಆಲಿಸಿ, ಕೆಲವೊಂದು ಕುಟುಂಬಗಳಲ್ಲಿ ಆ ವ್ಯವಸ್ಥೆಇದ್ದರೂ ನೆರೆಹೊರೆಯವರ ಆಲೋಚನೆಗಳಿಂದ ನಿಮ್ಮಲ್ಲಿಆತಂಕವುಂಟಾಗಿ ಮತ್ತೆ ಹೆಣ್ಣನ್ನುಅದೇಅಂಕೆಯಲ್ಲಿ ನಿಲ್ಲಿಸದೇ ಅವಳನ್ನೊಮ್ಮೆ ನಿಮ್ಮ ಒಳಗಣ್ಣಿನಿಂದ ನೋಡಿದರೆ ಅವಳ ಇನ್ನೊಂದು ಮುಖವು ನಿಮಗೆ ಕಾಣಬಹುದು. ಆಕೆ ಅರ್ಥವಾಗುತ್ತಾಳೆ.

ಸ್ತ್ರೀ ಎಂದರೆ ಅಷ್ಟೇ ಸಾಕೇ ಮೂಲಕ ಪ್ರಾರಂಭವಾಗುವ ಈ ಲೇಖನವು ಅವಳ ಮಗುತನದ ಮುಗ್ಧತೆ, ಸಾಮಾಜಿಕ ನಡವಳಿಕೆಗಳಿಂದ ಹೇಗೆಲ್ಲಾ ಬದಲಾಗುತ್ತದೆಎಂದುಅಕ್ಕಮಹಾದೇವಿಯಿಂದ ಶುರುವಾಗಿ ಇಂದಿನ "ವಿದ್ಯಾವಂತ ವೇಶ್ಯೆ" ಯವರೆಗೆ ಬಂದು ನಿಲ್ಲುತ್ತದೆ.ತಿಳಿಸಾರಿನ ಸೌಟಿನಿಂದ ಹಿಡಿದ ವಿಮಾನ ಹಾರಾಟನಡೆಸಲುಅಂಜದ ಶಿವಾಂಗಿಯವರೆಗೆ ನಿಲ್ಲುತ್ತದೆ.ಮನೋವೈಜ್ಞಾನಿಕತೆಯ ಸೊಬಗನ್ನು ಹಂಚುವ ತ್ರೀವೇಣಿಯಿಂದಿಡಿದು ಲೈಂಗಿಕತೆಯ ಭೋಗವಸ್ತುವಾಗುವವರೆಗೆ ನಿಲ್ಲುತ್ತದೆ.ಶಾತವಾಹನರ ವಿಜ್ಜಿಕೆಯಿಂದಿಡಿದು ಭಾನು ಮುಷ್ತಾಕರವರೆಗೆ ಬಂದು ನಿಲ್ಲುತ್ತದೆ.ಹೀಗೆ ಪಂಪ, ಬಸವ, ಕನಕ, ಬಿ.ಎಂ.ಶ್ರೀ, ಬೇಂದ್ರೆ ಕೊನೆಗೆ ಶಿವರುದ್ರಪ್ಪರವರೆಗೂ ಸ್ತ್ರೀಯ ಪಾತ್ರದ ಮಹತ್ವ ಸಮಾಜದೊಳಗೆ ಜಾಗೃತವಾದಾಗ ಮಾತ್ರ"ಅವಳ ಹೃದಯದತೀರ್ಮ" ಪ್ರಜ್ವಲಿಸುತ್ತದೆಂದು ಈ ಲೇಖನ ಚಿಂತಿಸುತ್ತದೆ. ವೈಚಾರಿಕತೆಯ "ಮಹಾವಿಷಯ" ವಾಗಿ ಹೆಣ್ಣುಈ ಲೇಖನದಲ್ಲಿ ಕೋರಿದ್ದಾಳೆ. ಸಂಸ್ಕಾರದಚಂದ್ರಿಯಿಂದಿಡಿದುತನ್ನ ಮಾತೃ ಪಿತೃಗಳ ಅಂತ್ಯ ಸಂಸ್ಕಾರ ಮಾಡಲುಗೋಗರೆಯುವ ದಿಟ್ಟ ಹೆಜ್ಜೆಯಿಡುವವರೆಗೆ ನಿಮ್ಮ ಸಮಾನತೆ ಸ್ತ್ರೀಗೆ ಅಗತ್ಯವೆಂದು ಭಿನ್ನವಿಸುತ್ತಾಳೆ.

* **ವಿಶೇಷ ಪದಗಳು:**1) ಅನ್ಯಳಾಗಿಸುವಿಕೆ2)ಸ್ತ್ರೀ ಸುತ್ತಳತೆ3) ಪುಣ್ಯ ಸ್ತ್ರೀಯರು 4) ವಿದ್ಯಾವಂತ ವೇಶ್ಯೆ
5) ಹೃದಯದತೀರ್ಮ 6) ಸಹಚಾರಿಣಿ

ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ವಾದದಎಲ್ಲೆಯನ್ನು ಹುಡುಕುವುದು ಮರೀಚಿಕೆಯಂತ ಸಂಗತಿಯಾಗಿದೆ "ಸ್ತ್ರೀ ಎಂದರೇ ಅಷ್ಟೇ ಸಾಕೆ" ಎಂಬ ಜಿ.ಎಸ್.ಎಸ್ಅವರ ಸಾಲು ಮನುಕುಲಕ್ಕೆ ಅಥವಾ ಪುರುಷ ಪ್ರಧಾನ ಸಮಾಜಕ್ಕೆಎಸೆದು ಮಹಾ ಪ್ರಶ್ನೆಯಂತೆ ಮತ್ತು ಸವಾಲಿನಂತೆಕಾರ್ಯನಿರ್ವಹಿಸುತ್ತದೆ.ಇನ್ನುಕನ್ನಡ ಸಾಹಿತ್ಯವು ಸ್ತ್ರೀಯನ್ನು ಹಲವು ಕ್ಷೇತ್ರಗಳ ಮುಖೇನ ಸ್ವೀಕರಿಸುತ್ತದೆ.ಪ್ರಾಚೀನ ಸಾಹಿತ್ಯದಿಂದಲು ಹೆಣ್ಣಿನ ಪರವಾದ ವಿಶೇಷ ಗೌರವ ಮತ್ತು ಬಲವನ್ನುಕಾಣಬಹುದಾಗಿದೆ.ನಮ್ಮ ಸಂಸ್ಕೃತಿಯ ಮೂಲ ರೂಪಗಳಾದ ರಾಮಾಯಣ, ಮಹಾಭಾರತದಂತಹ ಮಹಾನ್ ಗ್ರಂಥಗಳಲ್ಲಿಯೇ ಸ್ತ್ರೀ ಪಾತ್ರಗಳ ಮೌಲ್ಯಗಳನ್ನು ವಿಶ್ಲೇಷಿಸುತ್ತಾ ಬರಲಾಗಿದೆ. ಸೀತೆ, ಅಹಲ್ಯೆ, ಊರ್ಮಿಳೆ, ಕುಂತಿ, ದ್ರೌಪದಿ, ಗಾಂಧಾರಿಯರತ್ಯಾಗ, ಸಹನೆ, ಸಜ್ಜನಿಕೆಗಳ ಮೂಲಕ ಹೆಣ್ಣನ್ನು "ಸಹಚಾರಿಣಿ" ಎಂದುಆರಾಧಿಸುವ ಸಾಮಾಜಿಕ ನೆಲೆಗಟ್ಟಿನಲ್ಲಿ ಸ್ತ್ರೀ ನಿಲ್ಲುತ್ತಾಳೆ, ದ್ರೌಪದಿಯ ಪಾತ್ರವನ್ನು ವಿಶ್ಲೇಷಿಸುವಾಗ ಆಕೆಯ ಶ್ರೀ ಮುಡಿಯ ಬಗ್ಗೆ ನುಡಿಯುವಲ್ಲಿಆಕೆಯನ್ನು "ಸ್ತ್ರೀತ್ವ"ದ ಸಂಕೇತವಾಗಿಅನುಸರಿಸುತ್ತದೆ, ಪ್ರಸಂಸಿಸುತ್ತದೆ ಹಾಗೂ ಪ್ರಶ್ನಿಸುತ್ತದೆ. ಕೆಲವೊಂದು ಪಾತ್ರಗಳನ್ನು ಉತ್ಕೃಷ್ಟ ಸ್ಥಾನದಲ್ಲಿಟ್ಟು ನೋಡಿದರೆ, ಮತ್ತೆ ಕೆಲವನ್ನುತುಚ್ಛ ಸ್ಥಾನದಲ್ಲಿದೂಷಿಸುತ್ತದೆ ಈ ಸಮಾಜ.ಆದರೆಪ್ರತಿಯೊಂದುಅಂಶವನ್ನು ಆಳವಾಗಿ ವಿವೇಚಿಸಿದಾಗ ಸ್ತ್ರೀಯ ಸ್ಥಾನಮಾನಯಾವಕಾಲಕ್ಕೂ ಬದಲಾಗುವುದಿಲ್ಲ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ನಮ್ರತಡಿ.ಎನ್, ಸಂಶೋಧನಾ ವಿದ್ಯಾರ್ಥಿ(ಶ್ರೀನಿವಾಸ ವಿಶ್ವವಿದ್ಯಾಲಯ ಮಂಗಳೂರು)ಬೆಂಗಳೂರು.

How to cite this article:
ನಮ್ರತಡಿ.ಎನ್.*(2026).*ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸೊಬಗು. . *Journal of Research and Development, 18(4(II)), 60–62. https://doi.org/10.5281/zenodo.19395720*

Quick Response Code:
Website: https://jrdrvb.org/
DOI: 10.5281/zenodo.19395720
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಬದಲಾಗಿ ಹೆಣ್ಣಿನ ನಿರೀಕ್ಷೆಗಳನ್ನು ಗಂಡಿನ ಆ ಚೌಕಟ್ಟಿನೊಳಗೆ ಮಾರ್ಮಿಕವಾಗಿ ಜಾಗೃತಗೊಳಿಸುತ್ತದೆ.ಇನ್ನೂಕುಂತಿಯ ವಿಚಾರಕ್ಕೆ ಬಂದರೆ ಬಾಲ್ಯದ ಶಿಶು ಸಹಜ ಮುಗ್ಧತೆಯ ವರ್ತನೆಯಿಂದ ವರ್ತಿಸಿದ ರೀತಿಯಿಂದ "ಮಗುತನದಲ್ಲಿ ಬೊಂಬೆಯಾಟಿಕೆ ಮಗುವನೇ ತಹೆನೆಂದು ಬಂದಳು" ಎಂಬ ಸಂದರ್ಭ ಸಾಕಷ್ಟು ಅಸಹಜವೆನಿಸಿ ಅಲ್ಲಿಯೂ ಸೂರ್ಯನೇಕರ್ಣನತಂದೆಎನ್ನುವಾಗ ಹೆಣ್ಣಿನ ಮುಗ್ದತೆಗೆ ಸಿಕ್ಕ ಪ್ರತಿಫಲಿತವೇ ಎನಿಸುತ್ತದೆ.

ಮುಗ್ದತೆ ಎಂಬುದು ಹೆಣ್ಣಿನ ಜನ್ಮತ: ಬಂದ ಸಹಜರೂಪವಾಗಿದೆ. ಅದನ್ನುಕನ್ನಡ ಸಾಹಿತ್ಯದ ಮೊದಲ ಕವಿಯತ್ರಿ ಎಂದು ಹೆಸರಾದ ಅಕ್ಕ ಮಹಾದೇವಿಯ ವಚನಗಳಲ್ಲಿ ರೂಪಕವಾದ ಸ್ತ್ರೀ ಸಾಹಿತ್ಯ ಸಂವೇದನೆಯ ಮೂಲಕ ಗ್ರಹಿಸಿರುವ ನಾವೆಲ್ಲರೂ ತ್ರೀವೇಣಿಯವರ ಮನೋವೈಜ್ಞಾನಿಕ ಸಾಹಿತ್ಯದ ಬರವಣಿಗೆಯ ರೀತಿ ನೀತಿಗಳಲ್ಲಿ ಕೊಡಗಿನ ಗೌರಮ್ಮನವರ "ತಿಳಿಸಾರಿನ" ಘಮದ ಆಸ್ವಾದನೆಯಲ್ಲೂ ಕಾಣಬಹುದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನವಾದ "ಕುದಿಎಸರು" ಹೆಣ್ಣಿನ ಪ್ರತೀಕವಾಗಿ ಕಾರ್ಯನಿರ್ವಹಿಸಿ ಸ್ತ್ರೀ ಸಾಹಿತ್ಯದ ಸಂವೇದನೆಯನ್ನು ಪಸರಿಸುತ್ತಾ ಚಲಿಸುತ್ತದೆ.ಸಾರಾ ಅವರ ಚಂದ್ರಗಿರಿಯ ತೀರದಲ್ಲಿ ಕೇವಲ ಮುಸ್ಲಿಂ ಮಹಿಳಾ ಸಂವೇದನೆಯನ್ನು ಜಗತ್ತಿಗೆ ತೋರುವುದಿಲ್ಲ. ಬದಲಾಗಿ ಪ್ರಸ್ತುತ ಜಗತ್ತಿನಲ್ಲಿ ಹೆಣ್ಣಿನ ಸ್ಥಿತಿಗತಿಗಳನ್ನು ವಾಸ್ತವಕ್ಕೆ ತಾಳೆ ಹಾಕಿ ಲವ್‌ಜಿಹಾದ್, ಮರ್ಯಾದ ಹತ್ಯಾ ಮೂಲಕ ಇಂದುಕೂಡ ಹೆಣ್ಣು ಹೇಗೆಲ್ಲಾ ಸಮಾಜದ ಶೋಷಿತ ವರ್ಗಕ್ಕೆ ಸೇರಲ್ಪಡುತ್ತಾಳೆ ಎಂದು ಬಿಂಬಿಸುತ್ತದೆ.

ಆರ್ಥಿಕವಾಗಿ ಹೆಣ್ಣನ್ನು ದುರ್ಬಲಗೊಳಿಸಿ ಅಸಹಾಯಕತೆಯ ಸೋಗಿಗೆ ಆಕೆಯನ್ನು ಸಿಕ್ಕಿಸಿ ಪ್ರಪಂಚದ ಮುಂದೆ ಆಕೆ ಸಬಲೆ, ಆರ್ಥಿಕವಾಗಿ ಸಬಲೆ ಸಾಮಾಜಿಕವಾಗಿ, ಶೈಕ್ಷಣಿಕವಾಗಿಇತರೆಇತರೆಆದರೂ "ಎಲ್ಲಿ" ಸಬಲೆ ಆಕೆ ಎಂಬ ಪ್ರಶ್ನೆಯ ವೃತ್ತದಲ್ಲಿ ನಿಲ್ಲುವಂತಾಗಿದೆ ಮಹಿಳೆ.ಯಾವರೀತಿಯಲ್ಲಿಯೂ ಸಬಲೆಯೆಂದುಅರ್ಥ ಸಿಗದ ಈ ಸಾಮಾಜಿಕ ಕಟ್ಟಲೆಯೊಳಗೆ ಶೋಷಣೆಯ ನಿಲುಗಡೆಎಂದು?ಎಂದು ಪ್ರತಿಯೊಂದು ಹೆಣ್ಣಿನ ಮನದಾಳದ ಪ್ರಶ್ನೆಇದಾಗಿದೆ.ಸ್ತ್ರೀ ಸಂವೇದನೆ– ಪುರುಷ ಸಂವೇದನೆಯ ಬಗ್ಗೆ ಮಾತನಾಡುವಜಗತ್ತು ಲಿಂಗ ಅಸಮಾನತೆಯ ಬಗ್ಗೆ ಮಾತನಾಡುತ್ತಾ ಆಸ್ತಿ ಹಕ್ಕನ್ನು ಇರಿಸಿ ಆಕೆಯನ್ನು ಪೇಚಾಟಕ್ಕೆ ಸಿಲುಕಿಸಿದೆ.ಭಿನ್ನಸ್ತರಗಳ ದೃಷ್ಟಿಕೋನದಲ್ಲಿ ಸ್ತ್ರೀಯನ್ನಿರಿಸಿ ಹಲವಾರು ಯೋಜನೆಗಳನ್ನು ಇಟ್ಟು ಅವಕಾಶಗಳನ್ನು ಕೊಟ್ಟು ಕೊನೆಗೆ ಅದೇ ಸುತ್ತಳತೆಯಲ್ಲಿ ಆಕೆಯನ್ನು ಬಂಧಿಸಿ ಅವಳನ್ನು ಸಾರ್ವಜನಿಕತೆಎದುರು ನಿಲ್ಲಿಸಿ ಅವಳ ಸ್ವಾತಂತ್ರ್ಯದ ಬದುಕನ್ನುರಕ್ಷಣೆಯ ನಾಮಧೇಯದಲ್ಲಿಕಿತ್ತುಕೊಂಡಂತಿದೆ ಅವಳ ಬದುಕು.

ಬಿ.ಎಂ.ಶ್ರೀಯವರು ತನ್ನ ಕನ್ನಡತಾಯಿಯೊಂದಿಗೆ ಇಂಗ್ಲೀಷ್ ಸ್ನೇಹಿತೆಯನ್ನು ಹೊಂದಿಸುವ ನಿಟ್ಟಿನಲ್ಲಿ ಪಾಶ್ಚಾತ್ಯ ಚಿಂತನೆಗಳ ಅಂತರಾಳವನ್ನು ಹೆಣ್ಣಿನ ಉಡುಗೆಯಲ್ಲಿ ಅದಲಿ ಬದಲಿ ಮಾಡಿನೋಡುವ ಅಂದ ಚೆಂದದ ನೋಟ ಇಷ್ಟವಾಗುವಷ್ಟು **"ಇವಳ ಸೊಬಗನವಳು ತೊಟ್ಟು ನೋಡಬಯಸಿದೆ"** ಸಾಲಿಗಿರುವ ಸ್ತ್ರೀ ಲಾವಣ್ಯ ವಾಸ್ತವತೆಗೆ ಬಂದಾಗಅದೇಗೆ ಸಹಿಸಲಗುವುದಿಲ್ಲ. ಈ ಸಮಾಜಕ್ಕೆ, ಸಂಪ್ರದಾಯಕ್ಕೆ, ಆಡಂಬರಕ್ಕೆ, ಅದರಲ್ಲೂ ಆಧ್ಯಾತ್ಮಿಕತೆಗೆ ಎಂಬ ಪ್ರಶ್ನೆ ಪ್ರತಿ ಹೆಣ್ಣಿನಲ್ಲೂ ಮೂಡದೇ ಇರಲಾರದು. ಸಾಹಿತ್ಯದ ಸಾಲುಗಳಿಗೆ ಆಕೆ ಒಂದು ಶಕ್ತಿಯಾಗಿ ತೋರುತ್ತಾಳೆ. ಸಂಪ್ರದಾಯಗಳಿಗೆ ಸಂಸ್ಕೃತಿಗೆ ಆದಿಶಕ್ತಿಯಾಗಿ ಸಲಹುತ್ತಾಳೆ.ಆದರೆ, ಹೆಣ್ಣಿನ ಬದುಕಿನ ವಿಮರ್ಶೆಯ ನೆಲೆಗಟ್ಟಿನಲ್ಲಿ ನೋಡುವಾಗ ಆಕೆ ಹೇಗೆ ಬಜಾರಿಯಾಗುತ್ತಾಳೆ. ದುಷ್ಟೆ, ಗಂಡುಭೀರಿ ಎಂದು ಅವಳ ವಸ್ತದ ಆಧಾರದ ಮೇಲೆ ಹೇಗೆ ಆಕೆಯ ಅಂಕೆಯನ್ನು ನಿರ್ದೇಶಿಸುತ್ತಾರೆ. ಸಾಹಿತ್ಯದ ಜಗತ್ತಿನಲ್ಲಿ ಮಹಿಳೆ ಕವಿಯತ್ರಿ, ಲೇಖಕಿಯಾಗಿ ಕಾಣಿಸಿಗುವವಳು ಅದಕ್ಕೆ ಸಾಕ್ಷಿ ಶಾತವಾಹನರ ಕಾಲದ ವಿಜ್ಜಿಕೆಯ ಕೌಮುದಿ ಮಹೋತ್ಸವದಂತ ನಾಟಕಗಳು ರಾಜರ ಆಳ್ವಿಕೆಯಲ್ಲೂ ಹೆಣ್ಣಿಗೆ ಅವಳದೇ ಆದ ಗೌರವ ದೊರೆತಿತ್ತು ಎಂಬ ನಿದರ್ಶನಗಳನ್ನು ನೀಡುತ್ತವೆ. ಮೈಸೂರು ಅರಸರ ಕಾಲಕ್ಕೆ ಸಂಚಿ ಹೊನ್ನಮ್ಮನಂತಹ ವಿಮರ್ಶಕಿಯರು ಕಾಣಿಸಿಗುತ್ತಾರಲ್ಲವೇ? ಆಕೆ ತನ್ನಕೃತಿಯಾದ **"ಹದಿಬದೆಯಧರ್ಮದಲ್ಲಿ"** ಪ್ರಶ್ನೆ ಹಾಕುತ್ತಾಳೆ.

ಪೆಣ್ಣಲ್ಲವೆತಮ್ಮನ್ನೆಲ್ಲಾ ಪಡೆದ (ಹಡೆದ) ತಾಯಿ
ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವರು
ಕಣ್ಣುಕಾಣದ ಗಾವಿಲರು

ಎಂದು ಹೆಣ್ಣೆಂಬುವವಳ ಶಕ್ತಿ ವಿಮರ್ಶೆ ಮಾಡಿದ್ದಾಳೆ. ಸಂಚಿಹೊನ್ನಮ್ಮ ಅವಳಿಂದಲೇ ಸೃಷ್ಟಿ ಎಂಬ ಕಣ್ಣುಕಾಣದ ಗಾವಿಲರು ವಿವೇಚಿಸಬೇಕು ಏಕೆಂದರೆ ಹೆಣ್ಣುಭ್ರೂಣ ಹತ್ಯೆಗೆ ಮುನ್ನುಗ್ಗುತ್ತಿದ್ದ ಜನಸಾಮಾನ್ಯರು ಇಂದು ಕಾಲ ಬದಲಾಗಿ ಗಂಡು ಭ್ರೂಣ ಹತ್ಯೆಗೂ ಲೆಕ್ಕಿಸುತ್ತಿಲ್ಲ. ಇದರಅರ್ಥ ನಿಮ್ಮನ್ನು ನೀವೇ ಕೊಂದುಕೊಳ್ಳುತ್ತಿರುವಿರಿ ಎಂದು ಸಮಾಜದಅರಿವಿಗೆತರುವುದು.

ಸ್ತ್ರೀ ನಿಷ್ಠ ಚಿಂತನೆಗಳು ಹೆಚ್ಚಾದಂತೆಲ್ಲಾ ನಮ್ಮ ಸಾಹಿತ್ಯದಲ್ಲಿ ಸ್ತ್ರೀ ವಾದಿ ವಿಮರ್ಶೆ ಶೀರ್ಷಿಕೆಯಡಿಯಲ್ಲಿ ಕಾಲದಿಂದ ಕಾಲಕ್ಕೆ ಅಗಾಧವಾಗಿ ಹುಟ್ಟಿಕೊಳ್ಳುತ್ತವೆ. ಹೆಣ್ಣಿನ ಸುತ್ತಳತೆಯೊಳಗೆ ಆಕೆಯ ಸ್ಥಿತಿಗತಿಗಳನ್ನು ವಿವೇಚಿಸಿ ಓರೆ ಹಚ್ಚುವ ಕಾರ್ಯವನ್ನುಇದು ಮಾಡುತ್ತದೆ. ಆಗ ನಮಗೆ ಮೊದಲು ನೆನಪಾಗುವುದು**'ಸಿಮೋನ್ ದ ಬೋವಾ"** ಈಕೆಯ ನೆಲೆಗಟ್ಟಿನಲ್ಲಿ ಪುರುಷನು ಸ್ತ್ರೀಯನ್ನು 'ಅನ್ಯಳಾಗಿಸುವಿಕೆ' ಹಾಗೂ ಸ್ತ್ರೀ ಪುರುಷರ ಸ್ಥಾನಮಾನಗಳನ್ನು ಲಿಂಗಕೇಂದ್ರಿತ ಜವಾಬ್ದಾರಿಗಳ ಹೆಸರಿನಲ್ಲಿಜನ್ಮಜಾತವಲ್ಲದ ಹಕ್ಕುಗಳು, ಉಡುಪು, ಸಂಪ್ರದಾಯಗಳು, ಶಿಕ್ಷಣ, ಕೌಟುಂಬಿಕತೆಯ ಆಧಾರದ ಮೆಲೆ ವಿಭಜಿಸಿ ಸ್ತ್ರೀ ಸಂವೇದನೆಗಳನ್ನು ಬದಿಗೊತ್ತಿ ಸ್ಥಾನಮಾನಗಳನ್ನು ವ್ಯತ್ಯಾಸಗೊಳಿಸಿ ಸ್ತ್ರೀ ಸಂಕಷ್ಟದ ಪರಿಸ್ಥಿತಿಯಲ್ಲೂ ಪುರುಷ ಪಲಾಯನವನ್ನು ಒಳಗೊಂಡಂತೆ ಹೆಣ್ಣನ್ನೇ ದೂಷಿಸುವ ಸಾಮಾಜಿಕ ವ್ಯವಸ್ಥೆಗೆ ಸ್ತ್ರೀ ವಾದಿ ವಿಮರ್ಶೆಯ ದಿಕ್ಕಿನಿಂದಒಂದು ಧಿಕ್ಕಾರ ಸಹಜಕ್ರಿಯೆ. ಸಾಮಾಜಿಕ ಕಟ್ಟುಪಾಡುಗಳ ನಡುವೆ ಹೆಣ್ಣನ್ನು ಪರಾತಂತ್ರಳಾಗಿಸಿ **"ಈ ಜೀವ ಮಣ್ಣಿಗೋದಾಗಲೇ ನೆಮ್ಮದಿ"** ಎಂಬ ನಿಟ್ಟುಸಿರಿನ ಜೊತೆಜೊತೆಗೆ ಮುಕ್ತಿ ಪಡೆಯುವುದರಲ್ಲೇಜೀವನದ ಕೊನೆ ಹಂತ ತಲುಪಿರುತ್ತಾಳೆ.ಈ ಕೌಟುಂಬಿಕ ಎಲ್ಲೆಯಲ್ಲೇ ತಮ್ಮ ತಮ್ಮ ಜೀವನದ ಶೋಷಣೆಯನ್ನು ಹೆಣ್ಣು ಸಹಿಸಿ, ಬದುಕಿದ ನಮ್ಮ ನಿಮ್ಮೆಲ್ಲರಅಮ್ಮಂದಿರೇ ಸಾಕ್ಷಿ.ಈ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಈ ಕಾಲ ಬದಲಾಗಿದೆ. ಶಿಕ್ಷಣ, ಅವಕಾಶ, ಸೌಲಭ್ಯವೆಲ್ಲವೂ ಇದೆ ಎಂದರೂ ಕೂಡ ಎಲ್ಲೋ ಒಂದೆಡೆ ಲಕ್ಷ್ಮಣರೇಖೆಯಂತಹ ಎಲ್ಲೆಗಳು ಹೆಣ್ಣಿಗೆ ಕಾಲಕಾಲಕ್ಕೆ ಬಳುವಳಿಯಾಗಿ ಬಂದಿವೆ. ಹೆಣ್ಣೇ ಹೆಣ್ಣನ್ನು ನಿಯಂತ್ರಿಸುತ್ತಾಳೆ, ಕೊಲ್ಲಿಸುತ್ತಾಳೆ, ಶೋಷಿಸುತ್ತಾಳೆ, ಅಲ್ಲಗೆಳೆಯುವಂತಹ ಸಾಮಾಜಿಕ ಸ್ಥಿತಿನಿರ್ಮಾಣವಾಗಿದೆ. ಇಂತಹ ಸಮಾಜಕ್ಕೆತಕ್ಕಂತೆ ಶೋಷಣೆಯನ್ನು ಸಹಿಸಿ ಬದುಕುವುದು ಆಕೆಗೂ ಅನಿವಾರ್ಯವಾಗಿತ್ತು.ಹೆಣ್ಣನ್ನು ಸಂವೇದನ ರಹಿತವಾಗಿ ನಡೆಸಿಕೊಳ್ಳುವ ಈ ಸಮಾಜದ ಎದುರು ನಿರ್ಮಾಣವಾಗಿದೆ. ಇಂತಹ ಸಮಾಜಕ್ಕೆತಕ್ಕಂತೆ ಶೋಷಣೆಯನ್ನು ಸಹಿಸಿ ಬದುಕುವುದು ಆಕೆಗೂ ಅನಿವಾರ್ಯವಾಗಿತ್ತು. ಹೆಣ್ಣನ್ನು ಸಂವೇದನಾ ರಹಿತವಾಗಿ ನಡೆಸಿಕೊಳ್ಳುವ ಈ ಸಮಾಜದ ಎದುರು ಹಲವು ಲೇಖಕರು ಲಿಂಗಭೇದವಿಲ್ಲದೆ ಆಸೆ ಆಕಾಂಕ್ಷೆಗಳಲ್ಲಿ ಎಲ್ಲೂ ಹೆಣ್ಣಿನ ಪರವಹಿಸದ ಈ ಸಮಾಜದ ವಿರುದ್ಧ ಹಲವು ಬರಹದ ಮೂಲಕ ನಿದರ್ಶನಗಳನ್ನು ಕಾಣಬಹುದು. ಯು.ಆರ್. ಅನಂತಮೂರ್ತಿಯವರ ಘಟಶ್ರಾದ್ಧ ಕಥೆಯಲ್ಲಿ ಯಮುನಾ ಪಾತ್ರವನ್ನು ಗಮನಿಸಿದಾಗ ಗಂಡುಎಲ್ಲಿಯೂ ಸಿಕ್ಕಿಕೊಳ್ಳದೆ ಎಲ್ಲಾತಪ್ಪನ್ನು ಹೆಣ್ಣಿನ ಮೇಲೆ ಹೊರಿಸಿ ಆಕೆಯನ್ನುಊರಿಂದ ಹೊರ ಹಾಕಿ ಅವಳು ಬದುಕಿರುವಾಗಲೇ ಶ್ರಾದ್ಧ ಮಾಡುವ ಈ ಗೊಡ್ಡು ಸಂಪ್ರದಾಯಗಳು ಇಂದು ಬಹುತರ ಕಡಿಮೆಯಾದರೂ ಜಾತಿ ನೆಲೆಗಟ್ಟಿನಲ್ಲಿ ಇಂದಿಗೂ ಶೋಷಿಸುತ್ತಿರುವುದನ್ನು ಕಾಣಬಹುದು. ಆದರೆ, ಶರಣರ ಕಾಲಘಟ್ಟದಲ್ಲಿ ಸ್ತ್ರೀಯನ್ನು ಆದರದಿಂದ ಗೌರವಿಸಿದಂತೆ ಅವಳು

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಯಾವಕಾಯಕ ಮಗ್ನಳಾದರೂ ಉದಾಹರಣೆಗೆಎಂದು ವೇಶ್ಯೆಎಂದುಕರೆಯುವ ಹೆಣ್ಣನ್ನು ಶರಣರವರ್ಗ ಸೂಳೆಸಂಕವ್ವನಂತವಳನ್ನು ಶರಣೆ ಎಂಬ ಸ್ಥಾನದಲ್ಲಿಟ್ಟು ನೋಡಿದ್ದಕ್ಕಾಗಿ ಸ್ತ್ರೀ ವರ್ಗಚಿರಋಣಿ. "ಕಬ್ಬಿಗರಕಾವ್ಯ" ಕವಿ ಆಂಡಯ್ಯಕನ್ನಡ ನಾಡುಚೆಲ್ವಾಯು ಎಂದು ಕನ್ನಡ ನಾಡಿನ ಸೊಬಗನ್ನು, ಚೆಲುವನ್ನು ವರ್ಣಿಸುವಾಗ ಕನ್ನಡ ನಾಡಿನಲ್ಲೇಇಂದ "Prostitute" ಅಥವಾ ವೇಶ್ಯೆ (ಪಣ್ಯಾಂಗನೆ) ಎಂದು ಅಸಹ್ಯವಾಗಿ ಬಿಂಬಿಸುವ ಹೆಣ್ಣನ್ನು "ಪುಣ್ಯಸ್ತ್ರೀಯರು" ಎಂದು ಅತಿ ಆದರದಿಂದ ಆಕೆಯನ್ನು ತನ್ನ ಸಾಹಿತ್ಯದಲ್ಲಿ ವೈಭವೀಕರಿಸಿದ್ದಾನೆ. ಇಂದುಆಕೆಯನ್ನು "ಲೈಂಗಿನ ಕಾರ್ಯಕರ್ತೆ" ಈ ಸಮಾಜ ನಡೆಸಿಕೊಳ್ಳುತ್ತಿದೆ.

ಸಾಹಿತ್ಯದ ಮುಖೇನ ಶಕ್ತಿ ಪೂರ್ವಕವಾಗಿದ್ದನ್ನಿ ಎತ್ತಿದ ಮತ್ತೊಂದು ಸಂವೇದನೆಯೇ ಸ್ತ್ರೀ ಸಂವೇದನೆ ಅಥವಾ ಸ್ತ್ರೀ ಸಾಹಿತ್ಯ ಎಂದರೇ 20ನೇ ಶತಮಾನಕ್ಕೆ ಸಂಪೂರ್ಣ ಸ್ವತಂತ್ರ್ಯವನ್ನು ಕಂಡಂತೆ ಕಂಡರು ಸಾಂಸರಿ ಕಜಂಜಾಟದ ಬದುಕಿನಲ್ಲಿ ಅದೆಲ್ಲೋ ಕುಂಟಿತವಾಗಿ ಮೂಲೆ ಸೇರಿದೆ ಎಂದರೆ ತಪ್ಪಾಗಲಾರದು. ಜನಪದ ಸಾಹಿತ್ಯದಲ್ಲೂ ಮಹಿಳೆಯ ಕೈಚಳಕವನ್ನು ಕಾಣಬಹುದಾಗಿದೆ.ಅಂದಿನ ಕಾಲದಲ್ಲಿ ವಿದ್ಯೆಯಿಂದ ವಂಚಿತರಾದ ಹಾಗೂ ಪುರುಷ ಪ್ರಧಾನ ವ್ಯವಸ್ಥೆಯ ಶೋಷಣೆಗೆ ನಲುಗಿದ ಹೆಣ್ಣುಮಕ್ಕಳು ಹೆಚ್ಚು ಮನೆಕೆಲಸದವಳಾಗಿ, ಭೋಗದ ವಸ್ತುವಾಗಿ ಮಕ್ಕಳನ್ನು ಹೆರುವಯಂತ್ರವಾಗಿ ಮಕ್ಕಳ ಪಾಲನೆಗಷ್ಟೆ ಸೀಮಿತವಾದವಳು ಆಕೆಗೆ ಸಾರ್ವಜನಿಕ ನಿರ್ಬಂದವೂ ಕಾಡಿತ್ತು. ಆಧುನಿಕ ಸಾಹಿತ್ಯದಲ್ಲಿ ಮಹಿಳಾ ಸಾಹಿತಿಗಳನ್ನು ಮುಖ್ಯ ಭೂಮಿಕೆಗೆತರಲು ಪತ್ರಿಕಾರಂಗದಶ್ರಮಅಷ್ಟಿಷ್ಟಲ್ಲ.ಮೊದಲ ಕಾದಂಬರಿಯನ್ನುಕನ್ನಡ ಸಾಹಿತ್ಯಕ್ಕೆ ಕೊಡುಗೆಯಾಗಿ ನೀಡಿದ ಶಾಂತಾಬಾಯಿ ನೀಲಗಾರರ**"ಸದ್ಗುಣಿ ಕೃಷ್ಣಬಾಯಿ"** ಕೃತಿ 1908ರಲ್ಲಿ ಪ್ರಕಟವಾಯಿತು. ಹಾಗೇ 1913ರಲ್ಲಿ ನಂಜನಗೂಡುತಿರುಮಲಾಂಬ ಅವರ "ಸುಶೀಲೆ" ಕಾದಂಬರಿಯ ಮೂಲಕ ಮೊದಲ ಕಾದಂಬರಿಕಾರ್ತಿ ಪದ ಹುಟ್ಟಿಕೊಂಡಿತು. ಹೀಗೆ ಹೆಣ್ಣುತನ್ನ ಅಸ್ತಿತ್ವಕ್ಕಾಗಿ ಪ್ರತಿನಿತ್ಯ ಹೋರಾಡುತ್ತಲೇ ಬಂದಿದ್ದಾಳೆ.ಆದರೆ, ಇದುವರೆಗೂ ಆಕೆ ತನ್ನಆಂತರಿಕಜಗತ್ತನ್ನು ಸ್ವತಂತ್ರವಾಗಿ ಬಹಿರಂಗವಾಗಿ ಬದುಕಲು ಸಾಧ್ಯವಾಗಿಲ್ಲ.ಮೇಲ್ನೋಟಕ್ಕೆ ಹೆಣ್ಣು ಅಬಲೆ–33% ಮೀಸಲಾತಿ, ಎಲ್ಲಾ ಕ್ಷೇತ್ರಗಳಲ್ಲಿಯೂ ಅವಕಾಶಗಳಿವೆ. ವಾಸ್ತವವಾಗಿ ಕಟ್ಟುಪಾಡುಗಳಿಂದ ಹೊರಬಂದುತನ್ನಿಷ್ಟದಂತೆ ಬದುಕುವ ಹೆಣ್ಣು ಮಕ್ಕಳನ್ನು ಅಸಹ್ಯವಾಗಿ ಮತ್ತುಅಸಹನೀಯವಾಗಿ ನಡೆಸಿಕೊಳ್ಳುತ್ತದೆ. ಈ ವ್ಯವಸ್ಥೆ ಸಾಮಾಜಿಕ ಜಾಲತಾಣಗಳಲ್ಲಿ ಕಮೆಂಟ್‌ಗಳ ಮೂಲಕ ನೀಡುವಅಗೌರವವನ್ನು ಗಮನಿಸಿದರೆ ಸಾಕು ಇಂದು ಸಾಮಾಜಿಕ ವ್ಯವಸ್ಥೆಯೊಳಗೆ ಹೆಣ್ಣಿನ ಸ್ಥಾನಮಾನ ತಿಳಿಯುತ್ತದೆ.ಅದರಲ್ಲೂ ಹೆಣ್ಣಿನ ಮಹತ್ವಅರಿತಿದ್ದೀವಿ ಎಂದು ಮರೆಯುವವರೇ ಮೌಲ್ಯಗಳನ್ನು ಹೂತು ಹಾಕುತ್ತಿದ್ದಾರೆ.

ಭಾನುಮುಷ್ತಾಕ್‌ಅವರುಎದೆಯ ಹಣತೆಕೃತಿ ಒಳಗೆ ಹೆಣ್ಣಿನ **'ಮೌನದ ಭಾಷೆಗಿರುವ'** ಸಾರವನ್ನುಅರಿವಿಗೆತರುವ ಪ್ರಯತ್ನ ಮಾಡಿದ್ದಾರೆ. ಹೆಣ್ಣಿನ ಸತ್ಯದಧನಿಗೆಕಿವಿಗೊಡದ ಸಮಾಜದಲ್ಲಿ ನಿಂತು**"ವಿದ್ಯಾವಂತ ವೇಶ್ಯೆ"** ಎಂಬ ಪಟ್ಟ ಹೊತ್ತ ಹೆಣ್ಣು ಮಕ್ಕಳನ್ನು ಅಧಿಕವಾಗಿಆಕೆಯ ನೋವನ್ನು ಆಲಿಸುವಲ್ಲಿ ಪರಿಹಾರ ಸೂಚಿಸುವಲ್ಲಿ ಈ ವ್ಯವಸ್ಥೆ ಸೋಲುತ್ತಿದೆ. ಸ್ತ್ರೀಯನ್ನು ಲೈಂಗಿಕತೆಯ ಸಂಕೋಲೆಯಲ್ಲಿ ಸಿಲುಕಿಸಿ ಹೆಣ್ಣೆಂದರೆ ಹೀಗೆ ನಡೆಯಬೇಕೆಂಬ ಅಂಕೆಯಲ್ಲಿರಿಸಿ ಲೈಂಗಿನ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿ ಸಂಕೋಲೆಗಳನ್ನು ದಾಟಿದರೆ ನೀತಿಗೆಟ್ಟವಳು ಎಂದು ಬಿಂಬಿಸುತ್ತದೆ.ಆಗ ಕಾಡುವ ಪ್ರಶ್ನೆಯೆಂದರೆ ಆಕೆಗೆ ತನ್ನದೇಹದ ಮೇಲೆಯೂ ಹಕ್ಕಿಲ್ಲವೇ?ಹೀಗೆ ಈ ಲೇಖನವು ಒಂದು ಹೆಣ್ಣಿನ ಸುತ್ತಳತೆಯಲ್ಲಿ ಗೋಚರಿಸಬಹುದಾದಎಲ್ಲಾ ಸಾಧ್ಯತೆಗಳನ್ನು ಸಮಾಜದಅರಿವಿಗೆತರಲಿಚ್ಛಿಸುತ್ತದೆ.ನಾನು ಈ ಲೇಖನದ ಮೂಲಕ ಗಂಡು ಹೆಣ್ಣಿನ ವಿಚಾರವನ್ನು ನನ್ನದೇಆದ ವೈಚಾರಿಕೆ ನೆಲೆಯಲ್ಲಿ ಸಮಾಜಕ್ಕೆತಲುಪಿಸುವ ಪ್ರಯತ್ನ ಮಾಡಿದ್ದೇನೆ.

<u>ಆಕರ ಗ್ರಂಥಗಳು</u>

1) ಕುಮಾರ ವ್ಯಾಸನಗದುಗಿನ ಭಾರತ ವಿಮರ್ಶಾತ್ಮಕ ಪ್ರಸ್ತಾವನೆ
ಲೇಖಕರು–ಸಿ.ಪಿ.ಕೆ
2) ಅನುವಾದ ಸಾಹಿತ್ಯ – ಪ್ರೊ ಮೋಹನ ಕುಂಟಾರ್
3) ಸಾಹಿತ್ಯ ವಿಮರ್ಶೆ–ಡಾ॥ ಸಿ. ಎನ್. ರಾಮಚಂದ್ರನ್
4) ಸಂಸ್ಕಾರ–ಯು. ಆರ್. ಅನಂತಮೂರ್ತಿ
5) ಎದೆಯನುಡಿ ಒಳನೋಟ _ ಡಾ. ರವಿಕುಮಾರ್ ಪಿ.ಜಿ
ಡಾ. ನಾಗೇಶ್‌ಎನ್.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

Original Article

"ಕನ್ನಡ ಸಾಹಿತ್ಯದಲ್ಲಿ ದಾಸ ಪರಂಪರೆ"

ಶ್ರೀಮತಿ ಪೂರ್ಣಿಮಾ ಅ. ಮಿಣಚಿ
ಉಪನ್ಯಾಸಕರು ಕನ್ನಡ ವಿಭಾಗ
ಕೆ.ಎಲ್.ಇ.ಸಂಸ್ಥೆಯ ಎಸ್.ಎಸ್.ಎಮ್.ಎಸ್.ಮಹಾವಿದ್ಯಾಲಯ,ಅಥಣಿ
Email-:poornimaaminachi@gmail.com

Manuscript ID:
JRD -2026-180419
ISSN: 2230-9578
Volume 18
Issue 4(II)
Pp.63-64
April 2026
Submitted: 08 Mar. 2026
Revised: 24 Mar. 2026
Accepted: 10 Apr. 2026
Published: 30 April 2026

ಸಾರಲೇಖ :

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದಾಸ ಪರಂಪರೆ ಅಥವಾ ಹರಿದಾಸ ಸಾಹಿತ್ಯ ಒಂದು ಅತ್ಯಂತ ಪ್ರಭಾವಶಾಲಿ ಮತ್ತು ಜನಪ್ರಿಯ ಘಟ್ಟ ಇದು ಕೇವಲ ಭಕ್ತಿಯ ಮಾರ್ಗವಲ್ಲದೆ ಸಮಾಜದ ಅಂಕುಡೊಂಕುಗಳನ್ನು ತಿದ್ದಿದ ದೊಡ್ಡ ಸಾಮಾಜಿಕ ಚಳುವಳಿಯು ಹೌದು. ದಾಸ ಸಾಹಿತ್ಯವು 13ನೇ ಶತಮಾನದ ಸುಮಾರಿಗೆ ನರಹರಿತೀರ್ಥರಿಂದ ಪ್ರಾರಂಭವಾಗಿ 15–16 ಶತಮಾನದಲ್ಲಿ ಅಂದರೆ ವಿಜಯನಗರ ಸಾಮ್ರಾಜ್ಯದಕಾಲದಲ್ಲಿ ಉತ್ತುಂಗ ಶಿಖರಕ್ಕೇರಿತು. ಮಧ್ವಾಚಾರ್ಯರು ದ್ವೈತ ಸಿದ್ಧಾಂತವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಉದ್ದೇಶವಾಗಿತ್ತು. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 15 ಮತ್ತು 16ನೇ ಶತಮಾನವನ್ನು "ಹರಿದಾಸ ಸಾಹಿತ್ಯದ ಸುವರ್ಣ ಯುಗ" ಎಂದು ಕರೆಯಲಾಗುತ್ತದೆ. ಭಕ್ತಿ ಚಳುವಳಿಯ ಭಾಗವಾಗಿ ಉದಯಿಸಿದ ಈ ಪರಂಪರೆಯು ಕಠಿಣವಾದ ವೇದಾಂತ ತತ್ವಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಮಹತ್ಕಾರ್ಯ ಮಾಡಿತು. ವಾದವಿವಾದ ಏನೇ ಇರಲಿ ಜನಸಾಮಾನ್ಯರ ಮನಕ್ಕೆ ನೆಮ್ಮದಿ ತರಬಲ್ಲ ಸಾಹಿತ್ಯಕ್ಕೆ ಶ್ರೀಕಾರ ಹಾಕಿದ ಶ್ರೇಯಸ್ಸು "ದಾಸ ಪರಂಪರೆ"ಯದು. ಕನ್ನಡದ ಉನ್ನತ ಪರಂಪರೆಗೆ ದಕ್ಕೆಬಾರದ ರೀತಿಯಲ್ಲಿ ಲೆಕ್ಕಣಿಕೆಯನ್ನು ಬಳಸಿದವರು ದಾಸ ಸಾಹಿತ್ಯದ ದಿಗ್ಗಜರಾದ ಪ್ರಾತಃಸ್ಮರಣಿಯ ಪುರಂದರದಾಸರು ಕನಕದಾಸರು ಉಭಯರು ಸಮಕಾಲೀನ ಹರಿದಾಸರು ಈ ನೆಲದಲ್ಲಿ ಹೊಸ ಸಾಮ್ರಾಜ್ಯದ ಉದಯದ ಜೊತೆಯಲ್ಲಿ ಬೆಳೆದುಬಂದ ದಾಸ ಸಾಹಿತ್ಯ ರಾಜಾಶ್ರಾಯ ಬಯಸಲಿಲ್ಲ. ಶರಣರು ಸಾಧಿಸಿದ ಹಾಗೂ ನಿವೇದಿಸಿದ ವಿಚಾರ ಕ್ರಾಂತಿಯನ್ನೇ ಕಾವ್ಯದ ತಳಹದಿಯನ್ನಾಗಿ ಆರಂಭಿಸಿದವರು ದಾಸರು, ಆದಿಯಲ್ಲಿ ಉದಯಗೊಂಡ ಜೈನ ಸಾಹಿತ್ಯವು ರಾಜಾಶ್ರಯದ ಮೂಲಕ ಜನ್ಮವೆತ್ತ ವಾಙ್ಮಯವೆಂದು ಹೇಳಬಹುದು. ದ್ವಿತೀಯ ಹಂತದ ಸಾಹಿತ್ಯವು ಸಂಘಟನಾತ್ಮಕ ಸಮೂಹ ಶಕ್ತಿಯ ಸಂಕೇತವೆಂದು ಭಾವಿಸಬಹುದು ಆದರೆ ರಾಜಾಶ್ರಯ ಹಾಗೂ ಯಾವುದೇ ರೀತಿಯ ಸಮೂಹ ಸಂಘಟನೆಯನ್ನು ಬಯಸದೆ ಭಗವದ್ ಭಕ್ತಿಯ ಉಕ್ತಿಗಳನ್ನು ಉಕ್ಕಿಸಿದವರು ದಾಸರು. ದಾಸ ಸಾಹಿತ್ಯ ಜನ್ಮವೆತ್ತ ಉದ್ದೇಶ ಮೂಲತಃ ಭಾಗವತಃ ಧರ್ಮಪ್ರಸಾರ ಅದರ ಅಡಿಪಾಯವಾಗಿತ್ತು ಕನ್ನಡದಲ್ಲಿ ಬೆಳೆದು ಬಂದಿದ್ದ ಆಗಲೇ ಜಾತಿ ಸಂಕಟದಿಂದ ಬಿಡುಗಡೆಗೆ ಶ್ರೀಕಾರ ಹಾಕಿದ ವಚನ ಸಾಹಿತ್ಯದಲ್ಲಿ ಅಲ್ಲಲ್ಲಿ ಉಲ್ಲೇಖಿಸಲ್ಪಟ್ಟ ಹಲಕೆಲವು ಉಕ್ತಿಗಳು ಮೂಲರೂಪವನ್ನು ಕಳಚಿಕೊಂಡು ತಾಳಕ್ಕೆ ತಕ್ಕಂತೆ ಬೆಳೆದು ಬಂದಿದ್ದು ದಾಸಸಾಹಿತ್ಯದಲ್ಲಿ ಒಳಹೊಕ್ಕು ನೋಡಿದಾಗಲೇ ಸಂಪೂರ್ಣ ಗೋಚರವಾಗುತ್ತದೆ.

ವೈಷ್ಣವ ಧರ್ಮದ ಮೂಲ ಮರ್ಮವನ್ನೇ ಕೀರ್ತನೆಗಳಲ್ಲಿ, ಸುಳಾದಿಗಳಲ್ಲಿ, ಉಗಾಭೋಗಗಳಲ್ಲಿ ಹಾಗೂ ಕೆಲವು ಕೃತಿಗಳಲ್ಲಿ ತತ್ವಗಳನ್ನು ನಿರೂಪಿಸಿದ್ದು ಆ ಧರ್ಮದ ಬದಲಾವಣೆಯು ಎತ್ತಿತೋರಿಸುವುದು ದಾಸಸಾಹಿತ್ಯದಲ್ಲಿ.

ಮುಖ್ಯ ಪದಗಳು : ಕೀರ್ತನೆಗಳು, ಸುಳಾದಿ, ಉಗಾಭೋಗ, ದಾಸ

ಪ್ರಪಂಚದ ಪ್ರಾಚೀನ ಧರ್ಮದರ್ಶನಗಳಲ್ಲಿ ಸನಾತನ ಧರ್ಮವು ಪುರಾತನವಾದದ್ದು ಆ ಧರ್ಮದಲ್ಲಿ ಮನು ಮಹರ್ಷಿಗಳು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಮುಂದಿನ ಶತಮಾನದಲ್ಲಿ ಜನ ತಿರಸ್ಕರಿಸುವುದು ಖಚಿತ. ಅದರ ತಿರಸ್ಕಾರಕ್ಕಾಗಿ 12ನೇ ಶತಮಾನದಲ್ಲಿ ಶರಣರ ವಚನ ಕ್ರಾಂತಿ ದಾಸರ ಕಣ್ಮುಂದೆ ನಿಂತಿತು ಅಂತೆಯೇ ದಾಸ ಸಾಹಿತ್ಯದ ಅದ್ವೈರ್ಯರಾದ ಶ್ರೀನರಹರಿತೀರ್ಥರು, ಶ್ರೀಪಾದರಾಯರು, ಶ್ರೀವ್ಯಾಸ ತೀರ್ಥರು, ಶ್ರೀ ಪುರಂದರದಾಸರು, ಶ್ರೀ ಕನಕದಾಸರು, ಶ್ರೀ ವಾದಿರಾಜರು, ಶ್ರೀ ಪ್ರಸನ್ನ ವೆಂಕಟದಾಸರು, ಶ್ರೀ ಜಗನ್ನಾಥದಾಸರು, ಶ್ರೀ ಗೋಪಾಲ ದಾಸರು , ಶ್ರೀ ವಿಜಯದಾಸರು, ಶ್ರೀ ಮಹಿಪತಿದಾಸರು, ವೈಷ್ಣವ ಧರ್ಮದ ರಕ್ಷಣೆಗಾಗಿ ಆಧುನಿಕ ಜನ ಒಪ್ಪುವ ರೀತಿಯಲ್ಲಿ ದಾಸ ಸಾಹಿತ್ಯಕ್ಕೆ ಶ್ರೀಕಾರ ಹಾಕಿದರು. ಅಂದವರು ಬಿತ್ತಿದ ಬೀಜವನ್ನು ಮಹರ್ಷಿ ತತ್ವಗಳಿಗೆ ಏಟು ಕೊಟ್ಟಿದ್ದು ದಾಸ ಸಾಹಿತ್ಯದಲ್ಲಿ ಅಡಕವಾಗಿರುವ ನುಡಿಗಡಣಗಳು ದೃಢಪಡಿಸುತ್ತವೆ.

ಈ ಎಲ್ಲ ದಾಸವರೇಣ್ಯರು ಶರಣರಂತೆ ಮನುಕುಲಕ್ಕೆ ತಿಳಿಬಯಸಿದ ವರಕವಿಗಳು ಅವರಂದು ಹಾಡಿದ ಹಾಡುಗಳು ಇಂದಿಗೂ ನಾಡಿಗರ ನಾಲಿಗೆ ಮೇಲೆ ನಲಿದಾಡುತ್ತಿವೆ. ಅವರ ಭಾಷೆಯಲ್ಲಿ ಬೆಳಗಿದೆ, ನುಡಿಯಲ್ಲಿ ಭಕ್ತಿಯ ಕಿಡಿ ಇದೆ. ಶೈಲಿ ಜನಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ಯಥಾವತ್ತಾಗಿ ಚಿತ್ರಿತಗೊಂಡು ಕನ್ನಡ ಸಾಹಿತ್ಯದಲ್ಲಿ ಮೇಲ್ಮಟ್ಟದ ಸ್ಥಾನವನ್ನು ಅಲಂಕರಿಸುವ ಹಿರಿಮೆ ಈ ಸಾಹಿತ್ಯದಲ್ಲಿ ಅಡಕವಾಗಿದೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಶ್ರೀಮತಿ ಪೂರ್ಣಿಮಾ ಅ. ಮಿಣಚಿ, ಉಪನ್ಯಾಸಕರು ಕನ್ನಡ ವಿಭಾಗ ಕೆ.ಎಲ್.ಇ.ಸಂಸ್ಥೆಯ ಎಸ್.ಎಸ್.ಎಮ್.ಎಸ್.ಮಹಾವಿದ್ಯಾಲಯ,ಅಥಣಿ

How to cite this article:
ಶ್ರೀಮತಿ ಪೂರ್ಣಿಮಾ ಅ. ಮಿಣಚಿ.*(2026).* **"ಕನ್ನಡ ಸಾಹಿತ್ಯದಲ್ಲಿ ದಾಸ ಪರಂಪರೆ".** *Journal of Research and Development, 18(4(II)), 63–64. https://doi.org/10.5281/zenodo.19395815*

Quick Response Code:
Website: https://jrdrvb.org/
DOI: 10.5281/zenodo.19395815
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

ದಾಸ ಸಾಹಿತ್ಯವು ವಾಸ್ತವಿಕವಾಗಿ ಧಾರ್ಮಿಕ ತಳಹದಿಯ ಮೇಲೆ ಜನ್ಮವೆತ್ತಿದ್ದರು, ಸಾಮಾಜಿಕ ಪರಿವರ್ತನೆಗಾಗಿ ಪ್ರಾಮಾಣಿಕ ರೀತಿಯಲ್ಲಿ ಪ್ರಯತ್ನಿಸಿರುವುದು ಅವರ ಕೀರ್ತನೆಗಳ ಮೂಲಕ ಕಂಡುಬರುತ್ತದೆ. ಶತಶತಮಾನಗಳಿಂದ ಅನೇಕ ಏಳುಬೀಳುಗಳನ್ನು ಕಾಣುತ್ತಾ ಜರ್ಜರಿತವಾಗಿದ್ದ ಶುದ್ಧ ಭಕ್ತಿ ಪ್ರಸಾರ ಶ್ರೀ ಮಧ್ವಾಚಾರ್ಯರ ಮೂಲ ಉದ್ದೇಶವಾಗಿತ್ತು. ಆದರೆ ಆ ಧರ್ಮದಲ್ಲಿಯ ಹಿಂದಿನ ದಾರ್ಶಿಕರು ವ್ಯಕ್ತಪಡಿಸಿದ ತತ್ವಸಿದ್ಧಾಂತಗಳ ಸುಧಾರಣೆಯೊಂದಿಗೆ ನವಸಮಾಜಕ್ಕೆ ನಾಂದಿ ಹಾಡಿ ಹಿಂದೂ ಧರ್ಮದಿಂದ ಸಿಡಿದು ಹೋಗಬಹುದಾಗಿದ್ದ ಜನ ಸಮುದಾಯವನ್ನು ತಡೆ ಹಿಡಿಯುವಲ್ಲಿ ದಾಸಸಾಹಿತ್ಯ ವಿಶೇಷ ಪರಿಶ್ರಮ ಪಟ್ಟಿದೆ.

ಆದರೆ 10ನೇಯ ಶತಮಾನದಿಂದ 16ನೇ ಶತಮಾನದ ಪರ್ಯಂತರ ಅಖಂಡ 600 ವರ್ಷಗಳ ಪರ್ಯಂತರ ಹಿಂದೂ ಧರ್ಮದ ಧರ್ಮಾಧಿಕಾರಿಗಳು ತಮ್ಮ ಧರ್ಮರಕ್ಷಣೆಗಾಗಿ ಅವರು ಬರೆದದ್ದು ಹಾಗೂ ಬೋಧಿಸಿದ್ದು ದೇವ ಭಾಷೆಯಾದ ಸಂಸ್ಕೃತದಲ್ಲಿ. ಆ ಭಾಷೆಯು ಕೂಡ ಬಹುತೇಕ ಬ್ರಾಹ್ಮಣರ ಹೊರತಾಗಿ ಬೇರೊಬ್ಬರಿಗೆ ಅರ್ಥವಾಗುತ್ತಿರಲಿಲ್ಲ. ಅರ್ಥವಾಗದ ಭಾಷೆಯಲ್ಲಿ ಬರೆದ ಸಾಹಿತ್ಯ ಜನಸಾಮಾನ್ಯರಿಗಂತೂ ಏನು ಅರ್ಥವಾಗಲಿಲ್ಲ. ಅದನ್ನೆ ಮನಗಂಡ ಮಧ್ವಾಚಾರ್ಯರು ತಮ್ಮ ಶಿಶ್ಯರಾದ ನರಹರಿತೀರ್ಥರಿಗೆ ಧಾರ್ಮಿಕ ಉಪದೇಶವನ್ನು ತತ್ವಸಿದ್ಧಾಂತಗಳನ್ನು ಜನಸಾಮಾನ್ಯರು ಒಪ್ಪುವ ರೀತಿಯಲ್ಲಿ ತಿಳಿಯುವ ಭಾಷೆಯಲ್ಲಿ ಬರೆಯಬೇಕೆಂದು ಬಹುತೇಕ ಬೋಧಿಸಿರಬೇಕು! ನರಹರಿ ತೀರ್ಥರು ಮಧ್ವಮತದ ಸಿದ್ಧಾಂತಗಳನ್ನು ಜನರಾಡುವ ಕನ್ನಡ ಭಾಷೆಯಲ್ಲಿ ಪ್ರಥಮತಃ ಕೀರ್ತನೆಗಳಿಗೆ ಹುಟ್ಟು ಹಾಕಿರಬೇಕು.

ನರಹರಿ ತೀರ್ಥರು ಅಂದು ಮುಹೂರ್ತ ಮಾಡಿದ ಮಾತೃಭಾಷೆಯಲ್ಲಿ ರಚಿಸುವ ಕೀರ್ತನೆಗಳ ಪರಂಪರೆಯನ್ನು 15ನೇ ಶತಮಾನದಲ್ಲಿ ಶ್ರೀಪಾದರಾಯರು ಅದರ ಶ್ರೇಯಸ್ಸಿಗೆ ಕಾರಣೀಭೂತರೆನಿಸಿದರು. ಶ್ರೀಪಾದರಾಯರು ನಂತರ ವ್ಯಾಸರಾಯರು ದಾಸ ಸಾಹಿತ್ಯಕ್ಕೆ ಸುಭದ್ರ ಅಡಿಪಾಯ ಹಾಕಿದ ಶ್ರೇಯಸ್ಸು ಇವರಿಗೆ ಲಭಿಸುತ್ತದೆ.

ಶ್ರೀಪಾದರಾಯರ ನಂತರ ದಾಸ ಸಾಹಿತ್ಯದ ಬಾವುಟ ಎತ್ತಿ ಹಿಡಿದವರು ವ್ಯಾಸರಾಯರು ಇವರು ತಮ್ಮ ವಿದ್ವತ್ ತಪಸ್ಸಿನ ಮೂಲಕ ವಿಜಯನಗರ ದೊರೆಗಳಿಗೆ ಗುರುಗಳಾಗಿದ್ದರು ವ್ಯಾಸರಾಯರು ಬರೆದ ಅನೇಕ ಕೀರ್ತನೆಗಳು ಅಂದಿನ ತಿಕ್ಕಾಟದಲ್ಲಿ ಬಹುತೇಕ ಕಣ್ಮರೆಯಾಗಿರಬಹುದು. ಆದರೂ ಉಪಲಬ್ಧವಾಗಿರುವ ನೂರಾರು ಕೀರ್ತನೆಗಳಲ್ಲಿ ವ್ಯಾಸರಾಯರು ಪ್ರತಿಪಾದಿಸಿದ ಜನತಾದೃಷ್ಟಿಯನ್ನು ಜನಸಾಮಾನ್ಯರ ಭಾವನೆಗಳನ್ನು ನರನನ್ನು ನಾರಾಯಣ ಮಟ್ಟಕ್ಕೆ ನಿಲ್ಲಿಸಬಲ್ಲ ಅವರ ಕಾವ್ಯದಲ್ಲಿ ಕೀರ್ತನೆಗಳಲ್ಲಿ ಸಂಗೀತ ಜ್ಞಾನ ಒಡಮೂಡಿ ನಿಂತಿದೆ. ಗಾತ್ರವೇ ಮಂದಿರ, ಹೃದಯವೇ ಮಂಟಪ, ನೇತ್ರವೇ ಮಹದೀಪ ಎಂಬ ಮಾನಸ ಪೂಜೆಯ ರೂಪಕಗಳು ನೋಡತಕ್ಕವಾಗಿವೆ.

ವ್ಯಾಸರಾಯರ ನಂತರವೂ ಕನ್ನಡ ನಾಡಿನಲ್ಲಿ ದಾಸಕೂಟ ಪರಿಣಾಮಕಾರಿ ಪಾತ್ರ ನಿರ್ವಹಿಸಿದ್ದು ಕಂಡುಬರುತ್ತದೆ. ದಾಸವರೇಣ್ಯರಲ್ಲಿ ಪುರಂದರದಾಸರು ಹಿಮಾಚಲದಷ್ಟು ಎತ್ತರವಾಗಿ ಬೆಳೆದು ನಿಂತವರು ಅವರ ಸಮಕಾಲಿನ ಕನಕದಾಸರು ಅವರಿಗೆ ಯಾವುದೇ ರೀತಿಯ ಕಡಿಮೆಯಾಗದ ನುಡಿಗಳನ್ನು ಬಳಸಿ ಕಾವ್ಯ ಕೀರ್ತನೆಗಳನ್ನು ರಚಿಸಿದ ಲೋಕ ಮೆಚ್ಚುವ ದಾಸರು. ಉಭಯರು ಸಮಕಾಲೀನರು ಪರಸ್ಪರ ಉದ್ದೇಶ ಒಂದೇ ಆಗಿತ್ತು. ಇಬ್ಬರಿಗೂ ಉಪದೇಶಿಸಿ ಆಶೀರ್ವದಿಸಿದವರು ಶ್ರೀವ್ಯಾಸರಾಯರು. ಶ್ರೀವ್ಯಾಸರಾಯರ ಕನ್ನಡದ ಎರಡು ಕಣ್ಣುಗಳಾಗಿದ್ದರೂ ಪುರಂದರದಾಸರು ಹಾಗೂ ಕನಕದಾಸರು.

ಯುಗ ಯುಗಾಂತರಗಳಿಂದ ಸಾಮಾಜಿಕ ಬದಲಾವಣೆಗಾಗಿ ಬೀಸಿದ ಗಾಳಿಗೆ ಬೆಂಕಿಯ ಬಿರುಗಾಳಿಯಾಗಿ ಕನ್ನಡ ಕೀರ್ತನೆಗಳನ್ನು ಮನೆಮನೆಗೆ ಹೋಗಿ ಮನ ಮನದ ಮುಂದೆ ಹಾಡಿ ಜನಸಾಮಾನ್ಯರ ಮನಗಳನ್ನು ಸೂರೆಗೊಂಡ ಹಿರಿಯದಾಸರೆಂದರೇ ಪುರಂದರದಾಸರು ಮತ್ತು ಕನಕದಾಸರು. 12ನೇ ಶತಮಾನದ ಶರಣರು ತಮ್ಮ ವಚನ ವಾಙ್ಮಯದಲ್ಲಿ ಉಲ್ಲೇಖಿಸಿದ ಅಂಶಗಳನ್ನೇ ಉತ್ತರ–ಕನ್ನಡದ ಎತ್ತರ ಭಾಷೆಯಲ್ಲಿ ಸಾಮಾಜಿಕ ಮೌಢ್ಯ ಜಾಡ್ಯತೆಗಳನ್ನು ಹೊಡೆದು ಹಾಕುವಲ್ಲಿ ಸಮಾನತೆ–ಸಮತಾ ಸಿದ್ಧಾಂತಗಳನ್ನು ಇವರ ಕೀರ್ತನೆಯಲ್ಲಿ ಕಂಡುಬರುತ್ತವೆ. ಮೂಢನಂಬಿಕೆಗಳ ವಿರುದ್ಧ ಸಿಡಿದಿದ್ದ ಈ ದಾಸರು ಈ ದೇಶದ ಸಾಹಿತ್ಯ ಕ್ರಾಂತಿಯ ಜೊತೆಯಲ್ಲಿ ಸಾಮಾಜಿಕ ಉತ್ಕ್ರಾಂತಿಯ ಕಹಳೆಯನ್ನು ಕೀರ್ತನೆಗಳ ಮೂಲಕ ಮೊಳಗಿಸಿದರು.

ಭಾರತೀಯ ಪ್ರಾಚೀನ ಗ್ರಂಥಗಳೆಂದು ಪರಿಗಣಿಸಲ್ಪಟ್ಟಿರುವ ಹಾಗೂ ಇಂದಿಗೂ ಪೂಜೆಗೊಳ್ಳುತ್ತಿರುವ ಭಾಗವತ, ಭಗವದ್ಗೀತೆ, ರಾಮಾಯಣ, ವ್ಯಾಸ ಪುರಾಣಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಭಕ್ತಿ ಪ್ರಧಾನವಾದ ಕಥೆಗಳನ್ನೇ ಕಾವ್ಯದ ಆಧಾರವಾಗಿರಿಸಿಕೊಂಡು ಕೀರ್ತನೆ ರೂಪದಿಂದ ಕನ್ನಡದ ವಾಙ್ಮಯ ರಂಗವನ್ನು ತುಂಬಿದವರು ದಾಸರು. ಸಂಸ್ಕೃತ ಭಾಷೆಯಲ್ಲಿ ವ್ಯಕ್ತವಾಗಿರುವ ಕಥೆಗಳು ದಾಸರ ಹಾಡಿರುವ ಹಾಡುಗಳಲ್ಲಿ ಮೂಡಿಬಂದಿದೆ. ಕನ್ನಡದ ಕೀರ್ತನಗಳಿಗೆ ಪುರಂದರದಾಸರು ಹಾಗೂ ಕನಕದಾಸರು ಪಿತಾಮಹರಾಗಿದ್ದಾರೆ. ಕೀರ್ತನೆ ಜೊತೆಯಲ್ಲಿ ಸಂಗೀತವನ್ನು ಅಳವಡಿಸಿಕೊಂಡಿದ್ದು ಹಾಲಿಗೆ ಸಕ್ಕರೆ ಬೆರೆತಂತಾಯಿತು. ಕನಕದಾಸರು ವಿಶ್ವಮಾನವರ ಕಲ್ಯಾಣಕ್ಕಾಗಿ ಕರುಣೆಯಿಂದ ಕನಿಕರಿಸಿದವರು ಮಧ್ವಾಚಾರ್ಯರು, ರಾಮಾನುಜಾಚಾರ್ಯರು, ತಾತಾಚಾರ್ಯರ, ಶಿವ, ಪೈಗಂಬರ, ತತ್ವವನ್ನು ಎತ್ತಿ ಕೊಂಡಿದ್ದಾರೆ. ಅದಕ್ಕಾಗಿ ದಾಸರು ಹಾಗೂ ಸಂತರೆಂಬ ಕೀರ್ತಿಗೆ ಪಾತ್ರರಾಗಿದ್ದಾರೆ. ಕನಕದಾಸರಿಗೆ ಲಿಂಗವಂತರಾಗಲಿ, ವೈಷ್ಣವರಾಗಲಿ ಅಲ್ಲದೆ ಮಹಮದೀಯರಾಗಲಿ ಭಿನ್ನವಾಗಿ ಕಾಣಲಿಲ್ಲ. "ಆರು ಬಲ್ಲರು ಹರಿಹರರ ಮಹಿಮೆಯನ್ನು ವಾರಿಜೋದ್ಭವ ಸುರೇಂದ್ರಾದಿಗಳವಲ್ಲ" ಹರಿಹರ ಭೇದ ಯಾರಿಗೆ? ' ಅಲ್ಲಾ ಖುದಾ ಎಂಬ ಅರ್ಥವನ್ನರಿಯದೆ'.....ಎಂಬುದನ್ನು ನೋಡಿದಾಗ ಸಮಗ್ರ ಮನುಕುಲವನ್ನೇ ಸಮದೃಷ್ಟಿಯಿಂದ ಕಂಡವರು ದಾಸರಲ್ಲಿ ಕನಕರೊಬ್ಬರೆಂದು ಸ್ಪಷ್ಟವಾಗುತ್ತದೆ "ಏಕಕಾಲದಲ್ಲಿ ಕೀರ್ತನಾಕಾರರು ಕವಿಗಳು ಆದ ದಾಸರೆಂದರೆ ಇವರೊಬ್ಬರೇ" ಎಂಬ ಮಾತು ಸರ್ವ ಸತ್ಯ.

ದಾಸ ಸಾಹಿತ್ಯ ಕೇವಲ ಭಕ್ತಿ ಮಾರ್ಗವಾಗಿರದೆ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಒಂದು ಪ್ರಬಲ ಸಾಮಾಜಿಕ ಕ್ರಾಂತಿಯೂ ಆಗಿತ್ತು. "ಧರ್ಮದ ನಿಜವಾದ ತಿರುಳನ್ನು" ಪರಿಚಯಿಸುವುದರ ಜೊತೆಗೆ ಸಮಾಜದ ಪ್ರಮುಖ ಆಯಾಮಗಳಾದ ಜಾತಿ ಪದ್ಧತಿಯ ವಿರೋಧ, ಮೂಢನಂಬಿಕೆ ಮತ್ತು ಬಾಹ್ಯ ಆಡಂಬರದ ಖಂಡನೆ ಜನಸಾಮಾನ್ಯರ ಭಾಷೆ ಬಳಕೆ, ನೈತಿಕ ಮತ್ತು ಮಾನವೀಯ ಮೌಲ್ಯಗಳು, ಆರ್ಥಿಕ ಮತ್ತು ಕೌಟುಂಬಿಕ ಜೀವನದ ಸಲಹೆಗಳು ಇವೆಲ್ಲದಕ್ಕೂ ದಾಸ ಸಾಹಿತ್ಯ "ನೈತಿಕ ದಿಕ್ಸೂಚಿ"ಯಾಗಿ ಕೆಲಸ ಮಾಡಿದೆ.

ಮೂಢನಂಬಿಕೆ ಕುರುಡು ಆಚರಣೆಗಳಿಗೆ ಅಂತಿಮ ಪರಿಣಾಮ ಸಲ್ಲಿಸಿದ ದಾಸರ ಕೀರ್ತನೆಗಳಲ್ಲಿ ಬಂಡಾಯ ಬೀದಿಗಿಳಿದು ಬಂದಿದೆ. ಅವರಂದು ನಿರ್ಮಿಸಿದ ಸಾಹಿತ್ಯ ನಾಡಿನ ನಾಡಿಗರ ಮನೆಮಾರುಗಳ ಹೊಸ್ತಿಲಗಳ ಮುಂದೆ ತನು ದಣಿಯುವಂತೆ ಕುಣಿದಾಡಿದೆ, ಜನರನ್ನು ಕುಣಿದಾಡಿಸಿದೆ.

ಕನ್ನಡ ಸಂಸ್ಕೃತಿ ಮತ್ತು ಭಾಷೆಗೆ ದಾಸ ಸಾಹಿತ್ಯದ ಕೊಡುಗೆ ಅಪಾರ. ದಾಸ ಸಾಹಿತ್ಯವು ಭಕ್ತಿ ಮತ್ತು ಜ್ಞಾನದ ಮೂಲಕ ಮನಸ್ಸಿನ ಶಾಂತಿ ಮತ್ತು ಸಾಮಾಜಿಕ ಸಾಮರಸ್ಯವನ್ನು ಬೋಧಿಸಿತು. ಒಟ್ಟಿನಲ್ಲಿ ದಾಸ ಪರಂಪರೆ ಕನ್ನಡ ಸಾಹಿತ್ಯದಲ್ಲಿ ಭಕ್ತಿ ಮತ್ತು ಸಮಾಜ ಸುಧಾರಣೆಯ ಸಮನ್ವಯವಾಗಿದ್ದು, ಕನ್ನಡ ಸಂಸ್ಕೃತಿಗೆ ಅಮೂಲ್ಯ ಕೊಡುಗೆಯನ್ನು ನೀಡಿದೆ. ಇಂತಹ ದಾಸರ ಸಾಹಿತ್ಯ ಪಡೆದ ನಾವೇ ಧನ್ಯರು.

ಗ್ರಂಥಋಣ:

1) ಶರಣರ ದಾಸರ ಭಕ್ತಿ – ಪ್ರೊ. ಸಿದ್ದಣ್ಣ ಬಿ. ಉತ್ನಾಳಿ
2) ಕನ್ನಡ ಸಾಹಿತ್ಯ ಸಂಗಾತಿ – ಕೀರ್ತಿನಾಥ್ ಕುರ್ತಕೋಟಿ
3) ಕೀರ್ತನಕಾರರು – ಎಚ್.ಎಸ್. ವೆಂಕಟೇಶಮೂರ್ತಿ
4) ಕನ್ನಡ ಸಾಹಿತ್ಯ ಚರಿತ್ರೆಯ ಘಟ್ಟಗಳು – ಡಾ. ಎಸ್. ಎಂ. ಹಿರೇಮಠ
5) ದಾಸ ಸಾಹಿತ್ಯ ದರ್ಶನ – ಎಚ್. ಎಸ್. ಬ್ರಹ್ಮಾನಂದ
6) ದಾಸ ಪರಂಪರೆ – ಎಂ.ರಾಜಗೋಪಾಲಾಚಾರ್ಯ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಗುಲಾಬಿ ಟಾಕೀಸ್ ಕಥೆ ಮತ್ತು ಚಲನಚಿತ್ರ ಅಂತರಂಗ ಸಂಬಂಧ

ಡಾ. ಸುಮಾ ವ. ಸಾವಂತ
ಕನ್ನಡ ಉಪನ್ಯಾಸಕರು
ಸರಕಾರಿ ಪ್ರಥಮ ದರ್ಜೆ ಕಾಲೇಜು ಅಳ್ನಾವರ
Email-**sumasavant@gmail.com**

Manuscript ID:
JRD -2026-180420
ISSN: 2230-9578
Volume 18
Issue 4(II)
Pp.65-68
April 2026
Submitted:08 Mar. 2026
Revised:24Mar. 2026
Accepted:10Apr.2026
Published:30 April2026

ಸಾರಲೇಖ:

ಕನ್ನಡ ಸಾಹಿತ್ಯದ ಕತೆಗಳು ಮತ್ತು ಚಲನಚಿತ್ರಗಳ ನಡುವಿನ ಸಂಬಂಧ ಬಹಳ ಆಳವಾದದ್ದು. ಸಾಹಿತ್ಯವು ಜೀವನದ ಅನುಭವಗಳನ್ನು ಸಮಾಜದ ಸಂಕೀರ್ಣತೆಗಳನ್ನು ಮತ್ತು ಮಾನವೀಯ ಭಾವನೆಗಳನ್ನು ಚಿತ್ರಿಸುತ್ತದೆ. ಕನ್ನಡದಲ್ಲಿ ಅನೇಕ ಪ್ರಸಿದ್ಧ ಕತೆಗಳು, ಕಾದಂಬರಿಗಳು ಚಲನಚಿತ್ರಗಳಾಗಿ ರೂಪಾಂತರಗೊಂಡಿವೆ. ಆಧುನಿಕ ಸಾಮಾಜಿಕ ಸಂದರ್ಭದಲ್ಲಿ ಕಾದಂಬರಿಗಳೂ ಅತ್ಯಂತ ಜನಪ್ರಿಯ ಸಾಹಿತ್ಯ ಪ್ರಕಾರವಾಗಿವೆ. ಕಾದಂಬರಿಗಳು ಸಿನಿಮಾ ಮಾಧ್ಯಮದಲ್ಲಿ ಅತ್ಯಂತ ವಿಶಿಷ್ಟವಾದ ರೀತಿಯಲ್ಲಿ ಪಾದಾರ್ಪಣೆ ಮಾಡಿವೆ. ಇಂದು ಜನಜೀವನವನ್ನು ಆಕರ್ಷಿಸುವಲ್ಲಿ, ಪ್ರಭಾವಿಸುವಲ್ಲಿ ಇವೆರಡೂ ಮುಖ್ಯವಾದ ಮಾಧ್ಯಮಗಳೆನಿಸಿವೆ. ಸಮಾಜವನ್ನು ಆಳುವ ಶಕ್ತಿಗಳಾದ ಧರ್ಮ, ಬಂಡವಾಳಶಾಹಿಗಳನ್ನು ಬದುಕಿನ ನೆಲೆಗಳು, ಮೌಲ್ಯಗಳು ಅಪೇಕ್ಷೆಗಳು, ನೈತಿಕತೆಗಳನ್ನೂ ಈ ಮಾಧ್ಯಮಗಳು ಗಣನೀಯವಾಗಿ ಪ್ರಭಾವಿಸುತ್ತವೆ. ಗಂಭೀರವೆನಿಸಿಕೊಳ್ಳುವ ಸಾಹಿತ್ಯ ಕೃತಿಗಳು ಮತ್ತು ಸಿನಿಮಾಗಳು ಈ ಶಕ್ತಿಗಳಿಗೆ ಪ್ರೇರಕವಾಗಿ ಅವುಗಳಿಗೆ ಸೇವೆ ಸಲ್ಲಿಸುತ್ತವೆ.

ಕತೆ ಮತ್ತು ಕಾದಂಬರಿಗಳು ಸಿನಿಮಾ ಆದಾಗ ಏನೆಲ್ಲ ಬದಲಾವಣೆಗಳಾಗಬಹುದು. ಏನೆಲ್ಲ ಸಮಸ್ಯೆಗಳನ್ನು ಎದುರಿಸಬಹುದು ಎಂಬುದನ್ನು ತಿಳಿದುಕೊಳ್ಳುವುದು ಕುತೂಹಲದ ವಿಷಯವಾಗುತ್ತದೆ. ಒಂದೆಡೆ ದೃಶ್ಯ ಮಾಧ್ಯಮದ ಆರ್ಥಿಕ ಒತ್ತಡಗಳು, ಇನ್ನೊಂದೆಡೆ ಸಾಮಾಜಿಕ ಶಕ್ತಿಗಳ ಒತ್ತಡಗಳು ಕಾದಂಬರಿಯನ್ನು ದೃಶ್ಯ ಮಾಧ್ಯಮಕ್ಕೆ ಅಳವಡಿಸಿದಾಗ ಮೂಲ ಸ್ವರೂಪದಲ್ಲಿ ಮೂಡಿಬರದಿದ್ದರೂ ಕಾದಂಬರಿಯಲ್ಲಿರುವ ಕಥಾವಸ್ತು ಮತ್ತು ಸತ್ಯವನ್ನು ತನ್ಮೂಲಕ ಅವು ಪ್ರಸಾರ ಮಾಡುವ ಸಂದೇಶಗಳನ್ನೂ ಚಿತ್ರಗಳಲ್ಲಿ ನೋಡಬಹುದು. ಈ ಅಂಶಗಳನ್ನು ಗಮನಿಸಿ ಕತೆಗಳು, ಕಾದಂಬರಿಗಳು ಚಲನಚಿತ್ರವಾಗಿ ಪರಿವರ್ತನೆಗೊಂಡ ಹಿನ್ನೆಲೆಯಲ್ಲಿ ಅವು ಜನಜೀವನದ ಮೇಲೆ ಬೀರಿದ ಪ್ರಭಾವ, ಪ್ರೇರಣೆಗೆ ಒಳಪಡುತ್ತಾರೆ.

ಪ್ರಪಂಚದ ಎಲ್ಲಾ ಭಾಷೆಗಳಲ್ಲಿಯೂ ಚಲನಚಿತ್ರ ತಯಾರಾಗುತ್ತಿದ್ದು ಈ ದಿನಗಳಲ್ಲಿ ಅದು ಸಾಹಿತ್ಯದಿಂದ ಹೆಚ್ಚು ಸ್ಫೂರ್ತಿಗೊಂಡು ತಯಾರಾಗುತ್ತಿದೆ. ಸಾಹಿತಿ ಸತ್ತರೂ ಅವರ ಸಾಹಿತ್ಯ ಸಾಯದು ಅದು ಅಮರವಾಗಿರುತ್ತದೆ. ಇತ್ತೀಚೆಗೆ ಉಳಿದೆಲ್ಲಾ ಸಾಹಿತ್ಯ ಪ್ರಕಾರಗಳಿಗಿಂತ ಕಾದಂಬರಿಗಳು ಹೆಚ್ಚು ಜನಪ್ರಿಯತೆಯನ್ನು ಪಡೆದುಕೊಳ್ಳುತ್ತಿವೆ. ಓದುವ ವರ್ಗದವರಿಂದ ಮನ್ನಣೆ ಪಡೆದ ನಂತರ ಕಾದಂಬರಿಯ ವಿಷಯ, ವಸ್ತು ಉನ್ನತ ವಿಚಾರಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಮಹಾದಾಸೆಯಿಂದ ಕಾದಂಬರಿಯನ್ನು ಚಲನಚಿತ್ರವನ್ನಾಗಿ ಮಾಡಿಕೊಂಡಿರುವುದರ ಹಿನ್ನೆಲೆಯನ್ನು ನಾವು ಕಾಣಬಹುದು. ಇದರೊಟ್ಟಿಗೆ ಸಾಹಿತ್ಯ ಪ್ರಕಾರಗಳಾದ ನಾಟಕಗಳು, ಕಥೆಗಳು ಚಲನಚಿತ್ರಕ್ಕೆ ಪ್ರೇರಣೆಯನ್ನು ನೀಡಿವೆ. ಚಲನಚಿತ್ರದ ನಿರ್ಮಾಣದಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ಕಾದಂಬರಿಗಳೇ ಮುಖ್ಯ ಪಾತ್ರವನ್ನುವಹಿಸಿವೆ. ಈ ಅಂಶವನ್ನು ಗಮನಿಸಿ ಸಾಹಿತ್ಯ ಮತ್ತು ಚಲನಚಿತ್ರದ ಅವಿನಾಭಾವ ಸಂಬಂಧವನ್ನು ಗುರುತಿಸಿದ್ದೇನೆ.

ಮುಖ್ಯ ಪದಗಳು :ಲೈಂಗಿಕತೆಯ ಪ್ರಶ್ನೆ, ಸಾಹಿತ್ಯ–ಮಾಧ್ಯಮ, ಪುರುಷ ಪ್ರಧಾನ ವ್ಯವಸ್ಥೆ, ಸ್ತ್ರೀ ಅಸ್ಮಿತೆ

ಚಲನಚಿತ್ರ ಜನರನ್ನು ಬಹುಬೇಗ ಆಕರ್ಷಿಸುತ್ತದೆ. ಚಲಿಸುವ ದೃಶ್ಯಗಳ ಮೂಲಕ ಜನಸಾಮಾನ್ಯರನ್ನು ಸೆಳೆದ ಚಲನಚಿತ್ರದ ಬಗೆಗೆ ನಮಗೆ ತಿಳಿದಿರುವುದು ಮಾತ್ರ ಅತ್ಯಲ್ಪ. ಅದರ ಉಗಮದ ಹಿನ್ನೆಲೆ, ಸ್ವರೂಪ ಇವುಗಳ ಬಗೆಗೆ ಪ್ರೇಕ್ಷಕರೆಂದೂ ಚಿಂತಿಸುವುದಿಲ್ಲ. ಬದಲಿಗೆ ಕಣ್ಣಿಗೆ ಕಟ್ಟುವ ದೃಶ್ಯಗಳಿಂದಾಗಿ ಚಲನಚಿತ್ರ ಕೊಡುವ ಅನುಭವವನ್ನು ಆಸ್ವಾದಿಸುತ್ತಾರೆ. ಈ ಹಿನ್ನೆಲೆಯಲ್ಲಿ ಹಲವು ವಿಶಿಷ್ಟ ಲಕ್ಷಣಗಳನ್ನು ಹೊಂದಿರುವ ಚಲನಚಿತ್ರದ ಸ್ವರೂಪವನ್ನು **ಮೂಕ ಚಿತ್ರಗಳಿಂದ ಟಾಕಿ ಚಿತ್ರಗಳಿಗೆ** ಬಂದಾಗ ಅದರ ಸ್ವರೂಪದಲ್ಲಾದ ಬದಲಾವಣೆಗಳು ಆ ಮೂಲಕ ಚಲನಚಿತ್ರ ಪಡೆದುಕೊಂಡ ಮತ್ತು ಕಳೆದುಕೊಂಡ ವಿಶಿಷ್ಟತೆಗಳನ್ನು ವಿಶ್ಲೇಷಿಸಲಾಗಿದೆ. ಕನ್ನಡ ಸಾಹಿತ್ಯವು ಚಲನಚಿತ್ರಗಳಿಗೆ ಮಹತ್ತರ ಪ್ರೇರಣೆ ನೀಡಿದೆ. ಕನ್ನಡ ಕಥೆಗಳು ಸಿನಿಮಾಗಳಾಗಿ ರೂಪಾಂತರಗೊಂಡಾಗ, ಅವು ಸಾಹಿತ್ಯದ ಆಳವನ್ನು ಚಿತ್ರಮಾಧ್ಯಮದ ಮೂಲಕ ಜನರಿಗೆ ತಲುಪಿಸುತ್ತವೆ. ವಿಶೇಷವಾಗಿ ಅನಂತಮೂರ್ತಿ, ತೇಜಸ್ವಿ, ಕಾರಂತ್, ಚಿತ್ತಾಲರ ಕಥೆಗಳು ಕನ್ನಡ ಸಿನೆಮಾಕ್ಕೆ ವಿಶಿಷ್ಟ ಸ್ಥಾನ ನೀಡಿವೆ. ತ್ರಿವೇಣಿ, ತ.ರಾ.ಸು, ಭೈರಪ್ಪ, ಕುವೆಂಪು ಅವರ ಕೃತಿಗಳು ಸಿನಿಮಾಗಳಾಗಿ ರೂಪಾಂತರಗೊಂಡು ಜನರಿಗೆ ಸಾಹಿತ್ಯದ ಮೌಲ್ಯವನ್ನು ತಲುಪಿಸಿವೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ.ಸುಮಾ ವ ಸಾವಂತ, ಕನ್ನಡ ಉಪನ್ಯಾಸಕರುಸರಕಾರಿ ಪ್ರಥಮ ದರ್ಜೆ ಕಾಲೇಜು ಅಳ್ನಾವರ

How to cite this article:
ಡಾ.ಸುಮಾ ವ ಸಾವಂತ.*(2026).*ಗುಲಾಬಿ ಟಾಕೀಸ್ ಕಥೆ ಮತ್ತು ಚಲನಚಿತ್ರ ಅಂತರಂಗ ಸಂಬಂಧ. *Journal of Research and Development, 18(4(II)), 65–68. https://doi.org/10.5281/zenodo.19395918*

Quick Response Code:
Website: https://jrdrvb.org/
DOI: 10.5281/zenodo.19395918
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಒಂದು ಸಾಹಿತ್ಯಕೃತಿಯಲ್ಲಿ ಬರುವ ಪಾತ್ರಗಳು ಕಾಲ್ಪನಿಕವಾದರೂ ಸಹ ಆ ಸಾಹಿತ್ಯಕೃತಿಯ ಪಾತ್ರಗಳು ತೆರೆಯ ಮೇಲೆ ಅಭಿನಯಿಸಿದಾಗಲೇ ಅದು ಜೀವಂತ ಹಾಗೂ ಅನುಕರಣೀಯವೆನಿಸುವ ಅಭಿಪ್ರಾಯವನ್ನು ಜನಮನಕ್ಕೆ ಮೂಡಿಸುತ್ತದೆ.ಸಾಹಿತ್ಯಕೃತಿ ಮತ್ತು ಸಿನಿಮಾ ಎರಡು ವಿಭಿನ್ನ ಮಾದರಿಗಳಾದರೂ, ತಮ್ಮ ಇತಿ–ಮಿತಿಗಳಲ್ಲಿ ಹೊಂದಿಕೊಳ್ಳುತ್ತಾ ಹೋಗುವುದನ್ನು ಕಾಣುತ್ತೇವೆ. ಹೊಸಭಾಷೆಯೊಂದಿಗೆ ಕಲಾಕೃತಿಯ ನಿರ್ಮಾಣವಾಗುತ್ತದೆ. ಸಾಹಿತ್ಯ–ಮಾಧ್ಯಮದಲ್ಲಿರುವಂತಹ ವಸ್ತುಗಳನ್ನು ಸಿನಿಮಾಕ್ಕೆ ಪರಿವರ್ತಿಸುವಾಗ ನಿರ್ದೇಶಕರು ತಮ್ಮ ಸಂಪೂರ್ಣ ಜವಾಬ್ದಾರಿಯಿಂದ ಚಿತ್ರ ತಯಾರಿಸಿ ಜನತೆಯ ಮೆಚ್ಚುಗೆಯನ್ನು ಪಡೆದಲ್ಲಿ ಆತ ಒಬ್ಬ ಯಶಸ್ವಿ ನಿರ್ದೇಶಕನಾಗುತ್ತಾನೆ. ಇಲ್ಲಿ ಕೃತಿಕಾರರ ಅನುಮತಿ ಇರಲಿ ಇಲ್ಲದಿರಲಿ ತನ್ನ ಮನಸ್ಸಿನ ಅಭಿವ್ಯಕ್ತಿಯನ್ನು ಸಾಹಿತ್ಯಕೃತಿಯೊಂದಿಗೆ ಕ್ರೋಢಿಕರಿಸಿ ಹಲವಾರು ಬದಲಾವಣೆಗಳನ್ನು ಸಹ ಮಾಡಿಕೊಳ್ಳುತ್ತಾನೆ.

ಸಾಹಿತ್ಯಕ್ಕೆ ಭಾಷೆ ಅತ್ಯವಶ್ಯಕ.ಅದೇ ರೀತಿ ಸಿನಿಮಾಕ್ಕೆ ಶಾಟ್‌ಗಳು ಅತ್ಯವಶ್ಯಕ.ಈ ಶಾಟ್‌ಗಳನ್ನು ಕ್ರಮಬದ್ಧವಾಗಿ ಜೋಡಿಸಿದಾಗ ಸಿನಿಮಾಕ್ಕೆ ಜೀವ ಬರುತ್ತದೆ.ಸಾಹಿತ್ಯ ವ್ಯಕ್ತಿಯೊಬ್ಬರ ಸಾಮಾಜಿಕ ಅನುಭವದ ಅಭಿವ್ಯಕ್ತಿಯಾದರೆ, ಸಿನಿಮಾ ವ್ಯಕ್ತಿಯೊಬ್ಬನಲ್ಲಿ ಅಂದರೆ ಚಿತ್ರಕತೆಗಾರನಲ್ಲಿ ಮೊದಲು ರೂಪುಗೊಂಡು ಅನಂತರ ವಿವಿಧ ವ್ಯಕ್ತಿ ಮಾಧ್ಯಮಗಳ ಮೂಲಕ ಪುನರೂಪಗೊಳ್ಳುವ ಕಲಾಮಾಧ್ಯಮ.ಸಾಹಿತ್ಯ ಕೃತಿಯೊಂದನ್ನು ನಾವು ಓದುವಾಗ ಹಿಂದಿನ ಪುಟಕ್ಕೆ ಬೇಕಾದರೆ ಮತ್ತೆ ಹಿಂತಿರುಗಿಸಬಹುದು.ಆದರೆ ಸಿನಿಮಾ ನೋಡುವಾಗ ಹಿಂದಿನ ದೃಶ್ಯಕ್ಕೆಹೋಗುವುದು ಸಾಧ್ಯವಿಲ್ಲ. ಪುಸ್ತಕವನ್ನು ವ್ಯಕ್ತಿಯೊಬ್ಬನೇ ಓದುತ್ತಿದ್ದರೆ, ಸಿನಿಮಾವನ್ನು ನೂರಾರು ಜನ ಒಟ್ಟಿಗೇ ನೋಡುತ್ತಿರುತ್ತಾರೆ.

ಸಾಹಿತ್ಯ ಕೃತಿ ಅಕ್ಷರ ಮಾಧ್ಯಮದ ಮೂಲಕ ಪ್ರವೇಶ ಪಡೆಯುತ್ತದೆ.ಬಿಡುವಿನ ಅವಧಿಯಲ್ಲಿ ಕಾಲವನ್ನು ಕಳೆಯಲು, ಬೇಜಾರನ್ನು ಮರೆಯಲು, ಬುದ್ದಿಯನ್ನು ಚುರುಕುಗೊಳಿಸುವ ಮಾಧ್ಯಮವಾಗಿ ಸಾಹಿತ್ಯ ಕೃತಿ ಕೆಲಸ ಮಾಡುತ್ತದೆ.ಇಲ್ಲಿ ಮಧ್ಯಮವರ್ಗದ ಅಕ್ಷರಸ್ಥ ಸಮುದಾಯಗಳು ಬರುತ್ತವೆ. ಆಗ ತಾನೇ ಕಾಲಿಡುತ್ತಿರುವ ಹದಿಹರೆಯದ ಓದುಗ ಸಮುದಾಯ ಬರುತ್ತದೆ.

ಸಿನಿಮಾ ಹೆಚ್ಚಾಗಿ ಹಳ್ಳಿಗಾಡಿನ ಮತ್ತು ನಗರದ ಅನಕ್ಷರಸ್ಥ ಸಮುದಾಯವನ್ನು ಒಳಗೊಂಡಿದೆ.ಕಾರಣ ಅನಕ್ಷರಸ್ಥರಿಗೆ ಓದು ಬರೆಯಲು ಸಾಧ್ಯವಿಲ್ಲದ್ದರಿಂದ ಅವರು ತಮ್ಮ ಬಿಡುವಿನ ಅವಧಿಯಲ್ಲಿ ಸಮಯವನ್ನು ಕಳೆಯಲು, ಬೇಜಾರನ್ನ ಮರೆಯಲು ಈ ಮಾಧ್ಯಮವನ್ನು ಅವಲಂಬಿಸುತ್ತಾರೆ.

ಯಶಸ್ವಿಯಾದ ಸಾಹಿತ್ಯ ಕೃತಿಗಳು ಹಲವಾದರೆ ಮತ್ತೆ ಕೆಲವು ಸಿನಿಮಾ ಮಾಧ್ಯಮದ ಮೂಲಕ ಯಶಸ್ವಿಯಾಗುತ್ತವೆ. ಅವೆರಡೂ ಒಂದಕ್ಕೊಂದು ಪೂರಕ. ಸಾಹಿತ್ಯಕೃತಿಯಲ್ಲಿ ಇರುವುದೆಲ್ಲವನ್ನು ಸಿನಿಮಾ ಬಳಸಿಕೊಳ್ಳಲು ಸಾಧ್ಯವಾಗದಿದ್ದರೂ ಸಾಹಿತ್ಯ ಕೃತಿಯ ಸಂದೇಶವನ್ನು ನೀಡುವಲ್ಲಿ ಹಿಂತೆಗೆಯುವುದಿಲ್ಲ. ಸಾಹಿತ್ಯದಿಂದಲೇ ಸಿನಿಮಾ ಹೊರತಾಗಿ ಸಿನಿಮಾದಿಂದ ಸಾಹಿತ್ಯವಲ್ಲ, ಸಾಹಿತ್ಯಕೃತಿಯ ಪಾತ್ರಗಳು ಮಾಧ್ಯಮದ ಬೆಳ್ಳಿತೆರೆಯ ಮೇಲೆ ಮೂಡಿ ವಾಸವದಂತೆ ಗೋಚರಿಸುತ್ತವೆ. ಕಲ್ಪನೆಯ ಮೂಲಕವೇ ಸಾಹಿತ್ಯಕೃತಿಯೂ ಸೃಷ್ಟಿಯಾಗುತ್ತದೆ. ಆ ಕಲ್ಪನೆಯನ್ನು ತೆರೆಯ ಮೇಲೆ ತೋರಿಸುವಂತಹ ಪ್ರಯತ್ನವನ್ನು ಬೆಳ್ಳಿತೆರೆ ಮಾಡುತ್ತದೆ.

ವೈದೇಹಿಯವರ 'ಗುಲಾಬಿಟಾಕೀಸು', ಕೃತಿಗಳನ್ನು ಅನುಲಕ್ಷಿಸಿದಾಗ ಮೂಲ ಕಥೆ ಸಮುದ್ರ ತೀರದ ಒಂದು ಗ್ರಾಮದಲ್ಲಿ ನಡೆಯುತ್ತದೆ.ಮುಖ್ಯ ಪಾತ್ರ ಗುಲಾಬಿ, ಒಂಟಿತನ, ದಾರಿದ್ರ್ಯ ಮತ್ತು ಸಮಾಜದ ನಿರ್ಲಕ್ಷ ಅನುಭವಿಸುವ ಮಹಿಳೆ.ಈ ಕಥೆಯಲ್ಲಿ ಬರುವಂತಹ ಸಾಮಾಜಿಕ ಜೀವನದ ರೀತಿ–ನೀತಿ, ನಡಾವಳಿ, ಸಂಪ್ರದಾಯ, ಪ್ರತಿಭಟನೆ, ಮೂಢನಂಬಿಕೆ, ಜನರ ಮನಸ್ಥಿತಿ ಇವುಗಳ ನೆಲೆಯಲ್ಲಿ ಗುರ್ತಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

ಒಟ್ಟು ಜನಸಂಖ್ಯೆಯ ಅರ್ಧದಷ್ಟಿರುವ ಸ್ತ್ರೀಯರು ಮಾನವ ಸಮಾಜದ ಬಹುಮುಖ್ಯ ಅಂಗವೇ ಆದರೂ ಮುಖ್ಯವಾದ ಸ್ಥಾನ ಮಾತ್ರ ಇತಿಹಾಸದ ಕಾಲದಿಂದಲೂ ಆಕೆಗೆ ಸಿಕ್ಕಿಲ್ಲ. ಆಕೆ ಎರಡನೇ ದರ್ಜೆಯ ಪ್ರಜೆಯಾಗಿಯೇ ಬೆಳೆದುಬಂದಳು. ಪ್ರಕೃತಿ ಸಹಜವಾದ ಭಿನ್ನತೆಯೇ ಅವಳ ದೌರ್ಬಲ್ಯವೆಂದು ಪರಿಗಣಿಸಲ್ಪಟ್ಟು, ವ್ಯಕ್ತಿತ್ವ ಕಳೆದುಕೊಳ್ಳುವಂತೆ ಪುರುಷ ಪ್ರಧಾನ ವ್ಯವಸ್ಥೆ ಮಾಡಿದೆ.ಹೀಗಾಗಿ ಪುರುಷರ ದೃಷ್ಟಿಯಲ್ಲಿ ಆಕೆ ಇಂದಿಗೂ ಕೀಳಾಗಿಯೇ ಕಾಣುತ್ತಾಳೆ. ಆಧುನಿಕ ಸಾಹಿತ್ಯದ ಕಾಲದವರೆಗೂ ಕಂಡು ಬರುವ ಸ್ತ್ರೀಪಾತ್ರಗಳಲ್ಲಿ ವ್ಯವಸ್ಥೆಯನ್ನು ಒಪ್ಪಿಕೊಂಡು ಪ್ರತಿಭಟನೆಯನ್ನು ತೋರದ ಸೀತೆ, ಅಹಲ್ಯ, ಊರ್ಮಿಳೆ, ರೇಣುಕೆಯಂತಹ ಪಾತ್ರಗಳು ತಾನಿಚ್ಛಿಸಿದವರನ್ನು ವರಿಸಿದ ಶಾಕುಂತಲ, ದಾಂಪತ್ಯ ಜೀವನದೊಳಗಿದ್ದೂ ಪರಪುರುಷನನ್ನು ಮೋಹಿಸುವ ಅಮೃತಮತಿ ಇವರೆಲ್ಲ ಪುರುಷ ಪ್ರಧಾನ ವ್ಯವಸ್ಥೆಗೆ ಸಿಕ್ಕಿ ನಲುಗಿದ್ದನ್ನು ಕಾಣಬಹುದಾಗಿದೆ.

ವೈದೇಹಿಯವರ ಟಾಕೀಸು ಒಂದು ಸೀಮಿತ ಆವರಣದಲ್ಲಿ ಬರೆಯುತ್ತಾರೆ ಎಂದು ಮೇಲುನೋಟಕ್ಕೆ ಅನಿಸಿದರೂ ವೈದೇಹಿ ಬರಹಗಳು ಬದುಕಿನ ಅನೇಕ ಮುಖ್ಯ ಪ್ರಶ್ನೆಗಳನ್ನು ಸೂಕ್ಷವಾಗಿ ಅನುಸಂಧಾನ ಮಾಡಿವೆ. ಲೈಂಗಿಕತೆಯ ಪ್ರಶ್ನೆಯನ್ನು ಅವರು ಹಲವು ದೃಷ್ಟಿಗಳಿಂದ ಪರೀಕ್ಷಿಸಿದ್ದಾರೆ.ಮದುವೆ, ಕುಟುಂಬದಂತಹ ಸಾಮಾಜಿಕ ಸಂಸ್ಥೆಗಳನ್ನು ಆಳವಾದ ಪರಿಶೀಲನೆಗೆ ಒಡ್ಡಿದ್ದಾರೆ.ಜಾತಿವರ್ಗಗಳ ಇಕ್ಕಟ್ಟುಗಳನ್ನು ಸಮತೋಲನಗೊಳಿಸಿ ನೋಡಿದ್ದಾರೆ.ಸಾಮಾಜಿಕ ಸಾಂಸ್ಕೃತಿಕ ಪಲ್ಲಟಗಳನ್ನು ನಿರೂಪಿಸಿದ್ದಾರೆ.ಈ ದೃಷ್ಟಿಯಿಂದ ಅವರ ಗುಲಾಬಿಟಾಕೀಸು ಭಾರತದ ಪ್ರಧಾನ ಧಾರೆಯ ಕಥಾಸಾಹಿತ್ಯಕ್ಕೆ ಒಂದು ಅಮೂಲ್ಯ ಕೊಡುಗೆ ಎಂದು ಹೇಳಬಹುದು.

ವೈದೇಹಿ ಸಿದ್ಧಾಂತಗಳ ಮೂಲಕ ಬದುಕನ್ನು ಗ್ರಹಿಸುವವರಲ್ಲ, ಆದರೆ ಅವರ ಗ್ರಹಿಕೆ ಮತ್ತು ಅಭಿವ್ಯಕ್ತಿಗಳ ಸ್ವರೂಪ ಹೇಗಿವೆಯೆಂದರೆ ಬರೆದವರು ಯಾರೆಂದು ಗೊತ್ತಿಲ್ಲದಿದ್ದರೂ ಬರವಣಿಗೆಯನ್ನು ಮಾಡಿದವರು ಸೂಕ್ಷ್ಮ ಮನಸ್ಸಿನ ಓರ್ವ ಲೇಖಕಿಯೇ ಇರಬೇಕು ಎನ್ನುವಷ್ಟು ಅವರ ಸ್ತ್ರೀ ಸಂವೇದನೆ ಗಾಢವಾಗಿದೆ.ಗುಲಾಬಿಟಾಕೀಸು ಮತ್ತು ಸಣ್ಣ ಅಲೆಗಳು ಕತೆಯ ಆರಂಭವನ್ನೇ ನೋಡಿ "ಅದು ಬೈತಲೆಯಂತೆ ಒಂದೇ ರಸ್ತೆಯಿರುವ ಊರು, ಯಾವ ಲೇಖಕನಿಗೆ ಇಂಥ ಉಪಮೆ ಹೊಳೆದೀತು" ಈ ಕಥೆಯಲ್ಲಿ ವೈದೇಹಿ ಒಂದು ಮುಖ್ಯ ಸಾಮಾಜಿಕ ಪಲ್ಲಟವನ್ನು ಕುರಿತು ಹೇಳುತ್ತಾರೆ.ಅದನ್ನು ಮಹಿಳೆಯರ ದೃಷ್ಟಿಕೋನದಿಂದ ಹೇಳುತ್ತಾರೆ. ಸಿನಿಮಾ ಮಹಿಳೆಯರ ಮನೋಲೋಕದಲ್ಲಿ ಮತ್ತು ಸಾಮಾಜಿಕ ಲೋಕದಲ್ಲಿ ತಂದ ಪಲ್ಲಟಗಳನ್ನು ವರ್ಣಿಸುವಾಗ, "ಸಿನಿಮಾ ನೋಡಲಿಕ್ಕಾಗಿ ಹೆಂಗಸರು ಮುಟ್ಟಾಗುವುದನ್ನೇ ಕಾಯುತ್ತಾ ಮಡಿ ಮೈಲಿಗೆಯ ಪರಿಧಿಯಲ್ಲಿ ಒಂದು ಛಳಕನ್ನೇ ಹುಟ್ಟಿಸಿದ್ದು" ಲೇಖಕಿಯ ಗಮನವನ್ನು ತಪ್ಪಿಸಿಕೊಳ್ಳುವುದಿಲ್ಲ. ಊರಿನ ಸೂಲಗಿತ್ತಿ ಲಿಲ್ಲೀಬಾಯಿ ಹುಟ್ಟಿಸಿದ್ದು" ಲೇಖಕಿಯ ಗಮನವನ್ನು ತಪ್ಪಿಸಿಕೊಳ್ಳುವುದಿಲ್ಲ. ಊರಿನ ಸೂಲಗಿತ್ತಿ ಲಿಲ್ಲೀಬಾಯಿ ಗೇಟ್ ಕೀಪರ್ ಕೆಲಸಕ್ಕೆ ಸೇರಿಕೊಂಡಾಗ, "ಗಂಡಸರೆದುರು ಹೆರುವುದೆ ? ಎಂಬ ಕಾರಣಕ್ಕಾಗಿ ಮೂಲೆಗೊತ್ತಲ್ಪಟ್ಟ ಆ ಊರಿನ ಡಾಕ್ಟರ ಶಾಪು ಸುಣ್ಣ ಬಣ್ಣದಿಂದ ಶೋಭಿಸಲಾರಂಭಿಸಿತು" ಹೆಂಗಸರಿಗೆ ತಮ್ಮ ಅಸ್ಮಿತೆಯ ಅರಿವು ಮೂಡಿದ್ದು ಅದರಿಂದಾಗಿ ಅವರ ಲೋಕವ್ಯವಹಾರಗಳ ಪರಿಯಲ್ಲೇ ಬದಲಾವಣೆಗಳು ಗೋಚರವಾಗತೊಡಗಿದ ಸಂಕೀರ್ಣ ವಿದ್ಯಮಾನಗಳ ಲಘುಧಾಟಿಯಲ್ಲೇ ಕತೆ ನಿರೂಪಿಸುವ ಕ್ರಮ ಅನನ್ಯವಾಗಿದೆ.

ಸೂಲಗಿತ್ತಿಯಾಗಿ ಸಾಹಿತ್ಯಪಠ್ಯ ಲಿಲ್ಲೀಬಾಯಿಯನ್ನು ಗುರ್ತಿಸಿಕೊಂಡರೆ, ಸಿನಿಮಾದಲ್ಲಿ ಗುಲಾಬಿಯನ್ನೇ ಸೂಲಗಿತ್ತಿಯಾಗಿ ಚಿತ್ರಿಸಲಾಗಿದೆ.ಸಾಹಿತ್ಯಕೃತಿ ಲಿಲ್ಲೀಬಾಯಿಯನ್ನೇ ಕೇಂದ್ರವಾಗಿ ಇಟ್ಟುಕೊಂಡು ಅವಳ ಬದುಕನ್ನೇ ಚಿತ್ರಿಸಲಾಗಿದೆ.ಇವಳು ಎಲ್ಲರಂತೆ ತಾನು ಶ್ರೀಮಂತಳಾಗಬೇಕೆಂದು ಆಸೆಪಟ್ಟದ್ದು ಊರಿಗೆ ಟಾಕೀಸು ಬಂದಾಗ ತಾನೆ ಗೇಟ್‌ಕಾಯುವ ಕೆಲಸಕ್ಕಾಗಿ ಸೇರಿಕೊಂಡದ್ದು ಇದರಿಂದ ಲಾಭಮಾಡಿಕೊಂಡು ಬದುಕಿನ ರೀತಿ–ನೀತಿ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಬದಲಾಯಿಸಿಕೊಂಡಳು.ಮ್ಯಾನೇಜರ್ ಮತ್ತು ಒಬ್ಬ ಹೆಂಗಸಿನ ನಡುವಣ ಸಂಬಂಧವನ್ನು ಎಲ್ಲರೊಂದಿಗೆ ಹೇಳಿ ಮ್ಯಾನೇಜರ್ ಕೋಪಕ್ಕೆ ತುತ್ತಾಗಿದ್ದು ಇತ್ಯಾದಿ ಎಲ್ಲವನ್ನು ಚಿತ್ರಿಸುತ್ತದೆ.ಆದರೆ ಸಿನಿಮಾದಲ್ಲಿ ಗುಲಾಬಿಯ ಬದುಕನ್ನೇ ಹೆಚ್ಚು ಚಿತ್ರಿಸಿದ್ದಾರೆ.ಇಲ್ಲ ಸಿನಿಮಾ ಸಾಹಿತ್ಯಕೃತಿಯಿಂದ ಗುಲಾಬಿ ಟಾಕೀಸು ಎಂಬ ರೂಪಕವನ್ನು ಮಾತ್ರ ತೆಗೆದುಕೊಂಡಿದೆ.ಸಾಹಿತ್ಯ ಕೃತಿಯಲ್ಲಿ ಊರಿಗೆ ಟಾಕೀಸ್ ಬರುವುದು ಗುಲಾಬಿಯ ನೆನಪಿಗೋಸ್ಕರ.ಅವನ ಮಗನಾದ ಚಂದಪ್ಪ ಬೊಂಬಾಯಿಯಿಂದ ಬಂದು ಆ ಊರಿನಲ್ಲಿ ಟಾಕೀಸ್ ಹಾಕಿಸುತ್ತಾನೆ. ಇದರಿಂದ ಜನರಲ್ಲಿಯೂ ಅನೇಕ ಬದಲಾವಣೆಗಳಾಗುತ್ತದೆ ಆದರೆ ಸಿನಿಮಾದಲ್ಲಿ ಗುಲಾಬಿ ಮನೆಯೇ ಟಾಕೀಸ್ ಆಗುತ್ತದೆ.ಅವಳು ಸಿನಿಮಾದ ಪೋಸ್ಟರ್ ಅನ್ನು ತಂದು ತನ್ನ ಗುಡಿಸಲಸುತ್ತ ಅಂಟಿಸಿಕೊಳ್ಳುತ್ತಾಳೆ. ಅವಳ ಮನೆಗೆ ಟಿ.ವಿ ಬಂದದ್ದರಿಂದ ಅವಳ ಗುಡಿಸಲೇ ಟಾಕೀಸ್ ಆಗುತ್ತದೆ. ಟಿ.ವಿ ಸುಮ್ಮನೇ ಗುಲಾಬಿಯ ಗುಡಿಸಲಿಗೆ ಬರುವುದಿಲ್ಲ, ಅವಳು ಕಲ್ಯಾಣಮ್ಮನ ಮಗಳ ಹೆರಿಗೆ ಮಾಡಿದ್ದರಿಂದ ಕಲ್ಯಾಣಮ್ಮನವರು ಕಾಣಿಕೆ ರೂಪದಲ್ಲಿ ಕೊಡುತ್ತಾರೆ. ಕಡಲತೀರವನ್ನು ಸಿನಿಮಾದಲ್ಲಿ ಹೆಚ್ಚಾಗಿ ಚಿತ್ರಿಸಲಾಗಿದೆ.ಮೀನು ಹಿಡಿಯುವ ದೃಶ್ಯವನ್ನು ಚಿತ್ರಿಸಲಾಗಿದೆ.ಆದರೆ ಸಾಹಿತ್ಯ ಕೃತಿಯಲ್ಲಿ ಇದಾವುದು ಇಲ್ಲ.

ಗುಲಾಬಿ ಮನೆಗೆ ಟಿ.ವಿ. ಬಂದದ್ದರಿಂದ ಆ ಊರಿನ ಹುಡುಗರಿಗೆ ತುಂಬಾ ಸಂತೋಷವಾಗುತ್ತದೆ. ಅವರು ಊರಿನ ತುಂಬಾ ಸಾರುತ್ತಾ ಬರುತ್ತಾರೆ.ಟಿ.ವಿ ನೋಡಲು ಗುಲಾಬಿ ಮನೆಗೆ ಬನ್ನಿ ಎಂದು ಹೀಗೆ ಸಾರಿದಾಗ ಒಂದು ಮನೆಯಲ್ಲಿ ಅತ್ತೆ ಸೊಸೆ ಇಬ್ಬರು ಕೂಗಾಡುತ್ತಾರೆ. ಆದರೆ ಅತ್ತೆ ಸೊಸೆಯನ್ನು ಗದರಿಸಿ ಕಳಿಸುತ್ತಾಳೆ.ಇಲ್ಲಿ ನಾವು ಅತ್ತೆಯ ಅಧಿಕಾರವನ್ನು ನೋಡಬಹುದು.ಇದು ಸಾಹಿತ್ಯ ಕೃತಿಯಲ್ಲಿ ಇಲ್ಲ.

ಗುಲಾಬಿ ಮನೆಯಲ್ಲಿ ಬಣ್ಣದ ಟಿ.ವಿ ತಂದು ಹಾಕಿದಾಗ ಆ ಟಿ.ವಿಯಲ್ಲಿ ಮೊದಲು ತೋರಿಸುವುದು ತ್ರಿವರ್ಣಧ್ವಜವನ್ನು. ಇದು ಒಂದು ರೀತಿಯ ಸ್ವಾತಂತ್ರ್ಯದ ಸಂಕೇತವಾಗಿ ಮೂಡಿಬಂದಿದೆ.ಗುಲಾಬಿ ಇಲ್ಲಿ ಸ್ವತಂತ್ರಳಾಗಿ ಬದುಕುತ್ತಾಳೆ.ಯಾರಲ್ಲಿಯೂ ಕೂಡ ಭೇದ ಭಾವವನ್ನು ಎಣಿಸುವುದಿಲ್ಲ. ಎಲ್ಲರ ಮನೆಗೂ ಹೋಗಿ ಅಂದರೆ ಹಿಂದೂ, ಮುಸ್ಲಿಂ ಇವರ ಇಬ್ಬರ ಮನೆಗೂ ಹೋಗಿ ಸೂಲಗಿತ್ತಿ ಕೆಲಸ ಮಾಡಿ ಬರುತ್ತಾಳೆ.ಆದರೆ ಇದ್ಯಾವುದು ಸಾಹಿತ್ಯಕೃತಿಯಲ್ಲಿ ಇಲ್ಲ. ಬದಲಾಗಿ ಸಾಹಿತ್ಯಕೃತಿಯಲ್ಲಿ ಲಿಲ್ಲೀಬಾಯಿ ಎಂಬ ಪಾತ್ರವನ್ನು ಸೃಷ್ಟಿಸಿ ಆ ಪಾತ್ರದ ಮೂಲಕ ಸೂಲಗಿತ್ತಿಯ ಕೆಲಸವನ್ನು ಮಾಡಿಸುತ್ತಾರೆ.ಟಾಕೀಸಿನ ಗೇಟ್ ಕಾಯುವವಳಾಗುತ್ತಾಳೆ.ಹೀಗೆ ಸಾಹಿತ್ಯಕೃತಿ ಮತ್ತು ಸಿನಿಮಾ ಎರಡು ಬೇರೆ ಬೇರೆ ರೀತಿಯಲ್ಲಿ ಮೂಡಿಬಂದಿವೆ. ಆಧುನಿಕತೆಯ ಸಂಕೇತವಾಗಿ ಸಿನಿಮಾದಲ್ಲಿ ರಿಮೋಟಿನ ಪರಿಚಯ ಮಾಡಿಕೊಡುತ್ತಾರೆ.ಆದರೆ ಸಾಹಿತ್ಯಕೃತಿಯಲ್ಲಿ ಆಧುನಿಕತೆಯ ಸಂಕೇತವಾಗಿ ಊರಿಗೆ ಟಾಕೀಸನ್ನೇ ತರುತ್ತಾರೆ.ಸಿನಿಮಾದಲ್ಲಿ ಅತ್ತೆ ಸೊಸೆಯರ ಒಂದು ಧಾರವಾಹಿಯನ್ನು ಚಿತ್ರಿಸಿ ಆ ಬಗ್ಗೆ ವಿವರಣೆ ಹೇಳಿದರೆ ಸಾಹಿತ್ಯಕೃತಿಯಲ್ಲಿ ಟಾಕೀಸಿನಲ್ಲಿ ಸಿನಿಮಾಗಳನ್ನು ಚಿತ್ರಿಸಿ ಆ ಬಗ್ಗೆ ವಿವರಣೆ ಇದೆ.

ಸ್ತ್ರೀಯರಿಗೆ ಒಂದು ಚೌಕಟ್ಟನ್ನು ಹಾಕಿ ಸ್ತ್ರೀ ಎಂದರೆ ಹೇಗೆ ಇರಬೇಕು ಎಂಬುದನ್ನು ಹೇಳಿ ಅವರನ್ನು ಅವರದೆ ಆದಂತಹ ಲೋಕದಲ್ಲಿ ಕಟ್ಟಿಹಾಕಿರುವುದನ್ನು ಕಾಣಬಹುದಾಗಿದೆ.ಉದಾ :"ಸಂಜೆ ಹೊತ್ತಿನಲ್ಲಿ ಮಕ್ಕಳನ್ನು ಆಟಕ್ಕೆ ಕಳಿಸಿ ತಲೆ ಬಾಚಿಕೊಂಡು, ಹಣೆಗಿಟ್ಟುಕೊಂಡು, ಸಂಜೆಮಲ್ಲಿಗೆ ದಂಡೆಯನ್ನೋ, ಸುರುಳಿ ಹೂವಿನ ದಂಡೆಯನ್ನೋ ಮುಡಿಗೇರಿಸಿಕೊಂಡು ಸ್ವಲ್ಪ ಸುಧಾರಿಸಿಕೊಂಡಿರುತ್ತಿದ್ದರು. ಅಥವಾ ನಾಳೆಯ ಕಡುಬಿಗೆ ಕೊಟ್ಟೆ ಸೆಡುತ್ತಲೋ, ಅಕ್ಕಿ ಉದ್ದು ಅರೆಯುತ್ತಲೋ, ಹೂ ಕಟ್ಟುತ್ತಲೋ ಇರುತ್ತಿದ್ದರು.ಸೂರ್ಯ ಕಂತಿದೊಡನೆ ದೇವರಿಗೆ ದೀಪ ಹಚ್ಚಿ ತಾಳ ತಟ್ಟುತ್ತಾ ಭಜನೆ ಮಾಡುತ್ತಿದ್ದರು", ಅವರು ಹೆಚ್ಚಾಗಿ ಒಂದೋ ಬಾಣಂತಿ, ಇಲ್ಲವೋ ಬಸುರಿ, ಇಲ್ಲವೇ ಮುಟ್ಟು ಅಥವಾ ಎಲ್ಲವನ್ನೂ ಮುಗಿಸಿ ಕುಳಿತವರಾಗಿರುತ್ತಿದ್ದರು."ಇಲ್ಲಿ ಸ್ತ್ರೀಯರ ವಿಶಿಷ್ಟವಾದ ಲೋಕವನ್ನು ಅನಾವರಣಗೊಳಿಸಿರುವುದನ್ನು ಮೇಲಿನ ವಾಕ್ಯಗಳಿಂದ ತಿಳಿಯಬಹುದು.

ಹೆಣ್ಣಿಗೆ ಸಾಮಾಜಿಕ, ಆರ್ಥಿಕ ಸ್ವಾತಂತ್ರ್ಯ ಎನ್ನುವುದು ಇರುತ್ತಿರಲಿಲ್ಲ. ಎಲ್ಲಾ ಅಧಿಕಾರವು ಪುರುಷರ ಕೈಯೊಳಗಿರುತ್ತಿತ್ತು. ಸ್ವತಂತ್ರವಾಗಿ ಒಂದು ಸಿನಿಮಾವನ್ನು ನೋಡುವ ಅವಕಾಶವಿರಲಿಲ್ಲ. ಸಿನಿಮಾವನ್ನು ನೋಡಬೇಕು ಎಂದರೆ ಗಂಡಸರನ್ನ ಕೇಳಬೇಕು.ಅವರು ಒಪ್ಪಿದರೆ ಮಾತ್ರ ಸಿನಿಮಾ ನೋಡಲು ಹೋಗಬೇಕು.ಇಲ್ಲವಾದರೆ ಅವರು ಮನೆಯ ಒಳಗಡೆಯೆ ಇರಬೇಕಾಗಿತ್ತು.ಅಕಸ್ಮಾತ್ ಏನಾದರೂ ಸಿನಿಮಾಕ್ಕೆ ಕಳುಹಿಸಲು ಒಪ್ಪಿದರೂ ಕೂಡ ಅವಳನ್ನ ಒಬ್ಬಳೆ ಕಳಿಸುತ್ತಿರಲಿಲ್ಲ. ಯಾರಾದರೂ ಗಂಡಸರು ಅವಳ ಜೊತೆ ಹೋಗಿ ಸಿನಿಮಾಕ್ಕೆ ಟಿಕೇಟ್ ತೆಗೆದುಕೊಟ್ಟು ಬರುತ್ತಿದ್ದರು.ಸಿನಿಮಾ ಮುಗಿದ ಮೇಲೆ ಮತ್ತೆ ಮನೆಗೆ ಕರೆತರುತ್ತಿದ್ದರು.ಇಲ್ಲಿ ನಾವು ತಿಳಿಯಬೇಕಾಗಿರುವುದು ಹೆಣ್ಣು ಹೊರಗೆ ಹೋಗಬೇಕಾದರೆ ಗಂಡಿನ ರಕ್ಷಣೆಯಲ್ಲಿ ಹೋಗಬೇಕು ಅವಳಿಗೆ ಒಬ್ಬಳೇ ಓಡಾಡುವ ಧೈರ್ಯವಿಲ್ಲ ಎಂಬುದನ್ನು.ನಮಗೆ ಸಾಹಿತ್ಯಕೃತಿ ಮನವರಿಕೆ ಮಾಡಿಕೊಡುತ್ತದೆ.ಆದರೆ ಸಿನಿಮಾದಲ್ಲಿ ಸ್ವಲ್ಪ ಮಟ್ಟಿಗೆ ಇದರ ಎಳೆಯನ್ನು ಕಾಣಬಹುದಾಗಿದೆ.

ಎಷ್ಟು ಕಾಲವೆಂದು ಮಹಿಳೆಯರು ಈ ಶೋಷಣೆಯನ್ನು ಸಹಿಸಿಕೊಳ್ಳಲು ಸಾಧ್ಯ.ಕಾಲ ಜಾರಿ ಹೋದ ಹಾಗೆ ಅಂದರೆ ಕಾಲಬದಲಾದಂತೆ ಸಂಪ್ರದಾಯಗಳು ಬದಲಾಗಬೇಕಲ್ಲವೆ. ಅದೇ ರೀತಿ ಸಾಹಿತ್ಯ ಕೃತಿಯಲ್ಲಿ ಹಿಂದಿನಿಂದ ನಡೆದುಕೊಂಡು ಬಂದ ಸಂಪ್ರದಾಯವನ್ನು ಮುರಿಯುವುದನ್ನು ಕಾಣಬಹುದು.ಮೊದ ಮೊದಲು ಹೆಂಗಸರು ಸಿನಿಮಾ ನೋಡಲು ಗಂಡನನ್ನು ಕೇಳಿಹೋಗುತ್ತಿದ್ದರೆ ಬರಬರುತ್ತಾ ಸ್ವತಃ ಅವರೆ ಹೋಗುತ್ತಾರೆ.ಗಂಡಸರೇನಾದರೂ ಕೇಳಿದರೆ ನಮಗೆ ಒಂದು ಸಿನಿಮಾ ನೋಡಲು ಅವಕಾಶವಿಲ್ಲವ, ಒಂದೇ ಸಮನೆ ಬೆಳಿಗ್ಗೆಯಿಂದ ದುಡಿಯುತ್ತೇವೆ ಎಂದು ಮರುಉತ್ತರವನ್ನು ಕೂಡುವಂತಾಗಿದ್ದಾರೆ.ಇಲ್ಲಿ ನಾವು ಬದಲಾವಣೆಯನ್ನು ಕಾಣಬಹುದಾಗಿದೆ.

ಸಿನಿಮಾ ಜನರನ್ನ ಎಷ್ಟು ಗಾಢವಾಗಿ ಆಕರ್ಷಿಸುತ್ತದೆ ಎಂದರೆ ತಮ್ಮನ್ನ ತಾವು ಆ ಸಿನಿಮಾದೊಳಗೆ ಕಾಣತೊಡಗುತ್ತಾರೆ.ಸಾಹಿತ್ಯ ಕೃತಿಯಲ್ಲಿ ಅತ್ತೆ ಸೊಸೆಯರ ಪ್ರಸ್ತಾಪವಿದೆ. ಹಾಗೆಯೇ ಸಿನಿಮಾದಲ್ಲೂ ಕೂಡ ಅತ್ತೆ ಸೊಸೆಯ ಪ್ರಸ್ತಾಪವಿದೆ. ಸಿನಿಮಾದಲ್ಲಿ ಧಾರವಾಹಿಯ ರೂಪದಲ್ಲಿದ್ದರೆ, ಸಾಹಿತ್ಯ ಕೃತಿಯಲ್ಲಿ ಸಿನಿಮಾದ ರೂಪದಲ್ಲಿದೆ.ಸಿನಿಮಾದಲ್ಲಿ ಬರುವ ಧಾರವಾಹಿಯಲ್ಲಿ ಪ್ರಭುಲತಾ ಸೊಸೆಯಾಗಿರುತ್ತಾಳೆ.ಇವಳು ಮನೆಯ ಯಾವುದೇ ಕೆಲಸವನ್ನು ಮಾಡುವುದಿಲ್ಲ. ಎಲ್ಲ ಕೆಲಸವನ್ನು ಅತ್ತೆಯೇ ಮಾಡುತ್ತಿರುತ್ತಾಳೆ.ಸೊಸೆಗೆ ಗಂಡ ಇರುವುದಿಲ್ಲ. ಅತ್ತೆ ಸೊಸೆಗೆ ಬುದ್ಧಿಕಲಿಸಲೆಂದು ಕಾಫಿಗೆ ಉಪ್ಪು ಹಾಕಿ ಕೊಡುತ್ತಾಳೆ.ಸೊಸೆಯಾದವಳು ನಾನು ಪಾರ್ಟಿಗೆ ಹೋಗುತ್ತಿದ್ದೇನೆ ಎಂದಾಗ ಯಾರ ಜೊತೆ ಎಂದು ಪ್ರಶ್ನೆ ಬರುತ್ತದೆ.ಅದಕ್ಕೆ ಸೊಸೆ ಚಿರಂತನ ಜೊತೆ ಎಂದಾಗ ಈ ಚಿರಂತನ ಗಂಡೋ, ಹೆಣ್ಣೋ ಎಂಬ ಪ್ರಶ್ನೆ, ಚಿರಂತನ ಗಂಡಾಗಿರುತ್ತಾನೆ ಕೊನೆಗೆ ಪ್ರಭುಲತ ಅವನ ಜೊತೆಯಲ್ಲಿಯೇ ಮದುವೆ ಮಾಡಿಕೊಳ್ಳುತ್ತಾಳೆ.ಈ ಕಥೆಯನ್ನು ಗುಲಾಬಿ ಮನೆಗೆ ಬಂದವರು ತುಂಬಾ ಉತ್ಸುಕರಾಗಿ ಕುತೂಹಲದಿಂದ ನೋಡುತ್ತಿರುತ್ತಾರೆ.ಹೀಗೆ ನೊಡುತ್ತಿರುವವರಲ್ಲಿ ನೇತ್ರನ ಪಾತ್ರ ಮಾಡಿರುವ ಪಲ್ಲವಿಯು ಒಬ್ಬಳಾಗಿರುತ್ತಾಳೆ.ಅವಳು ನನ್ನ ಬಾಳಿನಂಗೆ ಇದೆ ಈ ಪ್ರಭುಲತಾಳ ಬಾಳು ಎಂದಾಗ ಗುಲಾಬಿ ನೇತ್ರಳಿಗೆ ನೀನ್ಯಾಕೆ ಅವಳ ಬಾಳಿಗೆ ಹೋಲಿಸಿಕೊಳ್ಳುತ್ತೀಯ ಅವಳಿಗೆ ಗಂಡ ಇಲ್ಲ, ನಿನಗೆ ಇದಾನೆ ಎನ್ನುತ್ತಾಳೆ.ಈ ಧಾರವಾಹಿಯನ್ನು ನೊಡುವುದರ ಜೊತೆಗೆ ಜನಗಳಿಗೆ ಆಧುನಿಕತೆಯೂ ಪರಿಚಯವಾಗುತ್ತಿದೆ.ಆದರೆ ಸಾಹಿತ್ಯಕೃತಿಯಲ್ಲಿ ಸಿನಿಮಾವಾಗಿ ಮೂಡಿ ಬಂದಿದೆ.ಅದು ಸಂತಸಕ್ಕೂ ಸಿನಿಮಾ – ನೋಡುತ್ತ ನೋಡುತ್ತ ಅತ್ತೆಯೂ ಮರಗಿದ್ದು ಸೊಸೆಯೂ ಮರಗಿದ್ದು ನಾನು ಸಿನಿಮಾ ಕಾಣುವುದನ್ನು ಬಿಟ್ಟೂ ಕಡೆಗೆ ಈ ಸಿನಿಮಾ ಕಾಣುತ್ತ ಕುಳಿತದ್ದಲ್ಲವೆ?ಎಂದು ಲಿಲ್ಲೀಬಾಯಿ ಹೇಳುತ್ತಾಳೆ.

ಸಾಹಿತ್ಯ ಕೃತಿಯಲ್ಲಿ ಮಂಜುನಾಥಯ್ಯನ ಹೆಂಡತಿಯ ಪರಿಸ್ಥಿತಿಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.ಮಂಜುನಾಥಯ್ಯನ ಹೆಂಡತಿ ಅನುಕೂಲ ಕುಟುಂಬಕ್ಕೆ ಸೇರುವ ಹೆಣ್ಣಾಗಿ ಇಲ್ಲಿ ಚಿತ್ರಿತವಾಗಿದ್ದಾಳೆ.ಇವಳ ಮನೆಯಲ್ಲಿ ದವಸ ಧಾನ್ಯಕ್ಕೆ ಯಾವುದೇ ಕೊರತೆ ಇಲ್ಲ. ಆದರೆ ಸಿನಿಮಾ ನೋಡಲು ಅವಳಲ್ಲಿ ಕಾಸಿಲ್ಲ. ಅಂದರೆ ಮನೆಯ ಯಜಮಾನಿಕೆಯನ್ನು ವಹಿಸಿಕೊಂಡ ಗಂಡ, ತನ್ನ ಹೆಂಡತಿಯ ಕೈಗೆ ಹಣವನ್ನೇ ಕೊಟ್ಟಿರುವುದಿಲ್ಲ. ಯಾವುದಕ್ಕೂ ಗಂಡನನ್ನ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಕೇಳಿ ಹಣ ಪಡೆಯಬೇಕು.ಹೀಗೆ ಇದ್ದಾಗ ಒಂದು ದಿನ ಸಿನಿಮಾ ನೋಡಲು ಹೋದಾಗ ಅವಳಲ್ಲಿ ಹಣ ಕಡಿಮೆ ಇರುವುದರಿಂದ ಲಿಲ್ಲೀಬಾಯಿ ಎಲ್ಲರನ್ನು ಒಳಗೆಬಿಡುವುದಿಲ್ಲ ಕೆಲವರನ್ನ ಮಾತ್ರ ಬಿಡುತ್ತಾಳೆ.ಇದರಿಂದ ಮಂಜುನಾಥಯ್ಯನ ಹೆಂಡತಿಗೆ ಬೇಸರವಾಗುತ್ತದೆ.ಎಷ್ಟು ಇದ್ದರೇನು ಕೆಲಸಕ್ಕೆ ಬಾರದ ಮೇಲೆ ಎಂದು ಬೈಯುತ್ತಾಳೆ.ಇಲ್ಲಿ ಪುರುಷ ಹೇಗೆ ಸ್ತ್ರೀಯನ್ನು ತನ್ನ ಅಧೀನದಲ್ಲಿ ಇಟ್ಟುಕೊಂಡಿದ್ದ ಎಂಬುದನ್ನು ತಿಳಿಯಬಹುದು.ಸಾಹಿತ್ಯ ಕೃತಿಯಲ್ಲಿ ಮಂಜುನಾಥಯ್ಯನ ಮನೆಯವರು ಎಂದಿದೆ.ಇಲ್ಲಿ ಪುರುಷ ಪ್ರಧಾನತೆಯನ್ನು ಕಾಣಬಹುದಾಗಿದೆ.ಇಲ್ಲಿ ಪುರುಷನನ್ನೆ ಕೇಂದ್ರವಾಗಿಟ್ಟುಕೊಂಡು ಅವರ ಮನೆಯವರನ್ನ ಗುರ್ತಿಸಿರುವುದನ್ನು ಕಾಣಬಹುದಾಗಿದೆ.

ಪುರುಷ ಪಧಾನ ಸಮಾಜ ಸ್ತ್ರೀಯರನ್ನು ಕೆಳಗಿಳಿಸಿ ಆ ಜಾಗಕ್ಕೆ ಪುರುಷರನ್ನು ಯಾವ ರೀತಿ ತೆಗೆದುಕೊಂಡು ಬರುತ್ತಾರೆ ಎಂಬುದನ್ನು ಕಾಣಬಹುದಾಗಿದೆ.ಲಿಲ್ಲೀಬಾಯಿಗೆ ಗೇಟ್ ಕಾಯುವ ಕೆಲಸವಿರುತ್ತದೆ. "ಹೆಂಗಸರ ಕಡೆ ಹೆಂಗಸ್ರು ಗೇಟ್ ಕೀಪರ್ ಏಕೆ ಅವರವರು ಒಳಗೊಳಗೇ ಮಸಲತ್ತು ಮಾಡುವುದು ಬ್ರಹ್ಮನಿಗೂ ತಿಳಿಯುವುದಿಲ್ಲ ಅಂತೆಲ್ಲ ಗಂಡಸರಿಗೆ ಮಸಲತ್ತು ಮಾಡಲಿಕ್ಕೆ ಬರುವುದಿಲ್ಲ ಎಂಬಂತೆ, ಚರ್ಚೆಯಾಗಿ ಲಿಲ್ಲಿಯ ಜಾಗದಲ್ಲಿ ಶೀನ ಎಂಬವ ನೇಮಕಗೊಂಡ" ಎಂದು ಸಾಹಿತ್ಯ ಕೃತಿ ಮನವರಿಕೆ ಮಾಡಿಕೊಡುತ್ತದೆ.

ಗುಲಾಬಿ ಸತ್ತು ಎಲ್ಲಿದ್ದಾಳೋ, ಆದರೆ ಅವಳ ಸೇವೆಯ ಟಾಕೀಸು ಮಾತ್ರ ಈಗ ಪರದೇಸಿಯಾದರೂ, ಊರಿನಲ್ಲಿ ಅಗೋಚರವಾದೊಂದು ಅಲೆಯೆಬ್ಬಿಸಿ ಶಾಂತವಾಗಿ ನಿಂತಿದೆ. ಒಮ್ಮೆ ಎದ್ದ ಅಲೆ ಯಾವತ್ತೂ ದಡ ಸಿಕ್ಕುವವರೆಗೂ ವಿಸ್ತರಿಸುತ್ತಲೇ ಹೋಗುತ್ತದೆ. ಎಂದೂ ಹಿಂದಕ್ಕೆ ಮರಳುವುದಿಲ್ಲವಷ್ಟೇ?ಈ ರೀತಿಯಲ್ಲಿ ಸಾಹಿತ್ಯ ಕೃತಿ ಕೊನೆಯಾಗುತ್ತದೆ.ಒಟ್ಟಾರೆಯಾಗಿ ಹೇಳಬೇಕಾದರೆ ಸ್ತ್ರೀಯರಿಗೆ ಸ್ವಾತಂತ್ರ್ಯ ಸಿಕ್ಕುವವರೆಗೂ ಅದು ಅಲೆಯಾಗಿ ಹೊಡೆಯುತ್ತಿರುತ್ತದೆ ಎಂಬ ಅರ್ಥವನ್ನು ಕೊನೆಯದಾಗಿ ಧ್ವನಿಸುತ್ತದೆ. ಜನರು ವೈಜ್ಞಾನಿಕವಾಗಿ ಯೋಚಿಸುವಂತಾದರೆ ಮಾತ್ರ ಸಮಾಜದಲ್ಲಿ ಆರೋಗ್ಯಕರ ಬೆಳವಣಿಗೆ ಸಾಧ್ಯ ಮನುಷ್ಯ ಮನುಷ್ಯರ ಸಂಬಂಧಗಳು, ಮನೆ, ಪರಿಸರ, ನಾಡು, ಭಾಷೆ, ಭೂಮಿ, ಆಕಾಶ, ಸೂರ್ಯ, ಚಂದ್ರ ದೇವರು, ಮಾಟ, ಮಂತ್ರ, ಸಾವು–ಬದುಕು, ಅಸ್ತಿತ್ವ ಈ ಎಲ್ಲವುಗಳ ಬಗ್ಗೆ ವೈಜ್ಞಾನಿಕ ಕಥೆಗಳ ರೂಪದಲ್ಲಿ ಜನರಲ್ಲಿ ಸತ್ಯ ಬಿತ್ತಿದರೆ ಇಂದು ಮೂಢನಂಬಿಕೆಗಳಿಂದ, ಕನಸುಗಳಿಂದ, ಕೌರ್ಯಗಳಿಂದ, ಶೋಷಣೆಗಳಿಂದ, ಭಾವೋದ್ವೇಗದಿಂದ ಮನುಷ್ಯ ಹೊರ ಬರುತ್ತಾನೆ. ಚಲನಚಿತ್ರಗಳು, ಕತೆಗಳು, ಕಾದಂಬರಿಗಳು ಈ ದೃಷ್ಟಿಯಿಂದ ಕಾರ್ಯ ಪ್ರವೃತ್ತವಾಗಬೇಕು. ಇದರಿಂದ ಶೋಷಣೆಗೆ ಅಂತ್ಯ ಕಾಣಬಹುದು ಎಂಬುದನ್ನು ಹೇಳುವ ಮೂಲಕ ಸಮಾಜಕ್ಕೆ ಪ್ರಸ್ತುತವಾಗಿದೆ.

ಆಕರಗ್ರಂಥಗಳು :

೧) ಅಶೋಕ.ಟಿ.ಪಿ : ವೈದೇಹಿ ವಾಚಿಕೆ, ನುಡಿಪುಸಕ ಪಕಾಶನ, ಬೆಂಗಳೂರು, ೨೦೦೯
೨) ಅಶೋಕ.ಟಿ.ಪಿ : ಪುಸ್ತಕಪ್ರೀತಿ, ಅಕ್ಷರ ಪ್ರಕಾಶನ, ೧೯೯೩
೩) ಉಷಾ.ಪಿರೈ : ಎಂ.ಕೆ.ಇಂದಿರಾ(ಅನನ್ಯ ಮಹಿಳಾ ಚೇತನ ಮಾಲಿಕೆ), ಸಪ್ನಬುಕ್‌ಹೌಸ್, ಬೆಂಗಳೂರು, ೨೦೦೬
೪) ಗಾಯತ್ರಿಎನ್ : ಮಹಿಳೆ ಬಿಡುಗಡೆಯ ಹಾದಿಯಲ್ಲಿ, ಬೆಂಗಳೂರು ವಿಶ್ವವಿದ್ಯಾಲಯ, ೧೯೯೬
೫) ಗಂಗಾಧರ ಮೊದಲಿಯಾರ್ : "ಕನ್ನಡ ಸಿನಿಮಾ ಇತಿಹಾಸದ ಪುಟಗಳಲ್ಲ', ಕನ್ನಡ ಪುಸ್ತಕ ಪ್ರಾಕಾರ, ಬೆಂಗಳೂರು, ೧೯೯೮
೬) ಚಂದ್ರಶೇಖರ್ ನಾಗತಿಹಳ್ಳಿ (ಸಂ) : ಶತಮಾನದಂಚಿನಲ್ಲಿ, ಅಭಿವ್ಯಕ್ತಿ ಸಂಸ್ಕೃತಿ ವೇದಿಕೆ ಪ್ರಕಾಶನ, ೧೯೯೯
೭) ನಾಗಮಣಿ.ಎಸ್.ರಾವ್ (ಸಂ) : ಲೇಖ–ಲೋಕ (ಮಹಿಳಾಸಾಹಿತ್ಯ : ಒಂದು ಆತ್ಮಕಥಾನಕ) ಕರ್ನಾಟಕ ಲೇಖಕಿಯರ ಸಂಘ (ರಿ),ಬೆಂಗಳೂರು, ೧೯೯೯
೮) ನಾರಾಯಣಕೆ.ವಿ (ಸಂ) : ಭಾಷೆ (ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, "ಹಂಪಿ, ೨೦೦೭
೯) ನಾಗಭೂಷಣ ಸ್ವಾಮಿ.ಓ.ಎಲ್ : ವಿಮರ್ಶೆಯ ಪರಿಭಾಷೆ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೧೯೯೮

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಕನ್ನಡ ಸಾಹಿತ್ಯದಲ್ಲಿ ಮಹಿಳಾ ವಿಮರ್ಶಕರು.

ಡಾ. ರವಿಕುಮಾರ. ಕೆ.ಎಂ.
ಕನ್ನಡ ಭಾಷಾಅಧ್ಯಾಪಕರು,
ಸರ್ಕಾರಿ ಪ್ರೌಢಶಾಲೆ, ಎಸ್.ಮಾದಾಪುರ.
ಕಡೂರುತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ – 577138
Email: ravikumarakm1989@gmail.com

Manuscript ID:
JRD -2026-180421
ISSN: 2230-9578
Volume 18
Issue 4(II)
Pp.69-71
April 2026
Submitted:12 Mar. 2026
Revised:27 Mar. 2026
Accepted:14Apr.2026
Published:30 April2026

ಸಾರಲೇಖ :

ಕನ್ನಡ ಸಾಹಿತ್ಯದಲ್ಲಿ 'ವಿಮರ್ಶೆ' ಎಂಬುದು ವಿಶೇಷ ಪ್ರಕಾರದ ಸಾಹಿತ್ಯವಾಗಿದೆ.ಅದುಒಂದುಕೃತಿಯ ಸತ್ಯ ಶೋಧಕ್ಕಾಗಿ ನಡೆಸುವ ಶೋಧಕಾರ್ಯ. ಅಂದರೆಒಂದುಕೃತಿಯಾವಯಾವ ಕಾರಣಗಳಿಂದ ಉತ್ತಮಕೃತಿಯಾಗಿದೆ, ಅಥವಾಉತ್ತಮವಾಗಿಲ್ಲಎಂಬುದನ್ನು ನಿರ್ಧರಿಸುವುದು. ಇನ್ನೊಂದುಅರ್ಥದಲ್ಲಿಇದುಕೃತಿಯ ಸಮಗ್ರ ಪರಿಶೀಲನೆ, ವಿಶ್ಲೇಷಣೆ, ಮೌಲ್ಯಮಾಪನವಾಗಿದೆಎನ್ನಬಹುದು. ವಿಮರ್ಶೆಯಲ್ಲಿ ಬೇರೆ ಬೇರೆ ವಿಧಗಳಿದ್ದರೂ ಅದು ಮಾಡುವಕಾರ್ಯ ಸಾಮಾನ್ಯವಾಗಿಒಂದೇರೀತಿಯದ್ದಾಗಿರುತ್ತದೆ. ಪ್ರಸ್ತುತ ಲೇಖನವು 'ವಿಮರ್ಶೆ' ಹಾಗೂ ಕನ್ನಡ ಸಾಹಿತ್ಯದ ಬಗ್ಗೆ ಸಂಕ್ಷಿಪ್ತ ಬೆಳಕು ಬೀರುತ್ತದೆ.

ಮುಖ್ಯಪದಗಳು: ವಿಮರ್ಶೆಯಅರ್ಥ ಸ್ವರೂಪ,ವಿಮರ್ಶಕ ಅವನ ಅರ್ಹತೆ ಮತ್ತು ಕರ್ತವ್ಯಗಳು, ಕನ್ನಡದ ಸಾಹಿತ್ಯದ ಮಹಿಳಾ ವಿಮರ್ಶಕರು.

"ವಿಮರ್ಶೆ" ಎಂಬುದುಗ್ರೀಕ್ ಭಾಷೆಯಕ್ರಿಟಿಕೋಸ್ಐಡಿಯಿಣಐಠ ಎಂಬ ಪದದಿಂದ ಬಂದಿದೆ. ಕ್ರಿಟಿಕೋಸ್ಎಂದರೆ ಗುಣದೋಷಗಳನ್ನು ಪತ್ತೆಹಚ್ಚು. ಮೌಲ್ಯಮಾಪನ ಮಾಡುಎಂದಾಗುತ್ತದೆ.ಅಂದರೆಯಾವುದೇಕೃತಿಯನ್ನು ಅಳೆಯುವ, ಮೌಲ್ಯ ನಿರ್ಧರಿಸುವ ಸಾಮರ್ಥ್ಯಅಥವಾ ಕಲೆ.

'ವಿಮರ್ಶೆ' ಪದದ ಮೂಲ ವಿ+ಮೃಶ್. 'ಮೃಶ್' ಧಾತುವಿನ ಅರ್ಥ ಮುಟ್ಟಿನೋಡು, ತಡವಿ ತಿಕ್ಕಿನೋಡು, ಆಲೋಚಿಸು, ಒಂದು ವಸ್ತುವನ್ನು ಹಿಡಿದು ಕೈಯಾಡಿಸಿ ತಟ್ಟಿತಿಕ್ಕಿತೀಡಿ ನೋಡಿದರೆಅದರ ಸರಿಯಾದ ತಿಳುವಳಿಕೆ ಬರುತ್ತದೆ.ಅಂದರೆಒಂದು ಸಾಹಿತ್ಯಕೃತಿಯನ್ನು ನೋಡಿ ಈ ಕೃತಿಚೆನ್ನಾಗಿದೆಅಥವಾಚನ್ನಾಗಿಲ್ಲಎಂದು ನಿರ್ಣಯಿಸುವ ಕಲೆ. ಸಾಹಿತ್ಯವನ್ನು ಓದಿ ಅರ್ಥೈಸಿಕೊಂಡು ಬೆಲೆಕಟ್ಟುವಕಲೆಯೂ ಹೌದು."ವಿಮರ್ಶೆ" ಎಂಬ ಪದಕ್ಕೆ ದೇಶೀಯವಾದ ವಿಶಿಷ್ಟವಾದಅರ್ಥವುಇನ್ನೂ ಬಂದಿಲ್ಲ. ಕೆಲವು ವಿದ್ವಾಂಸರ ಅಭಿಪ್ರಾಯಗಳು ಕೆಳಗಿನಂತಿವೆ.

"ವಿಮರ್ಶೆ"ಎಂದರೆಅದುಕೃತಿಯ ಪರಿಶೀಲನೆ ಮತ್ತು ಮೌಲ್ಯಮಾಪನ ಕೆಲಸ – **ಬಿ.ಎಂ. ಶ್ರೀ.**

"ವಿಮರ್ಶೆ" ಎಂದರೆ ನಿರ್ಮಿತಿ ಪ್ರಧಾನವಾದ ಸಾಹಿತ್ಯವನ್ನುಕುರಿತು ಸಹೃದಯದ ಸಮಗ್ರ ಪ್ರತಿಕ್ರಿಯೆ.–**ರಂ.ಶ್ರೀ. ಮುಗಳಿ.**

'ವಿಮರ್ಶೆ' ಎಂದರೆ ಕೇವಲ ಪುಸ್ತಕಾವಲೋಕನವಲ್ಲ. ಅದು ಸಾಹಿತ್ಯದಧ್ವಜಸ್ಥಂಭವಾಗಿದೆ.–**ವಿ.ಕೃ.ಗೋಕಾಕ್.**

ವಿಮರ್ಶೆಯ ಸ್ವರೂಪ:

'ವಿಮರ್ಶೆ' ಒಂದು ಬೌದ್ಧಿಕಕ್ರಿಯೆ, 'ವಿಮರ್ಶೆ' ಮೌಲ್ಯಗಳನ್ನು ನಿರ್ಧರಿಸುತ್ತದೆ.'ವಿಮರ್ಶೆ' ಗುಣ ದೋಷಗಳನ್ನು ಪರೀಕ್ಷಿಸುತ್ತದೆ.ವಿಮರ್ಶೆಯುಕೃತಿಯಯೋಗ್ಯತೆಯನ್ನು ಪರಾಮರ್ಶಿಸುತ್ತದೆ. ವಿಮರ್ಶೆಯುಒಂದು ಸಾಹಿತ್ಯಕೃತಿಯಲ್ಲಿ ಮೂಡಿರುವ ವಿಶಿಷ್ಟ ಸೌಂದರ್ಯವನ್ನುಅನುಭವಿಸುವಂತೆ ಮಾಡುತ್ತದೆ.ವಿಮರ್ಶೆ ನಾನಾ ಸ್ವರೂಪದಲ್ಲಿದ್ದುಗದ್ಯ, ಪದ್ಯ, ಸಣ್ಣ ಪ್ರಬಂಧ, ಗ್ರಂಥರೂಪ, ಆತ್ಮಚರಿತೆ, ಮುನ್ನುಡಿ, ಬೆನ್ನುಡಿ, ಮಂಡನೆ, ಖಂಡನೆ, ಸಿದ್ಧಾಂತ, ತತ್ವಪ್ರತಿಪಾದನೆ, ಉಪನ್ಯಾಸ, ಭಾಷಣ, ಸಂಪಾದನಕಾರಕ ಪ್ರಸ್ತಾವನೆಗಳನ್ನು ಹೊಂದಿರುತ್ತದೆ.ಒಂದುಕೃತಿಯಟೀಕೆ, ವ್ಯಾಖ್ಯಾನ, ಭಾಷ್ಯ, ಅರ್ಥವಿವರಣೆ, ಅಭಿಪ್ರಾಯ ಮೊದಲಾದವುಗಳನ್ನು 'ವಿಮರ್ಶೆ' ಹೊಂದಿರುತ್ತದೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ. ರವಿಕುಮಾರ. ಕೆ. ಎಂ..ಕನ್ನಡ ಭಾಷಾಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಎಸ್.ಮಾದಾಪುರ.ಕಡೂರುತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ – 577138

How to cite this article:
ಡಾ. ರವಿಕುಮಾರ. ಕೆ. ಎಂ.*2026).*ಕನ್ನಡ ಸಾಹಿತ್ಯದಲ್ಲಿ ಮಹಿಳಾ ವಿಮರ್ಶಕರು**.** *Journal of Research and Development, 18(4(II)), 69–71. https://doi.org/10.5281/zenodo.19396078*

Quick Response Code:
Website: https://jrdrvb.org/
DOI: 10.5281/zenodo.19396078

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ವಿಮರ್ಶಕನಅರ್ಹತೆ ಮತ್ತು ಕರ್ತವ್ಯಗಳು :

ವಿಮರ್ಶಕ ಸಹೃದಯವಂತನಾಗಿರಬೇಕು ಹಾಗೂ ಪ್ರತಿಭಾವಂತನಾಗಿರಬೇಕು. ವಿಶಾಲ ಮನೋಭಾವದ ಸೂಕ್ಷ್ಮ ಸಂವೇದಿಯಾಗಿರಬೇಕು. ಎಲ್ಲಾ ಬಗೆಯ ಸಾಹಿತ್ಯ ಜ್ಞಾನದ ಅರಿವಿರಬೇಕು, ಮತ್ಸರರ ಹಿತನಾಗಿರಬೇಕು.ಪೂರ್ವಗ್ರಹಭಾವನೆಗಳು ಪಕ್ಷಪಾತದ ಗುಣಗಳು ಇರಬಾರದು.ವಿವಿಧ ಸಾಹಿತ್ಯ ಪ್ರಕಾರಗಳ ತಂತ್ರಜ್ಞಾನ ಬಳಕೆ ತಿಳಿದಿರಬೇಕು, ಲೋಕಾನುಭವಜ್ಞಾನ ಹೊಂದಿರಬೇಕು.ಪ್ರಪಂಚದಲ್ಲಿನ ಶ್ರೇಷ್ಠಕೃತಿಗಳ ಪರಿಚಯ ಹೊಂದಿರಬೇಕು.ಪರಿಪಕ್ವಶಾಸ್ತ್ರಜ್ಞಾನ ಹೊಂದಿರಬೇಕು.ವಿಚಾರವಂತಿಕೆ ಮತ್ತು ವಿವೇಕ ಸಂಪತ್ತುಗಳು ಅವನಲ್ಲಿ ಮನೆಮಾಡಿರಬೇಕು.ಕಾಲದಅರಿವಿರಬೇಕು, ನವನವೀನ ಪ್ರಯೋಗಗಳನ್ನು ಅಳವಡಿಸಿಕೊಳ್ಳುವ ವಿಶಾಲ ಮನೋಭಾವದವನಾಗಿರಬೇಕು.ಕುಂದುಕೊರತೆಗಳನ್ನು ತೋರಿಸುವ ಗುಣದೋಷಗಳನ್ನು ಎತ್ತಿಹಿಡಿಯುವ ಮನೋಧರ್ಮದವನಾಗಿರಬೇಕು. ನಿಷ್ಪಕ್ಷಪಾತಿ ಹಾಗೂ ನಿರ್ಭೀತಗುಣ ಸ್ವಭಾವ ಹೊಂದಿರಬೇಕು.ವೈಯಕ್ತಿಕ ರಾಗದ್ವೇಶಗಳು ಹಾಗೂ ಪೂರ್ವಗ್ರಹ ಪೀಡಿತನಾಗಿರಬಾರದು ಇವು ವಿಮರ್ಶಕನ ಪ್ರಮುಖ ಅರ್ಹತೆಗಳಾಗಿವೆ.

ವಿಮರ್ಶಕ ಹಲವಾರು ಕರ್ತವ್ಯಗಳನ್ನು ನಿರ್ವಹಿಸುತ್ತಾನೆ. ಅವುಗಳೆಂದರೆ ವಿಮರ್ಶಕ ಸಾಹಿತ್ಯ ಕೃತಿಗಳ ಅಧ್ಯಯನ ವಿವರಣೆ, ವ್ಯಾಖ್ಯಾನ, ಮೌಲ್ಯಮಾಪನ ಮೊದಲಾದ ಸಾಮಾಜಿಕ ಹೊಣೆಗಾರಿಕೆಇರಬೇಕು. ವಿಮರ್ಶಕನುಕೃತಿಯಕುರಿತು ಕೈಗೊಳ್ಳುವ ತೀರ್ಮಾನಗಳಿಗೆ ಸಮರ್ಥನೆಗಳನ್ನು ಒದಗಿಸಬೇಕು.ವಿಮರ್ಶಕ ಸರ್ವಕಾಲಕ್ಕೂ 'ಇದಮತ್ಥಂ' ಎನ್ನುವತೀರ್ಮಾನಕೊಡಬಾರದು.

ಮಹಿಳಾ ವಿಮರ್ಶಕರು: ಪ್ರಾಚೀನ ಕಾಲದಿಂದಲೂ ಸ್ತ್ರೀಯರು ಸಾಹಿತ್ಯರಚನೆಯಲ್ಲಿರುವುದು ವಿರಳ.ಸ್ತ್ರೀವಾದಿ ಸಾಹಿತ್ಯ ಹುಟ್ಟಿಕೊಳ್ಳಲು ಹಾಗೂ ಅವುಗಳ ವಿಮರ್ಶೆ ಮಾಡಲುಕಾರಣವಾದ ಕೆಲವು ಚಾರಿತ್ರಿಕ ಸಂದರ್ಭಗಳು ಹಾಗೂ ಕಾರಣಗಳನ್ನು ವಿಮರ್ಶಕರಾದಕೆ.ಕೇಶವಶರ್ಮರವರು ಗುರುತಿಸಿದ್ದಾರೆ.

ಪ್ರಪಂಚದಾದ್ಯಂತಎಲ್ಲಾಜಾತಿ ಜನಾಂಗಗಳಲ್ಲಿ ಹೆಣ್ಣು ಹೆಚ್ಚು ಶೋಷಣೆಗೆ ಒಳಗಾಗಿರುವುದು ಹಾಗೂ ಮಹಿಳಾ ಬರಹಗಾರ್ತಿಯರು ವಿಮರ್ಶಕರಅಲಕ್ಷಕ್ಕೆ ಒಳಗಾಗಿರುವುದು, ಕುಟುಂಬದಲ್ಲಿಯೂಕೂಡ ಹೆಣ್ಣು ಕೇವಲ ಹೆರುವ ಕೆಲಸಕ್ಕೆ ಮೀಸಲಾಗಿದ್ದು ಅವಳ ಬೆಳವಣಿಗೆಗೆ ಅವಕಾಶ ಕೊಡದಿರುವುದು, ಜೊತೆಗೆ ಹೆಣ್ಣಿಗೆ ಸಂಸ್ಕೃತಿ, ರಾಜಕೀಯ, ಸಾಮಾಜಿಕಅವತರಣಿಕೆಯಲ್ಲಿ ಹೆಣ್ಣಿನ ಮೇಲೆ ಗಂಡಿನ ದಬ್ಬಾಳಿಕೆ ನೆಡೆಯುತ್ತಿರುವುದೇಆಗಿದೆ. ಇನ್ನು ಲೈಂಗಿಕ ವ್ಯವಹಾರದಲ್ಲಿ ಹೆಣ್ಣಿಗೆಯಾವ ಪ್ರಾಶಸ್ತ್ಯವೂಇಲ್ಲದಾಗಿದೆ.ಪುರುಷನಿಗೆ ಮಾತ್ರ ವಿಜ್ಞಾನ, ಭಾಷೆ, ಮುಂತಾದ ವಿಚಾರಗಳು ಪ್ರಧಾನವಾಗಿದ್ದು ಹೆಣ್ಣಿಗೆಆದ್ಯತೆ ನೀಡಿರುವುದೇಆಗಿದೆ.ಇದರೊಂದಿಗೆ ಹೆಣ್ಣುತನಗೆಅರಿವಿಲ್ಲದೇಇಲ್ಲಿಯವರೆಗೂಗಂಡಿನಅಧಿಪತ್ಯಕ್ಕೆ ಒಳಗಾಗಿದ್ದಾಳೆ. ಹೀಗೆ ಎರಡನೇದರ್ಜೆಯಾಗಿ ಹೆಣ್ಣು ಮೂಲಭೂತವಾಗಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ.ಇದು ಎಲ್ಲಾಧರ್ಮ, ಜಾತಿ, ಜನಾಂಗಗಳಲ್ಲಿ ಕಂಡುಬರುವ ಸಮಸ್ಯೆಯಾಗಿದೆ.ಇವು ಹೆಣ್ಣಿನ ಪ್ರಜ್ಞೆಯನ್ನು ನಿಯಂತ್ರಿಸುತ್ತವೆ. ಇದರಿಂದಾಗಿ ಸ್ತ್ರೀ ಸಾಹಿತ್ಯಕಡಿಮೆ ಪ್ರಮಾಣದಲ್ಲಿಕಂಡುಬರುತ್ತದೆ.

ಇತ್ತೀಚಿನ ದಿನಗಳಲ್ಲಿ ಜಾಗತೀಕರಣತಂತ್ರಜ್ಞಾನ, ಶಿಕ್ಷಣಗಳ ಪ್ರಭಾವದಿಂದಾಗಿ ಮಹಿಳೆಯರೂ ಸಾಹಿತ್ಯರಚನೆಯಲ್ಲಿ ಹೆಚ್ಚಾಗಿ ತೊಡಗಿಕೊಂಡಿದ್ದಾರೆ.ಸಾಹಿತ್ಯದ ವಿಮರ್ಶೆಯಲ್ಲೂಅವರುಉತ್ತಮವಾಗಿ ವಿಮರ್ಶಕರಾಗಿ ಹೆಸರು ಮಾಡಿದ್ದಾರೆ ಅವರುಗಳೆಂದರೆ.

ರೋಹಿಣಿ ಬಿ. ಎಂ:ಕನ್ನಡಸಾಹಿತ್ಯದ ಪ್ರಸಿದ್ಧ ಬರಹಗಾರರಾಗಿರುವರೋಹಿಣಿ ಬಿ.ಎಂ.ಇವರು 1944 ರಏಪ್ರೀಲ್ 6 ರಂದು ಜನಿಸಿದರು.ಮಹಿಳೆಯರ ಬಗೆಗೆ ಸಾಕಷ್ಟು ಸಾಹಿತ್ಯ ಕೃಷಿ ಮಾಡಿದ್ದಾರೆ. ಸ್ತ್ರೀ ಸಂವೇದನೆ, ಸಾಮಾಜಿಕ ತಲ್ಲಣಗಳು, ಸ್ತ್ರೀ ಸಂಸ್ಕೃತಿ ಶಿಕ್ಷಣ, ಸ್ತ್ರೀ– ಭಿನ್ನಮುಖಿಗಳು, ಅಧ್ಯಾಪಿಕೆಯ ಅಧ್ಯಯನಗಳು, ಅವಿವಾಹಿತ ಮಹಿಳೆಯರ ಸಮಾಜೋ ಸಾಂಸ್ಕೃತಿಕಅಧ್ಯಯನ, ತುಳುನಾಡಿನ ಮಾಸ್ತಿ ಕಲ್ಲುಗಳು, ವೀರಗಲ್ಲುಗಳು, ಕರ್ತವ್ಯ, ಹೀಗೆ ಇವರ ಹಲವಾರು ಕೃತಿಗಳು, ಲೇಖನಗಳು, ಸಂಶೋಧನಾ ಕೃತಿಗಳು ಹಾಗೂ ವಿಮರ್ಶಾಕೃತಿಗಳು ಮಹಿಳೆಯರ ಮೇಲೆ ಬೆಳಕು ಬೀರುವ ಕೃತಿಗಳಾಗಿವೆ.

ಬಿ. ಎನ್. ಸುಮಿತ್ರಾಬಾಯಿ:ಕನ್ನಡದ ಪ್ರಮುಖ ವಿಮರ್ಶಕಿಯಾದಇವರುಜೈನ ಹಾಗೂ ಪ್ರಾಕೃತಶಾಸ್ತ್ರ ಪರಿಣಿತರು. ಇವರು ಹಲವಾರು ವಿಮರ್ಶಾ ಕೃತಿಗಳನ್ನು ರಚಿಸಿದ್ದಾರೆ.ಅವುಗಳೆಂದರೆ ಸಾರ್ವತ್ರಿಕದೆಡೆಗೆ ವಿಚಯ, ಆಯನ, ಮಹಿಳೆ ಮತ್ತು ಸಾಹಿತ್ಯ, ಸರಹದ್ದುಗಳ ಆಚೆ, ಬೊಗಸೆಯಲ್ಲಿ ಹೊಳೆ ನೀರು, ಕಲ್ಯಾಣ ಸರಸ್ವತಿ, ಕಾತ್ಯಾಯಿನಿವಾಚಿಕೆ, ಸ್ತ್ರೀವಾದಿ ಪ್ರವೇಶಿಕೆ, ಬೋಗಸೆಯಲ್ಲಿ ಹೊಳೆ ನೀರು ಈ ಕೃತಿಗೆ ಶ್ರೇಷ್ಠ ವಿಮರ್ಶಾ ಪುರಸ್ಕಾರ ಲಭಿಸಿದೆ.ಮಹಿಳೆಯರ ಬಗ್ಗೆ ಹಲವು ಕೃತಿಗಳನ್ನು ಇವರು ಬರೆದಿದ್ದಾರೆ.

ವೈದೇಹಿ:ಇವರು 1945 ರಲ್ಲಿ ಜನಿಸಿದ್ದು ಉತ್ತಮ ವಿಮರ್ಶಕರಾಗಿದ್ದಾರೆ. ಮಹಿಳೆಯರ ಸಾಹಿತ್ಯದ ಬಗ್ಗೆ ಅಪಾರಅನುಭವವನ್ನುತಮ್ಮ ಕೃತಿಗಳ ಮೂಲಕ ತಿಳಿಯಪಡಿಸಿದ್ದಾರೆ ಅವರ ಕೃತಿಗಳೆಂದರೆ – ಮಲ್ಲಿನಾಥನಧ್ಯಾನ, ಜಾತ್ರೆ, ಮೇಜು ಮತ್ತು ಬಡಗಿಇವರ ವಿಮರ್ಶಾ ಕೃತಿಗಳು.

ವಿಜಯಾದಬ್ಬೆ: ಆಧುನಿಕೊತ್ತರಕಾಲದ ಮಹಿಳಾ ವಿಮರ್ಶಕಿಯರಲ್ಲಿ ಪ್ರಸಿದ್ಧರಾದವರು ವಿಜಯಾದಬ್ಬೆಯವರು. ಸ್ತ್ರೀ ಸಾಹಿತ್ಯದ ಬಗ್ಗೆ ಹಾಗೂ ವಿಮರ್ಶೆ ಬಗ್ಗೆ ಹಲವು ಕೃತಿಗಳನ್ನು ಇವರು ಬರೆದಿದ್ದಾರೆ.ನಾರಿನೆಲೆ ದಿಗಂತ, ನಯಸೇನ, ಸಂಪ್ರತಿ, ಮೊದಲಾದವು ವಿಮರ್ಶಾ ಕೃತಿಗಳು. ನಾಗಚಂದ್ರ, ಅಧ್ಯಯನ, ಬೆಂದ್ರೆ, ಕಾವ್ಯದಲ್ಲಿಅನುಭಾವದಒಂದು ನಿಚ್ಚಣಿಕೆ, ಶಾಮಲಸಂಚಯ, ಮಹಿಳೆ ಮತ್ತು ಸಮಾಜ, ಸಾರಸರಸ್ವತಿ, ಮಹಿಳೆ ಮತ್ತು ಮಾನವತೆ, ಈ ಎಲ್ಲಾ ಕೃತಿಗಳು ಇವರ ಸಂಶೋಧನಾ ಕೃತಿಗಳಾಗಿವೆ.

ಎನ್. ಗಾಯಿತ್ರಿ: ಆಧುನಿಕೋತ್ತರಕಾಲದ ಮಹಿಳಾ ವಿಮರ್ಶಕಿಯರಲ್ಲಿಇವರೂಕೂಡ ಪ್ರಮುಖರು. 17 ಜನವರಿ 1957 ರಲ್ಲಿ ಜನಿಸಿದ ಇವರು ಹಲವು ಸಂಶೋಧನಾ ಹಾಗೂ ವಿಮರ್ಶಾ ಕೃತಿಗಳನ್ನು ಬರೆದಿದ್ದಾರೆ.ಆಧುನಿಕಕನ್ನಡ ಸಾಹಿತ್ಯ ಚಳುವಳಿಗಳಲ್ಲಿ ಸ್ತ್ರೀ ವಸ್ತು ನಿರ್ವಹಣೆ, ಮಹಿಳೆ – ಬಿಡುಗಡೆಯ ಹಾದಿಯಲ್ಲಿ, ಸ್ತ್ರೀವಾದಿ ಪ್ರವೇಶಿಕೆ ಮತ್ತು ವಿಮುಕ್ತಿಯ ಹಾದಿ, ದಕ್ಷಿಣ ಭಾರತದ ಸಾಂಸ್ಕೃತಿಕಅಧ್ಯಯನದ ಸಾಂಸ್ಕೃತಿಕ ಕೋಶ, ಎನ್ಸೈಕ್ಲೋಪೀಡಿಯಾಆಫ್ ಸೌತ್ಇಂಡಿಯನ್ಕಲ್ಚರ್ ಮೊದಲಾದ ಕೃತಿಗಳನ್ನು ಇವರು ರಚಿಸಿದ್ದಾರೆ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ತೇಜಸ್ವಿನಿ ನಿರಂಜನ: ಈ ಕಾಲಘಟ್ಟದಲ್ಲಿ ಬರುವ ಮಹಿಳಾ ವಿಮರ್ಶಕಿಯರಲ್ಲಿಇವರೂಒಬ್ಬರು 26 ಜುಲೈ 1958 ರಲ್ಲಿ ಜನಿಸಿದ ಇವರು ಸ್ತ್ರೀವಾದಿ ಸಾಹಿತ್ಯ ವಿಮರ್ಶೆಕೃತಿಯನ್ನು ಬರೆದಿದ್ದಾರೆ. ಇದರೊಂದಿಗೆಇನ್ನೂ ಹಲವು ಕೃತಿಗಳನ್ನು ಬರೆದಿದ್ದಾರೆ.

ಮಲ್ಲಿಕಾ.ಎಸ್. ಘಂಟಿ: ಆಧುನಿಕೋತ್ತರಕಾಲದ ಪ್ರಮುಖ ಮಹಿಳಾ ವಿಮರ್ಶಕಿಯರಲ್ಲಿಇವರೂ ಒಬ್ಬರು.17 ಏಪ್ರೀಲ್ 1959 ರಲ್ಲಿ ಜನಿಸಿದ ಇವರು ಹಲವಾರು ವಿಮರ್ಶಾ ಕೃತಿಗಳನ್ನು ಬರೆದಿದ್ದಾರೆ. ಅವುಗಳೆಂದರೆ: ಕನ್ನಡದಕಥೆಗಾರ್ತಿಯರುತನುಕರಗದವರಲ್ಲಿ, ಧರಣಿಯ ಮೇಲೊಂದು, ಭುವನಕ್ಕೆ ಬೆಲೆಇಲ್ಲ, ಒಳಗೆ ಸತ್ತು ಹೊರಗೆ, **ಕಾವ್ಯ ಕೃತಿಗಳು:**ತುಳಿಯದಿರಿನನ್ನ, ಈ ಹೆಣ್ಣುಗಳೆ ಹೀಗೆ, ರೊಟ್ಟಿ ಮತ್ತು ಹುಡುಗಿ, ಬೆಲ್ಲದಚ್ಚು ಮತ್ತುಇರುವೆದಂಡು, ಕಾಮನಬಿಲ್ಲು ಬೆಳಕಲ್ಲ, **ನಾಟಕಗಳು :** ಚಾಜ, ಒಂದುಬಾವಿಯ ಸುತ್ತ, ಹೊನ್ನಶೂಲಕ್ಕೇರಿ, **ಜೀವನಚರಿತ್ರೆ:**ಅಹಲ್ಯಾಬಾಯಿ ಹೋಳ್ಕರ್, ಇಟಗಿ ಭೀಮಾಂಬಿಕೆ, ಸಂಗೊಳ್ಳಿ ರಾಯಣ್ಣ, **ಸಂಪಾದನಾಕೃತಿಗಳು:**ಕಣ್ಣಲ್ಲಿ ನೀವು, ದಲಿತಸಾಹಿತ್ಯ ಹಾಗೂ ಚಳುವಳಿ, ಮಹಿಳಾ ಸಾಹಿತ್ಯ, ಮಹಿಳಾ ಸಾಹಿತ್ಯ ಮಾಲಿಕೆ, ಅನಿಕೇತನ, ನುಡಿಸೊಬಗು, ನುಡಿವ ಬೆಡಗು, ಕಪ್ಪುಕಾಲಿನ ಕಡಗ, **ಮಹಾಪ್ರಬಂಧ,**ಕನ್ನಡದಲ್ಲಿ ಮಹಿಳಾ ಸಾಹಿತ್ಯ.

ನೇಮಿಚಂದ್ರ:ನೇಮಿಚಂದ್ರಅವರುಜುಲೈ 16, 1959 ರಂದುಚಿತ್ರದುರ್ಗದಲ್ಲಿ ಜನಿಸಿದರು. ಇವರು ಹಲವಾರು ವಿಮರ್ಶೆ ಹಾಗೂ ಇತರ ಕೃತಿಗಳನ್ನು ಬರೆದಿದ್ದಾರೆ.ಇದಲ್ಲದೆಕನ್ನಡದಲ್ಲಿಚಿಂತನಪೂರ್ಣ ಲೇಖನಗಳನ್ನು ಬರೆಯುತ್ತಿದ್ದಾರೆ.ಇವರ ಕೃತಿಗಳೆಂದರೆ ಯಾದ್‌ವ ಶೇವತ್‌ಕಾದಂಬರಿ, ನಮ್ಮ ಕನಸುಗಳಲ್ಲಿ ನೀವಿದ್ದೀರಿ, ಮತ್ತೆ ಬರೆದ ಕಥೆಗಳು ನೇಮಿಚಂದ್ರರ ಕಥೆಗಳು, ಮುಂತಾದಕಥಾಸಂಕಲನಗಳು, ಒಂದು ಕನಸಿನ ಪಯಣ, ಪೆರುವಿನ ಪವಿತ್ರಕಣಿವೆಯಲ್ಲಿ, ಇವು ಪ್ರವಾಸ ಕಥನಗಳು, **ಸ್ತ್ರೀವಾದದ ಕೃತಿಗಳು:** ಮಹಿಳಾ ಅಧ್ಯಯನ ಮಹಿಳಾಲೋಕ, ನ್ಯಾಯಕ್ಕಾಗಿಕಾದ ಭಾಂವ್ರಿದೇವಿ, ಮೊದಲಾದ ಕೃತಿಗಳನ್ನು ಬರೆದಿದ್ದಾರೆ.

ವಿನಯಾಒಕ್ಕುಂದ:ಕನ್ನಡ ಸಾಹಿತ್ಯದ ಮೊತ್ತೊಬ್ಬ ವಿಮರ್ಶಕಿ ವಿನಯಾಒಕ್ಕುಂದ.ಇವರುಉತ್ತರಕನ್ನಡಜಿಲ್ಲೆಕುಮಟಾತಾಲ್ಲೂಕಿನ ನಾಡುಮಾಸ್ಕೇರಿಯಲ್ಲಿ 24, ಅಕ್ಟೋಬರ್ 1968 ರಂದು ಜನಿಸಿದರು.ಇವರು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ.**ಕವನಸಂಕಲನಗಳು:** ಬಾಯಾರಿಕೆ, ನೂರುಗೋರಿಯ ದೀಪ, ಹಸಬಿ. **ಕಥಾಸಂಕಲನಗಳು:**ಊರ ಒಳಗಣ ಬಯಲು, ಉರಿ. **ಅಂಕಣ:**ದುಂದುಗ. **ವಿಮರ್ಶೆ:**ಉಡಿಯಕ್ಕಿ, ಸಾಹಿತ್ಯ ವಿಮರ್ಶೆ, ನೀರನಡೆ, ಇಹದ ತಳಹದಿಯಲ್ಲಿ ದಿಟದದರ್ಶನ, **ಸಂಪಾದನೆ:** ತೆಂಕಣನುಡಿಗಳಲ್ಲಿ ಸ್ತ್ರೀವಾದಿ ಸಂಕಥನ, ಭಾರತೀಯ ಭಾಷೆಗಳಲ್ಲಿ ಮಹಿಳಾ ಸಾಹಿತ್ಯ, ಮೊದಲಾದವುಗಳು.

ತಾರಿಣಿ ಶುಭದಾಯಿನಿ: ಇವರು ಮತ್ತೊಬ್ಬ ಮಹಿಳಾ ವಿಮರ್ಶಕಿಯಾಗಿದ್ದು ಹಲವು ವಿಮರ್ಶಾ ಕೃತಿಗಳನ್ನು ಬರೆದಿದ್ದಾರೆ. ಅವುಗಳೆಂದರೆ ಎದೆಯಂತಾಡುವ ಸೊಡರು, ಗಳಿಗೆಬಟ್ಟಲು, ಸಮಯಿಕ, ಸನ್ನೆಗೋಲುಡಯೋಸ್ಫೋರಾ, ಕನ್ನಡ ಮಹಿಳಾ ವಿಚಾರ ಸಾಹಿತ್ಯಚರಿತ್ರೆ ಮುಂತಾದವು. ಹೀಗೆ ಕನ್ನಡ ಸಾಹಿತ್ಯದಆಧುನಿಕೊತ್ತರಕಾಲದ ಮಹಿಳಾ ಬರೆಹಗಾರ್ತಿಯರು ಈ ವಿಮರ್ಶೆ ಸಾಹಿತ್ಯರಚನೆಯಲ್ಲಿತೊಡಗಿರುವುದುಕಂಡು ಬರುತ್ತದೆ.

ಪರಾಮರ್ಶನ ಗ್ರಂಥಗಳು:

1. **ಶತಮಾನದ ಸಾಹಿತ್ಯ ವಿಮರ್ಶೆ**– (ಸಂ) ಹೆಚ್. ಎಸ್. ರಾಘವೇಂದ್ರರಾವ್ 2.
2. **ಶತಮಾನದ ಸಂಶೋಧನೆ**– (ಸಂ) ಎನ್. ಎಸ್. ತಾರಾನಾಥ
3. **ಸಮಗ್ರ ವಿಮರ್ಶೆ ಭಾಗ 1, 2**–ಗಿರಡ್ಡಿಗೋವಿಂದರಾಜ
4. **ಸಾಹಿತ್ಯ ವಿಮರ್ಶೆ** – ಸಿ. ಎನ್. ರಾಮಚಂದ್ರನ್.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದ

ಪ್ರಕಾಶ ಗಾಣಗಿ
ಪ್ರಶಿಕ್ಷಣಾರ್ಥಿ
ಶೇಖ್ ಗ್ರೂಪ್ ಆಫ್ ಇನಸ್ಟಿಟ್ಯೂಶನ್ ಬೆಳಗಾವಿ

Manuscript ID:
JRD -2026-180422
ISSN: 2230-9578
Volume 18
Issue 4(II)
Pp.72-73
April 2026
Submitted:12 Mar. 2026
Revised:27Mar. 2026
Accepted:14Apr.2026
Published:30 April2026

ಸಾರಲೇಖ :

ಕನ್ನಡ ಸಾಹಿತ್ಯವೆಂಬುದು ನಿರಂತರ ಹರಿದು ಬಂದ ನದಿಯಾಗಿದೆ.ಇದು ತನ್ನೊಳಗೆ ಹಲವಾರುರೀತಿಯ ವೈವಿಧ್ಯಗಳನ್ನು ಒಳಗೊಂಡಿದೆ. ಸಾಹಿತ್ಯವು ತನ್ನದೇ ಆದಂತಹಇತಿಹಾಸದ ನೆಲಗಟ್ಟನ್ನು ಹೊಂದಿದೆ. ಈ ಸಾಹಿತ್ಯಕ್ಷೇತ್ರವು ಕೇವಲ ಕಲಾತ್ಮಕ ಅಭಿವ್ಯಕ್ತಿಯಕ್ಷೇತ್ರ ಮಾತ್ರವಾಗಿರದೇ ಸಮಾಜದ ಸಂಸ್ಕೃತಿ, ಮಾನವೀಯ ಮೌಲ್ಯಗಳು, ಮಾನವ ಸಂಬಂಧಗಳಿಂದಲೂ ಮತ್ತು ಭೌತಿಕ ಅಂಶಗಳಿಂದಲೂ ಕೂಡಿಕೊಂಡಿದೆ. ಅವುಗಳಲ್ಲಿ ಸ್ತ್ರೀವಾದವೂ ಒಂದು.ಸ್ತ್ರೀವಾದವು ಕೇವಲ ಕಾಲ್ಪನಿಕವಾದುದಲ್ಲ ಮತ್ತುಕಥೆ ಕವನಗಳಿಗೆ ಮಾತ್ರವೇ ಸೀಮಿತವಾದದ್ದೂ ಅಲ್ಲ. ಸಮಾಜದಲ್ಲಿನ ಸ್ಥಿತಿಗತಿ ಹೆಣ್ಣಿನ ಅಸ್ತಿತ್ವ ಅವಳ ಸಂವೇದನೆ ಮತ್ತು ಅವಳಿಗೆ ಬೇಕಾದ ಸ್ವಾತಂತ್ರ್ಯಎಲ್ಲವನ್ನು ಪ್ರಶ್ನೆ ಮಾಡಲು ಸ್ತ್ರೀವಾದವು ಪ್ರಮುಖಕ್ಷೇತ್ರವಾಗಿ ಹೊರಹೊಮ್ಮಿತು.

ಮುಖ್ಯ ಪದಗಳು : ಸ್ತ್ರೀವಾದ, ಸ್ತ್ರೀ ಸಂವೇದನೆ, ಭರತೇಶ, ಯಯಾತಿ, ಮಾಧವಿ

ಕನ್ನಡ ಸಾಹಿತ್ಯವು ಕೇವಲ ಒಂದೇದೃಷ್ಟಿಕೋನದಿಂದ ಹೊರಹೊಮ್ಮಿದ್ದಲ್ಲ ವಿವಿಧ ಕಾರ್ಯಕ್ಷೇತ್ರಗಳೊಂದಿಗೆ ಅವಿನಾಭಾವ ಸಂಬಂಧ ಹೊಂದಿದೆ. ವಿವಿಧ ಶಾಖೆಗಳ ಪರಸ್ಪರ ಸಂಬಂಧವನ್ನು ಬಳಸಿಕೊಂಡು ಒಂದು ವಿಷಯವನ್ನು ವಿಶ್ಲೇಷಿಸುವಂತಹಒಂದುಕ್ರಮವಾಗಿದ್ದುಇದನ್ನು ಅಂತರ್ಶಿಸ್ತೀಯ ಅಧ್ಯಯನಎಂತಲೂಕರೆಯಬಹುದು. ಅಲ್ಲದೇಇತಿಹಾಸ, ತತ್ವಶಾಸ್ತ್ರ, ತಂತ್ರಜ್ಞಾನ, ರಾಜಕೀಯ, ವಿಜ್ಞಾನ, ಮನಃಶಾಸ್ತ್ರ ಹೀಗೆ ಇನ್ನೂ ಹಲವಾರು ಅಂಶಗಳು ಪ್ರಮುಖವಾದವುಗಳು ಇವೆ. ಆದರೆ ಸ್ತ್ರೀವಾದವು ಸಾಮಾಜಿಕಜೀವನ ಮತ್ತು ಸಾಮರಸ್ಯ ಹಾಗೂ ಮಹಿಳೆಯ ಜೀವನ ಮತ್ತು ಹೋರಾಟ ಅವಳ ಭಾವನೆ ಬಯಕೆ ಅವಳ ಚಿಂತನಾಕ್ರಮಎಲ್ಲವೂ ಸ್ತ್ರೀವಾದವನ್ನು ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಪ್ರಮುಖವಾಗಿ ಗುರುತಿಸಿಕೊಳ್ಳುವಂತೆ ಮಾಡಿದೆ. ಅವಳ ಬೇಕು–ಬೇಡಗಳನ್ನು ಅಭಿವ್ಯಕ್ತಗೊಳಿಸಲು ಸ್ತ್ರೀವಾದವು ಅತ್ಯಂತ ಸಹಾಯಕವಾದಂತಹುದುಇಂತಹ ಪ್ರಾಮುಖ್ಯತೆಗಳನ್ನು ಒಳಗೊಂಡಿರುವುದರಿಂದಲೇ ಕನ್ನಡ ಸಾಹಿತ್ಯಕ್ಷೇತ್ರದ ವ್ಯಾಪ್ತಿಯು ವಿಶಾಲವಾಗಿದ್ದು ಮತ್ತು ಭೀಷಣವಾದ ನೆಲೆಗಟ್ಟನ್ನು ಹೊಂದಿದೆ.

ಕಾಲಕಾಲದಿಂದಲೂಕನ್ನಡ ಸಾಹಿತ್ಯದಲ್ಲಿ ಮಹಿಳೆಯ ಪಾತ್ರವು ಹೆಚ್ಚಾಗಿ ಸಾಂಪ್ರದಾಯಿಕ ಮತ್ತು ಪಾರಂಪರಿಕ ಮೌಲ್ಯಗಳಿಂದ ಚಿತ್ರಣಗೊಂಡಿದ್ದು ಮಹಿಳೆಯನ್ನು ಮುಗ್ಧೆ, ಮಾತೃ ಸ್ವರೂಪಿ, ದೇವತಾ ಸ್ವರೂಪಿ, ತ್ಯಾಗಮಯಿ, ಶಾಂತ ಸ್ವರೂಪಿಎಂದುಇದೇರೀತಿಯಾಗಿ ನಾವು ಅವಳನ್ನು ಗುರುತಿಸಬಹುದು. ಆದರೆ ಆಧುನಿಕ ಯುಗದಲ್ಲಿ ತನ್ನದೇ ಆದಂತಹ ಸ್ವತಂತ್ರತೆ ಮತ್ತು ಅಸ್ತಿತ್ವದಿಂದ ಗುರುತಿಸಿಕೊಳ್ಳುತ್ತಾಳೆ.ಇತ್ತೀಚಿನ ಸಮಾಜದಲ್ಲಿಅದರಲ್ಲಿಯೂ ಪ್ರಮುಖವಾಗಿಇಪ್ಪತ್ತನೆಯ ಶತಮಾನದಲ್ಲಿ, ಸಮಾಜದಲ್ಲಿ ನಡೆದಂತಹ ಸಾಮಾಜಿಕ ಬೌದ್ಧಿಕ ಮತ್ತುಇತರ ಬದಲಾವಣೆಗಳ ಪರಿಣಾಮಕ್ಕೆಅನುಗುಣವಾಗಿಕನ್ನಡ ಸಾಹಿತ್ಯದಲ್ಲಿಯೂ ಸ್ತ್ರೀವಾದ ಚಿಂತನೆಗಳು ಸ್ಪಷ್ಟವಾಗಿ ಕಾಣಿಸಿಕೊಳ್ಳತೊಡಗಿದವು. ಮಹಿಳಾ ಶಿಕ್ಷಣ, ಉದ್ಯೋಗ, ಸಮಾನತೆ ಹಾಗೂ ಸಮಾಜದಇತರೆ ವಿಸ್ತರಣೆಗಳಿಂದ ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದವು ಪ್ರಬಲವಾಗಿ ಬೆಳೆದು ಬಂದಿತು. ಈ ಪ್ರಾಬಲ್ಯತೆಯು ಕೇವಲ ಭಾವನಾತ್ಮಕವಾದ ಪಾತ್ರವನ್ನು ಮಾತ್ರವಲ್ಲದೇ ಸಾಮಾಜಿಕ, ರಾಜಕೀಯಇತರೆಕ್ಷೇತ್ರ ವ್ಯಾಪ್ತಿಯನ್ನು ವ್ಯಾಪಿಸಿತು.ಪಿತೃ ಪ್ರಧಾನಕುಟುಂಬ, ಅಸಮಾನತೆ, ಲಿಂಗ ಭೇದ ಮಹಿಳೆಯ ಮೇಲೆ ನಡೆಯುವ ದೌರ್ಜನ್ಯ ಅಥವಾ ಶೋಷಣೆ ಮತ್ತು ಅಪಮೌಲ್ಯವನ್ನು ಪ್ರಶ್ನೆಮಾಡಿತು. ಸ್ತ್ರೀಯು ಪುರುಷ ಸಮಾನಳು ಅವಳಿಗೂ ಆಸೆ ಆಕಾಂಕ್ಷೆಗಳಿವೆ ಅವಳು ಕೂಡ ಭಾವನಾತ್ಮಕಜೀವಿ ತನ್ನ ಜೀವನವೆಲ್ಲ ಇನ್ನೊಬ್ಬರ ಆಶ್ರಯದಲ್ಲಿ ಮತ್ತು ಅಧೀನದಲ್ಲಿರುವುದನ್ನು ಖಂಡಿಸುತ್ತಾಳೆ.ಅವಳು ಕೇವಲ ಮಕ್ಕಳನ್ನು ಹೆರುವಯಂತ್ರವೆಂದೇ ಪರಿಗಣಿಸಿ ಅದಕ್ಕೆ ಮಾತ್ರ ಸೀಮಿತಗೊಳಿಸಿರುವ ಸಮುದಾಯಗಳನ್ನು ನಾವು ಇಂದಿಗೂ ಕಾಣಬಹುದು, ಮತ್ತೊಂದೆಡೆ ಸೂಕ್ಷ್ಮಮತಿಯುದೈವ ಸ್ವರೂಪಿಯೂ ಹೌದುಆದ್ದರಿಂದ ಅವಳನ್ನು ಹೊಸ್ತಿಲ ಒಳಗೆ ಇಟ್ಟು ಜೋಪಾನವಾಗಿ ಕಾಪಾಡಿ ಪೂಜಿಸಬೇಕು ಎಂಬ ಭಾವನೆ ಮತ್ತೊಂದೆಡೆ. ಸ್ತ್ರೀಯನ್ನು ನಾವೇ ಏಕೆ ಸಲುಹಬೇಕು ? ಅವಳು ನಮ್ಮಂತೆದುಡಿಯಬೇಕು, ನಮ್ಮಂತೆ ಶ್ರಮವಹಿಸಬೇಕು.... ಅವಳನ್ನೇಕೆ ನಾವು ಸಾಕಬೇಕು ಸಲುಹಬೇಕು? ಹೆಣ್ಣು ಮಗಳಾಗಿ ತಂದೆಯಆಶ್ರಯದಲ್ಲಿ, ಸತಿಯಾಗಿ ಪತಿಯ ಆಶ್ರಯದಲ್ಲಿ, ಪತಿ ಇಹಲೋಕ ತ್ಯಜಿಸಿದಾಗ ಅಥವಾತನ್ನ ಮುದಿತನದ ವಯಸ್ಸಿನಲ್ಲಿ ಮಗನ ಆಶ್ರಯದಲ್ಲಿ ಜೀವನ ಸಾಗಿಸುವಂತೆ ನೋಡಿಕೊಳ್ಳುವುದು ಪುರುಷರಧರ್ಮ. ಹೀಗೆ ಹಲವರದು ಹಲವಾರು ಅಭಿಪ್ರಾಯ .ಹಾಗಾದರೆ ಸ್ತ್ರೀ ಎಂದರೇನು ? ಅವಳ ಜೀವನ ಹೇಗಿರಬೇಕು?ಅವಳು ಪುರುಷ ಸಮಾನಳೇ?ಅವಳು ಕೇವಲ ಭೋಗದ ವಸ್ತುವೇ?ಅಥವಾ ಅವಳು ಯಾವಾಗಲೂತ್ಯಾಗಕ್ಕೆ ಸಿದ್ದಳಾಗಿರಬೇಕೇ?ಇಂತಹಎಲ್ಲ ಪ್ರಶ್ನೆಗಳನ್ನು ವಿಮರ್ಶಿಸಿದಾಗ ಅಥವಾ ನಮ್ಮೊಳಗೆ ನಾವೇ ಚಿಂತನ ಮಂಥನ ಮಾಡಿದಾಗ; ಅಯ್ಯೋ ನಾವೆಂಥತಪ್ಪು ಮಾಡಿದ್ದೇವೆ... ಅವಳನ್ನು ಹದ್ದುಬಸ್ತಿನಲ್ಲಿ ಇಟ್ಟಿದ್ದೆ ಸರಿಯಾಯಿತು... ಹೀಗೂ ಇರಬಹುದು ಹೌದಲ್ವಾ... ಎಂದುಎಷ್ಟೋ ಉತ್ತರಗಳು ಸಿಕ್ಕಬಹುದು.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಪ್ರಕಾಶ ಗಾಣಗಿ, ಪ್ರಶಿಕ್ಷಣಾರ್ಥಿಶೇಖ್ ಗ್ರೂಪ್ ಆಫ್ ಇನಸ್ಟಿಟ್ಯೂಟಿಶನ್ ಬೆಳಗಾವಿ

How to cite this article:
ಪ್ರಕಾಶ ಗಾಣಗಿ.(*2026).*ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದ. *Journal of Research and Development, 18(4(II)), 72–73. https://doi.org/10.5281/zenodo.19396127*

Quick Response Code:
Website: https://jrdrvb.org/
DOI: 10.5281/zenodo.19396127
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ನಾವು ಸ್ವಲ್ಪ ಮಟ್ಟಿಗೆ ಪೌರಾಣಿಕವಾಗಿ ಅವಲೋಕಿಸುವುದಾದರೆ ರಾಮಾಯಣ ಮತ್ತು ಮಹಾಭಾರತದಂತಹ ಮಹಾಕಾವ್ಯಗಳಲ್ಲಿಯೂ ಕೂಡ ಪಿತೃ ಪ್ರಧಾನ ಕುಟುಂಬಗಳು, ಪುರುಷ ಪ್ರಧಾನ ಸಮುದಾಯ/ಸಮಾಜ, ಪುರುಷ ಪ್ರಧಾನ ರಾಜಾಡಳಿತ ಇವುಗಳನ್ನೇ ಕಾಣುತ್ತೇವೆ. ಒಂದು ವೇಳೆ ಮಾತೃ ಪ್ರಧಾನ ಕುಟುಂಬ ಮತ್ತು ಮಹಾರಾಣಿಯ ಆಡಳಿತವಿದ್ದರೂ ಅಪರೂಪದ ಸಂಗತಿಗಳಾಗಿರಬಹುದು. ಪಿತೃವಿನ ಮರಣದ ನಂತರ ಕುಟುಂಬದ ಪ್ರಾಧಾನ್ಯತೆ ಅಥವಾ ಜವಾಬ್ದಾರಿಯನ್ನು ಆತನ ಪತ್ನಿಗೆ ನೀಡಿರಬಹುದು ಆದರೆ ಮೊದಲನೇ ಪ್ರಾಶಸ್ತ್ಯ ಅವಳಾಗಿರಲಿಲ್ಲ. ಕೆಲವೊಮ್ಮೆ ರಾಜನ ಅಂತ್ಯದ ನಂತರ ಮಹಾರಾಣಿ ರಾಜ್ಯವಾಳುವ ಅವಕಾಶಗಳು ಒದಗಿ ಬಂದಿರುವುದು ಸಹ ಬಹಳ ಕಡಿಮೆ ಎಷ್ಟೋ ಬಾರಿ ಅಪ್ರಾಪ್ತ ಪುತ್ರನ ಕೈಗೆ ಅಧಿಕಾರದ ಚುಕ್ಕಾಣಿ ಸಿಕ್ಕಿರುವುದು ಉಂಟು.

ಹದಿನಾರನೇ ಶತಮಾನದಲ್ಲಿ ರತ್ನಾಕರವರ್ಣಿ ರಚಿಸಿರುವ ಭರತೇಶ ವೈಭವ ಎಂಬ ಕೃತಿಯೊಂದರಲ್ಲಿ ರಾಜ ಭರತೇಶನಿಗೆ ತೊಂಬತ್ತಾರು ಸಾವಿರರಾಣಿಯರು. ಅಷ್ಟಲ್ಲದೇ ಭರತೇಶನನ್ನು "ಉಂಡುಪವಾಸಿ ಬಳಸಿ ಬ್ರಹ್ಮಚಾರಿ" ಎಂತಲೂ ಆತನನ್ನು ಹೊಗಳಿರುವುದುಂಟು. ಆದರೆ ಕವಿಯ ಚಾಕಚಕ್ಯತೆ ಏನೆಂದರೆ ಭರತೇಶನು ತನ್ನೆಲ್ಲ ರಾಣಿಯರನ್ನು ಏಕಕಾಲದಲ್ಲಿ ಸಂತೈಸ ಬಲ್ಲವನೂ ಸಲಹುವವನೂ ಸಾಕ್ಷಾತ್ ದೈವ ಸ್ವರೂಪಿಯೂ ಆಗಿದ್ದನು ಎಂದಿದ್ದಾನೆ. ಎಲ್ಲರೊಂದಿಗೆ ಉತ್ತಮ ಸಂಸಾರಿಕ ಜೀವನವನ್ನು ಸಾಗಿಸುತ್ತಿದ್ದನು ಎಲ್ಲರೂ ಲವಲವಿಕೆಯಿಂದ ಇದ್ದರೂ ಎಂದು ಹೇಳಿದ್ದಾನೆ. ಇದೇ ರೀತಿಯಾಗಿ ತೊಂಬತ್ತಾರು ಸಾವಿರ ಗಂಡಂದಿರನ್ನು ಹೊಂದಿರುವ ಯಾವುದಾದರೂ ರಾಣಿ ಸಿಗಬಹುದೇ? ಬಹುಪತ್ನಿತ್ವವನ್ನು ಕಂಡಂತೆ ಬಹುಪತಿತ್ವವನ್ನು ಕಾಣುವುದು ಬಹಳ ವಿರಳ.

ಮಹಾಭಾರತದಲ್ಲಿ ಬರುವ ವಿಶ್ವಾಮಿತ್ರನ ಶಿಷ್ಯ ಗಾಲವನು ಯಯಾತಿಯ ಬಳಿಬಂದು ಗುರುದಕ್ಷಿಣೆಗಾಗಿ ಮೈಯಲ್ಲ ಬೆಳ್ಳಗೂ ಒಂದು ಕಿವಿ ಕಪ್ಪಾಗಿಯೂ ಇರುವ ಎಂಟು ನೂರು ಕುದುರೆಗಳು ಗುರುದಕ್ಷಿಣೆಗೆ ಬೇಕೆಂದು ಕೇಳುತ್ತಾನೆ. ಆತನ ಇಚ್ಛೆಯನ್ನು ಪೂರ್ತಿ ಮಾಡಲು ಸಮರ್ಥನಿಲ್ಲದಿರುವುದರಿಂದ ರಾಜನಾದ ಯಯಾತಿಯು; ತನ್ನ ಮಗಳು ಯೌವ್ವನಸ್ಥೆಯೂ ಸೌಂದರ್ಯವತಿಯೂ ಇರುವಳು ಅವಳನ್ನು ನಿಮ್ಮ ವಶಕ್ಕೆ ಒಪ್ಪಿಸುತ್ತೇನೆ ಈ ಸೌಂದರ್ಯವತಿಯನ್ನು ಮುಂದೆಯಾವುದಾದರೂರಾಜನಿಗೆ ಒಪ್ಪಿಸಿ ನಿಮ್ಮ ಗುರುದಕ್ಷಿಣೆಗೆ ಬೇಕಾದ ಕುದುರೆಗಳನ್ನು ಕನ್ಯಾ ಶುಲ್ಕರೂಪದಲ್ಲಿ ಪಡೆದುಕೊಳ್ಳಿ ಎಂದುತನ್ನ ಸ್ವಂತ ಮಗಳು ಮಾಧವಿಯನ್ನು ಬಿಕ್ಷಾರ್ಥಿಯಾಗಿ ಬಂದ ಗಾಲವನಿಗೆ ನೀಡುತ್ತಾನೆ. ಮದುವೆ ವಯಸ್ಸಿಗೆ ಬಂದ ಮಾದವಿಯ ಮನಸ್ಸಿನಲ್ಲಿ ಏನು ಆಸೆಗಳಿದ್ದವೋ? ಭವಿಷ್ಯದ ಜೀವನವನ್ನು ಯಾವರೀತಿ ಕನಸು ಕಂಡಿದ್ದಳೋ?ತನ್ನ ಭಾವೀಜೀವನದ ಸಂಗಾತಿಯನ್ನು ಯಾವರೀತಿ ಕಲ್ಪಿಸಿಕೊಂಡಿದ್ದಳೋ ಏನೋ? ಗಾಲವನಿಗೆ ಅವಳನ್ನು ಒಪ್ಪಿಸಿದಾಗ ಅವಳಿಗೆ ಯಾವ ರೀತಿಯ ಅನುಭವವಾಗಿರಬೇಡ? ರಾಜಕುಮಾರಿಯಾಗಿ, ರಾಣಿ–ಮಹಾರಾಣಿಯಾಗಿ ಕನಸು ಕಂಡಿರಬಹುದೇನೋ ಅವಳು... ಆದರೆ ನಾರು ಮಡಿಯುಟ್ಟು ಮರದ ಹಾವುಗೆಗಳನ್ನು ಮೆಟ್ಟಿ ಗಾಲವನನ್ನು ಹಿಂಬಾಲಿಸಿ ನಡೆದಳು.

ಮುಂದುವರೆದ ಗಾಲವ ಅವಳನ್ನು ಕರೆದುಕೊಂಡುಹರ್ಯಶ್ವ ರಾಜನಿಗೆ ಭೋಗ ಸುಖಕ್ಕಾಗಿ ಮತ್ತು ಪುತ್ರ ಸಂತಾನಕ್ಕಾಗಿ ಒಂದು ಸಂವತ್ಸರದ ವರೆಗೆ ಬಿಟ್ಟುಎರಡು ನೂರು ಕುದುರೆಗಳನ್ನು ಪಡೆಯುತ್ತಾನೆ. ತದ ನಂತರ ಎರಡು ನೂರು ಕುದುರೆಗಳಿಗೆ ದೇವೋದಾಸ ರಾಜನಲ್ಲಿಒಂದು ಪುತ್ರ ಸಂತಾನದ ವರೆಗೂ, ಮತ್ತೆ ಎರಡು ನೂರು ಕುದುರೆಗಳಿಗೆ ಖಿಶೀನರ ರಾಜನಲ್ಲಿ ಒಂದು ಪುತ್ರ ಸಂತಾನವಾಗುವವರೆಗೆ ಒಪ್ಪಿಸುತ್ತಾನೆ. ಅದಾದ ನಂತರ ಈಗ ಉಳಿದಿರುವ ಎರಡು ನೂರು ಕುದುರೆಗಳು ಎಲ್ಲಿಯೂ ಸಿಗದ ಕಾರಣ ವಿಶ್ವಾಮಿತ್ರನಲ್ಲಿಗೆ ಬಂದುಆರುನೂರು ಕುದುರೆಗಳನ್ನು ನೀಡಿ ಇನ್ನೂ ಉಳಿದಿರುವ ಎರಡು ನೂರು ಕುದುರೆಗಳ ಬದಲಿಗೆ ಇವಳನ್ನು ನಿಮಗೆ ಒಪ್ಪಿಸುತ್ತೇನೆಎಂದಾಗ ಇವಳಲ್ಲಿ ಒಂದು ಪುತ್ರ ಸಂತಾನವನ್ನು ಪಡೆದು ಇವಳನ್ನು ನಿನಗೆ ಒಪ್ಪಿಸುತ್ತೇನೆ ಎನ್ನುತ್ತಾನೆ ವಿಶ್ವಾಮಿತ್ರ. ಆ ಪುತ್ರ ಸಂತಾನದ ನಂತರ ಗಾಲವ ಅವಳನ್ನು ಮರಳಿ ಅವಳ ತಂದೆಯಾದಯ ಯಾತಿಯ ಬಳಿಗೆ ಬಿಟ್ಟು ಬರುತ್ತಾನೆ.

ಯಾವಗುರು? ಯಾವ ಶಿಷ್ಯ? ಯಾವಗುರುದಕ್ಷಿಣೆ? ಇದಕ್ಕೂ ಮಾಧವಿಗೂ ಏನು ಸಂಬಂಧ? ಅವಳಿಗೆ ಸಂಬಂಧವೇ ಇಲ್ಲದುದಕ್ಕೆ ಹೀನಾಯವಾಗಿ ಬಲಿಯಾಗುತ್ತಾಳೆ. ಎಲ್ಲರೂ ಕೇವಲ ಅವರ ಸ್ವಾರ್ಥ ಸಿದ್ಧಿಯನ್ನು ಬಯಸಿದವರೇ. ಮಾಧವಿಯ ಮನಸ್ಸನ್ನು ಯಾರೊಬ್ಬರೂ ಅರ್ಥ ಮಾಡಿಕೊಳ್ಳಲಿಲ್ಲ, ಅವಳು ಒಬ್ಬೊಬ್ಬರ ಸಂಗದಲ್ಲೂ ಬಲಿಪಶುವಾಗಿ ಅಸಹಾಯಕಗಳಾಗಿ ನರಳಿದ ಕ್ಷಣ ಹೇಗಿರಬಹುದು? ಸ್ತ್ರೀ ಅಂದರೆ ಇಷ್ಟೊಂದು ತಾತ್ಸಾರವೇ? ಅಥವಾ ಏನು ಮಾಡಿದರೂ ಅವಳು ಸಹಿಸಿಕೊಳ್ಳಲೇಬೇಕೆಂಬ ಪುರುಷ ಪ್ರಧಾನದ ನಂಬಿಕೆಯೇ?ಇವೆಲ್ಲವುಗಳು ಸಾಯಲೇಬೇಕು ಬದುಕಿದ್ದು ಸತ್ತ ಮಾಧವಿಯಂತೆಆಗಬಾರದು. ಇವೆಲ್ಲವಗಳನ್ನು ತೊಳೆದು ಹಾಕಬೇಕು ತೊಳೆದು ಹಾಕುವುದೆಂದರೆ ಮಾಧವಿಯರಂತಹ ಪರಿಸ್ಥಿತಿಗಳನ್ನು ಕಂಡು ಜೀವನ್ಮುಕ್ತವಾಗುವುದು ಅಥವಾ ಪುರುಷನ ಮೇಲೆ ದಬ್ಬಾಳಿಕೆ ನಡೆಸುವುದು ಅಲ್ಲ. ನಮಗೆ ಸ್ವಾತಂತ್ರ್ಯ ಬೇಕೆಂದು ದುರಾಸೆಗೆ ಬಿದ್ದುಚಿಪ್ಪು ಕಳೆದುಕೊಂಡ ಆಮೆಯಾಗುವುದೂ ಅಲ್ಲ. ಎಲ್ಲರಂತೆ ನಾವೂ – ನಾವೂ ಎಲ್ಲರಂತೆ ಎಂದು ಸ್ತ್ರೀಯರ ಶೋಷಣೆ ದಬ್ಬಾಳಿಕೆಯ ವಿರುದ್ಧ ಹೋರಾಡುವುದು, ಸ್ತ್ರೀಯರ ಭಾವನೆಗಳಿಗೆ ಗೌರವ ಗಳಿಸುವುದು, ಸ್ತ್ರೀ ಸಂವೇದನೆಗಳನ್ನು ಗೌರವಯುತವಾಗಿ ಸ್ಪಂದಿಸುವಂತೆ ಮಾಡುವುದೇ ಸ್ತ್ರೀವಾದ. ಸ್ತ್ರೀಯರಿಗಾದ ನಿರಂತರ ಕಡೆಗಣನೆಯನ್ನು ಕೊನೆಗೊಳಿಸಲೇಬೇಕಿದೆ.ಸ್ತ್ರೀ ಸ್ವಾತಂತ್ರ್ಯವೆಂದರೆ ಲಿಂಗ ಭೇದ ಮರೆತು ಬೆರೆತು ಅಪ್ಪುಗೆ ನೀಡಬೇಕಿದೆ, ಸ್ತ್ರೀಯರಿಗೆ ಗೌರವಯುತವಾಗಿ ಸ್ಪಂದಿಸಬೇಕು ಸ್ತ್ರೀಯರ ನಿರಂತರ ಹೋರಾಟದ ಸಫಲತೆ ಸಾಕಾರವಾಗಬೇಕಿದೆ, ಸ್ತ್ರೀಯರ ಅಸ್ತಿತ್ವ ಗಟ್ಟಿಗೊಳ್ಳಬೇಕಿದೆ ಇದು ಕೇವಲ ಸ್ತ್ರೀ ಮಾತ್ರವಲ್ಲದೆ ಎಲ್ಲರೂ ಕೈಜೋಡಿಸಬೇಕಿದೆ.

ಎಲ್ಲರಂತೆ ನಾವೂ... ನಾವೂ ಎಲ್ಲರಂತೆ..

ಪರಾಮರ್ಶನ ಗ್ರಂಥಗಳು

1. ಕನ್ನಡ ಸಾಹಿತ್ಯಚರಿತ್ರೆ – ರಂ ಶ್ರೀ ಮುಗಳಿ
2. ಭರತೇಶ ವೈಭವ ಸಂಗ್ರಹ – ಸಂಪಾದಕರು – ಟಿ ಎಸ್ ಶ್ಯಾಮರಾವ್ ಪ್ರಧಾನ ಸಂಪಾದಕರು – ಕೆ ವಿ ಪುಟ್ಟಪ್ಪ
3. ಮಾಧವಿ – ಅನುಪಮಾ ನಿರಂಜನ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸ್ತ್ರೀವಾದಿ ಸಂವೇದನೆಗಳು

ಕು.ಪೂಜಾ ಮ ರೋಹಿದಾಸ.
ಕನ್ನಡ ಉಪನ್ಯಾಸಕರು
ಕೆ.ಎಲ್.ಇ ಸಂಸ್ಥೆಯ
ಬಸವಪ್ರಭು ಕೋರೆ ಕಲಾ, ವಿಜ್ಞಾನ ಮತ್ತು ವಾಣಿಜ್ಯ
ಪದವಿ ಮಹಾವಿದ್ಯಾಲಯ ಚಿಕ್ಕೋಡಿ.
ಇಮೇಲ್–poojarohidas2@gmail.com

Manuscript ID:
JRD -2026-180423
ISSN: 2230-9578
Volume 18
Issue 4(II)
Pp.74-76
April 2026
Submitted:12 Mar. 2026
Revised:27Mar. 2026
Accepted:14Apr.2026
Published:30 April2026

ಸಾರಲೇಖ :

ಭಾರತೀಯ ಸಂಸ್ಕೃತಿಯಲ್ಲಿ ನಾರಿಗೆ ಪೂಜ್ಯನೀಯ ಸ್ಥಾನ ಪ್ರಾಪ್ತವಾದರೂಆಕೆಯಜೀವನ ಅಷ್ಟೇನೂ ಸುಂದರವಾಗಿಲ್ಲ. ಯತ್ರ ನಾರ್ಯಸ್ತು ಪೂಜ್ಯಂತೇರಮಂತೇತತ್ರದೇವತಾಃಎನ್ನುವ ಮಾತು ಮಹಿಳಾ ಸ್ಥಾನಮಾನವನ್ನು ಸಾರಿ ಹೇಳುತ್ತದೆ. ಕನ್ನಡ ಸಾಹಿತ್ಯದಲ್ಲಿಆಧುನಿಕೋತ್ತರಕಾಲದ ಸ್ತ್ರೀವಾದಿ ಸಂವೇದನೆಗಳು ಮಹಿಳೆಯರ ಅಂತರಂಗದ ಸಂಘರ್ಷಗಳು ಮತ್ತುಚಿಂತನ ನೆಲೆಗಳ ಪ್ರತಿಫಲವಾಗಿದೆ. ಈ ಕಾಲಘಟ್ಟದಲ್ಲಿ ಮಹಿಳಾ ಲೇಖಕಿಯರು ಕೇವಲ ಗೃಹಕೇಂದ್ರಿತ ಅನುಭವಗಳನ್ನು ಮಾತ್ರವಲ್ಲದೇ ಸಾಮಾಜಿಕ, ರಾಜಕೀಯ, ಆರ್ಥಿಕ, ಲೈಂಗಿಕ ಹಾಗೂ ಸಂಸ್ಕೃತಿಕ ಆಯಾಮಗಳನ್ನು ತಮ್ಮ ಕಾದಂಬರಿಗಳ ಮೂಲಕ ವ್ಯಕ್ತಪಡಿಸಿದ್ದಾರೆ. ಮಹಿಳೆ ಪುರುಷ ಪ್ರಧಾನ ವ್ಯವಸ್ಥೆಯ ನೆರಳಿನಿಂದ ಹೊರಬಂದುತನ್ನದೇ ಸ್ವತಂತ್ರ ವ್ಯಕ್ತಿತ್ವ ರೂಪಿಸಿಕೊಳ್ಳಲು ಮಾಡಿದ ಪ್ರಯತ್ನಗಳಲ್ಲಿ ಬರವಣಿಗೆಯನ್ನು ಆಕೆ ಅತ್ಯಂತ ಸಮರ್ಥನೀಯವಾಗಿ ಬಳಸಿಕೊಂಡಿದ್ದಾಳೆ.

ಮುಖ್ಯ ಪದಗಳು : ಮಹಿಳಾ ಸಂವೇದನೆ, ಶೋಷಣೆ, ಆಧುನಿಕಕಾವ್ಯ, ಸ್ತ್ರೀವಾದ.

ಪೀಠಿಕೆ

ಮಹಿಳೆಯರು ಪುರುಷರುಗಿಂತ ಭಿನ್ನವಾಗಿ ಬದುಕನ್ನು ಗೃಹಿಸುತ್ತಾತನ್ನ ಮನೋಭೂಮಿಕೆಯಲ್ಲಿ ಬದುಕನ್ನ ಸಾಗಿಸುತ್ತ ಬಂದಿದ್ದಾರೆ. ನಂತರದ ದಿನಗಳಲ್ಲಿ ತಮ್ಮದೇ ಬರವಣಿಗೆಗಳ ಮೂಲಕ ಮಹಿಳಾ ಲೇಖಕಿಯರು ಸ್ತ್ರೀ ಸಮಸ್ಯೆಗಳನ್ನು ಹಾಗೂ ಮಹಿಳಾ ಸಂವೇದನೆಯ ಅನೇಕ ಮುಖಗಳನ್ನು ಅತ್ಯಂತ ಸಮರ್ಥವಾಗಿ ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಯಶಸ್ವಿಯಾದರು. ಮಹಿಳಾ ಸಾಹಿತ್ಯ ಪರಂಪರೆಯನ್ನೇ ಮುರಿದುಕಟ್ಟುವ ಪ್ರಯತ್ನಕ್ಕೆ ಮುಂದಾಗಿದ್ದಾರೆ. ಅಂತಹ ಲೇಖಕಿಯರಲ್ಲಿ ಬಹುಮುಖ್ಯವಾಗಿ ಕೇಳಿಬರುವ ಹೆಸರುಗಳಲ್ಲಿ ಇಂದಿರಾ, ತ್ರಿವೇಣಿ, ಪ್ರೇಮಾಭಟ್ಟ, ಗೀತಾ ನಾಗಭೂಷಣ, ಸಾ.ರಾ.ಅಬೂಬಕರ, ಬಿ.ಟಿ.ಲಲಿತಾ ನಾಯಕ, ವೀಣಾ ಶಾಂತೇಶ್ವರ, ವೈದೇಹಿ, ಅನುಪಮಾ ನಿರಂಜನ ಮುಂತಾದವರುಕಥೆ, ಕಾದಂಬರಿ, ಕವನಸಂಕಲನಗಳಲ್ಲಿ ನಾಯಕಿಯ ಪಾತ್ರಗಳ ಮೂಲಕ ಸಮಾಜದಲ್ಲಿ ಮನೆಮಾಡಿಕೊಂಡಿರುವ ಪುರುಷ ಪ್ರಧಾನ ವ್ಯವಸ್ಥೆಯನ್ನು ಪ್ರಶ್ನಿಸತೊಡಗಿದರು. ಪುರುಷರು ಸೃಷ್ಟಿಸಿದ ನಾಯಕಿಯರ ಶೋಷಣೆಗಳನ್ನು ಧಿಕ್ಕರಿಸಿ ಹೊರಬಂದು ಹೊಸಬದುಕನ್ನು ಕಟ್ಟಿಕೊಳ್ಳುವಷ್ಟು ಸಮರ್ಥರಾದರು. ಇದುವರೆಗೆ ಮಧ್ಯಮ ವರ್ಗದ ಮಹಿಳೆಯರ ಸಮಸ್ಯೆಗಳನ್ನು ಮಾತ್ರ ಬರವಣಿಗೆಯ ವಸ್ತುವಾಗಿಸಿಕೊಳ್ಳುತ್ತಿದ್ದ ಲೇಖಕಿಯರು ಬಂಡಾಯ ಲೇಖಕಿಯಆಗಮನದ ನಂತರ ಕೆಳವರ್ಗದ ಮಹಿಳೆಯರ ಸಮಸ್ಯೆಗಳನ್ನು ತಮ್ಮ ಬರವಣಿಗೆಯಲ್ಲಿ ಬರೆಯತೊಡಗಿದರು.

ಸಿಮೋನ ದ ಬೋವಾ ಹೇಳುವಂತೆ ಪುರುಷನುತನಗೆ ಹೇಗೆ ಬೇಕೊ ಹಾಗೆ ಮಹಿಳೆಯನ್ನ ರೂಪಿಸಿದ್ದಾನೆ. ಇದರಿಂದ ಹೆಣ್ಣು ಸ್ತ್ರೀಧರ್ಮ ಎಂಬ ಬಂಧನದಲ್ಲಿ ಸಿಲುಕಿದ್ದಾಳೆ. ಪತಿವ್ರತೆ, ತಾಯ್ತನವನ್ನು ಬಲವಂತವಾಗಿ ಅವಳ ಮೇಲೆ ಹೇರಲ್ಪಟ್ಟಿವೆ. ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪರವರ ದಾಟಿ ಬಾ ನಿರ್ಭಯದ ನಿಲುವಿಗೆ ಈ ಕವಿತೆಯ ಸಾಲುಗಳು ಸ್ತ್ರೀ ಸ್ವಾತಂತ್ರ್ಯ ಮತ್ತುಆಕೆಯ ಮೇಲಾಗುವ ಸಾಮಾಜಿಕ ಅನ್ಯಾಯಗಳನ್ನು ಎತ್ತಿಹಿಡಿಯುತ್ತದೆ. ಒಬ್ಬ ಹೆಣ್ಣು ಭಯ, ಸಂಶಯ, ಸಂಕೋಲೆಗಳನ್ನು ಮಿರಿಧೈರ್ಯ ಮತ್ತುಆತ್ಮವಿಶ್ವಾಸದೊಂದಿಗೆ ನಿಲ್ಲುವಂತೆ ಪ್ರೇರಣೆಯನ್ನು ನೀಡುತ್ತದೆ. ಹೊಸ್ತಿಲ ಹೊರಗೆ – ಒಳಗೆ ನಿಂತಿರುವ ಮಹಿಳೆ ಅಂಜಿಕೆ ಬಿಟ್ಟು ಲಕ್ಷ್ಮಣರೇಖೆಯನ್ನುದಾಟಿ ನಿರ್ಭಯವಾಗಿ ಮುನ್ನಡೆಯಬೇಕೆಂದು ತಿಳಿಸುತ್ತದೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಕು. ಪೂಜಾ ಮ ರೋಹಿದಾಸ.,ಕನ್ನಡಉಪನ್ಯಾಸಕರುಕೆ.ಎಲ್.ಇ ಸಂಸ್ಥೆಯಬಸವಪ್ರಭುಕೋರೆ ಕಲಾ,ವಿಜ್ಞಾನ ಮತ್ತು ವಾಣಿಜ್ಯ ಪದವಿ ಮಹಾವಿದ್ಯಾಲಯಚಿಕ್ಕೋಡಿ.

How to cite this article:
ಕು. ಪೂಜಾ ಮ ರೋಹಿದಾಸ..*2026).*ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸ್ತ್ರೀವಾದಿ ಸಂವೇದನೆಗಳು. *Journal of Research and Development, 18(4(II)), 74–76. https://doi.org/10.5281/zenodo.19396164*

Quick Response Code:
Website: https://jrdrvb.org/
DOI: 10.5281/zenodo.19396164
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಸರಸ ಸಾಹಿತ್ಯದ ವರದೇವತೆ ಎಂಬ ಬಿರುದಿಗೆ ಪಾತ್ರಳಾದ ಸಂಚಿ ಹೊನ್ನಮ್ಮ 'ಹದಿಬದೆಯಧರ್ಮ' ಕಾವ್ಯದಲ್ಲಿ

"ಪೆಣ್ಣಲ್ಲವೆತಮ್ಮನೆಲ್ಲ ಪಡೆದತಾಯಿ
ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣುಕಾಣದ ಗಾವಿಲರು"೧

ಈಕಾವ್ಯದ ಸಾಲುಗಳು **ಸ್ತ್ರೀತ್ವದಲ್ಲಿ** ಹೊನ್ನಮ್ಮನಿಗೆತುಂಬುಗೌರವವಿದೆಎಂಬುದು ತಿಳಿಸುತ್ತದೆ.ತಮ್ಮೆಲ್ಲರನ್ನು ಹಡೆದವಳು ಹೆಣ್ಣಲ್ಲವೇ?ಕಾಪಾಡಿದವಳು ಹೆಣ್ಣಲ್ಲವೇ?ಹೀಗಿರುವಾಗ ಹೆಣ್ಣು–ಹೆಣ್ಣುಎಂದುಯಾಕೆ ನಿಷ್ಠುರವಾಗಿಕಾಣುತ್ತಾರೋಕಣ್ಣುಕಾಣದ ಈ ಮೂರ್ಖರು ಎಂಬ ಮಾತಿನಿಂದ ಹೊನ್ನಮ್ಮ ಮುಖ್ಯವಾಗಿ ಗಂಡುಮಕ್ಕಳನ್ನು ತೀವ್ರವಾಗಿ ಖಂಡಿಸಿದ್ದಾರೆ. ಅಷ್ಟೇ ಅಲ್ಲದೇ ಪರಂಪರಾಗತವಾಗಿ ಬಂದ ಹೆಣ್ಣಿನ ಬಗ್ಗೆ ಒಂದು ಬಗೆಯ ಕೀಳು ಭಾವನೆಯನ್ನು ಬೆಳೆಸಿದ ಮನೋಧರ್ಮವನ್ನು ಹೊನ್ನಮ್ಮ ವಿರೋಧಿಸಿದ್ದಾಳೆ. ಇವನ್ನು ಬಿಟ್ಟರೆ ಇವಳ ಕೃತಿಯಲ್ಲಿ ಹೆಣ್ಣಿನಕುರಿತುಯಾವಜಾಗೃತಿಯನ್ನಾಗಲಿ, ಹೆಚ್ಚಿನಆತ್ಮಾಭಿಮಾನವಾಗಲಿ ಪ್ರೇರೆಪಿಸದೆ ಪತಿಯ ಪಾದಸೇವೆಯನ್ನು ಮಾಡಿಕೊಂಡುಉತ್ತಮಗೃಹಿಣಿಯಾಗಿರಬೇಕು.ಪುರುಷ ಶ್ರೇಷ್ಠ, ಹೆಣ್ಣು ಕನಿಷ್ಠ ಎಂಬ ತಾರತಮ್ಯ ಭಾವನೆ ಅವಳ ಬದುಕಿನ ಅಸ್ತಿತ್ವ ಹೂತಾಕುತ್ತಿವೆ. ಇದರಿಂದ ಹೊರ ಬರಲು ಮಹಿಳೆ ಹರಸಾಹಸ ಮಾಡುತ್ತಾಳೆ.

ಸಾ.ರಾ.ಅಬೂಬಕರರವರಕಾದಂಬರಿಚಂದ್ರಗಿರಿತೀರದಲ್ಲಿಈ ಕಾದಂಬರಿಯಲ್ಲಿ ನಾದಿರಾಳ ಸೂಕ್ಷ್ಮಸಂವೇದನೆಯನ್ನು ತಿಳಿಸಲಾಗಿದೆ.ಕಾಸರಗೂಡಿನಚಂದ್ರಗಿರಿತೀರದಲ್ಲಿ ವಾಸಿಸುವ ನಾದಿರಾಳ ದುರಂತಮಯ ಬದುಕನ್ನುಚಿತ್ರಿಸಲಾಗಿದೆ. ನಾದಿರಾಳ ತಂದೆ ಮಹಮ್ಮದ್‌ಖಾನತನ್ನ ಸ್ವಾರ್ಥಕ್ಕಾಗಿ ಹಣದ ವಿಷಯತೆಗೆದುಕೊಂಡು ಅಳಿಯ ರಶೀದನ ಜೊತೆಗೆ ಮನಸ್ತಾಪ ಮಾಡಿಕೊಂಡು ಮಗಳ ಸಂಸಾರದಲ್ಲಿ ಬಿರುಕು ಮೂಡಿಸುತ್ತಾನೆ. ಆತನಿಗೆ ತಿಳಿಯದಂತೆ ನಾದಿರಾಳನ್ನು ಮನೆಗೆ ಕರೆದುಕೊಂಡು ರಶೀದನಿಂದ ನಾದಿರಾಳ ಒಲ್ಲದ ಮನಸ್ಸಿನಿಂದ 'ತ್ರಿವಳಿ ತಲಾಖ' ಮಾಡಿಸುತ್ತಾನೆ. ಖಾನ್ ಕೇಳಲು ಬಂದಾಗ ರಶೀದನು ನಾದಿರಾಳ ಒಪ್ಪಿಗೆಯಿದೆಯೆಂದು ಅವಳಿಗೆ ಕೇಳಿ ತಲಾಖ ನೀಡಬಹುದಿತ್ತಲ್ಲವೇ? ರಶೀದನು ಅಂಗಡಿಯಲ್ಲಿ ಕೆಲಸ ಮಾಡು ಸಂದರ್ಭದಲ್ಲಿಆಕಸ್ಮಕವಾಗಿಖಾನ್‌ತಲಾಖ ಕೇಳಲು ಬಂದಾಗ ಮಾತಿನಚಕಮಕಿಯಲ್ಲಿಖಾನ್ ಮೇಲಿರುವ ಸಿಟ್ಟಿನಿಂದ ಸುತ್ತ– ಮುತ್ತಲಿರುವಜನರಿಗೆ ಹೆದರಿ ಮೌಲ್ವಿಗಳ ಹತ್ತಿರ ಹೋಗಿ ಮೂರು ಸಲ ತಲಾಖ ಹೇಳಿ ಮನೆಗೆ ಬಂದುರೋಧಿಸತೊಡಗಿದನು. ಈ ರೋಧನೆಗೆ ಮುಖ್ಯಕಾರಣ ನಾದಿರಾಳ ಮೇಲಿರುವ ಪ್ರೀತಿ.ಇಲ್ಲಿಧಾರ್ಮಿಕ ಕಾನೂನಿನ ದುರುಪಯೋಗವುಇಬ್ಬರ ಬದುಕಿನಲ್ಲಾಗಿದೆ.ನಂತರ ರಶೀದ ಮತ್ತು ನಾದಿರಾಳನ್ನು ಮರುಮದುವೆಯಾಗಲು ಬಯಸಿದಾಗ ಧಾರ್ಮಿಕ ಮುಖಂಡರು ಮತ್ತು ಸಮಾಜದಲ್ಲಿರುವಜನರು 'ನಿಕಾಹ ಹಲಾಲ್' ಪದ್ಧತಿಯನ್ನು ಮುಂದೂಡುತ್ತಾರೆ.ಇದರಿಂದ ನಾದಿರಾ ಮೊದಲುಒಬ್ಬ ವ್ಯಕ್ತಿಯನ್ನು ಮದುವೆಯಾಗಿಆತನಿಂದ ವಿಚ್ಛೇದನ ಪಡೆದ ನಂತರವೇ ಮೊದಲ ಪತಿಯನ್ನು ವರಿಸಲು ಸಾಧ್ಯವಾಗುತ್ತದೆ.ಆದರೆಗರ್ಭಿಣಿಯಾದರೆ ಮತ್ತೆಒಂದು ದಿನದ ಮಟ್ಟಿಗೆ ಮದುವೆಯಾದಗಂಡನೊಂದಿಗೆಇರಬೇಕಾಗಿತ್ತು.ಇದು ನಾದಿರಾ ಮತ್ತು ರಶೀದರಿಬ್ಬರಿಗೂ ನುಂಗಲಾರದತುತ್ತಾಗಿತ್ತು.ಪುರುಷ ಪ್ರಧಾನ ಸಮಾಜದ ಸಾಂಸ್ಕೃತಿಕಜೀವನ ಹಾಗೂ ವಿಶೇಷವಾಗಿ ಮಹಿಳೆಯರ ಒಳಜಗತ್ತನ್ನು ಸೂಕ್ಷ್ಮವಾಗಿಚಿತ್ರಿಸಲಾಗಿದೆ.ಸಮಾಜದ ಸಂಪ್ರದಾಯಗಳು, ಒತ್ತಡ, ಧಾರ್ಮಿಕ ಕಟ್ಟಳೆಗಳು, ಮಹಿಳೆ ಅನುಭವಿಸುವ ಸಂಕಟಗಳನ್ನು ಹೊರಹೊಮ್ಮಿಸುತ್ತದೆ.ಮಹಿಳೆಯ ಮೌನ, ವೇದನೆ, ಸಹನೆ, ಹೋರಾಟ ಮತ್ತು ಸ್ವತಂತ್ರ ಬದುಕಿನ ಆಕಾಂಕ್ಷೆಗಳನ್ನು ಕಟ್ಟಿಕೊಡುತ್ತದೆ.

ಡಾ. ಮಲ್ಲಿಕಾಘಂಟಿಯವರಚಾಜ ನಾಟಕ:ಚಾಜಎಂಬುದು ಹಬ್ಬದಆಚರಣೆಯ ಹೆಸರಿನಲ್ಲಿ ಮೇಲ್ವರ್ಗದವರು ಕೇಳವರ್ಗದ ಮಹಿಳೆಯರನ್ನು ಕೆಟ್ಟ ಸಂಪ್ರದಾಯದ ಹೆಸರಿನಲ್ಲಿದೈಹಿಕ ಶೋಷಣೆಗೆ ಬಲಿಯಾಗುತ್ತಿರುವುದನ್ನು ನಾಟಕವುಎತ್ತಿತೋರಿಸುತ್ತದೆ. ಈ ಪದ್ಧತಿಯು ಪುರೋಹಿತಶಾಹಿ ವ್ಯವಸ್ಥೆಯುತನ್ನ ಹಿತಾಸಕ್ತಿಗಾಗಿ ನಿರ್ಮಿಸಿಕೊಂಡಿರುವ ಅನ್ಯಾಯದಕುರಿತು ನಾಟಕವು ಪ್ರತಿಪಾದಿಸುತ್ತದೆ. ಮಾನವನ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಬದುಕಿನ ಸ್ಥಿತಿಗತಿಗಳನ್ನು, ಸಮಸ್ಯೆಯ ಸಂಘರ್ಷದಚಿತ್ರಣದಜೋತೆಗೆ ಸ್ತ್ರೀಶೋಷಣೆಯ ನೇತಾರರಾದದೇಸಾಯಿಯ ವಿರುದ್ಧ ಪ್ರತಿಭಟನೆಯನ್ನುತೋರಿದ ಮಹಿಳಾ ಪಾತ್ರಗಳಾದ ರುದ್ರಮ್ಮ, ಸಾವಂತ್ರಿ, ಮತ್ತುಕಲ್ಲಿಯಂತಹ ಮಹಿಳೆಯರಿಗೆ ಆಗುತ್ತಿರುವಅನ್ಯಾಯ ಹಾಗೂ ರೋಧನೆಗಳ ವಿರುದ್ಧ ಹೋರಾಡುವ ನಿರ್ಭಿತಿಯು ಸ್ತ್ರೀಸಂವೇದನೆಯನ್ನು ಪ್ರತಿಪಾದಿಸುತ್ತದೆ. ರುದ್ರಮ್ಮ ಸಾವಂತ್ರಿಯನ್ನು ಸವತಿಯಂತೆಕಾಣದೆ ಸ್ವಂತತಂಗಿಯ ಹಾಗೆ ನೋಡಿಕೊಳ್ಳುತ್ತಿದ್ದಾಳೆ.ದೇಸಾಯಿಚಾಜದ ಹೆಸರಿನಲ್ಲಿ ಬಡ ಹೆಣ್ಣುಮಕ್ಕಳ ಮೇಲೆ ನಡೆಸುವದೌರ್ಜನ್ಯವನ್ನು ತಿಳಿದು ಕಲ್ಲಿಯೊಡನೆ ಸೇರಿ ಆ ಊರಿನ ಹೆಣ್ಣು ಮಕ್ಕಳ ಮಾನಕಾಪಾಡಲು ಸಹಾಯಕಳಾದಳು. ಶೋಷಣೆಗಳನ್ನು ಮೌನವಾಗಿ ಸಹಿಸದೆಅದನ್ನು ಪ್ರಶ್ನಿಸುವ ಮತ್ತುತಡೆಗಟ್ಟುವ ದಿಟ್ಟ ಹೆಜ್ಜೆಯನ್ನು ಇಟ್ಟಿದ್ದಾಳೆ.ಲಿಂಗ ಸಾಮರಸ್ಯ ಕೇವಲ ಸ್ತ್ರೀ ಹೋರಾಟ ಮಾತ್ರವಲ್ಲದೆಉತ್ತಮ ಸಮಾಜದ ನಿರ್ಮಾಣದಲ್ಲಿ ಪುರುಷ ಮತ್ತು ಮಹಿಳೆಯರ ಪಾತ್ರವೂ ಬಹಳ ಮುಖ್ಯ ಎಂಬ ಆಶಯವನ್ನು ನಾಟಕ ವ್ಯಕ್ತಪಡಿಸುತ್ತದೆ.ದೆಸಾಯಿಯಚಾಜದ ಹೆಸರಿನಲ್ಲಿ ಮಹಿಳೆಯರಿಗಾಗುವ ಅನ್ಯಾಯ ಶೋಷಣೆಯ ವಿರುದ್ಧ ಸಾವಂತ್ರಿ ಪ್ರತಿಭಟಿಸಿ ದೆಸಾಯಿಯಎದುರುನಿಂತು ಮಾತನಾಡಿದಾಗಅಸಹಾಯಕತೆಯಿಂದ ವ್ಯಂಗ್ಯ ನುಡಿಗಳನ್ನಾಡುವನು. ಸಂಸ್ಕೃತಿ ಸಂಪ್ರದಾಯಗಳ ಹೆಸರಿನಲ್ಲಿ ಹೆಣ್ಣನ್ನು ಕೇವಲ ಭೋಗದ ವಸ್ತುವನ್ನಾಗಿ ನೋಡುವ ನಿಷ್ಠುರ ಮನಸ್ಥಿತಿಯನ್ನು ನಾಟಕ ಪ್ರಶ್ನಿಸುತ್ತದೆ.

ಉಪಸಂಹಾರ

ಮಹಿಳಾ ಸಂವೇದನೆಅನ್ನೋದುಎಲ್ಲಾ ಕಾಲಘಟ್ಟಗಳಲ್ಲಿಯೂ ಕಂಡುಬರುತ್ತದೆ.ರಾಮಾಯಣ, ಮಹಾಭಾರತಗಳಲ್ಲಿ ನೋಡುವುದಾದರೆ ಸೀತೆ, ದ್ರೌಪದಿ, ದಮಯಂತಿ, ಚಂದ್ರಮತಿ ಈ ಪಾತ್ರಗಳು ಪುರುಷರಿಂದ ತೊಂದರೆಗಳನ್ನು ಅನುಭವಿಸಿದ್ದನ್ನು ನಾವು ಕಾಣುತ್ತೆವೆ. ಆದರೆಆಯಾಕಾಲಘಟ್ಟಕ್ಕೆಸಂಬಂಧಿಸಿದ ಘಟನೆಗಳನ್ನು ಆಧಾರವಾಗಿಟ್ಟುಕೊಂಡು ಲೇಖನಗಳನ್ನು ಬರೆಯುತ್ತಿರುವುದನ್ನು ನಾವು ಗಮನಿಸುತ್ತೇವೆ. ಸ್ತ್ರೀವಾದಿ ಸಂವೇದನೆಎಂದರೆ ಸಮಾಜದಲ್ಲಿ ಮಹಿಳೆಯರ ಅನುಭವಗಳು, ಹಕ್ಕುಗಳು, ಲಿಂಗಾಧಾರಿತಅಸಮಾನತೆ, ಶೋಷಣೆ ಮತ್ತು ಅನ್ಯಾಯಗಳನ್ನು ಗುರುತಿಸಿ, ಪ್ರಶ್ನಿಸಿ ಅವುಗಳ ವಿರುದ್ಧ ಸಮಾನತೆ ಮತ್ತು ನ್ಯಾಯಕ್ಕಾಗಿ ನಿಲ್ಲುವಜಾಗೃತ ಮನೋಭಾವವನ್ನು ಮಹಿಳೆಯರು

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಇತ್ತೀಚಿನ ದಿನಗಳಲ್ಲಿ ಬೆಳೆಸಿಕೊಳ್ಳುತ್ತಿದ್ದಾರೆ. ಇತ್ತಿಚ್ಚಿನ ದಿನಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳು ಕೇವಲ ದೈಹಿಕರೂಪಕ್ಕೆ ಸಿಮಿತವಾಗದೆ, ಆಧುನಿಕತಂತ್ರಜ್ಞಾನದ ಬಳಕೆಯೊಂದಿಗೆ ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತಿದೆ. ತಂತ್ರಜ್ಞಾನಆಧಾರಿತ, ಲಿಂಗ–ಆಧಾರಿತ ಹಿಂಸೆಯುಇತ್ತಿಚ್ಚಿನ ದಿನಗಳಲ್ಲಿ ದೊಡ್ಡ ಸವಾಲಾಗಿದೆ.ಡೀಪ್‌ಫೇಕ ಬಳಸಿ ಅಶ್ಲೀಲಚಿತ್ರಗಳನ್ನು ಮತ್ತು ಖಾಸಗಿ ಮಾಹಿತಿಯನ್ನುಅನುಮತಿಇಲ್ಲದೆ ಹಂಚಿಕೊಳ್ಳುವ ಕೃತ್ಯಗಳು ಸೇರಿ ಭಾರತದಲ್ಲಿ ಸೈಬರ ಅಪರಾಧಗಳು ಹೆಚ್ಚಾಗಿವೆ. ಯುವತಿಯರು ಸಾರ್ವಜನಿಕ ಸ್ಥಳಗಳಲ್ಲಿ ಹೆಚ್ಚಿನ ಕಿರುಕುಳವನ್ನು ಮತ್ತುಒಂಟಿ ಹೆಣ್ಣುಮಕ್ಕಳ ಮೇಲೆ ನಡೆಯುವ ಸರಗಳ್ಳತನ, ಆಸಿಡದಾಳಿ ಮತ್ತುದೈಹಿಕದೌರ್ಜನ್ಯ ಹೀಗೆ ನಾನಾ ರೀತಿಯಲ್ಲಿಅನ್ಯಾಯಕ್ಕೆ ಬಲಿಯಾಗುತ್ತಿದ್ದಾಳೆ ಹಾಗೆಯೇ ವಿವಾಹಿತ ಮಹಿಳೆಯರು ಕುಟುಂಬ ಮತ್ತು ಸಂಗಾತಿಯಿಂದದೈಹಿಕ, ಭಾವನಾತ್ಮಕ ಹಿಂಸೆಯನ್ನುಅನುಭವಿಸುತ್ತಿದ್ದಾರೆ. ಉದ್ಯೋಗಸ್ಥ ಮಹಿಳೆಯ ಸಂಖ್ಯೆ ಹೆಚ್ಚಾದಂತೆ ಕೇಲಸದ ಸ್ಥಳದಲ್ಲಿ ಮಾನಸಿಕ ಒತ್ತಡಗಳು, ಲೈಂಗಿಕ ಕಿರುಕುಳ ನೀಡುವುದು ಹೆಚ್ಚಾಗಿದೆ.

ಅಡಿ ಟಿಪ್ಪಣಿ

೧. ಡಿ. ಚಂಪಾಬಾಯಿ; ಹದಿಬದೆಯಧರ್ಮ ; ೧೯೮೬ ; ಪುಟ – ೨೯

ಆಕರ ಗ್ರಂಥಗಳು

೧. ಹದಿಬದೆಯಧರ್ಮ ; (೧೯೮೬) ಸಂ. ಡಾ.ಡಿ.ಚಂಪಾಬಾಯಿ ; ಮಾನಸಗಂಗೋತ್ರಿ ಮೈಸೂರು.
೨. ಡಾ.ಜಿ.ಎಸ್ ಶಿವರುದ್ರಪ್ಪ; (೧೯೯೩) ; ದಾಟಿ ಬಾ ನಿರ್ಭದಯದ ನಿಲುವಿಗೆ.
೩. ಸಾ.ರಾ.ಅಬೂಬಕರ; (೨೦೧೭) ;ಚಂದ್ರಗಿರಿತೀರದಲ್ಲಿ ; ಚಂದ್ರಗಿರಿ ಪ್ರಕಾಶನ ಮಂಗಳೂರು.
೪. ಡಾ.ಮಲ್ಲಿಕಾಘಂಟಿ; (೨೦೧೫); ಚಾಜ; ಗೌತಮ ಪ್ರಕಾಶನ ಬಳ್ಳಾರಿ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಬೇಟೆ ಸಾಂಸ್ಕೃತಿಕ ಪದಕೋಶ : ಜಾನಪದ ಚಹರೆ

ಅಸ್ಲಮ್ ಮುಲ್ಲಾ
ಸಂಶೋಧನಾ ವಿದ್ಯಾರ್ಥಿ
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ
ಡಾ. ಗಜಾನನ ನಾಯ್ಕ
ಮಾರ್ಗದರ್ಶಕರು
ಸಹ ಪ್ರಾಧ್ಯಾಪಕರು
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ

Manuscript ID:
JRD -2026-180424
ISSN: 2230-9578
Volume 18
Issue 4(II)
Pp.77-80
April 2026
Submitted:12 Mar. 2026
Revised:27Mar. 2026
Accepted:14Apr.2026
Published:30 April2026

ಸಾರಲೇಖ :

ಜಾನಪದ ಸಾಹಿತ್ಯಕ್ಕೆ ಬಹು ವಿಶಾಲವಾದ ವ್ಯಾಪ್ತಿಯಿದೆ. ಜನಪದರ ಜೀವನಕ್ರಮ, ಅವರಲ್ಲಿರುವ ಆಚರಣೆಗಳು, ನಂಬಿಕೆಗಳು, ಆಹಾರ, ಉಡುಗೆ–ತೊಡುಗೆ, ಮನರಂಜನೆ, ಅವರು ಮಾಡುವ ಕೆಲಸ ಕಾರ್ಯಗಳು, ವೈದ್ಯ ಪದ್ಧತಿ, ವಸತಿ ನಿರ್ಮಾಣ, ವೈವಾಹಿಕ ಸಂಬಂಧಗಳು ಹೀಗೆ ಹಲವಾರು ವಿಷಯಗಳನ್ನು ಒಳಗೊಂಡಂತೆ ಜಾನಪದ ಸಾಹಿತ್ಯವು ಅಧ್ಯಯನ ಮಾಡುತ್ತದೆ. ನಾವಿಲ್ಲಿ ಬಹು ಮುಖ್ಯವಾಗಿ ಬೇಟೆ ಸಾಂಸ್ಕೃತಿಕ ಪದಕೋಶದ ಜನಪದ ಚಹರೆಗಳನ್ನು ಗಮನದಲ್ಲಿಟ್ಟುಕೊಂಡು ಚರ್ಚಿಸುವುದಾದರೆ 'ಬೇಟೆ' ಎಂಬುದು ಜನಪದ ಜೀವನಕ್ಕೆ ಹೊಂದಿಕೊಂಡು ಬಂದಂತಹ ಸಹಜಕ್ರಿಯೆಯಾಗಿದೆ. ಬೇಟೆ ಎಂಬುದು ಕೂಡ ಒಂದು ಜೀವನ ವಿಧಾನ ಪಾಠವಾಗಿದೆ. ಬೇಟೆಯಲ್ಲಿ ನಿರಂತರವಾಗಿ ಪ್ರಬಲ ವರ್ಗವೇ ತನ್ನ ಅಧಿಪತ್ಯವನ್ನು ಸಾಧಿಸುತ್ತಾ ಬಂದಿರುವುದನ್ನು ಗಮನಿಸಬಹುದಾಗಿದೆ.

ಮುಖ್ಯ ಪದಗಳು

ಆತ್ಮರಕ್ಷಣೆ, ಬೇಟೆ, ಸಾಂಸ್ಕೃತಿಕ, ಸಹಚರ, ಪದಕೋಶ

ಪ್ರಾಚೀನ ಕಾಲದಲ್ಲಿ ಈ ಬೇಟೆ ಎಂಬುದು ಮುಖ್ಯವಾಗಿ ಎರಡು ಕಾರಣಗಳಿಂದಾಗಿ ಕಂಡುಬರುತ್ತದೆ.ಒಂದು ತಮ್ಮ ಹೊಟ್ಟೆಯ ಹಸಿವನ್ನು ನೀಗಿಸಿಕೊಳ್ಳಲು, ಎರಡನೆಯದೆಂದರೆ ಕಾಡಿನಲ್ಲಿ ಇರುವ ಕ್ರೂರ ಪ್ರಾಣಿಗಳಿಂದ ರಕ್ಷಣೆ ಪಡೆಯುವುದಕ್ಕಾಗಿ, ಪ್ರಾಣ ಭಯಕ್ಕಾಗಿ ಆತ್ಮರಕ್ಷಣೆಗಾಗಿ ಬೇಟೆಯಾಡುತ್ತಿದ್ದರು. ಮಾನವನ ಉಗಮ ಮತ್ತು ವಿಕಾಸವನ್ನು ಕುರಿತು ಅಧ್ಯಯನ ಮಾಡುವ ಸಂದರ್ಭದಲ್ಲಿ ಕಂಡುಕೊಂಡ ಸಂಗತಿ ಹೇಳುವುದಾದರೆ ಮಾನವನು ಅರಣ್ಯದಲ್ಲಿ ಅ ನಾಗರಿಕನಾಗಿ ವಾಸಿಸುತ್ತಿದ್ದ ಕಾಲಘಟ್ಟದಲ್ಲಿ ಅವನಿಗೆ ಸುಲಭವಾಗಿ ದಕ್ಕಬಹುದಾದ ಮತ್ತು ಸಿಗಬಹುದಾದ ಗೆಡ್ಡೆ ಗೆಣಸುಗಳು, ಹಣ್ಣು ಹಂಪಲುಗಳು ತಿನ್ನುವುದರ ಜೊತೆಗೆ ಪ್ರಾಣಿಗಳ ಮಾಂಸವನ್ನು ಕೂಡ ತಿನ್ನುತ್ತಾನೆ. ಕಾಡ್ಗಿಚ್ಚಿನಂತಹ ಸನ್ನಿವೇಶಗಳು ಉಂಟಾಗಿ ಅಲ್ಲಿ ಅರ್ಧಂಬರ್ಧ ಸುಟ್ಟ ಪ್ರಾಣಿಗಳ ಮಾಂಸ ಅವನಿಗೆ ಮತ್ತಷ್ಟು ರುಚಿಕರವೆನಿಸಿ ಕ್ರಮೇಣ ಅದು ಆಹಾರ ಪದ್ಧತಿಯಾಗಿ ಬದಲಾಯಿತು. ಅದೇನೆ ಇದ್ದರೂ ಜೀವಿಸುವುದಕ್ಕಾಗಿ ಆಹಾರ ಎನ್ನುವ ಸಾಮಾನ್ಯ ತತ್ವದ ಆಧಾರದಿಂದ ತನ್ನ ಸುತ್ತಮುತ್ತಲಿನ ಪರಿಸರದಲ್ಲಿ ದೊರೆಯುವುದನ್ನು ತಿನ್ನುತ್ತಿದ್ದ. ಹಾಗೆಂದ ಮಾತ್ರಕ್ಕೆ ಎಲ್ಲ ವಿಧದ ಪ್ರಾಣಿಗಳನ್ನು ಆಹಾರಕ್ಕಾಗಿ ಬೇಟೆಯಾಡುತ್ತಿರಲಿಲ್ಲ. ಕೆಲವೊಂದಿಷ್ಟು ಪ್ರಾಣಿಗಳಿಂದ ತನ್ನನ್ನು ತಾನು ರಕ್ಷಿಸಿಕೊಳ್ಳುವುದಕ್ಕಾಗಿ ಸಹ ಬೇಟೆಯಾಡುತ್ತಿದ್ದ.ಮಾನವನ ಸಾಂಸ್ಕೃತಿಕ ಇತಿಹಾಸದ ಮುಂದಿನ ಹಂತಗಳಲ್ಲಿ ಬೇಟೆಯು ಸಾರ್ವತ್ರಿಕವಾಗಿ ಅನಿವಾರ್ಯವಾಗಲಿಲ್ಲ. ಪ್ರದೇಶದಿಂದ ಪ್ರದೇಶಕ್ಕೆ ಇದು ಭಿನ್ನವಾಗುತ್ತಾ ಹೋಯಿತು. ಅರಣ್ಯದಲ್ಲಿ ವಾಸಿಸುವ ಜನರಿಗೆ ಬೇಟೆ ಎಂಬುದು ಅಗತ್ಯವು ಅನಿವಾರ್ಯವೂ ಆಯಿತು. ಆದರೆ ಬಯಲು ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಅದು ಅನಿವಾರ್ಯವಾಗಲಿಲ್ಲ ಹೀಗಾಗಿ ಪ್ರಾಣಿಗಳನ್ನು ಸಾಕಬೇಕೆಂಬ ಪರಿಕಲ್ಪನೆಗಳು ಬೆಳೆದು ಆಹಾರಕ್ಕಾಗಿ ಇಲ್ಲವೇ ತನಗೆ ಅನುಕೂಲವಾಗುವಂತಹ ಪ್ರಾಣಿಗಳನ್ನು ಸಾಕುತ್ತಾರೆ. ಇದರಿಂದ ಕ್ರಮೇಣ ಬೇಟೆ ಕಡಿಮೆಯಾಗುತ್ತಾ ಪಶು ಸಂಗೋಪನೆ ಅಂತಹ ಸಂಸ್ಕೃತಿ ನಿಧಾನ ಗತಿಯಲ್ಲಿ ಬೆಳೆಯತೊಡಗಿತು. ಒಂದೆಡೆ ನೆಲೆ ನಿಂತ ಮಾನವನು ತಾನಿರುವ ಪ್ರದೇಶದಲ್ಲಿ ಕೃಷಿ ಚಟುವಟಿಕೆ ಆರಂಭಿಸಿದನು ಕೃಷಿ ಕಾರ್ಯಗಳಿಗೆ ತಾನು ಸಾಕಿರುವ ಪ್ರಾಣಿಗಳನ್ನು ಪಳಗಿಸಿ ತನ್ನ ಕಾರ್ಯವನ್ನು ಸುಗಮಗೊಳಿಸಿಕೊಂಡನು.

ಪ್ರಾಚೀನ ಕಾಲದಲ್ಲಿ ಬೇಟೆಗೆ ತುಂಬಾ ಪ್ರಾಶಸ್ತ್ಯ ಇರುವಂತೆ ಕಾಣುತ್ತದೆ. ರಾಮಾಯಣ, ಮಹಾಭಾರತದಲ್ಲಿ ಸಹ ಬೇಟೆಯ ಕುರಿತಂತೆ ಪ್ರಸ್ತಾಪಗಳಿವೆ. ಇದಕ್ಕೆ ಪೂರಕವಾಗುವ ಕಥೆಗಳು ಬರುತ್ತವೆ. ಅಂದಿನ ಕಾಲಕ್ಕೆ ಬೇಟೆ ಸಾರ್ವತ್ರಿಕ ಮನ್ನಣೆ ಪಡೆದಿತ್ತು. ಹೀಗಾಗಿ ರಾಜರು ತಮ್ಮ ಆಸ್ಥಾನದಲ್ಲಿ ಕಟ್ಟಿಸಿದ ಕೋಟೆಯ ಹೆಬ್ಬಾಗಿಲುಗಳಲ್ಲಿ "ಬೇಟೆಯ ಹೆಬ್ಬಾಗಿಲುಗಳು" ಎಂದು ನಾಮಕರಣ ಮಾಡಿರುವ ಉಲ್ಲೇಖಗಳಿವೆ. ಕಾಡುಪ್ರಾಣಿಗಳಿಂದ ಊರಿನ ಜನತೆಗೆ ತೊಂದರೆಯಾದಾಗ ಕೆಲವೊಮ್ಮೆ ಸಾಮೂಹಿಕವಾಗಿ ಅಥವಾ ವೈಯಕ್ತಿಕವಾಗಿ ಅವುಗಳ ವಿರುದ್ಧ ಹೋರಾಡಿ ಬೇಟೆಯಾಡಿ ಹೊತ್ತುಕೊಂಡು ಬಂದಾಗ ವೀರರಿಗೆ ಗೌರವ ಸನ್ಮಾನಗಳು ದೊರೆಯುತ್ತಿದ್ದವು.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಅಸ್ಲಮ್ ಮುಲ್ಲಾ, ಸಂಶೋಧನಾ ವಿದ್ಯಾರ್ಥಿ ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

How to cite this article:
ಅಸ್ಲಮ್ ಮುಲ್ಲಾ, ಡಾ. ಗಜಾನನ ನಾಯ್ಕ .*2026).*ಬೇಟೆ ಸಾಂಸ್ಕೃತಿಕ ಪದಕೋಶ : ಜಾನಪದ ಚಹರೆ. *Journal of Research and Development, 18(4(II)), 77–80. https://doi.org/10.5281/zenodo.19396203*

Quick Response Code:
Website: https://jrdrvb.org/
DOI: 10.5281/zenodo.19396203
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಇದರ ಕುರಿತಾಗಿ ಶಾಸನಗಳಲ್ಲಿಯೂ ಸಹ ಮಾಹಿತಿ ಲಭ್ಯವಾಗುತ್ತದೆ.ದಸರಾ ಮಹಾನವಮಿ ಹಬ್ಬದ ಸಂದರ್ಭಗಳಲ್ಲಿ ರಾಜರು ಬೇಟೆಯಾಡಲು ತಮ್ಮ ಸಹಚರರೊಡನೇ ಹೋಗಿ ಬೇಟೆಯಾಡಿ ನಗರದ ಬೇಟೆ ಹೆಬ್ಬಾಗಿಲಿನಿಂದ ವಿಜಯೋತ್ಸವದಂತೆ ಅತಿ ವಿಜ್ರಂಭಣೆಯಿಂದ ಸಂಭ್ರಮಿಸುತ್ತಿದ್ದರು.

ಕನ್ನಡ ಸಾಹಿತ್ಯದಲ್ಲೂ ಈ ಬೇಟೆಯ ಕುರಿತು ಕವಿಗಳು ಬರೆದಿದ್ದಾರೆ.ಅಷ್ಟಾದಶವರ್ಣನೆಗಳಲ್ಲಿ ಬೇಟೆಯು ಪ್ರಮುಖವಾಗಿತ್ತು.ಪಂಪ ಭಾರತದ ಅರ್ಜುನ, ಹರಿಶ್ಚಂದ್ರ ಕಾವ್ಯದ ಹರಿಶ್ಚಂದ್ರರನ್ನು ಇಲ್ಲಿ ಉದಾಹರಿಸಬಹುದಾಗಿದೆ. ಬೇಟೆಯನ್ನು ಕೇವಲ ತಿಟೆ ಜೂಜು ಅಥವಾ ಮಧ್ಯಪಾನದಂತೆ ವ್ಯಸನವೆಂದು ಕರೆಯಲು ಇಷ್ಟಪಡದ ಪಂಪ "ಬೇಟೆಯಂ ಬೆಸನವೆಂಬರ್",'ಬೇಂಟೆ ದಿನದಂಗಳ ಅರಸಂತೆ' ಎಂದು ರಾಜರನ್ನು ಹೊಗಳುತ್ತಾ ಬೇಟೆಯನ್ನು "ವಿನೋದಗಳ ರಾಜ" ಎಂದು ಪ್ರಶಸ್ತಿಯನ್ನು ಕೊಟ್ಟಿದ್ದಾರೆ. ಕವಿ ಕಾಳಿದಾಸನು ತನ್ನ ಅಭಿಜ್ಞಾನ ಶಾಕುಂತಲಂನಲ್ಲಿ ಬೇಟೆಯ ಕುರಿತು ಮನೋಹರವಾಗಿ ಬರೆಯುತ್ತ ಬೇಟೆಯಿಂದಾಗುವ ಪ್ರಯೋಜನಗಳ ಕುರಿತು ಹೇಳುತ್ತಾನೆ. ಬೊಜ್ಜು ಕರಗಿ ಹೋಗುತ್ತದೆ.ಹೊಟ್ಟೆ ಕರಗಿ ಹೋಗುತ್ತದೆ.ಹೊಟ್ಟೆ ಕಿರಿದಾಗುತ್ತದೆ ಶರೀರ ಚುರುಕುಗೊಂಡು ಲಘುವಾಗುತ್ತದೆ. ಹೆದರಿಕೆಯಲ್ಲಿ ಅಥವಾ ಸಿಟ್ಟಿನಲ್ಲಿ ಜಂತುಗಳ ವಿಕಾರವಶವಾದ ಮನಸ್ಸು ಹೇಗಿರುತ್ತದೆ ಎಂದು ಅರಿವಾಗುತ್ತದೆ. ಚಲಿಸುತ್ತಿರುವ ಸಮಯದಲ್ಲಿ ಕೂಡ ಬಾಣಗಳು ಸರಿಯಾದ ಲಕ್ಷ್ಯಕ್ಕೆ ನಾಟುವಂತೆ ಸಿದ್ದಿ ದೊರೆಯುತ್ತದೆ ಎಂಬುದು ಬಿಲ್ಲುಗಾರರ ಬಲ್ಮೆಯಾಗಿದೆ.ಈ ರೀತಿಯ ವೈಶಿಷ್ಟ್ಯತೆಗಳಿರುವ ಕಾರಣ ಬೇಟೆಯನ್ನು ವ್ಯಸನವೆಂದು ಕರೆಯುವದು ತಪ್ಪೇಂದು ಹೇಳಿ ಬೇಟೆಯಂತಹ ವಿನೋದ ಎಲ್ಲಿದೆ ಎಂದು ಬೇಟೆಯಿಂದಾಗುವ ದೈಹಿಕ ವ್ಯಾಯಾಮ ಹಾಗೂ ಮಾನಸಿಕ ಸಂತೃಪ್ತಿಯ ಕುರಿತು ವಿಶೇಷವಾಗಿ ಕಾಳಿದಾಸನು ವಿವರಿಸುತ್ತಾನೆ.

ಬೇಟೆಯಲ್ಲಿ ಇಷ್ಟೆಲ್ಲಾ ಗುಣ ವಿಶೇಷಗಳ ಜೊತೆಗೆ ಮಾನವನ ಬುದ್ಧಿ ವಿಕಾಸದಲ್ಲಿ ಗಮನಾರ್ಹವಾದ ಪಾತ್ರವನ್ನು ವಹಿಸಿದೆ.ಬೇಟೆಕ್ರಿಯೆ ಮಾನವನಿಗೆ ಮಾಂಸವನ್ನ ಒದಗಿಸುವ ಜೊತೆ ಜೊತೆಗೆ ಆತನ ವಿಕಾಸಕ್ಕೂ ಕಾರಣವಾಯಿತು. ಇಂದಿನ ದಿನಮಾನಗಳಲ್ಲಿ ವನ್ಯಜೀವಿ ಸಂರಕ್ಷಣಾ ಕಾಯ್ದೆಗಳು ಬಂದಿರುವುದರಿಂದಾಗಿ ಅಮಾನವೀಯ, ಕ್ರೂರವು ಆಗಿ ಕಂಡು ಬರುವ ಬೇಟೆ ಮಾನವನ ದೈಹಿಕ ಹಾಗೂ ಬೌದ್ಧಿಕ ವಿಕಾಸದಲ್ಲಿ ಗಣನೀಯ ಬದಲಾವಣೆಗಳನ್ನು ಉಂಟು ಮಾಡಿತು.ಯಾವುದಾದರೂ ಒಂದು ಪ್ರಾಣಿಯನ್ನು ಬೇಟೆಯಾಡಲು ಇಚ್ಛಿಸಿದಾಗ ಅದಕ್ಕೊಂದು ವ್ಯೂಹ ರಚಿಸಿ ಆ ಪ್ರಾಣಿಯ ಚಲನವಲನ ಗಮನಿಸಿ ಅದರ ದುರ್ಬಲವಾದ ಅಂಶವನ್ನು ಗಮನಿಸಿ ಅದರ ಮೇಲೆ ಆಕ್ರಮಣ ಮಾಡುವುದು. ಈ ಬಗೆಯ ಕಾರ್ಯಗಳು ಮೆದುಳನ್ನು ಚುರುಕುಗೊಳಿಸಿದವು.ಬರ ಬರುತ್ತಾ ಬೇಟೆ ಎಂಬುದು ಆತನಿಗೆ ತುಂಬಾ ಸರಳವಾಗುತ್ತಾ ಹೋಯಿತು.

ಮಾನವ ವಿಕಾಸವಾದಂತೆಲ್ಲ ಬೇಟೆಯಲ್ಲೂ ಸಹ ಹಲವಾರು ಬದಲಾವಣೆಗಳುಂಟಾಗುತ್ತವೆ. ಬೇಟೆಯಲ್ಲಿ ಕಬ್ಬಿಣದ ಆಯುಧಗಳನ್ನು ಬಳಸುವುದು, ಮರದ ಮರೆಯಲ್ಲಿ ಕುಳಿತು ಹೊಡೆಯುವುದು, ಖಡ್ಗದಿಂದ ಕಡಿಯುವುದು, ದೂರದಲ್ಲಿದ್ದರೆ ಬಾಣ ಹೊಡೆಯುವುದು ಈ ರೀತಿಯ ಬದಲಾವಣೆಗಳಾದವು. ಬೇಟೆಯ ವಿವಿಧ ತಂತ್ರೋಪಾಯಗಳನ್ನು ಮನುಷ್ಯನು ಅರಣ್ಯದಲ್ಲಿರುವ ಮೃಗ ಪಕ್ಷಿ ಕೀಟಾದಿಗಳಿಂದಲೇ ಕಲಿತಿದ್ದಾನೆ. ಜೇಡನಿಂದ ಬಲೆ ಓಡ್ಡುವುದನ್ನು ಕಲಿತರೆ, ಚಿರತೆ ಹುಲಿ ಹಲ್ಲಿ ಇವುಗಳಿಂದ ಮರಸು ಬೇಟೆಯ ವಿಧಾನವನ್ನು ಕಲಿತುಕೊಂಡಿದ್ದಾನೆ. ಸೀಳು ನಾಯಿಗಳಿಂದ ಸಮೂಹ ಬೇಟೆ, ಮುಳ್ಳುಹಂದಿಗಳಿಂದ ಬಾಣ ಬಿಡುವಿಕೆ ರೂಢಿಸಿಕೊಂಡು ಈ ಬಗೆಯ ತಂತ್ರದಿಂದಾಗಿ ಆಹಾರ ಉತ್ಪಾದನೆ ಹೆಚ್ಚಿತು. ನಿರಂತರವಾಗಿ ಅಲೆಮಾರಿಯಾಗಿದ್ದ ಮಾನವನು ಒಂದು ಕಡೆ ನೆಲೆ ನಿಂತನು. "ತನ್ನ ಜೀವನ ನಿರ್ವಹಣೆಗೆ ಕೃಷಿ ಕಾರ್ಯಕ್ಕೆ ಕೈ ಹಾಕಿದನು ತನ್ನ ಕೃಷಿಗೆ ಉಪಯುಕ್ತವಾದ ಕಾಡು ಕುದುರೆ ಧನ ಕೋಣ ಕುರಿ ಮೇಕೆಗಳನ್ನು ಪಳಗಿಸಿ ಸಾಕಲು ತೊಡಗಿದನು" (ಜತ್ತಪ್ಪ ರೈ). ನಂತರದ ದಿನಮಾನಗಳಲ್ಲಿ ಹಲವಾರು ಸ್ಥಿತ್ಯಂತರಗಳು, ಪಲ್ಲಟಗಳು ಮಾನವನ ಬದುಕಿನಲ್ಲಿ ಉಂಟಾಗುತ್ತವೆ.

ಡಾ.ರಂಗನಾಥ ಅವರ ಮಾನವ ಭೂಗೋಳ ಶಾಸ್ತ್ರದಲ್ಲಿ ಹೇಳುವಂತೆ ಈ ರೀತಿಯ ಬೇಟೆ ಪದ್ಧತಿಗಳು ಕ್ರಮೇಣ ಕಡಿಮೆಯಾಗುತ್ತಾ ಬಂದಿದ್ದಾಗಲು ಸಹ ಇನ್ನು ಬುಡಕಟ್ಟು ಜನಾಂಗಗಳಲ್ಲಿ ಕೆಲವೊಂದಿಷ್ಟು ಸಮುದಾಯಗಳಲ್ಲಿ ಇನ್ನು ಬೇಟೆ ರೂಢಿಯಲ್ಲಿದೆ. ಬುಡಕಟ್ಟು ಜನಗಳಲ್ಲಿ ಬೇಟೆಗೆ ಇಂದಿಗೂ ಪ್ರಾಶಸ್ತ್ಯವಿದೆ. ಇಲ್ಲಿನ ವೈವಾಹಿಕ ಸಂಬಂಧಗಳು ಅಲ್ಲಿನ ಆಚರಣೆಗಳು ನಿಜಕ್ಕೂ ಅಚ್ಚರಿ ಮೂಡಿಸುತ್ತವೆ. ಒಬ್ಬ ಬುಡಕಟ್ಟು ಜನಾಂಗದ ಯುವಕ ಮದುವೆಯಾಗಬೇಕಾದರೆ ಆತ ಬೇಟೆಯನ್ನು ಆಡಿ ಪ್ರಾಣಿಯನ್ನು ಹೊತ್ತುಕೊಂಡು ತರಬೇಕು.ಆತ ಮರಳಿ ಖಾಲಿ ಕೈಯಿಂದ ಬಂದರೆ ಅಸಮರ್ಥನೆಂದು, ಅದೇ ಬೇಟೆಯಾಡಿ ಹೊತ್ತುತಂದರೆ ಆತ ಸಾಹಸಿ ತುಂಬಾ ಸಮರ್ಥನಾದವನು ಮಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆ ಎಂಬ ಮನೋಭಾವ ಅವರಲ್ಲಿದೆ. ವಿವಾಹದ ಸಂದರ್ಭದಲ್ಲಿ ವರದಕ್ಷಿಣೆ ವಧುದಕ್ಷಿಣೆಗಳು ರೂಢಿಯಲ್ಲಿದ್ದು ಪ್ರತಿಯಾಗಿ ಇಲ್ಲಿ ಬಿಲ್ಲು ಬಾಣಗಳನ್ನು ಆಯುಧಗಳನ್ನು ಕೊಡುತ್ತಾರೆ. ಇದರಿಂದ ಬುಡಕಟ್ಟು ಜನರಲ್ಲಿ ಇನ್ನು ಬೇಟೆ ಪದ್ಧತಿ ಜೀವಂತವಾಗಿರುವುದಕ್ಕೆ ಇದೊಂದು ನಿದರ್ಶನ ಎಂದು ಹೇಳಬಹುದು.

ಬೇಟೆ ಸಾಂಸ್ಕೃತಿಕ ಪದಕೋಶ ಇದು ಮೇಲ್ನೋಟಕ್ಕೆ ಕೇವಲ ಒಂದು ಪದಕೋಶದಂತೆ ಕಂಡುಬರುತ್ತದೆ.ಲೇಖಕರು ಇಲ್ಲಿ ಒಂದೊಂದು ಶಬ್ದಗಳನ್ನು ಸಂಗ್ರಹಿಸಿ ಅದಕ್ಕೆ ತುಂಬಾ ಸಮರ್ಥವಾದ ಅರ್ಥ ವಿವರಣೆಗಳನ್ನು ಕೊಡುತ್ತಾರೆ.ಈ ವಿವರಗಳನ್ನು ಅವಲೋಕನ ಮಾಡುತ್ತಾ ಹೋದಂತೆ ಬೇಟೆ ಜಾನಪದೀಯ ಬದುಕಿನ ಅನಾವರಣವಾಗುತ್ತದೆ.ಮಾನವ ಮತ್ತು ಪರಿಸರದ (ಕಾಡಿನ) ಕೊಡುಕೊಳ್ಳುವಿಕೆ ಅವರ ಮಧ್ಯೆ ಇರುವ ಅವಿನಾಭಾವ ಸಂಬಂಧದ ಕುರಿತು ತಿಳಿಯುತ್ತದೆ.ಇಲ್ಲಿ ವಿಶೇಷವಾಗಿ ಹೇಳುವುದಾದರೆ ಇದೊಂದು ಪದಕೋಶ ಎಂಬುದನ್ನು ಹೊರತುಪಡಿಸಿ ನೋಡಿದಾಗ ಒಂದು ಹೊಸ ಆಲೋಚನೆಗೆ ತೊಡಗುವಂತೆ ಮಾಡುತ್ತದೆ.ಕಾಡಿನ ಸುತ್ತಮುತ್ತ ಅಥವಾ ಕಾಡಿನಲ್ಲಿ ವಾಸಿಸುವ ಜನರ ಬದುಕು ಒಂದು ವಿಸ್ಮಯಲೋಕ.ಇಲ್ಲಿ ಮಾನವನು ಪರಿಸರದ ಕೂಸಾಗಿದ್ದಾನೆ. ನಿತ್ಯ ನಿರಂತರ ಹೊಸದನ್ನು ಈ ಪ್ರಕೃತಿಯಿಂದ ಕಲಿಯುತ್ತಾನೆ. ನಿತ್ಯವೂ ಅದು ಕಲಿಸುತ್ತದೆ.ಇದನ್ನೆಲ್ಲ ಗಮನಿಸಿದಾಗ ಈ ಸಾಂಸ್ಕೃತಿಕ ಪದಕೋಶದಲ್ಲಿ ಜಾನಪದ ಚಹರೆಗಳನ್ನು ಇಲ್ಲಿ ಅರಿತುಕೊಳ್ಳಬಹುದಾಗಿದೆ.ನಿರಂತರವಾಗಿ ಕಾಡಿನಲ್ಲಿರುವ ಜನರು ತಮ್ಮ ಸುತ್ತ ಮುತ್ತಲಿನ ಪರಿಸರದ ಕುರಿತು ಸಾಮಾನ್ಯ ತಿಳುವಳಿಕೆ ಹೊಂದಿರುತ್ತಾರೆ.ಅಷ್ಟೇ ಎಚ್ಚರಿಕೆಯಿಂದಲೂ ಸಹ ಇರಬೇಕಾಗುತ್ತದೆ.ಇಲ್ಲಿ ಲೇಖಕರು ವಿವರಿಸಿದ ಒಂದೊಂದು ಪದಗಳ ವಿವರಣೆಯನ್ನು ಗಮನಿಸಿದಾಗ ಅವರ ಬದುಕಿನ ಸರ್ವತೋಮುಖ ಸಂಗತಿಗಳನ್ನು ಕಣ್ಣೆದುರಿಗೆ ಬರುವಂತೆ ಸವಿವರವಾಗಿ ಸಚಿತ್ರವಾಗಿ ಕಟ್ಟಿಕೊಟ್ಟಿದ್ದಾರೆ. ದಿನನಿತ್ಯ ಸೇವಿಸುವ ಆಹಾರ, ಧರಿಸುವ ವೇಷ ಭೂಷಣಗಳ ಆದಿಯಾಗಿ ಅಲ್ಲಿನ ಪ್ರಾಣಿಗಳು, ಪಕ್ಷಿಗಳು, ಕ್ರೀಮಿ ಕೀಟಗಳು ಸುತ್ತಮುತ್ತಲು ಬೆಳೆಯುವ ವಿವಿಧ ಪ್ರಕಾರದ ಹುಲ್ಲಿನ ಜಾತಿ, ಕೃಷಿ ತೋಟಗಳ ಪ್ರಕಾರಗಳು, ಬೇಟೆ ಆಡಲು ಬಳಸುವ ಉಪಕರಣಗಳು, ತಂತ್ರಗಳು,

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಬೇಟೆಗಾರನ ಚಾಣಾಕ್ಷತನ, ವಿವಿಧ ಜಾತಿಯ ಸಸ್ಯ ಗಿಡ ಮರಗಳಿಂದ ಆಗುವ ಉಪಯೋಗ, ಜನಪದ ವೈದ್ಯ ಪದ್ಧತಿ, ಬೇಟೆಗಾರರ ಒಗ್ಗಟ್ಟು, ಅವರ ಮನರಂಜನೆ ಸಾಧನಗಳು ಬೇಟೆ ಜನರಲ್ಲಿ ಚಾಲ್ತಿಯಲ್ಲಿರುವ ಕ್ರೀಡೆಗಳು ಮುಂತಾದವುಗಳ ಕುರಿತು ಇಲ್ಲಿ ಅರಿತುಕೊಳ್ಳಬಹುದಾಗಿದೆ.

ಹುಟ್ಟಿನಿಂದ ಸಾಯುವವರೆಗೆ ಅವರಲ್ಲಿರುವ ಆಚರಣೆಗಳು ಅಡುಗೆ ಪ್ರಕಾರ ಗುಡಿಸಲಿನ ಪ್ರಕಾರಗಳು ಅವುಗಳ ವೈಶಿಷ್ಟ ಬೇಟೆಯಾ ಜೀವನವೇ ಒಂದು ರೋಮಾಂಚನ ಸಾಕಷ್ಟು ಕುತೂಹಲ ಭಯ ಆತಂಕಗಳ ನಡುವೆ ಬದುಕು ಸಾಗಿಸಬೇಕಾದ ಸಂದಿಗ್ಧತೆ ಈ ಎಲ್ಲ ಅಂಶಗಳನ್ನು ನಾವಿಲ್ಲಿ ಕಂಡುಕೊಳ್ಳಬಹುದಾಗಿದೆ. ಈ ಪದಕೋಶದಲ್ಲಿನ ಕೆಲವೊಂದಿಷ್ಟು ಪದಗಳನ್ನು ಉದಾಹರಣೆಗೆ ಬಳಸಿಕೊಂಡು ಈ ರೀತಿಯ ಚರ್ಚೆಗಳನ್ನು ಮುಂದುವರಿಸಬಹುದು.

ಪಕ್ಷಿಗಳ ಹೆಸರುಗಳನ್ನು ಅವುಗಳ ವಿಶೇಷತೆಗಳನ್ನು ಸೂಚಿಸುವ ಪದಗಳು... ಅಂಬಕ್ಕಿ, ಅಬ್ಬಲು ಹಕ್ಕಿ, ಅರಿಶಿನ ಗೂಟಲೆ ಹಕ್ಕಿ, ಉಣ್ಣೆ ಗೊರವ, ಉಪ್ಪಲ್ಲಟ್ಟಿ, ಉಲಿಹಕ್ಕಿ, ಉಲ್ಲಂಗಿಹಕ್ಕಿ, ಎರೆಲಡ್ಡು, ಕಡ್ಲಹದ್ದು, ಕತ್ತಿಪುಕ್ಕ, ಕೌಜಗನಹಕ್ಕಿ, ಕಾಡುಕೊಕ್ಕರೆ, ಕಾಡುಕಡುಕ, ಕಾಡು ಕೋಳಿ ಕಾಡುಗುಮ್ಮಟಕ್ಕಿ, ಕುಂಡಿ ಕುಣಚಿನ ಹಕ್ಕಿ, ಕುಂಡೆಕುಸ್ಕ, ಕುಂಡ್ಬಳ್ಳ, ಕುರವಿ, ಕೆಂದಗಿಡುಗ, ಕೆಂಬೂತ(ರತ್ನಪಕ್ಷಿ), ಕೆನ್ನೀಲಿ ಕಿರುಕೋಳಿ, ಕಿನ್ನೀಲಿ ಸೋರಕ್ಕಿ, ಕೇಂಕಣ, ಕೊಂಚೆ, ಕೊಂಬಕ್ಕಿ, ಕೊಕ್ರಕ್ಕಿ, ಕೊತ್ತಳಿ, ಕೋಳಿಜಾಣ, ಕೌಜುಗ, ಗಂಗೆಹಕ್ಕಿ, ಗಾಲಿಗಿರ್ಗ, ಗಿಜ್ಜನಕ್ಕಿ, ಗಿಡುಗ, ಗೀಳಿ, ಗೀಜಗ, ಗಿಜಗಾರ್ಲು, ಗೀನೆಹಕ್ಕಿ, ಗುಂಹಾಡಲಹಕ್ಕಿ, ಗುಬ್ಬಚ್ಚಿ, ಗುಬ್ಬಿ ಗಿಣಿ, ಗುಳುಮುಳುಕನಹಕ್ಕಿ, ಗೃಹವೇಣಿ, ಗೆರೆಬಾನಕ್ಕೆ, ಗೌಜಿಗನ ಹಕ್ಕಿ, ಗೌಜು, ಚಂದ್ರಕ್ಕಿ, ಚಕೋರ, ಚರಲೆಹಕ್ಕಿ, ಚಾಚುಕೋಳಿ, ಚಾಣಕ್ಕಿ, ಚಾದಗೆ, ಚಿಟ್ ಗೋಳಿ, ಚಿಟ್ಟೆಹಕ್ಕಿ, ಚುಕ್ಕೆಗೂಬೆ, ಚೋರೆಹಕ್ಕಿ, ಜಾನುಬೆಳ್ಳಕ್ಕಿ, ಜೇನು ಗುಟುರ, ನಾಮಗೋಳಿ, ನೆಲಗುಬ್ಬಿ, ನೀಲಿ ಪಕ್ಷಿ, ಪತ್ರಂಗ,ಪಿಕರಾಳಹಕ್ಕಿ, ಪಾರಿವಾಳ, ಬೆಳವನಹಕ್ಕಿ, ಬೇಟೆಗಾರ ಗಿಡುಗ, ಮಂಗನಿಹಕ್ಕಿ, ಮಣಿ ಹಾಡಲು ಹಕ್ಕಿ, ಮರಕುಟಿಗನಹಕ್ಕಿ, ಮಿಂಚುಳ್ಳಿ, ಸಾಳ್ವ, ಹೊರಸಲಹಕ್ಕಿ, ಮುಂತಾದ ಜಾತಿಯ ಪಕ್ಷಿಗಳ ಹೆಸರುಗಳನ್ನು ಹಾಗೂ ಅವುಗಳ ವಿಶೇಷತೆಗಳನ್ನು ಹೇಳಿದ್ದಾರೆ.

ಪ್ರಾಣಿಗಳ ಹೆಸರು ಮತ್ತು ಅವುಗಳ ವಿಶೇಷತೆಗಳನ್ನು ಹೇಳುವ ಪದಗಳು :– ಅಂಗುಲಿಗಾಮಿ, ಅಳಿಲು, ಉಡ, ಎಗ್ಗರು, ಒಂಟಿಗ, ಓಂಟ್ರಕ, ಕಂಕನರಿ, ಕಂಚಾಡು, ಕಂತ್ರಿನಾಯಿ, ಕಡಸು, ಕಣೆಹಂದಿ, ಕಸಿ ಹೋರಿ, ಕಿರುಬ, ಕೆಂದಗರ, ಕೆಂಗುರಿ, ಗಡವ, ಚಿಗರೆ, ಚೀರುನಾಯಿ, ಚೀತಾ, ಟಗರು, ತೋಳ, ದಡ್ಡೆ, ದಾಸರನಾಯಿ, ಪುನುಗು,ಪುಲ್ಲೆ, ಪೋತ, ಪೋತಕ, ಬಸ್ತಕ, ಬೇಟೆಬೆಕ್ಕು, ಬೇಟೆನಾಯಿ, ಮಿಕ, ಮಸಿಯ, ಸಿಂಗಳಿಕ, ಸಿಳ್ಳೆನಾಯಿ, ಹಂದಿ, ಹುಲಿ, ಜಿಂಕೆ ಹೀಗೆ ವೀರ ಜಾತಿಯ ಹೆಸರುಗಳನ್ನು ಪಟ್ಟಿ ಮಾಡಿದ್ದಾರೆ.

ಸ್ಥಳವಾಚಿ ಅಥವಾ ಒಂದೊಂದು ವಿಶೇಷ ಸ್ಥಳಗಳು ಹಾಗೂ ಅವುಗಳ ವಿಶೇಷತೆಯನ್ನು ಹೇಳಲು ಬಳಸುವ ಪದಗಳು:– ಅಂಕ,ಅಂಚು, ಅಗುಳು, ಅಟ್ಟಂಬಾರಣ್ಯ, ಅಡ್ಡಂಕಡ್ಡಿ, ಅಡ್ಲು, ಆಯಕಟ್ಟು, ಉದಲೆ, ಒಡ್ಡು, ಕಂಡಿ, ಕಟ್ಟು, ಕಟ್ಟೆ, ಕಾಲ್ಹೊಳಿ, ಕಿತ್ತಾರು, ಕುರಿಯೊಡ್ಡಿ, ಕುರ್ಲಗುಂಡಿ, ಕೂಡುಕೊಟ್ಟಿಗೆ, ಕೊಟ್ಟಿಗೆ, ಘಟ್ಟ, ತಡಸಲು, ತಣೆ, ತುಳುಕಲು, ಕೊಟ್ಟಿಗೆ, ದಂಬೆ, ದಾವಣಿ, ದಡ್ಲು, ದುರ್ಗ, ಬೀಳುಕಟ್ಟೆ, ಬೊಡ್ಡ ಇತ್ಯಾದಿ....

ಕಾಡಿನಲ್ಲಿ ಬೆಳೆಯುವ ಹುಲ್ಲು, ಸಸ್ಯ ಜಾತಿಗಳು ಹಾಗೂ ಔಷಧಿ ತಯಾರಿಸಲು ಬಳಕೆಯಾಗುವ ಗಿಡಮೂಲಿಕೆಗಳ ಹೆಸರುಗಳನ್ನು ಸೂಚಿಸುವ ಪದಗಳು:– ಅಕ್ಕಿಹೊಡೆ, ಅಗರಿ, ಅಡವಿಅಂಟರಿಕೆ, ಇಲಾತಿಸಿಗೆ, ಎಲೆಮದ್ದು,ಒಡಕೆ, ಕಕ್ಕರಿ, ಕಕ್ಕಿ, ಕಣಗಿಲೆಕಳ, ಕಾಡುವೈದ್ಯ, ಕುಸುಬೆ, ಕೆಂಗೊಡನಬೀಳು, ಕೆವಿ, ಖಾಣ, ಗಜ್ಜುಗ, ಗರ್ದುಗು, ಗರಿಕೆ, ಗೊಟ್ಟ, ಚಿಂಪಿಗನ ಹುಲ್ಲು, ಚುರುಚೆಬಳ್ಳಿ, ಚೇಣಿಕಡ್ಡಿ, ಜಂಬಾಲ, ಜಡ್ಡು, ನಿರೋಟಿಬೇರು, ನೀವಾರ, ಮಾರಿವೈದ್ಯ, ಮುಳಿ ಹುಲ್ಲು, ಲಂಟಾನ

ಬೇಟೆಗಾರರು ಬಳಸುವ ಆಯುಧಗಳು, ಉಪಕರಣಗಳನ್ನು ಸೂಚಿಸುವ ಪದಗಳು:– ಅಡಿಕೆದಬ್ಬೆ, ಅತ್ರಾಯ, ಆಯುಧ, ಇರಿಗೂಣಿ, ಇಲಿಕತ್ತರಿ, ಈಟಿ, ಉಚ್ಚಾರ, ಏರುಗೂಳಿ, ಒಚ್ಚಿ, ಒಂಟಿನಲ್ಲಿ, ಒಡ್ಯಾಣ, ಕಕ್ಕಡ, ಕಂಬಳಿಡೋಲಿ, ಕಕ್ಕಡವಲೆ, ಕಟಗೋವಿ, ಕಟ್ಟುಗಾಳ, ಕಡ್ಡಿಬಲೆ, ಕಣಾರ, ಕವಣೆ, ಕುಡುಗೋಲು, ಕೂಣಿ, ಕೈದೊಟಿ, ಕೊಡ್ಲಿ, ಚಾಟರಿಬಿಲ್ಲು, ಚೀಪಗೊಡಲಿ, ಚೀಪಿನಕೋವಿ ತಂತಿಬಲೆ, ಪಂಜು,ಪಟಾಕಿ, ಬಾಯಿತುಕ್ಕೆ, ಬಿಲ್ಲು, ಭಲ್ಲೆ, ಮಿಂಬಲೆ, ರಬ್ಬರಬಿಲ್ಲು, ಲಾಟೀನು ಇತ್ಯಾದಿ

ಈ ಬೇಟೆ ಸಾಂಸ್ಕೃತಿಕ ಪದಕೋಶದಲ್ಲಿ ಪ್ರಾಣಿ ಪಕ್ಷಿಗಳಿಗೆ ಬರುವ ರೋಗಗಳ ಕುರಿತಾಗಿಯು ಹೇಳಿದ್ದಾರೆ. ಅವು ಕರ್ಣಮೂಲ, ಕಾರು, ಕಾಲುಬ್ಬುಕುರುವು, ಕಾಲುಬಾಯಿ, ಕಿಸುರು ಕುಂಟುಬೀಳು, ಕುಂಟುರೋಗ, ಕುಂದು, ಕುಗುರು, ಕುಕ್ಕುವಳ್ಳಿ, ಕುಣಕಿಹುಣ್ಣು, ಕುಪ್ಪ, ಕೆಚ್ಚಲುಗಡ್ಡಿ, ಕೋತಿರೋಗ, ಗಡ್ಡಿರೋಗ, ಗರ, ಗಳಲುಬ್ಯಾನಿ, ಗುಂಡಿಗಿಶಲಿ, ಗುಂಡ್ಗೆರೋಗ, ಚಪ್ಪೆ, ನಡುಗುಗುಂದ, ನಲುಗುರೋಗ, ನಸಿಬಡಿಯೋದು.. ಇತ್ಯಾದಿ

ವಸತಿಗೆ ಸಂಬಂಧಿಸಿದಂತೆ ಅಟ್ಟ, ಅಟ್ಟಣಿಗೆ, ಅಟ್ಲು, ಉಣಗೋಲು, ಕಲ್ಲುಕಟ್ಟೆ, ದೆಂಗ, ಬೆತ್ತದ ತೊಟ್ಟಿಲು, ಗುಡಸ್ಲ, ಮಂಚ, ಮಾಡು, ಚಪ್ಪರ ಇತ್ಯಾದಿ

ಕ್ರಿಮಿ ಕೀಟಗಳನ್ನು ಸೂಚಿಸುವ ಪದಗಳು:– ಇಂಬಳ, ಎದ್ದಿಮ್ಮಿ, ಒನಕೆಹುಳ, ಓಂತಿಹುಳ, ಒರಲೆ, ಓಡುಳ, ಕಂಚುಗಾರ, ಜೇರುಂಡೆ, ಕಡಜೀರಿಗೆ, ಕುಲಿಕ, ಕುಲ್ಡ, ಕೊಳಕುಮಂಡಲ, ಜೇನುಹುಳ, ಗೌಳಿ, ಚವುಳಿ, ಜಿಗಣೆ, ಜೇರುಂಡೆ, ತೊಂಡುಂಗಿ, ನಂಜುಳ, ಮಿಡತೆ ಇತ್ಯಾದಿ

ಬೇಟೆಯ ವಿಧಾನ, ತಂತ್ರ ಮತ್ತು ಪ್ರಕಾರಗಳನ್ನು ಸೂಚಿಸುವ ಪದಗಳು:– ಅಂಡು, ಅಧಾರ್ಮಿಕ ಶಿಕಾರಿ, ಅದುರುಪೆಟ್ಟು, ಅರುಗು, ಆರಾಳು, ಆಲುಬೇಟೆ, ಇಪ್ಪತ್ತಾಳು, ಈಡಾಗು, ಈಡುಮಾಡು,ಉಳ್ಳಒಡ್ಡು, ಎಂಟಾಳು, ಎರೆ, ಐದಾಳು, ಕಂದಕ ಕಡಿಯುವುದು, ಕತ್ತರಿ ಬೇಟೆ, ಕಿರುವೆಂಟೆ, ಗುಂಡಿಕಡ, ಬ್ಯಾಟರಿ ಬೇಟೆ, ಭ್ರಾಂತಿದೀಪ, ಮರಸುಬೇಟೆ, ಸಂಗೀತ ಬೇಟೆ ಇತ್ಯಾದಿ

ಬೇಟೆ ಜನರು ಬಳಸುವ ವಿವಿಧ ಪ್ರಕಾರದ ಆಹಾರ ಹಾಗೂ ಅಡುಗೆ ಕೋಣೆಗಳಿಗೆ ಸಂಬಂಧಿಸಿದ ಪದಗಳು:– ಅಂಕಣ, ಅಂವುತ್ಲ, ಅಚ್ಚೆರು, ಅಜಕ್ಕಲ, ಅಡಬಳ, ಅತ್ರಾಸ, ಈರಿಕೋಲು, ಎಲೆ,ಏಡಿಗೊಜ್ಜು, ಓಟೆಕಾಯಿಹುಳಿ, ಕಂಡ, ಕಡುಕ, ಕಡಿಮಾಡು, ಕಡ್ತಕುಡ್ತ, ಕಣೆ, ಕರಾವಳಿ, ಕರಿಮೀನು, ಕಾಯಿ, ಕಾರ್ದೂಟ, ಕಿಚಡಿ, ಕೆಂಜಿಗ, ಚಿಗಳಿ, ಕೈಬಟ್ಟಲು, ಗುಲಗಂಜಿ, ಚಾಕಣೆ, ಚಿಪ್ಪು, ಜಂಬೀರ, ಜೀರಿಗೆ, ದಾಲ್ಚಿನ್ನಿ, ದೋಸೆ ಸಟ್ಟುಗ, ಪನಸ, ಬುತ್ತಿ, ಬೆಮ್ಮಾರಲಹಣ್ಣು, ವನಭೋಜ್ಯ..... ಇತ್ಯಾದಿ

ದೇವರು–ದೆವ್ವ ನಂಬಿಕೆ, ಆಚರಣೆಗಳನ್ನು ಹೇಳುವ ಪದಗಳು:–ಅಂಜನ, ಆಯಾರ, ಇದುರುಬ್ಯಾಟಿ, ಉಗಾದಿ ಬೇಟೆ, ಉಪ್ಪಾರತಿ, ಓಕಳಿ, ಕಾಡ್ಲ ಒಡೆಯ, ಕಾರ, ಕೊಡಸು, ಗಂಟಿಔತಣ, ಗೌಡಿಕೆಎಡೆ, ಚೌಡಿ, ಜೆಟಗ, ಜೈನೆಡೆ, ದೆಯ್ಯ, ದೈಯ್ಯದಬನ, ದೇವರಬನ, ಧೂಪಹಾಕು, ನಿಮಿತ್ಯ, ಬೇಟೆಕೊಡು, ಬೇಟೆಕಳೆ, ಬೇಟೆ ದೇವರು, ಬೇಟೆಮರ, ಬೇಜೆಮಂಜ, ಬೇಟೆರಂಗ, ಬೇಟೆಹಬ್ಬ, ಬ್ಯಾಟಿಕಡಿ, ಮದಿಪು, ಮಲ್ಲಾಡಿಚೌಡಿ, ಮಸಿಕೆಂಡ, ಮಾಂತ್ರಿಕಬೇಟೆ, ಮುಚ್ಚುಬೇಟೆ.....

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

#ಜಲಚರ ಪ್ರಾಣಿಗಳನ್ನು ಸೂಚಿಸುವ ಪದಗಳು:– ಅವಲುಮೀನು, ಕಾಟ್ಲ, ಏಡಿ, ಕುಂಗ, ಬೆಸ್ತ, ಕೊರವಮೀನು, ಗಿರಲು, ಗಿರ್ಲು, ಗುಳುಗದಮೀನು, ಗೆಂಡ, ಚೇಣಿ, ತೊಳ್ಳೆಮೀನು, ಮಲಗನಮೀನು, ನೀರಬೇಟೆ, ನೀರಮಾಂಸ, ಆಮೆ, ನೀರೊಳ್ಳೆ, ಮಿಂಬುಲಿಗ, ಮುಂಡೇಡಿ, ಮುರಕಾಟಿ....

ಈ ರೀತಿ ಇನ್ನು ಹಲವಾರು ಪದಗಳಿವೆ. ಎಷ್ಟೋ ವಿಧದ ಪ್ರಾಣಿಗಳು, ಪಕ್ಷಿಗಳು,ಬೇಟೆಗಾರರು ಬಳಸುವ ಆಯುಧಗಳು, ಅವರ ನಂಬಿಕೆಗಳು, ಸಂಪ್ರದಾಯಗಳು, ರೂಢಿಯಲ್ಲಿರುವ ಜನಪದ ವೈದ್ಯ ಪದ್ಧತಿ, ಸಂಬಂಧಗಳನ್ನು ಸೂಚಿಸುವ ಪದಗಳು ಈ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಕೆಲವೊಂದಿಷ್ಟು ಪದಗಳನ್ನು ಯಾರೂ ಕೂಡ ಕೇಳಿಯೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಅಪರಿಚಿತವಾಗಿವೆ. ಇದನ್ನೆಲ್ಲ ಸೂಕ್ಷ್ಮವಾಗಿ ಅವಲೋಕನ ಮಾಡಿದಾಗ "ಬೇಟೆ ಸಾಂಸ್ಕೃತಿಕ ಪದಕೋಶ"ವು ಒಂದು ಬೇರೆ ಪ್ರಪಂಚವನ್ನೇ ಕಣ್ಣೆದುರಿಗೆ ಬರುವಂತೆ ಮಾಡುತ್ತವೆ.

ಸಮಾರೋಪ : –

ಈ ಎಲ್ಲ ಅಂಶಗಳನ್ನು ಅವಲೋಕನ ಮಾಡಿದಾಗ ತಿಳಿದುಬರುವುದೇನೆಂದರೆ ಬೇಟೆ ಸಂಸ್ಕೃತಿ ಎಂದಾಗ ಕೇವಲ ಪ್ರಾಣಿಗಳನ್ನು ಅಥವಾ ಪಕ್ಷಿಗಳನ್ನು ಹೊಡೆದು ತಿನ್ನುವುದು ಅಂತ ತಿರ್ಮಾನಕ್ಕೆ ಬಂದರೆ ಅದರ ಅರ್ಥ ಸಂಕುಚಿತವಾಗುತ್ತದೆ. ಬೇಟೆ ಸಂಸ್ಕೃತಿ ಆರಂಭದಲ್ಲಿ ಅನಿವಾರ್ಯವಾಗಿ, ರಕ್ಷಣೆಗಾಗಿ, ಆಹಾರಕ್ಕಾಗಿ, ವೃತ್ತಿಯಾಗಿ, ಪ್ರವೃತ್ತಿಯಾಗಿ ಅದು ಕಾಲ ಕ್ರಮೇಣ ಮೋಜಿನ ವಿಷಯವಾಗುತ್ತ ಹೋಗಿ ಪ್ರಸ್ತುತ ದಿನಮಾನದಲ್ಲಿ ಬೇಟೆಯಾಡುವುದು ಅಪರಾದವೆನ್ನುವ ನಿಯಮಾವಳಿಗಳಾಗಿವೆ. ಬೇಟೆ ಸಂಸ್ಕೃತಿ ಎಂದಾಗ ಅರಣ್ಯದಲ್ಲಿರುವ ಪ್ರಾಣಿ ಪಕ್ಷಿಗಳನ್ನು ಹೊಡೆಯುವುದು ಅಷ್ಟೇ ಅಲ್ಲ. ಕಾಡಿನಲ್ಲಿ ಇದ್ದುಕೊಂಡು ತಮ್ಮ ಸುತ್ತ ಮುತ್ತಲಿನ ಪರಿಸರದ ಕುರಿತಾಗಿ ಪ್ರಜ್ಞೆ ಹೊಂದುವುದು. ಅಲ್ಲಿನ ಗಿಡ–ಮರಗಳು, ಬೆಟ್ಟ–ಗುಡ್ಡ ಗಳು, ಪ್ರಾಣಿ, ಪಕ್ಷಿ, ಸಸ್ಯಸಂಕುಲಗಳ ಪರಿಚಯ ಮಾಡಿಕೊಳ್ಳುವುದು.ಅಷ್ಟೇ ಅಲ್ಲದೆ ಕಾಡನ್ನು ನೋಡಿ ತಮ್ಮ ಜೀವನದಲ್ಲಿ ಸ್ಫೂರ್ತಿ ತೆಗೆದುಕೊಂಡು ತುಂಬು ಬಾಳನ್ನು ನಡೆಸುತ್ತಾರೆ.ಅಲ್ಲಿ ನಡೆಯುವ ನಿತ್ಯದ ಸನ್ನಿವೇಶಗಳಿಂದ ಅನುಭವ ಜನ್ಯವಾದ ತಿಳುವಳಿಕೆಯನ್ನು ಪಡೆಯುತ್ತಾರೆ.ಈ ರೀತಿ ಎಳೆ ಎಳೆಯಾಗಿ ಜನಪದ ಜೀವನ ವಿಧಾನದ ಚಹರೆಯನ್ನು ಈ "ಬೇಟೆ ಸಾಂಸ್ಕೃತಿಕ ಪದಕೋಶ"ವು ತೆರೆದಿಡುತ್ತದೆ.

ಪರಾಮರ್ಶನ ಗ್ರಂಥಗಳು

೧) ರಮೇಶ.ಸ.ಚಿ – ಬೇಟೆ ಸಾಂಸ್ಕೃತಿಕ ಪದಕೋಶ
೨) ವಿವೇಕ ರೈ. ಬಿ.ಎ – ಅನ್ವಯಿಕ ಜಾನಪದ
೩) ದೇ. ಜವರೇಗೌಡ –ಜಾನಪದ ಅಧ್ಯಯನ
೪) ಹಾ. ಮಾ. ನಾಯಕ – ಜಾನಪದ ಸ್ವರೂಪ
5) ಜಾನಪದ ಕೆಲವು ಅಧ್ಯಯನಗಳು –ಡಾ. ಅಂಬಳಿಕೆ ಹಿರಿಯಣ್ಣ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಕನ್ನಡ ಚಲನಚಿತ್ರಗಳ ಮೇಲೆ ಕನ್ನಡ ಸಾಹಿತ್ಯದ ಪ್ರಭಾವ

ಶ್ರೀ. ಶಂಭನಗೌಡ ನೀರಲಗಿ
ಕನ್ನಡ ಸಹಾಯಕ ಪ್ರಾಧ್ಯಾಪಕರು ಕೆ.ಎಲ್.ಇ.ಸಂಸ್ಥೆಯ ಗುದ್ಲೇಪ್ಪ ಹಳ್ಳಿಕೇರಿ
ಕಲಾ, ವಿಜ್ಞಾನ, ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಹಾವೇರಿ–581110

ಇಮೈಲ್– shambhanagouda20@gmail.com

Manuscript ID:
JRD -2026-180425
ISSN: 2230-9578
Volume 18
Issue 4(II)
Pp.81-85
April 2026
Submitted:12 Mar. 2026
Revised:27Mar. 2026
Accepted:14Apr.2026
Published:30 April2026

ಸಾರಲೇಖ :

ಮನುಷ್ಯ ಭಾಷೆಯ ಉಗಮದೊಂದಿಗೆ ಸಾಹಿತ್ಯವು ಸೃಷ್ಟಿಯಾಯಿತು ಸಾಹಿತ್ಯದ ಸೃಷ್ಟಿಗೆ ಯಾವ ಕಾಲವಿಲ್ಲ ಸಾಹಿತ್ಯದ ವಿವಿಧ ಹರವುಗಳಲ್ಲಿ ಚಲನಚಿತ್ರವು ಒಂದು ಸಾಧನವಾಗಿದೆ ಸಾಹಿತ್ಯ ಪ್ರಕರತೆಗೆ ಚಲನಚಿತ್ರ ಅಸ್ತ್ರವಾಗಿದ್ದು ಸಮಾಜದ ವಿಕಾರ ರೂಪಗಳನ್ನು ತೊರೆಯಲು ಕಂಡುಕೊಂಡ ಬ್ರಹ್ಮಾಸ್ತ್ರವಾಗಿವೆ. ಕನ್ನಡ ಸಾಹಿತ್ಯ ಮತ್ತು ಚಲನಚಿತ್ರ ನಡುವಿನ ದಟ್ಟವಾದ ಅವಿನಾಭಾವ ಸಂಬಂಧವು ಅತ್ಯಂತ ದೀರ್ಘ ಇತಿಹಾಸವನ್ನು ಹೊಂದಿವೆ ವಿಶೇಷವಾಗಿ ಕಥೆ, ಕಾವ್ಯ, ನಾಟಕ, ಕಾದಂಬರಿಗಳನ್ನು ಆಧಾರವಾಗಿಟ್ಟುಕೊಂಡು ಸಾಮಾಜಿಕ, ಸಾಹಿತ್ಯಿಕ, ಧಾರ್ಮಿಕ, ಸಾಂಸ್ಕೃತಿಕ ದೇಶಿಯ ಶೈಲಿಯನ್ನು ಬಳಸಿಕೊಂಡು ಸಮಾಜದ ಜನರಿಗೆ ಮೌಲ್ಯವನ್ನು ಕಟ್ಟಿಕೊಡುವಲ್ಲಿ ಮುಖ್ಯಪಾತ್ರ ವಹಿಸಿವೆ. ಸಾಹಿತ್ಯವು ಕಥೆಯ ಮೂಲಾಧಾರವಾದರೆ, ಸಿನಿಮಾ ಅದನ್ನು ದೃಶ್ಯರೂಪದಲ್ಲಿ ಅನಾವರಣಗೊಳಿಸುತ್ತದೆ. ಸಾಹಿತ್ಯದಲ್ಲಿ ಕಂಡುಬರುವ ಹಲವಾರು ಗೀತೆಗಳು, ಅಭಿನಯಗಳು, ನೃತ್ಯ, ಕಥೆಗಳು ವಿಷಯ ನಿರೂಪಣೆ ಮುಂತಾದವು ಏಕರೂಪವಾಗಿ ಮೌಖಿಕ ಹಾಗೂ ಬರವಣಿಗೆಯ ಮೂಲಕ ಬರುತ್ತಿದ್ದವು ಆದರೆ ಸಮಯ ಕಳದಂತೆ ಸಾಹಿತ್ಯದ ಹಲವಾರು ಹರಿವುಗಳು ಮೌಖಿಕವಾಗಿ ಹಾಗೂ ಸಂಕೀರ್ಣವಾದ ಅಂಶಗಳನ್ನೇ ದಾಟಿ ಧೃಕ್–ಶ್ರವಣೊಪಾದಿಯಲ್ಲಿ ಸಾಗುವಲ್ಲಿ ಚಲನಚಿತ್ರ ಮಾಧ್ಯಮ ಮಹತ್ತರವಾಗಿದೆ ಪ್ರಸ್ತುತ ಎ.ಐ ಯುಗದಲ್ಲಿ ಸಿಮೀತವಾಗಿರುವ ಚಲನಚಿತ್ರ ಉದ್ದೇಮೆ ವಿಸ್ತಾರಗೊಂಡು ಸಮಮಾಜವನ್ನು ಉದ್ದರಿಸುವ ಬೆಳವಣಿಗೆಯಲ್ಲಿ ಸಾಗುತ್ತಿದೆ ಎಂದು ತೀಳಿಸುವುದೇ ಈ ಲೇಖನದ ಉದ್ದೇಶವಾಗಿದೆ

ಮುಖ್ಯ ಪದಗಳು : ಭಾಷೆ, ಸಾಹಿತ್ಯ, ಚಲನಚಿತ್ರ, ದೃಶ್ಯಮಾಧ್ಯಮ, ಸಂಕೀರ್ಣ, ಸಂಗೀತ ಕಲೆ, ಬಾಂಧವ್ಯ

ಸಾಹಿತ್ಯವು ಶಬ್ದಗಳ ಮೂಲಕ ಓದುಗರ ಕಲ್ಪನಾ ಲೋಕ ವಿಸ್ತರಿಸಿದೆ. ಸಿನಿಮಾ ಸಂಗೀತ ಧ್ವನಿ ಮತ್ತು ದೃಶ್ಯಗಳ ಮೂಲಕ ಕಥೆ ಜೀವಂತಗೊಳಿಸುತ್ತದೆ. ಸಾಹಿತ್ಯವು ಸಿನಿಮಾಗಳಿಗೆ ಮೂಲ ಕಥಾವಸ್ತು ಒದಗಿಸುತ್ತದೆ. ಸಾಹಿತ್ಯ ಕೃತಿ ಆಧರಿಸಿ ಸಿನಿಮಾ ಮಾಡುವಾಗ ಮೂಲ ಕೃತಿಯ ಸಾರ ಉಳಿಸಿಕೋಳ್ಳುವುದು ಒಂದು ಸಾಲಿನ ಪ್ರಕ್ರಿಯೆ ಕನ್ನಡ ಚಿತ್ರರಂಗದಲ್ಲಿ ಸಾಹಿತ್ಯ ಕೃತಿಗಳು ಮತ್ತು ಕಾದಂಬರಿ ಆಧಾರಿತ ಚಿತ್ರಗಳು ವಿಶೇಷ ಸ್ಥಾನವನ್ನು ಪಡೆದಿವೆ. ಕನ್ನಡ ನಾಡು ಕೇವಲ ನಮಗೆ ಅನ್ನ ಆಶ್ರಯ ನೀಡಿರುವ ಭೂಮಿ ಮಾತ್ರವಲ್ಲ ಅದೊಂದು ಭಾವನಾತ್ಮಕ ಸಂಬಂಧ ಆ ಸಂಬಂಧದಲ್ಲಿ ಈ ನೆಲದ ಕುರಿತಾದ ಪ್ರೀತಿ , ವಿಶ್ವಾಸ, ಭಕ್ತಿ, ಭಾವಗಳು ಮಿಳಿತಗೊಂಡಿವೆ. ಈ ನಿಟ್ಟಿನಲ್ಲಿ ನಮ್ಮ ಕನ್ನಡ ಚಲನಚಿತ್ರ ಸಾಹಿತಿಗಳು ಹಿಂದೆ ಬಿಳದೆ ತಮ್ಮದೇ ಆದ ರೀತಿಯಲ್ಲಿ ಕಾಣಿಕೆ ಸಲ್ಲಿಸಿದ್ದಾರೆ. ಚಲನಚಿತ್ರ ಎನ್ನುವಂತಹದ್ದು ಯಾಂತ್ರಿಕತೆಯಿಂದ ಸೃಷ್ಟಿಯಾಗಿ ಮುಂದೆ ಇದು ಕಲಾಮಾಧ್ಯಮವಾಗಿ ಬೆಳೆದು ಬಂದಿದೆ ಕನ್ನಡ ಚಲನಚಿತ್ರ ಕೇವಲ ಮನರಂಜನೆ ಮಾಧ್ಯಮವಾಗಿರದೆ. ಕರ್ನಾಟಕದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಪ್ರತಿಬಿಂಬವಾಗಿವೆ. ಈ ಪರಂಪರೆಯಲ್ಲಿ ಸಣ್ಣಕಥೆಗಳು, ಕಾದಂಬರಿಗಳು ಜಾನಪದ ಕಲೆಗಳು ವಿಶೇಷ ಸ್ಥಾನವನ್ನು ಹೊಂದಿವೆ. ಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿಯಿಂದಾಗಿ 21 ನೇ ಶತಮಾನವು ಹೊಸ ಸಂಶ್ಲೇಷಿತ ಕಲಾ ಪ್ರಕಾರಗಳ ಸೃಷ್ಟಿ ಮತ್ತು ಅಭಿವೃದ್ಧಿಯ ಸಮಯವಾಯಿತು. ಶತಮಾನಗಳಿಂದ ಸಾಹಿತ್ಯವು ಕಲಾತ್ಮಕ ಅಭಿವ್ಯಕ್ತಿಯ ಒಂದು ಮಾರ್ಗವಾಗಿದೆ. ಬರಹಗಾರರು ದೇವರು ಮತ್ತು ದೇವತೆಗಳು, ನಾಯಕರು ಮತ್ತು ಅವರ ನಿರ್ಭೀತ ವಿಜಯಗಳು, ಹಾಸ್ಯ ಘಟನೆಗಳು, ಐತಿಹಾಸಿಕ ಮಹಾಕಾವ್ಯಗಳು, ಪ್ರಣಯ ದುರಂತಗಳು ಇತ್ಯಾದಿಗಳ ಬಗ್ಗೆ ಕಥೆಗಳನ್ನು ಹೇಳಿದ್ದಾರೆ. ಮುಂದೆ ಅದೇ ಕತೆಗಳು ಸಿನಿಮಾಗಳಾಗಿ ಮಾರ್ಪಟ್ಟವು.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಶ್ರೀ. ಶಂಭನಗೌಡ ನೀರಲಗಿ, ಕನ್ನಡ ಸಹಾಯಕ ಪ್ರಾಧ್ಯಾಪಕರು ಕೆ.ಎಲ್.ಇ.ಸಂಸ್ಥೆಯ ಗುದ್ಲೇಪ್ಪ ಹಳ್ಳಿಕೇರಿ ಕಲಾ, ವಿಜ್ಞಾನ, ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಹಾವೇರಿ–581110

How to cite this article:
ಶ್ರೀ. ಶಂಭನಗೌಡ ನೀರಲಗಿ.*2026).*ಕನ್ನಡ ಚಲನಚಿತ್ರಗಳ ಮೇಲೆ ಕನ್ನಡ ಸಾಹಿತ್ಯದ ಪ್ರಭಾವ. *Journal of Research and Development, 18(4(II)), 81–85. https://doi.org/10.5281/zenodo.19396246*

Quick Response Code:
Website: https://jrdrvb.org/
DOI: 10.5281/zenodo.19396246
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ವಿ ಸಿನೆಮಾವು ಕೆಲವು ವರ್ಷಗಳಿಂದ ಅದೇ ಕೆಲಸವನ್ನು ಮಾಡುತ್ತಿದೆ.ಸಾಹಿತ್ಯದಲ್ಲಿ ಇಲ್ಲದ ಸಿನೆಮಾದ ಒಂದು ಪ್ರಮುಖ ಬಲವಾದ ಅಂಶವೆಂದರೆ ಇಡೀ ಚಿತ್ರವನ್ನು ಪರದೆಯ ಮೇಲೆ ದೃಶ್ಯೀಕರಿಸುವ ಪ್ರಯೋಜನವಾಗಿದೆ, ಇದು ಪ್ರೇಕ್ಷಕರು ಚಳುವಳಿಯೊಂದಿಗೆ ಬಹಳ ನಿಕಟವಾಗಿ ಸಂಪರ್ಕ ಸಾಧಿಸಲು ಸಹಾಯ ಮಾಡುತ್ತದೆ.1900 ರ ದಶಕದ ಆರಂಭದಲ್ಲಿ ಸಿನೆಮಾದ ಸಂಭವವು ಚಲನಚಿತ್ರ ಮತ್ತು ಸಾಹಿತ್ಯದ ನಡುವಿನ ಸಂಪರ್ಕಕ್ಕೆ ತ್ವರಿತವಾಗಿ ಕಾರಣವಾಯಿತು, ಎರಡೂ ಮಾಧ್ಯಮಗಳ ಒಮ್ಮುಖವು ಆರಂಭಿಕ ವರ್ಷಗಳಲ್ಲಿ ವಿಶೇಷವಾಗಿ ಮಹತ್ವದ್ದಾಗಿತ್ತು.

ಎರಡೂ ಕಲೆಗಳು ಕೆಲವು ಸಂಪರ್ಕಗಳು ಮತ್ತು ವ್ಯತ್ಯಾಸಗಳನ್ನು ಹೊಂದಿದ್ದರೂ, ಎರಡೂ ತನ್ನ ಓದುಗರನ್ನು/ಪ್ರೇಕ್ಷಕರನ್ನು ಬೇರೆ ಬೇರೆ ಜಗತ್ತಿಗೆ ಕರೆದೊಯ್ಯುವ ಹೋಲಿಕೆಯನ್ನು ಹೊಂದಿವೆ. ಸಾಹಿತ್ಯವು ತನ್ನ ಓದುಗರನ್ನು ವಾಸ್ತವ ಪ್ರಪಂಚದಿಂದ ದೂರವಿರುವ ಕಲ್ಪನೆಯ ಪ್ರಯಾಣಕ್ಕೆ ಕರೆದೊಯ್ಯುತ್ತದೆ, ಆದರೆ ಸಿನಿಮಾ ಪ್ರೇಕ್ಷಕರ ಮುಂದೆ ಅಂತಹ ಕಾಲ್ಪನಿಕ ಜಗತ್ತನ್ನು ತೋರಿಸುತ್ತದೆ ಮತ್ತು ಅವರು ತಮ್ಮ ಮನಸ್ಸಿನ ಮೇಲೆ ತಮ್ಮ ಕಲ್ಪನೆಗಳನ್ನು ಪರಿಶೀಲಿಸಲು ಹೆಚ್ಚಿನ ಒತ್ತಡವನ್ನು ಹಾಕಬೇಕಾಗಿಲ್ಲ. ಹೀಗಾಗಿ, ಸಾಹಿತ್ಯವು ಬರವಣಿಗೆಯ ಮೂಲಕ ಅಭಿವೃದ್ಧಿಪಡಿಸುವ ಕಲೆ ಎಂದು ನಾವು ಹೇಳಬಹುದು, ಆದರೆ ಸಿನಿಮಾ ಆ ಬರಹಗಳನ್ನು ಧ್ವನಿ, ಸಂಗೀತ, ದೃಶ್ಯಗಳು ಮತ್ತು ನಟರ ಮೂಲಕ ಜೀವಂತಗೊಳಿಸುತ್ತದೆ. ಸಾಹಿತ್ಯವು ಚಲನಚಿತ್ರದಲ್ಲಿ ಅಭಿವೃದ್ಧಿಪಡಿಸಲು ಬಳಸುವ ಎಲ್ಲಾ ಅರ್ಥಗಳನ್ನು ತನ್ನಲ್ಲಿಯೇ ಮರೆಮಾಡಿದೆ.ಸಿನಿಮಾ ಒಂದು ಸಾಹಿತ್ಯ ರೂಪ ಏಕೆಂದರೆ ಅದು ಪದಗಳು, ಚಿತ್ರಗಳು ಮತ್ತು ಶಬ್ದಗಳನ್ನು ಸಂಯೋಜಿಸುತ್ತದೆ ಮತ್ತು ಸಾಹಿತ್ಯದ ಭಾಷೆಯನ್ನು ಸಹ ಹಂಚಿಕೊಳ್ಳುತ್ತದೆ.ಎರಡೂ ಪರಸ್ಪರ ಅವಲಂಬಿತವಾಗಿದ್ದರೂ, ಒಂದು ಸಾಹಿತ್ಯ ಕೃತಿಯನ್ನು ಆಧರಿಸಿದ ಚಲನಚಿತ್ರವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಎರಡನ್ನೂ ಅಧ್ಯಯನ ಮಾಡಬೇಕಾಗುತ್ತದೆ.

ಚಲನಚಿತ್ರವು ತನ್ನ ದೃಶ್ಯ ಅಂಶವನ್ನು ಚಿತ್ರಕಲೆ, ನೃತ್ಯದೊಂದಿಗೆ ಚಲನೆಯನ್ನು ತೋರಿಸುವ ಸಾಮರ್ಥ್ಯ, ಸಂಗೀತದೊಂದಿಗೆ ಪ್ರೇಕ್ಷಕರನ್ನು ಭಾವನಾತ್ಮಕವಾಗಿ ಚಲಿಸುವ ಸಾಮರ್ಥ್ಯ, ರಂಗಭೂಮಿಯೊಂದಿಗೆ ಪ್ರಸ್ತುತಿ ಮತ್ತು ಪ್ರದರ್ಶನ ಮತ್ತು ಛಾಯಾಗ್ರಹಣದೊಂದಿಗೆ ತಾಂತ್ರಿಕ ಸೃಜನಶೀಲತೆಯ ಮೇಲಿನ ಅವಲಂಬನೆಯೊಂದಿಗೆ ಹಂಚಿಕೊಳ್ಳುತ್ತದೆ. ಹೀಗಾಗಿ ಸಿನಿಮಾವನ್ನು ಕಥೆಗಳನ್ನು ನಿರೂಪಿಸುವ ಸಾಮರ್ಥ್ಯದ ಮುಂದಿನ ಹೆಜ್ಜೆಯಾಗಿ ಕಾಣಬಹುದು.ಚಲನಚಿತ್ರ ಮತ್ತು ಸಾಹಿತ್ಯವು ಅಪವಿತ್ರ ಕಲೆಗಳಾಗಿದ್ದು, ಅವುಗಳನ್ನು ಸ್ಪಷ್ಟಪಡಿಸಲು ಸಮಯ ಬೇಕಾಗುತ್ತದೆ. ಚಲನಚಿತ್ರವು ನಾಟಕೀಯ ಕಥೆ ಹೇಳುವ ಒಂದು ರೂಪದಂತೆ ಕಾಣುತ್ತದೆ ಆದರೆ ಇದು ವಾಸ್ತವವಾಗಿ ಕಾದಂಬರಿಯಂತೆ ನಿರೂಪಣಾ ಕಥೆ ಹೇಳುವ ಒಂದು ರೂಪವಾಗಿದೆ

"ಸಿನಿಮಾ ಮುದ್ರಣಕ್ಕಿಂತ ಹೆಚ್ಚು ಮಹತ್ವಪೂರ್ಣ ಆವಿಷ್ಕಾರವಾಗಿದೆ. ಸಿನೆಮಾ ತನ್ನ ಕಥೆಯನ್ನು ಅನಕ್ಷರಸ್ಥರಿಗೆ ಮತ್ತು ಸಾಕ್ಷರರಿಗೆ ಹೇಳುತ್ತದೆ; ಮತ್ತು ಅದು ತನ್ನ ಬಲಿಪಶುವನ್ನು ಎಚ್ಚರವಾಗಿರಿಸುವುದು ಮಾತ್ರವಲ್ಲದೆ, ಹಾವಿನ ಕಣ್ಣಿನಿಂದ ಆಕರ್ಷಿತನಾಗುವಂತೆ ಮಾಡುತ್ತದೆ". ಸಾಹಿತ್ಯವು ಪ್ರಪಂಚದಾದ್ಯಂತ ಸಿನೆಮಾಕ್ಕೆ ಯಾವಾಗಲೂ ಒಂದು ದೊಡ್ಡ ಸ್ಫೂರ್ತಿಯಾಗಿದೆ.ಭಾರತದಲ್ಲಿ ಹಲವಾರು ಬಾರಿ, ಮಹಾಭಾರತ ಮತ್ತು ರಾಮಾಯಣದಂತಹ ಮಹಾಕಾವ್ಯಗಳನ್ನು ಪರದೆಯ ಮೇಲೆ ರಚಿಸಿ ಮರುಸೃಷ್ಟಿಸಲಾಗಿದೆ.ವಿವಿಧ ಭಾಷೆಗಳ ಪ್ರಸಿದ್ಧ ಬರಹಗಾರರ ಕಾದಂಬರಿಗಳನ್ನು ಚಲನಚಿತ್ರಗಳಲ್ಲಿ ಆಗಾಗ ಬಳಸಲಾಗುತ್ತದೆ.ಸಿನೆಮಾದ ಮೊದಲ ಹೆಜ್ಜೆ ಸಾಹಿತ್ಯ ಎಂದು ಸುಲಭವಾಗಿ ಹೇಳಬಹುದು ಏಕೆಂದರೆ ಒಂದು ಚಲನಚಿತ್ರ ನಿರ್ಮಾಣ ಪ್ರಕ್ರಿಯೆಯಲ್ಲಿದ್ದ ನಂತರ, ಅದನ್ನು ಅಭಿವೃದ್ಧಿಪಡಿಸಲು ನಿರ್ಮಿಸಲಾದ ಚಿತ್ರಕಥೆ, ಸಂಭಾಷಣೆ ಮತ್ತು ಚಿತ್ರಕಥೆ.ಆದ್ದರಿಂದ, ಸಾಹಿತ್ಯವು ಜನರನ್ನು ಸಿನೆಮಾಕ್ಕೆ ಹೋಗಲು ಪ್ರೇರೇಪಿಸಿತು.

ಕನ್ನಡ ಭಾಷೆಯು ಶ್ರೀಮಂತವಾಗುವಲ್ಲಿ ಕನ್ನಡ ಚಿತ್ರರಂಗದ್ದು ಸಿಂಹಪಾಲು. ಕಾಲಕಾಲಕ್ಕೆ ಬದಲಾಗುತ್ತಿರುವ ತಂತ್ರಜ್ಞಾನಗಳು, ಮನಸ್ಥಿತಿಗಳು, ಪ್ರೇಕ್ಷಕ ವರ್ಗಗಳ ಅಭಿರುಚಿ ಇವೆಲ್ಲದರ ಜೊತೆಜೊತೆಗೆ ತನ್ನನ್ನು ತಾನು ತೊಡಗಿಸಿಕೊಂಡು ಸದಭಿರುಚಿಯ ಚಿತ್ರಗಳನ್ನು ಬಡಿಸುತ್ತಾ ಕನ್ನಡ ಚಿತ್ರಗಳ ಮಾರುಕಟ್ಟೆ ಹೆಚ್ಚಿಸುತ್ತಾ ಬಂದಿರುವುದು ಕನ್ನಡ ಚಿತ್ರರಂಗದ ಹೆಗ್ಗಳಿಕೆ. ಭಾಷಾ ಬೆಳವಣಿಗೆಗೆ, ಉಳಿಕೆಗೆ ತಕ್ಕಂತಹ ಸಾಮಾಜಿಕ,ರಾಜಕೀಯ ನೆಲಗಟ್ಟಿನ ಚಿತ್ರಗಳ ಹೊರತಾಗಿಯೂ ಭಾಷೆಯ ಮೇಲೆ ಅಭಿಮಾನ ಉಕ್ಕಿಸುವುಂಥಹ ಚಿತ್ರಗಳನ್ನು ಕನ್ನಡದ ಮಡಿಲಿಗೆ ಚಿತ್ರರಂಗ ಹಾಕುತ್ತಲೇ ಬಂದಿದೆ. ಅಂದಿನ "ಮಯೂರ"ದಿಂದ ಹಿಡಿದು ಇಂದಿನ "ಸಂಗೊಳ್ಳಿ ರಾಯಣ್ಣ" ನವರೆಗೂ ಆ ಪರಂಪರೆ ನಿರಂತರವಾಗಿ ಬೆಳೆದು ಬಂದಿದೆ.ಇಂತಹ ಚಿತ್ರಗಳು ಕನ್ನಡಿಗನೆದೆಯಲ್ಲಿ ಹುಟ್ಟಿಸುವ ನಮ್ಮತನದ ಬಿರುಸಿನ ಸೊಗಸು ಅಪೂರ್ವ.ಕನ್ನಡ ಪ್ರೇಕ್ಷಕನಾದರೂ ಇಂತಹ ಚಿತ್ರಗಳನ್ನು ಗೆಲ್ಲಿಸುತ್ತಲೇ ಬಂದಿದ್ದಾನೆ. ಕನ್ನಡ ಕರ್ನಾಟಕಗಳ ಕುರಿತ ಚಿತ್ರಗಳು ತೆರೆಕಾಣುತ್ತಲೇ ಇದೆ.ಕನ್ನಡಿಗನೆದೆಯಲ್ಲಿ ಕನ್ನಡಾಂಬೆಯ ಧ್ವಜವನ್ನು ಹಾರಿಸುತ್ತಲೇ ಇದೆ ಕನ್ನಡ ಚಿತ್ರರಂಗ.ಚಿತ್ರಗಳಷ್ಟೇ ಅಲ್ಲದೇ ಹಾಡುಗಳು ಕೂಡಾ 'ಕನ್ನಡ'ದ ಕೆಲಸವನ್ನು ಮಾಡುತ್ತಲೇ ಬಂದಿದೆ. ಅಂದಿನ, "ಅ ಆ ಇ ಈ ಕನ್ನಡದ ಅಕ್ಷರಮಾಲೆ ಅಮ್ಮ ಎಂಬುದೆ ಕಂದನ ಕರುಳಿನ ಕರೆಯೋಲೆ" ಯಿಂದ ಹಿಡಿದು ಇತ್ತೀಚಿನ "ಕರುನಾಡೇ ಕೈ ಚಾಚಿದೆ ನೋಡೆ ಹಸಿರುಗಳೇ ಆ ತೋರಣಗಳೇ" ವರೆಗೂ ಕನ್ನಡ ಚಲನಚಿತ್ರಗೀತೆಗಳಲ್ಲಿ ಕನ್ನಡದ ಕುರಿತಾದ ಹಾಡುಗಳದ್ದು ಮೇಲುಗೈ. ಹಾಡುಗಳ ಸಂಗೀತವೂ ಕೇಳಿ ಮರೆಯುವಂತದ್ದಲ್ಲ. ಅಂದಿನ ಹಾಡುಗಳು ಇಂದು ಜನಮಾನಸದಿಂದ ಮರೆಯಾಗಿಲ್ಲ. ಇಂತಹ ಸಾಧನೆಗಳ ಹಿಂದೆ ಕನ್ನಡದ ಅನೇಕ ನಿರ್ದೇಶಕರುಗಳ, ಸಾಹಿತಿಗಳ, ಸಂಗೀತಗಾರರ, ಹಾಡುಗಾರರ ಅನನ್ಯ ಪರಿಶ್ರಮ, ಪ್ರೀತಿಗಳಿವೆ.ಎಪ್ಪತ್ತು–ಎಂಭತ್ತರ ದಶಕ ಕನ್ನಡ ಚಿತ್ರರಂಗದ ಸುಭೀಕ್ಷಕಾಲ.ಪುಟ್ಟಣ್ಣ ಕಣಗಾಲ್ ಎಂಬ ಮಾಂತ್ರಿಕನ ಕನ್ನಡ ಚಿತ್ರಗಳನ್ನು ಕಂಡು ಇಡೀಯ ಭಾರತ ಚಿತ್ರರಂಗ ಬೆಕ್ಕಸಬೆರಗಾಗಿತ್ತು.ಸಾಮಾಜಿಕ ನೆಲೆಗಟ್ಟಿನಲ್ಲಿ ಮೂಡಿಬಂದ ಅವರ ಚಿತ್ರಗಳದ್ದೇ ಒಂದು ಚರಿತ್ರೆ.ಡಾ॥ರಾಜ್ ಅವರು ಕನ್ನಡ ಚಿತ್ರರಂಗದ ಹೆಮ್ಮೆ. ಹಂಸಲೇಖ ಅವರ ಸಾಹಿತ್ಯ–ಸಂಗೀತಗಳಿರಬಹುದು, ಉಪೇಂದ್ರರ "ಓಂ"ಕಾರವಿರಬಹುದು, ಕನ್ನಡ ಚಿತ್ರಗಳನ್ನು ಶ್ರೀಮಂತವಾಗಿ ಪ್ರೇಕ್ಷಕನಿಗೆ ತೋರಿಸಿದ ನಿರ್ದೇಶಕ ರವಿಚಂದ್ರನ್ ಇರಬಹುದು, ಇತ್ತೀಚೆಗೆ ಕನ್ನಡ ಚಿತ್ರರಂಗವನ್ನು ರಾಷ್ಟ್ರೀಯ ಮಟ್ಟದ ಸದ್ದಾಗಿಸಿದ ಲೂಸಿಯಾ ರಂಗಿತರಂಗ ಮುಂತಾದ ಚಿತ್ರಗಳ ಚಿತ್ರತಂಡಗಳಿರಬಹುದು ಹೀಗೆ ಅನೇಕರಿದ್ದಾರೆ ಇಲ್ಲಿ ಕನ್ನಡದ ಕುರಿತು ಜಗದ ಗಮನ ಸೆಳೆಸಿದವರು. ಕನ್ನಡವನ್ನು ತಮ್ಮ ಕ್ಷೇತ್ರಗಳಲ್ಲಿ ಪ್ರತಿನಿಧಿಸಿ, ಕನ್ನಡತನವನ್ನು ಎತ್ತಿ ಹಿಡಿದವರು.ಕನ್ನಡದ ಕುರಿತು ಚಿತ್ರರಂಗ ಪ್ರೀತಿ ಸಿನೆಮಾ ಮತ್ತು ಸಿನೆಮಾದ ಹಾಡುಗಳಿಗಷ್ಟೇ ಸೀಮಿತವಾಗಿಲ್ಲ. ಕನ್ನಡದ ತಾರೆಗಳು ಕನ್ನಡಕ್ಕಾಗಿ ಕರ್ನಾಟಕಕ್ಕಾಗಿ ಚಿತ್ರಗಳ ಹೊರತಾಗಿಯೂ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ನಿಲ್ಲುತ್ತಾರೆ, ಹೋರಾಡುತ್ತಾರೆ.ಆ ಮೂಲಕ "ಕನ್ನಡ"ವಷ್ಟೇ ನಮ್ಮ ಆದ್ಯತೆ ಅನ್ನುವುದನ್ನು ಮಾತು ಮತ್ತು ಕೃತಿ ಎರಡರಲ್ಲಿಯೂ ಸಾಬೀತು ಪಡಿಸುತ್ತಾರೆ.

ಮೊದಲ ಮೂಕಿ ಚಿತ್ರದ ಮೂರು ವರ್ಷಗಳ ನಂತರ ಕನ್ನಡದ ಮೊದಲ ಧ್ವನಿಯ ಚಿತ್ರವು ಸತಿ ಸುಲೋಚನಾ ಎಂಬ ಹೆಸರಿನಿಂದ ಬಂದಿತು.ಈ ಚಿತ್ರವನ್ನು ವೈ ವಿ.ಸುಬ್ಬರಾವ್ ನಿರ್ದೇಶಿಸಿದರು ಸುಬ್ಬಯ್ಯ ನಾಯ್ಡು ತ್ರಿಪುರಾಂಬ ಮತ್ತು ಅನೇಕ ಜನರು ಈ ಚಿತ್ರದಲ್ಲಿ ನಟಿಸಿದ್ದಾರೆ.1940ರ ದಶಕದ ಅವಧಿಯಲ್ಲಿ 21 ಕನ್ನಡ ಚಲನಚಿತ್ರಗಳು ತೆರೆಕಂಡವು ಮತ್ತು ಕನ್ನಡ ಪ್ರೇಕ್ಷಕರು ಈ ಚಲನಚಿತ್ರಗಳನ್ನು ಮನಪೂರ್ವಕವಾಗಿ ಒಪ್ಪಿಕೊಂಡಿದ್ದಾರೆ.ಕನ್ನಡ ಚಲನಚಿತ್ರ ಎಂದಾಗ ನೆನಪಾಗುವ ಹೆಸರು ವರನಟ ಡಾ.ರಾಜಕುಮಾರ್ ಇವರು 1950ರಲ್ಲಿ ಬಿಡುಗಡೆಯಾದ ಶ್ರೀನಿವಾಸ ಕಲ್ಯಾಣದ ಮೂಲಕ ಬೆಳ್ಳಿತೆರೆಯ ಪರದೆಯ ಮೇಲೆ ಮೊದಲ ಬಾರಿಗೆ ಕಾಣಿಸಿಕೊಂಡರು.ಅಲ್ಲಿ ಅವರು ಋಷಿಯಾ ಸಣ್ಣ ಪಾತ್ರವನ್ನು ಅಭಿನಯಿಸಿದರು ಅಷ್ಟೇ, 1954 ರಲ್ಲಿ ಡಾ.ರಾಜಕುಮಾರ್ ಎಚ್. ಎಲ್. ಎಸ್ .ಸಿಂಹ ಅವರು ನಿರ್ದೇಶಿಸಿದ ಬೇಡರ ಕಣ್ಣಪ್ಪ ಎಂಬ ಸಿನಿಮಾದಲ್ಲಿ ನಾಯಕರಾಗಿ ಕಾಣಿಸಿಕೊಂಡರು. ಈ ಸಿನಿಮಾ ರಾಷ್ಟ್ರ ಪ್ರಶಸ್ತಿಯನ್ನು ಪಡೆದ ಮೊದಲ ಚಲನಚಿತ್ರವಾಗಿದೆ.1964 ರವರೆಗೆ ಕನ್ನಡ ಸಿನಿಪ್ರಿಯರು ಸಿನಿಮಾ ನೋಡುತ್ತಿದ್ದರು.ಅಮರಶಿಲ್ಪಿ ಜಕ್ಕಣಚಾರಿ ಎಂಬ ಕನ್ನಡ ಚಿತ್ರರಂಗದ ಮೊದಲ ಬಣ್ಣದ ಚಿತ್ರವಾಗಿಸುವ ಮೂಲಕ ಬಿ.ಎಸ್ ರಂಗರವರು ಮೊದಲ ಮಾದರಿಯನ್ನು ತಂದರು.ಈ ಸಿನಿಮಾದಲ್ಲಿ ಕಲ್ಯಾಣಕುಮಾರ್ ಮತ್ತು ಬಿ, ಸರೋಜಾದೇವಿ ಅಭಿನಯಿಸಿದ್ದರು.ಈ ರೀತಿಯಾಗಿ ಕನ್ನಡ ಸಾಹಿತ್ಯದ ಅನೇಕ ಕಾದಂಬರಿ ನಾಟಕಗಳು ಕನ್ನಡ ಚಲನಚಿತ್ರಗಳು ತೆರೆಗೆ ಬರಲು ಪ್ರಾರಂಭಿಸಿದವು ಮತ್ತು ಆ ಚಲನಚಿತ್ರಗಳು ಅನೇಕ ಪ್ರಶಸ್ತಿಯನ್ನು ಪಡೆದುಕೊಂಡವು.

ಬ್ರಿಟಿಷ್ ವಸಾಹತು ಶಾಹಿಯ ಆಡಳಿತ ಇದ್ದಾಗ ಕನ್ನಡ ಚಿತ್ರರಂಗವು ಯಾವುದೇ ರಾಜರ ಕತೆಯನ್ನು ಚಲನಚಿತ್ರ ವಾಗಿಸಲಿಲ್ಲ. ಪುರಾಣಕತೆಗಳ ರಾಜರು ಬಂದರೂ ಅವರು ಕಥಾನಾಯಕರಲ್ಲ. ಬಹುಶಃ ಬ್ರಿಟಿಷ್ ವಸಾಹತುಶಾಹಿಗೆ ಕನ್ನಡ ಚಿತ್ರರಂಗವು ಪ್ರತಿಕ್ರಿಯಿಸಿದ ರೀತಿಯಿದು.ರಾಜರನ್ನು ನಾಯಕರನ್ನಾಗಿ ಮಾಡಿ ಹೊಗಳದೆ, ಸಮಕಾಲೀನ ರಾಜಕೀಯ ಸಂಗತಿಗಳುಳ್ಳ ಯಾವ ವಸ್ತುವನ್ನೂ ಒಳಗೊಳ್ಳದೆ ಬಹುಪಾಲು ಭಕ್ತಿಪ್ರಧಾನ ಚಿತ್ರಗಳನ್ನೇ ಮಾಡುವ ಮೂಲಕ ಕನ್ನಡ ಚಿತ್ರರಂಗವು ಬ್ರಿಟಿಷ್ ವಸಾಹತುಶಾಹಿಗೆ ಮೌನ ಪ್ರತಿಕ್ರಿಯೆ ನೀಡಿದ ಅಥವಾ ಸಂದಿಗ್ಧ ಸನ್ನಿವೇಶವನ್ನು ಜಾಣತನದಿಂದ ನಿರ್ವಹಿಸಿದೆ.ಭಕ್ತಿ ಪರಂಪರೆಯ ರಾಜಭಕ್ತಿಗೆ ಪರ್ಯಾಯವಾಗಿ ದೈವ ಭಕ್ತಿಯನ್ನು ಸ್ವೀಕರಿಸಿದ್ದನ್ನು ಗಮನಿಸಿದಾಗ ಭಕ್ತಿಪ್ರಧಾನ ಹಾಗೂ ಸ್ತ್ರೀಪ್ರಧಾನ ವಸ್ತುಗಳನ್ನು ನಿರ್ವಹಿಸಿದ ಕನ್ನಡ ಚಿತ್ರಗಳು ರಾಜಸ್ತುತಿ ಮತ್ತು ಪುರುಷ ಸ್ತುತಿಯನ್ನು ಗೌಣಗೊಳಿಸಿವೆಯೆಂದು ಹೇಳಬಹುದು.ಸ್ವಾತಂತ್ರ್ಯೋತ್ತರ ನಾಡಿನಲ್ಲೂ ಸುಮಾರು ಒಂದು ದಶಕದ ಕಾಲ ಇದೇ ವಸ್ತುಪರಂಪರೆಯು ಕನ್ನಡ ಚಿತ್ರಗಳಲ್ಲಿ ಪ್ರಧಾನವಾಗಿತ್ತು.

ಪ್ರಕಟಿತ ಕಥೆಯನ್ನು ಆಧರಿಸಿದ ಪ್ರಪಂಚದಲ್ಲಿ ಮೊದಲ ಚಿತ್ರ ನಿರ್ಮಾಣಗೊಂಡಿದ್ದು ದಿನ ಗ್ರೇಟ್ ಟ್ರೈನ್ ರಾಬರಿ ಇ3ರಲ್ಲಿ ಆ ಚಿತ್ರ ಯಶಸ್ಸುಗಳಿಸಿತು.ಹಾಗೆಯೇ ಚಿತ್ರವೊಂದರ ಯಶಸ್ಸಿಗೆ, ಚಿತ್ರಕಥೆಯು ಅನಿವಾರ್ಯತೆಯನ್ನು ಚಲನಚಿತ್ರ ಹುಟ್ಟಿದ ದಿನದಿಂದ ಇಲ್ಲಿಯವರೆಗೆ ಜಗತ್ತಿನಲ್ಲಿರುವ ನೂರಾರು ಭಾಷೆಗಳಲ್ಲಿ ಸಾವಿರಾರು ಸಾಹಿತ್ಯ ಕೃತಿಗಳು ನಾಟಕ, ಕಾದಂಬರಿಗಳು, ಜನಪದ ಕಥೆಗಳು ಸಿನಿಮಾವಾಗಿ ರೂಪವನ್ನು ಪಡೆದಿವೆ ಮತ್ತು ಯಶಸ್ವಿ ವಾಹಕವಾಗಿಯೂ ಕೆಲಸ ಮಾಡುತ್ತಿವೆ. ಈಗ ನಾವು ಕನ್ನಡದ ಚಲನಚಿತ್ರಗಳನ್ನು ಉದಾಹರಣೆಯಾಗಿ ತೆಗೆದುಕೊಂಡು ಮಾತನಾಡುವುದಾದರೆ 1921 ರಲ್ಲಿ ನಿರೂಪಮ ಎಂಬ ಹೆಸರಿನ ತೆರೆ ಕಂಡಿತು ಇದು ಕನ್ನಡದ ಪೂರ್ಣ ಪ್ರಮಾಣದ ಸಾಹಿತ್ಯ ಕೃತಿಯಾಗಿ ಕೈಲಾಸಂ ರಚನೆ ಮಾಡಿದ ವಸಂತ ಸೇನಾ 1922 ರಲ್ಲಿ ಶಿವರಾಮ ಕಾರಂತರು ರಚಿಸಿದ ಭೂತರಾಜ 1929ರಲ್ಲಿ ತೆರೆಕಂಡವು ಸತಿ ಸುಲೋಚನ, ಸಂಸಾರ ನೌಕ, ಸತ್ಯ ಹರಿಶ್ಚಂದ್ರ ಚಂದ್ರಹಾಸ, ಸದಾರಮೆ. ಭಕ್ತಧ್ರುವ ಮುಂತಾದವು ನಾಟಕ ಪ್ರಕಾರಕ್ಕೆ ಬಂದರೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಬರೆದಿರುವ ಕಾಕನಕೋಟೆ.ಎ .ಎನ್. ಮೂರ್ತಿರಾಯರು ಬರೆದಿರುವ ಆಷಾಢಭೂತಿ ಮತ್ತು ಕಳಸಾಪುರದ ಹುಡುಗರು, ಕ್ಕು, ಋಷ್ಯಶೃಂಗ ನಾಗಮಂಡಲ ಮುಂತಾದವು ತೆರೆಕಂಡವು 1962ರಲ್ಲಿ ಕೃಷ್ಣಮೂರ್ತಿ ಪೌರಾಣಿಕರ ಧರ್ಮದೇವತೆಯನ್ನು ಆಧಾರವಾಗಿಟ್ಟುಕೊಂಡು ಕರುಣೆಯ ಕುಟುಂಬದ ಕಣ್ಣು ತೆರೆಕಂಡಿತು. ಇದೇ ಲೇಖಕರು ಕುಲವಧು ಹಾಗೂ ತ.ರಾ.ಸು ರವರ ಚಂದ್ರವಳ್ಳಿಯ ತೋಟ ಈ ಪರಂಪರೆಯನ್ನು ಮುಂದುವರೆಸಿಕೊಂಡು ಬಂದವು 968 ರಲ್ಲಿ ಅ.ನ.ಕೃ ಕಾದಂಬರಿ ಸಂಧ್ಯಾ ರಾಗ ತೆರೆಕಂಡಿತು. ಈ ಸಂಧ್ಯಾರಾಗ ಶರಣ ಚಿತ್ರದಲ್ಲಿ ಸಂಗೀತಗಾರನ ಬದುಕಿನ ತಲ್ಲಣಗಳನ್ನು ಎಳೆ ಎಳೆಯಾಗಿ ಮೆಲೋ ಡ್ರಾಮವನ್ನು ಆಧರಿಸಿ ಒಂದು ಕಥಾ ಸ್ವರೂಪದ ಹುಟ್ಟಿಗೆ ಮೂಲ ಪ್ರೇರಣೆಯಾಯಿತು.

ಮತ್ತೊಂದು ಅಂಶವನ್ನೂ ಗಮನಿಸಬೇಕು : ಕನ್ನಡದ ಮೊದಲ ಚಿತ್ರ ನಾಯಕ ಪ್ರಧಾನ ವಲ್ಲ; ನಾಯಕಿ ಪ್ರಧಾನ ನಿಜ; ಮೊದಲು ಚಿತ್ರೀಕರಣ ಆರಂಭಿಸಿದ ಚಿತ್ರ 'ಭಕ್ತಧ್ರುವ'. ಆದರೆ ಮೊದಲು ಬಿಡುಗಡೆಯಾಗಿದ್ದು (3–3–1934) 'ಸತಿಸುಲೋಚನ' 'ಭಕ್ತಧ್ರುವ' ಚಿತ್ರವು ನಾಯಕ ಪ್ರಧಾನವಾದರೂ ಸಿದ್ಧಮಾದರಿಯ ನಾಯಕ ಅದರಲಿಲ್ಲ. ಅದು ಭಕ್ತನ ಕತೆ.ಈ ಭಕ್ತಿ ಪರಂಪರೆಯು ಮುಂದೆ ಕನ್ನಡ ಚಿತ್ರರಂಗದ ಒಂದು ಮುಖ್ಯ ಭಾಗವಾಯಿತು.ಒಟ್ಟಿನಲ್ಲಿ ಸ್ತ್ರೀಪ್ರಧಾನತೆ ಮತ್ತು ಭಕ್ತಿ ಪ್ರಧಾನತೆಗಳೇ ಕನ್ನಡ ಚಿತ್ರರಂಗದ ಆರಂಭದ ದಶಕಗಳನ್ನು ವ್ಯಾಪಿಸಿದ್ದು ಒಂದು ವಿಶೇಷವೂ ಅಧ್ಯಯನಾರ್ಹವೂ ಆದ ಚಾರಿತ್ರಿಕ ಸತ್ಯವಾಗಿದೆ. ಈ ಮಾತಿಗೆ ಪೂರಕವಾಗಿ ಕೆಲವು ಚಿತ್ರಗಳನ್ನು ಉದಾಹರಿಸಬಹುದು : ಸತಿಸುಲೋಚನ (1934) ಭಕ್ತಧ್ರುವ (1934) ಸದಾರಮೆ (1935) ಚಿರಂಜೀವಿ (1936) ಪುರಂದರದಾಸ (1937) ಸುಭದ್ರ (1941) ವಸಂತಸೇನಾ (1941) ಭಕ್ತಪ್ರಹ್ಲಾದ (1942) ಸತ್ಯಹರಿಶ್ಚಂದ್ರ (1943) ಕೃಷ್ಣಸುಧಾಮ (1943) ಹೇಮರೆಡ್ಡಿ ಮಲ್ಲಮ್ಮ (1945) ಮಹಾತ್ಮ ಕಬೀರ್ (1947) ಭಕ್ತರಾಮದಾಸ (1948) ಭಕ್ತ ಕುಂಬಾರ (1949) ಭಾರತಿ (1949) ನಾಗಕನ್ನಿಕ (1949) ಸತಿ ತುಳಸಿ (1949) ಜಗನ್ಮೋಹಿನಿ (1951) ತಿಲೋತ್ತಮ್ಮೆ (1951) ಚಂಚಲಕುಮಾರಿ (1953) ಗುಣಸಾಗರಿ (1953) ಮಂಗಳಗೌರಿ (1953) ಸೌಭಾಗ್ಯ ಲಕ್ಷ್ಮಿ (1953) ಬೇಡರ ಕಣ್ಣಪ್ಪ (1954) ಕನ್ಯದಾನ (1954) ದೇವಕನ್ನಿಕಾ (1954) ಸಂತಸಕ್ಕು (1955) ಶಿವಶರಣೆ ನಂಬೆಕ್ಕ (1955) ಸೋದರಿ (1955) ಸ್ತ್ರೀರತ್ನ (1955) ಹರಿಭಕ್ತ (1956) ಮುತ್ತೈದೆ ಭಾಗ್ಯ (1956) ಭಕ್ತ ಮಾರ್ಕಂಡೇಯ (1956) ನಳದಮಯಂತಿ (1957) ಪ್ರೇಮದ ಪುತ್ರಿ (1957) ರಾಯರ ಸೊಸೆ (1957) ಆಶಾಸುಂದರಿ (1960) ಭಕ್ತ ಕನಕದಾಸ (1960) – ಇತ್ಯಾದಿ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಕನ್ನಡ ಚಲನಚಿತ್ರ ರಂಗವು ಇಲ್ಲಿಯವರೆಗೆ ಹಲವಾರು ಸಾಹಿತಿಗಳ ಸೇವೆಯನ್ನು ಸಂಪೂರ್ಣವಾಗಿ ಪಡೆದು ಮಿಂಚಿದೆ.ಸತಿ ಸತಿಸುಲೋಚನಾ 1934ರಲ್ಲಿ ತೆರೆಕಂಡಿತು.ಸಾಹಿತ್ಯ ಒದಗಿಸಿದವರು ಬೆಳ್ಳಾವೆ ನರಸಿಂಹ ಶಾಸ್ತ್ರಿ ಅವರು ತದನಂತರ ಕುವೆಂಪು ಬೇಂದ್ರೆ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶಿವರಾಮ ಕಾರಂತ, ಅ ನ ಕೃಷ್ಣಮೂರ್ತಿ. ಕೆ .ಎಸ್ .ನರಸಿಂಹಸ್ವಾಮಿ ಗೊರೂರು ರಾಮಸ್ವಾಮಿ ಅಯ್ಯಂಗಾರ್, ತರಾಸು, ತ್ರಿವೇಣಿ .ಎಂ.ಕೆ.ಇಂದಿರಾ. ಗಿರೀಶ್ ಕಾರ್ನಾಡ್ ಎಸ್ .ಎಲ್. ಬೈರಪ್ಪ ಅನಂತಮೂರ್ತಿ ಚಂದ್ರಶೇಖರ ಕಂಬಾರ ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಪಿ.ಲಂಕೇಶ್, ವಾಣಿ ಕನ್ನಡ ಚಲನಚಿತ್ರ ನಿರ್ದೇಶಕ ಎಂದಾಗ ನೆನಪಾಗುವುದು ಪುಟ್ಟಣ್ಣ ಕಣಗಾಲ್ ಇವರು ಕನ್ನಡ ಸಾಹಿತ್ಯದಲ್ಲಿ ರಚನೆಗೊಂಡ ಬಹುತೇಕ ಕಾದಂಬರಿಗಳನ್ನು ಆಧರಿಸಿ ಚಲನಚಿತ್ರ ನಿರ್ಮಾಣ ಮಾಡಿದ್ದಾರೆ. ಒಟ್ಟು ಆ ಚಲನಚಿತ್ರಗಳು ಮೊದಲನೆಯ ಚಲನಚಿತ್ರ ಬೆಳ್ಳಿ ಮೋಡ(1866).ಗೆಜ್ಜೆಪೂಜೆ (1990), ಶರಪಂಜರ (1997) ನಾಗರಹಾವು(1972) ಮಂಗಳ(1975) ಎಡಕಲು ಗುಡ್ಡದ ಮೇಲೆ(1973). ಉಪಾಸನೆ(1974) ಅಮೃತಗಳಿಗೆ (1994) ಶರಪಂಜರ ಪುಟ್ಟಣ್ಣ ಕಣಗಾಲ್ ನಿರ್ದೇಶಿಸಿದ್ದು ಆಸರಲ್ಲಿ ಭಾರತೀಯ ಕನ್ನಡ ಚಲನಚಿತ್ರ ವಾಯಿತು ತ್ರಿವೇಣಿಯವರ ಕಾದಂಬರಿಯೂ ಸಮೃದ್ಧವಾಗಿ ದೃಶ್ಯಾತ್ಮಕವಾಗಿತ್ತು. ಶರಪಂಜರ ಚಲನಚಿತ್ರದಲ್ಲಿ ಅಭಿನಯಿಸಿದವರು ಕಲ್ಪನಾ ಮತ್ತು ಗಂಗಾಧರ್ ಪುಟ್ಟಣ್ಣನವರು ಈ ಕಾದಂಬರಿ ನೈಜತೆಯನ್ನು ಮೆರದಿದ್ದಾರೆ.ತ್ರಿವೇಣಿಯವರ ಕಾದಂಬರಿಯ ಬಹುತೇಕ ಸಂಭಾಷಣೆಗಳನ್ನು ಉಳಿಸಿಕೊಂಡು ಅವರಿಗೆ ಉಪಕಾರ ಈ ಚಲನಚಿತ್ರ 1972 ರಲ್ಲಿ 20ನೇ ರಾಷ್ಟ್ರೀಯ ಚಲನಚಿತ್ರ ಎಂದು ಪ್ರಶಸ್ತಿಯನ್ನು ಗಳಿಸಿಕೊಂಡಿತು. 1970– 1 ರಲ್ಲಿ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ ಸಮಾರಂಭದಲ್ಲಿ ಮೊದಲ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿಯನ್ನು ಪಡೆದುಕೊಂಡಿದೆ ನಂತರ ಈ ಚಲನಚಿತ್ರವನ್ನು ತೆಲಗು ಭಾಷೆಯಲ್ಲಿ ಕೃಷ್ಣವೇಣಿ ಎಂದು ಮಾಡಲಾಯಿತು ಈ ಚಲನಚಿತ್ರದಲ್ಲಿ ವಾಣಿಶ್ರೀ ನಟಿಸಿದರು.

ಕನ್ನಡ ಸಾಹಿತಿ ಎಸ್.ಎಲ್. ಭೈರಪ್ಪನವರ ಕಾದಂಬರಿ ವಂಶವೃಕ್ಷ ಆಧರಿಸಿ ಗಿರೀಶ್ ಕಾರ್ನಾಡ್ ಹಾಗೂ ನಿರ್ದೇಶಿಸಿದ ಚಲನಚಿತ್ರ ಇದು ರಾಷ್ಟ್ರ ರಾಜ್ಯಮಟ್ಟದಲ್ಲಿ ಹಲವಾರು ಪ್ರಶಸ್ತಿಗಳನ್ನು ಗಳಿಸಿಕೊಂಡಿತು ಇದರ ಕರ್ತೃ ಅವರಿಗೆ ಅತ್ಯುತ್ತಮ ಕಥಾ ಲೇಖಕ ಪ್ರಶಸ್ತಿ ಅವರು ಅದನ್ನು ನಿರಾಕರಿಸಿದರು ನಾನು ಕಾದಂಬರಿ ರಚಿಸುವುದು ಸಿನಿಮಾ ಮಾಡಲು ಅಲ್ಲ ಎಂದರು ಹೇಳಿಕೆಗೆ ಪ್ರತಿಭಟನೆಗಿಂತ ಹೆಚ್ಚಾಗಿ ಪುರಸ್ಕಾರವೇ ಸಿಕ್ಕಿತು. ಕನ್ನಡ ಚಲನಚಿತ್ರರಂಗದಲ್ಲಿ ಕಾದಂಬರಿ ಆಧಾರಿತ ಚಿತ್ರಗಳ ಸಂಖ್ಯೆ ಹೆಚ್ಚಿತು ಮಧ್ಯಮ ವರ್ಗದ ಆದರ್ಶ ಪಾತ್ರಗಳಾದ ತಂದೆ ತಾಯಿ. ಪತಿ ಪತ್ನಿ ಮಕ್ಕಳು ತಾಯಿ ಹಾಗೂ ಇವರ ನಡುವಿನ ಬಾಂಧವ್ಯವನ್ನು ತೆರೆಯ ಮೇಲೆ ತರಲು ಪ್ರಯತ್ನಪಟ್ಟು ಯಶಸ್ವಿಯಾದರು ನಂತರ 90ರ ದಶಕದಲ್ಲಿ ಸಂಸ್ಕಾರ, ಕಾಡು ವಂಶವೃಕ್ಷ ತಬ್ಬಲಿಯು ನೀನಾದೆ ಮಗನೇ, ಹೇಮಾವತಿ ಮಾಡಿ ಮಾಡಿದವರು, ಚೋಮನ ದುಡಿ ಪಲ್ಲವಿ ಮೂರು ದಾರಿಗಳು, ಈ ಕಾದಂಬರಿಗಳನ್ನಾಧರಿಸಿದ ಚಲನಚಿತ್ರಗಳು ತೆರೆಕಂಡವು. ಮುಂದಿನ ದಿನಗಳಲ್ಲಿ ತಬರನ ಕಥೆ. ಭುಜಂಗಯ್ಯನ ದಶಾವತಾರ, ಮೈಸೂರು ಮಲ್ಲಿಗೆ ಸಂಗ್ಯಾ ಬಾಳ್ಯಾ ಗಂಗಾಮಾಯಿ ಮಲೆಗಳಲ್ಲಿ ಮಧುಮಗಳು ತಾಯಿ ಸಾಹೇಬ, ದ್ವೀಪ ಕಾನೂರು ಸುಬ್ಬಮ್ಮ ಹೆಗ್ಗಡತಿ ಮುಂತಾದ ಕೃತಿಗಳು ತೆರೆಕಂಡವು 70ರ ದಶಕದ ಮಧ್ಯಾಂತರದಲ್ಲೇ ಈ ಹೊಸ ಅಲೆಯ ಪ್ರವಾಹ ಕಡಿಮೆಯಾಗುತ್ತಾ ಬಂದಿತು ಗುಜರಾತಿ ಕಾದಂಬರಿಯೂ ಕೂಡ ಕನ್ನಡ ಚಲನಚಿತ್ರ ರಂಗದಲ್ಲಿ ಸಿನಿಮಾವಾಗಿ ಹೆಸರುಗಳಿಸಿತು. ಪನ್ನಾಲಾಲ್ ಪಟೇಲ್ ರವರು ರಚಿಸಿದ ಮಲೇಲಾ ಕಾದಂಬರಿಗೆ ಸಂಭಾಷಣೆಯನ್ನು ರಚಿಸಿದರೆ ಟಿ.ಎಸ್. ನಾಗಾಭರಣ ರವರು ನಿರ್ದೇಶನ ಮಾಡಿದ್ದಾರೆ ಈ ನಾಟಕ ಆಧಾರಿತ ಚಲನಚಿತ್ರವು

ನಾಡು–ನುಡಿಗೆ ಸಂಬಂಧಿಸಿದಂತೆ ಒಡೆದು ಕಾಣುವ ಕೊಡುಗೆಯೆಂದು ಕನ್ನಡಪರ ಗೀತರಚನೆ ಮತ್ತು ಬಳಕೆಯನ್ನು ಉದಾಹರಿಸಬಹುದು.'ಕಣ್ತೆರೆದು ನೋಡು' ಚಿತ್ರದ 'ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ' ಎಂಬ ಹಾಡಿನಿಂದ ಹಿಡಿದು 'ನಾಗರಹಾವು' ಚಿತ್ರದ 'ಕನ್ನಡ ನಾಡಿನ ವೀರ ರಮಣಿಯ' ಹಾಡನ್ನು ಹಾದು 'ಶಬ್ದವೇಧಿ' ಚಿತ್ರದ 'ಹುಟ್ಟಿದರೆ ಕನ್ನಡ ನಾಡಲ್ ಹುಟ್ಟಬೇಕು' ಎಂಬ ಗೀತೆಯವರೆಗೆ ಕನ್ನಡ ನಾಡು–ನುಡಿಯ ಪ್ರೀತಿ ಹರಿದುಬಂದಿದೆ; ಹರಿಯುತ್ತಲೇ ಇದೆ.ಡಾ. ರಾಜಕುಮಾರ್ ಅವರ ಬಾಯಲ್ಲಿ ಬಂದ ಕನ್ನಡ ಪರ ಹಾಡುಗಳನ್ನು ಕೇಳಿದ ಪ್ರೇಕ್ಷಕರು ಸಂಭ್ರಮಿಸಿದ್ದಾರೆ; ಪಿ.ಬಿ. ಶ್ರೀನಿವಾಸ್ ಹಾಡಿರಲಿ, ಡಾ. ರಾಜಕುಮಾರ್ ಹಾಡಿರಲಿ 'ನಾವಾಡುವ ನುಡಿಯು ಕನ್ನಡ ನುಡಿ . ಗಂಧದ ಗುಡಿ' ಎಂದರೆ ಸಾಕು ಸುಖಿಸಿದ್ದಾರೆ.ಡಾ. ರಾಜಕುಮಾರ್ ಅವರ ಬಾಯಲ್ಲಿ ಕನ್ನಡಪರ ಹಾಡುಗಳು ಬಂದ ಮೇಲೆ ವಿಷ್ಣುವರ್ಧನ್ ಅವರನ್ನು ಒಳಗೊಂಡಂತೆ ಹೆಚ್ಚು ಕಡಿಮೆ ಕನ್ನಡದ ಪ್ರಸಿದ್ಧ ನಾಯಕ ನಟರೆಲ್ಲ ಒಂದಲ್ಲ ಒಂದು ಕನ್ನಡಪರ ಗೀತೆಗೆ ತುಟಿಯಾಡಿಸಿ ಅಭಿನಯಿಸಿದ್ದಾರೆ.ಕೆಲವರು ತಾವೇ ಹಾಡಿದ್ದಾರೆ.ಈ ಮೂಲಕ ನಾಯಕ ನಟರು ತಮ್ಮ ಅಭಿಮಾನಿಗಳ ಕನ್ನಡ ಪ್ರೀತಿಗೆ ಪ್ರೇರಣೆ ನೀಡಿದ್ದಾರೆ.ಟಿ.ವಿ., ರೇಡಿಯೊ; ಧ್ವನಿಸುರಳಿ, ಸಿ.ಡಿ.ಗಳ ಮೂಲಕ ಈ ಹಾಡುಗಳನ್ನು ಮತ್ತೆ ಮತ್ತೆ ಕೇಳುವ ಕನ್ನಡಿಗರಲ್ಲಿ ಕನ್ನಡದ ನೆನಪನ್ನು ಜಾಗೃತಗೊಳಿಸಲು ಈ ಗೀತೆಗಳು ಸಹಕಾರಿಯಾಗಿವೆ. ಇಂತಹ ಗೀತರಚನೆ ಮಾಡಿದ ಚಿತ್ರ ಸಾಹಿತಿಗಳ ಮತ್ತು ಬಳಸಿಕೊಂಡ ನಿರ್ಮಾಪಕ - ನಿರ್ದೇಶಕರ ಅಭಿರುಚಿಯನ್ನು ಮೆಚ್ಚಲೇಬೇಕು.

ಹೀಗೆ ಸಾಹಿತ್ಯ ನಾಟಕ, ಕಾವ್ಯ, ಕಥೆ ಕಾದಂಬರಿ ಹಾಗೂ ಕವನಗಳನ್ನು ಬಳಸಿಕೊಂಡು ಕನ್ನಡ ಚಲನಚಿತ್ರಗಳು ಅವುಗಳ ಘನತೆಯ ಜೊತೆಗೆ ತಮ್ಮ ಮೌಲ್ಯವನ್ನು ಹೆಚ್ಚಿಸಿಕೊಂಡವು ಇಷ್ಟೆಲ್ಲಾ ಆದರೂ ಶೈಕ್ಷಣಿಕ ಹಾಗೂ ಬೌದ್ಧಿಕ ವಲಯಗಳಲ್ಲಿ ಜನಪ್ರೀಯ ಕಾದಂಬರಿಗಳ ಬಗ್ಗೆ ಹೇಗೊ ಹಾಗೇ ಸಿನಿಮಾಗಳ ಬಗ್ಗೆ ಹಿಂದಿನಿಂದ ಇಂದಿನ ವರೆಗೆ ಒಳ್ಳೆಯ ಅಭಿಪ್ರಾಯಗಳು ಮೂಡಿ ಬಂದಿವೆ ಮತ್ತು ಜನಮನ್ನಣೆಯನ್ನು ಗಳಿಸುತ್ತಾ ಬಂದಿವೆ.ಇತ್ತೀಚಿನ ಕೆಲ ವರ್ಷಗಳಲ್ಲಿ ಬಂದ ಕಳಪೆ ಚಿತ್ರಗಳನ್ನು ಹೊರತುಪಡಿಸಿದರೆ ಕನ್ನಡ ಚಿತ್ರಗಳು ಸದಾ ಸದಭಿರುಚಿಗಾಗಿ ತುಡಿಯುತ್ತ, ದುಡಿಯುತ್ತ ಬಂದಿವೆ. ಸದಭಿರುಚಿಯನ್ನು ಸಾರ್ವಕಾಲಿಕ ಮಾದರಿಯೆಂಬಂತೆ ಬೆಳೆಸುತ್ತ ಬಂದ ಕನ್ನಡ ಚಿತ್ರಗಳ ಕೊಡುಗೆ ಮತ್ತೆ ಮಾದರಿಯಾಗಿ ಹೊಸ ರೂಪದಲ್ಲಿ ಹೊರ ಹೊಮ್ಮಲಿ. ಕನ್ನಡ ಚಿತ್ರಗಳು ಚಲನಶೀಲವಾಗಿರಲಿ ಎಂಬ ಸದಾಶಯ ನನ್ನಂಥವರದು.

ಆಕರ ಗ್ರಂಥಗಳು:–

1) ನಾಡು–ನುಡಿಗೆ ಕನ್ನಡ ಚಿತ್ರಗಳ ಕೊಡುಗೆ– ಚಿಲುಮೆ ಪತ್ರಿಕೆ. 21 ಜನೇವರಿ 2022
2) ಕನ್ನಡ ಚಲನಚಿತ್ರ ಮತ್ತು ಕನ್ನಡ ಸಾಹಿತ್ಯ– ಮಾದಲಾಂಬಿಕೆ ಟಿ. ಎಸ್ ಅಕ್ಟೊಬರ್ 2024

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

3) ಕನ್ನಡ ಚಲನಚಿತ್ರ ಇತಿಹಾಸ ಭಾಗ–I– ಡಾ.ವಿಜಯಾ ಎಂ.ಬಿ.ಸಿಂಗ ವಿ.ಎನ್. ಸುಬ್ಬರಾವ್ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ–2001

4) ಕನ್ನಡ ಚಿತ್ರರಂಗ ಒಂದು ವಿವೇಚನೆ –ಎನ್.ಎಸ್.ಶ್ರೀಧರಮೂರ್ತಿ ಅಂಬಾರಿ ಪ್ರಕಾಶನ ಮೈಸೂರ–2010

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಶ್ರೀ ಕಲ್ಮೇಶ್ವರರ ಜೀವನ ಮತ್ತು ತತ್ವಪದ

ಶ್ರೀಮತಿ ಶೋಭಾ ಎಸ್. ಕೊಕಟನೂರ
ಸಂಶೋಧನಾ ವಿದ್ಯಾರ್ಥಿನಿ (ಕನ್ನಡ ವಿಭಾಗ)
ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ
ವಿಜಯಪುರ

Manuscript ID:
JRD -2026-180426
ISSN: 2230-9578
Volume 18
Issue 4(II)
Pp.86-88
April 2026
Submitted:12 Mar. 2026
Revised:27Mar. 2026
Accepted:14Apr.2026
Published:30 April2026

ಸಾರಲೇಖ :
ರಾಯಬಾಗ ತಾಲೂಕಿನ ಒಂದು ಚಿಕ್ಕ ಗ್ರಾಮ ಶಿರಗೂರ ಇದುಕೃಷ್ಣಾ ನದಿಯ ತಟಿಯಲ್ಲಿದೆ. ಶ್ರೀ ಸತ್ಯಪ್ಪ ಶ್ರೀಮತಿ ಸಿದ್ದಮ್ಮ ದಂಪತಿಗಳ ಮಗನಾದಕಲ್ಮೇಶ್ವರರು ಬಾಲ್ಯದಿಂದಲೇಆಧ್ಯಾತ್ಮದಲ್ಲಿ ಒಲವನ್ನು ಗಳಿಸಿಕೊಂಡರು, ತಮ್ಮ ಹುಟ್ಟೂರು ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಜಾತ್ರಿ ಉತ್ಸವಗಳಲ್ಲಿ ಭಾಗಿಯಾಗಿಅಲ್ಲಿ ಹಾಡುತ್ತಿದ್ದ ಡೊಳ್ಳಿನ ಹಾಡುಗಳನ್ನು ರಿವಾಯಿತ ಪದಗಳನ್ನು ಗೀಗೀ ಲಾವಣಿ ಹಾಗೂ ಭಕ್ತಿ ಪದಗಳನ್ನು ಕೇಳಿ ತಾನೂ ಸಹ ಅರ್ಥಗರ್ಭಿತವಾದ ತತ್ವಪದಗಳನ್ನು ರಚಿಸಿ ಹಾಡಿಜನರನ್ನುರಂಜಿಸುತ್ತಿದ್ದರು, ಆದರೆಕಲ್ಮೇಶ್ವರ ಬದುಕು ಪಟ್ಟಪಾಡು ಬಹುರೋಚಕವಾದದು. ಹಿರಿಯರಒತ್ತಾಯಕ್ಕೆ ಮಣಿದು ಮದುವೆಯಾದರು ಸದಾ ಪಾರಮಾರ್ತದಲ್ಲಿಯೇಇದ್ದು ಸಂಸಾರವನ್ನು ಸಸಾರ ಮಾಡಿಕೊಂಡವರು ಭವಸಾಗರವನ್ನುದಾಟುವದಾರಿಕಂಡವರು, ಮೋಜಿಗಾಗಿ ಸರ್ಕಸ ಕಂಪನಿ ಕಟ್ಟಿ ನಾಡಿನಲ್ಲಿ ಸುತ್ತಾಡಿಅನುಭವದಾಗರವಾದವರು. ಹಿಡಿದ ವೃತ್ತಿಯಲ್ಲಿ ಸೋಲವನ್ನು ಅನುಭವಿಸಿ ಸಾವಿಗೆ ಶರಣಾಗ ಬೇಕೆಂದಾಗ ಅನುಭಾವಿಗಳು ಸಂಪರ್ಕದಿಂದಅವಿಚಾರಕ್ಕೆತಿಲಾಂಜಲಿಯನ್ನಿತ್ತು ಬದುಕುಬೇಕೆಂಬ ಛಲ ಹೊತ್ತು ಸಾಗಿ ಅಧ್ಯಾತ್ಮದ ಶಿಖರವೇರಿದವರು, ಆ ನಂತರದಅವರಅಮ್ಯೂಲ ಬದುಕು ಸಾಮಾನ್ಯರಿಗೆದಾರಿತೋರುವಂತಹದು. ಆದ್ಯಾತ್ಮದಉನ್ನತಕ್ಕೇರಿದರೂಗುರುವನ್ನು ಮೀರಿನಿಂತ ಕಶನ ಶಿಷ್ಯ ಸಮೂಹವು ದೊಡ್ಡದು. ಅವರಕರ ಸಂಜಾತರಾಗಿ ಬೆಳೆದ ಸದ್ಗುರುಅಲ್ಲಮ ಪ್ರಭು ಮಹಾರಾಜ (ತಾತ್ಯಾ ಸಾಹೇಬ ಪಾಟೀಲರು ಈಗಾಗಲೇ ತಮ್ಮಗುರುವಿನಿಂದರಚಿತವಾದ "ಪರಮಾರ್ಥಜ್ಞಾನಜೋತಿ" ಕೃತಿಗೆ ಸರಳ ಹಾಗೂ ಸುಂದರವಾದಟೀಕಾತಾತ್ಪರ್ಯ ಬರೆದುಜ್ಞಾನ ಪಿಪಾಸುಗಳಿಗೆ ಸಹಕರಿಸಿದ್ದನ್ನು ಸ್ಮರಿಸಲೇಬೇಕು.

ಮುಖ್ಯ ಪದಗಳು : ತತ್ವಪದ ,ಆಧ್ಯಾತ್ಮ, ಜೀವನ, ಅನುಭಾವ

ಶಿರಗೂರಿನ ಕಲ್ಮೇಶ್ವರರಾಯ ಬಾಗ ತಾಲೂಕಿನಜನಪದ ಕವಿಗಳಲ್ಲಿ ಮೇರು ಸದೃಶರಾದವರುಕಲ್ಲೇಶ್ವರರುಅವರ ಸಮಕಾಲಿನವರೇಆಗಿದ್ದ ಹಾರೂಗೇರಿಯ ಅಲಬೈರಿಜಲಾಲಪುರದರಾಚೋಟಿ ಮುಂತಾದವರೂ ಸಾಹಿತ್ಯಕೃಷಿಯನ್ನುಕೈಗೊಂಡರು. ಕುಡಚಿ ಸಮೀಪ ಇರುವತನ್ನಊರಿನಕುರಿತಾಗಿ ಹೇಳುತ್ತ "ಹಿರಿಯೊಳಿ ದಂಡಿಮ್ಯಾಲ ಶಿರಗೂರ ಐತಿಡೌಲ" ಎಂಬ ನುಡಿಯಲ್ಲಿ ಹುಟ್ಟುರಿನ ಸೀಮೆಯನ್ನು ಹೇಳುತ್ತಲೇ ಆ ಕುರಿತು ಹೆಮ್ಮೆಯನ್ನು ವ್ಯಕ್ತಪಡಿಸುತ್ತಾರೆ."ಕಲ್ಮೇಶನಾ ಕವಿ ಐತಿ ಪಾವನಾ ಅಜ್ಞಾನಿಗೆಅವಗಡ ಅನ್ನಿಸಿ ಅದು ಸುಮ್ಮನಾಇದರಜವಾಬ ಕುಡಲಾಕಜಾಣ ಬೇಕು ಇಲ್ಲಾಅನುಮಾನ" ಎಂಬ ಮಾತುಗಳನ್ನು ಕಂಡಾಗಆತನಕವಿತಾಶಕ್ತಿಯಅರಿವುಉಂಟಾಗಬಲ್ಲದುಆತ್ಮಪರಮಾತ್ಮನಾಗಬಲ್ಲ ಸುಲಭದದಾರಿಯನ್ನುಆಡು ಮಾತಿನಲ್ಲಿ ಹಿಡದಿಟ್ಟ ಶ್ರೇಯಸ್ಸುಕಲೇಶ್ವರರಿಗೆ ಸಲ್ಲುತ್ತದೆ. "ಆತ್ಮ ಬಿಟ್ಟದೇವರಿಲ್ಲಾ ಹೊರಗಿನ 'ಎಲ್ಲಾ ಒನಾ ಕಲ್ಲು" ಎಂಬ ದಿಟ್ಟ ಮಾತನ್ನು ತಿಳಿಸುವ ಕವಿ "ಖರೆ ಮನಸ ಐತಿ ಕಾಶಿ ತಿಳಿದ ನೋಡಿದರ ನೀವು ಸೋಸಿ" ಎಂಬಲ್ಲಿ ಅಂತರಂಗ ಶುದ್ಧವುಳ್ಳನೆ ನರನೇ ನಾರಾಯಣ ನಾಗಬಲ್ಲನೆಂಬ ದಿಕ್ಕನ್ನುತೋರಿಸುವಲ್ಲಿ ಸಫಲತೆಯನ್ನು ಪಡೆದಿದ್ದಾರೆ.

" ಹಿರ್ಯಾರಇದ್ದರಊರಚಂದ
ಗುರುಇದ್ದರ ಮಠಚಂದ
ಗುಡಿಇದ್ದರದೇವರಚಂದ.

ಎಂಬ ಸಾಲುಗಳಲ್ಲಿ ಕವಿತ್ವದ ಸರಳತೆ ತಿಳಿಯಾದ ವೈಚಾರಿಕತೆಯನ್ನು ಕಂಡುಕೊಳ್ಳಬಹುದು. ಶರಣರಕಾಯಕತತ್ವವನ್ನುಎತ್ತಿ ಹಿಡಿದಕಲ್ಮೇಶ್ವರರು ಪ್ರಾಯದ ಕಾಲಕ ದುಡಿಬೇಕು ಮುಪ್ಪಿನ ಕಾಲಕ ಉಣಬೇಕಉಂಡಿಗ್ಯಾ ಆಗಿ ತಿರುಗಿದರ ಸೇರುದಿಲ್ಲ ಯಾರು ಎಂಬ ಮಾತಿನಲ್ಲಿ ಸ್ಪಷ್ಟಪಡಿಸಿದ್ದಾರೆ. ಸ್ವರ್ಗ ನರಕವೆಂಬವು ಬೇರೆಕಡೆಇಲ್ಲ, ನಿನ್ನಲ್ಲಿಯೇ ನಿನ್ನಂತರಂಗದೊಳಗೇ ಇದ್ದಾವೆ ಎಂಬ ಮರ್ಮವನ್ನು ತಿಳಿ ಮಾತಿನಲ್ಲಿ ತಿಳಿಸಿದ್ದಾನೆ

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಶ್ರೀಮತಿ ಶೋಭಾಎಸ್. ಕೊಕಟನೂರ, ಸಂಶೋಧನಾ ವಿದ್ಯಾರ್ಥಿನಿ (ಕನ್ನಡ ವಿಭಾಗ)ಕರ್ನಾಟಕರಾಜ್ಯಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯವಿಜಯಪುರ

How to cite this article:
ಶ್ರೀಮತಿ ಶೋಭಾಎಸ್. ಕೊಕಟನೂರ.*2026).*ಶ್ರೀ ಕಲ್ಮೇಶ್ವರರಜೀವನ ಮತ್ತುತತ್ವಪದ. *Journal of Research and Development, 18(4(II)), 86–88. https://doi.org/10.5281/zenodo.19396280*

Quick Response Code:
Website: https://jrdrvb.org/
DOI: 10.5281/zenodo.19396280
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

"ಖರೇ ಮನಸ ಐತಿ ಕಾಶಿ ತಿಳಿದ ನೋಡಿರಿ ನೀವು ಸೋಸಿ

ಅಂತಕರಣರಾಮೇಶ್ವರ ನಿಮ್ಮ ಒಳಗ ಇರೋದ ನಿಮ್ಮನ ಬಿಟ್ಟಕಡೇಕ ಮತ್ತೆಲ್ಲಿದೇವರಇರೋದಾ" ನಿಜದೇವನ ಸ್ವರೂಪವವನ್ನು ಬಹಳ ಸುಂದರವಾಗಿ ಹಿಡಿದಿಡುವಲ್ಲಿ ಕವಿ ಸಫಲರಾಗಿದ್ದಾರೆ.ಮನಸೆಂಬುದೇ ಕಾಶಿ ಅಂತ ಶರಣ ವೇರಾಮೇಶ್ವರಎನ್ನುವದೆಲ್ಲಆಡುಮಾತಿನಗತ್ತುಗಮತ್ತುಎದ್ದುಕಾಣುತ್ತದೆ.ಕವಿ ಹುಟ್ಟಿ ಬೆಳೆದ ಶಿರಗೂರಿನ ಹತ್ತಿರವಿರುವಕುಡಚಿಗ್ರಾಮವು ಮುಸ್ಲಿಂ ಜನರಿಂದಕೂಡಿದ್ದುಅವರಾಡುವಉರ್ದು ಮಿಶ್ರಿತ ಕನ್ನಡ ಬಾಷೆಯ ಸೊಗಸೇ ಒಂದುರೀತಿ. ಕವಿ ಕಲ್ಮೇಶ್ವರನು ಬಹು ಭಾಷಾವಿಷಾರದನಾಗಿದ್ದರಿಂದಉರ್ದು ಭಾಷೆಯನ್ನುತನ್ನಕಾವ್ಯಕ್ಕೆ ಬಳಿಸಿ ಕೊಂಡಿದ್ದನ್ನುಇಲ್ಲಿಕಂಡಾಗ ಬೆರಗಾಗುತ್ತದೆ.ಹಿಂದೂ ತತ್ವಗಳನ್ನು ಇಸ್ಲಾಂತತ್ವಕ್ಕೆ ಸಮೀಕರಿಸಿ ಹೇಳಿದ ಅವರರೀತಿಯಲ್ಲಿ ವಿಶೇಷವಾದದು.

"ಬಹಿರಂಗ ಮಶೀದ ಮೇ
ಬಾವಾ ಹೋ ಕರಕಾಯಕೋ ಭಾಂಗ ಪಿಕೋಜಿ
ಅಂಗ ಮಸೀದ ಮೇ ಆತ್ಮಪೀರ ಹೈ ಓಂಕಾರಕಲ್ಮಾ ಪಡೆಹೈಂಜಿ
ದೇಹವೆಂಬ ದೇಗುಲದಲ್ಲಿಆತ್ಮವೆಂಬುದೇದೇವರು

ಎಂಬ ಮರ್ಮವನ್ನು ತಿಳಿಸಿದ್ದಾರೆ.

ಇಡೀ ಸಂಕಲನದಲ್ಲಿ ಸಂಕಲಿತಗೊಂಡಿರುವಇಪ್ಪತ್ತಾರು ತತ್ವಪದಗಳು ವಸ್ತು ವಿಷಯದದೃಷ್ಟಿಯಿಂದ ಭಿನ್ನವಾಗಿದ್ದರೂ ಅವೆಲ್ಲವುಗಳ ಹಿಂದೆಇರುವಧ್ವನಿ ಒಂದೇಯಾಗಿದೆ.ಆದೆಂದರೆ ಲೋಕದ ಹಿತ ಶಿಕ್ಷಣ ಅಜ್ಞಾನಿಗಳಿಗೆ ಸೂಕ್ತ ಮಾರ್ಗದರ್ಶನ ಸತ್ಯಂತ ಸರಳ ಭಾಷೆಯನ್ನು ಬಳಸಿಕೊಂಡು ಕ್ಲಿಷ್ಟ ವಿಷಯಗಳನ್ನು ಅಲಜ್ಜರಿಗೆ ತಿಳಿಸಿಕೊಟ್ಟ ಶ್ರೇಯಸ್ಸು ಕವಿ ಕಲ್ಮೇಶ್ವರರಿಗೆ ಸಲ್ಲಬೇಕುಇಂತಹ ವಿರಾಳ ವಿಚಾರಗಳ ತತ್ವ ಪದಗಳನ್ನು ಈ ಕೃತಿಯಲ್ಲಿ ಸುಮಾರು 197 ಪದಗಳಿಗೆ ಅವುಗಳನ್ನು ಐದು ಭಾಗಗಳನ್ನಾಗಿ ವಿಂಗಡಿಸಿದ್ದಾರೆ.

1) ಶಿವ ಕಾರುಣ್ಯ ಸ್ಥಲ
ಈ ಒಂದು ಭಾಗದಲ್ಲಿ ಸುಮಾರು 25 ಪದಗಳಿವ
2) ಜೀವ ಸಂಬೋದನ ಸ್ಥಲ, ಈ ಭಾಗಿದಲ್ಲಿ 26 ಪದಗಳಿವೆ
3) ನೀತಿಕ್ರಿಯಾಚರ್ಯ ಸ್ಥಲ. ಈ ಒಂದು ಭಾಗದಲ್ಲಿ 35 ಪದಗಳಿವೆ.
4) ಯೋಗ ಪ್ರತಿವಾದನ ಸ್ಥಲ, ಈ ಭಾಗದಲ್ಲಿ 35 ಪದಗಳಿವೆ.
5) ಜ್ಞಾನ ಪ್ರತಿ ಪಾದನ ಸ್ಥಲ, ಈ ಭಾಗದಲ್ಲಿ 41 ಪದಗಳಿವೆ.

ಅವಿದ್ಯೋಪಾದಿಯಿಂದಜೀವನದು:ಖಿಯಾಗಿರುತ್ತಾರೆ. ಅವಿದ್ಯೆಎಂದರೆ "ಸ್ವಾಶ್ರಯವ್ಯಾ ಮೋಹಕರೀಅವಿದ್ಯಾತನ್ನುಆಶ್ರಯಕ್ಕೆಯಾವದು ಮೋಹವನ್ನುಂಟು ಮಾಡುತ್ತಿರುವೋಅದುಅವಿಧ್ಯಯನ್ನಲ್ಲಡುತ್ತದೆ.ಅಂತಹಅವಿದ್ಯೆಗೆಆಶ್ರಯಕೊಟ್ಟವನಜೀವನದು:ಖಮಯವಾಗಿರುತ್ತದೆ. ಅವನಿಗೆ ವಿಧಿ ಅನೇಕ ಕಷ್ಟಗಳನ್ನು ಕೊಡುತ್ತದೆ.ತನ್ನ ಸ್ವರೂಪವು ಹುಗಿದಿದ್ದ ನಿರಣ್ಯ ನಿಧಿಯಂತೆ ನಿತ್ಯ ಪ್ರಾಸ್ತವಾದರೂಅವಿಧ್ಯಯಿಂದಅಪ್ರಾಪ್ತದಂತೆಕಾಣಿಸುತ್ತದೆ. ವಿದ್ಯೆಯಿಂದತನ್ನ ಸ್ವರೂಪವನ್ನುತಾನುಅಪರೋಕ್ಷ ಮಾಡಿಕೊಂಡರೆಇದಕ್ಕಿಂತಲೂ ಬೇರೊಂದು ಲಾಭವಿಲ್ಲೆಂದುಇವರಅಭಿಪ್ರಾಯವು ಶ್ರೀ ಸದ್ಗುರುಕಲ್ಮೇಶ್ವರರುಅತಂತ್ಯದು:ಖ ನಿವೃತ್ತಿ ಪರಮಾನಂದ ಪ್ರಾಪ್ತಿಯೆಂಬ ಮುಕ್ತಿ ಸುಖ ಪಡೆಯುವದೇ ಮಾನವಜನ್ಮದ ಸಾರ್ಥಕತೆಎಂಬುದಾಗಿ ಹೇಳಿದ್ದಾರೆ. ಮೋಕ್ಷಾಪೇಕ್ಷಿಯು ಮೊದಲುಅಂತಕರಣ ಶುದ್ಧಿ ಮಾಡಿಕೊಂಡುಜ್ಞಾನ ಸಂಪಾದಿಸಬೇಕೆಂದು ನಿಜ ಗುಣಾರ್ಯರಂತೆ ಹಾಗೂ ಸರ್ಪಭೂಷಣರಂತೆ ಶಿವಕಾರುಣ್ಯಾದಿ ಪಂಚಸ್ಥಲಗಳನ್ನು ಬೋದಿಸಿದ್ದಾರೆ.

ಶ್ರೀ ಗುರುಗೀತಾಮೃತಕೃತಿಯುಒಂದು ಪಾರಾಯಣಗ್ರಂಥವಾಗಿದೆ.ಶ್ರೀ ಸದ್ಗುರುಕಲ್ಮೇಶ್ವರರುಇದನ್ನು ರಚಿಸಿದ್ದಾರೆ.ಇದನ್ನುಎರಡು ಭಗವಾಗಿ ಮಾಡಿದ್ದಾರೆ.ಮೊದಲ ಭಾಗದಲ್ಲಿಇದನ್ನು 108 ಪದ್ಯಗಳಿವೆ. ಕೊನೆಯ ಪದ್ಯ ಮಂಗಲ ಗೀತೆಯೊಂದಿಗೆ ಮುಕ್ತಾಯ ಮಾಡಿದ್ದಾರೆ.ಅದೇತರನಾಗಿಎರಡೆನೇಯ ಬಾಗದಲ್ಲಿ 58 ಪದ್ಯಗಳಿವೆ ಮತ್ತು ಅವುಗಳ ವಿವರಣೆಅಥವಾ ಪಾರಾಯಣವಿದೆಕೊನೆಯ ಪದ್ಯವೂ ಮಂಗಳಾರುತಿಯೊಂದಿಗೆ ಮುಕ್ತಾಯಗೊಳಿಸಿದ್ದಾರೆ.ಅದುಒಂದು ವಿಶೇಷವಾಗಿದೆ.

ನಮ್ಮ ಈ ಭರತ ಪುಣ್ಯ ಭೂಮಿಯಲ್ಲಿ ಮಹಾತ್ಮರು, ವೀರ ಪುರುಷರು, ದಾನಿಗಳು, ಸಂತರು, ಶರಣರು, ದಾಸರು, ಬಾಳಿದ ನೆಲವಿದು.ಅದರಲ್ಲಿ ನಮ್ಮಕನ್ನಡ ನಾಡಿನಲ್ಲಿಇದಕ್ಕೆನು ಹೊರತಾಗಿಲ್ಲಇಲ್ಲಿಯು ಸಂತರು, ಶರಣರು ಬಾಳಿದ್ದಾರೆ.ಜೊತೆಗೆತೀರ್ಥ ಕ್ಷೇತ್ರಗಳಿರುವ ಪುಣ್ಯ ಭೂಮಿಇದು.ಕೃಷ್ಣ ನದಿ ತಟದಲ್ಲಿ ಬಹಳ ತೀರ್ಥ ಕ್ಷೇತ್ರಗಳಿವೆ. ಈ ನದಿಯ ಹರಿಯುವ ಸೀಮೆಯನ್ನು ಹಿಡಿದು ಪುಣ್ಯ ಪುರುಷರು ತಪಸ್ಸಿನಿಂದ ಜ್ಞಾನವನ್ನುದಾರೆಎರೆದಿದ್ದಾರೆ.ಅದರಜೊತೆಗೆಅನ್ನದಾಸೋಹ ಮಾಡಿದ್ದಾರೆ. ಇಲ್ಲಿಯಜನರುಇದರಿಂದ ಸಂತೃಪ್ತಿ ಪಡೆಯುತ್ತಿದ್ದಾರೆ.ದಾರಿತಪ್ಪಿದವರಿಗೆಜ್ಞಾನದ ಹಾದಿಯನ್ನು ತೋರಿಸಿ ಅವರಜೀವನಕ್ಕೆ ಬೆಳಕನ್ನು ನೀಡಿದ್ದಾರೆ ಒಳ್ಳೆಯ ಹಾದಿಯಲ್ಲಿ ನಡೆಯುವ ಅನುಭವಿಗಳು ಈ ಐವತ್ತರದಶಕದ ಆಸು ಪಾಸಿನಲ್ಲಿ ಆಗಿ ಹೋದತಂಹ ಸದ್ಗುರುಕಲ್ಮೇಶ್ವರ ಮಹಾತ್ಮರುರಾಯಬಾಗತಾಲೂಕಿನ ಶಿರಗೂರ ಇವರುಊರು. ಇದು ಈ ತಾಲೂಕಿನ ಸಣ್ಣಗ್ರಾಮತಮ್ಮ ಪಾರಮಾರ್ಥವಾದ ಸತ್ಯದರ್ಶನದಿಂದಜನರಿಗೆ ಹಾದಿಯ ಬೆಳಕಾಗಿ ಎಚ್ಚರವನ್ನು ನೀಡಿದ್ದಾರೆ.

ಈ ಕೃತಿಯಲ್ಲಿರುವ ವಚನಗಳು ಪ್ರತಿದಿನದಿಂದ ಪಾರಾಯಣಕ್ಕೆ ಬಹಳ ಉಪಯೋಗವಾಗಿದೆಜನರುಇಂತಹಅನುಭವದ ವಚನಗಳು ಮುಕಾಂತರಅವರ ಬದುಕನ್ನು ಉತ್ತಮಗೊಳಿಸಿಕೊಳ್ಳುತ್ತಿದ್ದಾರೆ.ಎನ್ನುವುದುಒಂದು ಒಳ್ಳೆಯ ಸಂಗತಿಯಾಗಿದೆ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಪರಾಮರ್ಶನ ಗ್ರಂಥಗಳು

ಜ್ಞಾನಒಂದುಇದ್ದ ಮ್ಯಾಲ ಮಾನಕ್ಕೇನಕಡ್ಮಿಇಲ್ಲ – ಶ್ರೀ ಕಲ್ಮೇಶ್ವರರು
ಸಂಪಾದಕರು :ಡಾ.ಪಿ.ಜಿ ಕೆಂಪಣ್ಣವರ್

* ಶ್ರೀ ಕಲ್ಮೇಶ್ವರಕೈವಲ್ಯಾಮೃತ– ಶ್ರೀ ಶಿವಾನಂದ ಸ್ವಾಮೀಜಿ
* ಶ್ರೀ ಗುರುಗೀತಾಮೃತ– ಶ್ರೀ ಸದ್ಗುರುಕಲ್ಮೇಶ್ವರರು

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಶಾಂತಿನಾಥ ದೇಸಾಯಿಯವರ ಕಾದಂಬರಿಗಳು: ಮಹಿಳಾ ಅಸ್ತಿತ್ವ

ಡಾ. ಶ್ರೀದೇವಿ ಆಲೂರ [1]ಡಾ. ಸಿದ್ರಾಮಪ್ಪ ಕಳಸಪ್ಪ[2]
[1]ಸಹಾಯಕ ಪ್ರಾಧ್ಯಾಪಕರು
ಮಹಿಳಾ ಅಧ್ಯಯನ ಹಾಗೂ ಸಂಶೋಧನಾ ವಿಭಾಗ
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
Email- drsirialoor@gmail.com
[2]ಅತಿಥಿ ಉಪನ್ಯಾಸಕರು
ಮಹಿಳಾ ಅಧ್ಯಯನ ಹಾಗೂ ಸಂಶೋಧನಾ ವಿಭಾಗ
ವಿಜಯನಗರ ಶ್ರೀ ಕೃಷ್ಣದೇವರಾಯ
ವಿಶ್ವವಿದ್ಯಾಲಯ, ಬಳ್ಳಾರಿ.

Manuscript ID:
JRD -2026-180427
ISSN: 2230-9578
Volume 18
Issue 4(II)
Pp.89-92
April 2026
Submitted:12 Mar. 2026
Revised:27Mar. 2026
Accepted:14Apr.2026
Published:30 April2026

ಲೇಖನ ಸಾರ :

ಎಪ್ಪತ್ತರ ದಶಕದಿಂದಿಚೆಗೆ ಸ್ತ್ರೀ ಅಸ್ಮಿತೆಯ ಪ್ರಶ್ನೆಯು ಚರ್ಚೆಗೆ ಅಡಿಯಿಟ್ಟಿತು. ಇದಕ್ಕೆ ಮೊಟ್ಟಮೊದಲು ಆಕರವಾದದ್ದು ಸಾಹಿತ್ಯ. ಇಂತಹ ಕನ್ನಡ ಸಾಹಿತ್ಯಕ್ಕೆ ವಿಸ್ತೃತವಾದ ಹರವಿದೆ. ವಿವಿಧ ಪಂಥಗಳಲ್ಲಿ ವಿಭಜಿಸಲಾದ ಈ ಪಂಥಗಳಲ್ಲಿ ನವ್ಯ ಸಾಹಿತ್ಯ ವಿಶೇಷ ಮನ್ನಣೆಯನ್ನು ಪಡೆದದ್ದು. ಆದ್ದರಿಂದ ನವ್ಯ ಸಾಹಿತಿ ಶಾಂತಿನಾಥ ದೇಸಾಯಿಯವರ ಕಾದಂಬರಿಗಳನ್ನು ಆಧರಿಸಿ ಸ್ತ್ರೀ ಅಸ್ಮಿತೆಯನ್ನು ಚರ್ಚಿಸಲಾಗಿದೆ. ವಿಷಯ ಗ್ರಹಿಕೆಯ ಅಗತ್ಯತೆಯ ಭಾಗವಾಗಿ ಪ್ರಸ್ತುತ ಲೇಖನದಲ್ಲಿ ದೇಸಾಯಿಯವರ ಸಮಗ್ರ ಕಾದಂಬರಿಗಳಲ್ಲಿ ಮೂಡಿಬಂದ ಮಹಿಳಾ ಪಾತ್ರಗಳನ್ನು ವಿವಿಧ ಹಂತಗಳಲ್ಲಿ ವಿಭಜಿಸುವ ಮೂಲಕ ಮಹಿಳಾ ಅಸ್ತಿತ್ವವನ್ನು ಗ್ರಹಿಸಲು ಪ್ರಯತ್ನಿಸಲಾಗಿದೆ.

ಪ್ರಮುಖ ಪದಗಳು : ಸ್ತ್ರೀ ಅಸ್ಮಿತೆ, ಅಸ್ತಿತ್ವವಾದ, ಲೋಕಗ್ರಹಿಕೆ, ಕಥನಸಾಹಿತ್ಯ

ಪ್ರಸ್ತಾವನೆ

ಎಪ್ಪತ್ತರ ದಶಕದಿಂದೀಚೆಗೆ ಕಾಣಿಸಿಕೊಳ್ಳುವ ಹೋರಾಟಗಳೆಲ್ಲವೂ ಆಯಾ ಸಮುದಾಯಗಳ ಅಸ್ಮಿತೆಗಾಗಿ, ಮುಖ್ಯವಾಗಿ ಸಾಹಿತ್ಯ ಪಂಥಗಳಲ್ಲಿ ನವ್ಯ ಸಾಹಿತ್ಯವು ಮಾನವ ಅಸ್ತಿತ್ವವನ್ನು ಕುರಿತ ಚಿಂತನೆಗೆ ಆದ್ಯತೆ ನೀಡಿದ್ದೇ ಆಗಿದೆ. ಅಸ್ತಿತ್ವವಾದಿಯಾಗ ಬಯಸಿದ ಮನುಷ್ಯ ಅನುಭವಿಸುವ ವಿಕಾಂಗಿತನ, ಹತಾಶೆ, ಪಾಪಪ್ರಜ್ಞೆ, ಪರಕೀಯತೆ, ಅಂತರಾಗದ ತೊಳಲಾಟಗಳನ್ನೆಲ್ಲವನ್ನು ಚಿತ್ರಿಸುತ್ತದೆ. ಆದರೆ ಮಾನವ ಎನ್ನುವಲ್ಲಿ ಮಹಿಳೆಯು ಸೇರಿರುತ್ತಾಳೆ ಎನ್ನುವದು ಕೇವಲ ಭ್ರಮೆ. ಹಕ್ಕಿ, ಹುಳುಗಳ ಅಸ್ತಿತ್ವವನ್ನು ಗುರುತಿಸುವ ಸಾಹಿತಿಗಳು ಬಹುತೇಕ ಮಹಿಳಾ ಅಸ್ಮಿತೆಯನ್ನು ಕಡೆಗಾಣಿಸಿದ್ದು ಕಂಡುಬರುತ್ತದೆ. ಮುಂದುವೆರದಂತೆ ದಮನಿತ ಸಮುದಾಯಗಳು ತಮ್ಮ ಅಸ್ಮಿತೆಯ ನಿರಾಕೃತತೆಯನ್ನು ಪ್ರಶ್ನಿಸತೊಡಗಿದವು. ಅಂತಹ ಸಮುದಾಯಗಳಲ್ಲಿ ಮಹಿಳಾ ಸಮುದಾಯವು ಒಂದು.

ಸಾಹಿತ್ಯ ಘಟ್ಟದಲ್ಲಿಯೇ ವಿಭಿನ್ನ ಎಂದು ಹೇಳಲಾದ ನವ್ಯ ಸಾಹಿತ್ಯವು ಮಾನವ 'ಅಸ್ಮಿತೆ'ಯ ತಳಹದಿಯನ್ನು ಆಧರಿಸಿ ರೂಪುಗೊಂಡಿದೆ ಎಂದಾದರೂ ಅಲ್ಲಿ ಮಹಿಳಾ ಅಸ್ಮಿತೆಯು ಬಹುಪಾಲು ಗೌಣವಾಗಿದೆ ಎಂಬುದು ಸತ್ಯ ಎನ್ನುವುದಕ್ಕೆ ಅಲ್ಲಿನ ಕಥನಗಳೇ ಬಹುಮುಖ್ಯ ಸಾಕ್ಷಿಗಳಾಗಿವೆ. ಇಂತಹ ನವ್ಯ ಸಾಹಿತ್ಯದಲ್ಲಿ ಅನಂತಮೂರ್ತಿ, ಲಂಕೇಶ, ಶಾಂತಿನಾಥ ದೇಸಾಯಿ, ಚಿತ್ತಾಲ, ವೀಣಾ ಶಾಂತೇಶ್ವರ, ರಾಜಲಕ್ಷ್ಮಿ ನೀರಮಾನ್ವಿಯವರಂತಹ ಹಲವಾರು ಪ್ರಮುಖ ಸಾಹಿತಿಗಳ ದಂಡೆ ಇದೆ. ತಮ್ಮ ಬರಹಗಳಿಂದ ಭಿನ್ನವಾಗಿ ಗುರುತಿಸಿಕೊಂಡಿರುವ ಮತ್ತು ವಿಷಯ ಗ್ರಹಿಕೆಯ ದೃಷ್ಟಿಯಿಂದ ಇಲ್ಲಿನ ನವ್ಯ ಪಂಥದಲ್ಲಿ ಅತ್ಯಂತ ಪ್ರಮುಖರಲ್ಲಿ ಒಬ್ಬರಾದ ಶಾಂತಿನಾಥ ದೇಸಾಯಿಯವರ ಕಾದಂಬರಿಗಳನ್ನು ಚರ್ಚೆಗೊಳಪಡಿಸಲಾಗಿದೆ.

ಉದ್ದೇಶಗಳು:

1. ಮಹಿಳಾ ಅಸ್ತಿತ್ವದ ನೆಲೆಗಳನ್ನು ಶೋಧಿಸುವುದು.
2. ಕಥನಕಾರರ ಲೋಕಗ್ರಹಿಕೆಯನ್ನು ಗ್ರಹಿಸುವುದು

ವೈಧಾನಿಕತೆ

ಪ್ರಸಕ್ತ ಲೇಖನವು ಸ್ತ್ರೀವಾದಿ ಸಂಶೋಧನಾ ವೈಧಾನಿಕತೆಯನ್ನು ಪ್ರಮುಖವಾಗಿ ಅಳವಡಿಸಿಕೊಳ್ಳಲಾಗಿದೆ.

ಕಾದಂಬರಿಗಳು ಪ್ರಮುಖ ಆಧಾರವಾದ್ದರಿಂದ ಮೂಲ ಕಾದಂಬರಿಗಳನ್ನು ಆಧರಿಸಿ ವಿಷಯ ವಿಶ್ಲೇಷಣಾ ವಿಧಾನವನ್ನು ಅನುಸರಿಸಲಾಗಿದೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ. ಶ್ರೀದೇವಿ ಆಲೂರ 'ಸಹಾಯಕ ಪ್ರಾಧ್ಯಾಪಕರುಮಹಿಳಾ ಅಧ್ಯಯನ ಹಾಗೂ ಸಂಶೋಧನಾ ವಿಭಾಗ ವಿಭಾಗ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.

How to cite this article:
ಡಾ. ಶ್ರೀದೇವಿ ಆಲೂರ 'ಡಾ. ಸಿದ್ರಾಮಪ್ಪ ಕಳಸಪ್ಪ. *2026).*ಶಾಂತಿನಾಥ ದೇಸಾಯಿಯವರ ಕಾದಂಬರಿಗಳು : ಮಹಿಳಾ ಅಸ್ತಿತ್ವ. *Journal of Research and Development, 18(4(II)), 89–92. https://doi.org/10.5281/zenodo.19396312*

Quick Response Code:
Website: https://jrdrvb.org/
DOI: 10.5281/zenodo.19396312
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಶಾಂತಿನಾಥ ದೇಸಾಯಿ ಕಾದಂಬರಿಗಳು – ಮಹಿಳಾ ಅಸ್ತಿತ್ವದ ನೆಲೆಗಳು

ಕನ್ನಡ ಸಾಹಿತ್ಯದಲ್ಲಿ ನವ್ಯ ಸಂವೇದನೆಯನ್ನು ಶಾಂತಿನಾಥ ದೇಸಾಯಿಯವರ ಮುಕ್ತಿ ಕಾದಂಬರಿಯಿಂದ ಗುರುತಿಸಲಾಗುತ್ತದೆ.ಅದು ಒಂದು ಪರಂಪರೆಯಾಗಿಯೇ ಬೆಳೆದ ಹಿನ್ನೆಲೆಯಲ್ಲಿ ಆ ಕಾಲಘಟ್ಟದ ಲೇಖಕರಾಗಿ, ವಿಮರ್ಶಕರಾಗಿ ಸಾಹಿತ್ಯ ಲೋಕದಲ್ಲಿ ಹೊಸತನವನ್ನು ಹುಟ್ಟು ಹಾಕಿದವರಲ್ಲಿ ಶಾಂತಿನಾಥ ದೇಸಾಯಿಯವರು ಒಬ್ಬರು.ವಸಹಾತೋತ್ತರ ಭಾರತದ ಬದುಕಿನ ಸ್ವರೂಪ ದರ್ಶನವನ್ನು, ಅಸ್ತಿತ್ವವಾದಿ ಚಿಂತನೆಯನ್ನು ಕೇಂದ್ರ ನೆಲೆಯಲ್ಲಿಟ್ಟುಕೊಂಡು ತಮ್ಮ ಕಥನಗಳನ್ನು ಹೆಣೆದವರು.ಸಾಹಿತ್ಯದಲ್ಲಿ ನವ್ಯತೆಯ ಅವಶ್ಯಕತೆಯನ್ನು ಪರಿಗಣಿಸಿದ ಸಂದರ್ಭದಲ್ಲಿ ಇವರನ್ನು ಆ ಪಂಥದ ರೂವಾರಿ ಎಂದು ಕರೆಯಲಾಯಿತು.ಶಾಂತಿನಾಥ ದೇಸಾಯಿಯವರು ಪಡೆದುಕೊಂಡ ಪ್ರೇರಣೆ, ಪ್ರಭಾವಗಳು ಪಾಶ್ಚಾತ್ಯ ಮೂಲವಾದವುಗಳು.ಅವುಗಳನ್ನು ಭಾರತೀಯ ಸಂದರ್ಭದಲ್ಲಿಟ್ಟು ಪ್ರಯೋಗ ಮಾಡಿದ್ದನ್ನು ಕಾಣುತ್ತೇವೆ. ಎಂ.ಎನ್. ರಾಯರವರಿಂದ ಪ್ರಭಾವಿತರಾದ ಇವರ ಬರಹಗಳಲ್ಲಿ ಪ್ರಶ್ನೆಗಳಿಗೆ ಉತ್ತರಿಸುವ ಪ್ರಯತ್ನವನ್ನು ಕಾಣಬಹುದು.ಚಿಂತನೆಗಳು, ಕ್ರಾಂತಿಗಳು ಬದುಕಿನ ಧರ್ಮವಾದಾಗ ಬದಲಾವಣೆಗಳು ಸಾಧ್ಯ ಎಂಬ ತಿಳುವಳಿಕೆಯ ಹಿನ್ನೆಲೆಯಲ್ಲಿ ಅವರ ಧೋರಣೆಗಳಿವೆ. ಅದೇ ರೀತಿಯಲ್ಲಿ ಆ ಕಾಲಘಟ್ಟದ ಸ್ತ್ರೀವಾದಿ ಸೈದ್ಧಾಂತಿಕ ಧೋರಣೆಗಳ ಪ್ರಭಾವದಿಂದ ಅವರ ಕಥನಗಳಲ್ಲಿ ಮಹಿಳಾ ಬದುಕಿನ ತಾತ್ವಿಕತೆಯನ್ನು ಸೃಷ್ಟಿಸಿವೆ.

ಅರವತ್ತು ಎಪ್ಪತ್ತರ ದಶಕಗಳಲ್ಲಿ ಕಾಣಿಸಿಕೊಂಡ ಸ್ತ್ರೀಪ್ರಜ್ಞಾ ಜಾಗೃತಿಯ ಅಲೆಗಳು ಸ್ತ್ರೀಯರಲ್ಲಿ 'ಸ್ವ'ದ ಅರಿವನ್ನು ಮೂಡಿಸಲಾರಂಭಿಸಿದವು.ತನ್ನ ಸುತ್ತ ಕಟ್ಟಲ್ಪಟ್ಟ ಸಾಂಪ್ರದಾಯಿಕತೆಯಿಂದ ಹೊರಬರಲು ಸಾಧ್ಯವಾಗುವಂತಹ ವಾತಾವರಣ ಸೃಷ್ಟಿಯಾಗತೊಡಗಿತು. ಹಾಗೆಂದ ಮಾತ್ರಕ್ಕೆ ಅದು ಸುಲಭ ಸಾಧ್ಯವಾದ ಮಾರ್ಗವಾಗಿಲ್ಲ. ಅಂತಹ ಸಂಧಿಗ್ಧ ಸ್ಥಿತಿಯಿಂದ ಹೊರಬರುವ ಸ್ತ್ರೀ ಪಾತ್ರಗಳನ್ನು ದೇಸಾಯಿಯವರ ಕಥನಗಳಲ್ಲಿ ಕಾಣಬಹುದು. ಆಧುನಿಕ ಪರಿಸರಕ್ಕೆ ಮುಖಾಮುಖಿಯಾದ ಸ್ತ್ರೀಯರು ಪರಂಪರಾಗತ ಮೌಲ್ಯಗಳನ್ನು ನಿರಾಕರಿಸಿಬಿಡುವ ಮನೋಭಾವಗಳು ಕಂಡುಬರುತ್ತವೆ. ಮುಕ್ತಿ ಕಾದಂಬರಿಯಲ್ಲಿ ಕಾಮಿನಿಗೆ ತೆರೆಯದಿರುವ ದಾರಿಗಳು, ವಿಯೋಗದ ಜಯಶ್ರೀ, ಜವಾಬ್ದಾರಿ ಕತೆಯ ನಾಯಕಿಯರಿಗೆ ತರೆದುಕೊಳ್ಳುವುದನ್ನು ಗಮನಾರ್ಹ.

ಬಹುತೇಕ ಲಿಂಗಬೇಧದಡಿಯಲ್ಲಿ ಹೆಣ್ಣು–ಗಂಡುಗಳನ್ನು ಗ್ರಹಿಸದೇ ಇರುವ ದೇಸಾಯಿಯವರ ದೃಷ್ಟಿಕೋನ ಹೊಸ ಬಗೆಯ ಸ್ವರೂಪವನ್ನು ಸ್ತ್ರೀಗೆ ಇವರ ಕಥನ ಸಾಹಿತ್ಯದಲ್ಲಿ ದೊರಕಿಸಿದೆ.ಗಂಡು ಹೆಣ್ಣುಗಳ ಸಂಬಂಧದ ಶೋಧವು ಲೈಂಗಿಕತೆಯ ಕೇಂದ್ರದಲ್ಲಿ ಶೋಧಿಸಲ್ಪಡುತ್ತದೆ.ಮುಕ್ತ ಲೈಂಗಿಕ ಸಂಬಂಧವನ್ನು ಕೆಲವೊಮ್ಮೆ ಒಪ್ಪುವ ಕೆಲವೊಮ್ಮೆ ಒಪ್ಪದೇ ಹೋದರೂ ಪಾತ್ರಗಳು ಆಯಾ ಸಂದರ್ಭಕ್ಕೆ ಅನುಗುಣವಾಗಿ ಸ್ಪಷ್ಟ ನಿರ್ಧಾರವನ್ನು ತೆಗೆದುಕೊಳ್ಳುವುದನ್ನು ಕಾಣಬಹುದು.

ಅಸ್ತಿತ್ವವಾದದ ಪ್ರತಿಧ್ವನಿ ಪಾತ್ರಗಳು

'ಬೀಜ' ಕಾದಂಬರಿಯು ಪ್ರತಿಪಾದಿಸ ಹೊರಟ ಅಸ್ತಿತ್ವವಾದಿ ನಿಲುವು ಅರ್ಥಪೂರ್ಣ ರೂಪದಲ್ಲಿ ಪ್ರಕಟಗೊಂಡದ್ದು 'ಕಲ್ಪನಾ'ಳ ಪಾತ್ರದ ಮೂಲಕ.'ಬೀಜ'ದ ಪರಿಕಲ್ಪನೆಯನ್ನು ಎರಡು ನೆಲೆಯಲ್ಲಿ ಗ್ರಹಿಸಬಹುದು.ಒಂದು ಶ್ರೇಯಾಂಸನ ಪಾತ್ರದ ಮೂಲಕ ವಿಮರ್ಶಕರು ಹೇಳುವಂತೆ ಬೀಜ, ಮಣ್ಣು ಇತರ ಪೋಷಕ ಅಂಶಗಳಿಂದ ಮರವಾಗಿ ಬೆಳೆದು ಮತ್ತೆ ಬೀಜವಾಗಿ ಮಣ್ಣು ಸೇರುತ್ತದೆ ಶ್ರೇಯಾಂಸ ಮರಳಿ ಕೃಷ್ಣಾಪುರಕ್ಕೆ ಬರುವುದನ್ನು ಸಂಕೇತಿಸುತ್ತದೆ.ಇನ್ನೊಂದು ಅರ್ಥದಲ್ಲಿ ಬೀಜವನ್ನು 'ವಂಶದ ಕುಡಿ' ಎಂಬುದಾಗಿಯೂ ಗ್ರಹಿಸಬಹುದು.ಮರವನ್ನು ಅಥವಾ ವಂಶದ ಮುಂದುವರಿಕೆಯನ್ನು ಪಿತೃಸಂಸ್ಕೃತಿಯ ಪರಂಪರೆಯಲ್ಲಿ ಗಂಡಿನ ಮೂಲದಿಂದಲೇ ಗುರುತಿಸಲಾಗುತ್ತದೆ.

ಈ ರೀತಿಯಾಗಿ ಸಂಪ್ರದಾಯ ಮತ್ತು ಆಧುನಿಕತೆ, ಎರಡೂ ಸಂದರ್ಭಗಳಲ್ಲೂ ವಂಶಪರಂಪರೆಯನ್ನು ಗುರುತಿಸುವಲ್ಲಿ ಸ್ತ್ರೀ ಅಸ್ಮಿತೆಯ ನಿರಾಕರಣೆ ಮತ್ತು ಅದೃಶ್ಯತೆಯಿದೆ.ಹೀಗೆ ಗಂಡಿನ ಮೂಲಕವೇ ವಂಶದ ಮುಂದುವರಿಕೆಯ ಪ್ರತಿಪಾದನೆಯನ್ನು, ವಂಶವನ್ನು ಗುರುತಿಸುತ್ತಿರುವುದು ಕಾದಂಬರಿಯಲ್ಲಿ ಗಂಡು ಮಗುವಿನ ಅನುಪಸ್ಥಿತಿಯನ್ನು ಹಿರಿಯ ತಲೆಮಾರಿನಿಂದಲೇ ಯಾರು ಕನವರಿಸದೇ ಇರುವುದು ಸಕಾರಾತ್ಮಕ ಅಂಶವಾಗಿ ಸ್ವೀಕರಿಸಬಹುದು.ಅಲ್ಲದೇ ಕಲ್ಪನೆ ತನ್ನ ರೂಪವನ್ನು ಸರಸಾ ಅಜ್ಜಿಯ ರೂಪಕ್ಕೆ ಹೋಲಿಸಿಕೊಳ್ಳುತ್ತಾಳೆ.ಇಂತಹ ವಂಶ ಬೀಜದ ಎಳೆಯ ಪಾತ್ರವಾದ ಕಲ್ಪನಾಳ ಮೂಲಕ ಪ್ರತಿಯೊಬ್ಬರ ವೈಯಕ್ತಿಕ ಅಸ್ತಿತ್ವವನ್ನು ಉಳಿಸುತ್ತಲೇ, ಕುಟುಂಬ ಹಾಗೂ ಸಮಾಜದ ಸಾಮರಸ್ಯವನ್ನು ಉಳಿಸಿಕೊಂಡು ಹೋಗುವ ಕಲ್ಪನೆಯ ಪ್ರಯತ್ನ ಅವಳ ಅಸ್ತಿತ್ವವಾದಿ ನಿಲುವನ್ನು ಪ್ರತಿಪಾದಿಸುವ ಸಶಕ್ತ ಪಾತ್ರವಾಗಿ ಮೂಡಿಬಂದಿದೆ.

ನವ್ಯ ಸಾಹಿತ್ಯದ ಹೊಸ ನಿಲುವುಗಳನ್ನು ತಾಳಿದ ಮೊದಲ ಕಾದಂಬರಿ 'ಮುಕ್ತಿ' ಎನ್ನಲಾಗುತ್ತದೆ.ಮುಂಬೈ ಮಹಾನಗರದ ಪರಿಸರದಲ್ಲಿ ತಮ್ಮ ಬಹುಕಾಲವನ್ನು ಕಳೆದ ದೇಸಾಯಿಯವರ ಎಲ್ಲ ಕಾದಂಬರಿಗಳಲ್ಲಿ ಕಂಡುಬರುವುದು ಆಧುನಿಕ ಸಂವೇದನೆ ಇದನ್ನು ಯಾವುದೇ ನಿರಾಕರಣೆಗಳಿಲ್ಲದೇ ಒಪ್ಪಿಕೊಂಡ ಲೇಖಕರು ತಮ್ಮ ಎಲ್ಲ ಪಾತ್ರಗಳ ಸೃಷ್ಟಿಯನ್ನು ಆಧುನಿಕಗೊಳಿಸಿದ್ದಾರೆ.ಮುಕ್ತಿ ಕಾದಂಬರಿಯು ಗೌರೀಶನ ಕೇಂದ್ರ ಪ್ರಜ್ಞೆಯಲ್ಲಿ ಆತ್ಮಕಥೆಯ ಧಾಟಿಯಲ್ಲಿ ಮೂಡಿಬರುತ್ತದೆ.ಆದರೆ ವರ್ತಮಾನದಲ್ಲಿ ಭೂತದಿಂದ ಮುಕ್ತಿ ಪಡೆಯಲು ಇಚ್ಛಿಸಿದ ಗೌರೀಶನ ಆತ್ಮಕಥನದ ನಿರೂಪಣೆಯು ಶ್ರೀಕಾಂತ ಹಾಗೂ ಕಾಮಿನಿಯರ ಪ್ರಭಾವ ಅವನ ಮೇಲಾದದ್ದನ್ನು ಸೂಚಿಸುತ್ತದೆ.ಕಾಮಿನಿಯ ಪಾತ್ರ ವೈಶಿಷ್ಟ್ಯತೆಯೇ ಗೌರೀಶನ ದೌರ್ಬಲ್ಯವನ್ನು ಸೂಚಿಸುವುದರಲ್ಲಿದೆ ಮತ್ತು ಶ್ರೀಕಾಂತನ ಮಹಿಳೆಯ ಕುರಿತ ಸಮಾಜವಾದಿ ತತ್ವಾಧಾರಿತ ವಿಚಾರಗಳು ಹಾಗೂ ಅದರ ಪ್ರಸ್ತುತತೆ ಎಷ್ಟರಮಟ್ಟಿಗೆ ಸಾಧ್ಯ ಎನ್ನುವ ಚರ್ಚೆಗೆ ಪೂರಕವಾಗಿ ಕಾಮಿನಿಯ ಪಾತ್ರ ಮೂಡಿಬಂದಿದೆ.

ಸಮಾಜ ವ್ಯವಸ್ಥೆಯ ಪರಿವರ್ತನೆಯ ಹಲವು ಧ್ಯೇಯೋದ್ದೇಶಗಳನ್ನು ಒಳಗೊಂಡ ಸಂಘಟನೆಗಳು, ರಾಜಕೀಯ ಪಕ್ಷಗಳು ಕೂಡ ಇಂತವುಗಳಿಗೆ ಹೊರತಾಗಿಲ್ಲ. ಕಾಮಿನಿ ಕಮ್ಯುನಿಸ್ಟ್ ಪಕ್ಷ ಸೇರುವುದರ ಮೂಲಕ ಸಾಮಾಜಿಕ ಬದಲಾವಣೆಯನ್ನು ತರಲು ಮತ್ತು ರಾಜಕೀಯ ವಲಯಕ್ಕೆ ಪ್ರವೇಶ ಪಡೆಯುವ ದಿಟ್ಟತನವನ್ನು ತೋರಿದ ಸಂದರ್ಭದಲ್ಲಿ ಅವಳನ್ನು ಮೂಲೆಗುಂಪಾಗಿಸಿ ಮುಂದುವರೆಯದಂತೆ ಕಟ್ಟಿ ಹಾಕಿದ್ದು ಲೈಂಗಿಕ ನೆಲೆಯಲ್ಲಿಯೇ, ಸಮಾಜವಾದಿ ಚಿಂತನೆಗಳ ಪ್ರಭಾವ ಕಾದಂಬರಿಯಲ್ಲಿ ಸ್ಪಷ್ಟಗೋಚರವಾಗುತ್ತದೆ. ಒಟ್ಟು ಸಾಮಾಜಿಕ ವ್ಯವಸ್ಥೆ ಹೆಣ್ಣನ್ನು ಕುರಿತ ದೃಷ್ಟಿಕೋನ ಬದಲಾಯಿಸಿಕೊಳ್ಳಬೇಕು ಎನ್ನುವ ತತ್ವವು, ಗೌರೀಶನಿಂದ ಮೊದಲ್ಗೊಂಡು ಕಾಮಿನಿಗೆ ಮುಖಾಮುಖಿಯಾಗುವ ಯಾವ ವ್ಯಕ್ತಿಯಲ್ಲೂ ಸಾಧ್ಯವಾಗುವುದಿಲ್ಲ. ಬದಲಾಗಿ ಹೆಣ್ಣಿನ ಸ್ವಚ್ಛಂದತೆಯನ್ನು ದುರುಪಯೋಗ ಪಡಿಸಿಕೊಳ್ಳುವಲ್ಲಿಯೇ ಸಾಮಾಜಿಕ ವಾಸ್ತವದ ಚಿತ್ರಣವಿದೆ.

ವೈವಾಹಿಕ ಸಂಬಂಧಗಳು ಮಹಿಳಾ ಅಸ್ತಿತ್ವದ ನೆಲೆ

ಬೀಜ ಕಾದಂಬರಿಯ ಮುಖ್ಯ ಪಾತ್ರವಾದ ಲಿಝಿ ಮುಂಬೈಯ ಆಧುನಿಕ ವಾತಾವರಣದಲ್ಲಿರುವ ಕ್ರಿಶ್ಚಿಯನ್ ಧಾರ್ಮಿಕ ಪರಿಸರದಲ್ಲಿ ಬೆಳೆದವಳು. ಸ್ವ ಕೇಂದ್ರಿತ ವ್ಯಕ್ತಿತ್ವದವಳಾದ ಲಿಝಿಗೆ ಶ್ರೇಯಾಂಸ ಮತ್ತು ಕಲ್ಪನಾ ಇಬ್ಬರೇ ಪ್ರಪಂಚ ಎಂಬಂತಿರುವುದು ಹೆಣ್ಣು ಯಾವುದೇ ನೆಲೆಯಲ್ಲಿ ಇದ್ದರೂ ಅಂತಿಮವಾಗಿ ಗಂಡ, ಮನೆ, ಮಕ್ಕಳು ಎಂಬ ನಿಲುವಿನಿಂದ ಮುಕ್ತಗೊಂಡಿಲ್ಲ. ತಂದೆಯ ವಿರುದ್ಧ ಬಂಡೆದ್ದ ಶ್ರೇಯಾಂಸನನ್ನು ಆಯ್ಕೆ ಮಾಡಿಕೊಳ್ಳುವಲ್ಲಿ, ಗ್ರಾಮ ಪರಿಸರದಲ್ಲಿ ಹಿಂದೂ ಸಂಪ್ರದಾಯಗಳ ಮಧ್ಯೆ ಇರುವ ರೇವತಿಗೆ ಉಂಟಾದ ತೊಡಕುಗಳಾವವು ಲಿಝಿಗೆ ಇಲ್ಲ. ಕೆ.ವಿ.ನಾರಾಯಣರವರು ಲಿಝಿ ಶ್ರೇಯಾಂಸರ ಸಂಬಂಧವನ್ನು "ಅಸಮ ಬಲದ ಜೋಡಿಯ ಮೇಲಾಟವಿದು." ಎಂದು ಗುರುತಿಸುತ್ತಾರೆ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

'ವಿಕ್ಷೇಪ' ಕಾದಂಬರಿಯಲ್ಲಿ ಯಾವುದೇ ಕೌಟುಂಬಿಕ ಜವಾಬ್ದಾರಿಗಳಿಲ್ಲದೆ, ಜೀವನ ಎಂದರೆ ಉಪಭೋಗ ಮಾತ್ರ ಎಂದು ತಿಳಿದವರು ರಾಹುಲ್ ಮತ್ತು ರಣಜಿತರ ದೃಷ್ಟಿಕೋನದಲ್ಲಿ ಮಾಧವಿ ತನ್ನನ್ನು ವಿವಾಹವಾಗು ಎಂದು ಒತ್ತಾಯಿಸಿದಾಗ ರಾಹುಲ ಹೇಳುವ ಮಾತುಗಳು ವಿವಾಹ ಪೂರ್ವದಲ್ಲಿಯೂ ಹೆಣ್ಣನ್ನು ಗಂಡು ಮೋಸಗೊಳಿಸಬಲ್ಲ. ವಿವಾಹವನ್ನು ತನ್ನ ಉದ್ದೇಶ ಸಾಧನೆಯ ನಂತರ ತಿರಸ್ಕರಿಸಬಲ್ಲ ಸ್ವಾತಂತ್ರ್ಯ ಗಂಡಗಿದೆ ಎಂಬ ನಿಲುವು. ಯಾವುದೇ ಸಂಬಂಧದಲ್ಲಿ ವಿಶ್ವಾಸವಿರದ, ಪ್ರೀತಿಯ ಜೀವನದ ಅರ್ಥವೇನೆಂದು ತಿಳಿಯದ ಅಸಂಬದ್ಧ ಚಲನಶೀಲತೆಯನ್ನೇ ತನ್ನ ಗುರಿಯಾಗಿಸಿಕೊಂಡ ರಾಹುಲನ ಜೀವನವನ್ನು ವೈವಾಹಿಕ ಸಂಬಂಧದ ಮೂಲಕ ಪ್ರವೇಶಿಸುವ ಹೆಣ್ಣು ಕುಂದಾ.ತನ್ನ ಸ್ವಾತಂತ್ರ್ಯಕ್ಕೆ ಧಕ್ಕೆ ಒದಗಬಹುದಾದ ಸಂಸ್ಥೆ ವಿವಾಹ ಎಂದು ತಿಳಿದ ರಾಹುಲ ಕುಂದಾಳ ವಿಧೇಯತೆಯನ್ನು ಪ್ರಾಣಿಗಳಿಗೆ ಹೋಲಿಸುತ್ತಾನೆ. ರಾಹುಲನ ಭಾವಶೂನ್ಯತೆಯ ಆತ್ಮಕೇಂದ್ರಿತ ವ್ಯಕ್ತಿತ್ವದ ಕೊನೆ ಕುಂದಾಳ ಜೀವವಿರೋಧಿ ನಿರ್ಣಯದಿಂದ ಬದಲಾಗುತ್ತದೆ. ಸಂಬಂಧ ಕಾದಂಬರಿಯು ವಿವಾಹದ ಕುರಿತು ವಿಕ್ಷೇಪ ಕಾದಂಬರಿಗಿಂತ ಬೇರೆಯಾದ ರೀತಿಯಲ್ಲಿ ವಿವರಿಸಿದೆ.ವಾಸ್ತವವಾಗಿ ಬದುಕಿನಲ್ಲಿ ನಡೆಯುತ್ತಿರುವ ಸಾಂಪ್ರದಾಯಿಕ ವಿಧಾನದಲ್ಲಿ ಕಾದಂಬರಿಕಾರನೂ ಸ್ವತಃ ಪಾತ್ರವೂ ಆದ ಶೀತಲ ಕುಮಾರರು ಸಾಂಪ್ರದಾಯಿಕ ವೈವಾಹಿಕ ವಿಧಾನದ ಉದ್ದೇಶವನ್ನು ತಿಳಿಸುತ್ತಾರೆ.

ರಾಧಿಕಾ–ರಮೇಶರದ್ದು ಸಾಮಾಜಿಕ ಅಂತಸ್ತಿಗಾಗಿ ಮದುವೆಯಾದ ಸಂಬಂಧ. ಹಾಗಾಗಿ ಯಾವದೂ ಫಲಿತಗಳಿಲ್ಲದ ವಿರಸ ದಾಂಪತ್ಯವಾಗಿ ಪರಿಣಮಿಸುವ ಮೂಲಕ ರಾಧಿಕೆಯ ಬದುಕಿಗೆ ಹೊಸ ತಿರುವನ್ನು ನೀಡುತ್ತದೆ. ರಾಧಿಕೆಯ ಅಯ್ಕೆಯಾದ ಶ್ರೀಧರ ಅವರ ತಂದೆಯ ಹತ್ತಿರ ದುಡಿಯುವವನಾಗಿದ್ದರಿಂದ ಶ್ರೀಮಂತ ಬಂಡವಾಳ ಶಾಹಿಯಾದ ಭೂಪಾಲರಾಯರ ವರ್ಗಪ್ರಜ್ಞೆಯ ತಾರತಮ್ಯ ನೀತಿಯಿಂದ ರಾಧಿಕಾಳ ಆಯ್ಕೆ ಅವಳಿಗೆ ಸಿಗದೆ ಹೋಯಿತು. ಜಮಿನ್ದಾರಿ ಕುಟುಂಬಗಳ ಬದಲಾದ ಸ್ವರೂಪವೇ ಆಧುನಿಕ ಬಂಡವಾಳಶಾಹಿ ಕುಟುಂಬಗಳು. ಜೀವನ ಶೈಲಿಯಲ್ಲಿ ಆಧುನಿಕತೆ ಅಳವಡಿಸಿಕೊಂಡರೂ, ಮಹಿಳಾ ಬದುಕಿನ ಕುರಿತು ಮತ್ತದೇ ಸಾಂಪ್ರದಾಯಿಕ ನಿಲುವುಗಳನ್ನೇ ತಳೆಯುತ್ತವೆ. ರಾಧಿಕೆಯ ತಂಗಿಯಾದ ತ್ರಿಶಲೆಯು ತಂದೆ–ತಾಯಿಯ ಅಭಿಪ್ರಾಯದ ವಿರುದ್ಧ ದೊಂಡೀಬಾ ಎನ್ನುವವನ ಜೊತೆಗೆ ಪ್ರೇಮ ವಿವಾಹವಾಗುತ್ತಾಳೆ.

ಪಾರಂಪರಿಕ ನೆಲೆ – – ಮಹಿಳಾ ಅಸ್ತಿತ್ವದ ನಿರಾಕರಣೆ

ಓಂಣಮೋ ಕಾದಂಬರಿಯಲ್ಲಿ ದೇಸಾಯಿ ಮನೆತನಕ್ಕೆ ಸೇರಿದ ಲಕ್ಷುಂಬಾಯಿ, ಪದ್ಮಾವತಿ ಹಾಗೂ ಮುಂದಿನ ತಲೆಮಾರಿನ ಸುನಂದಾ, ನೇಮಿನಾಥನ ಹೆಂಡತಿ ಈ ಇವಗಳೆಲ್ಲವೂ ಸ್ಥಿರಮಾದರಿ ಪಾತ್ರಗಳ ಚಿತ್ರಣಗಳೇ ಆಗಿವೆ. ಈ ದಂಪತಿಗಳು ಮಗ ನೇಮೀನಾಥ ಹೆಂಡತಿಯನ್ನು ಬಿಟ್ಟು ಇಂಗ್ಲೆಂಡಿಗೆ ಹೋದಾಗಿನಿಂದ ತಮ್ಮ ಜೀವನದ ಉಳಿದ ದಿನಗಳನ್ನು ಜೈನ ತತ್ವಗಳಲ್ಲಿ ಪಾಲಿಸುವದರಲ್ಲಿ ಕಳೆದು ತಮ್ಮ ಬದುಕಿಗೆ ಸಾರ್ಥಕ ಕಂಡುಕೊಳ್ಳುತ್ತಾರೆ. ಲಕ್ಷುಂಬಾಯಿ ಆಡ್ಯಂನಿಗೆ ಎಣ್ಣೆ ಸ್ನಾನ ಮಾಡಿಸುವಾಗ ಅವನಲ್ಲಿ ತೀರ್ಥಂಕರ ರೂಪವನ್ನು ಕಾಣುತ್ತಾರೆ.ಲೌಕಿಕದಲ್ಲಿದ್ದು ಅಹಿಂಸೆ, ಅಪರಿಗ್ರಹದಿಂದ ಸಾಂಕೇತಿಕವಾಗಿ ಸಲ್ಲೇಖನ ವ್ರತವನ್ನು ಲಕ್ಷುಂಬಾಯಿ ಆಚರಿಸುವ ಮೂಲಕ, ತಮ್ಮ ದೇಹ ತ್ಯಾಗವನ್ನು ತಮ್ಮಿಚ್ಛೆಯಂತೆ ಸಮ್ಮೇದ ಶಿಖರದಲ್ಲಿಯೇ ಮಾಡುತ್ತಾರೆ.ಈ ಮೂಲಕ ಕೊನೆಯ ಗಳಿಗೆಯಲ್ಲಿ ಋಷಿಸದೃಶ ಬಾಳನ್ನು ಬತಸಿದಂತೆ ನಡೆಸುವಲ್ಲಿ ಪಾತ್ರದ ಅಸ್ತಿತ್ವವಿದೆ. ಅದರಂತೆ ಬೀಜ ಕಾದಂಬರಿಯಲ್ಲಿ, ಸರಸಮ್ಮನವರ ಕುರಿತು ಮಗ ಶ್ರೇಯಾಂಸ ತನ್ನ ತಂದೆ ಹೊಂದಿದ ಹೊರ ಸಂಬಂಧಗಳನ್ನು ತಾಯಿ ಹೇಗೆ ಸಹಿಸಿರಬಹುದು, ತಂದೆ ಜೊತೆಗಿಲ್ಲದೆ ಇರುವ ಸಮಯದಲ್ಲಿ ಅವಳ ಮಾನಸಿಕ ಸ್ಥಿತಿಯನ್ನು ಊಹಿಸಿಕೊಳ್ಳುವುದು ಸಹ ಅಪ್ಪಾಸಾಹೇಬರ ಯೋಚನೆಗಳಂತೆಯೇ ಇದ್ದು ಸರಸಮ್ಮನ ಜೀವನವು ಪದ್ಮಾವತಿಗಿಂತ ದಾಂಪತ್ಯದಲ್ಲಿ ಭಿನ್ನವಲ್ಲದ್ದೇ ಆಗಿದೆ. ಕಾದಂಬರಿಯಲ್ಲಿ ಪದ್ಮಾವತಿ ಅಪ್ಪಾಸಾಹೇಬರ ಕವಿಯಲ್ಲಿ ಣ'ಮೋಕಾರ ಮಂತ್ರವನ್ನು ಹೇಳುವ ಮೂಲಕ ಪಡೆಯುವುದು.ಪದ್ಮಾವತಿ ನಂತರದ ತಲೆಮಾರಿನವಳಾದ ಸುನಂದೆಯ ಪಾತ್ರ ತೀರ ಸಾಂಪ್ರಾದಾಯಿಕವಾದದ್ದು ಪದ್ಮಾವತಿಯಷ್ಟು ಕೂಡ ವೈಚಾರಿಕ ಅಥವಾ ಪ್ರತಿರೋಧದ ನೆಲೆಗಳೂ ಈ ಪಾತ್ರದಲ್ಲಿ ಕಾಣುವುದಿಲ್ಲ. ಗಂಡ ಭರತನ ಬೇಜವಾಬ್ದಾರಿಯುತ ವಿಲಾಸಿ ಜೀವನ, ಅನೇಕ ಹೊರ ಸಂಬಂಧಗಳ ಕುರಿತು ತಟಸ್ಥ ಧೋರಣೆಗಳನ್ನು ತಾಳುತ್ತಾಳೆ.ಅವಳ ಅನಿಸಿಕೆಗಳು ಕಾದಂಬರಿಯಲ್ಲಿ ಮುಚ್ಚಿಹಾಕಲ್ಪಟ್ಟಿವೆ. ರೋಜಾಳ ಮಾತನ್ನು ಹುರುಪಿನಿಂದ ಹೇಳುವ ಸುನಂದಾ ಅದನ್ನು ಅನ್ವಯಿಸಿಕೊಳ್ಳುವಲ್ಲಿ, ತನಗಾಗುವ ಅನ್ಯಾಯಕ್ಕೆ ಮುಕ್ತಿ ಕಾಣುವ ನೆಲೆಯಲ್ಲಿ ಯೋಚಿಸದೆ ಹೋಗುತ್ತಾಳೆ.ಆದ್ದರಿಂದ ಸುನಂದಾಳದು ಸಂಪ್ರದಾಯಕ್ಕೆ, ಅಧೀನತೆಗೆ, ಧರ್ಮಾಂಧತೆಗೆ ಜೋತು ಬಿದ್ದ ಪಾತ್ರ ಎನಿಸುತ್ತಲೇ ಆಡ್ಯಂ, ಭರತ ಆನ್ಯರ್ ಜೊತೆ ಬಿಯರ್ ಕುಡಿಯುವ ಆಧುನಿಕತೆಗೆ ತೆರೆದುಕೊಳ್ಳುವಲ್ಲಿ ಮಾತ್ರ ಅವಳ ಪಾತ್ರ ಸೀಮಿತಗೊಳ್ಳುತ್ತದೆ.

ನೇಮಿನಾಥನ ಹೆಂಡತಿಯ ಪಾತ್ರ ಕಾದಂಬರಿಯಲ್ಲಿ ಎಲ್ಲೂ ಮುನ್ನೆಲೆಗೆ ಬರದೇ ನೇಮಿನಾಥನ ಕುರಿತಾದ ಚರ್ಚೆಗಳ ಸಂದರ್ಭಗಳಲ್ಲಿ ಮಾತ್ರ ಈ ಪಾತ್ರದ ಉಲ್ಲೇಖವಿದೆ.ಶೋಷಿತ ನೆಲೆಯಲ್ಲಿಯೇ ಈ ಪಾತ್ರವನ್ನು ಗ್ರಹಿಸಬಹುದಾಗಿದೆ.ಒಟ್ಟಾರೆಯಾಗಿ ಹೇಳುವುದಾದರೆ ಬಹುತೇಕ ಕಾದಂಬರಿಗಳು ನಾಯಕ ಪ್ರಧಾನವಾದ ಕ್ರಮದಿಂದಲೇ ಸ್ಪಷ್ಟಗೊಳ್ಳುತ್ತದೆ.ಕೇವಲ ಪ್ರಾಸಂಗಿಕವಾಗಿ ಬರುವ ಮಹಿಳಾ ಪಾತ್ರಗಳನ್ನು ಪುರುಷ ಬದುಕಿಗೆ ಪೂರಕವಾಗಿ ಇವೆ ಎಂದು ಹೇಳುತ್ತವೆ ಆದರೆ ಇಂತಹ ಸಂಗತಿಗಳಿಗೆ ಅಪವಾದಗಳು ಇಲ್ಲದಿಲ್ಲ ಎಂಬುದಕ್ಕೆ ಶಾಂತಿನಾಥರ ಬರಹಗಳು ಸಾಕ್ಷಿ.ಏಕೆಂದರೆ ಕಥನಾಯಕರ ಮನಸ್ಸಿನ ತೊಳಲಾಟಗಳನ್ನು ನಿರೂಪಿಸುವ ಕಥನದ ಕ್ರಮವು ಮಹಿಳಾ ಮನಸ್ಥಿತಿಯನ್ನು ಬಿಚ್ಚಿಡುವ ಆಸ್ಥೆಯನ್ನು ತೋರದೆ ಲೋಕಗ್ರಹಿಕೆ ಪ್ರಗತಿಪರ ರಚಿತ ಪಾತ್ರಗಳನ್ನು ಇದರಲ್ಲಿ ಕಾಣಬಹುದು.ಹಾಗೆಯೇ ಮುಖ್ಯವಾಗಿ ಬಹುಪಾಲು ಸಂದರ್ಭದಲ್ಲಿ ಮಹಿಳಾ ಸಮಾನತೆಯ ಸಾಧ್ಯತೆಗಳ ಸ್ಪಷ್ಟವಾದ ಚಿತ್ರಗಳನ್ನು ಇದು ಒಳಗೊಂಡಿದೆ.

ಆಧಾರ ಗ್ರಂಥಗಳು

1. ಗಿರಡ್ಡಿ ಗೋವಿಂದರಾಜ, 1975, ನವ್ಯ ವಿಮರ್ಶೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.
2. ಗಿರಡ್ಡಿ ಗೋವಿಂದರಾಜ, 1976, ಕನ್ನಡ ಕಾದಂಬರಿಯಲ್ಲಿ ನವ್ಯತೆ ಸ್ನೇಹ ಪ್ರಕಾಶನ, ಬೆಂಗಳೂರು.
3. ಗಿರಡ್ಡಿ ಗೋವಿಂದರಾಜ, 1987, ಕಾದಂಬರಿ ವಸ್ತು ಮತ್ತು ತಂತ್ರ, ಸ್ನೇಹ ಪ್ರಕಾಶನ, ಬೆಂಗಳೂರು.
4. ಗಿರಿಜಾಶಾಸ್ತ್ರಿ 2000, ಆಧುನಿಕ ಕನ್ನಡ ಸಣ್ಣ ಕಥೆಗಳು ಒಂದು ಸ್ತ್ರೀವಾದಿ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
5. ನಾರಾಯಣ ಕೆ.ವಿ, 2010, ತೊಂಡು ಮೇವು ಕಂತೆ ಐದು, ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು.
6. ಪುಟ್ಟಯ್ಯ ಬಿ.ಎಮ್, 2010, ಸಂಶೋಧನೆ ತಾತ್ವಿಕ ಆಯಾಮಗಳು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
7. ಪೂರ್ಣಚಂದ್ರ ತೇಜಸ್ವಿ ಕೆ.ಪಿ. 2009, ವಿಮರ್ಶೆಯ ವಿಮರ್ಶೆ, ಪುಸ್ತಕ ಪ್ರಕಾಶನ, ಬೆಂಗಳೂರು.
8. ಪ್ರಭಾವತಿ ಎಸ್.ವಿ. 2002, ಕನ್ನಡ ಮಹಿಳಾ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು, ಪ್ರಭಾವತಿ ಪ್ರಕಾಶನ ಕುವೆಂಪುನಗರ, ಬೆಂಗಳೂರು.
9. ತಾರಿಣಿ ಶುಭದಾಯಿನಿ, 2007, ಹೆಡೆಯಂತಾಡುವ ಸೊಡರು, ರೂಪ ಪ್ರಕಾಶನ, ಮೈಸೂರು.
10. ತಿರುಮಲೇಶ ಕೆ.ವಿ.1989, ಅಸ್ತಿತ್ವವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

11. ಜವರಯ್ಯ ಮ.ನ. 2008, ದಲಿತ ಬಂಡಾಯ ಸಾಹಿತ್ಯ ಸಿದ್ಧಾಂತದ ನೆಲೆಗಳು, ಬಹುಜನ ಮಾಧ್ಯಮ ಕೇಂದ್ರ, ಮೈಸೂರು.
12. ಶ್ರೀಮತಿ ಎಚ್.ಎಸ್. 2012, ಸ್ತ್ರೀವಾದ ತಾತ್ವಿಕತೆ, ಪ್ರಗತಿ ಗಾಫಿಕ್ಸ್, ಬೆಂಗಳೂರು.
13. ಶ್ರೀಮತಿ ಎಚ್.ಎಸ್. 2012, ಸ್ತ್ರೀವಾದ ಅನ್ವಯಿಕತೆ, ಪ್ರಗತಿ ಗಾಫಿಕ್ಸ್, ಬೆಂಗಳೂರು.
14. ಶಿವಾನಂದ ಎಸ್. ವಿರಕ್ತಮಠ, 2010, ಮಹಿಳೆ ಮತ್ತು ಧರ್ಮ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
15. ಶ್ರೀಮತಿ ಎಚ್.ಎಸ್. (ಸಂ) 2006, ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
16. ಶ್ರೀಮತಿ ಎಚ್.ಎಸ್. 2007, (ಅನು) 2007, ದ ಸೆಕೆಂಡ್ಸ ಸೆಕ್ಸ್ ಒಂದು ಕನ್ನಡ ಓದು ಅಧ್ಯಯನ, ಮಂಡಲಿ ಕಾವ್ಯ ಮಂಡಲ, ಬೆಂಗಳೂರು.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

Original Article

ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಚೇತನ

ಶ್ರೀಮತಿ ಶ್ರೀದೇವಿ ಖೋತ
ಉಪನ್ಯಾಸಕರು,
ಕನ್ನಡ ವಿಭಾಗದ ಮುಖ್ಯಸ್ಥರು, ಬಸವಜ್ಯೋತಿ
ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಪದವಿ
ಮಹಾವಿದ್ಯಾಲಯ ನನದಿ–591244,
ತಾ॥ ಚಿಕ್ಕೋಡಿ

Manuscript ID:
JRD -2026-180428
ISSN: 2230-9578
Volume 18
Issue 4(II)
Pp.93-95
April 2026
Submitted: 12 Mar. 2026
Revised: 27 Mar. 2026
Accepted: 14 Apr. 2026
Published: 30 April 2026

ಸಾರಲೇಖ :

ಸಾಹಿತ್ಯವು ಸಮಾಜದ ಕನ್ನಡಿ ಎಂದಾದರೆ, ಆ ಕನ್ನಡಿಯಲ್ಲಿ ಸ್ತ್ರೀಯರ ಪ್ರತಿಬಿಂಬ ಹೇಗಿದೆ ಎಂಬುದನ್ನು ಪ್ರಶ್ನಿಸುವ ದೃಷ್ಟಿಕೋನವೇ ಸ್ತ್ರೀವಾದ. ಮೌನದಲ್ಲಿದ್ದ ಮನಸ್ಸು ಮಾತನಾಡಲು ಆರಂಭಿಸಿದಾಗ – ಅದೇ ಸಾಹಿತ್ಯವಾಗುತ್ತದೆ. ಮೌನದಲ್ಲಿದ್ದ ಸ್ತ್ರೀಯರ ಮನಸ್ಸು ಧ್ವನಿಯಾದಾಗ – ಅದೇ ಸ್ತ್ರೀವಾದ.ಕನ್ನಡ ಸಾಹಿತ್ಯವು ಒಂದು ಸಮೃದ್ಧ ಪರಂಪರೆ. ಅದು ಕೇವಲ ಪದಗಳ ಸಂಕಲನ ಅಲ್ಲ, ಅದು ಬದುಕಿನ ಅನುಭವಗಳ ಸಂಗ್ರಹವಾಗಿದೆ. ಈ ಸಾಹಿತ್ಯದಲ್ಲಿ ಕಾಲಾನುಸಾರವಾಗಿ ಹೊಸ ಚಿಂತನೆಗಳು ಮೂಡಿ ಬಂದಿವೆ. ಅವುಗಳಲ್ಲಿ ಸ್ತ್ರೀವಾದವು ಅತ್ಯಂತ ಮಹತ್ವದ ಚಿಂತನೆಯಾಗಿದೆ.ಸ್ತ್ರೀವಾದವು ಕೇವಲ ಹಕ್ಕುಗಳ ಬೇಡಿಕೆ ಅಲ್ಲ. ಅದು ಆತ್ಮಗೌರವದ ಘೋಷಣೆ. ಸ್ತ್ರೀಯರ ಮನಸ್ಸಿನ ಮಾತುಗಳನ್ನು ಸಮಾಜದ ಮುಂದೆ ತರುವ ಶಕ್ತಿಯಾಗಿದೆ. ಮಾನವೀಯ ಗೌರವದ ಚಳುವಳಿಯಾಗಿದೆ.

ಮುಖ್ಯಪದಗಳು : ಸ್ತ್ರೀವಾದ, ಪುರುಷ ಪ್ರಾಧಾನ್ಯತೆ, ಸಮಾನತೆ, ಶೋಷಣೆ, ಲಿಂಗಸಮಾನತೆ, ಲಿಂಗತಾರತಮ್ಯ

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀಯರ ಪಾತ್ರ:

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀಯರ ಪಾತ್ರವು ಹೆಚ್ಚು ಮಿತವಾಗಿದೆ. ಅವಳು ಸಾಮಾನ್ಯವಾಗಿ ತಾಯಿ, ಪತ್ನಿ ಹಾಗೂ ಮಗಳಾಗಿ ಮಾತ್ರ ಚಿತ್ರಿತರಾಗಿದ್ದಾರೆ. ಅವರ ವ್ಯಕ್ತಿತ್ವವು ಕುಟುಂಬದ ಸುತ್ತಲೂ ಮಾತ್ರ ಸೀಮಿತವಾಗಿತ್ತು ಎಂದು ಹೇಳಬಹುದು.

ಆ ಕಾಲದ ಕಾವ್ಯಗಳು ಮತ್ತು ಪುರಾಣಗಳಲ್ಲಿ ಸ್ತ್ರೀಯರ ತ್ಯಾಗ, ನಿಷ್ಠೆ ಮತ್ತು ಭಕ್ತಿಯನ್ನು ಪ್ರಶಂಸಿಸಲಾಗಿದೆ. ಆದರೆ ಅವರ ವೈಯಕ್ತಿಕ ಭಾವನೆಗಳು, ಆಸೆಗಳು ಮತ್ತು ಕನಸುಗಳಿಗೆ ಹೆಚ್ಚಿನ ಸ್ವಾತಂತ್ರ್ಯ ಮತ್ತು ಪ್ರಾಮುಖ್ಯತೆ ಇರಲಿಲ್ಲ. ಸ್ತ್ರೀಯರ ಜೀವನವು ಬಹುಪಾಲು ಪುರುಷರ ಅಧೀನವಾಗಿಯೇ ಕಾಣಿಸಿಕೊಂಡಿತು.

ಆದರೆ ಕೆಲವು ಕೃತಿಗಳಲ್ಲಿ ಸ್ತ್ರೀಯರ ಧೈರ್ಯ ಮತ್ತು ದೃಢತೆ ಕೂಡ ಎದ್ದು ಕಾಣುತ್ತದೆ. ಇದರಿಂದ ಸ್ತ್ರೀಯರ ಶಕ್ತಿ ಸಂಪೂರ್ಣವಾಗಿ ನಿರ್ಲಕ್ಷ್ಯಗೊಂಡಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಸ್ತ್ರೀಯರು ಕುಟುಂಬದ ಕಂಬಂದಂತೆ ಕಾರ್ಯ ನಿರ್ವಹಿಸಿ, ಸಂಸ್ಕಾರ ಮತ್ತು ಮೌಲ್ಯಗಳ ರಕ್ಷಣೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದರು.

ಸ್ತ್ರೀಯರು ತಾಯಿ, ಪತ್ನಿ ಮತ್ತು ಪುತ್ರಿಯಾಗಿ ಸಮಾಜದ ಮೂಲ ಸ್ತಂಭವಾಗಿದ್ದರು.
ಕುಟುಂಬದ ಆಂತರಿಕ ವ್ಯವಸ್ಥೆಯನ್ನು ಸಮತೋಲನಗೊಳಿಸುವ ಸಂಪೂರ್ಣ ಜವಾಬ್ದಾರಿ ಅವರ ಮೇಲೆಯೇ ಇತ್ತು.
ತಮ್ಮ ಸಂಸ್ಕೃತಿ ಮತ್ತು ಧರ್ಮವನ್ನು ಮುಂದಿನ ತಲೆಮಾರಿಗೆ ಹಸ್ತಾಂತರಿಸುವಲ್ಲಿ ಅವರ ಪಾತ್ರ ಮಹತ್ತರವಾಗಿತ್ತು.

ಪಂಪ, ರನ್ನ, ಜನ್ನ ಮೊದಲಾದ ಕವಿಗಳ ಕೃತಿಗಳಲ್ಲಿ ಸ್ತ್ರೀಯರ ಪಾತ್ರ ಶಿಷ್ಟ ಮತ್ತು ಮೌಲ್ಯಾಧಾರಿತವಾಗಿದೆ. ಧಾರ್ಮಿಕ ನಿಷ್ಠೆ ಮತ್ತು ಆತ್ಮ ಸಂಯಮದ ಸಂಕೇತಗಳಾಗಿ ಕಾಣಿಸುತ್ತಾರೆ.

ವೀರಶೈವ ಚಳುವಳಿಯಲ್ಲಿ ಸ್ತ್ರೀಯರು ತಮ್ಮ ಭಾವನೆಗಳನ್ನು ಸ್ವತಂತ್ರವಾಗಿ ವ್ಯಕ್ತಪಡಿಸಲು ಆರಂಭಿಸಿದರು. ಅಕ್ಕಮಹಾದೇವಿ, ನೀಲಾಂಬಿಕೆ, ಗಂಗಾಂಬಿಕೆ ಮುಂತಾದ ಶರಣೆಯರು ತಮ್ಮ ವಚನಗಳ ಮೂಲಕ ಆತ್ಮ ಸ್ವಾತಂತ್ರ್ಯವನ್ನು ಸಾಧಿಸಿದರು. ಅಕ್ಕಮಹಾದೇವಿಯ ವಚನಗಳಲ್ಲಿ ಅನುಭವ ಭಕ್ತಿ ಮತ್ತು ಸಾಮಾಜಿಕ ಬಿಗಿಮುಷ್ಠಿಗಳ ವಿರುದ್ಧದ ಧ್ವನಿ ಸ್ಪಷ್ಟವಾಗುತ್ತದೆ. "ಇದು ಹೆಣ್ಣು, ಇದು ಗಂಡು ಎಂಬ ಭೇದವು ಮನಸ್ಸಿನ ಮಾಯೆ"[1] ಈ ಧ್ವನಿಯು ಲಿಂಗವನ್ನು ಸಾಮಾಜಿಕ ನಿರ್ಮಿತಿ ಎಂದು ಗುರುತಿಸುತ್ತದೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಶ್ರೀಮತಿ ಶ್ರೀದೇವಿ ಖೋತ, ಉಪನ್ಯಾಸಕರು, ಕನ್ನಡ ವಿಭಾಗದ ಮುಖ್ಯಸ್ಥರು, ಬಸವಜ್ಯೋತಿ
ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಪದವಿ ಮಹಾವಿದ್ಯಾಲಯ ನನದಿ–591244, ತಾ॥ ಚಿಕ್ಕೋಡಿ

How to cite this article:
ಶ್ರೀಮತಿ ಶ್ರೀದೇವಿ ಖೋತ.*2026).* ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಚೇತನ. *Journal of Research and Development, 18(4(II)), 93–95. https://doi.org/10.5281/zenodo.19396345*

Quick Response Code:
Website: https://jrdrvb.org/
DOI: 10.5281/zenodo.19396345
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

ಆಧುನಿಕ ಯುಗ ಮತ್ತು ಸ್ತ್ರೀವಾದದ ಬೆಳವಣಿಗೆ:

ಕಾಲವು ಬದಲಾಗುತ್ತಿದ್ದಂತೆ ಸಮಾಜದ ದೃಷ್ಟಿಕೋನವೂ ಬದಲಾಗುತ್ತ ಹೋಯಿತು. ಅಕ್ಷರದ ಮೌಲ್ಯ, ಶಿಕ್ಷಣದ ವಿಸ್ತರಣೆ, ಸಾಮಾಜಿಕ ಸುಧಾರಣೆಗಳು ಹಾಗು ಹೊಸ ಚಿಂತನೆಗಳು ಸ್ತ್ರೀಯರಿಗೆ ತಮ್ಮ ಸ್ಥಾನಮಾನವನ್ನು ತಿಳಿದುಕೊಳ್ಳಲು ಸಹಾಯಕವಾದವು.

ಈ ರೀತಿಯ ಬದಲಾವಣೆಗಳು ಕನ್ನಡ ಸಾಹಿತ್ಯದಲ್ಲೂ ಪ್ರತಿಫಲಿಸಲು ಪ್ರಾರಂಭಿಸಿದವು. ಸ್ತ್ರೀಯರು ತಮ್ಮದೇ ಅನುಭವಗಳನ್ನು ಬರೆಯಲು ಆರಂಭ ಮಾಡಿದರು. ಅವರ ಬರಹಗಳಲ್ಲಿ ಕೇವಲ ಭಾವನೆಗಳು ಅಷ್ಟೇ ಇರಲಿಲ್ಲ, ಒಂದು ಹಕ್ಕಿನ ಹೋರಾಟ, ಒಂದು ಅಸ್ತಿತ್ವದ ಹುಡುಕಾಟ ಕಾಣಿಸುತ್ತದೆ.

ಸ್ತ್ರೀವಾದವು ಸಾಹಿತ್ಯವನ್ನು ಪ್ರಶ್ನಿಸುತ್ತದೆ:

"ಏಕೆ ಸ್ತ್ರೀಯರ ಧ್ವನಿ ಮೌನವಾಗಿರಬೇಕು? ಏಕೆ ಅವರ ಕನಸುಗಳಿಗೆ ಮಿತಿಗಳು ಇರಬೇಕು"?[2] ಈ ರೀತಿಯ ಪ್ರಶ್ನೆಗಳೇ ಸಾಹಿತ್ಯದಲ್ಲಿ ಹೊಸ ಚೈತನ್ಯವನ್ನು ತುಂಬಿದ್ದವು.

ಸ್ತ್ರೀವಾದ ಸಾಹಿತ್ಯವು ಸಮಾಜದಲ್ಲಿನ ಅಸಮಾನತೆಯನ್ನು ಪ್ರಶ್ನಿಸುತ್ತದೆ. ಇದು ಸ್ತ್ರೀಯರನ್ನು ಕೇವಲ ಸಹಿಸಿಕೊಳ್ಳುವವರಾಗಿ ನೋಡದೇ ಬದಲಾವಣೆ ತರಬಲ್ಲವರಾಗಿ ಗುರುತಿಸುತ್ತದೆ.

ಸ್ತ್ರೀವಾದದ ಪ್ರಮುಖ ಅಂಶಗಳು:

ಸ್ತ್ರೀವಾದವು ಹಲವು ಪ್ರಮುಖ ಅಂಶಗಳನ್ನು ಒಳಗೊಂಡಿದೆ.

ಸಮಾನತೆ:

ಸ್ತ್ರೀ ಮತ್ತು ಪುರುಷರಿಗೆ ಸಮಾನ ಹಕ್ಕುಗಳು ಇರಬೇಕು ಎಂಬುದು ಸ್ತ್ರೀವಾದದ ಮೂಲ ತತ್ವವಾಗಿದೆ. ಶಿಕ್ಷಣ, ಉದ್ಯೋಗ, ಸಾಮಾಜಿಕ ಸ್ಥಾನಮಾನಗಳಲ್ಲಿ ಸಮಾನವಾದ ಅವಕಾಶಗಳ ಅಗತ್ಯವನ್ನು ಇದು ಒತ್ತಿ ಹೇಳುತ್ತದೆ.

ಸ್ವಾತಂತ್ರ್ಯ:

ಸ್ತ್ರೀಯರಿಗೆ ತಮ್ಮ ಜೀವನದ ನಿರ್ಧಾರಗಳನ್ನು ತಾವೇ ತೆಗೆದುಕೊಳ್ಳುವ ಸಂಪೂರ್ಣ ಹಕ್ಕನ್ನು ಕೊಡಬೇಕು ಅವಳ ಜೀವನವು ಅವರದೇ ಆದ ನಿಯಮಗಳನ್ನು ಹೊಂದಿರಬೇಕು.

ಆತ್ಮಗೌರವ :

ಸ್ತ್ರೀಯರು ತಮ್ಮನ್ನು ತಾವು ಗೌರವಿಸುವುದು ಅತ್ಯಂತ ಮುಖ್ಯವಾಗಿದೆ. ತನ್ನ ವ್ಯಕ್ತಿತ್ವವನ್ನು ಅರಿತುಕೊಳ್ಳುವುದು ಸ್ತ್ರೀವಾದದ ಪ್ರಮುಖ ಅಂಶವಾಗಿದೆ.

ಶೋಷಣೆಯ ವಿರುದ್ಧ ಹೋರಾಟ:

ಸ್ತ್ರೀವಾದವು ಸಮಾಜದಲ್ಲಿನ ಶೋಷಣೆ ಮತ್ತು ಅನ್ಯಾಯಗಳ ವಿರುದ್ಧ ಧ್ವನಿ ಎತ್ತುತ್ತದೆ. ಇದು ಮೌನವನ್ನು ಮುರಿದು ಸತ್ಯವನ್ನು ಹೇಳುತ್ತದೆ.

ಪ್ರಮುಖ ಲೇಖಕಿಯರ ಕೊಡುಗೆ:

ಕನ್ನಡ ಸಾಹಿತ್ಯದಲ್ಲಿ ಅನೇಕ ಮಹಿಳಾ ಲೇಖಕಿಯರು ಸ್ತ್ರೀವಾದದ ಧ್ವನಿಯನ್ನು ಬಲಪಡಿಸಿದ್ದಾರೆ.

1) ತ್ರಿವೇಣಿ :

ಮನೋವೈಜ್ಞಾನಿಕ ಸಮಸ್ಯೆಗಳನ್ನು ತಮ್ಮ ಕಾದಂಬರಿಯ ವಸ್ತುವನ್ನಾಗಿ ಆಯ್ದುಕೊಂಡ ತ್ರಿವೇಣಿಯವರು ಕನ್ನಡ ಕಥೆ–ಕಾದಂಬರಿಗೆ ಹೊಸ ರೂಪವನ್ನು ತಂದು ಕೊಟ್ಟವರು. ಸಮಾಜದ ಸುಧಾರಣೆ, ಸ್ತ್ರೀ ಶಿಕ್ಷಣ, ಸ್ತ್ರೀ ಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯ, ವಿಧವಾ ವಿವಾಹ ಮುಂತಾದ ವಿಷಯಗಳನ್ನು ಎತ್ತಿ ಹಿಡಿದಿದ್ದಾರೆ. ಸಮಾಜದ ಅನೀತಿ, ಅನ್ಯಾಯ, ಬಡತನ, ಅಜ್ಞಾನ, ಹೆಣ್ಣಿನ ಶೋಷಣೆ, ಸಮಾಜದಲ್ಲಿ ಹೆಣ್ಣಿಗೊಂದು ನೀತಿ, ಗಂಡಿಗೊಂದು ನೀತಿ ಇಂತಹ ಎಲ್ಲಾ ನಿಯಮಗಳ ಬಗ್ಗೆ ಪ್ರತಿಭಟನೆಯನ್ನು ಮಾಡುತ್ತಾ, ಸಿಡಿದೆದ್ದಿದ್ದಾರೆ.

ತ್ರಿವೇಣಿಯವರು "ಹೆಣ್ಣಿನ ಅನುಭವ ಸೀಮಿತ; ಅವರು ನಾಲ್ಕು ಗೋಡೆಗಳ ಮಧ್ಯೆ ಇರಬೇಕು"[3] ಎಂದು ಅವರು ಒತ್ತಿ ಹೇಳುತ್ತಿದ್ದರು. ಇವುಗಳಲ್ಲಿ ಸ್ತ್ರೀ ಪಾತ್ರಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುತ್ತಿದ್ದರು. ಸ್ತ್ರೀಯರ ಹಲವಾರು ಸಮಸ್ಯೆಗಳನ್ನು ಸ್ತ್ರೀಯರ ದೃಷ್ಟಿಯಿಂದಲೇ ಕಾಣುತ್ತಿದ್ದುದರಿಂದ ಇವರ ಕಥೆಗಳು ಸ್ತ್ರೀಯರ ಮನಸ್ಸಿನ ಸಂಕೀರ್ಣತೆಯನ್ನು ಸ್ಪಷ್ಟವಾಗಿ ಗುರುತಿಸುತ್ತವೆ.

2) ವೈದೇಹಿ:

ವೈದೇಹಿಯವರ ಸಾಹಿತ್ಯದಲ್ಲಿ ಗ್ರಾಮೀಣ ಸ್ತ್ರೀಯರ ಬದುಕಿನ ಚಿತ್ರಣ ಎದ್ದು ಕಾಣುತ್ತದೆ.

ಹೆಣ್ಣುಮಕ್ಕಳ ಬವಣೆ, ಕ್ರೌರ್ಯ, ತಮ್ಮೊಳಗೇ ಒಬ್ಬರೊಬ್ಬರಿಗೆ ತೋರುವ ಹಿಂಸೆಗಳ ಒಳಮುಖ, ಹೊರಮುಖಗಳನ್ನು ಹತ್ತಿರದಿಂದ ಕಂಡವರು. ಸ್ತ್ರೀ ಲೋಕದ ಅನುಭವದ ಮೂಲಕವೇ ಬದುಕಿನ ಅರ್ಥಗಳನ್ನು ಜಾಲಿಸಲು ಹೊರಟವರು. ಹೀಗಾಗಿ ಹೆಣ್ಣುಮಕ್ಕಳ ಸಾಮಾಜಿಕ ಸ್ಥಿತಿಯಿಂದ ಅವರು ಯಾವ ರೀತಿ ಬದುಕುತ್ತಿದ್ದಾರೆಂದು ಬರವಣಿಗೆಯ ಮುಖಾಂತರ ತೋರಿಸಿಕೊಟ್ಟವರು.

"ಬಿಂದು ಬಿಂದಿಗೆಯು ಹೆಣ್ಣು ಮಕ್ಕಳ ಸಾಂಪ್ರದಾಯಿಕ ಹಾಡಿನ ಗುಣ, ಕಲಾತ್ಮಕತೆಗಳೆರಡನ್ನೂ ಬೆಸೆಯುತ್ತ ಹೊಸದಾಗಿ ವಿಚಾರಗಳನ್ನು ಹೇಳಲು ಪ್ರಯತ್ನಿಸುವ ಕವಿತೆಗಳ ಸಂಕಲನವಾಗಿದೆ"[4].

ವೈದೇಹಿಯರ ಬರಹಗಳು ಸರಳವಾಗಿದ್ದರೂ ಆಳವಾದ ಅರ್ಥವನ್ನು ಹೊಂದಿವೆ.

3) ಸಾರಾ ಅಬೂಬಕರ್:

ಸಮಕಾಲೀನ ರಾಜಕೀಯ, ಸಾಮಾಜಿಕ ಸಮಸ್ಯೆಗಳನ್ನು ವಿಮರ್ಶಿಸುವ ಮತ್ತು ಪ್ರಶ್ನಿಸುವ ಮನೋಭಾವವನ್ನು ಹೊಂದಿದ ಕಾರಣಕ್ಕಾಗಿ ಮುಖ್ಯರಾಗಿರುತ್ತಾರೆ. ಕರಾವಳಿ ಭಾಗದ ಶೋಷಿತ ಮಹಿಳೆಯರ ಮನೋವ್ಯಾಕುಲತೆಯನ್ನು ತಮ್ಮ ಕೃತಿಗಳಲ್ಲಿ ಚಿತ್ರಿಸಿದ್ದಾರೆ.

"ಮಹಿಳೆಯರಿಗೆ ಶಿಕ್ಷಣ ಸಿಗಬೇಕು. ಅದರಲ್ಲೂ ತಾಯಂದಿರಿಗೆ ಅಕ್ಷರದ ಜ್ಞಾನ ಬೇಕು"[5]. ಹಣವನ್ನು ಸರಿಯಾಗಿ ನಿರ್ವಹಿಸಲೂ ಬಾರದ ಮಕ್ಕಳು ಕುಟುಂಬ ಸಮೇತ ಹಾಳಾಗಿದ್ದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಹಾಗಾಗಿ ಮಹಿಳೆಯನ್ನು ಶಿಕ್ಷಣದಿಂದ ವಂಚಿಸುವುದು ಸರಿಯಲ್ಲ ಎಂದು ಸ್ಪಷ್ಟಪಡಿಸಿಸುತ್ತಾರೆ.

ಸಾರಾ ಅಬೂಬಕರ್ ಅವರು ತಮ್ಮ ಬರಹಗಳ ಮೂಲಕ ಸಮಾಜದ ಮಹಿಳೆಯರ ಮೇಲೆ ನಡೆಸುತ್ತಿರುವ ನಿರಂತರ ಶೋಷಣೆಗಳ ವಿರುದ್ಧ ಧ್ವನಿ ಎತ್ತಿದವರು.

4) ಡಾ. ಗೀತಾ ನಾಗಭೂಷಣ:

ಡಾ. ಗೀತಾ ನಾಗಭೂಷಣ ಅವರು ಕನ್ನಡ ಸಾಹಿತ್ಯದಲ್ಲಿ ಪ್ರಮುಖವಾದ ಲೇಖಕಿಯಾಗಿ ಗುರುತಿಸಿಕೊಂಡಿದ್ದಾರೆ. ಶೋಷಿತ ಸಮಾಜದ ಹೆಣ್ಣು ಮಕ್ಕಳ ನೋವು, ದುಃಖ, ಅಸಹಾಯಕತೆಗಳು ಅವರ ಕೃತಿಗಳಲ್ಲಿ ಸ್ಥಾನಗಳಿಸಿದವು. ಅವರೊಳಗಿನ ಬಂಡಾಯಗಾರ್ತಿ ಹಲವು ಕೃತಿಗಳಲ್ಲಿ ಸನಾತನವಾದಿಗಳಿಗೆ ಸವಾಲನ್ನು ಹಾಕಿ ದಂಗೆ ಎದ್ದಳು. ತಮ್ಮ ಬರಣಿಗೆಯ ಮುಖಾಂತರ ಸಾವಿರಾರು ಹೆಣ್ಣು ಮಕ್ಕಳು ಪ್ರತಿನಿಧಿಯಾಗಿ ಅವರ ಮೂಕವೇದನೆಗೆ ದನಿಯಾದರು. ಪಿತೃತ್ವದ ವ್ಯವಸ್ಥೆಯ ವಿರುದ್ಧ ಅವರು ತಮ್ಮ ಬರಹಗಳಲ್ಲಿ ಧೈರ್ಯವಾಗಿ ಧ್ವನಿ ಎತ್ತಿದ್ದಾರೆ. ಮಹಿಳೆಯರ ಹಕ್ಕುಗಳು, ಸ್ವಾತಂತ್ರ್ಯ ಮತ್ತು ವ್ಯಕ್ತಿತ್ವದ ಬೆಳವಣಿಗೆಗೆ ಅವರು ಒತ್ತು ನೀಡಿದ್ದಾರೆ.

ಡಾ. ಗೀತಾ ನಾಗಭೂಷಣ ಅವರ ಸಾಹಿತ್ಯಿಕ ಕೊಡುಗೆ ಕನ್ನಡ ಸಾಹಿತ್ಯದಲ್ಲಿ ಸ್ತ್ರೀಯರ ಧ್ವನಿಯನ್ನು ಬಲಪಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

ಸ್ತ್ರೀವಾದ ಸಾಹಿತ್ಯದ ವೈಶಿಷ್ಟತೆ:

ಸ್ತ್ರೀವಾದ ಸಾಹಿತ್ಯವು ವಿಭಿನ್ನವಾಗಿದೆ. ಇದು ಕಲ್ಪನೆಗಿಂತ ನೈಜ ಅನುಭವಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತದೆ.

- ಸ್ತ್ರೀವಾದ ಸಾಹಿತ್ಯವು ಮೌನವನ್ನು ಮಾತಾಗಿಸುತ್ತದೆ.
- ಈ ಸಾಹಿತ್ಯವು ಹಲವಾರು ಕನಸುಗಳಿಗೆ ದಾರಿದೀಪವಾಯಿತು.
- ಈ ಸಾಹಿತ್ಯವು ಅಸಮಾನತೆಯನ್ನು ಪ್ರಶ್ನಿಸಿತು.
- ಸ್ತ್ರೀವಾದ ಸಾಹಿತ್ಯವು ನೋವನ್ನು ಶಕ್ತಿಯನ್ನಾಗಿ ಬದಲಾಯಿಸಿತು.

ಸ್ತ್ರೀವಾದ ಸಾಹಿತ್ಯದಲ್ಲಿ ಪ್ರತಿಯೊಂದು ಪದವೂ ಒಂದೊಂದು ಅನುಭವದ ಭಾರವನ್ನು ಹೊತ್ತಿರುತ್ತದೆ. ಸ್ತ್ರೀಯರ ಕಥೆ ಹೇಳಿದಾಗಲೇ ಸಮಾಜದ ಕಥೆ ಪೂರ್ಣವಾಗುತ್ತದೆ.

ಸ್ತ್ರೀವಾದ ಮತ್ತು ಸಮಾಜದ ಬದಲಾವಣೆ:

ಸಾಹಿತ್ಯವು ಮನಸ್ಸನ್ನು ಬದಲಿಸುತ್ತದೆ. ಮನಸ್ಸು ಸಮಾಜವನ್ನು ಬದಲಿಸುತ್ತದೆ. ಸ್ತ್ರೀವಾದ ಸಾಹಿತ್ಯವು ಸಮಾಜದ ಮನೋಭಾವವನ್ನು ಬದಲಿಸಲು ಸಹಾಯ ಮಾಡುತ್ತಾ ಸಾಗಿತು. ಸ್ತ್ರೀಯರನ್ನು ಕೇವಲ ಕುಟುಂಬದ ಪಾತ್ರಗಳಿಗೆ ಸೀಮಿತಗೊಳಿಸುವ ಮನೋಭಾವನೆ ನಿಧಾನವಾಗಿ ಬದಲಾವಣೆಯ ದಾರಿಯನ್ನು ಹಿಡಿಯಿತು. ಸಮಾಜದಲ್ಲಿನ ಅನ್ಯಾಯಗಳನ್ನು ಪ್ರಶ್ನಿಸುವ ಮೂಲಕ ಬದಲಾವಣೆಗೆ ದಾರಿ ಮಾಡಿತು.

ಉದಾ: ಮಹಿಳೆಯರ ಹಕ್ಕುಗಳಿಗಾಗಿ ಹೋರಾಟದಿಂದ ಅನೇಕ ಕಾನೂನುಗಳಲ್ಲಿ ಬದಲಾವಣೆಗಳು ಸಂಭವಿಸಿವೆ. ಇದರಿಂದ ಮಹಿಳೆಯರು ಹೆಚ್ಚು ಸ್ವಾವಲಂಬಿಗಳಾಗಿದ್ದು, ಸಮಾಜದ ಅಭಿವೃದ್ಧಿಗೆ ಮಹತ್ವದ ಕೊಡುಗೆಗಳನ್ನು ನೀಡುತ್ತಿದ್ದಾರೆ.

ಇಂದಿನ ಕಾಲದ ಮಹಿಳೆಯರು ವಿಜ್ಞಾನ, ಶಿಕ್ಷಣ, ಕಲೆ, ಕ್ರೀಡೆ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಮಹತ್ತರವಾದ ಸಾಧನೆಗಳನ್ನು ಮಾಡುತ್ತಿದ್ದಾರೆ. ಇದು ಸ್ತ್ರೀವಾದದ ಪರಿಣಾಮವಾಗಿದ್ದು, ಸಮಾಜದ ಒಟ್ಟು ಪ್ರಗತಿಗೂ ಸಹಾಯಕವಾಗಿದೆ.

ಸ್ತ್ರೀವಾದವು ಸಮಾಜದಲ್ಲಿ ಸಮಾನತೆ ಮತ್ತು ನ್ಯಾಯವನ್ನು ಸ್ಥಾಪಿಸಲು ಅಗತ್ಯವಾದ ಚಳುವಳಿಯಾಗಿದೆ. ಸಾಮಾಜಿಕ ಬದಲಾವಣೆಯ ಮೂಲಕ ಮಾತ್ರ ಸಮಾನತೆಯ ಸಮಾಜ ನಿರ್ಮಾಣ ಸಾಧ್ಯವಾಗಿದೆ. ಆದ್ದರಿಂದ ಸ್ತ್ರೀವಾದದ ಚಿಂತನೆಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ಜೀವನದಲ್ಲಿ ಅನುಸರಿಸುವುದು ಬಹಳ ಮುಖ್ಯವಾಗಿದೆ.

ಸ್ತ್ರೀವಾದವು ಬಹಳಷ್ಟು ಸಾಧನೆ ಮಾಡಿದ್ದರೂ ಇನ್ನು ಹಲವಾರು ಸವಾಲುಗಳು ಉಳಿದಿವೆ.

ಪಿತೃತ್ವದ ಮನೋಭಾವನೆ
ಲಿಂಗ ಅಸಮಾನತೆ
ಸಾಮಾಜಿಕ ಒತ್ತಡಗಳು
ಮಹಿಳೆಯರ ಮೇಲೆ ಹಿಂಸೆ
ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ

ಈ ಎಲ್ಲ ಸವಾಲು (ಸಮಸ್ಯೆ)ಗಳನ್ನು ಎದುರಿಸಲು ಸಾಹಿತ್ಯ ಮತ್ತು ಸಮಾಜ ಒಟ್ಟಾಗಿ ಕೆಲಸ ಮಾಡಬೇಕಾಗಿದೆ.

ಸ್ತ್ರೀವಾದ ಕೇವಲ ಒಂದು ಚಳುವಳಿಯಲ್ಲ, ಅದು ಒಂದು ಮನೋಭಾವ. ಸ್ತ್ರೀವಾದವು ಸಾಹಿತ್ಯದ ಹೊಸ ದೃಷ್ಟಿಕೋನವನ್ನು ನೀಡಿದರೆ, ಸಾಹಿತ್ಯವು ಸ್ತ್ರೀವಾದದ ಚಿಂತನೆಗಳನ್ನು ಜನರಿಗೆ ತಲುಪಿಸುತ್ತಿದೆ. ಸ್ತ್ರೀಯರ ಕನಸುಗಳಿಗೆ ರೆಕ್ಕೆ ನೀಡುವ ಶಕ್ತಿಯಾಗಿದೆ. ಸಮಾನತೆ ಇರುವ ಸಮಾಜವೇ ನಿಜವಾದ ಅಭಿವೃದ್ಧಿಯ ಸಮಾಜ. ಸ್ತ್ರೀಯರ ಗೌರವವನ್ನು ಕಾಪಾಡಿದಾಗಲೇ ನಮ್ಮ ಸಂಸ್ಕೃತಿ ಉನ್ನತವಾಗುತ್ತದೆ.

"ಮೌನದಿಂದ ಧ್ವನಿಗೆ,
ಅಸಮಾನತೆಯಿಂದ ಸಮಾನತೆಗೆ,
ನಿರ್ಬಂಧದಿಂದ ಸ್ವಾತಂತ್ರ್ಯಕ್ಕೆ,
ಈ ಪಯಣವೇ ಸ್ತ್ರೀವಾದ,
ಸ್ತ್ರೀ ಎದ್ದಾಗ ಸಮಾಜ ಎದ್ದುಕೊಳ್ಳುತ್ತದೆ".
ಈ ಮೇಲಿನ ನನ್ನ ಸ್ವ ರಚಿತ ಕವನದೊಂದಿಗೆ ಸ್ತ್ರೀವಾದವನ್ನು ಸಮರ್ಥಿಸಿಕೊಳ್ಳುತ್ತೇನೆ.

ಅಡಿ ಟಿಪ್ಪಣಿಗಳು:

1) **ಸಾಲು ದೀಪಗಳು**, ಸಂ. ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ ಮತ್ತು ಪ್ರೊ. ಎಂ.ಎಚ್. ಕೃಷ್ಣಯ್ಯ, 2016, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ಪುಟ ಸಂಖ್ಯೆ: 557.
2) **ಸಾಲು ದೀಪಗಳು**, ಸಂ. ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ ಮತ್ತು ಪ್ರೊ. ಎಂ.ಎಚ್. ಕೃಷ್ಣಯ್ಯ, 2016, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ಪುಟ ಸಂಖ್ಯೆ: 560.
3) ಅದೇ ಪುಟ 561.
4) ಅದೇ ಪುಟ 665.
5) ಅದೇ ಪುಟ 792.

ಆಧಾರ ಗ್ರಂಥಗಳು:

1) ಕನ್ನಡ ಸಾಹಿತ್ಯ ಚರಿತ್ರೆ: ರಂ. ಶ್ರೀ ಮುಗಳಿ.
2) ಶರಣ ಸಾಹಿತ್ಯದ ಸಾಮಾಜಿಕ ಚಿಂತನೆ: ಕನ್ನಡ ಅಧ್ಯಯನ ಪ್ರಬಂಧಗಳು, ಹಂಪಿ ವಿಶ್ವವಿದ್ಯಾಲಯ–1999.
3) ಜಾನಪದ ಹಾಗು ಮಹಿಳಾ ಸಾಹಿತ್ಯ: ಪ್ರಧಾನ ಸಂಪಾದಕರು: ಡಾ. ಪ್ರಕಾಶ ನರಗುಂದ.
4) ನಡುಗನ್ನಡ ಸಾಹಿತ್ಯ ಬಸವಣ್ಣನವರ ರೀತಿಕೆ: ಡಾ. ವಾಯ್.ವಾಯ್. ಕೊಕ್ಕನ್ನವರ.
5) ಸ್ತ್ರೀವಾದ ಸಾಹಿತ್ಯ ವಿಮರ್ಶೆ, ಸಂ. ತೇಜಸ್ವಿನಿ ನಿರಂಜನ ಹಾಗೂ ಸೀಮಂತಿನಿ ನಿರಂಜನ, ಮೈಸೂರು ಚಿಂತನಾ ಪ್ರಕಾಶನ.
6) ಕನ್ನಡ ಸಾಹಿತ್ಯ ಇತಿಹಾಸ ಸಂಪುಟ–I, ಸಂ. ಎ.ವಿ. ನಾವಡ, ಬೆಂಗಳೂರು ಕನ್ನಡ ವಿಶ್ವವಿದ್ಯಾಲಯ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ವೀಣಾ ಶಾಂತೇಶ್ವರ ಕಥನ ಸಾಹಿತ್ಯದಲ್ಲಿ ಸ್ತ್ರೀವಾದಿ ಧೋರಣೆಗಳು

ಶ್ರೀಮತಿ ಆಶಾ, [1]ಡಾ.ಸೋಮಶೇಖರ್ ಎಂ.[2]
[1]ಸಂಶೋಧನಾರ್ಥಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಮೊಳಕಾಲ್ಮೂರು ತಾ, ಚಿತ್ರದುರ್ಗ ಜಿಲ್ಲೆ –577535.
Email-ashahanimi@gmail.com
[2]ಸಹ ಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು
ಮಾನ್ಯತಾ ಕೇಂದ್ರ ವೀರಶೈವ ಮಹಾವಿದ್ಯಾಲಯ, ಬಳ್ಳಾರಿ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೋಕಾ, ಬಳ್ಳಾರಿ
Email-somashekhara.mnaik@gmail.com

Manuscript ID:
JRD -2026-180429
ISSN: 2230-9578
Volume 18
Issue 4(II)
Pp.96-99
April 2026
Submitted:12 Mar. 2026
Revised:27Mar. 2026
Accepted:14Apr.2026
Published:30 April2026

ಸಾರಲೇಖ :

ಸ್ತ್ರೀವಾದವು ಮಹಿಳೆಯರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ಮಾನಸಿಕ ಅಸಮಾನತೆಗಳನ್ನು ಪ್ರಶ್ನಿಸುವ ಚಳುವಳಿಯಾಗಿದ್ದು, ಅದರ ಪ್ರತಿಫಲವನ್ನು ವೀಣಾ ಶಾಂತೇಶ್ವರ ಅವರ ಕಥನಗಳಲ್ಲಿ ಸ್ಪಷ್ಟವಾಗಿ ಕಾಣಬಹುದು. ಈ ಸಂಶೋಧನಾ ಪ್ರಬಂಧವು ಕನ್ನಡ ಸಾಹಿತ್ಯದಲ್ಲಿ ಪ್ರಮುಖ ಕಥನಕಾರರಾದ ವೀಣಾ ಶಾಂತೇಶ್ವರ ಅವರ ಕಥೆಗಳಲ್ಲಿ ಮಹಿಳಾ ಪಾತ್ರಗಳ ರೂಪಕ, ಅವರ ಆತ್ಮ ಶೋಧ, ಸ್ವಾತಂತ್ರ್ಯ, ಪಿತೃತ್ವ ವ್ಯವಸ್ಥೆಯ ವಿರುದ್ಧದ ಪ್ರತಿರೋಧ ಹಾಗೂ ಸ್ವಾಭಿಮಾನಿ ಬದುಕಿನ ಆಕಾಂಕ್ಷೆಗಳನ್ನು ಪರಿಶೀಲಿಸಲಾಗಿದೆ.ಈ ಅಧ್ಯಯನದ ಮೂಲಕ ವೀಣಾ ಶಾಂತೇಶ್ವರ ಅವರ ಕಥಾಸಾಹಿತ್ಯವು ಕನ್ನಡ ಸ್ತ್ರೀವಾದಿ ಸಾಹಿತ್ಯದಲ್ಲಿ ಮಹತ್ವದ ಸ್ಥಾನವನ್ನು ಹೊಂದಿದ್ದು, ಮಹಿಳಾ ಜಾಗೃತಿ ಮತ್ತು ಸಾಮಾಜಿಕ ಬದಲಾವಣೆಗೆ ಪ್ರೇರಕ ಶಕ್ತಿಯಾಗಿದೆ ಎಂಬುದನ್ನು ನಿರೂಪಿಸಲಾಗುತ್ತದೆ.

ಮುಖ್ಯ ಪದಗಳು : ಸ್ತ್ರೀವಾದ, ಮಹಿಳೆಯ ಅಂತರಂಗ ಸಂಘರ್ಷ, ಪಿತೃತ್ವ ವ್ಯವಸ್ಥೆ, ಲಿಂಗ ರಾಜಕೀಯ, ಲಿಂಗ ಅಸಮಾನತೆ, ಪ್ರತಿರೋಧ, ಮಹಿಳಾ ಅಸ್ಮಿತ್ವ, ಮಹಿಳಾ ಧ್ವನಿ, ಸ್ವಾತಂತ್ರ್ಯ ಮತ್ತು ಸ್ವಾಯತ್ತತೆ, ದಾಂಪತ್ಯ ಧರ್ಮ

ಕನ್ನಡದ ಸಾಹಿತ್ಯದ ಸಂದರ್ಭದಲ್ಲಿ ಸ್ತ್ರೀವಾದಿ ಚಿಂತನೆಯು ಕಳೆದ ಐದು ದಶಕಗಳಿಂದ ಚರ್ಚಿತವಾಗುತ್ತಿರುವ ವಿಷಯ. ಹೆಣ್ಣು ಬಯಸುವುದು ಸಮಾನತೆಯನ್ನು ಎಂಬ ಸತ್ಯ ಜಾಗತಿಕ ಮಟ್ಟದ್ದಾಗಿದೆ. ಸ್ತ್ರೀವಾದ ಸಮಾಜದಲ್ಲಿ ಒಂದು ಅಘೋಷಿತ ಮೌನ ಸಂಗ್ರಾಮವಾಗಿ ಬೆಳೆಯುತ್ತಾ ಬಂದಿದೆ.ವಿಮೋಚನೆಯ ಆಶಯ ಎಲ್ಲೆಡೆ ಸಹಜವಾಗಿ ಕಂಡು ಬಂದಿದೆ.ಆದರೆ ವಿಮೋಚನೆ ಪಡೆಯಲು ಸ್ತ್ರೀಯರು ಆರಿಸಿಕೊಂಡ ಮಾರ್ಗಗಳು ಭಿನ್ನ.ಅಂತಹ ಸ್ತ್ರೀವಾದಿಗಳ ಧೋರಣೆಗಳು ಸಮಾಜದಲ್ಲಿ ಮಹಿಳೆಯರಿಗೆ ಸಮಾನ ಹಕ್ಕು, ಗೌರವ ಮತ್ತು ಸ್ವಾತಂತ್ರ್ಯ ದೊರಕಬೇಕು ಎಂದು ಒತ್ತಾಯಿಸುವ ಚಿಂತನೆಗಳಾಗಿದ್ದವು.

ಸ್ತ್ರೀವಾದವು ಮಹಿಳೆಯರು ಎದುರಿಸುವ ಅನ್ಯಾಯ, ಅಸಮಾನತೆ ಮತ್ತು ಶೋಷಣೆಗೆ ವಿರೋಧವಾಗಿ ನಿಂತು ಸಮಾನತೆಯನ್ನು ಸ್ಥಾಪಿಸಲು ಪ್ರಯತ್ನಿಸುತ್ತದೆ.ಮಹಿಳೆ ತನ್ನ ಅಸ್ಮಿತೆಯನ್ನು ಅರಿಯುವ ಮೂಲಕ ಸಮಾಜದಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುವ, ಹಾಗೂ ಅದನ್ನು ಪ್ರತಿಪಾದಿಸುವ ಒಂದು ಧೋರಣೆ ಇದಾಗಿದೆ. ಇದು ಸ್ತ್ರೀಪರ ಹಕ್ಕುಗಳ ಹೋರಾಟವಾದರೂ ಅದು ಪುರುಷದ್ವೇಷಿ ನಿಲುವಲ್ಲ ಎನ್ನುವುದು ಮುಖ್ಯ. ಸ್ತ್ರೀವಾದಿಗಳು ಹೆಣ್ಣಿನ ಸಾಧ್ಯತೆ, ಸಾಮರ್ಥ್ಯಗಳನ್ನು ಗುರುತಿಸುವ ಅವಕಾಶ ಮಾಡಿಕೊಡುತ್ತಾರೆ. "ಮಹಿಳೆಯೊಬ್ಬಳು ಸಂವಿಧಾನದಲ್ಲಿ ಒಬ್ಬ ಪ್ರಜೆಯಾಗಿ ಪುರುಷನಿಗೆ ಲಭ್ಯವಾಗಿರುವ ಮೂಲಭೂತ ಹಕ್ಕುಗಳನ್ನು ಅವನಷ್ಟೇ ಸಮರ್ಪಕವಾಗಿ ಬಳಸಿಕೊಂಡು ತನ್ನ ವ್ಯಕ್ತಿತ್ವವನ್ನುಅರಳಿಸಿಕೊಂಡು, ಸಬಲೀಕೃತ ಹೆಣ್ಣಾಗಿ ರೂಪುಗೊಳ್ಳುವ ಕಡೆಗೆ ಕರೆ ನೀಡುತ್ತಾರೆ. ಸಿದ್ಧಮಾದರಿಯ ಪಾತ್ರಗಳಲ್ಲಿ ಮಾತ್ರಹೆಣ್ಣನ್ನು ಚಿತ್ರಿಸುವ ವಿಚಾರವನ್ನು ವಿರೋಧಿಸುತ್ತಾರೆ."[1]

ಕನ್ನಡದಲ್ಲಿ ಮಹಿಳಾ ಬರವಣಿಗೆಯನ್ನು ಸ್ತ್ರೀವಾದಿ ತಾತ್ವಿಕತೆಯ ಸಂಕರಕ್ಕೊಳಗು ಮಾಡಿ ಹೊಸ ಚಹರೆಯನ್ನು ರೂಪಿಸಿದ ಲೇಖಕಿ ವೀಣಾ ಶಾಂತೇಶ್ವರ, ಎಪ್ಪತ್ತು ಎಂಬತ್ತರ ದಶಕದಲ್ಲಿ ಸ್ತ್ರೀವಾದವನ್ನು ಬದುಕಿನ ಶೋಧನೆಯ ಕಣ್ಣಾಗಿಸಿಕೊಂಡು ಬರೆದ ವೀಣಾ ಶಾಂತೇಶ್ವರ ಕಥನಗಳು ಕನ್ನಡದಲ್ಲಿ ಸ್ತ್ರೀವಾದಿ ತಾತ್ವಿಕತೆಯನ್ನು ಮರುರೂಪಿಸಿದವು. ನವ್ಯ ಸಾಹಿತ್ಯದ ಕಾಲಘಟ್ಟದಲ್ಲಿ ಬರವಣಿಗೆ ಪ್ರಾರಂಭಿಸಿದ ವೀಣಾ ಶಾಂತೇಶ್ವರ ನವ್ಯ ಲೇಖಕರಿಗಿಂತ ಭಿನ್ನವಾದ ರೀತಿಯಲ್ಲಿ ಹೆಣ್ಣಿನ ಸಹಜ ಸತ್ವದ ಹುಡುಕಾಟವನ್ನು ತಮ್ಮ ಬರಹಗಳಲ್ಲಿ ನಿರ್ಭಿಡೆಯಿಂದ ಕಾಣಿಸಿದರು. ಇವರ ಬರಹದ ಕುರಿತು ಎಂ.ಡಿ.ಒಕ್ಕುಂದ ಅವರ ಮಾತು ಹೀಗಿದೆ." 'ಹೆಣ್ಣು' ಎಂದರೇನು? ಎಂಬ ಪ್ರಶ್ನೆಯನ್ನು ಹೆಣ್ಣು ಎದುರಿಸಿಕೊಳ್ಳುವುದೆಂದರೆ ಪರಂಪರಾಗತವಾಗಿ ಉದ್ದೇಶಪೂರ್ವಕವಾಗಿ ಸೃಷ್ಟಿಕರಿಸಿಕೊಳ್ಳುವ ಹೊಸ ದಾರಿಯ ಹುಡುಕಾಟವಾಗಿತ್ತು.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಶ್ರೀಮತಿ ಆಶಾ, ಸಂಶೋಧನಾರ್ಥಿ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೊಳಕಾಲ್ಮೂರು ತಾ, ಚಿತ್ರದುರ್ಗ ಜಿಲ್ಲೆ –577535.

How to cite this article:
ಶ್ರೀಮತಿ ಆಶಾ, ಡಾ.ಸೋಮಶೇಖರ್ಎಂ.,(2026)ವೀಣಾ ಶಾಂತೇಶ್ವರ ಕಥನ ಸಾಹಿತ್ಯದಲ್ಲಿ ಸ್ತ್ರೀವಾದಿ ಧೋರಣೆಗಳು. *Journal of Research and Development, 18(4(II)), 96–99. https://doi.org/10.5281/zenodo.19396385*

Quick Response Code:
Website: https://jrdrvb.org/
DOI: 10.5281/zenodo.19396385

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

1 **ಡಾ.ಡಿ.ಮಂಗಳಾ ಪ್ರಿಯದರ್ಶಿನಿ –ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ – ಪುಟ 32**

ಇಂತಹ ಸಂಕ್ರಮಣ ಕಾಲದ ಸವಾಲನ್ನು ಬರಹದ ಕೇಂದ್ರವಾಗಿಸಿಕೊಂಡು ಸಮರ್ಥವಾದ ಚಹರೆಯನ್ನು ರೂಪಿಸಿದವರು ವೀಣಾ ಶಾಂತೇಶ್ವರ, ಹಾಗಾಗಿ ಇವರ ಕಥನಗಳಿಗೆ ಚಾರಿತ್ರಿಕ ಮಹತ್ವ ಇದೆ".[2]

ವೀಣಾ ಶಾಂತೇಶ್ವರವರು ಈ ರೀತಿಯ ಪುರುಷಪ್ರಧಾನ ಸಮಾಜದಲ್ಲಿ ಪುರುಷನಿರ್ಮಿಸಿದ ಮೌಲ್ಯಗಳಿಗೆ ವಿರುದ್ಧವಾಗಿ ಬರೆಯಲು ತೊಡಗಿದರು. ಪುರುಗೃಹಿಕೆಯಾಚೆ ನಿಂತು ಸ್ತ್ರೀಯ ಗ್ರಹಿಕೆಯಲ್ಲಿ ನಿಂತು ಪುರುಷನನ್ನು ನೋಡುತ್ತಾರೆ..ಇವರಿಗಿಂತ ಹಿಂದಿನ ಮತ್ತು ಸಮಕಾಲೀನ ಲೇಖಕಿಯರು ಬರೆದ ಕಥೆ, ಕಾದಂಬರಿಗಳ ಮೂಲಕ ನೋಡಿದರೆ ಅವರೆಲ್ಲರಿಗಿಂತ ವೀಣಾರವರು ಭಿನ್ನವಾಗುತ್ತಾ ಹೆಂಗಸರನ್ನು ಅವರು ಇರುವ ಹಾಗೆ, ಯಾರ ನಿರೀಕ್ಷೆಗಳಿಗೂ ತಲೆಬಾಗದೆ, ಯಾವ ರಿಯಾಯಿತಿಗಳನ್ನು ತೋರಿಸದೆ ಚಿತ್ರಿಸಿದ್ದು ವೀಣಾರವರ ಕಥೆಗಳ ವೈಶಿಷ್ಟ್ಯ.

ವೀಣಾಶಾಂತೇಶ್ವರವರು ಮುಳ್ಳುಗಳು, ಕೊನೆಯದಾರಿ, ಕವಲು, ಹಸಿವು, ಬಿಡುಗಡೆ ಐದು ಕಥಾಸಂಕಲನಗಳನ್ನು ಬರೆದಿದ್ದು.ಗಂಡಸರು, ಶೋಷಣೆ,ಬಂಡಾಯ ಇತ್ಯಾದಿ ಎಂಬ ಎರಡು ಕಿರುಕಾದಂಬರಿಗಳನ್ನು ಬರೆದಿದ್ದು.ಇವರ ಎಲ್ಲ ಕಥೆಗಳು ಸ್ತ್ರೀಕೇಂದ್ರಿತವಾದವುಹಾಗೂ ಸ್ತ್ರೀವಾದಿ ಧೋರಣೆಗಳನ್ನೇ ಬಿಂಬಿಸುವಂತವು. ಅವರ ಗಂಡಸರು ಎಂಬ ಕಾದಂಬರಿ ಹಾಗೂ ಅವರ ಐದು ಕಥಾಸಂಕಲನಗಳಲ್ಲಿಯ ಆಯ್ದ ಕಥೆಗಳ ಮೂಲಕ ಹಲವು ಸ್ತ್ರೀವಾದಿ ಧೋರಣೆಗಳನ್ನು ಗುರುತಿಸುವ ಒಂದು ಸಣ್ಣ ಪ್ರಯತ್ನವೇ ಲೇಖನದ ಆಶಯವೆಂದರೆ ತಪ್ಪಲ್ಲ.ದೇಹದ ಸ್ವಾಯತ್ತತೆ ಎಂಬ ಮಾತು ಗಂಡಸರಿಗೆ ತೀರಾ ಸಹಜವಾಗಿ ಎಂಬಂತೆ ದಕ್ಕಿತಾದರೆ, ಹಾಗೊಂದು ಹಕ್ಕು ಹೆಂಗಸರಿಗೂ ದೊರೆಯಬೇಕಿದೆ ಎಂಬುದಕ್ಕಾಗಿ ಸ್ತ್ರೀವಾದಿಗಳು ಅಂದಿನಿಂದ ಇಂದಿನವರೆಗೂ ಹಾದಿಗಳನ್ನು ಹುಡುಕುತ್ತಲೇ ಬಂದಿದ್ದಾರೆ. ಗಂಡಸರು ಕಾದಂಬರಿಯಲ್ಲಿ ಶಾಂತಿ ಎಂಬ ಅವಿವಾಹಿತ ಉದ್ಯೋಗಸ್ಥ ಯುವತಿ ತನ್ನ ಬದುಕಿನಲ್ಲಿ ಬಂದ ಶಂಕರ, ಮಠದ್, ರಮಾಕಾಂತ್, ಜಾನ್ ಅಶೋಕ ಕುಮಾರ್ ಹೀಗೆ ಸಾಲಾಗಿ ಬಂದ ನಾಲ್ವರು ಪುರುಷರ ಪ್ರೀತಿಯಲ್ಲಿಯೂ ಇವಳು ಪ್ರಾಮಾಣಿಕತೆಯನ್ನು ಕಾಣದೇ ಹೋಗುತ್ತಾಳೆ ಎಂಬುದನ್ನು ಕಾದಂಬರಿ ತಿಳಿಸುತ್ತದೆ. ಕಲಿತು ವೈಚಾರಿಕ ಪ್ರಜ್ಞೆಯನ್ನು ಅಗಾಧ ರೀತಿಯಲ್ಲಿ ಬೆಳೆಸಿಕೊಂ ಶಾಂತಿಗೆ ಸ್ವೀಯ ಸ್ವಾತಂತ್ರ್ಯಚಿಂತನೆಯನ್ನು ಗೌರವಿಸುವ ತನಗೆ ಬೇರೆ ಹೆಣ್ಣಿನ ಸಂಪರ್ಕ, ಸಂಬಂಧಗಳಿದ್ದರೂ ಹೆಣ್ಣು ಮಾತ್ರಕನ್ಯೆಯಾಗಿರಬೇಕೆಂದು ಬಯಸುವ, ಸುಳ್ಳು ಸುಳ್ಳೇ ಪ್ರೀತಿಯ

2**ಎಂ.ಡಿ.ಒಕ್ಕುಂದ – ಲೇಖನ. ಸ್ತ್ರೀ ಸಾಹಿತ್ಯದ ಕ್ಷಿತಿಜಗಳ ವಿಸ್ತರಿಸಿದ ಕಥೆಗಾರ್ತಿ ಪ್ರಜಾವಾಣಿ,ಫೆಬ್ರುವರಿ 22, 2015**

ನಾಟಕವನ್ನಾಡುವ, ತನಗೆ ಬಂದ ಹೆಣ್ಣು ತಾನುಹೇಳಿದಂತೆಯೇ ಕೇಳಬೇಕೆಂಬ ಸರ್ವಾಧಿಕಾರಿ ಮನೋಭಾವವನ್ನು ತೋರಿಸುವ ಗಂಡಿನ ಕರಾಳ ಮುಖಗಳು ಕಾಣಿಸುತ್ತವೆ. ಇದರಿಂದ ಭ್ರಮನಿರಸನಗೊಂಡ ಶಾಂತಿ, ಪ್ರೀತಿಯ ವಿಷಯದಲ್ಲಿ ತನ್ನ ಭಾವುಕತೆಯನ್ನು ಬಿಟ್ಟು, ಪ್ರೀತಿ ಇಲ್ಲದೆಯೂ ಗಂಡಿನೊಡನೆ ದೈಹಿಕ ಸಂಬಂಧ ಬೆಳೆಸುವ ನಿರ್ಭಾವುಕ, ಯಾಂತ್ರಿಕ ಸ್ಥಿತಿಗೆ ತಲುಪುತ್ತಾಳೆ. ಪುರುಷ ನಿರ್ಮಿತ ಸಮಾಜದಲ್ಲಿನ ಮೌಲ್ಯಗಳಿಗೆ ತನ್ನದೇ ಆದ ನೆಲೆಯಲ್ಲಿ ವಿರೋಧ ವ್ಯಕ್ತಪಡಿಸುತ್ತಾಳೆ.

'ಅವಳ ಸ್ವಾತಂತ್ರ್ಯ 'ಕಥೆಯು ಲಿಂಗ ರಾಜಕಾರಣವನ್ನು ಮಾರ್ಮಿಕವಾಗಿ ಚಿತ್ರಿಸುತ್ತದೆ. ಲಿಂಗ ರಾಜಕಾರಣವು ಪಿತೃಪ್ರಧಾನ ಸಮಾಜದ ಕಾರ್ಯರೂಪ.ಇಲ್ಲಿ ಅಧಿಕಾರದ ಹಂಚಿಕೆ. ಕಾನೂನು, ವಿವಾಹ, ವಿಚ್ಛೇದನ, ವಾರಸತ್ವ, ಕೆಲಸದ ಹಕ್ಕುಗಳು ಭಾಷೆ ಮತ್ತು ಸಂಸ್ಕೃತಿ,ಶಿಕ್ಷಣ ಎಲ್ಲ ನಿಯಂತ್ರಣ ಪುರುಷನದಾಗಿದ್ದು ಪರಂಪರಾಗತವಾಗಿ ಹೆಣ್ಣನ್ನು ತುಳಿಯುತ್ತ ಬಂದಿರುವ ಕೌಟುಂಬಿಕ ವ್ಯವಸ್ಥೆಯ ಆಳದ ಒಳಗೆ ಹುದುಗಿರುವ ಕ್ರೌರ್ಯವನ್ನು ತಿಳಿಸುತ್ತದೆ. ಕಥೆಯ ನಾಯಕಿ ವಿಮಲಾ ಗೃಹಿಣಿ,ಸುಶಿಕ್ಷಿತೆ, ಉದ್ಯೋಗಸ್ಥೆ . ಈಕೆ ಭಾರತೀಯ ಎಲ್ಲಾ ವಿವಾಹಿತ ಮಹಿಳೆಯರಂತೆ ಒಳ್ಳೆಯ ತಾಯಿ, ವಿಧೇಯ ಪತ್ನಿ ಮತ್ತು ಮನೆಯ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡಿ ಮುಗಿಸುವ ಕೆಲಸದವಳಂತೆ ತನ್ನ ಜವಾಬ್ದಾರಿ ನಿರ್ವಹಿಸುತ್ತಾಳೆ. ಓದಿ ವಿದ್ಯಾವಂತಳಾಗಿ ನೌಕರಿಯಲ್ಲಿದ್ದರೂ ಸಹ ಈಕೆ ಗಂಡನನ್ನು, ಆತನ ದಬ್ಬಾಳಿಕೆಯನ್ನು ವಿರೋಧಿಸುವುದಿಲ್ಲ . ವಿಮಲಾಳ ಗಂಡ ಶಂಕರನ ಪ್ರಕಾರ ವಿದ್ಯಾವಂತ ಹೆಂಡತಿಯೆಂದರೆ ಮನೆಯ ಕೆಲಸದ ಆಳು."ಹೆಂಡತಿ ಗ್ರಾಜ್ಯುಯೇಟ ಇದ್ದರ ಮಕ್ಕಳ್ನ ಭಲೋತ್ಯಾಗ ಬೆಳಿಸ್ತಾಳಂತ ಕಡಿಮೀ ವರದಕ್ಷಿಣೆ ತಗೊಂಡು ನಿನ್ನ ಲಗ್ನಾದೆ..... ನೀ ಹುಡುಗರಿಗೆ ಸ್ವಲ್ಪವೂ discipline ಕಲಿಸಿಲ್ಲ ನೋಡು" [3] – ಎಂದು ಹೇಳುವ ಮಾತಿನ ಮೂಲಕ ಇವನು ತನ್ನ ಹೆಂಡತಿಯ ಮೇಲೆ ಯಾವ ರೀತಿ ಹಿಡಿತವನ್ನು ಹೊಂದಿರುತ್ತಾನೆ ಎಂಬುದನ್ನು ನಾವು ಗಮನಿಸಬಹುದು.ಆದರೆ ಕಥಾ ನಾಯಕಿ ವಿಮಲಾ ಗಂಡನನ್ನು ವಿರೋಧಿಸುವುದಿಲ್ಲ ಆದರೆ ಕಥೆಯ ಕೊನೆಯ ದೃಶ್ಯ ಆಕೆಗೆ ಸಮಾಜದಲ್ಲಿ ತನ್ನ ಅಸ್ತಿತ್ವವೇನು ಎನ್ನುವುದರ ಅರಿವನ್ನು ಮನಗಾಣಿಸುತ್ತದೆ. ಕಥಾ ನಾಯಕಿ ಅಂತಿಮವಾಗಿ ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಳ್ಳುತ್ತಾಳೆ ಎನಿಸುತ್ತದೆ .ಯಾವುದನ್ನು ರಾಜಿ ಎಂದುಕೊಳ್ಳುತ್ತೇವೋ ಅದು ಆಳದಲ್ಲಿ ಜೀವನಪ್ರೀತಿ ಮತ್ತು ಹೋರಾಟದ ಪಥ ಬದಲಾವಣೆ ಮಾತ್ರ ಎಂದೂ ಗಮನಿಸಬಹುದಾಗಿದೆಯಲ್ಲವೇ?'ಅವಳ ಸ್ವಾತಂತ್ರ್ಯ'ದಂತಹ ಕಥೆ ಇಂತಹ ಬಿಕ್ಕಟ್ಟನ್ನೇ ಧ್ವನಿಸುತ್ತದೆ.

3 ವೀಣಾಶಾಂತೇಶ್ವರ, ನಡೆದದ್ದೇ ದಾರಿ(ಸಮಗ್ರಕಥನಸಾಹಿತ್ಯ)– ಪುಟ 187

"ಕೊನೆಯ ದಾರಿ' ಕಥೆ ಸ್ತ್ರೀಯು ತನ್ನಅಸ್ಮಿತೆಯನ್ನುಅರಿಯುವದನ್ನು ಬಿಂಬಿಸುತ್ತದೆ.ಎಂದರೆ ಮಹಿಳೆ ತನ್ನನ್ನು ತಾನು ಸ್ವತಂತ್ರ ವ್ಯಕ್ತಿಯಾಗಿ ಗುರುತಿಸಿಕೊಳ್ಳುವ ಬಗೆ.ತನ್ನ ದೇಹ, ಮನಸ್ಸು,ಭಾವನೆ, ಹಕ್ಕುಗಳು, ಅನುಭವಗಳು ಮತ್ತು ನಿರ್ಣಯಗಳ ಮೇಲೆ ತನ್ನದೇ ನಿಯಂತ್ರಣ ಹೊಂದಿರುವುದನ್ನು ಕಥಾ ನಾಯಕಿ ಲೀಲಾಳ ಮೂಲಕ ಪ್ರಕಟಿಸುತ್ತದೆ.. ಪ್ರತಿಯೊಬ್ಬ ಹೆಣ್ಣಿನಂತೆ ಲೀಲಾ ಹಲವಾರು ಕನಸುಗಳನ್ನು ಹೊತ್ತು ವಿವಾಹವಾಗುತ್ತಾಳೆ.ಆದರೆ ತನ್ನ ಗಂಡನಲ್ಲಿದ್ದ ಹಿಂಸತ್ವ, ಜಾರತನ, ಕುಡುಕತನ ಇವುಗಳನ್ನು ಕಂಡು ಅವನನ್ನು ದಿಕ್ಕರಿಸುತ್ತಾಳೆ.ತಾಯ್ತನದ ಸಹಜವಾದ ಹಂಬಲ ಅವಳನ್ನು ತೀವ್ರವಾಗಿ ಕಾಡುತ್ತ ಹೋಗುತ್ತದೆ ಅದಕ್ಕಾಗಿ ವೈವಾಹಿಕ ಸಂಬಂಧದಿಂದ ತೀವ್ರ ಹಿಂಸೆ ಅನುಭವಿಸಿದ ಆಕೆ ವಿವಾಹೇತರ ಸಂಬಂದದಿಂದ ಹೇಗಾದರಾಗಲಿ ತನಗೊಂದು ಮಗು ಬೇಕೆಂದು ಪರಿತಪಿಸುತ್ತಾಳೆ.ಸಮಾಜದ ದೃಷ್ಟಿಯಲ್ಲಿ ಲೀಲಾಳ ನಿರ್ಧಾರ ಅಸಹಜವೋ ಅನೈತಿಕವೋ ಆಗಬಹುದು.ಆದರೆ ಅದು ಅವಳ ಆಯ್ಕೆ.ತನ್ನಾಯ್ಕೆಯ ಬದುಕನ್ನು ಆರಿಸಿಕೊಳ್ಳುವದು ವೈಯಕ್ತಿಕ ನೆಲೆಯಲ್ಲಿ ಅಪರಾಧವೇ?ಹೀಗಾಗಿ ತನ್ನನ್ನು ಪ್ರೀತಿಸುತ್ತೇನೆಂದು ಬಂದ ಹಲವು ಗಂಡಸರಲ್ಲಿ ತನ್ನ ಇಂಗಿತವನ್ನು ತಿಳಿಸುತ್ತಾಳೆ.ಆದರೆ ಅವರೆಲ್ಲರಿಗೂ ವಿವಾಹೇತರ ಸಂಬಂಧ ಬೇಕೇ ವಿನಃ ವಿವಾಹೇತರ ಸಂಬಂದದಿಂದ ಜನಿಸುವ ಮಗು ಬೇಡ. ಇವುಗಳೆಲ್ಲದರ ಮಧ್ಯೆ ತನ್ನ ಆಸೆ ಪೂರೈಕೆಗಾಗಿ ಮತ್ತೊಂದು ಅನ್ಯ ಮಾರ್ಗ ಹುಡುಕುವ ಆತ್ಮವಿಸ್ವಾಸದಲ್ಲಿ ಲೀಲಾ ತನ್ನ ತಂದೆಯ ವಯಸ್ಸಿನವರಾದ ಶಂಕರಗೌಡರ ಆಸರೆ ಪಡೆಯುತ್ತಾಳೆ. ತಾನು ಚಿಕ್ಕಂದಿನಿಂದಲು, ಆಡಿ ಬೆಳೆಯುವಾಗ ನೋಡಿದ ಅವರ ಪ್ರೀತಿಯ ಆಳ ಇವುಗಳನ್ನು ನೆನೆದು ಈಗ ತನ್ನ ಜೀವನದಲ್ಲಿ ಬೇರೆ ದಾರಿ ಕಾಣದೆ ಈ "ಕೊನೆಯದಾರಿ' ಆಯ್ಕೆ ಮಾಡುತ್ತಾಳೆ.

ಲೀಲಾ ಇಲ್ಲಿ ಹೆಣ್ಣನ್ನು ಲೈಂಗಿಕಾಸಕ್ತಿಯಿಂದ ನೋಡುವ ಗಂಡುಗಳಿಗಿಂತ ತನ್ನ ಮೇಲೆ ಪ್ರೀತಿ ತೋರುವ ತನ್ನ ತಂದೆಯ ವಯಸ್ಸಿನ ತನ್ನ ತಂದೆಯ ಗೆಳೆಯರಾದ ಶಂಕರ ಗೌಡರನ್ನು ತನ್ನ ಮುಂದಿನ ಬದುಕಿನ ಆಯ್ಕೆ ಮತ್ತು ಸಾಧ್ಯತೆಯಾಗಿ ಆಕೆ ತಿರ್ಮಾನಿಸುವಾಗ ಆ ತೀರ್ಮಾನ ಕೇವಲ ಪುರುಷ ಪ್ರಧಾನ ಸಮಾಜದಲ್ಲಿ ಅಧೀನ ವ್ಯಕ್ತಿತ್ವದ ಹೆಣ್ಣಿಗೆ ಉಳಿಯುವ ಕೊನೆಯ ದಾರಿಯಾಗಿ ಮಾತ್ರ ಕಾಣುತ್ತದೆ. ಲೋಕ ಅವಳನ್ನು ನೋಡಿ ನಗಬಹುದು,ನನ್ನ ಆಯ್ಕೆ ನನ್ನ ಬದುಕು ನನ್ನ ನಿರ್ಧಾರ. ಹೀಗೆ ವೀಣಾ ಅವರ ಕಥೆಗಳು ಇಂಥ ಸಾಕಷ್ಟು ಸಾಧ್ಯತೆಗಳನ್ನು ಹುಡುಕಿಕೊಳ್ಳುತ್ತಲೇ ಹೋದವು.

"ನಿರಾಕರಣೆ" ಕಥೆಯಲ್ಲಿ ಪುರಾಣಾದ ಪ್ರೇಮದ ಸಂಕೇತವಾಗಿರುವ ದುಶ್ಯಂತ ಮತ್ತು ಶಕುಂತಲೆಯ ಸಂಬಧಗಳ ಕುರಿತು ಕತೆಯಲ್ಲಿ ಹೊಸ ವ್ಯಾಖ್ಯೆ ದೊರೆಯುತ್ತದೆ. ಒಂದು ಕಾಲದಲ್ಲಿ ತಾನೇ ತಿರಸ್ಕರಿಸಿದ ಶಕುಂತಲೆಯನ್ನು ದುಷ್ಯಂತ ಮರು ಭೇಟಿಯಾಗುತ್ತಾನೆ.ತನ್ನದಲ್ಲದ ತಪ್ಪಿಗೆ ಆತನಿಂದ ತಿರಸ್ಕೃತಳಾಗಿ ಅವಮಾನಿತಳಾಗಿದ್ದ ಶಕುಂತಲೆ ಜೀವ ಇಲ್ಲದಿರುವ ಉಂಗುರ ಕಳೆದು ಹೋಯಿತೆಂಬ ಕ್ಷುಲ್ಲಕ ನೆಪದಿಂದ ಒಬ್ಬ ಗಂಡಸು ತಾನು ಪ್ರೀತಿಸಿ, ಫಲಿಸಿದ ಹೆಣ್ಣನ್ನು ದೂರ ಮಾಡುವುದಾದರೆ ಆ ಪ್ರೀತಿಗೆ ಅರ್ಥವಿಲ್ಲ ಎಂಬ ಗಟ್ಟಿ ನಿರ್ಧಾರಕ್ಕೆ ಬರುತ್ತಾಳೆ. ತನ್ನನ್ನು ಸಂದೇಹಿಸಿದವನನ್ನು ತಾನು ಮತ್ತೆ ತನ್ನ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಅತ್ಮಸಾಕ್ಷಿಗೆ ವಿರುದ್ದವಾಗಿ ವರ್ತಿಸಿ ಆತನೊಡನೆ ಬಾಳಲಾರೆ ಎಂದು ದುಶ್ಯಂತನನ್ನು ನಿರಾಕರಿಸುತ್ತಾಳೆ.ಆದರೆ ತಾನು ಮರಳಿ ಬಂದಿರುವುದು ಮಗನಿಗಾಗಿ ಮಾತ್ರ ಎಂದು ತಿಳಿಸಿ ದುಷ್ಯಂತನನ್ನು ಭ್ರಮಾಲೋಕದಿಂದ ವಾಸ್ತವಕ್ಕೆ ಮರಳಿಸಿದಳು. ಹೆಣ್ಣಿನ ಮಧುರ ಭಾವನೆಗಳನ್ನು ಎಗ್ಗಿಲ್ಲದೆ ಹೊಸಕಿ ಹಾಕಿ ನಂತರ ಬಂದು ಕ್ಷಮೆ ಕೇಳುವ ಗಂಡಿನ (ದುಷ್ಯಂತ) ಮನೋಭಾವವನ್ನು ಮತ್ತು ಗಂಡು ಏನೇ ಮಾಡಿದರೂ ಆಕೆ ಕ್ಷಮಿಸಿಯೇ ಕ್ಷಮಿಸುತ್ತಾಳೆಂಬ ಗಂಡಿನ ಖಚಿತ ನಂಬಿಕೆಗೆ ತನ್ನ ಧಿಕ್ಕಾರವನ್ನು ಸೂಚಿಸುವ ಮೂಲಕ ಗಂಡಿನ ದಾಷ್ಟ್ಯವನ್ನು ತಣ್ಣಗೆ ಪ್ರತಿರೋಧಿಸುತ್ತಾಳೆ.

"ಬಿಡುಗಡೆ" ಕಥೆಯು ಹೆಣ್ಣಿನ ಪಾಲಿಗೆ ಬಿಡುಗಡೆ,ಮುಕ್ತಿ ಎನ್ನುವುದು ಎಂತಹದ್ದುಎಂಬುದನ್ನು ಕಥೆಯ ನಾಯಕಿ ಸರೋಜಳ ಮೂಲಕ ವ್ಯಕ್ತವಾಗುತ್ತದೆ. ಈಕೆಯ ಗಂಡನ ಸಾವಿನೊಂದಿಗೆ ಸರೋಜಳ ಅಂತರಗದಲ್ಲಿನ ವಿವಿಧ ಭಾವನೆಗಳು ತೆರೆದುಕೊಳುತ್ತವೆ. ಗಂಡನ ಸಾವಿನ ದುಃಖದಿಂದ ಸರೋಜಳಿಗೆ ಶಾಕ್ ಆಗಿದೆಯೆಂದು ಹೊರಗಿನ ಜನ ಮಾತನಾಡಿಕೊಳ್ಳುತ್ತಾರೆ.ಆದರೆ ಸರೋಜಳ ಮನಸ್ಸಿತಿಯೇ ಬೇರೆಯಾಗಿರುತ್ತದೆ, ತನ್ನನ್ನು ವಿವಾಹವಾದವನು ಸತ್ತು ಹೋಗಿದ್ದಾನೆ, ಮೂರು ಮಕ್ಕಳನ್ನು ಹುಟ್ಟಿಸಿದವನು, ಮೂವತ್ತೈದು ವರ್ಷ ತನ್ನ ಜೊತೆ ಬಾಳಿದವನು.ಬಾಳಿ ತನ್ನ ಕನಸುಗಳನ್ನು ಕನಸುಗಳಾಗಿಯೇ ಉಳಿಸಿದಾತ ಇಂದು ಸತ್ತಿದ್ದಾನೆ ಎಂಬ ವಿಚಾರ ಆಕೆಗೆ ವಾಸ್ತವದಲ್ಲಿ ತಿಳಿದಿದೆ.

ಗಂಡ ಸತ್ತ ಈ ಸಂದರ್ಭದಲ್ಲಿ ಆಕೆಗೆ ಮೈ–ಮನಸ್ಸು ಹಗುರವಾದಂತಹ ಅನುಭವವಾಗುತ್ತದೆ.ಒಂದು ರೀತಿಯ ಬಿಡುಗಡೆಯ ಭಾವವನ್ನು ಅನುಭವಿಸುತ್ತಾಳೆ.ತಾನು ಇದುವರೆವಿಗೂ ಅನುಭವಿಸಿದ ಎಲ್ಲಾ ನೋವು, ಅಪಮಾನಗಳಿಂದ, ಹಿಂಸೆಗಳಿಂದ, ನಿರಾಶೆಯಿಂದ ತನಗಾದ ಅನ್ಯಾಯದಿಂದ, ಗಂಡನ ದಬ್ಬಾಳಿಕೆಯಿಂದ ಕಳೆಚಿಕೊಂಡಂತಹ ಮನೋಭಾವ ಆಕೆಯಲ್ಲಿ ಕಂಡು ಬರುತ್ತದೆ. ವಾಸ್ತವದಲ್ಲಿ ಇತರರಂತೆ ಅಥವಾ ಅದಕ್ಕೂ ಹೆಚ್ಚಿನ ದುಃಖ ತನಗಾಗಬೇಕು ಆದರೂ ತಾನು ದುಃಖಿಸುತ್ತಿಲ್ಲವೆಂಬುದಕ್ಕೆ ಕಾರಣವೂ ಈಕೆಗೆ ತಿಳಿದಿದೆ. ಆಕೆಗೆ ದುಃಖವಾಗುತ್ತಿದೆ, ಗಂಡ ಸತ್ತಿದ್ದಕ್ಕಲ್ಲ .ಆತ ಸಾಯಿಸಿದ ತನ್ನ ಅಸಂಖ್ಯ ಕನಸುಗಳಿಗಾಗಿ ಮತ್ತು ತನ್ನ ವ್ಯಕ್ತಿತ್ವದ ಕೊಲೆಗಾಗಿ ದುಃಖಿಸುತ್ತಾಳೆ.ಗಂಡ ಸತ್ತದು ಸರೋಜಗೆ ಬಿಡುಗಡೆಯ ಭಾವವನ್ನು ತರುತ್ತದೆ. ಹೆಣ್ಣಿನ ಬಿಡುಗಡೆಯ ನೆಲೆ ಎಂದು ಪ್ರತಿಪಾದಿತವಾಗಿದ್ದ ಆಧುನಿಕತೆಯು ಅವಳಿಗೆ ಬಿಡುಗಡೆಯನ್ನು ಸಾಧ್ಯವಾಗಿಸಿತೇ? ಎಂಬ ಪ್ರಮೇಯವನ್ನು ಬದುಕಿನ ವಿವಿಧ ಸಂದರ್ಭದಲ್ಲಿಟ್ಟು ನೋಡುವ ಪ್ರಯತ್ನವನ್ನು ಕಥನದ ಮೂಲಕ ಮಾಡಿದರು.

ಪೊಳ್ಳು ದಾಂಪತ್ಯವೊಂದು ಕೊನೆಗೊಂಡಾಗ ಹೆಣ್ಣಿಗಾಗಲಿ ಗಂಡಿಗಾಗಲಿ ನಿರುಮ್ಮಳ ಭಾವ ಸಹಜವಾದಂತೆ, ತನ್ನ ಅಸ್ತಿತ್ವ, ವ್ಯಕ್ತಿತ್ವ, ಭಾವ, ಬಯಕೆ, ಬುದ್ದಿ, ಕೊನೆಯಿರದ ದುಡಿಮೆ, ತ್ಯಾಗ ಈ ಯಾವುದಕ್ಕೂ ಕವಡೆ ಕಿಮ್ಮತ್ತು ಕೊಡದ, ತನ್ನ ಅಕಾರಣ ಅಹಂಕಾರದ ಬಗ್ಗೆ ಎಂದೂ ಸ್ವವಿಮರ್ಶೆ ಮಾಡಿಕೊಳ್ಳದ, ಸಾಯುವ ತನಕವೂ ಇದೇ ಪುರುಷಾಹಂಕಾರವನ್ನೇ ಸಾಧಿಸುತ್ತ ಬಂದ ಗಂಡನ ಸಾವಿನ ಬಗ್ಗೆ ಇವಳು ತೋರಿಸುವ ಪ್ರತಿಕ್ರಿಯೆಯನ್ನು ತಪ್ಪು ಎಂದು, ಅಮಾನವೀಯ ಎಂದು ಕರೆಯಲು ಸಾಧ್ಯವಿದೆಯೆ?

"ಹೀಗೊಂದು ಕಥೆಯ"ಯು ಅಂತರ್ಗತವಾಗಿರುವ ಮಾತೃ ವಾತ್ಸಲ್ಯ ಕುರಿತು ವ್ಯವಸ್ಥೆಯ ಆಶಯಗಳು ಹಾಗೂ ಆಧುನಿಕ ಮಹಿಳೆಯ ಬದಲಾದ ಮನೋಧರ್ಮ ಸೂಚಿಸುತ್ತವೆ. ಈ ಕಥೆ ದೇಹ ರಾಜಕಾರಣವನ್ನು ವಿಡಂಬಿಸುತ್ತದೆ.ಇಲ್ಲಿ ಬರುವ ಗಂಡು–ಹೆಣ್ಣಿಗೆ ಹೆಸರಿಲ್ಲ. ಇವರಿಬ್ಬನ ನಡುವೆ ಸಂಬಂಧಕ್ಕೂ ಹೆಸರಿಲ್ಲ. ಇವಳ ಒಬ್ಬ ಸಹದ್ಯೋಗಿ ಅನಿರೀಕ್ಷಿತವಾಗಿ ಜೊತೆಯಾದವನು.ಇಬ್ಬರೂ ಮುಂದೆ ಹತ್ತು ವರ್ಷಗಳ ಕಾಲ ಯಾವುದೇ ಸಂಬಂಧದ ಹೆಸರಿಲ್ಲದೆ ಜೊತೆಯಲ್ಲಿ ಬದುಕುತ್ತಾರೆ. ಈ ರೀತಿಯ ಜೀವನದಲ್ಲಿ ಬದುಕುತ್ತಿದ್ದ ಇವರ ಜೀವನದಲ್ಲಿಅನಿರೀಕ್ಷಿತವಾಗಿ ಒಂದು ಘಟನೆ ನಡೆಯುತ್ತದೆ.ಹತ್ತು ವರ್ಷಗಳ ನಂತರ ಆಕೆ ಬಸುರಿಯಾಗುತ್ತಾಳೆ ಆಕೆಯಲ್ಲಿ ತಾಯ್ತನದ ಬಯಕೆಗಳು ಚಿಗುರೊಡೆಯುತ್ತವೆ. ಈ ವಿಷಯವನ್ನು ಕೇಳಿದ ಆತ..ಆತನ ಪ್ರಕಾರ ಮಗುವಾದರೆ ಅವರ ಎಲ್ಲಾ ಸ್ವಾತಂತ್ರ್ಯವು ಬಂಧಿಯಾದಂತೆ.ಮಗು ಹೆರಬೇಕಾದರೆ ಗಂಡ–ಹೆಂಡತಿ ಆಗಿರಬೇಕು ಎಂಬುದು ಆತನ ಅಭಿಪ್ರಾಯ.ಮಗು ಹೆರುವುದು ಹೆಣ್ಣಿನ ಜನ್ಮಸಿದ್ದ ಹಕ್ಕು ಎಂಬುದು ಈಕೆಯ ಅಭಿಪ್ರಾಯ.ಆದರೆ ಈಕೆ ಅವನನ್ನು ಏನು ಕೇಳುವುದಿಲ್ಲ, ಯಾವುದಕ್ಕೂ ಒತ್ತಾಯಿಸುವುದಿಲ್ಲ ಎಂದು ಹೇಳಿ ಈ ರೀತಿ ಹೇಳುತ್ತಾಳೆ."ಏನಿಲ್ಲ ಬಹಳೆ ಸಿಂಪಲ್, ನನ್ನ ಹೊಟ್ಟೆಯಲ್ಲೊಂದು ಮಗು ರೂಪ ತಳೆಯುತ್ತದೆ. ನನಗದು ಜೀವ ಸಹಿತವಾಗಿ ಬೇಕು

ಇಷ್ಟೇ"[4] ಇವಳ ಮಾತುಗಳನ್ನು ಕೇಳಿದ ಅವನಿಗೆ ಇಷ್ಟು ವರ್ಷಗಳು ತಮ್ಮ ಸಂಬಂಧದ ಬಗ್ಗೆ ಜನರು ಮಾತನಾಡುತ್ತಿದ್ದರು ಎಂಬುದನ್ನು ಮರೆತವನಂತೆ ಇದೀಗ ಅದರ ಬಗ್ಗೆ ಯೋಚಿಸಿ ಚಿಂತಿತನಾಗುತ್ತಾನೆ. ಆತನಿಗೆ ಕಾಡುವ ಭಯ ಈಕೆಗೆ ಕಾಡುವುದಿಲ್ಲ. ಈ ಕಾರಣದಿಂದಲೇ ಆತ ವರ್ಗಮಾಡಿಸಿಕೊಂಡು ದಿಲ್ಲಿಗೆ ಹೋಗುತ್ತಾನೆ..ಎಷ್ಟೋದಿನಗಳ ನಂತರ ಫೋನ ಮಾಡುವ ಆತ ತನ್ನ ತಾಯಿ ತಮ್ಮಿಬ್ಬರ ಜೊತೆ ಲಗ್ನಕ್ಕೆ ಒಪ್ಪಿರುವ ವಿಚಾರ ತಿಳಿಸುತ್ತಾನೆ. ಆದರೆ ಆತನ ಮಾತನ್ನು ಮಧ್ಯದಲ್ಲೇ ತಡೆದು ಕಡ್ಡಿ ಮುರಿದಂತೆ ಈಕೆ ನಿಖರವಾಗಿ

4 **ವೀಣಾಶಾಂತೇಶ್ವರ– ನಡೆದದ್ದೇ ದಾರಿ** (ಸಮಗ್ರಕಥನಸಾಹಿತ್ಯ) **ಪುಟ, 254**

ಹೇಳುತ್ತಾಳೆ."Sorry ನನಗೀಗ ಯಾರ ಅವಶ್ಯಕತೆಯೂ ಇಲ್ಲ, ಯಾತರ ಅವಶ್ಯಕತೆಯೂ ಇಲ್ಲ, ನನಗೆ ಬೇಕಾದುದೆಲ್ಲಾ ನನಗೆ ಸಿಕ್ಕದೆ, ನಿನ್ನ ದಾರಿ ನೀನು ನೋಡಿಕೋ...." [5]ಎಂದು ಆತನ ಇಚ್ಛೆಯನ್ನು ತಳ್ಳಿಹಾಕುವ ಮೂಲಕ ತನ್ನ ಕ್ರಾಂತಿಕಾರಿ ನಡೆಯನ್ನು ವ್ಯಕ್ತಪಡಿಸುತ್ತಾಳೆ.

ಮದುವೆಯಾಗೇ ಮಗು ಹೆರಬೇಕು ಎಂಬ ಸಾಮಾಜಿಕ ನೀತಿಗೆ ಇಲ್ಲಿ ನಾಯಕಿ ವಿರೋಧ ವ್ಯಕ್ತಪಡಿಸುತ್ತಾಳೆ.ಮದುವೆಗೂ ಹೆಣ್ಣು ತಾಯಿಯಾಗುವುದಕ್ಕೂ ಸಂಬಂಧವಿಲ್ಲ ಎನ್ನುವುದು ಆಕೆಯ ವೈಯಕ್ತಿಕ ನಿಲುವು. ಹೆಣ್ಣಿಗೆ ತನ್ನ ವ್ಯಕ್ತಿ ಸ್ವಾತಂತ್ರ್ಯದ ಜೊತೆ ಆಯ್ಕೆ ಸ್ವಾತಂತ್ರ್ಯವು ಮುಖ್ಯ ಎಂಬುದಷ್ಟೇ ಅವಳ ಕ್ರಾಂತಿಕಾರಕ ವ್ಯಕ್ತಿತ್ವವೂ ಮುಖ್ಯ ಎಂಬುದು ನಿರೂಪಿತವಾಗಿದೆ. ಹೆಣ್ಣಿನ ಲೈಂಗಿಕತೆಯನ್ನು ಅಪಮೌಲ್ವಿಕರಿಸಿದ ವ್ಯವಸ್ಥೆಯ ತಂತ್ರವನ್ನು ಮನದಟ್ಟುಗೊಳಿಸುವುದು ಲೇಖಕಿಯ ಆಶಯವಾಗಿದೆ.

ಸಮಾರೋಪ:

ವೀಣಾ ಅವರ ಕಥೆಗಳಲ್ಲಿ ಆಧುನಿಕ ಹೆಣ್ಣು ತನ್ನ ಆಯ್ಕೆಯ ಬದುಕನ್ನು ಕಟ್ಟಿಕೊಳ್ಳಲು ಹೋದಾಗ ತನ್ನ ಎದುರಿಗಿರುವ ಆಯ್ಕೆ, ಸಾಧ್ಯತೆಗಳನ್ನು ಹುಡುಕುತ್ತಲೇ ಹೋಗುತ್ತಾಳೆ. ಹೆಣ್ಣಿನ ಹಿತಾಸಕ್ತಿಯನ್ನು ಅಲಕ್ಷಿಸಿದ ದಾಂಪತ್ಯ ಧರ್ಮವನ್ನು ಹಲವು ಹಾದಿಗಳಿಂದ ಪ್ರವೇಶಿಸಿ ಅಲ್ಲಿರುವ ಅಸಹ್ಯತನವನ್ನು ಶ್ರದ್ಧೆಯಿಂದ ಕಾಣಿಸಿದವರು ವೀಣಾಶಾಂತೇಶ್ವರ.ಆಧುನಿಕತೆಯು ಹಳೆಯ ಹುಣ್ಣುಗಳನ್ನು ಮಾಯಿಸಿತು ಎನ್ನುವಾಗಲೇ ಹೊಸ ಹುಣ್ಣುಗಳು ಕಾಣುವ ಯಾತನಾ ವಲಯವನ್ನುನಿರ್ಭಿಡೆಯಿಂದ ಯಾವ ಮುಚ್ಚು ಮರೆ ಇಲ್ಲದೆ, ಹಿಪಾಕ್ರಸಿ ಇಲ್ಲದೆ ತೋರಿಸಿದವರು ಇವರು.ಹೆಣ್ಣಿನ ಸ್ವಾತಂತ್ರ್ಯ ಮತ್ತು ಘನತೆಯ ಪ್ರಶ್ನೆಗಳನ್ನು ವೀಣಾರವರು ಅತ್ಯಂತ ಸೂಕ್ಷ್ಮವಾಗಿ ಬಿಡಿಸುತ್ತಾರೆ.

ಸ್ತ್ರೀಯ ಒಳತೋಟಿಯನ್ನು ತಮ್ಮ ಕಥೆಗಳಲ್ಲಿ ನಿರ್ವಹಿಸುವಲ್ಲಿ ಲೇಖಕಿಯರ ಬರಹ ಅನನ್ಯವಾದುದು.ಇವರ ಕಥೆಯ ಸ್ತ್ರೀ ಪಾತ್ರಗಳಲ್ಲಿ ನೈತಿಕತೆಯನ್ನು ಚರ್ಚಿಸುವುದಕ್ಕಿಂತ ವಾಸ್ತವವನ್ನುನಿರ್ಭಿಡೆಯಿಂದ ಒಪ್ಪಿಕೊಳ್ಳುವ, ಅದನ್ನು ಎದುರಿಸುವ ಎದೆಗಾರಿಕೆಯನ್ನು ಶೋಧಿಸುವುದು ಮುಖ್ಯವೆನಿಸುತ್ತದೆ. ಅನುವಾದ, ವಿಮರ್ಶೆ, ವೈಚಾರಿಕ ಹೀಗೆ ಹಲವು ಪ್ರಕಾರಗಳಲ್ಲಿ ಬರೆದರೂ ವೀಣಾ ಅವರು ಕನ್ನಡ ಕಥನ ಸಾಧ್ಯತೆಗೆ ನೀಡಿದ ಕೊಡುಗೆ ಗಣನೀಯವಾದದ್ದು

5 –ವೀಣಾಶಾಂತೇಶ್ವರ– ನಡೆದದ್ದೇ ದಾರಿ (ಸಮಗ್ರಕಥನಸಾಹಿತ್ಯ) **ಪುಟ,258**

ಪರಾಮರ್ಶನ ಗ್ರಂಥಗಳು

1 ನಡೆದದ್ದೇ ದಾರಿ (ಸಮಗ್ರಕಥನಸಾಹಿತ್ಯ)–ಸಂ.ವೀಣಾಶಾಂತೇಶ್ವರ– ಮನುಬಳಿಗಾರ, ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು–2011

2ವೀಣಾಶಾಂತೇಶ್ವರ ವಾಚಿಕೆ–ಸಂ–ಡಾ.ಎಂ.ಎಸ್.ಆಶಾದೇವಿ–ನುಡಿಪುಸ್ತಕ,ಬನಶಂಕರಿ, ಬೆಂಗಳೂರು–2011.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

3 ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ –ಡಾ.ಡಿ.ಮಂಗಳಾ ಪ್ರಿಯದರ್ಶಿನಿ – ಕನ್ನಡ ವಿಶ್ವ ವಿದ್ಯಾಲಯ ಹಂಪಿ–2007
4 ಮಹಿಳಾ ಕಥಾ ಸಾಹಿತ್ಯ ತಾತ್ವಿಕ ಸ್ವರೂಪ –ಶಕೀಲಾ ಕೆ. ಕನ್ನಡ ವಿಶ್ವವಿದ್ಯಾಲಯ ಹಂಪಿ.2009

ನಿಯತಕಾಲಿಕೆಗಳು

1ಅಚಲ – ಸಂಪುಟ 22 ಸಂಚಿಕೆ 5 ಜಾಗೃತಿಮಹಿಳಾಅಧ್ಯಯನಕೇಂದ್ರಬೆಂಗಳೂರು
2 ಅನಿಕೇತನ – ಸಂಚಿಕೆ 4 ಸಂಪುಟ 19,ಕರ್ನಾಟಕಸಾಹಿತ್ಯಅಕಾಡೆಮಿತ್ರೈಮಾಸಿಕಏಪ್ರಿಲ್ಟೂನ್, 2018
3 ಋಜುವಾತು – ಸಂಚಿಕೆ 29 ಮಾರ್ಚ್, 1988

Internet Archivehttps://archive.org

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಕನ್ನಡ ಸಾಹಿತ್ಯ ಮತ್ತು ಇತಿಹಾಸ: ಒಂದು ಸಂಶೋಧನಾತ್ಮಕ ವಿಶ್ಲೇಷಣೆ

ಡಾ. ವಜ್ರೇಶ್ವರಿ ಎಸ್. ಮೂರ್ತಿ ಅವರು,
ಸಹಾಯಕ ಪ್ರಾಧ್ಯಾಪಕರು,
ಎಂ.ಇ.ಎಸ್. ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್,
ರಾಜಾಜಿನಗರ, ಬೆಂಗಳೂರು.

Manuscript ID:
JRD -2026-180430
ISSN: 2230-9578
Volume 18
Issue 4(II)
Pp.100-103
April 2026
Submitted:12 Mar. 2026
Revised:27Mar. 2026
Accepted:14Apr.2026
Published:30 April2026

ಸಾರಲೇಖ :

ಈ ಸಂಶೋಧನಾ ಪ್ರಬಂಧವು ಕನ್ನಡ ಸಾಹಿತ್ಯದ ಸಾವಿರಾರು ವರ್ಷಗಳ ಸುದೀರ್ಘ ಪಯಣವನ್ನು ಕೇವಲ ಸಾಹಿತ್ಯಿಕ ದೃಷ್ಟಿಕೋನದಿಂದ ಮಾತ್ರವಲ್ಲದೆ, ಐತಿಹಾಸಿಕ ಮತ್ತು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ವಿಶ್ಲೇಷಿಸಲು ಪ್ರಯತ್ನಿಸುತ್ತದೆ. ಕನ್ನಡ ಸಾಹಿತ್ಯವು ಆರಂಭದಿಂದಲೂ ಕರ್ನಾಟಕದ ರಾಜಕೀಯ ಸ್ಥಿತ್ಯಂತರಗಳು, ಸಾಮಾಜಿಕ ಚಳುವಳಿಗಳು ಮತ್ತು ಧಾರ್ಮಿಕ ಕ್ರಾಂತಿಗಳಿಗೆ ಪೂರಕವಾಗಿ ಬೆಳೆದುಬಂದಿದೆ.

ಸಂಶೋಧನೆಯ ಈ ಭಾಗವು ಪ್ರಾಚೀನ ಶಾಸನ ಸಾಹಿತ್ಯದಿಂದ ಹಿಡಿದು ಆಧುನಿಕ ನವ್ಯ ಸಾಹಿತ್ಯದವರೆಗೆ ಸಾಹಿತ್ಯಿಕ ಕೃತಿಗಳು ಹೇಗೆ ಇತಿಹಾಸದ ದಾಖಲೆಗಳಾಗಿ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ಚರ್ಚಿಸುತ್ತದೆ. ಜೈನ ಯುಗದ ರಾಜಾಶ್ರಯದ ಕಾವ್ಯಗಳು ಅಂದಿನ ಶೌರ್ಯ ಮತ್ತು ಸಂಸ್ಕೃತಿಯನ್ನು ಬಿಂಬಿಸಿದರೆ, 12ನೇ ಶತಮಾನದ ವಚನ ಸಾಹಿತ್ಯವು ಸಾಮಾಜಿಕ ಸಮಾನತೆಯ ಐತಿಹಾಸಿಕ ಹೋರಾಟದ ದಸ್ತಾವೇಜಾಗಿದೆ. ಹರಿದಾಸ ಸಾಹಿತ್ಯದ ನೈತಿಕ ಚೌಕಟ್ಟು ಮತ್ತು ನವೋದಯ ಕಾಲದ ರಾಷ್ಟ್ರೀಯ ಪ್ರಜ್ಞೆಯು ಸಾಹಿತ್ಯವು ಸಮಾಜದ ಚರಿತ್ರೆಯನ್ನು ಹೇಗೆ ರೂಪಿಸುತ್ತದೆ ಎಂಬುದಕ್ಕೆ ನಿದರ್ಶನಗಳಾಗಿವೆ.

ಈ ಅಧ್ಯಯನದ ಮುಖ್ಯ ಉದ್ದೇಶವು ಸಾಹಿತ್ಯಿಕ ಪಠ್ಯಗಳಲ್ಲಿ ಅಡಗಿರುವ ಸಾಮಾಜಿಕ ಇತಿಹಾಸವನ್ನು ಹೊರತೆಗೆಯುವುದು ಮತ್ತು ಬದಲಾದ ಕಾಲಘಟ್ಟಗಳಲ್ಲಿ ಸಾಹಿತ್ಯದ ವಸ್ತು ಹಾಗೂ ಶೈಲಿಯು ಐತಿಹಾಸಿಕ ಅನಿವಾರ್ಯತೆಗಳಿಗೆ ಹೇಗೆ ಸ್ಪಂದಿಸಿದೆ ಎಂಬುದನ್ನು ಸಾಕ್ಷ್ಯಾಧಾರಿತವಾಗಿ ನಿರೂಪಿಸುವುದಾಗಿದೆ. ಅಂತಿಮವಾಗಿ, ಕನ್ನಡ ಸಾಹಿತ್ಯವು ಕೇವಲ ಅಕ್ಷರ ರೂಪದ ಸೃಜನಶೀಲತೆಯಲ್ಲ, ಬದಲಾಗಿ ಅದು ಕನ್ನಡಿಗರ ಸಮಗ್ರ ಬದುಕಿನ ಐತಿಹಾಸಿಕ ನಿರಂತರತೆ ಎಂಬುದನ್ನು ಈ ಪ್ರಬಂಧವು ದೃಢೀಕರಿಸುತ್ತದೆ.

ಪ್ರಮುಖ ಪದಗಳು (Keyword): ಕನ್ನಡ ಸಾಹಿತ್ಯ ಚರಿತ್ರೆ, ಶಾಸನ ಸಾಹಿತ್ಯ, ರಾಜಾಶ್ರಯ, ವಚನ ಕ್ರಾಂತಿ, ಸಾಂಸ್ಕೃತಿಕ ಇತಿಹಾಸ, ಸಂಶೋಧನಾ ವಿಶ್ಲೇಷಣೆ.

1. ಪೀಠಿಕೆ

ಕನ್ನಡ ಭಾಷೆಯು ಭಾರತದ ಅತ್ಯಂತ ಪ್ರಾಚೀನ ಹಾಗೂ ಶಾಸ್ತ್ರೀಯ ಭಾಷೆಗಳಲ್ಲಿ ಒಂದಾಗಿದ್ದು, ಅದರ ಸಾಹಿತ್ಯ ಚರಿತ್ರೆಯು ಕರ್ನಾಟಕದ ಇತಿಹಾಸದೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದೆ. ಯಾವುದೇ ಒಂದು ನಾಡಿನ ಸಾಹಿತ್ಯವು ಆ ಕಾಲದ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ವಿದ್ಯಮಾನಗಳ ಪ್ರತಿಬಿಂಬವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದಾಗ, ಕನ್ನಡ ಸಾಹಿತ್ಯವು ಕೇವಲ ಕಲ್ಪನಾ ವಿಲಾಸವಲ್ಲ; ಅದು ಕನ್ನಡಿಗರ ಸಾವಿರಾರು ವರ್ಷಗಳ ಬದುಕಿನ ದಾಖಲೆಯಾಗಿದೆ.

ಕನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸವನ್ನು ಅಭ್ಯಾಸ ಮಾಡುವಾಗ ನಮಗೆ ಎರಡು ಪ್ರಮುಖ ಆಧಾರಗಳು ಲಭ್ಯವಾಗುತ್ತವೆ: ಒಂದು ಲಿಖಿತ ಸಾಹಿತ್ಯ (ಕೃತಿಗಳು), ಮತ್ತೊಂದು ಪುರಾತತ್ವ ಆಧಾರಗಳು (ಶಾಸನಗಳು). ಕ್ರಿ.ಶ. 450ರ ಹಲ್ಮಿಡಿ ಶಾಸನದಿಂದ ಹಿಡಿದು ಇಂದಿನ ಆಧುನಿಕ ಸಾಹಿತ್ಯದವರೆಗೆ ಕನ್ನಡವು ನಿರಂತರವಾಗಿ ತನ್ನ ಸ್ವರೂಪವನ್ನು ಬದಲಿಸಿಕೊಳ್ಳುತ್ತಾ ಬಂದಿದೆ. ಈ ಬದಲಾವಣೆಯ ಹಿಂದೆ ಕೇವಲ ಭಾಷಾ ಪ್ರೇಮವಲ್ಲದೆ, ಅಂದಿನ ರಾಜಾಶ್ರಯ, ಧಾರ್ಮಿಕ ಚಳುವಳಿಗಳು ಮತ್ತು ಜಾಗತಿಕ ವಿದ್ಯಮಾನಗಳ ಪ್ರಭಾವ ದಟ್ಟವಾಗಿದೆ. ಪಂಪನ ಕಾವ್ಯಗಳಲ್ಲಿನ ವೀರತ್ವ, ವಚನಕಾರರ ಸಾಮಾಜಿಕ ಕ್ರಾಂತಿ, ಹರಿದಾಸರ ಭಕ್ತಿ ಮಾರ್ಗ ಮತ್ತು ನವೋದಯ ಕಾಲದ ರಾಷ್ಟ್ರೀಯ ಪ್ರಜ್ಞೆ— ಇವೆಲ್ಲವೂ ಆಯಾ ಕಾಲದ ಐತಿಹಾಸಿಕ ಅನಿವಾರ್ಯತೆಗಳಿಂದ ಹುಟ್ಟಿಕೊಂಡವುಗಳಾಗಿವೆ. ಇತಿಹಾಸವು ಘಟನೆಗಳನ್ನು ದಾಖಲಿಸಿದರೆ, ಸಾಹಿತ್ಯವು ಆ ಘಟನೆಗಳ ಹಿಂದಿನ ಭಾವನೆಗಳನ್ನು ಮತ್ತು ಮಾನವೀಯ ಮೌಲ್ಯಗಳನ್ನು ಸಂರಕ್ಷಿಸುತ್ತದೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ. ವಜ್ರೇಶ್ವರಿ ಎಸ್. ಮೂರ್ತಿ ಅವರು, ಸಹಾಯಕ ಪ್ರಾಧ್ಯಾಪಕರು, ಎಂ.ಇ.ಎಸ್. ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್, ರಾಜಾಜಿನಗರ, ಬೆಂಗಳೂರು.

How to cite this article:
ಡಾ. ವಜ್ರೇಶ್ವರಿ ಎಸ್. ಮೂರ್ತಿ ಅವರು,(2026)ಕನ್ನಡ ಸಾಹಿತ್ಯ ಮತ್ತು ಇತಿಹಾಸ: ಒಂದು ಸಂಶೋಧನಾತ್ಮಕ ವಿಶ್ಲೇಷಣೆ**.**
Journal of Research and Development, 18(4(II)), 100–103. https://doi.org/10.5281/zenodo.19396435

Quick Response Code:
Website: https://jrdrvb.org/
DOI: 10.5281/zenodo.19396435
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಆದ್ದರಿಂದ, ಕನ್ನಡ ಸಾಹಿತ್ಯವನ್ನು ಇತಿಹಾಸದ ಚೌಕಟ್ಟಿನಲ್ಲಿಟ್ಟು ಅಧ್ಯಯನ ಮಾಡುವುದು ಕೇವಲ ಸಾಹಿತ್ಯಾಭ್ಯಾಸವಲ್ಲ, ಅದು ನಮ್ಮ ಅಸ್ಮಿತೆಯ ಶೋಧನೆಯೂ ಹೌದು. ಈ ಸಂಶೋಧನಾ ಪ್ರಬಂಧವು ಇಂತಹ ವೈವಿಧ್ಯಮಯ ಕಾಲಘಟ್ಟಗಳನ್ನು ಮತ್ತು ಅವುಗಳ ಸಾಹಿತ್ಯಿಕ ಮಹತ್ವವನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸುವ ಪ್ರಯತ್ನ ಮಾಡುತ್ತದೆ.

ಪ್ರಮುಖ ಅಂಶಗಳು:

ವ್ಯಾಪ್ತಿ

ಸಾಹಿತ್ಯವು ಹೇಗೆ ಚರಿತ್ರೆಯನ್ನು ನಿರ್ಮಿಸುತ್ತದೆ ಎಂಬ ದೃಷ್ಟಿಕೋನವನ್ನು ಇಲ್ಲಿ ಒತ್ತಿ ಹೇಳಲಾಗಿದೆ.

ಐತಿಹಾಸಿಕ ನಿರಂತರತೆ:

ಹಲ್ಮಿಡಿ ಶಾಸನದಿಂದ ಆಧುನಿಕ ಯುಗದವರೆಗಿನ ಕೊಂಡಿಯನ್ನು ಸ್ಥಾಪಿಸಲಾಗಿದೆ.

ಸಂಶೋಧನಾ ದೃಷ್ಟಿಕೋನ:

ಸಾಹಿತ್ಯವನ್ನು ಕೇವಲ ಕಥೆ–ಕವನವಾಗಿ ನೋಡದೆ, ಒಂದು 'ಸಾಂಸ್ಕೃತಿಕ ದಸ್ತಾವೇಜು' ಎಂದು ಗುರುತಿಸಲಾಗಿದೆ.

2. ಸಂಶೋಧನಾ ಉದ್ದೇಶಗಳು

ಈ ಸಂಶೋಧನಾ ಬರಹವು ಪ್ರಮುಖವಾಗಿ ಈ ಕೆಳಗಿನ ಗುರಿಗಳನ್ನು ತಲುಪುವ ಉದ್ದೇಶವನ್ನು ಹೊಂದಿದೆ:

ಸಾಹಿತ್ಯ ಮತ್ತು ಇತಿಹಾಸದ ಅವಿನಾಭಾವ ಸಂಬಂಧವನ್ನು ವಿಶ್ಲೇಷಿಸುವುದು: ಕನ್ನಡ ಸಾಹಿತ್ಯವು ಕೇವಲ ಕಲ್ಪನಾಶಕ್ತಿಯ ಫಲವಲ್ಲ, ಬದಲಾಗಿ ಅದು ಆಯಾ ಕಾಲದ ಐತಿಹಾಸಿಕ ಘಟನೆಗಳಿಗೆ ಹೇಗೆ ಪ್ರತಿಕ್ರಿಯಿಸಿದೆ ಎಂಬುದನ್ನು ಸಾದರಪಡಿಸುವುದು.

ಕಾಲಘಟ್ಟಗಳ ಸ್ಥಿತ್ಯಂತರದ ಅಧ್ಯಯನ:

ಪಂಪಪೂರ್ವ ಯುಗದಿಂದ ಆಧುನಿಕ ಯುಗದವರೆಗೆ ಸಾಹಿತ್ಯದ ವಸ್ತು ಮತ್ತು ಪ್ರಕಾರಗಳಲ್ಲಿ ಉಂಟಾದ ಬದಲಾವಣೆಗಳಿಗೆ ಕಾರಣವಾದ ಐತಿಹಾಸಿಕ ಮತ್ತು ಸಾಮಾಜಿಕ ಅಂಶಗಳನ್ನು ಗುರುತಿಸುವುದು.

ಸಾಹಿತ್ಯಿಕ ಆಧಾರಗಳ ಐತಿಹಾಸಿಕ ವಿಶ್ವಾಸಾರ್ಹತೆಯನ್ನು ಪರೀಕ್ಷಿಸುವುದು:

ಶಾಸನಗಳು ಮತ್ತು ಕಾವ್ಯಗಳು ಕರ್ನಾಟಕದ ರಾಜಕೀಯ ಚರಿತ್ರೆ ಮತ್ತು ಭೂಗೋಳವನ್ನು (ಉದಾಹರಣೆಗೆ: ಕವಿರಾಜಮಾರ್ಗದಲ್ಲಿನ ಕರ್ನಾಟಕದ ಗಡಿರೇಖೆ) ದಾಖಲಿಸುವಲ್ಲಿ ಎಷ್ಟರಮಟ್ಟಿಗೆ ಸಹಕಾರಿಯಾಗಿವೆ ಎಂದು ವಿಶ್ಲೇಷಿಸುವುದು.

ಸಾಮಾಜಿಕ ಕ್ರಾಂತಿಗಳ ಸಾಹಿತ್ಯಿಕ ಪ್ರತಿಫಲನವನ್ನು ಅಭ್ಯಾಸ ಮಾಡುವುದು: ವಚನ ಸಾಹಿತ್ಯ ಮತ್ತು ದಲಿತ–ಬಂಡಾಯ ಸಾಹಿತ್ಯದಂತಹ ಚಳುವಳಿಗಳು ಸಮಾಜದ ಶೋಷಿತ ವರ್ಗದ ಧ್ವನಿಯಾಗಿ ಮತ್ತು ಇತಿಹಾಸದ ಮರುಚಿಂತನೆಯಾಗಿ ಹೇಗೆ ಹೊರಹೊಮ್ಮಿವೆ ಎಂಬುದನ್ನು ಅಧ್ಯಯನ ಮಾಡುವುದು.

ಸಾಂಸ್ಕೃತಿಕ ಅಸ್ಮಿತೆಯ ಶೋಧ:

ವಿವಿಧ ಕಾಲಘಟ್ಟಗಳ ಕವಿಗಳು ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಯ ಬಗ್ಗೆ ಹೊಂದಿದ್ದ ಪರಿಕಲ್ಪನೆಗಳು ಇಂದಿನ ಕನ್ನಡದ ಅಸ್ಮಿತೆಯನ್ನು ರೂಪಿಸುವಲ್ಲಿ ವಹಿಸಿರುವ ಪಾತ್ರವನ್ನು ಮೌಲ್ಯಮಾಪನ ಮಾಡುವುದು.

ಸಂಶೋಧನಾ ಪ್ರಶ್ನೆಗಳು

1.ಕನ್ನಡದ ಮೊದಲ ಕೃತಿ 'ಕವಿರಾಜಮಾರ್ಗ'ವು ಅಂದಿನ ರಾಜಕೀಯ ಮತ್ತು ಭಾಷಾ ಪ್ರಜ್ಞೆಯನ್ನು ಹೇಗೆ ಪ್ರತಿನಿಧಿಸುತ್ತದೆ?

2.ವಚನ ಮತ್ತು ದಾಸ ಸಾಹಿತ್ಯವು ಅಂದಿನ ಸಮಾಜದ ಮೌಲ್ಯ ವ್ಯವಸ್ಥೆಯನ್ನು ಹೇಗೆ ಬದಲಿಸಿತು?

ಆಧುನಿಕ ಕನ್ನಡ ಸಾಹಿತ್ಯವು

ಜಾಗತಿಕ ಇತಿಹಾಸದ (ಉದಾ: ವಿಶ್ವಯುದ್ಧಗಳು, ವಸಾಹತುಶಾಹಿ) ಪ್ರಭಾವಕ್ಕೆ ಒಳಗಾದ ಬಗೆ ಹೇಗೆ?

3. ಸಂಶೋಧನಾ ವಿಧಾನ ಪ್ರಬಂಧದ ಸಿದ್ಧತೆಯಲ್ಲಿ ವಿಷಯದ ನಿಖರತೆ ಮತ್ತು ವಿಶ್ವಾಸಾರ್ಹತೆಯನ್ನು ಕಾಪಾಡಿಕೊಳ್ಳಲು ಈ ಕೆಳಗಿನ ಸಂಶೋಧನಾ ವಿಧಾನಗಳನ್ನು ಅನುಸರಿಸಲಾಗಿದೆ:

1.ಐತಿಹಾಸಿಕ ವಿಧಾನ

ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ಕಾಲಾನುಕ್ರಮದಲ್ಲಿ ಅಧ್ಯಯನ ಮಾಡಲು ಈ ವಿಧಾನವನ್ನು ಬಳಸಲಾಗಿದೆ. ಶಾಸನ ಕಾಲದಿಂದ ಆಧುನಿಕ ಯುಗದವರೆಗೆ ಉಂಟಾದ ಸ್ಥಿತ್ಯಂತರಗಳನ್ನು ಐತಿಹಾಸಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

2.ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕ ವಿಧಾನ ಲಭ್ಯವಿರುವ ಸಾಹಿತ್ಯಿಕ ಪಠ್ಯಗಳನ್ನು ಕೇವಲ ವಿವರಿಸುವುದಷ್ಟೇ ಅಲ್ಲದೆ, ಅವುಗಳ ಹಿಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

3.ಪ್ರಾಥಮಿಕ ಆಧಾರಗಳ ಪರಿಶೀಲನೆ ಪೂರಕವಾಗಿ ಹಲ್ಮಿಡಿ ಶಾಸನ, ಕವಿರಾಜಮಾರ್ಗ, ಪಂಪ ಭಾರತದಂತಹ ಮೂಲ ಕೃತಿಗಳು ಮತ್ತು ಅಧಿಕೃತ ಶಾಸನ ದಾಖಲೆಗಳನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

4.ಮಾಧ್ಯಮಿಕ ಆಧಾರಗಳ ಬಳಕೆ

ಖ್ಯಾತ ವಿದ್ವಾಂಸರಾದ ಆರ್. ನರಸಿಂಹಾಚಾರ್ ಅವರ 'ಕರ್ನಾಟಕ ಕವಿಚರಿತೆ', ತೀ.ನಂ.ಶ್ರೀ ಅವರ ವಿಮರ್ಶೆಗಳು ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟಗಳನ್ನು ಆಕರ ಗ್ರಂಥಗಳಾಗಿ ಬಳಸಲಾಗಿದೆ.

ಅಂತರ್–ಶಿಸ್ತೀಯ ಅಧ್ಯಯನ

ಸಾಹಿತ್ಯವನ್ನು ಕೇವಲ ಭಾಷಾ ದೃಷ್ಟಿಕೋನದಿಂದ ನೋಡದೆ,ಇತಿಹಾಸ ಮತ್ತು ಸಮಾಜಶಾಸ್ತ್ರದ ಚೌಕಟ್ಟಿನಲ್ಲಿಟ್ಟು ಅಧ್ಯಯನ ಮಾಡಲಾಗಿದೆ.

5. ಜೈನ ಸಾಹಿತ್ಯ: ರಾಜಾಶ್ರಯ ಮತ್ತು ಕಾವ್ಯ ಮೀಮಾಂಸೆ (ಕ್ರಿ.ಶ. 9 – 11ನೇ ಶತಮಾನ)

ಕನ್ನಡ ಸಾಹಿತ್ಯದ ಸುದೀರ್ಘ ಚರಿತ್ರೆಯಲ್ಲಿ ಜೈನ ಕವಿಗಳ ಕಾಲವನ್ನು 'ಬಂಗಾರದ ಯುಗ'ವೆಂದು ಕರೆಯಬಹುದು. ಈ ಕಾಲದ ಸಂಶೋಧನಾತ್ಮಕ ಅಂಶಗಳು ಇಲ್ಲಿವೆ:

ಧರ್ಮ ಮತ್ತು ವೀರತ್ವದ ಸಮನ್ವಯ: ಈ ಕಾಲದ ಕವಿಗಳು ಲೌಕಿಕ ಮತ್ತು ಅಲೌಕಿಕ ಎಂಬ ಎರಡು ಮಗ್ಗಲುಗಳಲ್ಲಿ ಕಾವ್ಯ ರಚಿಸಿದರು. ಪಂಪನು 'ಆದಿಪುರಾಣ'ದಲ್ಲಿ ತೀರ್ಥಂಕರರ ಕಥೆ ಹೇಳಿದರೆ, 'ವಿಕ್ರಮಾರ್ಜುನ ವಿಜಯ'ದಲ್ಲಿ ಅಂದಿನ ರಾಜಕೀಯ ವ್ಯವಸ್ಥೆ ಮತ್ತು ವೀರತ್ವವನ್ನು ವೈಭವೀಕರಿಸಿದನು.

ರತ್ನತ್ರಯರ ಕೊಡುಗೆ:

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಪಂಪ, ಪೊನ್ನ ಮತ್ತು ರನ್ನ—ಈ ಮೂವರು ಕವಿಗಳು ಕನ್ನಡ ಚಂಪೂ ಶೈಲಿಯನ್ನು ಉತ್ತುಂಗಕ್ಕೇರಿಸಿದರು.ರನ್ನನ 'ಗದಾಯುದ್ಧ'ವು ಕೇವಲ ಒಂದು ಪುರಾಣ ಕಥೆಯಲ್ಲ, ಅದು ಅಂದಿನ ಕಾಲದ ಚಾಲುಕ್ಯ ಅರಸರ ಪರಾಕ್ರಮದ ಸಂಕೇತವೂ ಹೌದು.

ಐತಿಹಾಸಿಕ ಪ್ರಭಾವ: ಈ ಕಾಲದ ಸಾಹಿತ್ಯವು ಅಂದಿನ ರಾಜಾಶ್ರಯದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಕವಿಗಳು ಕೇವಲ ಸಾಹಿತಿಗಳಾಗಿರದೆ, ಅನೇಕ ವೇಳೆ ಸೇನಾಪತಿಗಳೂ ಆಗಿದ್ದರು ಎಂಬುದು ಗಮನಾರ್ಹ ಅಂಶ.

6. ವಚನ ಸಾಹಿತ್ಯ: ಒಂದು ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ರಾಂತಿ (12ನೇ ಶತಮಾನ)

ವಚನ ಸಾಹಿತ್ಯವು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕೇವಲ ಒಂದು 'ಪ್ರಕಾರ'ವಲ್ಲ, ಅದು ಇತಿಹಾಸದ ಹಾದಿಯನ್ನೇ ಬದಲಿಸಿದ ಒಂದು ದೊಡ್ಡ ಚಳುವಳಿ.

ಭಾಷಾ ಪ್ರಜಾಪ್ರಭುತ್ವ:

ಅಲ್ಲಿಯವರೆಗೆ ಸಂಸ್ಕೃತ ಭೂಯಿಷ್ಠವಾದ ಚಂಪೂ ಕಾವ್ಯಗಳಲ್ಲಿ ಅಡಗಿದ್ದ ಸಾಹಿತ್ಯವನ್ನು ವಚನಕಾರರು ಜನಸಾಮಾನ್ಯರ ಆಡುಭಾಷೆಗೆ (ದೇಸಿ) ತಂದರು. ಇದು ಸಾಹಿತ್ಯದ ಇತಿಹಾಸದಲ್ಲಿ ಅತ್ಯಂತ ದೊಡ್ಡ ಭಾಷಾ ಕ್ರಾಂತಿ.

ಅನುಭವ ಮಂಟಪ –

ಐತಿಹಾಸಿಕ ಸಂಸತ್ತು: ಬಸವಣ್ಣನವರ ನೇತೃತ್ವದಲ್ಲಿ ಸ್ಥಾಪನೆಯಾದ 'ಅನುಭವ ಮಂಟಪ'ವು ಜಾತಿ, ಲಿಂಗ ಮತ್ತು ವರ್ಗಭೇದವಿಲ್ಲದ ಸಮಾನತೆಯ ಸಿದ್ಧಾಂತವನ್ನು ಎತ್ತಿ ಹಿಡಿಯಿತು. ಇದು ಜಗತ್ತಿನ ಪ್ರಜಾಪ್ರಭುತ್ವದ ಇತಿಹಾಸದಲ್ಲಿಯೇ ಅಪರೂಪದ ದಾಖಲೆ.

ಕಾಯಕವೇ ಕೈಲಾಸ:

ಆಧ್ಯಾತ್ಮಿಕ ಬದುಕಿನ ಜೊತೆಗೆ ದೈಹಿಕ ಶ್ರಮಕ್ಕೆ ಗೌರವ ನೀಡುವ 'ಕಾಯಕ' ಸಿದ್ಧಾಂತವನ್ನು ಸಾಹಿತ್ಯದ ಮೂಲಕ ಪ್ರತಿಪಾದಿಸಲಾಯಿತು. ಅಕ್ಕಮಹಾದೇವಿ, ಅಲ್ಲಮಪ್ರಭು, ಅಂಬಿಗರ ಚೌಡಯ್ಯ—ಹೀಗೆ ಸಮಾಜದ ವಿವಿಧ ಸ್ತರಗಳಿಂದ ಬಂದ ವಚನಕಾರರು ಇತಿಹಾಸಕ್ಕೆ ಹೊಸ ಆಯಾಮ ನೀಡಿದರು.

7. ದಾಸ ಸಾಹಿತ್ಯ: ಭಕ್ತಿ ಚಳವಳಿ ಮತ್ತು ಜನಜಾಗೃತಿ

ಮಧ್ಯಕಾಲೀನ ಕರ್ನಾಟಕದ ಇತಿಹಾಸದಲ್ಲಿ ಹರಿದಾಸರ ಕೊಡುಗೆ ಅಪಾರವಾದುದು:

ಕೀರ್ತನೆಗಳು ಮತ್ತು ಸಂಗೀತ:

ಪುರಂದರದಾಸರು ಮತ್ತು ಕನಕದಾಸರು ಸಂಗೀತದ ಮೂಲಕ ವೇದಾಂತದ ಸಾರವನ್ನು ಜನರಿಗೆ ತಲುಪಿಸಿದರು.

ಸಾಮಾಜಿಕ ಟೀಕೆ:

ಕನಕದಾಸರ 'ಕುಲ ಕುಲವೆಂದು ಹೊಡೆದಾಡದಿರಿ' ಎಂಬಂತಹ ಸಾಲುಗಳು ಅಂದಿನ ಕಾಲದ ಸಾಮಾಜಿಕ ಅಸಮಾನತೆಯನ್ನು ಕಟುವಾಗಿ ವಿಮರ್ಶಿಸಿದ ಸಂಶೋಧನಾತ್ಮಕ ದಾಖಲೆಗಳಾಗಿವೆ.

8. ಆಧುನಿಕ ಸಾಹಿತ್ಯ: ನವೋದಯ ಮತ್ತು ನವ್ಯ ಯುಗದ ಸ್ಥಿತ್ಯಂತರಗಳು

20ನೇ ಶತಮಾನದ ಆರಂಭವು ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಐತಿಹಾಸಿಕ ತಿರುವನ್ನು ನೀಡಿತು.ಇದು ಕೇವಲ ಸಾಹಿತ್ಯಿಕ ಬದಲಾವಣೆಯಲ್ಲ, ಬದಲಾಗಿ ಜಾಗತಿಕ ಮತ್ತು ರಾಷ್ಟ್ರೀಯ ವಿದ್ಯಮಾನಗಳಿಗೆ ಲಭಿಸಿದ ಸ್ಪಂದನೆಯಾಗಿತ್ತು.

ನವೋದಯ ಮತ್ತು ರಾಷ್ಟ್ರೀಯ ಪ್ರಜ್ಞೆ:

ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದ ಕನ್ನಡದಲ್ಲಿ ಹೊಸ ಮಾದರಿಯ ಕವಿತೆ, ಸಣ್ಣಕಥೆ ಮತ್ತು ಕಾದಂಬರಿಗಳು ಹುಟ್ಟಿಕೊಂಡವು.ಬಿ.ಎಂ.ಶ್ರೀ, ಕುವೆಂಪು ಮತ್ತು ಬೇಂದ್ರೆಯವರ ಸಾಹಿತ್ಯವು ಕನ್ನಡಿಗರಲ್ಲಿ ರಾಷ್ಟ್ರೀಯತೆ ಹಾಗೂ ಕನ್ನಡದ ಅಸ್ಮಿತೆಯನ್ನು ಜಾಗೃತಗೊಳಿಸಿತು.ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಕೃತಿಯು ಆಧುನಿಕ ಕಾಲದಲ್ಲಿಯೂ ಮಹಾಕಾವ್ಯದ ಪರಂಪರೆಯನ್ನು ಹೇಗೆ ಉಳಿಸಿಕೊಳ್ಳಬಹುದು ಎಂಬುದನ್ನು ತೋರಿಸಿಕೊಟ್ಟಿತು.

ನವ್ಯ ಮತ್ತು ಆಧುನಿಕ ಅಸ್ತಿತ್ವವಾದ:

ಸ್ವಾತಂತ್ರ್ಯಾನಂತರದ ಕಾಲಘಟ್ಟದಲ್ಲಿ ಸಮಾಜದ ಜಟಿಲತೆ, ನಗರೀಕರಣ ಮತ್ತು ವ್ಯಕ್ತಿಯ ಆಂತರಿಕ ಸಂಘರ್ಷಗಳು ಸಾಹಿತ್ಯದ ವಸ್ತುವಾದವು. ಯು.ಆರ್. ಅನಂತಮೂರ್ತಿ ಮತ್ತು ಗೋಪಾಲಕೃಷ್ಣ ಅಡಿಗರ ಸಾಹಿತ್ಯವು ಮನುಷ್ಯನ ಅಸ್ತಿತ್ವದ ಪ್ರಶ್ನೆಗಳನ್ನು ಸಂಶೋಧನಾತ್ಮಕವಾಗಿ ವಿಶ್ಲೇಷಿಸಿದವು.

ದಲಿತ–ಬಂಡಾಯ ಸಾಹಿತ್ಯ: ಇತಿಹಾಸದಲ್ಲಿ ಕಡೆಗಣಿಸಲ್ಪಟ್ಟ ವರ್ಗಗಳ ಧ್ವನಿಯಾಗಿ ದೇವನೂರು ಮಹಾದೇವ ಮತ್ತು ಸಿದ್ಧಲಿಂಗಯ್ಯನವರ ಸಾಹಿತ್ಯವು ಮೂಡಿಬಂತು. ಇದು ಸಾಮಾಜಿಕ ಇತಿಹಾಸವನ್ನು ಕೆಳಸ್ತರದಿಂದ ನೋಡುವ ಹೊಸ ದೃಷ್ಟಿಕೋನವನ್ನು ನೀಡಿತು.

9. ಸಂಶೋಧನಾ ಸಾರಾಂಶ ಮತ್ತು ಕಂಡುಕೊಂಡ ಅಂಶಗಳು (ಈಟಿಜುಟಿಥಿ)

ಈ ಅಧ್ಯಯನದ ಮೂಲಕ ಈ ಕೆಳಗಿನ ಪ್ರಮುಖ ಅಂಶಗಳನ್ನು ಗುರುತಿಸಲಾಗಿದೆ:

ಸಾಹಿತ್ಯವು ಇತಿಹಾಸದ ಪೂರಕ ದಾಖಲೆ: ಶಾಸನಗಳು ಮತ್ತು ಹಳೆಯ ಕಾವ್ಯಗಳು ಕರ್ನಾಟಕದ ಭೌಗೋಳಿಕ ಗಡಿ ಮತ್ತು ರಾಜಕೀಯ ಇತಿಹಾಸವನ್ನು ಪುನರ್–ನಿರ್ಮಿಸಲು ಶಕ್ತಿಯುತ ಆಧಾರಗಳಾಗಿವೆ.

ಸಾಂಸ್ಕೃತಿಕ ನಿರಂತರತೆ: ಹಳಗನ್ನಡದಿಂದ ಆಧುನಿಕ ಕನ್ನಡದವರೆಗೆ ಭಾಷೆಯು ಬದಲಾದರೂ, ಕನ್ನಡದ ಸಾಂಸ್ಕೃತಿಕ ಅಸ್ಮಿತೆಯು ಒಂದು ನಿರಂತರ ಪ್ರವಾಹವಾಗಿ ಹರಿದುಬಂದಿದೆ.

ಸಾಮಾಜಿಕ ಬದಲಾವಣೆಯ ವಾಹಕ: ಸಾಹಿತ್ಯವು ಕೇವಲ ಸಮಾಜವನ್ನು ಪ್ರತಿಫಲಿಸದೆ, ವಚನ ಕ್ರಾಂತಿಯಂತಹ ಸಂದರ್ಭಗಳಲ್ಲಿ ಸಮಾಜವನ್ನು ಬದಲಿಸುವ ಆಯುಧವಾಗಿಯೂ ಬಳಕೆಯಾಗಿದೆ.

*. ದೇಸಿ ಮತ್ತು ಮಾರ್ಗ ಪರಂಪರೆಗಳ ಸಮನ್ವಯ:

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಸಂಸ್ಕೃತ ಪ್ರಭಾವಿತ 'ಮಾರ್ಗ' ಶೈಲಿ ಮತ್ತು ಜನಸಾಮಾನ್ಯರ 'ದೇಸಿ' ಶೈಲಿಗಳ ನಡುವೆ ನಿರಂತರ ಸಂಘರ್ಷ ಮತ್ತು ಸಮನ್ವಯ ನಡೆದಿದೆ. ಸಂಶೋಧನೆಯಿಂದ ತಿಳಿದುಬರುವ ಅಂಶವೆಂದರೆ, ಸಾಹಿತ್ಯವು ಯಾವಾಗ 'ದೇಸಿ' ಕಡೆಗೆ (ಉದಾ: ವಚನ, ರಗಳೆ, ಸಾಂಗತ್ಯ) ವಾಲಿತ್ತೋ, ಆಗ ಅದು ಅತಿ ಹೆಚ್ಚು ಜನಪ್ರಿಯತೆಯನ್ನು ಮತ್ತು ಸಾಮಾಜಿಕ ವ್ಯಾಪ್ತಿಯನ್ನು ಪಡೆದುಕೊಂಡಿದೆ. ಇದು ಸಾಹಿತ್ಯವು ವರ್ಗಪ್ರಜ್ಞೆಯಿಂದ ಸಮೂಹಪ್ರಜ್ಞೆಯ ಕಡೆಗೆ ವಿಕಸನಗೊಂಡಿದ್ದನ್ನು ಸಾಬೀತುಪಡಿಸುತ್ತದೆ.

* ಸಾಹಿತ್ಯಿಕ ಪ್ರಕಾರಗಳ ಮೇಲೆ ಭೌಗೋಳಿಕ ಮತ್ತು ರಾಜಕೀಯ ಪ್ರಭಾವ:

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಕನ್ನಡದ ಸಾಹಿತ್ಯಿಕ ಪ್ರಕಾರಗಳು (ಉಜಟಿಡಿಜ) ಕೇವಲ ಆಕಸ್ಮಿಕವಾಗಿ ಹುಟ್ಟಿಲ್ಲ. ಉದಾಹರಣೆಗೆ, ಚಂಪೂ ಕಾವ್ಯಗಳು ಸ್ಥಿರವಾದ ರಾಜಾಶ್ರಯವಿದ್ದ ಕಾಲದಲ್ಲಿ (ರಾಷ್ಟ್ರಕೂಟ, ಚಾಲುಕ್ಯ) ಬೆಳೆದರೆ, ವಚನ ಮತ್ತು ದಾಸ ಸಾಹಿತ್ಯದಂತಹ ಸರಳ ಪ್ರಕಾರಗಳು ಸಾಮಾಜಿಕ ಅಸ್ಥಿರತೆ ಅಥವಾ ಜನಸಾಮಾನ್ಯರ ಸಾಂಸ್ಕೃತಿಕ ಹೋರಾಟದ ಕಾಲದಲ್ಲಿ ಮುನ್ನೆಲೆಗೆ ಬಂದಿವೆ. ಅಂದರೆ, ಸಾಹಿತ್ಯದ ಸ್ವರೂಪವನ್ನು ಆಯಾ ಕಾಲದ ರಾಜಕೀಯ ಸ್ಥಿರತೆ ಅಥವಾ ಅಸ್ಥಿರತೆ ನಿರ್ಧರಿಸಿದೆ.

*. ಶಾಸನಗಳ ಭಾಷಾ ವಿಶ್ಲೇಷಣೆ ಮತ್ತು ಲಿಪಿ ವಿಕಾಸ:

ಸಂಶೋಧನೆಯಿಂದ ಕಂಡುಬಂದ ಮತ್ತೊಂದು ಮುಖ್ಯ ಅಂಶವೆಂದರೆ, ಕೃತಿಗಳಲ್ಲಿರುವ ಭಾಷೆಗಿಂತ ಶಾಸನಗಳಲ್ಲಿರುವ ಭಾಷೆ ಹೆಚ್ಚು ನೈಜವಾದ ಇತಿಹಾಸವನ್ನು ದಾಖಲಿಸಿದೆ.ಹಲ್ಮಿಡಿ ಶಾಸನದ ಭಾಷೆಯಿಂದ ಹಿಡಿದು ವಿಜಯನಗರ ಕಾಲದ ಶಾಸನಗಳವರೆಗೆ ಕನ್ನಡ ಲಿಪಿಯು ವಿಕಸನಗೊಂಡ ರೀತಿ ಮತ್ತು ಆಯಾ ಕಾಲದ ತೆರಿಗೆ ಪದ್ಧತಿ, ಯುದ್ಧದ ನೀತಿಗಳು ಹಾಗೂ ಸ್ತ್ರೀಯರ ಸ್ಥಾನಮಾನಗಳನ್ನು ಶಾಸನಗಳು ಸಾಹಿತ್ಯಕ್ಕಿಂತ ಹೆಚ್ಚು ವಸ್ತುನಿಷ್ಠವಾಗಿ (Objectively) ದಾಖಲಿಸಿವೆ.

10. ಸಮಾಪನ

ಕನ್ನಡ ಸಾಹಿತ್ಯ ಮತ್ತು ಇತಿಹಾಸದ ಈ ಅಧ್ಯಯನವು ನಮಗೆ ಕನ್ನಡಿಗರ ಸುದೀರ್ಘವಾದ ಬದುಕಿನ ಹಾದಿಯನ್ನು ಪರಿಚಯಿಸುತ್ತದೆ. ಪಂಪನ ವೀರತ್ವ, ಬಸವಣ್ಣನವರ ಸಮಾನತೆ, ಕನಕದಾಸರ ಭಕ್ತಿ ಮತ್ತು ಕುವೆಂಪು ಅವರ ವಿಶ್ವಮಾನವ ಸಂದೇಶ—ಇವೆಲ್ಲವೂ ನಮ್ಮ ಇತಿಹಾಸದ ವಿವಿಧ ಮಜಲುಗಳಾಗಿವೆ.

ಸಂಶೋಧನಾತ್ಮಕವಾಗಿ ನೋಡಿದಾಗ, ಸಾಹಿತ್ಯವು ಇತಿಹಾಸದ 'ಜೀವಂತ ಕನ್ನಡಿ'ಯಾಗಿದೆ. ಇತಿಹಾಸವು ಒಣ ಅಂಕಿ–ಅಂಶಗಳನ್ನು ನೀಡಿದರೆ, ಸಾಹಿತ್ಯವು ಆ ಕಾಲದ ನಾಡಿಮಿಡಿತವನ್ನು ನಮಗೆ ತಲುಪಿಸುತ್ತದೆ. ಆದ್ದರಿಂದ, ಮುಂದಿನ ಪೀಳಿಗೆಗೆ ಈ ಸಾಹಿತ್ಯಿಕ ಪರಂಪರೆಯನ್ನು ಕೇವಲ ಪಠ್ಯವಾಗಿರದೆ, ನಮ್ಮ ಅಸ್ಮಿತೆಯ ಭಾಗವಾಗಿ ತಲುಪಿಸುವುದು ಅತ್ಯಗತ್ಯವಾಗಿದೆ.

ಕನ್ನಡ ಸಾಹಿತ್ಯ ಮತ್ತು ಇತಿಹಾಸದ ಈ ಆಳವಾದ ಅಧ್ಯಯನವು ನಮಗೆ ಕೇವಲ ಒಂದು ಭಾಷೆಯ ಬೆಳವಣಿಗೆಯನ್ನು ಮಾತ್ರವಲ್ಲದೆ, ಒಂದು ನಾಡಿನ ಸಾಂಸ್ಕೃತಿಕ ಮನೋಧರ್ಮದ ವಿಕಾಸವನ್ನು ಪರಿಚಯಿಸುತ್ತದೆ. ಈ ಸಂಶೋಧನೆಯಿಂದ ಹೊರಹೊಮ್ಮುವ ಅಂತಿಮ ತೀರ್ಮಾನಗಳನ್ನು ಈ ಕೆಳಗಿನಂತೆ ಸಂಕ್ಷೇಪಿಸಬಹುದು:

ಅ) ಸಾಹಿತ್ಯ ಮತ್ತು ಇತಿಹಾಸದ ಪೂರಕತೆ:

ಇತಿಹಾಸವು ಒಂದು ನಾಡಿನ ದೇಹವಾದರೆ, ಸಾಹಿತ್ಯವು ಅದರ ಆತ್ಮದಂತಿದೆ. ರಾಜಕೀಯ ಇತಿಹಾಸವು ಯುದ್ಧಗಳು ಮತ್ತು ಆಡಳಿತಗಾರರ ದಾಖಲೆಗಳನ್ನು ನೀಡಿದರೆ, ಸಾಹಿತ್ಯವು ಆ ಕಾಲದ ಜನರ ನೈತಿಕತೆ, ಧಾರ್ಮಿಕ ನಂಬಿಕೆಗಳು ಮತ್ತು ಸಾಮಾಜಿಕ ಆಕಾಂಕ್ಷೆಗಳನ್ನು ಜೀವಂತವಾಗಿರಿಸಿದೆ. ಪಂಪನಿಂದ ಕುವೆಂಪುವಿನವರೆಗೆ ಪ್ರತಿಯೊಬ್ಬ ಕವಿಯೂ ತನ್ನ ಕಾಲದ ಇತಿಹಾಸದ ಹರಿಕಾರನಾಗಿದ್ದಾನೆ.

ಆ) ಕಾಲೋಚಿತ ಸ್ಥಿತ್ಯಂತರಗಳು:

'ಕನ್ನಡ ಸಾಹಿತ್ಯವು ಜಗತ್ತಿನ ಯಾವುದೇ ಪ್ರಬಲ ಸಾಹಿತ್ಯಕ್ಕೆ ಸರಿಸಮನಾಗಿ ಕಾಲಕ್ಕೆ ತಕ್ಕಂತೆ ತನ್ನನ್ನು ತಾನು ಬದಲಿಸಿಕೊಳ್ಳುತ್ತಾ ಬಂದಿದೆ.ಚಂಪೂ ಯುಗದ ಗಾಂಭೀರ್ಯ, ವಚನ ಚಳುವಳಿಯ ಬಂಡಾಯ, ದಾಸ ಸಾಹಿತ್ಯದ ಭಕ್ತಿ ಮತ್ತು ಆಧುನಿಕ ಯುಗದ ಬೌದ್ಧಿಕತೆ—ಇವೆಲ್ಲವೂ ಕನ್ನಡಿಗರು ಕಾಲಕಾಲಕ್ಕೆ ಎದುರಿಸಿದ ಐತಿಹಾಸಿಕ ಸವಾಲುಗಳಿಗೆ ನೀಡಿದ ಸಾಹಿತ್ಯಿಕ ಪ್ರತಿಕ್ರಿಯೆಗಳಾಗಿವೆ.

ಇ) ಭವಿಷ್ಯದ ದೃಷ್ಟಿಕೋನ:

'ಇಂದಿನ ಜಾಗತೀಕರಣದ ಯುಗದಲ್ಲಿ, ಕನ್ನಡ ಸಾಹಿತ್ಯದ ಇತಿಹಾಸವನ್ನು ಅಭ್ಯಾಸ ಮಾಡುವುದು ಕೇವಲ ಹಳೆಯದನ್ನು ಸ್ಮರಿಸುವುದಲ್ಲ; ಅದು ನಮ್ಮ ಮೂಲ ಅಸ್ಮಿತೆಯನ್ನು ಗಟ್ಟಿಗೊಳಿಸಿಕೊಳ್ಳುವ ಪ್ರಕ್ರಿಯೆಯಾಗಿದೆ. ಸಂಶೋಧನಾ ದೃಷ್ಟಿಕೋನದಿಂದ ಸಾಹಿತ್ಯಿಕ ಪಠ್ಯಗಳನ್ನು ಮರು–ಓದಿಗೆ ಒಳಪಡಿಸುವುದು ಇತಿಹಾಸದ ಹೊಸ ಮಜಲುಗಳನ್ನು ಅನಾವರಣಗೊಳಿಸಲು ಇಂದಿಗೂ ಪ್ರಸ್ತುತವಾಗಿದೆ.

ಈ) ಅಂತಿಮ ಅನಿಸಿಕೆ:

ಒಟ್ಟಾರೆಯಾಗಿ, ಕನ್ನಡ ಸಾಹಿತ್ಯವು ಕೇವಲ ಅಕ್ಷರಗಳ ಗುಂಪಲ್ಲ, ಅದು ಕನ್ನಡಿಗರ ಸಾಂಸ್ಕೃತಿಕ ಪ್ರತಿರೋಧ ಮತ್ತು ಸೃಜನಶೀಲತೆಯ ಮಹಾನ್ ದಸ್ತಾವೇಜು.ಚರಿತ್ರೆಯು ಮರೆಯಬಹುದಾದ ಸತ್ಯಗಳನ್ನು ಸಾಹಿತ್ಯವು ಸಂರಕ್ಷಿಸಿಡುತ್ತದೆ. ಆದ್ದರಿಂದ, ಕನ್ನಡದ ಇತಿಹಾಸವನ್ನು ಅರಿಯಲು ಸಾಹಿತ್ಯದ ಅಧ್ಯಯನ ಅನಿವಾರ್ಯ ಮತ್ತು ಅತ್ಯಂತ ವಿಶ್ವಾಸಾರ್ಹ ಮಾರ್ಗವಾಗಿದೆ.

11. ಆಕರ ಗ್ರಂಥಗಳ ಪಟ್ಟಿ

ಅ) ಪ್ರಾಥಮಿಕ ಆಧಾರಗಳು

1.ಶ್ರೀವಿಜಯ / ಅಸಗ (ಸಂ.ಕೆ. ಕೃಷ್ಣಮೂರ್ತಿ), ಕವಿರಾಜಮಾರ್ಗ, ಐ.ಬಿ.ಎಚ್ ಪ್ರಕಾಶನ, ಬೆಂಗಳೂರು, 1973, ಪು. 35–50.

2.ಪಂಪ ಮಹಾಕವಿ (ಸಂ. ಎಲ್. ಬಸವರಾಜು), ಪಂಪ ಭಾರತ (ವಿಕ್ರಮಾರ್ಜುನ ವಿಜಯ), ಗೀತಾ ಬುಕ್ ಹೌಸ್, ಮೈಸೂರು, 1976, ಪು.120–145.

3.ಬಸವಣ್ಣ ಮತ್ತು ಇತರರು, ವಚನ ಸಾಹಿತ್ಯ ಸಂಪುಟಗಳು (ಸಂಪುಟ 1 ಮತ್ತು 2), ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಣೆ, ಬೆಂಗಳೂರು, 2010, ಪು. 8

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

Original Article

ಕನ್ನಡ ಸಾಹಿತ್ಯ ಮತ್ತು ಪಂಪ: ಸಾಮಾಜಿಕ ಕಣ್ನೋಟಗಳು.

ಡಾ. ಶ್ರೀನಿವಾಸ ಎಸ್. ಜಿ.
ಅಧ್ಯಾಪಕರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ,
ಕೋಲಾರ.

Manuscript ID:
JRD -2026-180431
ISSN: 2230-9578
Volume 18
Issue 4(II)
Pp.104-106
April 2026
Submitted: 15 Mar. 2026
Revised: 05 Apr. 2026
Accepted: 16 Apr. 2026
Published: 30 April 2026

ಸಾರಲೇಖ :

ಕನ್ನಡ ಸಾಹಿತ್ಯದಲ್ಲಿ ಆದಿಕವಿಯಾಗಿ ಗುರುತಿಸಲ್ಪಡುವ ಪಂಪನು ಕೇವಲ ಕಾವ್ಯಶಿಲ್ಪದ ನಿಪುಣನಷ್ಟೇ ಅಲ್ಲ, ತನ್ನ ಕಾಲದ ಸಮಾಜದ ವೈವಿಧ್ಯತೆಯನ್ನು ಅರಿತು ಅದನ್ನು ತನ್ನ ಕಾವ್ಯಗಳಲ್ಲಿ ಪ್ರತಿಬಿಂಬಿಸಿದ ಚಿಂತಕನೂ ಆಗಿದ್ದಾನೆ. "ಅರಿವುದು ಕಾವ್ಯಧರ್ಮಮಂ ಧರ್ಮಮುಮಂ" ಹಾಗೂ "ಬೆಳಗುವೆನಿಲ್ಲಿ ಲೌಕಿಕಮಂ" ಎಂಬ ಅವನ ಮಾತುಗಳು ಕಾವ್ಯವನ್ನು ಮಾನವ ಮತ್ತು ಸಮಾಜದ ಅನ್ವೇಷಣೆಯ ಸಾಧನವೆಂದು ಪರಿಗಣಿಸಿದ ಅವನ ದೃಷ್ಟಿಯನ್ನು ಸ್ಪಷ್ಟಪಡಿಸುತ್ತವೆ.

ಪಂಪನ ಕಾವ್ಯದಲ್ಲಿ ವೈದಿಕ ಮತ್ತು ಜೈನ ಪರಂಪರೆಗಳ ಪ್ರಭಾವವಿದ್ದರೂ, ಅವನು ತನ್ನ ಧಾರ್ಮಿಕತೆಯನ್ನು ಆ ಪರಂಪರೆಗಳ ಮಿತಿಯೊಳಗೆ ಸೀಮಿತಗೊಳಿಸದೆ, ತನ್ನ ಕಾಲದ ಜೀವಂತ ಸಮಾಜದ ಅನುಭವಗಳಿಂದ ಅದನ್ನು ವಿಸ್ತರಿಸುತ್ತಾನೆ. ಕವಿಯ ತಾತ್ವಿಕತೆ, ಧೋರಣೆ ಮತ್ತು ಜೀವನದೃಷ್ಟಿಗಳು ಅವನು ಬದುಕುತ್ತಿರುವ ಸಮಾಜದ ಚಿಂತನೆಗಳಿಂದಲೇ ರೂಪುಗೊಳ್ಳುತ್ತವೆ ಎಂಬುದು ಇಲ್ಲಿ ಗಮನಾರ್ಹ.

ಹೆಚ್. ಎಂ. ಚೆನ್ನಯ್ಯನವರ ಅಭಿಪ್ರಾಯದಂತೆ, ಕವಿ ತನ್ನ ಕಾಲದ ಆದರ್ಶ ಮೌಲ್ಯಗಳಾದ ವೀರತೆ, ಛಲ, ನಿಷ್ಠೆ ಇತ್ಯಾದಿಗಳನ್ನು ಕಾವ್ಯದಲ್ಲಿ ರೂಪಿಸುತ್ತಾನೆ ಹಾಗೂ ಸಮಕಾಲೀನ ರಾಜಕೀಯ–ಸಾಮಾಜಿಕ ಸ್ಥಿತಿಗಳನ್ನು ಪರೋಕ್ಷವಾಗಿ ಪ್ರತಿಬಿಂಬಿಸುತ್ತಾನೆ. ಈ ದೃಷ್ಟಿಯಿಂದ ಪಂಪನ ಕಾವ್ಯವು ತನ್ನ ಕಾಲದ ಸಾಮಾಜಿಕ–ರಾಜಕೀಯ ವಾಸ್ತವಿಕತೆಯೊಂದಿಗಿನ ಅವಿಭಾಜ್ಯ ಸಂಬಂಧವನ್ನು ಹೊಂದಿದೆ.

ಪಂಪನು ಸಂಸ್ಕೃತಾಧಾರಿತ 'ಮಾರ್ಗ' ಕಾವ್ಯಪದ್ಧತಿಯನ್ನು ಅನುಸರಿಸಿದರೂ, ಅದರಲ್ಲಿ 'ಪಾಡುಗಬ್ಬ' ಎಂಬ ದೇಸಿ (ಅಚ್ಚಗನ್ನಡ) ಶೈಲಿಯನ್ನು ಸಂಯೋಜಿಸುವ ಮೂಲಕ ಕನ್ನಡ ಕಾವ್ಯ ಪರಂಪರೆಯಲ್ಲಿ ಮಹತ್ವದ ತಿರುವು ತಂದನು. "ದೇಸಿಯೋಳ್ ಪುಗುವುದು ಪೊಕ್ಕು ಮಾರ್ಗದೊಳ್ ತಳ್ವುದು" ಎಂಬ ಅವನ ನಿಲುವು, ದೇಸಿ ಮತ್ತು ಮಾರ್ಗ ಪರಂಪರೆಗಳ ಸೃಜನಾತ್ಮಕ ಸಂಯೋಜನೆಯನ್ನು ಸೂಚಿಸುತ್ತದೆ.

ಈ ಪ್ರಬಂಧವು ಪಂಪನ ಕಾವ್ಯದಲ್ಲಿ ವ್ಯಕ್ತವಾಗುವ ಸಾಮಾಜಿಕ ಕಣ್ನೋಟಗಳನ್ನು ವಿಶ್ಲೇಷಿಸಿ, ಅವನ ಕಾವ್ಯವು ಕೇವಲ ಸಾಹಿತ್ಯಿಕ ಸಾಧನೆಯಷ್ಟೇ ಅಲ್ಲದೆ, ತನ್ನ ಕಾಲದ ಸಮಾಜದ ಚಿಂತನೆಗಳನ್ನು ಪ್ರತಿನಿಧಿಸುವ ಬೌದ್ಧಿಕ ಪ್ರಕ್ರಿಯೆಯೂ ಆಗಿದೆ ಎಂಬುದನ್ನು ತೋರಿಸಲು ಉದ್ದೇಶಿಸುತ್ತದೆ.

ಮುಖ್ಯ ಪದಗಳು :

ಕಾವ್ಯ ದೃಷ್ಟಿ, ವಿನ್ಯಾಸ ದೃಷ್ಟಿ, ಸಾಮಾಜಿಕ ದೃಷ್ಟಿ, ಸಮಾರೂಪ.

ವಸ್ತುವಿನ ಆಯ್ಕೆ ಎಂಬುದು ಶಿಲ್ಪಿಗೆ ಕಲ್ಲಿನ ಆಯ್ಕೆಯಂತೆ, ಬಡಿಗನಿಗೆ ಮರದ ಆಯ್ಕೆ ಇದ್ದಂತೆ ತಾನು ಆಯ್ಕೆ ಮಾಡಿಕೊಂಡ ವಸ್ತುವನ್ನು ಕಡಿದು ಸುಂದರ ಶಿಲ್ಪವಾಗಿಸ ಬೇಕಾದರೆ ಆಯ್ಕೆ ಮಾಡಿಕೊಂಡ ವಸ್ತುವಿನ ಬಗೆಗೆ ಅವನಿಗೆ ಪೂರ್ಣಜ್ಞಾನ ಇದ್ದರಷ್ಟೇ ಸಾಧ್ಯವಾಗುವುದು. 'ವಸ್ತುವಷ್ಟರಿಂದಲೇ ಕಾವ್ಯವಾಗುವುದಿಲ್ಲ ಅದನ್ನು ಎಷ್ಟರಮಟ್ಟಿಗೆ ಕಾವ್ಯವಾಗಿ ಮೂಡಿಸಿದ್ದಾನೆ ಎಂಬುದನ್ನು ಗಮನಿಸಿ ಕೃತಿಗೆ ಬೆಲೆ ಕಟ್ಟುವುದು'.ಪಂಪ ಬಹಳ ಪ್ರತಿಭಾಶಾಲಿ ಆದ್ದರಿಂದ ಅವನ ಆಯ್ಕೆಯ ವಸ್ತು ಅಗ್ರಗಣ್ಯವಾದುದರಿಂದಲೇ 'ಮುನ್ನಿನ ಕಬ್ಬಮನ್ನೆಲ್ಲಾ ಇಕ್ಕಿ ಮೆಟ್ಟುವುದ'ಕ್ಕೆ ಸಾಧ್ಯವಾದುದು.

ಪಂಪಭಾರತದ ಆಯ್ಕೆ ಪಂಪನ ಧೀಮಂತಿಕೆ, ಅನುಭವ, ಲೋಕಾನುಭವ ಮುಂತಾದವುಗಳಿಂದ ಹಿಮಾಲಯ ಸದೃಶವಾದ ವಸ್ತುವೊಂದನ್ನು ಆಯ್ಕೆ ಮಾಡಿಕೊಂಡ. ಅವನ ವಸ್ತುವಿನ ಆಯ್ಕೆಯ ಕಾಲಕ್ಕೆ ಕಾವ್ಯ, ದರ್ಶನ, ಚರಿತ್ರೆ,ರಾಜಕೀಯ ಶಾಸ್ತ್ರ, ಆತ್ಮ ಕಥನ ಎಲ್ಲವೂ ಆಗಿದ್ದ ಮಹಾಕಾವ್ಯವನ್ನು ಆಯ್ಕೆ ಮಾಡಿದ್ದು ಕನ್ನಡ ಮಾರ್ಗ ಕಾವ್ಯಪರಂಪರೆಗೆ, ದೇಸಿಕಾವ್ಯ ಪರಂಪರೆಗೆ ಹಾಕಿಕೊಟ್ಟ ದೊಡ್ಡ ಭದ್ರಬುನಾದಿ. ಈ ದೊಡ್ಡ ಕಾವ್ಯ ಕ್ಯಾನ್ವಾಸಿನೊಳಗೆ ವಸ್ತುಕ, ವರ್ಣಕ, ಮಾರ್ಗ, ಲೌಕಿಕ, ಆಗಮಿಕ, ಇತಿಹಾಸ, ಧರ್ಮ, ಕಾವ್ಯ, ಧರ್ಮ, ಭಾಷೆ, ಜನಾಂಗ, ಕುಲ ಇನ್ನು ಮುಂತಾದ ಸಮಸ್ತ ಭಾರತದ ಸಾಮಾಜಿಕ ಜನಜೀವನವನ್ನೇ ತೆರೆದಿಡುತ್ತಾ ಹೋದ. ಆ ಮೂಲಕ ಕನ್ನಡ ಜಗತ್ತನ್ನು ತನ್ನ ಅಪೂರ್ವ ಪಾಂಡಿತ್ಯ, ಆಳವಾದ ಜ್ಞಾನ, ಮಿಗಿಲಾದ ಪ್ರತಿಭೆ, ಬಹುಭಾಷಾ ನೈಪುಣ್ಯತೆಯಿಂದ ಕಾವ್ಯ ಜಗತ್ತಿನ ಮೂಲಕ ಕನ್ನಡದ ಜಗತ್ತನ್ನು ಪರಿಚಯಿಸುತ್ತಾ ಹೋದ ಎನ್ನಬಹುದು.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ. ಶ್ರೀನಿವಾಸ ಎಸ್. ಜಿ., ಅಧ್ಯಾಪಕರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ,
ಕೋಲಾರ.

How to cite this article:
ಡಾ. ಶ್ರೀನಿವಾಸ ಎಸ್.ಜಿ.(2026). ಕನ್ನಡ ಸಾಹಿತ್ಯ ಮತ್ತು ಪಂಪ: ಸಾಮಾಜಿಕ ಕಣ್ನೋಟಗಳು**.** *Journal of Research and Development, 18(4(II)), 104–106. https://doi.org/10.5281/zenodo.19396579*

Quick Response Code:
Website: https://jrdrvb.org/
DOI: 10.5281/zenodo.19396579

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

ಪಂಪನ ಮತ್ತೊಂದು ಕಾವ್ಯ ಆದಿಪುರಾಣ.**'ಮನುಷ್ಯ ಜಾತಿ ತಾನೊಂದೇ ವಲಂ'** ಎಂಬ ಕಾಲಾತೀತ ದರ್ಶನವನ್ನು ಬೆಳೆಸಿಕೊಂಡ ಕವಿ ಎಲ್ಲಾ ಕಾಲದ, ಎಲ್ಲಾ ಧರ್ಮದ ಜನರಿಗೂ ಬೇಕಾಗುವ ಹೊಸ ಅರ್ಥ ಹೊಸ ಮೌಲ್ಯಗಳನ್ನು ಪ್ರಭಾವಶಾಲಿಯಾಗಿ ಬಿತ್ತುವ ಜೀವ ಕಾವ್ಯ.'ಭಾವಾವಳಿ ಜೀವಿಯ ಏಳು–ಬೀಳುಗಳನ್ನು, ಸಾಧನೆ ವೈಫಲ್ಯಗಳನ್ನು ಬಹಳ ಪ್ರಭಾವಶಾಲಿಯಾಗಿ ಚಿತ್ರಿಸುವ ಜೈನ ಪುರಾಣ' ಬದುಕಿನ ಅತ್ಯಂತಿಕ ಕ್ಷಣಗಳಲ್ಲಿ ಧರ್ಮ ಸೂಕ್ಷ್ಮತೆಯ ಎಳೆಗಳು ಪ್ರತಿ ಧಾರ್ಮಿಕ ವ್ಯಕ್ತಿಗೂ ಕಾಡುವಂತೆ ಬಿತ್ತುವುದು ಪಂಪನೆಂಬ ಕವಿಗೂಈ ಧರ್ಮ ಸೂಕ್ಷ್ಮಗಳನ್ನು ಪರಿಶೋಧಿಸುವುದು ಮುಖ್ಯವೆನಿಸಿರಬೇಕು.

ಪಂಪ ಬದುಕಿನ ಬಗೆಗೆ ಅಪಾರ ಚಳುವಳಿಯನ್ನು ಹೊಂದಿದ್ದ, ಆದ್ದರಿಂದ ಆದಿಪುರಾಣದಲ್ಲಿ ಅವನು ಸೃಷ್ಟಿಸಿರುವ ಪ್ರತಿಪಾತ್ರಗಳೂ**'ಮಣ್ಣಿನ ಹಾಡು','ಭೂಮಿಗೀತಾ'** ಮುಂತಾದ ಉಲ್ಲೇಖಗಳು ವಾಸ್ತವಿಕತೆಯ ಅರಿವನ್ನು ಮೂಡಿಸುತ್ತದೆ. ಆದ್ದರಿಂದ ಸಮಸ್ತ ಭಾರತದಲ್ಲಿ ಲೌಕಿಕವನ್ನು ಆದಿಪುರಾಣದಲ್ಲಿ ಜಿನಧರ್ಮವನ್ನು ಬೆಳಗಲು ಸಾಧ್ಯವಾಯಿತು. ಪಂಪನ ಧರ್ಮದ ನಿವೇದನೆಗಳು ಶುಷ್ಕ ಆಚಾರಗಳ ವರದಿಯಲ್ಲದೆ ಕಲಾತ್ಮಕವಾದ ನಿಪುಣತನದ ಅಪೂರ್ವ ನಿರ್ಮಿತಿ, ಇವನ ಕಾವ್ಯಗಳಲ್ಲಿ ಕಾಣಸಿಗುವ ಆಡು–ನುಡಿ, ಮಾತಿನ ದಾಟಿ, ಗಾದೆ ಮಾತುಗಳು ಇವೆಲ್ಲ ಪಂಪನ ಸಾಮಾಜಿಕ ಕಣ್ಣೋಟದ ಮಾದರಿಗಳಲ್ಲದೆ ಬೇರೆಯಿಲ್ಲ.

***ವಿನ್ಯಾಸ ದೃಷ್ಟಿ :**

ಪಂಪ ಕಾವ್ಯ ಕೇವಲ ಕಾವ್ಯ ಬಿತ್ತುವ ಕೂರಿಗೆಯಾಗಿರಲಿಲ್ಲ. ಅವನು ಕೃಷಿಕ, ಒಳ್ಳೆಯ ರಸಿಕ, ಅನುಭೋಗಿಯೂ ಆಗಿದ್ದ. ಅವನ ಕೃತಿಗಳಲ್ಲಿ ಉತ್ಕಟವಾಗಿ ಚಿತ್ರಿತವಾಗಿರುವ ಪಾತ್ರ ಪ್ರಸಂಗಗಳು, ಶೃಂಗಾರ, ರಮಣೀಯವಾದ ಪ್ರಾಕೃತಿಕ ಸನ್ನಿವೇಶ, ಜನಜೀವನ ವ್ಯಕ್ತಿ ಚಿತ್ರಗಳನ್ನು ಗಮನಿಸಿದಾಗ ತಾನು ಬದುಕಿದ್ದ ಸಮಾಜವನ್ನು ಸುಂದರ ಚೌಕಟ್ಟಾಗಿ ಸಮಾಜದ ಎಲ್ಲಾ ಮುಖಗಳನ್ನು ಸುಂದರವಾಗಿ ವಿನ್ಯಾಸಗೊಳಿಸಿ ಕಟ್ಟಿರುವುದು ತಿಳಿಯುತ್ತದೆ.

"ಪಂಪ ಮಹಾರಸಿಕ, ವೇಷಭೂಷಣ ಅಲಂಕಾರಗಳಲ್ಲಿ ಆತನಿಗೆ ಎಲ್ಲಿಲ್ಲದ ಆಸಕ್ತಿ.ಸ್ತ್ರೀರೂಪದ ಮೋಹಕತೆಯನ್ನು,ಒಲುಮೆಯ ತಿರುಳನ್ನು ಕಂಡವನು" ಎನ್ನುತ್ತಾರೆ ತೀ.ನಂ.ಶ್ರೀ "ಪಂಪನು ಸುಂದರಅಚ್ಚುಕಟ್ಟಾದ ವೇಶಭೂಷಣಗಳನ್ನು ತುಂಬಾ ಮೆಚ್ಚಿದವನು. ಪ್ರೇಮದ ಸುಖವನ್ನು ಅನುಭವಿಸಿ ಹಲವು ಸೊಬಗು ಕಂಪುಗಳಿಗೆ ಮನಸೋತವನು. ಗಾನದಿಂಪಿಗೆ ಮೈಮರೆಯುವವನು. ಸಂಸಾರ ಸಾರವನ್ನು, ಸವಿಯನ್ನು ಕರ್ತವ್ಯವೆಂದು ಭಾವಿಸುವವನು" ಎಂದು ಎಲ್. ಗುಂಡಪ್ಪನವರು ಅಭಿಪ್ರಾಯಪಡುತ್ತಾರೆ. ಇದೆಲ್ಲ ಗಮನಿಸಿದಾಗ ಪಂಪನ ಕಾವ್ಯಗಳ ವಸ್ತು ವಿನ್ಯಾಸಗಳು ಹಿಂದಿನ ಕಾವ್ಯಮಾರ್ಗ ವಿನ್ಯಾಸಕಿಂತ ಬಹುತರನಾದವು ಎನ್ನಬಹುದು. ಆದ್ದರಿಂದಲೇ ಅವನ ಕಾವ್ಯ ಮಾರ್ಗ **'ಪದ್ಯಂ ಸಮಸ್ತ ಜನತಾ ಹೃದ್ಯಂ'** ಎಂದು ಅಂಗೀಕೃತಗೊಂಡದ್ದು. ಜನರ ಒತ್ತಾಸೆಗಳನ್ನು ಅರಿತು, ಅನಿವಾರ್ಯವಿರುವ ಕಡೆ ಕಾವ್ಯದಲ್ಲೂ ಅಳವಡಿಸಲು ಹಿಂದೂ ಮುಂದು ನೋಡಲಿಲ್ಲ. ಬೃಹತ್ತಾದ ಭವ್ಯತೆ ಇರುವ ಕಾವ್ಯವನ್ನು ಆರಿಸಿಕೊಂಡು ಅದನ್ನು ದೇಸಿ ಮಾರ್ಗ ಎಂಬ ಬಿನ್ನ ಜಾಡಿನಲ್ಲಿ ಚಿತ್ರಿಸುತ್ತಾ ಸಾಗಿ ಮರೆಯಲಾಗದ ಕಾವ್ಯ ಸಾಂಪ್ರದಾಯವನ್ನು ನಿರ್ಮಿಸಿ ಕಾವ್ಯ ಪ್ರಜ್ಞೆಯನ್ನು ಉನ್ನತ ಮಟ್ಟಕ್ಕೆ ಏರಿಸಿದ.

"ಪಂಪನ ಕಾಲ ಪರಿಪಕ್ವವಾದ ಕಾಲ, ಕನ್ನಡ ಭಾಷೆ,ಸಂಸ್ಕೃತಿ, ಸಾಹಿತ್ಯಗಳೆಲ್ಲವೂ ಇಂತಹ ಪರಿಣಿತ ಮಹಾಕವಿಯೊಬ್ಬನ ಆಗಮನಕ್ಕಾಗಿ ಹಾರೈಸುತ್ತ ಮಿಡಿಯುತ್ತಿದ್ದವು. ಇಂತಹ ಸಮಯದಲ್ಲಿ ಒದಗಿ ಬಂದ ಪಂಪ ಕನ್ನಡ ಭಾಷೆ,ಸಂಸ್ಕೃತಿಗಳ ಸಾರವನ್ನು ಹೀರಿ ತ್ರಿವಿಕ್ರಮವನಾಗಿ ಬೆಳೆದ. ಕನ್ನಡ ಭಾಷೆಗೆ ವಿಶ್ವವೈಶಾಲ್ಯತೆಯನ್ನು ತಂದುಕೊಟ್ಟ,'ಮಾನವ ಧರ್ಮದ' ಅತ್ಯುಚ್ಚ ಮೌಲ್ಯಗಳನ್ನು ಎತ್ತಿಹಿಡಿದ". ಆದ್ದರಿಂದ ಮನುಷ್ಯ ಧರ್ಮಗಳ ಬಗೆಗೆ ಅವನ ನಿಲುವು ಸ್ಪಷ್ಟವಾಗಿವೆ. ಧೋರಣೆಗಳಲ್ಲಿ ಖಚಿತತೆ ಇದೆ. ಕಾವ್ಯಗಳಲ್ಲಿನ ಈ ವಿನ್ಯಾಸಗಳೇ ಕಾವ್ಯದ ಚಲನೆಯ ದಿಕ್ಕುಗಳು ಆಗಿವೆ.

***ಸಾಮಾಜಿಕ ದೃಷ್ಟಿ :**

ಪಂಪನ ಕಾವ್ಯಗಳಲ್ಲಿ ವಿಸ್ತಾರವಾಗಿ ಬಿತ್ತಾರಗೊಳ್ಳುವುದು ಜನರ ಸಾಮಾನ್ಯ ಜೀವನ ಧರ್ಮ, ಜನರ ಧರ್ಮ, ನಂಬಿಕೆಗಳ ಮೌನ ಆಚರಣೆಗಳನ್ನು ಪಂಪ ಬಾಯಿ ಬಿಟ್ಟು ಹೇಳಿದನಲ್ಲದೆ, ಅಕ್ಷರಗಳಲ್ಲಿ ದಾಖಲಿಸಿದ. ರಾಜಾಡಳಿತ ಕಾಲದಲ್ಲಿಯೇ ಜನಾಡಳಿತ ಮುಖಿಯಂತಹ ಸಾಮಂತ ರಾಜ ಸಿಕ್ಕಿದ್ದರಿಂದಲೋ ಏನೋ ಅರಿಕೇಸರಿಯ ಜೊತೆಗೆ ಉತ್ತಮ ಸ್ನೇಹ ಸಂಬಂಧವನ್ನು ಹೊಂದಿದ್ದ. ಹಾಗಾಗಿ ಅವನಿಗೆ ಆಡಳಿತಾತ್ಮಕ ರಾಜ ತಂತ್ರಗಳು, ಸಾಮಾನ್ಯರ ನೋವು–ನಲಿವುಗಳ ಪರಿಚಯವು ಆಗತೊಡಗಿತು. ಈ ಅನುಭವವೇ ಪಂಪನನ್ನು ಸಾಮಾಜಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಶ್ರೇಷ್ಠ ಕವಿ ಎನಿಸಿಕೊಳ್ಳಲು ಕಾರಣವಾದುದು.

ಕವಿಯಾದವನು ಮನುಷ್ಯನೇ ಆದ್ದರಿಂದ ಅವನು ಸಮಾಜದ ಶಿಶು ಆಗಿರುತ್ತಾನೆ. ಸಾಹಿತ್ಯ ಎನ್ನುವುದು ಸಮಾಜಕೇಂದ್ರಿತವಾಗಿರುವುದರಿಂದ ಆ ಸಮಾಜದ ಹಲವು ಕಂಪನಗಳನ್ನು ಕವಿಯಾದವನು ಗ್ರಹಿಸಿ ನಿರ್ದಿಷ್ಟಗೊಳಿಸುತ್ತಿರುತ್ತಾನೆ. ಆ ಸಮಾಜದ ಭಾಗವಾಗಿ ಅಲ್ಲಿನ ಏಳು–ಬೀಳುಗಳ ನಡುವೆ ಬೆರೆತು ಸಮಾಜದ ಉಸಿರನ್ನೇ ಕಾವ್ಯವಾಗಿಸಿರುತ್ತಾನೆ. ಪಂಪ ಇಂತಹದೊಂದು ಸಮಾಜದ ಭಾಗವಾಗಿ ಛಲ,ಬಲ, ನನ್ನಿ, ಧರ್ಮ,ಚಾಗ, ಭೋಗ ಮುಂತಾದವುಗಳನ್ನು ಮೌಲ್ಯಗಳಿಂದಲೇ ಬಗೆದು ಅವುಗಳೊಟ್ಟಿಗೆ ಜೀವಿಸಿದ.

ಅಂದಿನ ಸಮಾಜ ಹಲವು ಆಚರಣೆಗಳನ್ನು ಉಸಿರಾಡುತ್ತಿತ್ತು.ತುರುಗೋಳ್, ಪೆಣ್ಬುಯ್ಯಲ್, ಊರಳಿವು, ಜೋಳವಾಳಿ,ವೇಳವಾಳಿಗಳಲ್ಲಿ ಪ್ರಾಣ ತೆತ್ತವರು ಆದರ್ಶ ಪ್ರಿಯರಾಗಿದ್ದರು. ವೀರತ್ವವನ್ನುಸಾರುವ ಹಲವು ಸಂಗತಿಗಳು ಸಾಮಾನ್ಯವಾಗಿದ್ದವು. ಸಮಾಜದ ಅಂತರ್ಯವನ್ನು ಸಮೀಪದಿಂದ ಕಂಡದ್ದರಿಂದಲೇ ಅವನು ತನ್ನ ಕಾವ್ಯಗಳಲ್ಲಿ ಸಾಮಾಜಿಕ ಪ್ರಜ್ಞೆ ಮೆರೆಯಲು ಸಾಧ್ಯವಾದುದು.

"ಪಂಪಭಾರತದಲ್ಲಿ ಕವಿ ಅನೇಕ ಕಡೆ ಅಂದಿನ ಸಮಾಜವನ್ನೇ ಹಿಡಿದಿಟ್ಟಿದ್ದಾನೆ. ಅಂದಿನ ಅರಮನೆ, ಗುರುಮನೆ, ತಾಪಸಾಶ್ರಮ, ಊರುಕೇರಿ, ವೇಶ್ಯಾವಾಟಿಕೆ, ವ್ಯಾಪಾರಿ, ಬೇಟೆಗಾರ, ಭೋಗಿ,ವಿರಾಗಿ, ವೀರಯೋಧ, ರಾಜ್ಯ ಮುಂತಾದವರ ಅನೇಕ ಚಿತ್ರಗಳು ಸಾಲು ಸಾಲಾಗಿ ಬಂದಿವೆ. ಅಲ್ಲದೆ ಯುದ್ಧ, ವಿವಿಧ ಕಲೆಗಳು ಕ್ರೀಡೆಗಳು, ಮೋಜು,ಮನರಂಜನೆಗಳು, ಕುಲವಿರಸ, ಹಿತವಚನ, ಧರ್ಮ ಬೋಧನೆ, ದಾಯಾದಿ ಮತ್ಸರ, ಸ್ನೇಹ ಸೌಹಾರ್ದ ಬಾಂಧವ್ಯ ಮುಂತಾದ ಅನೇಕ ವಿಚಾರಗಳು, ಅಂದಿನ ರಾಜಕೀಯ, ಧಾರ್ಮಿಕ, ಸಾಮಾಜಿಕ ಕ್ರಿಯೆಗಳು, ನಂಬಿಕೆ ಆಚರಣೆಗಳು, ಧರ್ಮಾದರ್ಶಗಳು ಅಲ್ಲಿ ಮೈದೋರಿವೆ. ಕವಿ ಮೇಲಿನ ಪ್ರಸಂಗಗಳಲ್ಲಿಯೂ ಸಮಾಜ ವಿಮರ್ಶೆಗಾಗಿ ಸೂಚನೆಗಳನ್ನು ನೀಡಿದ್ದಾನೆ". ಅಂದರೆ ಪಂಪ ಚಿತ್ರಿಸಬೇಕಿದ್ದುದು ಸಮಸ್ತ ಭಾರತವನ್ನೇ ಆದರೂ ಮಹಾಭಾರತವನ್ನಲ್ಲ, ತಾನು ಬದುಕಿರುವ ಸಮಾಜದ ಚಿತ್ರಣವನ್ನೇ ಕಟ್ಟಿಕೊಟ್ಟಿದ್ದಾನೆ.

ಮಹಾಕಾವ್ಯದ ಲಕ್ಷಣಗಳು ಎಂದೇ ಪ್ರಸಿದ್ಧವಾಗಿರುವ ಅರ್ಣವ, ಶೈಲ, ಋತು ಚಂದ್ರೋದಯ, ಸೂರ್ಯೋದಯ, ವನ–ವಿಹಾರ, ಯುದ್ಧ, ವಿಜಯ ಯಾತ್ರೆ, ಇನ್ನು ಮುಂತಾದ ವಿಷಯಗಳನ್ನು ಅಷ್ಟಾದಶ ವರ್ಣನೆಗಳೆಂದು ಕರೆದು ಅವುಗಳನ್ನು ಕಾವ್ಯಾಂಗಗಳೆಂದು ಪರಿಗಣಿಸಲಾಯಿತು. ಹಾಗೆ ನೋಡಿದರೆ ಈ ಅಷ್ಟಾದಶವರ್ಣನೆಗಳು ಉಳಿಗಮಾನ್ಯ ವ್ಯವಸ್ಥೆಯ ಚಹರಗಳಾಗಿವೆ ಎನ್ನುತ್ತಾರೆ ವಿದ್ವಾಂಸರು, ವರ್ಣನೆಗಳ ಮೂಲಕ ಪಂಪ ಚಿತ್ರಿಸಿರುವ ಸಂಗತಿಗಳು ಅಂದಿನ ಸಮಾಜವನ್ನು ಅಧ್ಯಯನ ಮಾಡಲು ಬಹಳ ಸಹಕಾರಿಯಾಗಿದೆ. ಆತ 'ಉಪವನವನ್ನು ವರ್ಣಿಸಿರುವ ರೀತಿ,ಶಿಸ್ತುಬದ್ಧ ಉದ್ಯಾನವನಗಳು, ಈಜುಕೊಳಗಳು, ಸರೋವರ, ಕೆರೆಕುಂಟೆ, ಸಸ್ಯವರ್ಗ, ಪಕ್ಷಿ ಸಂಕುಲ, ಸದಾ ಅರಳಿಚೆಲ್ಲುವ ಸುರಗಿ ಹೂವುಗಳು, ಅದಕ್ಕೆ ಮುಟ್ಟುವ ದುಂಬಿಗಳು, ಆನೆ, ಕುದುರೆ, ಇಂತಹ ನಗರಗಳಲ್ಲಿ ವಾಸಿಸುತ್ತಿರುವ ರಾಜನ ಪರಿವಾರ, ವ್ಯಾಪಾರಿಗಳು, ಬ್ರಾಹ್ಮಣರು, ಊಳಿಗದವರು, ವೇಶ್ಯೆಯರು', ಭಾರತದ ಪ್ರಾಚೀನ ಸಮಾಜವೊಂದರ ಸಂಚರನೆಯ ಚಿತ್ರಣವನ್ನೇ ಪಂಪ ನೀಡಿದ್ದಾನೆ.

ಹೆಚ್. ಎಂ. ಚೆನ್ನಯ್ಯನವರು 'ವಿಕ್ರಮಾರ್ಜುನ ವಿಜಯ'ದಲ್ಲಿ ವ್ಯಕ್ತವಾಗಿರುವ ಸಾಮಾಜಿಕ ಚಿತ್ರಣವನ್ನು ನಾಲ್ಕು ಸಂದರ್ಭಗಳಲ್ಲಿ ವಿವರಿಸಿದ್ದಾರೆ;

1. ಚಂದ್ರಿಕಾ ವಿಹಾರದ ಸಂದರ್ಭದಲ್ಲಿ ವ್ಯಕ್ತವಾಗಿರುವ ವೇಶ್ಯಾವಾಟಿಕೆಯ ಚಿತ್ರಣ.
2. ಮೃಗಯಾ ವಿನೋದದ ವರ್ಣನೆ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

3. ಯುದ್ಧದ ವರ್ಣನೆ.
4. ದೇಸಿ ಪ್ರಯೋಗವಾಗಿರುವ ಎಡೆಗಳು.

ಅರ್ಜುನ ಬೆಳದಿಂಗಳ ರಾತ್ರಿಯಲ್ಲಿ ಪಟ್ಟಣ ವೀಕ್ಷಣೆಗೆ ತೆರಳಿ, ಅಲ್ಲಿಂದ ವಿಟಪುರುಷರ ಜೊತೆ ಸೂಳೆಗೇರಿಯನ್ನು ಹೊಕ್ಕು, ಹಲವು ಬಗೆಯ ಸೂಳೆಯರನ್ನು ಕಂಡ ಪ್ರಸಂಗವಿದೆ. ಅಲ್ಲಿ ಅರಭೋಜಂಗರು, ಕಿರುಕುಳ ಭೋಜಂಗರು, ಚಿಕ್ಕ ಪೋರ್ಕುಳಿ ಭೋಜಂಗರು,ಕತ್ತುರಿ ಭೋಜಂಗರು, ಮಾಲೆಗಾರ್ತಿಯರು, ಪಾಣ್ಪೆಯರು,ಪೆಂಡವಾಸದ ಒಳ್ಪೆಂಡಿರು ಹೀಗೆ ಹಲವು ಬಗೆಯ ಸೂಳೆಯರ ಚಿತ್ರಣವಿದೆ. ಅದೇ ರೀತಿ ಹಲವು ಬಗೆಯ 'ಮಧು'ಗಳ ಪರಿಚಯ ಅಂದರೆ 330 ಬಗೆಯ ಕಳ್ಳುಗಳು, ಹಲವು ಬಗೆಯ ಚಾಕಣಗಳು, ಕಾಮವನ್ನು ಕೆರಳಿಸುವ 9 ಬಗೆಬಗೆಯ ಮಧ್ಯಗಳು, ಪಟ್ಟಣದೊಳಗೆ ಅವಿತಿರುವ ಇನ್ನೊಂದು ಜಗತ್ತಿನ ಪರಿಚಯವನ್ನು ಅಲ್ಲಿ ಕಾಣಬಹುದು.

ಅದೇ ರೀತಿ ಬೇಟೆಯ ಮುನ್ನಿನ ತಯಾರಿ, ವಿವಿಧ ಬಗೆಯ ಬೇಟೆಗಳು, ಪ್ರಾಣಿಗಳು, ಅವುಗಳ ವೈಶಿಷ್ಟ್ಯ, ಬೇಟೆಯ ಪ್ರತಿಮೆ, ವನಕ್ರೀಡೆ, ಜಲಕ್ರೀಡೆ ಮುಂತಾದ ಮೃಗಯಾ ಸಾಹಿತ್ಯವನ್ನು ಚಿತ್ರಿ ಸುತ್ತಿರುವಂತೆ ಪಂಪ ವರ್ಣಿಸಿರುವುದು ತಿಳಿಯುತ್ತದೆ. ಪಂಪ ಸಮಸ್ತ ಭಾರತದಲ್ಲಿ ಲೌಕಿಕವನ್ನು **'ಬೇದ ಚಿತ್ರಣ'ಕ್ಕೆ** ಆಸ್ಪದವಿಲ್ಲದಂತೆ ಕಟ್ಟಿಕೊಟ್ಟಿದ್ದಾರೆ.

ಯುದ್ಧವೊಂದು ಸಂಭವಿಸುವ ಮುನ್ನ ನಡೆಯುವ ತಯಾರಿ, ಶಿಬಿರಗಳಲ್ಲಿ ನಡೆಯುವ ಘಟನೆಗಳು, ಗಾಯಗೊಂಡ ಯುದ್ಧ ಪ್ರಾಣಿಗಳು, ಯೋಧರು, ಅವರನ್ನು ಆರೈಕೆ ಮಾಡುವ ವೈದ್ಯರು, ಸೇನಾಧಿಕಾರಿಗಳು ಯುದ್ಧೋಪಕರಣಗಳಾದ ಸೈನ್ಯ, ರಥ, ಕುದುರೆ, ಬಾಣ, ಕವಚ, ಭರ್ಜಿ, ಕತ್ತಿ, ಗದೆ ಮುಂತಾದ ಸಲಕರಣೆಗಳ ಚಿತ್ರಗಳು ರಣರಂಗವನ್ನು ದರ್ಶಿಸಿದಂತೆ ಆಗುತ್ತದೆ.

ಜನಸಾಮಾನ್ಯರ ಜೊತೆ ಕವಿ ಬೆಳೆದಾಗ ಊರುಕೇರಿಗಳಲ್ಲಿ, ಓಣಿಗಳಲ್ಲಿ ತಿರುಗಿದಾಗ ಸಾಮಾನ್ಯ ಜನರ ನೋವು, ನಿಟ್ಟಿಸುರು, ಮಾತುಕತೆಗಳು ಅರ್ಥವಾಗುತ್ತದೆ. ಪಂಪನ ದೇಸಿತನ ಕಾಣುವುದೇ ಅವರನು ಸಾಮಾನ್ಯ ಜನರ ಬದುಕನ್ನು ಚಿತ್ರಿಸುವಾಗ. ಅವನಲ್ಲಿ ಕಾಣುವ ಹೇರಳವಾದ ಗಾದೆಗಳು ಉದಾಹರಣೆಗೆ;**'ದೇಗುಲಕ್ಕೆ ಪೆರ್ಮರನಂ ಕಡಿದಂತೆ ಮಾಡಿದರ್','ಪಡೆನೋಡಲ್ ಬಂದಂತಹಂ ಗುಡಿವೊರಿಸಿದರ್','ಮರುಳ್ಗೆ ಧೂಪಮಂ ತೋರಿಸಿದ ವೊಲ್','ಎನ್ನ ನುಡಿ ಟಾಣಡಾಢಣಂ',** ಇನ್ನು ಮುಂತಾದ ಗಾದೆ ಮಾತುಗಳನ್ನು ಜನರೇ ಆಡಿದಂತೆ ಬಳಸಿದ್ದಾನೆ.

ಪಂಪನ ಈ ರೀತಿಯ ಜನಕೇಂದ್ರಿತ ಕಥನ ಕ್ರಮ ಆತನ ಮುಂದಿನ ಕ್ರಮಗಳಲ್ಲೂ ಮುಂದುವರಿಯುವಂತೆ ಗಾಢ ಪ್ರಭಾವವನ್ನು ಬೀರಿದ್ದಾನೆ. ಹತ್ತನೇ ಶತಮಾನದ ಸಾಹಿತ್ಯಗಂಧ ಪಂಪನೊತ್ತರದುದ್ದಕ್ಕೂ ಹರಡಿರುವುದನ್ನು ನಿರಾಕರಿಸಲಾಗದು. ಈ ಹಿನ್ನೆಲೆಯಲ್ಲಿಯೇ ಅವನನ್ನು **'ಆದಿಕವಿ'** ಎಂದು ಕರೆದಿರುವುದು.

ಸಾಹಿತ್ಯ ಸೃಷ್ಟಿ ಅನುವಂಶಿಕತೆಯಿಂದ ಬರುವಂತದ್ದಲ್ಲ ಅಥವಾ ಇನ್ನೊಬ್ಬರಿಂದ ಸಿಗುವ ಬಹುಮಾನ/ಕೊಡುಗೆಯಂತಲ್ಲ. ತಾನು ಬದುಕಿರುವ ಸಾಮಾಜಿಕ ಪರಿಸರದಲ್ಲಿ ಸ್ಫುಟಗೊಂಡು, ಸ್ಪಷ್ಟವಾಗುತ್ತಾ, ಪಕ್ವವಾಗುತ್ತಾ ಹೋಗುವ ಕ್ರಿಯೆ. ಸಮಾಜದಿಂದ ಹುಟ್ಟಿದ ಸಾಹಿತ್ಯ ಅಂತಿಮವಾಗಿ ಸಮಾಜಕ್ಕೆ ದಕ್ಕುವಂತೆ ಪಂಪನ ಸಾಹಿತ್ಯದ ಎತ್ತರ,ಆಳ ಮತ್ತು ವಿಸ್ತಾರ ಮಿಗಿಲಾದದು. ತಾನು ಬಾಳಿ, ಬದುಕಿ, ಬರೆದು, ಬಯಲಾದವನು ಪಂಪ. ಗತಿಸಿ ಹೋದ ಭೂತ &ಭವಿಷ್ಯದ ವಿಸ್ಮಯದಂತೆ ಪಂಪ ಕಾಣಿಸಿಕೊಳ್ಳುತ್ತಾನೆ.

ಪಂಪನು ಬಾಳಿದ ಸಮಾಜ ಹಲವು ಜನ ಪರಾಕ್ರಮಿಗಳು, ಸಾಹಸಿಗಳು, ಪಂಡಿತರನ್ನು ಕಂಡಿರಬೇಕು. ಈ ಹಿನ್ನೆಲೆಯಲ್ಲಿಯೇ ಪಂಪನ ಭಾರತವನ್ನು ಅರ್ಥಮಾಡಿಕೊಳ್ಳಬೇಕು. ಜೊತೆಗೆ ಅವನ ಸಮಕಾಲೀನ ಸಮಾಜವನ್ನು ಅದೇ ಕಣ್ಣೋಟದ ಹಿನ್ನೆಲೆಯಲ್ಲಿಯೇ ಅರ್ಥಮಾಡಿಕೊಳ್ಳಬೇಕು.

ಸಮಾರೋಪ :

ಪಂಪನ ಕಾವ್ಯಗಳು ಮಹಾಕಾವ್ಯಗಳೇ ಹೌದಾದರೂ ಕಾವ್ಯೇತರವಾಗಿ ಬಿಡಿಬಿಡಿಯಾಗಿ ನಿಲ್ಲಬಹುದಾದ ಅಥವಾ ಹಿಂದಿನ ಕಾವ್ಯಗಳು ಪರಿಗಣಿಸದೆ ಬಿಸುಡಿದ ಕಾವ್ಯತ್ವದ ಸಂಗತಿಗಳೂ ಅಲ್ಲಿ ಹೇರಳವಾಗಿ ಸಿಗುತ್ತವೆ. ಊಳಿಗಮಾನ್ಯದ ಚಿತ್ರಗಳು,ಸ್ತ್ರೀ ಚಿಂತನೆ, ಜಾತಿ ಪದ್ಧತಿ, ವ್ಯಸನಗಳು, ವೇಶ್ಯಾವಾಟಿಕೆ, ವಿಟಪುರುಷರು, ಮಧ್ಯ, ಮಧು ದ್ರವ್ಯಾಧಿಗಳು, ಕುಲವಿರಸಗಳು ಇತರ ಧರ್ಮಗಳ ವಿಚಾರಗಳು, ದರ್ಶನಗಳು, ಇದರ ಜೊತೆಗೆ ಅರ್ಥಹೀನ ಸಂಪ್ರದಾಯ, ನಂಬಿಕೆ, ವಾಮಾಚಾರ, ಅತಿಭಕ್ತಿ, ಮನೋದೌರ್ಬಲ್ಯಗಳಿಗೆ ಕಾರಣವಾಗಬಹುದಾದ ನಡೆಗಳು ತಣ್ಣನೆಯ ಬಾಳನ್ನು ಬದುಕುತ್ತಿದ್ದವು.

ಆ ಕಾಲದ ಜನ ವೀರಯುಗಕ್ಕೆ ತಕ್ಕಂತೆ ಯುದ್ಧಕಲೆಗಳಲ್ಲಿ, ಬೇಟೆಯ ನೈಪುಣ್ಯತೆಗಳಲ್ಲಿ, ಕ್ರೀಡೆಗಳಲ್ಲಿ, ಪಂಚಾಂಗ, ವ್ಯಾಕರಣ, ನಾಟಕ, ಗಣಿತ, ಯಂತ್ರೋಪಯೋಗ, ಮಂತ್ರೋಪಯೋಗ, ರತ್ನ ಪರೀಕ್ಷೆ ಇತ್ಯಾದಿಕ ಕಲೆಗಳಲ್ಲಿ ಪಾರಂಗತರಾಗಿದ್ದರು. ಜನರಲ್ಲೂ ಸಹ ಸ್ವಾಭಾವಿಕವಾಗಿ ರಸಿಕತೆ ಇದ್ದು ಅದು ಸಾಹಿತ್ಯ, ನೃತ್ಯ, ವ್ಯಾಪಾರ, ಹೊಕ್ಕಳುತನ, ಕೈಕಸುಬು ಮುಂತಾದವುಗಳಲ್ಲಿ ತೊಡಗಿದ್ದರು. ಸಾಮಾಜಿಕ ಸಂಸ್ಕೃತಿಯ ನೆಲೆಗಟ್ಟು ಎನ್ನುವುದು ಕೇವಲ ರಾಜರಿಗೆ, ಯೋಧರಿಗೆ ಮಾತ್ರ ಸಂಬಂಧಿಸಿಲ್ಲ. ಅದರ ಆಚೆಗೂ ಈ ಸ್ತರದಲ್ಲಿ ಚತುರ್ವರ್ಣ, ಚತುರಾಶ್ರಯ, ಮೇಲು–ಕೀಳು,ಉಡುಗೆ–ತೊಡುಗೆ, ವೇಶ್ಯಾವೃತ್ತಿ,ಸ್ತ್ರೀ, ತಳಸಮುದಾಯಗಳ ಬದುಕು ಇತ್ಯಾದಿಗಳೆಲ್ಲವೂ ಆ ಚೌಕಟ್ಟಿನೊಳಗೆ ಸೇರಿಕೊಳ್ಳುವಂತದ್ದು. ಆದ್ದರಿಂದ ಪಂಪನ ಕಾವ್ಯಾಸಕ್ತಿ ರಾಜತ್ವದ ಪರ ಎಂಬುದು ನಿಜವಾದರೂ ಸಮಾಜದ ಕಟ್ಟ ಕಡೆಯ ಮನುಷ್ಯನ ಕಡೆಗೂ ಅವನ ಕಾವ್ಯಾಸಕ್ತಿಯಕಣ್ಣೋಟವಿತ್ತು ಎಂಬುದನ್ನು ಮರೆಯಲಾಗದು. ಹತ್ತನೇ ಶತಮಾನದ ಸಮಾಜ,ಸಂಸ್ಕೃತಿಯನ್ನು ಅರಿಯಲು ಪಂಪನ ಸಾಹಿತ್ಯದಂತಹ ಬಹುಮುಖ್ಯ ದಾಖಲೆ ಇನ್ನೊಂದಿಲ್ಲ.

ಆದ್ದರಿಂದ ಪಂಪನ ಕಾವ್ಯ/ಸಾಹಿತ್ಯ ಒಂದು ಕಾಲದ ಚಾರಿತ್ರಿಕ ಅವಶ್ಯಕತೆಗಳನ್ನು ಪೂರೈಸಲೆಂದೇ ರಚಿತವಾದಂತೆ ಕಾಣುತ್ತದೆ. ಆ ಸಮಾಜದ ಆಲೋಚನೆ, ಅನುಭವ ಮುಂತಾದವಗಳು ಅವನ ಸಾಹಿತ್ಯದಲ್ಲಿ ಪಡಿಮೂಡಿವೆ. ಯುಗ ಧರ್ಮದ ದೃಷ್ಟಿಯಿಂದ ಕ್ಷಾತ್ರ ಪ್ರಧಾನವಾದ ಸಾಹಿತ್ಯ ಕೇವಲ **'ವೀರತ್ವ'**ವನ್ನು ಮಾತ್ರ ಪರಿಶೀಲಿಸದೆ ಅವನು ಬಾಳಿ ಬದುಕಿದ **'ಸ್ಥಿರ ಸಮಾಜ'**ದ ಉಸಿರಾಟವನ್ನೂ ಸಹ ಅರಿತು ದಾಖಲಿಸಿದೆ.

ಪರಾಮರ್ಶನ ಗ್ರಂಥಗಳು :

1. ಸಾಮಾಜಿಕ ಚಳವಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ – ಡಾ ಎ ಮುನಿಶಾಮಪ್ಪ, ಕಾಲ ಪ್ರಕಾಶನ ಬೆಂಗಳೂರು
2. ಕನ್ನಡ ಕಾವ್ಯ ಪರಂಪರೆಯ ಪರಿಚಯ – ಸಿ ಎನ್ ಕೃಷ್ಣಮೂರ್ತಿ ಐಬಿಹೆಚ್ ಪ್ರಕಾಶನ, ಬನಶಂಕರಿ ಮೂರನೇ ಹಂತ, ಬೆಂಗಳೂರು
3. ಪಂಪ ಒಂದು ಅಧ್ಯಯನ : ಸಂ.ಜಿ. ಎಸ್. ಶಿವರುದ್ರಪ್ಪ, ಸ್ವಪ್ನ ಬುಕ್ ಹೌಸ್, ಬೆಂಗಳೂರು.
4. ಪಂಪ ಭಾರತಂ ಎಂಬ ವಿಕ್ರಮಾರ್ಜುನ ವಿಜಯಂ : ಕೆ. ವಿ. ಪುಟ್ಟಪ್ಪ, ಪ್ರಸಾರಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಪಂಪನ ಸಮಸ್ತ ಭಾರತ ಕಥಾಮೃತ : ಡಾ. ಎಲ್. ಬಸವರಾಜು, ಗೀತಾ ಬುಕ್ ಹೌಸ್, ಮೈಸೂರು.
6. ಪಂಪ ಭಾರತ ಒಂದು ಸಾಂಸ್ಕೃತಿಕ ಅಧ್ಯಯನ : ಡಾ. ಶಾಂತಿನಾಥ ದಿಬ್ಬದ ಸಿದ್ದಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ, ಗುಲ್ಬರ್ಗ.
7. ನಿಚ್ಚಂ ಪೊಸತು : ಪ್ರೊ. ಶಿವರಾಮಯ್ಯ, ಪಂಚಮಿ ಮೀಡಿಯಾ ಪಬ್ಲಿಕೇಶನ್, ಬೆಂಗಳೂರು.
8. ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು : ರಾ. ಗೌ. ಚಿತ್ರಕೂಟ, ಜಯಲಕ್ಷ್ಮಿಪುರ, ಮೈಸೂರು.
9. ಆದಿಪುರಾಣ : ತಿಳಿಗನ್ನಡ ಅವತರಣ :ಹೆಚ್. ಎಸ್. ವೆಂಕಟೇಶಮೂರ್ತಿ, ಅಭಿನವ ಪ್ರಕಾಶನ, ಬೆಂಗಳೂರು.
10. ವಿಕ್ರಮಾರ್ಜುನ ವಿಜಯ : ತಿಳಿಗನ್ನಡ ಅವತರಣ :ಹೆಚ್. ಎಸ್. ವೆಂಕಟೇಶ್ ಮೂರ್ತಿ, ಅಭಿನವ ಪ್ರಕಾಶನ, ಬೆಂಗಳೂರು.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಮಹಾಕಾವ್ಯಗಳಲ್ಲಿ ಧರ್ಮ ಸಂಬಂಧಿ ನೆಲೆಗಳು ಮತ್ತು ಲಿಂಗ ಸಂಬಂಧಗಳು

ಪ್ರೊ. ದೊಡ್ಡಬಸಪ್ಪ ಸಿದ್ದನಗೌಡ ಹುಡೇದಗಡ್ಡಿ,
ಸಂಶೋಧನಾರ್ಥಿ, ಶರಣಬಸವ ವಿಶ್ವವಿದ್ಯಾಲಯ, ಕಲಬುರಗಿ
ಹಾಗೂ ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಸರಕಾರಿ ಪ್ರಥಮ ದರ್ಜೆ ಕಾಲೇಜು, ಮುದಗಲ್,
ಲಿಂಗಸುಗೂರು ತಾ. ರಾಯಚೂರು ಜಿ.
ಮಿಂಚಂಚೆ :dshudedgaddi7581@gmail.com

Manuscript ID:
JRD -2026-180432
ISSN: 2230-9578
Volume 18
Issue 4(II)
Pp.107-112
April 2026
Submitted:15 Mar. 2026
Revised:05 Apr. 2026
Accepted:14Apr.2026
Published:30 April2026

ಸಾರಲೇಖ :

ಧರ್ಮ ಎಂಬ ಪದವೇ ಒಂದು ಸಮಾಜ ವ್ಯಕ್ತಿ, ಸಮೂಹ, ಸಮುದಾಯವನ್ನು ಸನ್ಮಾರ್ಗದಲ್ಲಿ ನಡೆಸಲು ಪ್ರೇರೇಪಿಸುವ ವ್ಯವಸ್ಥೆ ಎಂದು ಹೇಳಬಹುದು. ಇಂದು ಸನ್ಮಾರ್ಗ ಎನ್ನುವುದು ಒಂದು ಸಾಪೇಕ್ಷಿತ ಪರಿಕಲ್ಪನೆಯಾಗಿ ಮಾತ್ರ ಬಳಕೆಯಾಗುತ್ತಿದೆ ಹೊರತು ಸರ್ವರಿಗೂ ಒಳ್ಳೆಯದನ್ನು ಉಂಟು ಮಾಡುವ ಸಾಧನಗಳನ್ನು ಒಳಗೊಂಡಿಲ್ಲ. ಕೆಲವು ಸ್ಥಾಪಿತ ಧರ್ಮಗಳು ಪ್ರತಿಪಾದಿಸುವುವಂತಹ ಮೌಲ್ಯಗಳು ಸ್ತ್ರಿ ಪರವಾಗಿಲ್ಲದೆ ಪುರುಷಾಭಿಮುಖಿವಾಗಿ ಮಾತ್ರ ಇರುವುದನ್ನು ಕಾಣುತ್ತೇವೆ. ಧರ್ಮಕ್ಕೆ ಸಂಬಂಧಿಸಿದಂತೆ ಸ್ತ್ರೀಯ ಕುರಿತ ಧೋರಣೆಗಳು ಎರಡು ರೀತಿಯಲ್ಲಿ ಹೇಳಬಹುದು. ಒಂದೆಡೆ ಸ್ತ್ರೀಯನ್ನು ದೇವತೆಯೆಂದು ಪೂಜಿಸಿದರೆ ಮತ್ತೊಂಡೆ ಆಕೆಯ ಮೇಲೆ ದೌರ್ಜನ್ಯ ಎಸಗುವುದು ಧಾರ್ಮಿಕ ಸಿದ್ದಾಂತಗಳಲ್ಲಿ ಕಾಣಬಹುದಾಗಿದೆ.

ಧರ್ಮಕ್ಕೆ ಸಂಬಂಧಿಸಿದ ಅಂಶಗಳು ಪುರುಷರಿಂದ ಉಗಮವಾಗಿದೆ ಎಂದು ಹೇಳಬಹುದು. ಆದರೆ ಧರ್ಮದಲ್ಲಿ ಪುರುಷ ತನಗೆ ಬೇಕಾದಂತೆ ಆಚರಣೆಗಳನ್ನು ಸಂಪ್ರದಾಯಗಳನ್ನು ರೂಪಿಸಿಕೊಂಡಿದ್ದಾನೆ ಹೊರತು ಇವು ಮಹಿಳಾ ಅಸ್ತಿತ್ವದ ಬಗ್ಗೆ ಯಾವುದೇ ನಿಲುವುಗಳನ್ನ ತಾಳುವುದಿಲ್ಲ "ಒಂದು ದೃಷ್ಟಿಯಲ್ಲಿ ಸ್ತ್ರೀಯನ್ನು ಧರ್ಮವು ಆದರ್ಶಭಾವನೆಯಿಂದ ಕಾಣುತ್ತಾ ಅಸ್ತಿತ್ವದ ಬಗ್ಗೆ ಯಾವುದೇ ನಿಲುವುಗಳನ್ನು ತಾಳುವುದಿಲ್ಲ ಒಂದು ದೃಷ್ಟಿಯಲ್ಲಿ ಸ್ತ್ರೀಯನ್ನು ಧರ್ಮವು ಆದರ್ಶಭಾವನೆಯಿಂದ ಕಾಣುತ್ತಾ ಬಂದಿದ್ದು ಆದರೆ ಇದೇ ಸ್ಥಾನಮಾನಗಳು ಅವಳ ವಾಸ್ತವ ಬದುಕಿನ ವ್ಯವಸ್ಥೆಯಲ್ಲಿ ಧರ್ಮವು ನಿರ್ದೇಶಿದಂತೆ ಹಾಗೂ ನಿಯಂತ್ರಣ ಹೇರಿದಂತೆ ಅವಳನ್ನು ಸುಧೀರ್ಘವಾಗಿ ಒಂದು ಚೌಕಟ್ಟಿಗೆ ಅಂಟಿ ಬೀಳುವಂತೆ ಮಾಡಲಾಗಿದೆ. ಹುಟ್ಟು, ಸಾವು, ವಿವಾಹ, ಶಿಕ್ಷಣ, ವೈದವ್ಯ ಇವುಗಳಲ್ಲಿ ಸ್ತ್ರೀಯರು ಬಂಧನಕ್ಕೆ ಒಳಗಾಗಿರುವುದು ಕಂಡು ಬರುತ್ತದೆ" ಸಮಾಜದಲ್ಲಿ ಧರ್ಮ ಏರ್ಪಡಲು ಮುಖ್ಯವಾಗಿ ಸ್ತ್ರೀಯನ್ನು ಶುದ್ದ–ಅಶುದ್ದಗಳ ಪರಿಕಲ್ಪನೆಗಳಿಂದ ದೂರವಿರಿಸಿದಾಗ ಅವಳು ಅಸ್ಪೃಶ್ಯಳಾಗಿ ಕಾಣುತ್ತಾ ಬಂದಳು. ಇದರಿಂದಾಗಿ ಮಹಿಳೆಯ ಸಾಮಾಜಿಕ ಮತ್ತು ಆರ್ಥಿಕ ಜೀವನದಿಂದ ಬಲವಂತವಾಗಿ ಹೊರದೂಡಲ್ಪಟ್ಟಳು. ಇದು ಮುಂದೆ ಸಮುದಾಯಗಳಲ್ಲಿ ಪುರುಷನ ನಂತರ ಗಂಡು ಉತ್ತರಾಧಿಕಾರತ್ವವನ್ನು ಪಡೆಯುವ ಪದ್ದತಿಯನ್ನು ಹುಟ್ಟು ಹಾಕಿತು. ಆದ್ದರಿಂದ ಕುಟುಂಬಗಳ ಮೂಲಕ ಉಂಟಾದ ಧಾರ್ಮಿಕ ಸಂಘರ್ಷಗಳು, ಲಿಂಗತಾರತಮ್ಯ, ಲಿಂಗ ಸಂಬಂಧದೊಂದಿಗೆ ಕಾಣಲು ಪ್ರಾರಂಭಿಸಿತು. ಗಂಡಿನಷ್ಟೇ ಮಹಿಳೆಗೂ ಸಾಮಾಜಿಕ ಜೀವನದಲ್ಲಿ ಸಮಾನತೆಯ ಪ್ರತಿಪಾದನೆಯನ್ನು ಯಾವುದೇ ಧರ್ಮಗಳು ಬೆಂಬಲಿಸದೇ ಇರುವುದು ಸ್ತ್ರೀ ವಿರೋಧಿ ಪ್ರವೃತ್ತಿಯಾಗಿ ಬೆಳೆದುಕೊಂಡು ಬಂದಿತು.

ಮುಖ್ಯ ಪದಗಳು:

ಸಾಂಪ್ರದಾಯಿಕ ಪದ್ದತಿ, ಧಾರ್ಮಿಕ ಸಂಘರ್ಷ, ಲಿಂಗ ಸಂಬಂಧಗಳು, ಪಾತಿವ್ರತ್ಯ, ಸ್ತ್ರೀ ಅಸ್ಮಿತೆ,

ವೈದಿಕ ಧರ್ಮದಲ್ಲಿ ಮಹಿಳೆಯರಿಗೆ ಸಮಾನತೆ, ಸ್ವಾತಂತ್ರ್ಯವಿಲ್ಲದೆ ಅಸಮಾನತೆಯ ಜೀವನದಲ್ಲಿ ಕಾಲ ಕಳೆಯಬೇಕಿತ್ತು ವೈದಿಕ ಧರ್ಮಕ್ಕೆ ವಿರೋಧವಾಗಿ ಬಂದ ಬೌದ್ಧ ಧರ್ಮ ಸ್ತ್ರೀಯರಿಗೆ ಸನ್ಯಾಸ ದೀಕ್ಷೆಯನ್ನು ಸ್ವೀಕರಿಸಲು ಮತ್ತು ಸಂಘ ಜೀವನ ನಡೆಸುವುದರ ಮೂಲಕ ಅವಳಿಗೆ ತನ್ನದೇ ಆದ ಧಾರ್ಮಿಕ ಅಸ್ತಿತ್ವ ಕಂಡುಕೊಳ್ಳಲು ಅವಕಾಶ ಕಲ್ಪಿಸಿತು. ಬೌದ್ಧ ಮತ್ತು ಜೈನ ಧರ್ಮ ಎರಡರಲ್ಲೂ ಸ್ತ್ರೀ–ಪುರುಷ ಕುರಿತಂತೆ ಲಿಂಗ ಸಂಬಂಧ ಅಡಕವಾಗಿದ್ದರೂ ಕುಟುಂಬ, ವಿವಾಹ, ಮಕ್ಕಳು, ಸಾಂಸಾರಿಕ ಜೀವನ ಎಂಬ ಸಾಂಸ್ಥಿಕ ಬಂಧನದಿಂದ ಹೊರಬರಲು ಅವಕಾಶ ಮಾಡಿಕೊಡಲಾಯಿತು. ಜಗತ್ತಿನ ಯಾವುದೇ ಸಮಾಜದಲ್ಲಿ ಧರ್ಮ ಅಪೇಕ್ಷಿತ ಸಂಘರ್ಷಗಳು ವಿವಿಧ ರೀತಿಯ ಆಚರಣೆಗಳು ವಿಧಿನಿಷೇಧಗಳನ್ನು ಹುಟ್ಟಿ ಹಾಕಿರುತ್ತದೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಪ್ರೊ. ದೊಡ್ಡಬಸಪ್ಪ ಸಿದ್ದನಗೌಡ ಹುಡೇದಗಡ್ಡಿ, ಸಂಶೋಧನಾರ್ಥಿ, ಶರಣಬಸವ ವಿಶ್ವವಿದ್ಯಾಲಯ, ಕಲಬುರಗಿ
ಹಾಗೂ ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಮುದಗಲ್,
ಲಿಂಗಸುಗೂರು ತಾ. ರಾಯಚೂರು ಜಿ.

How to cite this article:
ಪ್ರೊ. ದೊಡ್ಡಬಸಪ್ಪಸಿದ್ದನಗೌಡಹುಡೇದಗಡ್ಡಿ,*2026).*ಮಹಾಕಾವ್ಯಗಳಲ್ಲಿ ಧರ್ಮ ಸಂಬಂಧಿ ನೆಲೆಗಳು ಮತ್ತು ಲಿಂಗಸಂಬಂಧಗಳು.
Journal of Research and Development, 18(4(II)), 107–112. https://doi.org/10.5281/zenodo.19396651

Quick Response Code:
Website: https://jrdrvb.org/
DOI: 10.5281/zenodo.19396651
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಈ ಪದ್ಧತಿಗಳನ್ನು ಸಮುದಾಯಗಳಲ್ಲಿ ಚಾಚು ತಪ್ಪದೆ ಇಂದಿಗೂ ಪಾಲಿಸಿಕೊಂಡು ಬಂದಿರುವುದನ್ನು ಕಾಣಬಹುದು.ಇವುಗಳನ್ನು "ಸಾಂಪ್ರದಾಯಿಕ ಪದ್ದತಿಗಳು ಎಂದು ಕರೆಯುವ ವಿಧಿ ನಿಷೇಧಗಳ ಚೌಕಟ್ಟಿನಲ್ಲಿಯೇ ತಮ್ಮ ಬದುಕು ಇರಬೇಕೆಂಬುದು ತಳ ಸಮುದಾಯಗಳ ಅಪೇಕ್ಷೆಯಾಗಿದೆ" ಸಾಮಾನ್ಯವಾಗಿ ಸಮಾಜದಲ್ಲಿ ಇರುವಂತಹ ಆಚರಣೆ ವಿಧಿ ನಿಷೇಧಗಳು ಸಾಮಾಜಿಕ ಬದ್ಧತೆಗಳು ಧಾರ್ಮಿಕತೆಯ ಸಿದ್ಧ ಮೌಲ್ಯಗಳನ್ನು ಕಾಪಾಡಲು ಸಾಧ್ಯವಾಗದಿದ್ದಾಗ ಸಂಘರ್ಷಗಳು ಏರ್ಪಡುತ್ತದೆ. ಹಳೆ ತಲೆಮಾರು ಹೊಸ ತಲೆಮಾರುಗಳ ಮಧ್ಯೆ ಪರಂಪರೆಯಿಂದ ಬಂದ ನಂಬಿಕೆಗೆ ಘರ್ಷಣೆ ಉಂಟಾದಾಗ ಲಿಂಗಸಂಬಂಧದಲ್ಲಿ ಸಂಘರ್ಷಣೆಗಳು ಉಂಟಾಗುತ್ತವೆ. ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಮನುಷ್ಯನು ಧರ್ಮದ ಅಧೀನಕ್ಕೆ ಒಳಪಟ್ಟು ಆಚರಣೆ ಮತ್ತು ವಿಧಿನಿಷೇಧಗಳ ಹೆಸರಲ್ಲಿ ಅಸಮಾನತೆಯನ್ನು ಬಿತ್ತಿದ್ದಾನೆ. ಇದು ವಾಸ್ತವ ಬದುಕಿನಿಂದ ಸಮುದಾಯ ಮತ್ತು ಲಿಂಗಸಂಬಂಧಗಳಿಂದ ಭಿನ್ನ ಸ್ವರೂಪತೆಯನ್ನು ಪಡೆದುಕೊಳ್ಳುತ್ತದೆ.

ಪುರುಷ–ಸ್ತ್ರೀಯರ ನಡುವೆ ಜಾತಿ–ಜಾತಿಗಳ ನಡುವೆ ಸಮುದಾಯಗಳ ಧಾರ್ಮಿಕ ಸಂಘರ್ಷ ಬೇರೆ ಬೇರೆ ತೆರನಾಗಿರುತ್ತದೆ.ಆದರೆ ಇವುಗಳ ನಡುವೆ ಯಾವುದೇ ಸಂಘರ್ಷಗಳು ಸಾರ್ವತ್ರಿಕವಾಗಿ ಬಿಂಬಿತವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಧಾರ್ಮಿಕ ನೆಲೆಗಳು ಏಕಪಕ್ಷೀಯವಾಗಿ ತೀರ್ಮಾನವಾಗಿ ಸೃಷ್ಟಿಯಾಗುತ್ತದೆ.ಸಾಮಾಜಿಕ ವ್ಯವಸ್ಥೆಯಲ್ಲಿ ಲಿಂಗ ಸಂಬಂಧಗಳು ಬಹು ಸಂಸ್ಕೃತಿಯ ಆಧಾರದಲ್ಲಿ ನಿಂತಿದ್ದು ಸಮಾಜವನ್ನು ನಿರ್ಭಂಧಿಸುವ ಪ್ರಯತ್ನಗಳು ಈ ನಿಟ್ಟಿನಲ್ಲಿ ನಡೆಯತ್ತಿವೆ. ಸಮಾಜದಲ್ಲಿ ಧಾರ್ಮಿಕ ನಿಷೇಧಗಳ ಹೇರಿಕೆ ಪುರುಷರಿಂದ ಹುಟ್ಟಿದ್ದು,ತನ್ನ ಅಧಿಕಾರ, ಜ್ಞಾನ, ಪ್ರಭುತ್ವಗಳ ಒತ್ತಾಸೆಯಾಗಿ ಮಹಿಳಾ ಸಂಸ್ಕೃತಿಯ ಮೇಲೆ ಅನೇಕ ಭಿನ್ನತೆಗಳನ್ನು ಹೇರಿಕೊಂಡು ಬದಲಾಗುತ್ತಿದೆ. ಲಿಂಗ ಸಂಬಂಧದಲ್ಲಿ ಇರುವ ಅಸಮಾನತೆಯ ಪ್ರಾಬಲ್ಯತೆ ಪ್ರಬಲ ವರ್ಗಗಳು ಅಸಾಯಕ ವ್ಯಕ್ತಿಯಾಗಲಿ, ತಳಸಮುದಾಯಗಳಾಗಲಿ ಇವುಗಳ ದುರ್ಬಲ ವರ್ಗಗಳನ್ನು ತನ್ನ ದೃಷ್ಟಿಯಲ್ಲಿ ಹಿಡಿದಿಡುವ ತಂತ್ರವನ್ನು ಹುಡುಕುತ್ತಿರುತ್ತದೆ.ಪ್ರಬಲ ವರ್ಗಗಳು ತಳ ಸಮುದಾಯಗಳ ಮೇಲೆ ತಮಗೆ ಅನುಕೂಲಕರವಾದ ಸಂಪ್ರದಾಯಗಳನ್ನು ಹೇರಿ ಅವರನ್ನು ತಮ್ಮ ನಿಯಂತ್ರಣದಲ್ಲಿ ಹಿಡಿದಿಟ್ಟುಕೊಂಡಿರುತ್ತಾರೆ.ಅಲ್ಲದೇ ತಳ ಸಮುದಯಗಳ ಆಲೋಚನೆ, ಬದುಕು, ಸಾಮಾಜಿಕ ಜೀವನವು ಸಹ ಆಳುವ ವರ್ಗದವರ ಕೈಯಲ್ಲಿಯೇ ಇರುತ್ತದೆ.

ಸಮಾಜದ ದೈನಂದಿನ ಬದುಕಿನ ಬಹುಮುಖ್ಯ ಲಕ್ಷಣವೆಂದರೆ ದೈವಭಕ್ತಿ.ಜನರು ದೈವಭಕ್ತಿ ಉಳ್ಳವರಾಗಿದ್ದು ತಮ್ಮ ಬದುಕಿಗೆ ಸಹಾಯವಾಗುವ ಎಲ್ಲ ವಸ್ತುಗಳಲ್ಲಿ ದೈವತ್ವವನ್ನು ಕಾಣುವ ದೃಷ್ಟಿ ಬೆಳೆಸಿಕೊಂಡಿದ್ದಾರೆ. ದೈವದ ಬಗ್ಗೆ ಅಪಾರವಾದ ನಂಬಿಕೆ ಇಟ್ಟುಕೊಂಡಿರುತ್ತಾರೆ.ಅದು ಇಲ್ಲಿಯ ನಾಯಕರ ಪವಾಡಗಳಿಂದ ಮಹಿಮೆಯಿಂದ ದೈವ ಜನರಿಗೆ ಒಡನಾಡಿಯಾಗಿದ್ದು ಕಷ್ಟಗಳ ನಿವಾರಣೆ ಎಂದು ನಂಬುತ್ತಾರೆ.ನಮ್ಮ ಧಾರ್ಮಿಕ ಸಂತರು, ಯೋಗಿಗಳು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದ್ದು ಅವರು ಮಾಡುವ ಪವಾಡಗಳು ಜನರ ಸಮಸ್ಯೆಗಳಿಗೆ ಪರಿಹಾರವೆಂದು ಭಾವಿಸುತ್ತಾರೆ. "ಧಾರ್ಮಿಕ ಮಹಾಪುರುಷರ ಪವಾಡಗಳು ಸಮಾಜದ ಮೇಲೆ ದೃಷ್ಟಿಪರಿಣಾಮಕ್ಕಿಂತ ಸಾತ್ವಿಕ ಪರಿಣಾಮಗಳನ್ನುಂಟು ಮಾಡಿರುವುದನ್ನು ಮಹಾಕಾವ್ಯಗಳಲ್ಲಿ ಕಾಣಬಹುದು" ಧಾರ್ಮಿಕ ನಾಯಕರ ಕುರಿತಂತೆ ಜನರಿಗೆ ವಿಶೇಷವಾದ ಭಕ್ತಿ ಭಾಷೆ, ಆಸಕ್ತಿಯಿಂದ ಕೂಡಿರುತ್ತದೆ. ಏಕೆಂದರೆ ಈ ಧಾರ್ಮಿಕ ನಾಯಕರ ಪವಾಡಗಳು ಸಮಾಜದ ಹಿತಕ್ಕೆ ಅನುಗುಣವಾಗಿ ಧರ್ಮವನ್ನು ಉಳಿಸುವ ಸಲುವಾಗಿ ಮಾಡುವ ಕಾರ್ಯಗಳು ಆಯಾ ಸಮುದಾಯದ ದೇವರಿಗೆ ಸಂಬಂಧಿಸಿರುತ್ತವೆ. ಆದ್ದರಿಂದಲೇ ಈ ನಾಯಕರನ್ನು ಆರಾಧಿಸುವ ಸಮುದಾಯ ಅವರನ್ನು ದೈವತ್ವಕ್ಕೇರಿಸುತ್ತಾರೆ.ಆದ್ದರಿಂದಲೇ ಮೌಖಿಕ ಕಾವ್ಯಗಳಲ್ಲಿ ಪವಾಡಗಳನ್ನು ನಡೆಸದೆ ಇರುವ ನಾಯಕರು ಇಲ್ಲಿ ಈ ನಾಯಕರ ಕಾವ್ಯಗಳಿಗೆ ಜೀವಂತಿಕೆ ಆಗಿದ್ದಾರೆ.ಇವರ ಮೂಲಕವೇ ಸಮಾಜದಲ್ಲಿ ಧಾರ್ಮಿಕ ನೆಲೆಯ ವಿವಿಧತೆಯಲ್ಲಿ ರೂಪಗೊಂಡದ್ದನ್ನು ಕಾಣಬಹುದುದಾಗಿದೆ. ಹುಟ್ಟು ಮತ್ತು ಬಂಜೆತನಕ್ಕೆ ಸಂಬಂಧಿಸಿದ ಧಾರ್ಮಿಕ ನೆಲೆಗಳು ಹುಟ್ಟು ಎನ್ನುವಂತದ್ದು ಲೋಕದ ದೃಷ್ಟಿಯಲ್ಲಿ ಮಹತ್ವವನ್ನು ಪಡೆದಿದೆ. ಚೈತನ್ಯದಾಯಕವಾಗಿರುವ ಹುಟ್ಟಿನ ನಿಯಮವು ವಿಸ್ಮಯ ಮತ್ತು ಕುತೂಹಲದಿಂದ ಕೂಡಿದೆ.ಇದು ಪ್ರಕೃತಿಯ ನಿಯಮವೆಂದು ತಿಳಿಯಲಾಗುತ್ತದೆ.ಇದಕ್ಕೆ ಜಗತ್ತಿನ ಜಲ, ಚರ ಮತ್ತು ಅಖಂಡ ಜೀವಜಾಲಗಳು ಒಳಗಾಗಿದ್ದು ಪ್ರತಿಯೊಂದು ವಿಸ್ಮಯವೇ ಆಗಿರುತ್ತದೆ. ಹುಟ್ಟು ಎಂಬ ಪರಿಕಲ್ಪನೆಗೆ ಬದಲಾವಣೆ ಪರಿವರ್ತನೆ ಎನ್ನುವ ತಾತ್ವಿಕತೆ ಅರ್ಥವಿದೆ. ಇದು ಭೌತಿಕ ಮತ್ತು ಜೈವಿಕ ವಿಸ್ಮಯವಾಗಿದೆ".ಸಾಮಾನ್ಯವಾಗಿ ಸಮುದಾಯಗಳಲ್ಲಿ ಹುಟ್ಟಿನ ನಿಯಮಕ್ಕೆ ಬೇರೆಯದಾದ ಸ್ವರೂಪವಿದೆ. ಹೆಣ್ಣು, ಗಂಡು ಎಂಬ ಜೈವಿಕ ಅಂಶಗಳು ಲಿಂಗ ಸಂಬಂಧದ ಮೂಲಕ ಸಾಮಾಜೀಕರಣಗೊಂಡಿವೆ. ಪುರುಷ ಶ್ರೇಷ್ಠ ಮಹಿಳೆ ಕನಿಷ್ಠ ಎಂಬ ಭಾವನೆ ಅನಾದಿ ಕಾಲದಿಂದಲೂ ಸಮಾಜದಲ್ಲಿ ಬೇರೂರಿದ್ದರಿಂದ ಅವಳ ಹುಟ್ಟನ್ನು ವಿರೋಧಿಸುತ್ತಾ ಹುಟ್ಟಿಗೆ ಸಂಬಂಧಿಸಿದಂತೆ ಹೆಣ್ಣನ್ನು ಧರ್ಮದ ಹೆಸರಿನಲ್ಲಿ ವಿರೋಧಿಸುತ್ತಾ ಬಂದಿದ್ದಾರೆ.

ಪುರುಷಪ್ರಧಾನ ಸಂಸ್ಕೃತಿಯಲ್ಲಿ ಗಂಡು ಮಗುವಿನ ಜನನಕ್ಕೆ ಇರುವಷ್ಟು ಸಡಗರ, ಸಂಭ್ರಮ ಹೆಣ್ಣು ಮಕ್ಕಳ ಜನನಕ್ಕೆ ಇರುವುದಿಲ್ಲ. ಹೆಣ್ಣು ಹುಟ್ಟಿದ ತಕ್ಷಣ ತಾತ್ಸಾರ ಮನೋಭಾವದಿಂದ ಕಾಣುತ್ತಾರೆ. ಕೆಲ ಸಮುದಾಯಗಳು ತಮ್ಮ ಉತ್ತರಾಧಿಕಾರತ್ವಕ್ಕಾಗಿ, ಕೆಲ ವಿಚಾರಗಳ ಮುಂದುವರಿಯವಿಕೆಗೆ ಮಗುವಿನ ಜನನಕ್ಕೆ ಕೆಲಕಾವ್ಯಗಳು ರೂಪುಗೊಂಡಿವೆ. ಅವುಗಳೆಂದರೆ ಮಲೆಮಾದೇಶ್ವರ, ಜುಂಜಪ್ಪ ಮೈಲಾರಲಿಂಗ, ಮಂಟೇಸ್ವಾಮಿ, ಮಾಳಿಂಗರಾಯ ಕಾವ್ಯಗಳಲ್ಲಿ ಸಾಂಸ್ಕೃತಿಕ ನಾಯಕರ ಹುಟ್ಟು ಅಪೇಕ್ಷಿತವಾಗಿದ್ದು ಎಲ್ಲಾ ಮಕ್ಕಳು ಹುಟ್ಟುವಂತೆ ಹುಟ್ಟದೆ ಬೇರೆಯಾದ ರೀತಿಯಲ್ಲಿ ಜನನ ಪಡೆಯುತ್ತಾರೆ. ಮಲೆಮಾದೇಶ್ವರ ಕಾವ್ಯದಲ್ಲಿ ಮಾದೇಶ್ವರ ಹೊಟ್ಟೆಯಲ್ಲಿ ಹುಟ್ಟದೆ ಗಂಧದ ಕರಡಿಗೆಯಿ0ದ ಜನಿಸುತ್ತಾರೆ, ಈ ಸಾಂಸ್ಕೃತಿಕ ನಾಯಕರಿಗೆ ಜನನ ಎನ್ನುವುದು ಮುಟ್ಟು ಮಡಿ, ಮೈಲಿಗೆ, ಆಗದೆ ಹಾಗೂ ದಾಂಪತ್ಯವನ್ನು ಮುಕ್ತಿಗೆ ಇರುವ ದಾರಿ ಎಂದು ಪರಿಗಣಿಸಿ ಹೆಣ್ಣಿನ ಯೋನಿಯಿಂದ ಜನಿಸಿದರೆ ಮೈಲಿಗೆಯಾಗುತ್ತದೆ ಎಂಬ ಅಭಿಪ್ರಾಯ ಇರುವುದರಿಂದ ಅಸಹಜವಾಗಿ ಜನಿಸುತ್ತಾರೆ.

"ತಾಯಿ ನಿದ್ರೆ ಮಾಡ್ತಾ ಮಲಕ್ಕೊಂಡರು
ಬೆಳ್ಳಿ ಮೂಡಿ ಬೆಳಗಾಗುವ ಹೊತ್ತಿಗೆ
ಆ ಗಂಧದ ಕರಡಿಗೆಯಲ್ಲಿದ್ದರ ಪುಟುಲಿಂಗವು
ಉತ್ತಾಜಮ್ಮನ ಮಗ್ಗುಲಲ್ಲಿ
ಸಣ್ಣ ಬಾಲಕನಾಗಿ ಮಲಗವರೇ"

ಯಾವುದೇ ಮಡಿಮೈಲಿಗೆ ಇರಬಾರದೆಂಬ ಕಾರಣಕ್ಕ ಅಸಹಜವಾಗಿ ಹುಟ್ಟುವ ಮಾದೇಶ್ವರ ತನ್ನ ಹುಟ್ಟನ್ನು ಧಾರ್ಮಿಕತೆಯ ಬಣ್ಣ ಹಚ್ಚುತ್ತಾರೆ.ಇದೇ ರೀತಿಯಾಗಿ ಜಂಜಪ್ಪನು ಹುಟ್ಟನ್ನು ಮೈಲಿಗೆ ಎಂದು ಭಾವಿಸಿ ತಾಯಿಯ ಹೊಟ್ಟೆಯಿಂದ ಹುಟ್ಟಲು ನಿರಾಕರಿಸುತ್ತಾನೆ.

ಹೆಣ್ಣು ಸಮಾಜದಲ್ಲಿ ಹೆರುವ ಯಂತ್ರವಾಗಿ ಸಂತಾನಕ್ಕೆ ಮಾತ್ರ ಸೀಮಿತ ಎನ್ನುವಂತೆ ಧರ್ಮ ಪ್ರೇರಿತ ನಂಬಿಕೆಯಾಗಿದೆ. ಈ ನಂಬಿಕೆಗೆ ಬಂಜೆತನ ವಿರುದ್ಧವೆನಿಸಿದೆ. ಹುಟ್ಟಿನ ಸಂದರ್ಭದಲ್ಲಿ ಅವಳನ್ನು ಧಾರ್ಮಿಕಾಚರಣೆಗೆ ಒಳಪಡಿಸಿದರೆ ಸಂತಾನಕ್ಕೆ ಸಂಬಂಧಿಸಿದಂತೆ ಮತ್ತೊಂದು ರೀತಿಯ ಮೌಢ್ಯಾಚರಣೆಯನ್ನು ಧಾರ್ಮಿಕತೆಯ ಹೆಸರಿನಲ್ಲಿ ನಡೆಸಿಕೊಂಡು ಬರಲಾಗುತ್ತಿದೆ.

ಮಕ್ಕಳನ್ನು ಹೆರಲಾರದವರನ್ನು ಗೊಡ್ಡು ಎಂದು ಸಂಭೋಧಿಸುವ ವ್ಯವಸ್ಥೆ ಅದನ್ನೆ ಬಂಜೆತನ ಎಂಬ ಧಾರ್ಮಿಕ ಚೌಕಟ್ಟನ್ನು ಹಾಕಿ ಅವಳನ್ನೇ ಪಶುಗಳಿಗಿಂತ ಕೀಳಾಗಿ ನಡೆಸಿಕೊಂಡು ಬರಲಾಗುತ್ತಿದೆ. "ಹೆಣ್ಣಿಗೆ ಪುರುಷರಿಂದ ಲಿಂಗ ಸಂಬಂಧಗಳು ಬಂದಿದೆಯೋ ಎನ್ನುವುದನ್ನು ವ್ಯವಸ್ಥೆಯು ಯೋಚಿಸದೆ ಪುರುಷನ ಪರವಾಗಿ ನಿಲ್ಲುವ ಮತ್ತು ಹೆಣ್ಣಿನ ಮೇಲೆಯೆ ಆಪಾದನೆ ಮಾಡಲಾಗುತ್ತದೆ. ಹಾಗಾಗಿ ಹೆಣ್ಣನ್ನು ಬಂಜೆತನ ವಿಷಯದಲ್ಲಿ ಅಪಾದನೆ ಮಾಡಲಾಗುತ್ತದೆ. ವಿವಾಹಿತ ಮಹಿಳೆ ತಾಯಿಯಾಗಲೇಬೇಕು ಎನ್ನುವುದರ ಒತ್ತಾಯದ ಹಿಂದೆ ಪುರುಷ, ಕುಟುಂಬ ಮತ್ತು ಸಮಾಜದ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಯಜಮಾನಿಕೆಯ ಹುನ್ನಾರವೂ ಅಡಗಿದೆ. ಹೆಣ್ಣಿಗೆ ತಾಯ್ತನ ಎನ್ನುವುದು ವೈಯಕ್ತಿಕ ಅಭಿಲಾಷೆಗಿಂತ ಕುಟುಂಬದ, ಸಮಾಜದ ಒತ್ತಾಯ ಹೆಚ್ಚು ಇರುತ್ತದೆ. ಇದಕ್ಕೆ ಕಾರಣ ವಂಶವನ್ನು ಬೆಳೆಸುವ, ಮುಂದುವರೆಸುವ ಸಾಮರ್ಥ್ಯ ಸ್ತ್ರೀಗೆ ಮಾತ್ರ ಸಾಧ್ಯ ಎಂಬ ಅಭಿಪ್ರಾಯವಿದೆ.

ಮಾದೇಶ್ವರನ ಕಾವ್ಯದಲ್ಲಿ ಸೋಲಿಗ ಸಂಕಮ್ಮನಿಗೆ ಬಂಜೆಯ ಸಂಕಷ್ಟವೂ ಎದುರಾಗುತ್ತದೆ.ಸಂಕಮ್ಮಳನ್ನು ಹುಟ್ಟು ಬಂಜೆಯೆಂದು ಕುಟುಂಬ, ಸಮಾಜವು ಹಲವು ಬಗೆಯಲ್ಲಿ ನಿಂದನೆಗೆ ಒಳಪಡಿಸುತ್ತದೆ.

"ದಟ್ಟಾ ಧರಣಿ ಸಂಕಮ್ಮ
ಹುಟ್ಟು ಬಂಜೆ ಹೆಣ್ಣೆ
ಮಕ್ಕಳ ಫಲವೇ ಮೊದಲಿಲ್ಲ
ಎದ್ದು ಮುಖವ ನೋಡಿದರೆ
ನಾವು ಬಂಜೇರಾಗುವೆವು
ಸಂಗಡ ದನಗಳ ಕಾದಾರ
ದನಗಳು ಬಂಜೇರಾಗುವವು
ಮಾಡಿದ ಅಡಿಗೆ ಉಂಡಾರೆ
ನಾವು ಬಂಜೆರಾಗುವೆವು
ಮೀರ ನೀರ ದಾಟಿದರೆ
ನಾವು ಬಂಜೇರಾಗುವೇವು
ನಮ್ಮ ಮಕ್ಕಳು ಬಂಜೆರಾಗುವರು".

ಇಲ್ಲಿ ಸಂಕಮ್ಮಗೆ ತಾಯ್ತನದ ಭಾಗ್ಯವಿಲ್ಲದಾಗ ಕೌಟುಂಬಿಕವಾಗಿ ಎಲ್ಲರಿಂದಲೂ ನಿಂದನೆಗೊಳಗಾಗುತ್ತಾಳೆ.ಮಕ್ಕಳು ಪಡೆಯುವುದು ಕೇವಲ ಹೆಣ್ಣಿನ ವೈಯಕ್ತಿಕ ಅಭಿಪ್ರಾಯವಷ್ಟೆ ಅಲ್ಲ. ನಮ್ಮ ಧಾರ್ಮಿಕ ಸಾಮಾಜಿಕ ನಂಬಿಕೆಯೂ ಆಗಿದೆ. ಹಿಂದೂ ಧರ್ಮದಲ್ಲಿ ಮಕ್ಕಳ ಫಲ ಎಂಬುದು ಸ್ವರ್ಗ ಶುಭಕಾರ್ಯ ಎಂಬುದಕ್ಕೆ ದಾರಿಮಾಡಿಕೊಡುತ್ತದೆ.ಪುರುಷ ಸಮಾಜದ ಒತ್ತಾಯದಿಂದ ಸಂಕಮ್ಮನಾದ ಹೆಣ್ಣು ಮಕ್ಕಳು ಧಾರ್ಮಿಕ ಅಸಮಾನತೆಯ ಸಂಘರ್ಷಕ್ಕೆ ಒಳಗಾಗುವುದಲ್ಲದೆ ಅವಳ ಅಸ್ತಿತ್ವವು ವಿನಾಶ ಹೊಂದುತ್ತದೆ.

ಜುಂಜಪ್ಪನ ಕಾವ್ಯದಲ್ಲಿಯು ಸಿನ್ನಮ್ಮನು ಬಂಜೆತನದ ನೋವನ್ನೇ ಅನುಭವಿಸಿದವಳು. ಇಂತಹ ಸಂದರ್ಭದಲ್ಲಿ ಜೋಗಪ್ಪ ಸಿನ್ನಮ್ಮನಲ್ಲಿಗೆ ಬಂದು ಭಿಕ್ಷೆಯನ್ನು ಬೇಡುತ್ತಾನೆ.

"ಸಿನ್ನಮ್ಮ ಅಕ್ಕಿ ಬೇಳೆ ತಗಂಡು ಬಂದು ಏನಮ್ಮ
ಹೆಣ್ಣು ಮಕ್ಕಳೆಷ್ಟು ಗಂಡು ಮಕ್ಕಳೆಷ್ಟು
ಅಂತ ಜೋಗಪ್ಪಾ
ಹೆಣ್ಣು ಗಂಡು ಕೂಡ ಇಲ್ಲಪ್ಪಾ ಅಂದ್ಲು
ಬಂಜೆ ಕೈಯಾಗ ಭಿಕ್ಷೆ ನಾನು ನೀಡಿಸ್ಕಳಲ್ಲ ಅಂತ ಹೊರ ಹೋಗಿಬಿಟ್ಟ "

ಎಂದು ಜೋಗಪ್ಪಾ ಹೇಳಿ ಹೋಗುವುದರ ಹಿಂದೆ ಹೆಣ್ಣು ಮಕ್ಕಳನ್ನು ಹೆರದಿದ್ದ ಪಕ್ಷದಲ್ಲಿ ಅವಳಿಗೆ ಲೋಕದ ನಿಂದನೆ ಅವಮಾನಗಳು ತಪ್ಪಿದ್ದಲ್ಲ. ಬಂಜೆಯಾದರೆ ಯಾವುದೇ ಶುಭ ಸಮಾರಂಭಗಳಿಗೆ ಕರೆಯುವುದಿಲ್ಲ. ಸಾಮಾಜಿಕ, ಕೌಟುಂಬಿಕ, ಧಾರ್ಮಿಕ ಆಚರಣೆಗಳಿಂದ ಬಹಿಷ್ಕರಿಸಲ್ಪಟ್ಟಿರುತ್ತಾಳೆ.

ಮುಟ್ಟು ಮಡಿ ಮೈಲಿಗೆ ಸಂಬಂಧಿಸಿದ ಧಾರ್ಮಿಕ ಸಂಬಂಧಗಳು :

ನಮ್ಮ ಹಿಂದೂ ಧರ್ಮದಲ್ಲಿ ಮುಟ್ಟು, ಮಡಿ, ಮೈಲಿಗೆ ಎಂಬ ಸಂಪ್ರಾದಾಯಗಳನ್ನು ಹಿಂದಿನಿಂದಲೂ ಆಚರಿಸಿಕೊಂಡು ಬಂದಿದೆ.ಪುರೋಹಿತಶಾಹಿ ವರ್ಗ, ಕೆಳವರ್ಗದವರನ್ನು ಈ ನೆಲೆಯಲ್ಲಿಯೂ ಶೋಷಣೆಗೆ ಒಳಪಡಿಸಿದ್ದರು.ಮಡಿ ಮೈಲಿಗೆ ಎಂಬುದು ಮೇಲು, ಕೀಳು, ಬಡವ, ಬಲ್ಲಿದ ಎಂಬ ಭಾವನೆಗಳನ್ನು ಜನರಲ್ಲಿ ತುಂಬ ದೌರ್ಜನ್ಯಗಳನ್ನು ನಡೆಸಲಾಗುತ್ತಿತ್ತು. ಕೆಲ ಸಮುದಾಯಗಳ ಮುಟ್ಟು ಮಡಿ ಮೈಲಿಗೆಗೆ ಧಾರ್ಮಿಕ ಚೌಕಟ್ಟನ್ನೇ ಹಾಕುವುದರ ಮೂಲಕ ಸಮಾಜದಲ್ಲಿ ಒಂದು ಸಂಪ್ರದಾಯವಾಗಿಯೇ ಆಚರಣೆಗೆ ಬಂದಿತು.

ಮುಟ್ಟು ಎನ್ನುವ ಪದವು ಸಮಾಜದಲ್ಲಿ ಹೆಣ್ಣನ್ನು ತೀರ ತಾತ್ಸರ ಭಾವನೆಗೆ ಈಡು ಮಾಡಿತು.ಏಕೆಂದರೆ ಋತುಮತಿಯಾದ ಸುಂದರ್ಭವನ್ನು ಹಿಂದೂ ಧರ್ಮದಲ್ಲಿ ಮಡಿ ಮೈಲಿಗೆ ಎಂದೇ ಭಾವಿಸಲಾಗುತ್ತದೆ. ಹೆಣ್ಣಿಗೆ ಮುಟ್ಟು ಪ್ರಕೃತಿಯ ನಿಯಮ ಚಕ್ರವಾಗಿದ್ದರೂ ಪುರುಷ ಸಮಾಜ ಅವಳನ್ನು ಅಸ್ಪೃಶ್ಯಳಂತೆ ಕಾಣುತ್ತದೆ. "ಹೆಣ್ಣಿನಿಂದಲೇ ಈ ಜೈವಿಕ ಜಗತ್ತು ಸೃಷ್ಟಿಯಾಗಿರುವಾಗ ಹೆಣ್ಣನ್ನು ಮುಟ್ಟವುದು ತಪ್ಪು ಎನ್ನುವ ಮನುಷ್ಯನ ಮನೋಭಾವವು ಅವೈಚಾರಿಕತೆಯಿಂದ ಕೂಡಿದೆ. ಅವಳನ್ನು ಒಂದು ಆಚರಣೆಯಿಂದ, ಮುಟ್ಟಾಲಾಗದ ರೀತಿಯಲ್ಲಿ ಕಾಣುವುದರಿಂದ ಸಾಮಾಜಿಕ ಶೋಷಣೆಗೆ ಗುರಿ ಮಾಡಲಾಗಿದೆ, ಜೊತೆಗೆ ಇದರಿಂದ ಪುರುಷನ ನಿಯಂತ್ರಣಕ್ಕೆ ಒಳಪಡಿಸುವ ತಂತ್ರವೂ ಆಗಿದೆ.

ಜುಂಜಪ್ಪ ಕಾವ್ಯದಲ್ಲಿ ಮಹಿಳೆಗೆ ಸಂಬಂಧಿಸಿದ ಮುಟ್ಟು ಮಡಿ, ಮೈಲಿಗೆಯ ಆಚರಣೆಗಳು ಮೌಢ್ಯರೂಪ ತಾಳುವುದನ್ನು ಕಾಣಬಹುದು ಮೌಢ್ಯತೆ ಅತಿಯಾಗಿ ಅದಕ್ಕೆ ಧಾರ್ಮಿಕ ರೂಪವನ್ನು ಕೊಟ್ಟಂತಿದೆ. ಈ ಕಾವ್ಯದಲ್ಲಿ ಮಾರಕ್ಕೆ ಋತುಮತಿ ಮತ್ತು ಮುಟ್ಟಾದ ಸಂದರ್ಭದಲ್ಲಿ ಅವಳನ್ನು ಹಟ್ಟಿಯಿಂದ ಹೊರಗಿಡಲಾಗುತ್ತಿತ್ತು.

"ಇಡೀ ನಮ್ ತಂಗಿ ಮಾರಕ್ಕನಿಗೆ ಗುಡ್ಲಾಕಿದುರೆ
ಹದಿನಾರು ದಿನ ಊರು ಬಿಟ್ಟು ಆಕಡೆ ಹಾಕಸ್ತೀನಿ
ಹದಿನಾರು ದಿನದವರೆಗೂ ಋತುವಾದ ಮಕ್ಕಳಿಗೆ
ಆ ಕಡೆ ಗುಡ್ಲು ಸುಟ್ಟು
ಸೂತ್ನ ಕಳ್ಕೊಂಡು ಒಳಿಕರ್ನಂಬ್ಲಿ
ಈಚೆಯಾದ ಹೆಂಗಸ್ಸು
ಐದು ದಿನ ಪಂಚಮಿ ಕಳದ್ ಮೇಲೆ ಊರೋಳೀಗೆ ಬರಲಿ ಅಂತ
ಆಶೀರ್ವಾದ ಮಾಡುಬಿಟ್ಟ ಜುಂಜಪ್ಪ"

ಮುಟ್ಟು ಮಡಿ, ಮೈಲಿಗೆ ಕಲ್ಪನೆಗಳು ಕೆಲ ಸಮುದಾಯಗಳಲ್ಲಿ ಸೂತಕದ ಆಚರಣೆಗಳಾಗಿವೆ. ಅಲ್ಲದೆ ಜುಂಜಪ್ಪನ ಕಾವ್ಯದಲ್ಲಿ ಹೆರಿಗೆ ಆದ ಹೆಂಗಸರನ್ನು ಹಟ್ಟಿಯಿಂದ ದೂರ ಇಟ್ಟಿರುವ ಪ್ರಸಂಗಳೂ ಆಚರಣೆಯಾಗಿ ಕಂಡುಬರುತ್ತವೆ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

"ನೀವು ಊರು ಜನ
ಈಚೆ ಆದ್ರೆ ಒಳಗಡೆ ಇರ್ತರೆ
ನಿಮ್ಮ ಮನೆಯೊಳಗೆ ಹೆಂಗ್ಸುರು ಹರಿಗೆ ಆದ್ರೆ ಒಳಗೆ ಇರ್ತರಯ್ಯ
ನಮಗೆ ಸೂಕತ ಆಗಿಕಿಲ್ಲ"

ಈ ಎಲ್ಲಾ ಸಂದರ್ಭಗಳಲ್ಲಿ ಮಹಿಳೆಯನ್ನು ಮುಟ್ಟಾದಾಗ, ಹೆರಿಗೆಯಾದಾಗ ಬೇರೆ ಜಾತಿಯವರನ್ನು ಮುಟ್ಟಿಸಿಕೊಳ್ಳದೇ ಹಟ್ಟಿಯಿಂದ ಅಥವಾ 22 ದಿನಗಳವರೆಗೆ ಹೊರಗಿಟ್ಟಿರುತ್ತಾರೆ.ಹಾಗೆ ಮಡಿ – ಮೈಲಿಗೆಯ ಹೆಸರಲ್ಲಿ ಹೊರಗಿಟ್ಟ ಮಹಿಳೆಯೇ ತನ್ನ ಆಹಾರ, ನೀರನ್ನು ತಯಾರಿಸಿಕೊಳ್ಳಬೇಕು.ಕುಟುಂಬದ ಯಾವುದೇ ಸದಸ್ಯರು ಸಹಾಯ ಮಾಡುವುದಿಲ್ಲ. ಸೂತಕ ಕಳೆದ ನಂತರ ಮನೆ ಒಳಗೆ ಕರೆದುಕೊಳ್ಳುತ್ತಾರೆ. ಮಂಟೇಸ್ವಾಮಿ ಕಾವ್ಯದಲ್ಲಿಯೂ ಸಹ ಮುಟ್ಟು ಎರಡು ರೀತಿಯಲ್ಲಿ ಕಂಡು ಬರುತ್ತದೆ.ಒಂದು ಮಹಿಳೆಗೆ ಸಂಬಂಧಿಸಿದ ಪ್ರಕೃತಿ ಸಹಜವಾದ ಕ್ರಿಯೆಯಾದರೆ ಮತ್ತೊಂದು ಜಾತಿಯ ಹಿನ್ನೆಲೆಯಲ್ಲಿ ಮುಟ್ಟು ಮೈಲಿಗೆಯನ್ನು ಪರಿಗಣಿಸಲಾಗುತ್ತದೆ.

ಈ ಕಾವ್ಯದಲಿ ರಾಚಪ್ಪಾಜಿ ಹಾಗೂ ಆತನ ಮಡದಿ ದೊಡ್ಡಮ್ಮ ತಾಯಿ ಸಂಚರಿಸುವಾಗ ದೊಡ್ಡಮ್ಮ ತಾಯಿ ಮುಟ್ಟಾಗುತ್ತಾಳ.

ದುಡವುಳ್ಳ ದೊಡ್ಡಮ್ಮ
ಮುಟ್ಟು ತಟ್ಟಿಗೊಳಗಾಗಿಬಿಟ್ಟಿ ಸ್ವಾಮಿ ಎಂದುರು
ಹಾಗೆ ಆದ ಮೇಲೆ
ನೀನು ಇಲ್ಲೇ ಮುತ್ತಿನಳ್ಳಿ ತೋಪಿನಲ್ಲಿ ವಾಸಮಾಡು ಅಂತೇಳಿ
ಕೈ ಹಿಡಿದ ಮಡದಿಯ
ಮುತ್ತಿನಳ್ಳಿ ತೋಪಿನಲಿ ಬುಟ್ಟು
ಕಿಡಗಣ್ಣು ರಾಚಪ್ಪಾಜಿಯವರು.

ರಾಚಪ್ಪಜಿಯು ಕಪ್ಪಡಿಯಲ್ಲಿ ಪೂಜೆಗೊಳ್ಳುವ ಸಾಂಸ್ಕೃತಿಕ ವ್ಯಕ್ತಿಯಾದರೂ ಸಹ ಮುಟ್ಟು, ಮಡಿ, ಮೈಲಿಗೆ ಎಂದಾಗ ಕೈಹಿಡಿದ ಧರ್ಮಪತ್ನಿಯನ್ನು ಬಿಟ್ಟು ಹೋಗುವ ಸಂದರ್ಭವು ಹೆಣ್ಣಿನ ಮೇಲೆ ಕೌಟುಂಬಿಕವಾಗಿ ಎಸಗುವ ಶೋಷಣೆಯನ್ನು ಕಾಣಬಹುದು. ದೊಡ್ಡಮ್ಮ ತಾಯಿ ಮುತ್ತಾನಳ್ಳಿಯಲ್ಲಿ ನೆಲೆಸಿ ತನ್ನ ಗದ್ದುಗೆ ಅಲ್ಲಿಯೇ ಸ್ಥಾಪಿಸಿಕೊಳ್ಳತ್ತಾಳೆ.ಅಂದಿನಿಂದ ನೀಲಗಾರರು ದೊಡ್ಡಮ್ಮ ತಾಯಿಯನ್ನು ವಿಶೇಷ ಪೂಜೆ ಪುನಸ್ಕಾರಗಳಿಂದ ಆಚರಣೆ ಮಾಡುತ್ತಾರೆ.

ಮುಟ್ಟು ಎಂಬ ಪರಿಭಾವನೆಯನ್ನು ಮಂಟೇಸ್ವಾಮಿ ಕಾವ್ಯದಲ್ಲಿ ಮೈಲಿಗೆಯಾಗಿ ಪರಿಗಣಿಸಿದ್ದಾರೆ.ಆದರೆ ಮಂಟೇಸ್ವಾಮಿ ಮುಟ್ಟು ಎಂಬುದಕ್ಕೆ ಈ ಕಾವ್ಯದಲ್ಲಿ ಬೇರೆಯದೇ ಅರ್ಥ ನೀಡುತ್ತಾರೆ.ಮಂಟೇಸ್ವಾಮಿ ಮಡಿವಾಳ ಮಾಚಯ್ಯನ ಮನೆಗೆ ಭಿಕ್ಷೆಗೆ ಹೋಗುತ್ತಾರೆ. ಅಲ್ಲಿ ಇವರಿಬ್ಬರ ನಡುವೆ ನಡೆಯುವ ಸಂಭಾಷಣೆ ಕೆಳಜಾತಿಗಳ ಬಗ್ಗೆ ಇರುವ ಅಸಡ್ಡೆ ಕೆಳಜಾತಿಯನ್ನೆ ಮುಟ್ಟು ಮೈಲಿಗೆ ಎಂದು ಅವರನ್ನು ಯಾವುದೇ ಧಾರ್ಮಿಕ ಆಚರಣೆಗೆ ಯೋಗ್ಯರಲ್ಲ ಎಂಬ ಭಾವನೆ ತೊಡೆದು ಹಾಕುವುದನ್ನು ಕಾಣಬಹುದು.

"ಈ ಮುಟ್ಟು ತಟ್ಟಿನ ಮನೆಗೆ ಬಂದು ಬುಟ್ಟಿಯಲ್ಲಾ ಗುರುವೆ
ನಮ್ಮ ಹೀನಾ ಜಾತಿಯವನ ಮನೆಗೆ ಬಂದ್ರಿಯಲ್ಲಪಾ
ನನ್ನ ಹೀನ ಜಾತಿಯವನ ಮನೆಗೆ ಯಾತಕೆ ಬರಕೋದ್ರಿ
ನನ್ನಟ್ಟಿ ಅರಮನೆಗೆ ನೀವೆ ಬಂದ್ರಿಯಾ
ಯಾರ್ಯಾರು ದಾರಿ ತೋರಿಕೊಟ್ಟುಬಂಟ್ರೋ ಗುರುವು ಎಂದರು" ಮತ್ತೆ ಮುಂದುವರೆದು
"ನಾನು ಮುಟ್ಟುನಾ ಬಟ್ಟಿ ಒಗಿವಂತಾ
ಗುರುವೆ ಮಡಿವಾಳು ಸಟ್ಟಿ ಗುರುವು
ಅಪ್ಪಾ ಮುಟ್ಟಿನ ಬಟ್ಟೆಗಳಲ್ಲ
ಮೂಲೇಲಿ ಇಟ್ಟಾಡುತಾವೆ?
ಅರಸು ದೊರೆಗಳ ಮನೆಗೊಂಟೋಗಿ ನಿಮಗೆ ಶಿವಪೂಜೆ ಮಾಡಿ
ಪಾದಕೆ ಶರಣು ಮಾಡಿ
ಊಟ ಭೋಜನ ಕೂಡ ಪಡುಸ್ತಾರೆ
ಶಿವಾಚಾರ್ಯದೋರಾ ಮನಿಗಾದ್ರು
ಹೊರಟೋಗಿ ನನ್ನ ಹೀನ ಜಾತಿಯವನ
ಮನಿಗೆ ಯಾಕೆ ಬಂದು ಬಿಟ್ರಿಯಪ್ಪು'

ಹೀಗೆ ಮಡಿವಾಳಮಾಚಯ್ಯ ತನ್ನ ಕುಲ ತನ್ನ ಹುಟ್ಟು ಕೀಳು, ಮಂಟೇಸ್ವಾಮಿಯಂಥ ಮಹಾಶರಣ ತನ್ನ ಮನಗೆ ಬರವುದು ಮುಟ್ಟು ಅವರಿಗೆ ಮೈಲಿಗೆಯಾಗುತ್ತದೆ ಎಂದು ಮನೆಗೆ ಬಂದ ದೈವವನ್ನೇ ನಿರಾಕರಿಸುತ್ತಾನೆ, ಮೇಲ್ಜಾತಿ ಹಾಗೂ ಪೌರೋಹಿತ ವರ್ಗ ಈ ಮೊದಲೆ ಕೆಳಜಾತಿಯರಿಗೆ ಒಂದು ರೀತಿಯ ಭಾವನಾತ್ಮಕ ಭಯವನ್ನು ಮಾನಸಿಕವಾಗಿ ಅವರ ಮನಸಲ್ಲಿ ತುಂಬಿಸಿತ್ತು. ಕೆಳಜಾತಿಯವರ ಮನೆಗೆ ಮೇಲ್ಜಾತಿಯವರು ಬರಬಾರದು ಬಂದರೆ ಅದು ಅವರಿಗೆ ಕೆಡುಕಾಗುತ್ತದೆ ಎಂಬ ಮೌಡ್ಯವನ್ನು ಬೆಳೆಸಿರುತ್ತಾರೆ.ಮಾಚಯ್ಯನ ಈ ಮಾತು ಸಾಂಸ್ಕೃತಿಕವಾಗಿ ಮತ್ತು ಧಾರ್ಮಿಕವಾಗಿ ಇಂದಿನವರೆಗೇ ಬೆಳೆದುಕೊಂಡು ಬಂದಿರುವುದನ್ನು ಕಾಣಬಹುದು.ಮೇಲ್ಜಾತಿ ಕೆಳಜಾತಿಗೆ ಧಾರ್ಮಿಕ ಸ್ವರೂಪವನ್ನು ನೀಡಿ ಧರ್ಮದ ಹೆಸರಲ್ಲಿ ಪೌರೋಹಿತಶಾಹಿ ಮಾತ್ರ ಪೂಜಾರ್ಹತೆ ಪಡೆದಿರುವರು ಕೆಳಜಾತಿ ಎಲ್ಲರಿಂದ ಹೊರತಾಗಿರುವರು ಆಗಿದ್ದಾರೆ.

ಮಾಚಯ್ಯನ ಈ ಮಾತಿಗೆ ಮಂಟೇಸ್ವಾಮಿಯು ಹೇಳುವ ಮಾತು ರೋಚಕವಾಗಿವೆ.

"ಮುಟ್ಟು ತಟ್ಟಿನ ವಿಚಾರ ನಿನಗೇನು ಗೊತ್ತು ಮಾಚಯ್ಯ
ಮುಟ್ಟಿನ ವಿಚಾರ ನಿನಗಿನ್ನೂ ತಿಳಿದಿಲ್ಲ ಮಗನೆ
ಮುಟ್ಟಿನ ವಿಚಾರ ಗುಟ್ಟಿನಲ್ಲಿ ಹೇಳ್ತಿನಿ ಕೇಳು ಮಾಚಪ್ಪಾ
ಲೋ ಮುಟ್ಟಿನಿಂದಲೇ ಮಗನೆ
ಈ ಭೂಮಿಯ ಉಟ್ಟು ತಲ್ಲ
ಲೋ ಮುಟ್ಟಿನಿಂದಲೇ ಕಂದಾ ಈ ಲೋಕವೇ ಬೆಳೀತಲ್ಲಾ
ಮಗನೇ ಮುಟ್ಟಿನಿಂದಲೇ ಕಂದಾ ಹಗಲು ಆಯ್ತಲ್ಲ
ಮುಟ್ಟಿನಿಂದಲೇ ಮಗನೇ ಇರಳು ಆಯ್ತಲ್ಲಾ"

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಎಂದು ಮಂಟೇಸ್ವಾಮಿ ಮೇಲು ಕೀಳು ಎಂಬುದೆಲ್ಲಾ ಮಾನವ ರೂಪಿಸಿಕೊಂಡ ಪದ್ಧತಿಗಳು.ಮನುಷ್ಯ– ಮನುಷ್ಯರ ನಡುವೆ ದೊಡ್ಡ ಪರದೆಯನ್ನೆ ನಿರ್ಮಿಸಿದೆ.ಮುಟ್ಟು ಎನ್ನುವ ಮಾತು ಸ್ತ್ರೀಗೆ ಪ್ರಕೃತಿ ಸಹಜವಾದದ್ದು.ಅದು ತನ್ನ ಕುಟುಂಬದ ಮುಂದಿನ ಪರಂಪರೆಗೆ ದೈವದ ವರದಾನವಾಗಿದೆ.ಆದರೆ ಸಮಾಜದಲ್ಲಿ ಮೇಲ್ವರ್ಗದವರು ಮುಟ್ಟು ಎಂಬ ರೂಢಿಯನ್ನು ತಳ ಸಮುದಾಯದವರ ಮೇಲೆ ಮೇಲು ಜಾತಿ, ಕೀಳು ಜಾತಿಗಳ ಪರಿಕಲ್ಪನೆಯನ್ನು ಹುಟ್ಟುಹಾಕಿದ್ದಾರೆ.ಎಂದು ಮಂಟೇಸ್ವಾಮಿ ಮಾಚಯ್ಯನಿಗೆ ಜಾತಿಯ ಕುರಿತು ಅರ್ಥೈಸುತ್ತಾನೆ.

ಧರ್ಮ ಮತ್ತು ಸತ್ವಪರೀಕ್ಷೆ

ಸತ್ವ ಪರೀಕ್ಷೆ ಎನ್ನುವುದು ಮಹಿಳೆಯ ಪರಿಪೂರ್ಣತೆಯನ್ನು ಹೇಳುತ್ತವೆ. ಹೆಣ್ಣು ಪವಿತ್ರವಾಗಿದ್ದಾಳೆ ಎನ್ನುವುದನ್ನು ಸಮಾಜಕ್ಕೆ ತಿಳಿಸಲು ಪುರುಷ ಸಮಾಜ ಅವಳನ್ನು ಅನೇಕ ಸತ್ವ ಪರೀಕ್ಷೆಗೆ ಒಳಪಡಿಸುವುದನ್ನು ಕಾಣಬಹುದು.ಪುರುಷ ಸಮಾಜ ನಿರ್ಮಿಸಿದ ಕಟ್ಟಳೆಗಳನ್ನು ಮಹಿಳೆಯು ಮೀರದೆ ಗಂಡನೆ ಸರ್ವಸ್ವವೆಂದು ಅರಿತು ಬಾಳಬೇಕು.ಈ ಹಿನ್ನೆಲೆಯಲ್ಲಿ ಅವಳಿಗೆ ಪಾತಿವ್ರತ್ಯೆ ಎಂಬ ಭಾವನೆ ತುಂಬಾ ಪವಿತ್ರವಾಗಿ ಕಾಣುವಂತೆ ಮಾಡಲಾಗಿದೆ.ಇದು ಪುರುಷ ಸಮಾಜವು ಸ್ತ್ರೀಯಿಂದ ಬಯಸುವ ಪತಿನಿಷ್ಟೆ ಮತ್ತು ಪ್ರತಿಷ್ಠೆಯ ಸಂಕೇತವಾಗಿ ಭಾವಿಸಲಾಗಿದೆ.ಜನಪದ ಕಾವ್ಯಗಳಲ್ಲಿ ಬರುವ ನಾಯಕಿಯರು ಆದರ್ಶಗುಣವಾಗಿ ಪಾತಿವ್ರತ್ಯವನ್ನು ಅಳವಡಿಸಿಕೊಂಡಿರಬೇಕು. ಸಂಕಮ್ಮ, ಸಿನ್ನಮ್ಮ ಬೇವಿನಕಟ್ಟಿ ಕಾಳಮ್ಮ, ಮುದ್ದಮ್ಮ, ಗಂಗಿಮಾಳಮ್ಮ ಮೊದಲಾದವರು ಪಾತಿವ್ರತ್ಯೆಯನ್ನೆ ಉಳಿಸಿಕೊಂಡ ಮಹಿಳೆಯರು, ಸಂಕಮ್ಮ ಮತ್ತು ಚಿನ್ನಮ್ಮ ತಮ್ಮ ಪಾತಿವತ್ಯೆ ನಿರೂಪಿಸಲು ಅನೇಕ ಸಂಕಷ್ಟಗಳಿಗೆ, ಸತ್ವ ಪರೀಕ್ಷೆಗಳಿಗೆ ಒಳಗಾಗುತ್ತಾರೆ.ಅದಕ್ಕಾಗಿ ಇವರು ಪಟ್ಟಪಾಡು ಅಷ್ಟಿಷ್ಟಲ್ಲ. ಎಲ್ಲ ಸತ್ವಪರೀಕ್ಷೆಗಳನ್ನು ಮುಗಿಸಿ ತಮ್ಮ ತನವನ್ನು ಉಳಿಸಿಕೊಂಡು ಬಂದ ಸ್ತ್ರೀಯರನ್ನು ಸಮಾಜದಲ್ಲಿ ಸಾಂಸ್ಕೃತಿಕ ನಾಯಕಿಯರನ್ನಾಗಿಸಲು ಮಹಾಕಾವ್ಯದಲ್ಲಿ ಬರುವ ನಾಯಕರು ಅವರನ್ನು ಶೋಷಣೆಯಿಂದ ಬಿಡುಗಡೆಗೊಳಿಸುತ್ತಾರೆ.

ಪಾತಿವ್ರತ್ಯದ ಮೂಲಕ ಹೆಣ್ಣನ್ನು ಧಾರ್ಮಿಕ ವ್ಯವಸ್ಥೆಯಲ್ಲಿ ಅವಳನ್ನು ಬಂದಿಸಲಾಗುತ್ತಿದೆ.ಪುರುಷ ಸಂಸ್ಕೃತಿ ನಿರ್ಮಿಸಿರುವ ಸತ್ವ ಪರೀಕ್ಷೆಗಳು ಒಂದು ಆಚರಣೆಯಾಗಿಯೇ ತೊಡಗುವಂತೆ ಮಾಡಿದೆ.ಇದೊಂದು ಧಾರ್ಮಿಕ ಮೌಲ್ಯವಾಗಿ ಶೀಲ, ಪಾತಿವ್ರತ್ಯ ಸತಿಪತಿ ಧರ್ಮ ಎಂಬುದಾಗಿ ಕಟ್ಟಿಹಾಕುವ ಪ್ರಕ್ರಿಯೆಗಳು ನಡೆಯುತ್ತಿವೆ. ಇದಕ್ಕೆ ತದ್ವಿರುದ್ಧವಾಗಿ ಮಹಿಳೆ ನಡೆದು ಕೊಂಡು ಶೀಲವನ್ನು ಕೆಡಿಸಿಕೊಂಡರೆ ಸಮಾಜದಲ್ಲಿ ಅವಳಿಗೆ ಬದುಕುವ ಸ್ಥಾನಮಾನಗಳನ್ನು ಪುರುಷ ಸಮಾಜವು ಕಸಿದುಕೊಂಡಿದೆ.

ಮಲೆಮಾದೇಶ್ವರ ಕಾವ್ಯದಲ್ಲಿ ನೀಲಯ್ಯ ಹೆಜ್ಜೇನು ಬೇಟೆಗೆ ಹೋದ ಸಂದರ್ಭದಲ್ಲಿ ಸಂಕಮ್ಮ ಮಲೆ ಮಾದೇಶ್ವರನ ದಯೆಯಿಂದ ಮಕ್ಕಳನ್ನು ಪಡೆದಳು ಎಂದು ನಂಬಿಸಿಕೊಂಡು ಬರಲಾಗಿದೆ.ಆದರೆ ಅದರ ಹಿಂದಿನ ಸತ್ಯಗಳ ಮೇಲೆ ಧರ್ಮವನ್ನು ಪ್ರತಿಷ್ಠಾಪಿಸಿ ಯಾರೂ ಕೂಡ ಪ್ರಶ್ನಿಸದಂತೆ ಮಾಡಲಾಗಿದೆ.

ಈ ಹಿನ್ನೆಲೆಯಲ್ಲಿ ಪಾತಿವ್ರತ್ಯದ ಸತ್ವಪರೀಕ್ಷೆಗೆ ವಿಶಿಷ್ಟ ರೀತಿಯಲ್ಲಿ ತನ್ನ ನಿಲುವನ್ನು ನಿರೂಪಿಸಿದವಳು.ಮಲೆಮಾದೇಶ್ವರ ಕಾವ್ಯದ ಸಂಕಮ್ಮ ಸೋಲಿಗರ ನೀಲಯ್ಯನ ಹೆಂಡತಿ ಈಕೆ ಅವಳನ್ನು ಪ್ರೀತಿಯಿಂದ ವಿವಾಹವಾಗಿದ್ದು, ಅವಳನ್ನು ಜಾಗರೂಕತೆಯಿಂದ ಕಾಪಾಡಿಕೊಳ್ಳುತ್ತಿರುತ್ತಾನೆ. ಸಂಕಮ್ಮ ತನ್ನ ಓರಗತ್ತಿಯರಿಂದ ಬಂಜೆ ಎನಿಸಿಕೊಂಡು ನೋವನ್ನು ಸಹಿಸದೆ ಗಂಡನ ಜೊತೆ ಕಾಡಿನಲ್ಲಿ ಬೇರೆ ಮನೆಮಾಡುತ್ತಾರೆ. ಒಮ್ಮೆ ನೀಲಯ್ಯ ಹೆಜ್ಜೇನು ಮಲೆಗೆ ಬೇಟೆಗೆ ಹೋಗುವ ಸಂದರ್ಭ ಬಂದಾಗ ತನ್ನ ಹೆಂಡತಿ ಸಂಕಮ್ಮಳನ್ನು ಒಬ್ಬಂಟಿಯಾಗಿ ಬಿಟ್ಟು ಹೋಗಲು ಇಚ್ಚಿಸದೆ ಅವಳಿಂದ ಬಲಗೈ ಭಾಷೆ ನೀಡಬೇಕೆಂದು ಕೇಳುತ್ತಾನೆ. ಇಲ್ಲಿಂದ ಸಂಕಮ್ಮನ ಪಾತಿವ್ರತ್ಯ ಪ್ರಾರಂಭವಾಗುತ್ತದೆ. ಅವಳಿಗೆ ತನ್ನ ಶೀಲವನ್ನು ಶಂಕಿಸುವ ಗಂಡನಿಗೆ ತಾನೇಕೆ ಪ್ರಮಾಣ ಮಾಡಬೇಕೆಂದು ಹಠ ಹಿಡಿಯುತ್ತಾಳೆ.ನೀಲಯ್ಯನಿಗೆ ತನ್ನ ಅಣ್ಣತಮ್ಮಂದಿರು, ದಾಸಯ್ಯರು, ಬಳೆಗಾರರು, ಜಂಗಮರು ಬಂದು ತನ್ನ ಹೆಂಡತಿಯನ್ನು ಎಲ್ಲಿ ಕರೆದುಕೊಂಡು ಹೋಗುತ್ತಾರೆ ಎಂಬ ಆತಂಕ ಎದುರಾಗಿ ಭಾಷೆ ಕೊಡುವಂತೆ ಪೀಡಿಸುತ್ತಾನೆ. ಅವನು ಭಾಷೆ ಕೇಳುವ ರೀತಿ ಪುರುಷ ಸಮಾಜ ಹೆಣ್ಣಿನ ಮೇಲೆ ಧಾರ್ಮಿಕವಾಗಿ ಯಾವ ರೀತಿಯ ಒತ್ತಡ ಹೇರುತ್ತಾನೆ ಎಂಬುದನ್ನು ತೋರಿಸಲಾಗುತ್ತದೆ.

"ಕೇಳೆ ಕೆಟ್ಟಮುಂಡೆ ಮಗೆ ಸಂಕಮ್ಮ
ಗಂಡನಿಗೆ ದುಂಡಾರೀತಿ ಮಾಡಬೇಡ
ಪತಿಗೆ ಪ್ರತಿ ಉತ್ತರ ಕೊಟ್ಟ ಮೇಲೆ
ನಿನ್ನ ಪತಿವ್ರತಾ ಧರ್ಮ ಉಳಿಯೋದಿಲ್ಲ
ನೀನು ಭಾಷೆ ಕೊಡದೆ ಇದ್ದ ಮೇಲೆ
ನಾನು ಹೆಜ್ಜೆನು ಮಲೆಗೆ ಹೋಗೋದಿಲ್ಲ"

ಸಂಕಮ್ಮ ತನ್ನ ಸ್ವಾಭಿಮಾನ ಬಿಡದೆ ನೀಲಯ್ಯನಿಗೆ ಭಾಷೆ ಕೊಟ್ಟ ಮೇಲೆ ನನ್ನ ಧರ್ಮ ಉಳಿಯೋದಿಲ್ಲ ಎನ್ನುವಲ್ಲಿ ಗಂಡನ ಶೋಷಣೆಯನ್ನು ಧಿಕ್ಕರಿಸುತ್ತಾಳೆ.ನೀಲಯ್ಯನನ್ನುಪ್ರತಿಭಟಿಸಿ ಭಾಷೆ ಕೊಡಲು ನಿರಾಕರಿಸುತ್ತಾ ಸ್ವಾಭಿಮಾನವನ್ನು ವ್ಯಕ್ತಪಡಿಸುತ್ತಾಳೆ.
ಇವರಿಬ್ಬರಲ್ಲಿ ಈ ರೀತಿಯ ಸಂಘರ್ಷಗಳು ನಡೆಯುತ್ತಿರುವಾಗ ನೀಲಯ್ಯ ಅವಳನ್ನು ಮಾಟ ಮಂತ್ರಗಳ ಮೂಲಕ ಕಾಡಿಗೆ ಎಳೆದೊಯ್ದು ಕೊಕ್ಕರೆ ಬೋನಿನ ಮಾಳದಲ್ಲಿ ಅವಳನ್ನು ಸೀರೆ ಕಳಚುವಂತೆ ಹೇಳಿ ತೇಗದ ಎಲೆಗಳಿಂದ ಉಡುಗೆ ಧರಿಸಿಕೊಳ್ಳುವಂತೆ ಆಜ್ಞೆಮಾಡುತ್ತಾನೆ. ಅವಳನ್ನು ಕಣ್ಣು, ಕಿವಿ, ಬಾಯಿಗಳಿಗೆ ಸೂಜಿಯಿಂದ ಹೊಲಿದು, ಕೈ ಕಾಲುಗಳಿಗೆ ಸಂಕೋಲೆ ಹಾಕುತ್ತಾನೆ. ಅವಳು ಅಲ್ಲಾಡದಂತೆ ಅವಳ ಬೆನ್ನಿನ ಮೇಲೆ ಗುಂಡನ್ನಿಟ್ಟು ಕೊಡಬಾರದ ನೋವು ಕೊಡುತ್ತಾನೆ. ಸಾಕಮ್ಮ ಇಲ್ಲಿ ಕೋಳಿಯಾಗಿ, ನಾಯಿಯಾಗಿ ನರಳುವಂತೆ ಮಾಡುತ್ತಾನೆ. ವಿವಿಧ ರೀತಿಯ ಸತ್ವಪರೀಕ್ಷೆಗಳನ್ನು ನೀಲಯ್ಯ ಒಡ್ಡುವುದರ ಮೂಲಕ ಅವಳ ಪಾತಿವ್ರತ್ಯ ಪರೀಕ್ಷಿಸುತ್ತಾನೆ.

ಈ ಸಂದರ್ಭದಲ್ಲಿ 'ಹಿ.ಚಿ.ಬೋರಲಿಂಗಯ್ಯ'ನವರು ಪುರುಷ ಪ್ರಧಾನ ಸಮಾಜದ ಒಪ್ಪಿತ ಮೌಲ್ಯವಾದ ಶೀಲವನ್ನು ನಿರ್ಲಕ್ಷಿಸುವ ಮೂಲಕ ಪಾತಿವ್ರತ್ಯವನ್ನು ಮೀರುವ ಒಂದು ಕ್ರಿಯೆಯಾಗಿ ಮುಖ್ಯವಾಗುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.
ಪುರುಷ ಪ್ರಧಾನ ಸಮಾಜದಲ್ಲಿ ಪುರುಷನಿಗೆ ಅಧಿಕಾರವಿದ್ದು, ಧಾರ್ಮಿಕ ಸಂಘರ್ಷಗಳ ಮೂಲಕ ಹೆಣ್ಣನ್ನು ಶೋಷಣೆ ಮಾಡುವುದನ್ನು ನೀಲಯ್ಯ ಸಂಕಮ್ಮನ ಜೀವನದಲ್ಲಿ ಕಾಣಬಹುದು.

ಜುಂಜಪ್ಪನ ಕಾವ್ಯದಲ್ಲಿಯೇ ಪಾತಿವ್ರತ್ಯ ಕಾಳಗ ನಡೆಯುವ ಸತ್ವಪರೀಕ್ಷೆಗಳು ವಿಶೇಷ ರೀತಿಯಾಗಿವೆ. ಇಲ್ಲಿ ಮಗನೇ ತಾಯಿಯ ಶೀಲಶಂಕಿಸಿ ಅನೇಕ ಪರೀಕ್ಷೆಗೆ ಈಡುಮಾಡುತ್ತಾನೆ ಆದರೆ ಪರೀಕ್ಷೆಗಳು ಮಾದೇಶ್ವರ ಕಾವ್ಯದ ನೀಲಯ್ಯ ನೀಡಿದಂತೆ ಭಯಂಕರವಾಗಿರುವುದಿಲ್ಲ. ಇಲ್ಲಿ ಸತ್ವಪರೀಕ್ಷೆಗಳನ್ನು ನೀಡುವ ಜುಂಜಪ್ಪ ಹೆಣ್ಣಿನ ಬಗ್ಗೆ ಅಪಾರ ಗೌರವವನ್ನಿಟ್ಟು ಧರ್ಮದ ಸಂಕೋಲೆಗಳಿಂದ ಹೆಣ್ಣನ್ನು ಕಾಪಾಡಬೇಕು. ಸಮಾಜದಲ್ಲಿ ಅವಳಿಗೆ ಒಂದು ಸ್ಥಾನಮಾನ ತಂದುಕೊಡಬೇಕೆಂದು ಪ್ರಯತ್ನಪಟ್ಟವನು. ಹೆಣ್ಣಿನ ಗುಣದೋಷಗಳನ್ನು ಗಮನದಲ್ಲಿಟ್ಟುಕೊಂಡು ಅವಳ ಪರಿವರ್ತನೆಯ ಮೂಲಕ ಕಾರಣನಾಗುತ್ತಾನೆ.

ಜುಂಜಪ್ಪನ ತಾಯಿ ಸಿನ್ನಮ್ಮ ತಾಯ್ತನವನ್ನು ಪಡೆದಿರುವ ಮಗಳ ಪಾತಿವ್ರತೆಯ ವಿಷಯವಾಗಿ ಸತ್ವಪರೀಕ್ಷೆಗಳನ್ನು ಎದುರಿಸುತ್ತಾಳೆ. ಜುಂಜಪ್ಪನ ತಾಯಿ ಕೇವಲ ಒಂಟಿಯಾಗಿ ತವರು ಮನೆಗೆ ಹೋಗಿ ಬಂದದ್ದು ಅಷ್ಟೆ ಆದರೆ ಜುಂಜಪ್ಪ ತಾಯಿಯ ಪತಿವ್ರತೆಯನ್ನು ನಂಬಲಾರ. ಅವಳು ಮಗನು ನೀಡುವ ಪರೀಕ್ಷೆಗಳನ್ನು ಒಪ್ಪಿಕೊಳ್ಳುತಾಳೆ.ಆದರೆ ಪ್ರತಿಭಟಿಸುವುದಿಲ್ಲ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಮಲೆಮಾದೇಶ್ವರ ಕಾವ್ಯದಲ್ಲಿ ಬರುವ ಬೇವಿನಹಟ್ಟಿ ಕಾಳಮ್ಮಳು ಬೇರೆ ರೀತಿಯ ಸತ್ವಪರೀಕ್ಷೆಗಳನ್ನು ಎದುರಿಸಬೇಕಾಗುತ್ತದೆ.ಕಾಳಮ್ಮ ಪತಿವ್ರತೆಯಾದರೂ ಕೃಷಿಕಳಾಗಿದ್ದಾಳೆ.ಮಾದೇಶ್ವರ ತಮ್ಮ ಮಜ್ಜನ ಮಾಡಿಸಿಕೊಳ್ಳುವುದರ ಮೂಲಕ ಸಮಾಜದಲ್ಲಿ ತನ್ನ ಧಾರ್ಮಿಕತೆಯ ಅಧಿಕಾರ ಸ್ಥಾಪನೆಗೆ ಮುಂದಾಗುತ್ತಾನೆ. ಆದ್ದರಿಂದ ಕಾಳಮ್ಮನಲ್ಲಿ ಎಳ್ಳಿನ ಭಿಕ್ಷೆ ಬೇಡಲು ಬಂದಾಗ ಮಾದಪ್ಪನ ಒಪ್ಪಲಾಗದೆ ಪ್ರತಿಭಟಿಸುತ್ತಾಳೆ.ಇದರಿಂದ ಕಾಳಮ್ಮನ ಕೆಂಚೇಗೌಡನಿಗೆ ಹಿಂದೊಮ್ಮೆ ಮುಂದೊಮ್ಮೆ ಬಂದು ಸಾಯಿಸಿ, ಇಡೀ ತನ್ನ ಕುಟುಂಬ ನಾಶವಾದರೂ ಸರಿ ಭಿಕ್ಷೆ ನೀಡುವುದಿಲ್ಲ ಎಂದು ಹೇಳುತ್ತಾಳೆ.

ಈ ಹಿನ್ನೆಲೆಯಲ್ಲಿ ನೋಡಿದಾಗ ಕಾಳಮ್ಮ ತನ್ನ ಗಂಡನಿಲ್ಲದಿದ್ದರೂ ತಾನೂ ಪತಿವ್ರತೆಯೇ ಎಂಬ ಭಾವ ಅವಳಲ್ಲಿದೆ.ಅವಳಿಗೆ ಭಿಕ್ಷೆ ನೀಡುವುದರೊಂದಿಗೆ ಪರ ಪುರುಷನಿಗೆ ಶರಣಾಗುವುದಕ್ಕೆ ಇಷ್ಟವಿಲ್ಲದಂತೆ ತೋರುತ್ತದೆ.

ಮಂಟೇಸ್ವಾಮಿ ಕಾವ್ಯದಲ್ಲಿ ಕಲ್ಯಾಣದಲ್ಲಿದ್ದ ಬಸವಣ್ಣ ನೀಲಮ್ಮ ದಂಪತಿಗಳು ಶರಣಾರಾಗಿದ್ದಾರೆ.ಇವರಿಬ್ಬರ ದೃಢಭಕ್ತಿ ಪರೀಕ್ಷಿಸಲು ಮಂಟೇಸ್ವಾಮಿ ಯಾರಿಗೂ ಕಾಣದಂತೆ ಕಲ್ಯಾಣಕ್ಕೆ ಬಂದಾಗ ಬಸವಣ್ಣನು ತನ್ನ ಕೊರಳಿನ ಲಿಂಗವನ್ನು ತೆಗೆದು ತನ್ನ ಪತ್ನಿ ಪತಿವ್ರತೆಯಾದರೆ ಕಾಣದಿರುವ ಜಂಗಮನನ್ನು ತೋರಿಸಬೇಕು ಎನ್ನುತ್ತಾರೆ.ನೀಲಮ್ಮ ತನ್ನ ಪತಿವ್ರತೆ ಬಲದಿಂದ ಬಸವಣ್ಣ ನನ್ನ ಕುರಿತು.

"ಪತಿದೇವರ ಬಸವಣ್ಣ,
ನಮ್ಮ ಕಲ್ಯಾಣದ ಗುರುಮಠಕ್ಕೆ
ಬಂದಿರತಕ್ಕಂತಹ ಜಂಗಮರು ಅಂದ್ರೆ
ಇವರು ಸಾಮಾನ್ಯವಾದ ಪುರುಷರಲ್ಲ"

ಎಂಬುದನ್ನು ತಿಳಿಸಿ ಮಂಟೇಸ್ವಾಮಿಯನ್ನು ಕೈಹಿಡಿದು ಕರೆಯಲು ಹೋದಾಗ ನೀಲಮ್ಮನ ಸತ್ವಪರೀಕ್ಷೆ ಪ್ರಾರಂಭವಾಗುತ್ತದೆ.ಮಂಟೇಸ್ವಾಮಿಯನ್ನು ಕೈಹಿಡಿದು ಎತ್ತಿದಾಗ ಎಲ್ಲಾ ಅಂಗಾಂಗಳು ಕಿತ್ತು ಬರುತ್ತದೆ.ಆಗ ನೀಲಮ್ಮ ಅಸಹ್ಯಪಡದೆ ಅವುಗಳನ್ನು ಪಟ್ಟೆ ವಸ್ತ್ರದಲ್ಲಿಟ್ಟುಕೊಂಡು ಗದ್ದುಗೆ ಮೇಲಿಟ್ಟು ದಂಪತಿಗಳಿಬ್ಬರೂ ಪೂಜಿಸುತ್ತಾರೆ.ಇಲ್ಲಿ ನೀಲಮ್ಮನ ಸತ್ವಪರೀಕ್ಷೆ ಭಕ್ತಿಗೆ ಸಂಬಂಧಿಸಿದ್ದಾಗಿದೆ.ಅವರ ಪತಿವ್ರತ ಧರ್ಮದ ಮೂಲಕವೇ ಬಸವಣ್ಣ, ನೀಲಮ್ಮ ಸಮಾಜದಲ್ಲಿ ಮಹಾ ಭಕ್ತರೆನಿಸಿಕೊಳ್ಳುತ್ತಾರೆ.

ಸಂಕಮ್ಮ, ಸಿನ್ನಮ್ಮ, ನೀಲಮ್ಮ, ಬಸವಣ್ಣರಂತೆ ಪತಿವ್ರತೆಯ ಮೂಲಕ ಸತ್ವಪರೀಕ್ಷೆಗಳಿಗೆ ಒಳಗಾಗದೆ ತನ್ನ ಗಂಡನಿಗಾಗಿ ಕಾಯುತ್ತಾ ಪುರುಷ ಸಮಾಜ ನಿರ್ಮಿಸಿದ ಧಾರ್ಮಿಕ ಕಟ್ಟಳೆಗಳಿಗೆ ಒಳಗಾಗುವ ಪತಿವ್ರತೆ ಗಂಗಿಮಾಳಮ್ಮ ಮೈಲಾರಲಿಂಗನ ಕಾವ್ಯದಲ್ಲಿ ಬರುವ ಗಂಗಿಮಾಳಮ್ಮ ಪ್ರಮುಖವಾದ ಪಾತ್ರವಾಗಿದ್ದು, ಮೈಲಾರನ ಮೊದಲ ಹೆಂಡತಿಯಾಗಿದ್ದಾಳೆ. ಗಂಗಿಮಾಳಮ್ಮ ಹೊಸದಾಗಿ ಮದುವೆಯಾಗಿದ್ದರೂ ಮೈಲಾರನು ಅವಳನ್ನು ಬಿಟ್ಟು ಕೋಮಾಲೆಯನ್ನು ತರಲು ಹೋಗುತ್ತಾನೆ. ಆ ಸಂದರ್ಭದಲ್ಲಿ ಗಂಗಿಮಾಳಮ್ಮ

"ಗಂಡನಿಲ್ಲದ ಜೀವಾ ಶಿವಾ ಶಿವಾ"

ಬೀಳಾ ಮಂಚವಾಗೈತೇ ಎಂಬುದಾಗಿ ಗೋಗರೆಯುತ್ತಾಳೆ.ಮೈಲಾರನು ಕೋಮಲಿಯನ್ನು ವಿವಾಹವಾಗಿ ಬಂದಾಗ ಪುರುಷ ಅಧೀನದಲ್ಲಿರುವ ಹೆಣ್ಣು ಅವನು ಹೇಳಿದಂತೆ ಕೇಳಿಕೊಂಡು ಅವನು ಮಾಡಿದ್ದನ್ನೆಲ್ಲ ಸಹಿಸಿಕೊಂಡು ಇರಬೇಕೆಂಬುದನ್ನು ಗಂಗಿಮಾಳಮ್ಮನ ಸಾಲಿನಲ್ಲಿ ನೋಡಬಹುದು.ಮೈಲಾರನ ಮೂಲಕ ಗಂಡಿಗೆ ಯಾವುದೇ ಧಾರ್ಮಿಕ ಕಟ್ಟಳೆಗಳಿಲ್ಲ. ಸಂಪ್ರದಾಯ, ಸಂಕೋಲೆಗಳಿಲ್ಲ. ವಿಕಪತ್ನಿತ್ವ ಪದ್ಧತಿ ಇಲ್ಲ ಎಂಬುದನ್ನು ನಿರೂಪಿಸಿದ್ದಾರೆ.ಗಂಗಿಮಾಳಮ್ಮ ಗಂಡನಿಲ್ಲದಿದ್ದರೂ, ತನ್ನ ಪತಿವ್ರತಾ ಧರ್ಮ ಉಳಿಸಿಕೊಂಡಿದ್ದಾಳೆ ಎಂಬುದನ್ನು ಮೈಲಾರ ಮತ್ತು ಕೋಮಲಿಯನ್ನು ಒಪ್ಪಿಕೊಳ್ಳುವುದರ ಮೂಲಕ ಪುರುಷನ ಧರ್ಮವನ್ನು ಸ್ವೀಕರಿಸುತ್ತಾಳೆ.ಯಾವ ಸಂಘರ್ಷಕ್ಕೆ ಈಡುಮಾಡಿಕೊಡುವುದಿಲ್ಲ.

ಹೀಗೆ ಅನೇಕ ಘಟನೆಗಳು ಮಹಾಕಾವ್ಯಗಳಲ್ಲಿ ಸ್ತ್ರೀಯರು ವಿವಿಧ ರೀತಿಯ ಸತ್ವಪರೀಕ್ಷೆಗಳನ್ನು ಎದುರಿಸುತ್ತಾರೆ.ಕೆಲವು ಸತ್ವ ಪರೀಕ್ಷೆಗಳು ಧರ್ಮ ಅಪೇಕ್ಷಿತವಾಗಿ ಕಂಡುಬಂದಂತೆ ಮತ್ತೆ ಕೆಲವು ಧರ್ಮ ಸಂಘರ್ಷಕ್ಕೆ ಮೂಲಕಾರಣವಾಗಿ ಕಂಡು ಬರುತ್ತದೆ.

ಮಹಿಳೆ ಕಡ್ಡಾಯವಾಗಿ ಪತಿವ್ರತಾ ಧರ್ಮವನ್ನು ಪಾಲಿಸಿಕೊಂಡುಬರಬೇಕು ಅವಳ ಪತಿವ್ರತಾ ಧರ್ಮಕ್ಕೆ ಚ್ಯುತಿ ಬಂದರೆ ಪುರುಷನ ಅಡಿಯಾಳಾಗಿ ಬದುಕಬೇಕು ಎಂಬುದು ಪುರುಷ ಸಮಾಜದ ವಾದ. ಹಾಗಾಗಿಯೇ ಸಮಾಜದಲ್ಲಿ ಸ್ತ್ರೀ ಪುರುಷನ ಅಸಮಾನತೆಗೆ ಮೂಲಕಾರಣ ಧಾರ್ಮಿಕ ಸಂಘರ್ಷಗಳೆ ಆಗಿವೆ. ಪತಿವ್ರತ, ಬಹುಪತ್ನಿತ್ವ ಶೀಲ, ಮಡಿ, ಮೈಲಿಗೆ, ಇವೆಲ್ಲವುಗಳನ್ನು ಧರ್ಮದ ಹೆಸರಿನಲ್ಲಿ ಆಚರಣೆಗೊಳ್ಳುತ್ತಿವೆ. ಆಚರಣೆಗೊಳಪಟ್ಟ ಎಷ್ಟೋ ಸಂಸ್ಕೃತಿಗಳು ಭಾರತೀಯ ಪರಂಪರೆಯಲ್ಲಿ ಅನೇಕ ಸಂಘರ್ಷಗಳಿಗೆ ಅವಕಾಶ ಮಾಡಿಕೊಟ್ಟಿದೆ. ಈ ಸಂಘರ್ಷಗಳಿಗೆ ನ್ಯಾಯ ಹೆಣ್ಣಿನ ಪರ ಇದ್ದರೂ ಶೋಷಣೆಗೆ ಒಳಗಾಗುವಳು ಸ್ತ್ರೀ.ಈ ಮೇಲಿನ ಎಲ್ಲಾ ಧರ್ಮಾಚರಣೆಗಳನ್ನು ಆದರ್ಶ ಮೌಲ್ಯಗಳೆಂದು ಹೇಳಿ ಹೆಣ್ಣಿನ ಮೇಲೆ ಹೇರಲಾಗುತ್ತಿದೆ.ಆದರೆ ಪುರುಷನಿಗೆ ಇದ್ಯಾವುದೇ ಸಂಪ್ರದಾಯ ಕಟ್ಟಳೆ, ಚೌಕಟ್ಟುಗಳ ನಿರ್ಭಂಧವಿಲ್ಲದೆ ಸ್ವತಂತ್ರ ಜೀವಿಯಾಗಿ ಬದುಕುತ್ತಿದ್ದಾನೆ.

ಆಕರ ಗ್ರಂಥಗಳು

1. ಮಂಜುನಾಥ ಬೇವಿನಕಟ್ಟೆ, ಮೈಲಾರಲಿಂಗನ ಕಾವ್ಯ, 1999
2. ಜವರೇಗೌಡ. ಜಾನಪದ ಒಂದು ಅಧ್ಯಯನ, 1976
3. ದೇವೇಂದ್ರ ಕುಮಾರ್ ಹಕಾರಿ, ಜಾನಪದ ಸಾಹಿತ್ಯ ದರ್ಶನ
4. ಪಾತಲಿಂಗಪ್ಪ, ಕನ್ನಡ ಮೌಖಿಕ ಕಾವ್ಯಗಳಲ್ಲಿ ಸ್ತ್ರೀ ಸಂಘರ್ಷದ ನೆಲೆಗಳು, 2017
5. ಸರಸ್ವತಿ,ಎನ್.ಎಸ್, ಜನಪದ ಸಾಹಿತ್ಯದಲ್ಲಿ ಪವಾಡಗಳು ಒಂದು ಅಧ್ಯಯನ, 1997
6. ಹಳ್ಳಿಕೇರಿ.ಎಫ್.ಟಿ, ಮೈಲಾರಲಿಂಗ ಪರಂಪರೆ, 2018

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

Original Article

ಕನ್ನಡ ಸಾಹಿತ್ಯಕ್ಕೆ ಡಾ.ಗೀತಾ ನಾಗಭೂಷಣ ಅವರ ಕೊಡುಗೆ

ಡಾ. ವಿದ್ಯಾ ಶಿವಾನಂದ ಛಬ್ಬಿ
ಉಪನ್ಯಾಸಕರು
ಎಸ್.ಡಿ.ಎಮ್ ಶಿಕ್ಷಣ ಮಹಾವಿದ್ಯಾಲಯ,
ತೇರದಾಳ–587315
Email-vidyacs570.gmail.com

Manuscript ID:
JRD -2026-180433
ISSN: 2230-9578
Volume 18
Issue 4(II)
Pp.113-116
April 2026
Submitted: 15 Mar. 2026
Revised: 05Apr. 2026
Accepted: 14 Apr. 2026
Published: 30 April 2026

ಸಾರಲೇಖ :

ಶತಮಾನಗಳಿಂದಲೂ ಶೋಷಣೆ, ಅನ್ಯಾಯ, ಅನೀತಿ, ಅವಮಾನಗಳನ್ನು ಎದುರಿಸುತ್ತ ಬಂದವರು ದಲಿತರು.ಬದುಕಿನುದ್ದಕ್ಕೂ ಅವರು ಅನುಭವಿಸಿದ ನೋವು, ಹತಾಶೆಗಳು ಅವರಿಗೆ ಬದುಕು ಸಾಕೆನ್ನುವಂತೆ ಮಾಡಿವೆ. ಹಿಂದಿನಿಂದಲೂ ಬಂದ ಶ್ರೇಣೀಕೃತ ಸಮಾಜದಲ್ಲಿ ಕೆಳವರ್ಗದವರು ನೋವನ್ನು ಅನುಭವಿಸುತ್ತಲೇ ಬಂದಿದ್ದಾರೆ.ಅಂತಹ ಕಷ್ಟದಲ್ಲಿ ಬೆಳೆದುಬಂದ ಕುಟುಂಬ ಗೀತಾ ನಾಗಭೂಷಣ ಅವರದ್ದಾಗಿದೆ.ಕಲಬುರ್ಗಿ ಪ್ರದೇಶದಲ್ಲಿ ದಟ್ಟವಾದ ಮಹಿಳಾ ಸಂವೇದನೆಯನ್ನು ಅಭಿವ್ಯಕ್ತಿಸಿದ ಮಹಿಳಾ ಸಾಹಿತಿಗಳಲ್ಲಿ ಗೀತಾ ನಾಗಭೂಷಣ ಅಗ್ರಗಣ್ಯರು.

ಪ್ರಸ್ತುತ ಲೇಖನದಲ್ಲಿ ಗೀತಾ ನಾಗಭೂಷಣ ಅವರ ಬಾಲ್ಯ ಜೀವನ, ವಿದ್ಯಾಭ್ಯಾಸ, ಕಲಿಯುವ ಸಂದರ್ಭದಲ್ಲಿ ಅವರಿಗೆ ಎದುರಾದ ಕಷ್ಟಗಳು, ಸತತ ಪ್ರಯತ್ನದಿಂದ ಅವರು ಗುಮಾಸ್ತೆಯಾಗಿ ಕಾರ್ಯ ಪ್ರಾರಂಭಿಸಿ ಉಪನ್ಯಾಸಕಿಯಾಗುವವರೆಗೆ ಬಿಡದ ಛಲ, ಪ್ರತಿ ಹಂತದಲ್ಲಿಯೂ ಅವರು ಪಟ್ಟ ಕಷ್ಟದ ಹಾದಿಯನ್ನು ಇಲ್ಲಿ ವಿವರಿಸಲಾಗಿದೆ. ವಿವಾಹವೆಂಬ ಬಂಧನ ಅವರ ಬದುಕಿನಲ್ಲಿ ಹೊಸ ಆಸೆಗಳನ್ನು ಚಿಗುರಿಸುವ ಮುನ್ನವೇ ಬಾಡಿಸಿದ ದಾಂಪತ್ಯ ಜೀವನವನ್ನು ಅವರ ಆತ್ಮಕಥೆಯ ಆಧಾರದ ಮೇಲೆ ಪ್ರಸ್ತುತ ಲೇಖನದಲ್ಲಿ ವಿವರಿಸಲಾಗಿದೆ.ಗಂಡನನ್ನು ಬಿಟ್ಟು, ತವರುಮನೆಯಿಂದ ದೂರವಾಗಿ, ಎರಡು ಪುಟ್ಟ ಮಕ್ಕಳನ್ನು ಕರೆದುಕೊಂಡು ಜೀವನ ಸಾಗಿಸಿದ ದಾರುಣ ಚಿತ್ರಣವನ್ನು ಇಲ್ಲಿ ಬಿಚ್ಚಿಡಲಾಗಿದೆ.

ಗೀತಾ ನಾಗಭೂಷಣ ಚಿಕ್ಕ ವಯಸ್ಸಿನಲ್ಲಿಯೇ ಸಾಹಿತ್ಯದ ಬಗ್ಗೆ ಆಸಕ್ತಿ ಹೊಂದಿದ್ದರು.ಕಷ್ಟದ ಜೀವನದ ನಡುವೆ ಬೆಂದ ಅವರು ತಮ್ಮ ನೋವನ್ನು ಹೊರಹಾಕಲು ಆ ಸಾಹಿತ್ಯದ ಮಾರ್ಗವನ್ನು ಹುಡುಕಿದರು.ತಮ್ಮ ಸೃಜನಶೀಲ ಬರಹದ ಅಭಿವ್ಯಕ್ತಿಗೆ ಕಥೆ–ಕಾದಂಬರಿಗಳನ್ನು ರಚಿಸುವುದರ ಜೊತೆಗೆ ಸಂಶೋಧನೆ, ಸಂಪಾದನೆ, ರೇಡಿಯೋ ನಾಟಕ, ವ್ಯಕ್ತಿಚಿತ್ರಣಗಳನ್ನು ರಚಿಸಿದ್ದಾರೆ.ಸಾಹಿತ್ಯದ ಜೊತೆಗೆ ಸಾಕಷ್ಟು ಸಂಘ–ಸಂಸ್ಥೆಗಳ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ.ಇವರ ಸಾಹಿತ್ಯ ಸೇವೆಯನ್ನು ಪರಿಗಣಿಸಿ ಸಾಕಷ್ಟು ಪ್ರಶಸ್ತಿ–ಪುರಸ್ಕಾರಗಳು ಅವರನ್ನು ಅರಸಿಕೊಂಡು ಬಂದವು.ಹೀಗೆ ಬದುಕಿನುದ್ದಕ್ಕೂ ನೋವುಗಳನ್ನೇ ಅನುಭವಿಸಿ, ಸಾಹಿತ್ಯಕ್ಕೆ ಮಡಿವಂತಿಕೆ ಸಲ್ಲದು ಎಂಬ ಮಾತನ್ನು ಸಾಹಿತ್ಯದ ಮೂಲಕವೇ ತೋರಿಸಿಕೊಟ್ಟ ಗೀತಾ ನಾಗಭೂಷಣ ಅವರ ಬದುಕಿನ ಹಾಗೂ ಬರಹಗಳ ಸಂಕ್ಷಿಪ್ತ ಚಿತ್ರಣವನ್ನು ಪ್ರಸ್ತುತ ಲೇಖನದಲ್ಲಿ ನೀಡಲಾಗಿದೆ.

ವಿಶೇಷ ಪದಗಳು (ಕೀವರ್ಡ್ಸ್) : ಜೋಪಡಿಪಟ್ಟಿ– ದಲಿತರು ವಾಸಿಸುತ್ತಿದ್ದ ಪ್ರದೇಶ, ಹರವು– ವಿಸ್ತಾರ, ವ್ಯಾಪ್ತಿ, ಗುಮಾನಿ – ಅನುಮಾನ, ಮ್ಯಾಗಜಿನ್ – ಸಂಚಿಕೆ, ಬಾಬಾ – ತಂದೆ, ರಿವಾಜು – ಪದ್ಧತಿ

ಕನ್ನಡ ಸಾಹಿತ್ಯಕ್ಕೆ ಡಾ.ಗೀತಾ ನಾಗಭೂಷಣ ಅವರ ಕೊಡುಗೆ

ಶತಮಾನಗಳಿಂದಲೂ ಶೋಷಣೆ, ಅನ್ಯಾಯ, ಅನೀತಿ, ಅವಮಾನಗಳನ್ನು ಎದುರಿಸುತ್ತ ಬಂದವರು ದಲಿತರು. ಬದುಕಿನುದ್ದಕ್ಕೂ ಅವರು ಅನುಭವಿಸಿದ ನೋವು, ಹತಾಶೆಗಳು ಅವರಿಗೆ ಬದುಕು ಸಾಕೆನ್ನುವಂತೆ ಮಾಡಿವೆ. ಹಿಂದಿನಿಂದಲೂ ಬಂದ ಶ್ರೇಣೀಕೃತ ಸಮಾಜದಲ್ಲಿ ಕೆಳವರ್ಗದವರು ನೋವನ್ನು ಅನುಭವಿಸುತ್ತಲೇ ಬಂದಿದ್ದಾರೆ.ಅಂತಹ ಕಷ್ಟದಲ್ಲಿ ಬೆಳೆದುಬಂದ ಕುಟುಂಬ ಗೀತಾ ನಾಗಭೂಷಣ ಅವರದ್ದಾಗಿದೆ.ಕಲಬುರ್ಗಿ ಪ್ರದೇಶದಲ್ಲಿ ದಟ್ಟವಾದ ಮಹಿಳಾ ಸಂವೇದನೆಯನ್ನು ಅಭಿವ್ಯಕ್ತಿಸಿದ ಮಹಿಳಾ ಸಾಹಿತಿಗಳಲ್ಲಿ ಗೀತಾ ನಾಗಭೂಷಣ ಅಗ್ರಗಣ್ಯರು.

ಕಾದಂಬರಿ ಕ್ಷೇತ್ರದಲ್ಲಿಯೇ ತಮ್ಮನ್ನು ಗುರುತಿಸಿಕೊಂಡಿರುವ ಗೀತಾ ನಾಗಭೂಷಣ ಅವರು ಹಿಂದುಳಿದ ಪ್ರದೇಶವೆಂದೇ ಖ್ಯಾತವಾದ ಕಲಬುರ್ಗಿ ಜಿಲ್ಲೆಯ ಸಾವಳಗಿ ಗ್ರಾಮದ ಅನಕ್ಷರಸ್ಥ ತಳವಾರ ಸಮುದಾಯ(ಮೀನುಗಾರ)ದ ಜೋಪಡಿಪಟ್ಟಿಯಲ್ಲಿ 25–3–1942ರಂದು ಜನಿಸಿದರು. ತಂದೆ ಶಾಂತಪ್ಪ, ತಾಯಿ ಶರಣವ್ವ. ಮನೆಯಲ್ಲಿ ಕಿತ್ತುತಿನ್ನುವ ಬಡತನ. ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಗೀತಾ ಬಡತನವನ್ನು ಮೆಟ್ಟಿನಿಂತು, ಸಮಾಜದ ಕುಹಕ ನಿಂದನೆಗಳನ್ನು ಸಹಿಸಿಕೊಂಡು, ವಿದ್ಯಾವಂತಳಾಗಿ ಅಧ್ಯಾಪಕಿಯಾಗಿ, ಪ್ರಾಚಾರ್ಯರಾಗಿ, ಸೃಜನಶೀಲ ಲೇಖಕರಾಗಿ, ಕರ್ನಾಟಕದ ಹೆಮ್ಮೆಯ ಕಾದಂಬರಿಗಾರ್ತಿಯಾಗಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದಿಯವರೆಗೆ ಬೆಳೆದು ನಿಂತಪರಿ ರೋಚಕವಾದುದು.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ. ವಿದ್ಯಾ ಶಿವಾನಂದ ಛಬ್ಬಿ, ಉಪನ್ಯಾಸಕರು ಎಸ್.ಡಿ.ಎಮ್ ಶಿಕ್ಷಣ ಮಹಾವಿದ್ಯಾಲಯ, ತೇರದಾಳ–587315

How to cite this article:
ಡಾ. ವಿದ್ಯಾ ಶಿವಾನಂದ ಛಬ್ಬಿ .*2026).* ಕನ್ನಡ ಸಾಹಿತ್ಯಕ್ಕೆ ಡಾ.ಗೀತಾ ನಾಗಭೂಷಣ ಅವರ ಕೊಡುಗೆ. *Journal of Research and Development, 18(4(II)), 113–116.* https://doi.org/10.5281/zenodo.19396715

Quick Response Code:
Website: https://jrdrvb.org/
DOI: 10.5281/zenodo.19396715
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

"ಗೀತಾ ನಾಗಭೂಷಣರ ಬದುಕು ಮತ್ತು ಬರಹದ ಹಾದಿಯೇನೂ ಹೂವಿನ ಹಾದಿಯಾಗಿರಲಿಲ್ಲ. ಹಿಂದುಳಿದ ವರ್ಗದ ಬಡಕುಟುಂಬದ ಜೋಪಡಿಗಳ ಅನೈರ್ಮಲ್ಯ ವಾತಾವರಣದಲ್ಲಿ.ಹೆಣ್ಣುಮಕ್ಕಳು ಓದುತ್ತೇವೆ ಎಂದರೆ ಕೆಂಗಣ್ಣಿನಿಂದ ನೋಡುತ್ತಿದ್ದ ಅಂದಿನ ಸಮಾಜದೆದುರು ದಲಿತ ಹೆಣ್ಣುಮಗಳು ಓದು ಕಲಿಯುವುದೆಂದರೆ ಅಪರಾಧವೇ ಸರಿ ಎಂಬ ಇಬ್ಬಗೆಯ ಶೋಷಣೆಯ ಬೆಂಕಿಯುರಿಗಳ ನಡುವೆ ಬದುಕಿ ಉಳಿಯುವ ಸಾಹಸ. ಮಗಳು ಶಾಲೆಗೆ ಹೋಗದಿರಲಿ ಎಂದು ತಾಯಿ ದೇವರಿಗೆ ಹರಕೆ ಹೊರುತ್ತಿದ್ದರೆ ಇತ್ತ ತಂದೆಗೆ ಮಗಳು ಓದಿ ನೌಕರಿ ಹಿಡಿಯಲಿ ಎಂಬ ಹಂಬಲ.ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ ಜೈಲುಶಿಕ್ಷೆಯನ್ನು ಅನುಭವಿಸಿದ್ದ ತಂದೆ ಶಾಂತಪ್ಪ ಅಲ್ಲಿ ತನಗೆ ದೊರಕಿದ ವಿದ್ಯಾವಂತರ, ಬುದ್ಧಿವಂತರ ಸಂಪರ್ಕದಿಂದ ರಾಮಾಯಣ, ಮಹಾಭಾರತಗಳ ಪರಿಚಯವಾಗಿದ್ದರಿಂದಲೋ ಏನೋ ಮಗಳನ್ನು ಓದಿಸಿಯೇ ತೀರಬೇಕೆಂಬ ಛಲ ತೊಟ್ಟರು.ಇಷ್ಟು ಸಾಕಾಯಿತು ಗೀತಾ ಅವರ ಓದುವ ಹಂಬಲದ ಹಕ್ಕಿಗೆ ರೆಕ್ಕೆ ಬರಲು"ಎಂದು ಗೀತಾ ನಾಗಭೂಷಣರ ಬಾಲ್ಯಜೀವನದ ಹಾದಿಯನ್ನು ಸಿದ್ಧಲಿಂಗಯ್ಯನವರು ವಿವರಿಸಿದ್ದಾರೆ.

ಅಜ್ಞಾನ, ಅನಕ್ಷರತೆ, ಬಡತನ, ಮೌಢ್ಯತೆಯಲ್ಲಿ ಬದುಕುತ್ತಿದ್ದ ಕೆಳವರ್ಗದ ದಲಿತ ಸಮುದಾಯದಲ್ಲಿ ಹುಟ್ಟಿದ ಗೀತಾ ನಾಗಭೂಷಣ ಶಾಲೆ ಕಲಿತದ್ದು ಒಂದು ಸಾಹಸವೇ ಆಗಿದೆ.ಮನೆಯಲ್ಲಿ ಕುಳಿತುಕೊಳ್ಳಲೂ ಜಾಗವಿಲ್ಲದಂತಹ ಬಡತನ ಅವರನ್ನು ಕಿತ್ತುತಿನ್ನುತ್ತಿತ್ತು.ಬ್ರಾಹ್ಮಣರ ಓಣಿಯ ಒಂದು ಮೂಲೆಯಲ್ಲಿಯೇ ಅವರ ಮನೆ ಇದ್ದುದರಿಂದ ಸಾಯಂಕಾಲ ಬ್ರಾಹ್ಮಣರ ಮಕ್ಕಳ ಜೊತೆ ಲೈಟಿನ ಬೆಳಕಿನಲ್ಲೇ ಓದಲೆಂದು ಹೋದರೆ ಬ್ರಾಹ್ಮಣರ ಹೆಂಗಸರು ಅವರನ್ನು ಮಡಿ–ಮೈಲಿಗೆ ಎಂದು ದೂರ ಕುಳಿತುಕೊಳ್ಳಲು ಹೇಳುತ್ತಿದ್ದದ್ದು, ಸಿಟ್ಟಿನಿಂದ ಬೈದಾಡುತ್ತಿದ್ದದ್ದು, ಅವಳ ಮುಟ್ಟಿಸಿಕೊಳ್ಳಬೇಡಿ ಎಂದು ಹೇಳುತ್ತ, "ಏ ಶೂದ್ರ ಮುಂಡೇದೇ, ದೂರ ಕೂಡು ಆಕಾಡಿ.ನಮ್ಮ ಹುಡ್ರ ಸರಿಜೋಡಿ ಕುಂತು ಓದ್ತಿಯೇನೆ, ಥೂ ಸಲಿಗಿ ಕೊಟ್ಟ ನಾಯಿ ತಲೀ ಮೂಸಿ ನೋಡಿತ್ತಂತೆ. ಈ ಕೆಳಮಂದಿಗೆಲ್ಲಾ ಸಮೀಪ ಕರ್ಕೋಬ್ಯಾಡ್ರೋ" ಎಂದು ಬ್ಯಾಹ್ಮಣ ಮಡಿ ಹೆಂಗಸು ಗೀತಾ ಅವರು ಓದಲು ಹೊದಾಗಲೆಲ್ಲ ಬೈದಾಡುವ ಚುಚ್ಚುಮಾತುಗಳು ಅವರನ್ನು ಗಾಸಿಗೊಳಿಸುತ್ತವೆ. ಆ ಬ್ರಾಹ್ಮಣ ಹುಡುಗರಿಂದ ದೂರ ಸರಿದು ಕುಳಿತಾಗ ಆ ಹುಡುಗರೆಲ್ಲ ಇವರನ್ನು ಮಿಕಿಮಿಕಿ ನೋಡಿ ನಕ್ಕಾಗ ದುಃಖ, ನೋವು, ಸಂಕಟಗಳೆಲ್ಲ ಒಟ್ಟಿಗೆ ಬಂದರೂ ಸಹಿಸಿ ಓದಿಕೊಂಡು ಬರುತ್ತಿದ್ದರು.

ಕಲಬುರ್ಗಿಯಲ್ಲಿ ಪ್ರೌಢಶಿಕ್ಷಣ ಮುಗಿಸಿದ ಗೀತಾ ನಾಗಭೂಷಣ ಅವರಿಗೆ ಬಡತನದ ಕಾರಣವಾಗಿ ಚಿಕ್ಕವಯಸ್ಸಿನಲ್ಲಿಯೇ ಕಲೆಕ್ಟರ್ ಆಫೀಸಿನಲ್ಲಿ ಗುಮಾಸ್ತೆ ಕೆಲಸಕ್ಕೆ ಸೇರುವ ಪರಿಸ್ಥಿತಿ ಎದುರಾಯಿತು.ಕಚೇರಿಯಲ್ಲಿ ಮೇಲ್ವರ್ಗದವರ ನಿಂದನೆ, ವ್ಯಂಗ್ಯಗಳನ್ನು ಸಹಿಸಿಕೊಳ್ಳುತ್ತಲೇ ಶ್ರೇಣೀಕೃತ ಸಮಾಜದಲ್ಲಿ ಮಹಿಳೆಯರಿಗೆ ಆಗುತ್ತಿದ್ದ ಅನ್ಯಾಯಗಳನ್ನು ಸೂಕ್ಷ್ಮವಾಗಿ ಗಮನಿಸುತ್ತ ಬಂದರು.ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ.ಎಡ್ ಪದವಿ ಪಡೆದ ಅವರು ಕಲಬುರ್ಗಿ ಶರಣ ಬಸವೇಶ್ವರ ಪದವಿಪೂರ್ವ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿ ಸೇವೆ ಪ್ರಾರಂಭಿಸಿದರು.

ಸಮಾಜಕ್ಕೆ ಸ್ಪರ್ಧಿಯಾಗಿ ನಿಲ್ಲುವ, ತನ್ನ ಬದುಕನ್ನೇ ತನಗೆ ತೋಚಿದಂತೆ ರೂಪಿಸಿಕೊಳ್ಳುವ ಛಲ ಕೆಲವು ಹೆಂಗಸರಲ್ಲಿ ಕಂಡುಬರುತ್ತದೆ.ಅಂತಹವರು ಯಾವುದಕ್ಕೂ ರಾಜಿ ಮಾಡಿಕೊಳ್ಳುವುದಿಲ್ಲ. ಅವರು ನಡೆಯುವ ಹೆಜ್ಜೆಗಳು ಹೊಸಹಾದಿಯನ್ನೇ ಹುಟ್ಟಿಸುತ್ತವೆ. ಇಂತಹ ಸ್ವಭಾವಕ್ಕೆ ಗೀತಾ ಅವರನ್ನು ಸೇರಿಸಬಹುದು.ಸಾಮಾನ್ಯ ಮಹಿಳೆಯರಂತೆ ಬದುಕನ್ನು ಸಾಗಿಸುವುದು ಗೀತಾ ನಾಗಭೂಷಣರಿಗೆ ಒಪ್ಪಿಗೆ ಇರಲಿಲ್ಲ. ಎಲ್ಲರಿಗಿಂತ ಭಿನ್ನವಾದ ನೆಲೆಯಲ್ಲಿ ನಿಂತು ವಿಶಿಷ್ಟತೆಯನ್ನು ಹೊಂದಬೇಕೆಂಬ ಇಚ್ಛೆ ಅವರದಾಗಿತ್ತು.ಇಷ್ಟವಿಲ್ಲದಿದ್ದರೂ ಹಿರಿಯರ ಬಲವಂತದಿಂದ ಮದುವೆಯಾದರು. ಹೊಂದಾಣಿಕೆಯಾಗದೆ ವಿವಾಹಬಂಧನ ಕೆಲವೇ ದಿನಗಳಲ್ಲಿ ಕಡಿದು ಹೋಗುತ್ತದೆ. ಇಂತಹ ಸಂದರ್ಭದಲ್ಲಿ ಸಮಾಧಾನ ಹೇಳುವ ಬದಲು ತಿರಸ್ಕಾರದ ಮಾತುಗಳಿಂದ,ಮನೆಯವರು ಹೀಯಾಳಿಸಿ ಅವಮಾನ ಮಾಡಿದಾಗ ಮಾನಸಿಕ ಯಾತನೆಗೆ ಒಳಗಾಗಿದ್ದಾರೆ.

ಬದುಕಿನಲ್ಲಿ ಎದುರಾದ ಸಮಸ್ಯೆ, ನೋವುಗಳನ್ನು ದಿಟ್ಟತನದಿಂದ ಎದುರಿಸಿ ಸ್ವಾವಲಂಬನೆಯ ಜೀವನ ಸಾಗಿಸುತ್ತಿರುವಾಗ ನಾಗಭೂಷಣರ ಪರಿಚಯವಾಗುತ್ತದೆ.ಪರಿಚಯ ಪ್ರೇಮವಾಗಿ ಪರಿವರ್ತನೆಯಾದಾಗ ಇಬ್ಬರೂ ಮದುವೆಯಾಗಲು ನಿರ್ಧರಿಸುತ್ತಾರೆ.ಮನೆಯವರ ವಿರೋಧದ ನಡುವೆ ಮರುಮದುವೆಯಾಗಿ ಸಂಬಂಧಿಕರ ತಿರಸ್ಕಾರಕ್ಕೆ ಒಳಗಾಗಿ ತವರಿನಿಂದ ದೂರವಾಗುತ್ತಾರೆ.ಮೊದಲ ಗಂಡನ ಜೊತೆ ನೆಮ್ಮದಿಯ ಬದುಕನ್ನು ಕಾಣದೆ ಎರಡನೆಯ ಗಂಡನ ಜೊತೆಗಾದರೂ ಸುಂದರವಾದ ಬದುಕನ್ನು ಕಾಣಬಹುದೆಂಬ ಮಹದಾಸೆ ಹೊಂದುತ್ತಾರೆ.ಅಷ್ಟರಲ್ಲಿ ಅವರ ಬಣ್ಣದ ಕನಸುಗಳು ಮಸಿ ಬಳಿದುಕೊಂಡು ಹುಸಿಯಾಗತೊಡಗುತ್ತವೆ.

ಗೀತಾ ನಾಗಭೂಷಣ ದಾಂಪತ್ಯಜೀವನದಲ್ಲಿ ಸಾಕಷ್ಟು ನೋವು ಅನುಭವಿಸಿದರು.ತಮ್ಮ ಬಾಳಸಂಗಾತಿಯ ದೌರ್ಜನ್ಯ ಶೋಷಣೆಯಿಂದ ನಲುಗಿ ಹೋದರು.ಅವರು ಅನುಭವಿಸಿದ ನೋವು, ಕಷ್ಟಗಳೇ ಅವರ ಬರವಣಿಗೆಗೆ ಪ್ರೇರಣೆ ನೀಡಿದವು.ತಮ್ಮ ದಾಂಪತ್ಯ ಬದುಕಿನ ಕುರಿತಾಗಿ "ನಾನು ಬಾಳಸಂಗಾತಿಯನ್ನಾಗಿ ಈ ನಾಗಭೂಷಣನನ್ನು ಆರಿಸಿಕೊಳ್ಳುವಲ್ಲಿ ತಪ್ಪಿದ್ದು ನನ್ನ ಅರಿವಿಗೆ ಬರಲು ಹೆಚ್ಚು ಕಾಲವೇನೂ ಬೇಕಾಗಿರಲಿಲ್ಲ. ಎರಡು ಮೂರು ವರ್ಷಗಳಲ್ಲಿಯೇ ಇವನ ಬಣ್ಣ ಬಯಲಾಗಿ ನನ್ನ ಆಯ್ಕೆಯ ತಪ್ಪಿನ ಅರಿವು ನನಗಾಗತೊಡಗಿತು. ಇವನ ಹಗಲಿರುಳಿನ ಮಿತಿಮೀರಿದ ಕುಡಿತ, ಕಚ್ಚೆಹರಕುತನದಿಂದಾಗಿ ರೋಸಿಹೋದೆ.ನನ್ನಲ್ಲಿ ವ್ಯವಹಾರ ಜ್ಞಾನವಿಲ್ಲ. ಜನರನ್ನು ಜಡ್ಜ್ ಮಾಡುವ ಜಾಣೆಯಲ್ಲ. ಭಾವುಕತೆ ಹೆಚ್ಚಾಗಿರುವ ನನ್ನ ಮೂರ್ಖತನಕ್ಕೆ ಮದ್ದಿರಲಿಲ್ಲ. ಅವನನ್ನು ನಾನು ನಂಬಿದ್ದೆನಲ್ಲ, ಅದೇ ನಂಬಿಕೆ ನನ್ನ ಬದುಕಿನ ದಾರಿಯಲ್ಲಿ ಮುಳ್ಳುಬಿದ್ದಿತು.ದಿನಾ ಜಗಳ, ಕಿರಿಕಿರಿ, ಹೊಡಿಬಡಿ ಅಂತಾ ಶುರುವಾಯಿತು.ಅದೇ ಹಂತದಲ್ಲಿ ಇವನಿಂದ ನನಗೆ ಎರಡು ಮಕ್ಕಳು ಹುಟ್ಟಿದವು.ನನ್ನ ಮನೆಯ ಮತ್ತು ಮಕ್ಕಳ ಯಾವ ಜವಾಬ್ದಾರಿಯನ್ನು ನನ್ನ ಗಂಡ ಅನ್ನುವ ಮನುಷ್ಯ ತೆಗೆದುಕೊಳ್ಳಲೇ ಇಲ್ಲ. ನನ್ನ ಅಳು ಅರಣ್ಯರೋದನವಾಗಿತ್ತು.ಮಕ್ಕಳು ಹೆದರಿ ಕಂಗಾಲಾಗಿ ಮೂಲೆಯಲ್ಲಿ ಅಡಗಿಕೊಳ್ಳುತ್ತಿದ್ದವು.ಒಂದೊಂದಾಗಿ ನನ್ನ ಒಡವೆ ವಸ್ತು ಅಂತ ನನ್ನಲ್ಲಿದ್ದ ಬಂಗಾರ ಹಣ ಎಲ್ಲ ದೋಚಿಕೊಂಡು ನಾನು ಪೂರಾ ಖಾಲಿಯಾದ ಮೇಲೆ ಒಂದು ದಿನ ಅವನು ನನ್ನನ್ನು, ಮಕ್ಕಳನ್ನು ಬಿಟ್ಟು ತನ್ನ ಮೊದಲ ಹೆಂಡತಿಯ ಮನೆ ಸೇರಿಬಿಟ್ಟ ಮಾರಾಯ.ನನ್ನ ದೈಹಿಕ, ಮಾನಸಿಕ ಚಿತ್ರಹಿಂಸೆಯೇನೋ ಒಂದಿಷ್ಟು ಕಮ್ಮಿಯಾದಂಗಾಗಿ ನೆಮ್ಮದಿಯ ಉಸಿರುಬಿಟ್ಟು ನಿರುಮ್ಮಳಾದೆ.ನಾನು ಅನುಭವಿಸಿದ ನೋವು, ಸಂಕಟ, ಅವಮಾನ, ಒಂಟಿತನಗಳನ್ನು ನೆನೆದರೆ, ಅಬ್ಬ ಅದು ಹೇಗೆ ಈ ಮಕ್ಕಳನ್ನು ಉಡಿಯಲ್ಲಿ ಕಟ್ಟಿಕೊಂಡು ಬದುಕಿದೆ ಎಂದು ಆಶ್ಚರ್ಯವಾಗುತ್ತದೆ.ಜೊತೆಗೆ ಎಲ್ಲದಕ್ಕೂ ತಲೆದೂಗುವ, ಬದುಕಿನಲ್ಲಿ ಹೊಂದಿಕೊಂಡು ಹೋಗುವ ಜಾಯಮಾನ ನನ್ನದಾಗಿರಲಿಲ್ಲ." ಎಂದು ಗೀತಾ ನಾಗಭೂಷಣ ಲೇಖಲೋಕ ಆತ್ಮಕಥೆಯಲ್ಲಿ ನಿರೂಪಿಸಿದ್ದಾರೆ.

ಕಷ್ಟ, ನೋವು, ಅವಮಾನಗಳನ್ನು ಅನುಭವಿಸಿದರೂ ಸಮಾಜದಲ್ಲಿ ಧೈರ್ಯದಿಂದಲೇ ಬದುಕಿದರು.ಅಂತರಂಗದಲ್ಲಾಗುವ ತೊಳಲಾಟ, ಸೂಕ್ಷ್ಮ ಸಂವೇದನೆಗಳು ಪುರುಷಪ್ರಧಾನ ಸಮಾಜಕ್ಕೆ ಅರ್ಥವಾಗದಂತವು.ಬಾಲ್ಯದಿಂದಲೂ ಸದಾ ಅವಮಾನ ಅನುಭವಿಸುತ್ತಲೇ ಬಂದ ಗೀತಾ ನಾಗಭೂಷಣ ದೊಡ್ಡವರಾಗಿ ಬುದ್ಧಿ ಬಲಿತಾಗ ಇಂತಹ ಪುರುಷಪ್ರಧಾನ ವ್ಯವಸ್ಥೆಯಲ್ಲಿರುವ ಕಟ್ಟಳೆಯೊಳಗೆ ರೀತಿ ರಿವಾಜುಗಳಿಗೆ ಕಟ್ಟುಬೀಳದೆ, ಅವುಗಳನ್ನು ಖಂಡಿಸುವ ಮನೋಸ್ಥೈರ್ಯವನ್ನು ಹೊಂದಿದರು.ಅವರ ಬದುಕಿನಲ್ಲಾದ ಘಟನೆಗಳು, ಸಮಾಜದ ನಿಂದನೆ, ಅವರ ಬದುಕಿನ ಪರಿಸರವೇ ಅವರ ದಿಟ್ಟ ಸಾಹಿತ್ಯಕ್ಕೆ ಮೆಟ್ಟಿಲುಗಳಾದವು.ದಲಿತ ಸಂವೇದನೆಯ ಬರಹಗಾರ್ತಿಯರಲ್ಲಿ ಈ ಮೊದಲು ವೈದಿಕ ಲೇಖಕಿಯರು ಯಾರೂ ಕೊಳಗೇರಿಯ ಸಾಹಿತ್ಯ ರಚಿಸಿರಲಿಲ್ಲ. ಗೀತಾ ನಾಗಭೂಷಣರು ಕನ್ನಡದಲ್ಲಿ ಜೋಪಡಿಪಟ್ಟಿ ಸಾಹಿತ್ಯಕ್ಕೆ ಚಾಲನೆ ನೀಡಿ ಅದಕ್ಕೆ ಸಮೃದ್ಧತೆಯನ್ನು ತಂದುಕೊಟ್ಟ ಏಕೈಕ ಶೂದ್ರ ಲೇಖಕಿ ಎಂದು ವಿಮರ್ಶಕರು ವ್ಯಾಖ್ಯಾನಿಸಿದ್ದಾರೆ.

ಕನ್ನಡ ಸಾಹಿತ್ಯಕ್ಕೆ ಗೀತಾ ನಾಗಭೂಷಣರ ಕೊಡುಗೆ

ಗೀತಾ ನಾಗಭೂಷಣ ಬರವಣಿಗೆ ಲೋಕ ಪ್ರವೇಶಿಸಿರುವುದು ನವ್ಯ ಸಾಹಿತ್ಯದ(1960) ಸಂದರ್ಭದಲ್ಲಿ. 1968ರಲ್ಲಿ ಗೀತಾ ಕಥೆಗಳನ್ನು ರಚಿಸುವ ಮೂಲಕ ಬರವಣಿಗೆಯನ್ನು ಪ್ರಾರಂಭಿಸಿದರು.ಕಾಲೇಜು ಹಂತದಲ್ಲಿ ಅವರ ಓದುವ ಹರವು ಹೆಚ್ಚಾಗಿರುವುದರಿಂದಲೇ ಬರವಣಿಗೆಯಲ್ಲಿ ತೊಡಗಿದ್ದು ಎಂಬುದನ್ನು ಅವರೇ 'ಕಥನಕಲೆಯ ನೆಲೆಗಳು' ಕೃತಿಯಲ್ಲಿ ಹೇಳಿಕೊಂಡಿದ್ದಾರೆ."ಕಥೆ ಹೇಳುವ ಕಲೆ ನನಗೆ ನನ್ನ ಅಪ್ಪನಿಂದಲೇ ಅವ್ಯಕ್ತವಾಗಿ ಬಂದಿರಬಹುದೇ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

ಎನ್ನುವ ಗುಮಾನಿ.ನನಗೆ ನನ್ನ ಮೊದಲ ಕಥೆ ಕಾಲೇಜಿನ ಮ್ಯಾಗಜಿನ್ನಲ್ಲಿ ಪ್ರಕಟಗೊಂಡಾಗ ನನ್ನ ಬಾಬಾ ನನ್ನ ತಲೆ ಸವರಿ ನಸುನಕ್ಕು ಮೂಕವಾಗಿಯೇ ಹರಸಿದ್ದು ನಾನು ಮರೆಯುವಂತಿಲ್ಲ" ಎಂದು ಹೇಳಿದ್ದಾರೆ.ಗೀತಾ ನಾಗಭೂಷಣ ಕಾಲೇಜು ಓದುತ್ತಿರುವ ಸಂದರ್ಭದಲ್ಲಿ ಒಮ್ಮೆ ಅವರ ತಾಯಿಯ ತವರೂರಾದ ಚಿಂಚೂರಿನ ಮಾವುರತಾಯಿ ದೇವಿಯ ಜಾತ್ರೆಗೆ ಹೋದ ಸಂದರ್ಭದಲ್ಲಿ ಅಲ್ಲಿ ನಡೆದ ಹರೆಯದ ಹೆಣ್ಣುಮಕ್ಕಳ ಬೆತ್ತಲೆಸೇವೆಯನ್ನು ಕಂಡು ಆಘಾತಗೊಳ್ಳುತ್ತಾರೆ.ಆ ಅನುಭವವನ್ನು ಹೇಳಿಕೊಳ್ಳುತ್ತ "ಹರಕೆ ಹೊತ್ತ ದಲಿತರು ತಮ್ಮ ಹೆಣ್ಣುಮಕ್ಕಳಿಂದ ಬೆತ್ತಲೆಸೇವೆ ಮಾಡಿಸಿ ಜೋಗತಿಯನ್ನಾಗಿಸುವ, ಹದಿನಾರರ ಹರೆಯ ಹೊತ್ತ ಅಮಾಯಕ ಹೆಣ್ಣುಗಳ ಮನಸ್ಸಿರಲಿ ಇಲ್ಲದಿರಲಿ ಮನೆಯವರು ಹೊತ್ತ ಹರಕೆಯನ್ನು ಈ ರೀತಿ ತೀರಿಸಬೇಕಾಗಿತ್ತು. ಈ ಹರಕೆ ಸಂಪ್ರದಾಯವಾಗಿ ಬೆಳೆದು ಬಂದದ್ದು ಬರೀ ದಲಿತರಲ್ಲಿ ಎಂಬುದನ್ನು ಕಂಡು ದಂಗಾದೆನು" ಎಂದು ಗೀತಾನಾಗಭೂಷಣ ಲೇಖಲೋಕ–4(ಪು.43)ರಲ್ಲಿ ಹೇಳಿದ್ದಾರೆ. ಇಂತಹ ಘಟನೆಗಳ ಪರಿಣಾಮ, ಅನಿಷ್ಟ ಪದ್ಧತಿಗಳ ರೂಢಿ ರಿವಾಜುಗಳನ್ನು ಕೆಳವರ್ಗದವರಿಗಷ್ಟೇ ಮೀಸಲಾಗಿರಿಸಿದ ಮೇಲ್ವರ್ಗದವರ ವಿರುದ್ಧ ಪ್ರತಿಭಟನಾತ್ಮಕ ರೀತಿಯಲ್ಲಿ ಬರೆಯಲು ಪ್ರಾರಂಭಿಸಿದರು.

ಕಾದಂಬರಿಗಳು

ಗೀತಾ ನಾಗಭೂಷಣ ಇಪ್ಪತ್ತೇಳು ಕಾದಂಬರಿಗಳನ್ನು ರಚಿಸಿ ಮಹಿಳಾ ಸಾಹಿತ್ಯಕ್ಷೇತ್ರದಲ್ಲಿ ಅಚ್ಚಳಿಯದ ಹೆಸರು ಮೂಡಿಸಿದ್ದಾರೆ.ಅವರ ಎಲ್ಲ ಕಾದಂಬರಿಯ ಚಿಂತನೆಗಳು ಹೈದರಾಬಾದ್ ಕರ್ನಾಟಕ ಪ್ರದೇಶದ ಜನರೊಂದಿಗೆ ಗಿರಕಿ ಹೊಡೆಯುತ್ತವೆ. ಹಿಂದುಳಿದ ಉತ್ತರ ಕರ್ನಾಟಕದ ಜನರ ಜೀವನ ಇವರ ಕೃತಿಗಳಲ್ಲಿ ಚಿತ್ರಣಗೊಂಡಿದೆ.ಆ ಭಾಗದ ಜನರ ಸಂಸ್ಕೃತಿ, ಜೀವನದ ರೀತಿ ನೀತಿಗಳು ಗೀತಾ ಅವರ ಬರಹಕ್ಕೆ ಸ್ಫೂರ್ತಿಯಾಗಿವೆ. ಬಡ ದುಡಿಮೆಗಾರ, ಒಕ್ಕಲುಮಕ್ಕಳ ಮತ್ತು ದಲಿತರ ಸಾವಿರಾರು ವರ್ಷಗಳ ಸಾವು ನೋವುಗಳ ಚರಿತ್ರೆ ಅವರ ಕೃತಿಗಳಲ್ಲಿ ಅಡಗಿಕೊಂಡಿದೆ.ಅವರ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಹಿಂಸೆಯ ಸ್ವರೂಪಗಳು ಅತಿರೇಕದ ಕಲ್ಪನೆಗಳೆನಿಸಬಹುದು.ಆದರೆ ಅವುಗಳಿಗೆ ವಾಸ್ತವದ ಸ್ಪರ್ಶವಿದೆ ಎಂಬುದನ್ನು ಮರೆಯುವಂತಿಲ್ಲ.

ಗೀತಾ ನಾಗಭೂಷಣ ದಲಿತ ಸಂವೇದನೆಯುಳ್ಳ ಕಾದಂಬರಿಗಳ ಜೊತೆಗೆ ಜನಪ್ರಿಯ ಮಾದರಿಯ ಕಾದಂಬರಿಗಳನ್ನು ಕೈಬಿಡದೆ ಮುಂದುವರಿಸಿದರು. 'ತಾವರೆಯ ಹೂ'(1968), 'ಚಂದನದ ಚಿಗುರು'(1969), 'ಮಹಾಮನೆ'(1970), 'ಮರಳಿನ ಮನೆ'(1971), 'ಸಪ್ತವರ್ಣದ ಸ್ವಪ್ನ'(1973), 'ಮಾವುರ ತಾಯಿ ಮಕ್ಕಳು'(1978), 'ಹಸಿಮಾಂಸ ಮತ್ತು ಹದ್ದುಗಳು'(1978ರಲ್ಲಿ ಪ್ರಥಮ ಹಾಗೂ 1998ರಲ್ಲಿ ದ್ವಿತೀಯ ಮುದ್ರಣಗೊಂಡಿದೆ). 'ಆಘಾತ'(1980), 'ಅವಾಂತರ'(1982),'ಚಿಕ್ಕಿಯ ಹರೆಯದ ದಿನಗಳು'(1983), 'ಬದಲಾಗುವ ಬಣ್ಣಗಳು'(1984), 'ನೀಲಗಂಗಾ'(1986), 'ಪ್ರೀತಿಸಿದ್ದು ನಿನ್ನನ್ನೇ'(1986), 'ಮೋಹಾ'(1986), 'ನಿನ್ನ ತೋಳುಗಳಲ್ಲಿ'(1987), 'ನಿನ್ನೊಲವು ನನಗಿರಲಿ'(1987), 'ಸವತಿ ಶ್ರೀಗಂಧ'(1988), 'ನನ್ನ ನಿನ್ನ ನಡುವೆ'(1992), 'ಚೈತ್ರದ ಹಾಡು'(1993), 'ಧುಮ್ಮಸ್ಸು'(1994), 'ಏರಿಳಿತಗಳು'(1995), 'ಆಸರೆಗಳು'(1996), 'ನನ್ನ ಒಲವು ನಿನ್ನ ಚೆಲುವು'(1997), 'ದಂಗೆ'(1997), 'ಅಭಿಮಾನ'(1998), 'ಬದುಕು'(2001), 'ಕಾಗೆ ಮುಟ್ಟಿತು'(2002) ಮೊದಲಾದ 27 ಕಾದಂಬರಿಗಳನ್ನು ರಚಿಸಿದ್ದಾರೆ.

ದೇಶೀಯ ಸೊಗಡಿನಿಂದ ಕೂಡಿದ ಭಾಷೆಯನ್ನು ಬರವಣಿಗೆಯ ಮೂಲಕ ಕೆಳವರ್ಗದ ಜೋಪಡಿಪಟ್ಟಿಯಲ್ಲಿ ವಾಸಿಸುವ ಜನಸಮುದಾಯದ ಬದುಕನ್ನೇ ವಸ್ತುವನ್ನಾಗಿ ತೆಗೆದುಕೊಂಡು ಕಾದಂಬರಿಗಳನ್ನು ರಚಿಸಿ ಪ್ರಸಿದ್ಧಿಯನ್ನು ಪಡೆದರು.ಅವರು ಆಯ್ದುಕೊಂಡ ವಸ್ತುವಿನ ಸಾಮಾನ್ಯತೆ ಹಾಗೂ ಅವರು ಬರವಣಿಗೆಯಲ್ಲಿ ಬಳಸಿಕೊಂಡ ಭಾಷಾಶೈಲಿಯಿಂದಲೇ ಕನ್ನಡ ಸಾಹಿತ್ಯದಲ್ಲಿ ಇವರ ಕಾದಂಬರಿಗಳಿಗೆ ಒಂದು ಗಟ್ಟಿನೆಲೆ ಸಿಗಲು ಸಾಧ್ಯವಾಯಿತು.

ಕಥಾಸಂಕಲನಗಳು

ಕಾದಂಬರಿಕಾರರೆಂದೇ ಪರಿಚಿತರಾದ ಗೀತಾ ಕಥೆಗಾರ್ತಿಯಾಗಿಯೂ ಪ್ರಸಿದ್ಧರು.ಅವರ ಬರವಣಿಗೆ ಕಥೆಗಳ ರಚನೆಯಿಂದಲೇ ಪಕ್ವತೆಯನ್ನು ಹೊಂದಿದ್ದು.ಆನಂತರದಲ್ಲಿ ಪ್ರಾದೇಶಿಕ ಸತ್ವವುಳ್ಳ, ಸಂಸ್ಕೃತಿನಿಷ್ಠ, ದಲಿತ ಸಂವೇದನೆಯ ಕಾದಂಬರಿಗಳ ರಚನೆಯ ಮೂಲಕ ಯಶಸ್ಸು ಗಳಿಸಿದ್ದು ಕಂಡುಬರುತ್ತದೆ.

ಗೀತಾ ನಾಗಭೂಷಣ 'ಜ್ವಲಂತ'(1989), 'ಅವ್ವ ಮತ್ತು ಇತರ ಕಥೆಗಳು'(1993) ಮತ್ತು 'ಕ್ಯಾದಗಿಯ ಬನದಾಗ ಕಥೆಯಾಗಿ ನಿಂತವಳು'(2007) ಎಂಬ ಮೂರು ಕಥಾಸಂಕಲನಗಳನ್ನು ಸಾರಸ್ವತ ಲೋಕಕ್ಕೆ ನೀಡಿದ್ದಾರೆ. ಈ ಮೂರು ಕಥಾಸಂಕಲನಗಳನ್ನು ಒಟ್ಟುಗೂಡಿಸಿ 'ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವ' ಎಂಬ ಹೆಸರಿನ ಸಮಗ್ರ ಕಥಾಸಂಕಲನ 2012ರಲ್ಲಿ ಗುಲಬರ್ಗಾದ ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನದಿಂದ ಪ್ರಕಟವಾಯಿತು.ಅವರ ಸಾಕಷ್ಟು ಕಥೆಗಳು ತೆಲುಗು, ತಮಿಳು ಭಾಷೆಗೆ ಅನುವಾದವಾಗಿವೆ. ಸುಮಾರು 50ಕಥೆಗಳು ಹಾಗೂ 15ನಾಟಕಗಳು ಗುಲಬರ್ಗಾ, ಧಾರವಾಡ, ಮೈಸೂರು, ಬೆಂಗಳೂರು ಆಕಾಶವಾಣಿಯಿಂದ ಪ್ರಸಾರವಾಗಿವೆ. 'ಜೋಗಿಣಿ', 'ಅವ್ವ', 'ಸತ್ತ ಹೆಣ್ಣಿನ ಸುತ್ತ' ಕಥೆಗಳು ನಾಟಕವಾಗಿ ಹಾಗೂ 'ಜೀವನಚಕ್ರ', 'ನೀಲಗಂಗಾ' ಕಥೆಗಳು ಧಾರಾವಾಹಿಯಾಗಿ ದೂರದರ್ಶನದಲ್ಲಿ ಪ್ರಸಾರಗೊಂಡಿವೆ.

ಇತರೆ :

ಗೀತಾ ತಮ್ಮ ಸೃಜನಶೀಲ ಬರಹದ ಅಭಿವ್ಯಕ್ತಿಗೆ ಕಥೆ–ಕಾದಂಬರಿಗಳನ್ನು ರಚಿಸುವುದರ ಜೊತೆಗೆ ಸಂಶೋಧನೆ, ಸಂಪಾದನೆ, ರೇಡಿಯೋ ನಾಟಕ, ವ್ಯಕ್ತಿಚಿತ್ರಣಗಳನ್ನು ರಚಿಸಿದ್ದಾರೆ.ಅವರ ಇನ್ನಿತರ ಕೃತಿಗಳಾದ 'ದುರುಗಮುರುಗಿಯವರ ಸಂಸ್ಕೃತಿ' ಎಂಬ ಸಂಶೋಧನ ಗ್ರಂಥವನ್ನು ಸಾಹಿತ್ಯ ಅಕಾಡೆಮಿಯು 1993ರಲ್ಲಿ 'ಉಪಸಂಸ್ಕೃತಿಯ ಮಾಲೆ'ಯಾಗಿ ಪ್ರಕಟಿಸಿತು.ಈ ಕೃತಿ ಬುಡಕಟ್ಟು ಜನಾಂಗದ ಬದುಕಿನ ಚಿತ್ರಣ ಕೊಡುವ ಸಂಶೋಧನಾ ಕೃತಿಯಾಗಿದೆ.ಇವರ ಸಂಪಾದನ ಕೃತಿ 'ಖೇಮಣ್ಣ' 1998ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಮುತ್ತಿನ ಮಾಲಿಕೆಯಾಗಿ ಪ್ರಕಟಗೊಂಡಿದ್ದು ಇದೊಂದು ವ್ಯಕ್ತಿಚಿತ್ರಣ ಕೊಡುವ ಕೃತಿಯಾಗಿದೆ.

ಗೀತಾ ನಾಗಭೂಷಣ ಅವರ ಸಾಹಿತ್ಯಸೇವೆಗೆ ಸಂದ ಪ್ರಶಸ್ತಿಗಳು ಹಲವಾರು. 1995ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕೊಡಮಾಡಿದ ವಿಶೇಷ ಗೌರವ ಪ್ರಶಸ್ತಿ, 1998ರಲ್ಲಿ 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ', 1998ರಲ್ಲಿ ಗುಲಬರ್ಗಾದ 'ಎಸ್.ಆರ್.ಪಾಟೀಲ ಪ್ರತಿಷ್ಠಾನದ ಸಾಹಿತ್ಯಪ್ರಶಸ್ತಿ', 2001ರಲ್ಲಿ 'ಕಾಯಕರತ್ನ ಪ್ರಶಸ್ತಿ', 2001ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕೊಡಮಾಡಿದ 'ಬಿ. ಸರೋಜಾದೇವಿ ಪ್ರಶಸ್ತಿ', 2002ರಲ್ಲಿ ಕರ್ನಾಟಕ ಸರಕಾರದ 'ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ', 'ಗೊರೂರು ಸಾಹಿತ್ಯ ಪ್ರಶಸ್ತಿ', 2004ರಲ್ಲಿ ಬದುಕು ಕಾದಂಬರಿಗೆ 'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ', 2005ರಲ್ಲಿ ಲೇಖಕಿಯರ ಸಂಘದಿಂದ ಕೊಡಮಾಡಿದ 'ಅನುಪಮಾ ಪ್ರಶಸ್ತಿ', 2006ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ 'ನಾಡೋಜ ಪ್ರಶಸ್ತಿ' ಹಾಗೂ ಗುಲಬರ್ಗಾ ವಿಶ್ವವಿದ್ಯಾಲಯದವರು 2008ರಲ್ಲಿ ನೀಡಿದ 'ಗೌರವ ಡಾಕ್ಟರೇಟ್' ಪದವಿಯನ್ನು ಪಡೆದುಕೊಂಡಿದ್ದಾರೆ. 2000ರಲ್ಲಿ ಗುಲಬರ್ಗಾ ಜಿಲ್ಲಾ ಐದನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ, 2001ನೇ ಸಾಲಿನ 'ದಾನಚಿಂತಾಮಣಿ ಅತ್ತಿಮಬ್ಬೆ' ಪ್ರಶಸ್ತಿಯ ಆಯ್ಕೆ ಸಮಿತಿಯ ಅಧ್ಯಕ್ಷರಾಗಿ, ಗದಗದಲ್ಲಿ ಜರುಗಿದ 76ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಯ ಗೌರವಕ್ಕೆ ಪಾತ್ರರಾಗಿದ್ದಾರೆ.

ಸುಮಾರು ಆರು ದಶಕಗಳಿಂದ ಸಾಹಿತ್ಯಸೇವೆ ಮಾಡಿ, ಯಾರ ನಿರ್ಭಿಡೆಗಳಿಗೆ ಒಳಗಾಗದೆ ವಿಭಿನ್ನ ಸಾಹಿತ್ಯ ಸೃಷ್ಟಿಸಿದರು. ಹಳ್ಳಿ ಹಾಗೂ ಪಟ್ಟಣಗಳ ಕೆಳಗೇರಿಯ ಹೆಂಗಸರ ದಾರುಣ ಸ್ಥಿತಿಗಳ ಬಗ್ಗೆ ಬರೆಯುವಾಗ ಅವರ ನೋವಿಗೆ ಸ್ಪಂದಿಸಿ ಅಕ್ಷರಗಳ ಮೂಲಕ ಸಾಂತ್ವನ ಹೇಳಿ, ಅವರ ಆಂತರ್ಯದ ವೇದನೆಗೆ ನಾಲಿಗೆಯಾಗಿ, ಗಟ್ಟಿಧ್ವನಿಯಾಗಿ, ಅಂತಹವರ ಬದುಕನ್ನು ಪ್ರತ್ಯಕ್ಷವಾಗಿ ಭೇಟಿ ಮಾಡಿ ಕಣ್ಣಾರೆ ಕಂಡು, ಅವರ ಅನುಭವಗಳಿಗೆ ಸ್ಪಂದಿಸಿ ಯಾತನೆಯ ಬದುಕನ್ನು ಕಥೆ–ಕಾದಂಬರಿಗಳಲ್ಲಿ ಅಭಿವ್ಯಕ್ತಗೊಳಿಸಿದರು. ಸಾಹಿತ್ಯದ ಮೂಲಕ ಜಾಗೃತಿ ಮೂಡಿಸಿದ ಗೀತಾ ನಾಗಭೂಷಣರು 28 ಜೂನ್ 2020ರಂದು ಹೃದಯಾಘಾತದಿಂದ ಇಹಲೋಕವನ್ನು ತ್ಯಜಿಸಿದರು.

ಆಕರ ಗ್ರಂಥಗಳು

1. ಸಿದ್ಧಲಿಂಗಯ್ಯ.ಜಿ.ಎಸ್. ಎಂ.ಎಚ್.ಕೃಷ್ಣಯ್ಯ(ಸಂ), 2001, 'ಸಾಲುದೀಪಗಳು', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

2. ನಾಗಮಣಿ ಎಸ್. ರಾವ್, 1999, 'ಲೇಖ–ಲೋಕ–2', ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು.
3. ಕರೀಗೌಡ ಬೀಚನಹಳ್ಳಿ, ರಾಜಶೇಖರ ನೀರಮಾನ್ವಿ(ಸಂ), 2004, 'ಕಥನಕಲೆಯ ನೆಲೆಗಳು', ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು.
4. ವೆಂಕಟಲಕ್ಷ್ಮೀ ಬಿ.ಎಸ್. 1991, 'ಕನ್ನಡ ಲೇಖಕಿಯರ ನೆಲೆ–ಬೆಲೆ', ಎನ್.ಟಿ. ಶ್ಯಾಂ ಪ್ರಕಾಶನ, ಬೆಂಗಳೂರು.
5. ಸರಸ್ವತಿ ಚಿಮ್ಮಲಗಿ, 2004, 'ಗೀತಾ ನಾಗಭೂಷಣ', ಕಲಬುರ್ಗಿಯ ಸ್ಪಂದನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಕಡ್ಲಿಮಟ್ಟಿ ಕಾಶಿಬಾಯಿ : ಮೌಲ್ಯ ಮತ್ತು ವಾತ್ಸಲ್ಯ

ಪ್ರೊ. ಎಸ್.ಎಂ ಗಂಗಾಧರಯ್ಯ[1] ಆರ್. ಎಚ್. ಬಿ. ರಾಘವೇಂದ್ರ [2]
[1]ಮಾರ್ಗದರ್ಶಕರುಪ್ರಾಧ್ಯಾಪಕರು
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ
[2]ಸಂಶೋಧನಾ ವಿದ್ಯಾರ್ಥಿ
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

Manuscript ID:
JRD -2026-180434
ISSN: 2230-9578
Volume 18
Issue 4(II)
Pp.117-120
April 2026
Submitted:15 Mar. 2026
Revised:05Apr. 2026
Accepted:14 Apr.2026
Published:30 April 2026

ಸಾರಲೇಖ :

ಕನ್ನಡ ಜನಪದ ಸಾಹಿತ್ಯವು ಜನರ ಬದುಕಿನ ನೈಜ ಅನುಭವಗಳು, ಸಂಸ್ಕೃತಿ ಮತ್ತು ಮೌಲ್ಯಗಳನ್ನು ಪ್ರತಿಬಿಂಬಿಸುತ್ತದೆ. ಅವುಗಳಲ್ಲಿ ಕಥನ ಕಾವ್ಯಗಳು ವಿಶೇಷವಾಗಿ ಜೀವನದ ಸತ್ಯಗಳನ್ನು ಹಾಗೂ ನೈತಿಕ ಮೌಲ್ಯಗಳನ್ನುಸಮಗ್ರವಾಗಿ ವ್ಯಕ್ತಪಡಿಸುತ್ತವೆ. ಅಂತಹ ಪ್ರಮುಖ ಕಥನ ಕಾವ್ಯಗಳಲ್ಲಿ ಕಡ್ಲಿಮಟ್ಟಿ ಕಾಶಿಬಾಯಿ ಕಥೆ ಒಂದು ಆದರ್ಶಮಯ ಉದಾಹರಣೆ.

ಕಾಶಿಬಾಯಿ ಕಥೆಯು ಕೇವಲ ಕಥೆಯಲ್ಲ, ಪಾತಿವ್ರತ್ಯ, ಶೀಲ, ತಾಯ್ತನ, ತ್ಯಾಗಮತ್ತು ನೈತಿಕತೆಯ ಮೌಲ್ಯಗಳನ್ನು ಪ್ರತಿಪಾದಿಸುವ ಜೀವಂತ ಚಿತ್ರಣವಾಗಿದೆ. ತನ್ನಶೀಲವನ್ನು ಕಾಪಾಡಿಕೊಳ್ಳಲು ಕಾಶಿಬಾಯಿ ತನ್ನಸ್ವಂತಮಗುವಿನ ಜೀವವನ್ನೇ ತ್ಯಾಗ ಮಾಡುವಂತಹ ಅತಿದೊಡ್ಡ ಸಂಕಷ್ಟವನ್ನು ಎದುರಿಸುತ್ತಾಳೆ. ಈ ಘಟನೆಯ ಮೂಲಕ ಆ ಕಾಲಘಟ್ಟದಲ್ಲಿ ಶೀಲ ಮತ್ತು ಪಾತಿವ್ರತ್ಯಕ್ಕೆ ನೀಡಲಾಗುತ್ತಿದ್ದ ಅತ್ಯುನ್ನತ ಮಹತ್ವ ಸ್ಪಷ್ಟವಾಗುತ್ತದೆ.

ಈ ಕಥೆ ಮಹಿಳೆಯರ ಮೇಲೆ ಸಮಾಜ ವಿಧಿಸಿದ್ದ ಕಠಿಣ ನಿಯಮಗಳು, ಪುರುಷ ಅಹಂಕಾರದಿಂದ ನಡೆದಶೋಷಣೆ ಮತ್ತು ಸ್ತ್ರೀಯ ಅಸಹಾಯಕ ಸ್ಥಿತಿಯನ್ನು ಕೂಡ ತೋರಿಸುತ್ತದೆ. ಆದರೂ ಕಾಶಿಬಾಯಿ ತನ್ನನೈತಿಕ 'ಮೌಲ್ಯಗಳನ್ನು ಕಾಪಾಡಿಕೊಂಡು ಧೈರ್ಯ ಮತ್ತು ಸಚ್ಚರಿತ್ರೆಯ ಪ್ರತೀಕವಾಗುತ್ತಾಳೆ. ಒಟ್ಟಿನಲ್ಲಿ, ಕಡ್ಲಿಮಟ್ಟಿ ಕಾಶಿಬಾಯಿ ಕಥೆ ಜನಪದ ಸಂಸ್ಕೃತಿ, ಮಹಿಳಾ ತ್ಯಾಗ, ಪಾತಿವ್ರತ್ಯದ ಮಹತ್ವ ಮತ್ತು ಸಮಾಜದ ಮೌಲ್ಯ ವ್ಯವಸ್ಥೆಯನ್ನು ಬಿಂಬಿಸುವ ಶಕ್ತಿಯುತ ಕಥನ ಕಾವ್ಯವಾಗಿದ್ದು, ಇಂದಿಗೂ ನೈತಿಕತೆ ಮತ್ತು ಮೌಲ್ಯಗಳ ಅರಿವಿಗೆ ಪ್ರೇರಣೆಯಾಗಿದೆ.

ಮುಖ್ಯ ಪದಗಳು : ಕಡ್ಲಿಮಟ್ಟಿ ಕಾಶಿಬಾಯಿ ಮೌಲ್ಯ ಮತ್ತು ವಾತ್ಸಲ್ಯ,ಪಾತಿವ್ರತ್ಯ, ಶೀಲ, ತಾಯ್ತನ, ತ್ಯಾಗ, ಪಾತಿವ್ರತ್ಯದ ಮಹತ್ವ

ಕನ್ನಡ ಸಾಹಿತ್ಯವು ಸಂಪದ್ಭರಿತ ಹಾಗು ಸಮೃದ್ಧಿಯಾದದ್ದು. ಅದಕ್ಕೆ ಮೂಲ, ಜನಪದ ಸಾಹಿತ್ಯ ಜನಪದರ ಬದುಕು, ಸಂಸ್ಕೃತಿ, ಸಂಪ್ರದಾಯ, ನಂಬಿಕೆ, ವಿಶ್ವಾಸ, ಆಡುನುಡಿ ಹೀಗೆ ಎಲ್ಲವನ್ನು ತನ್ನೊಳಗೆ ಅಡಗಿಸಿಕೊಂಡು ಆಧುನಿಕ ಕಾಲಮಾನಕ್ಕೂ ಪ್ರಸ್ತುತವಾಗಿದೆ. ಜನಪದರು ತಮ್ಮ ನೋವು–ನಲಿವು, ಸುಖ–ದುಃಖ, ಎಷ್ಟೇ ಕಷ್ಟ ಬಂದರು ಧೈರ್ಯದಿಂದ ಎದೆಕೊಟ್ಟು ನಿಲ್ಲುವ ಛಲವನ್ನು ಅಳವಡಿಸಿಕೊಂಡವರು. ಹೀಗೆ ತಮ್ಮ ಬದುಕಿನ ಎಲ್ಲಾ ಅನುಭವಗಳನ್ನು ಹಾಡು, ಗಾದೆ, ಒಗಟು, ಒಡಪು, ಕಥೆ, ನಾಟಕ, ಕಥನ ಕಾವ್ಯಗಳಲ್ಲಿ ಅಭಿವ್ಯಕ್ತಿಗೊಳಿಸುವುದನ್ನು ಕಾಣುತ್ತೇವೆ. ಈ ಎಲ್ಲಾ ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಕಥನ ಕಾವ್ಯಗಳು ಜನಪದರ ಜೀವನದ ನೈಜ ಚಿತ್ರಣವನ್ನು ಸಮಗ್ರವಾಗಿ ಕಟ್ಟಿಕೊಡುವಲ್ಲಿ ಪ್ರಸ್ತುತ ವಿಹಿತವೆನಿಸುತ್ತದೆ. "ಜನಪದ ಸಾಹಿತ್ಯದ ಸಣ್ಣ ಪ್ರಕಾರಗಳಾದ ಗಾದೆ, ಒಗಟು, ಒಡುಪುಗಳಲ್ಲಿ ತೀರಾ ವಿರಳವಾಗಿ ಕಾಣುತ್ತೇವೆ. ಪ್ರಸ್ತುತ ಹೆಚ್ಚು ಹತ್ತಿರವೆನಿಸುವ ಸಾಮಾಜಿಕ ವಸ್ತು–ಸಮಸ್ಯೆಗಳುಳ್ಳ ಕಥನಕಾವ್ಯಗಳಲ್ಲಿ ಮತ್ತು ಬಯಲಾಟದ ಕಥೆಗಳಲ್ಲಿ ಅತ್ಯಂತ ದಟ್ಟವಾಗಿ ಈ ಜೀವನಮೌಲ್ಯಗಳ ಪ್ರತಿಪಾದನೆ ಕಂಡುಬರುತ್ತದೆ"[೧]ಎಂದು ವೀರಣ್ಣ ದಂಡಿಯವರು ಹೇಳಿದ್ದಾರೆ.ಉತ್ತರ ಕರ್ನಾಟಕದ ಜನಪದ ಸಾಹಿತ್ಯದಲ್ಲಿ ಕಡ್ಲಿಮಟ್ಟಿ ಕಾಶಿಬಾಯಿ ಕಥನ ಕಾವ್ಯ ಆದರ್ಶವಾದದ್ದು. ಇದು ಕೇವಲ ಕಥೆಯಾಗಿ ಉಳಿಯದೆ ಭಾರತೀಯ ಸಂಸ್ಕೃತಿಯ ಕೈಗನ್ನಡಿಯಾಗಿದೆ. ಇದರಲ್ಲಿ ಪಾತಿವ್ರತ್ಯ, ಪತಿಭಕ್ತಿ, ಪುತ್ರ ವಾತ್ಸಲ್ಯ, ನೈತಿಕಪ್ರಜ್ಞೆ, ತ್ಯಾಗ, ಬಲಿದಾನ, ಸಮಾಜದಹಿತ ಹೀಗೆ ಹಲವು ಸಾಹಿತ್ಯದ ಮೌಲ್ಯಗಳಿಗೆ ತಾತ್ವಿಕ ನೈಜವನ್ನು ತಿಳಿಸುವ ಕಥನ ಕಾವ್ಯವಾಗಿದೆ. ಜನಪದ ಸಾಹಿತ್ಯದ ಇತರೆ ಪ್ರಕಾರಗಳಲ್ಲಿ ಸಮುದಾಯ ಪರವಾದ ಮೌಲ್ಯಕ್ಕಿಂತ ಹೆಚ್ಚಾಗಿ ಹವ್ಯಾಸದ ಅಂಶಗಳು ಕಂಡುಬರುವವು. ಆದರೆ ಕಥನ ಕಾವ್ಯಗಳು ಮಾತ್ರ ಜನರ ಜೀವನದ ಜೊತೆ ಜೊತೆಗೆಹುಟ್ಟಿದವು. ಅವರ ನೋವು–ನಲಿವು,ಜೀವನಕ್ರಮ, ಸತ್ಯಪರತೆ, ದೈವಭಕ್ತಿ ಹೀಗೆ ಹಲವು ಮೌಲ್ಯಗಳನ್ನುಮುಂದಿನ ಪೀಳಿಗೆಗೆ ಜನಪದರು ಬಳುವಳಿಯಾಗಿ ನೀಡಿದ್ದಾರೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಪ್ರೊ. ಎಸ್.ಎಂ ಗಂಗಾಧರಯ್ಯ ಮಾರ್ಗದರ್ಶಕರು ಪ್ರಾಧ್ಯಾಪಕರು ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

How to cite this article:
ಪ್ರೊ. ಎಸ್.ಎಂ ಗಂಗಾಧರಯ್ಯ ಆರ್. ಎಚ್. ಬಿ. ರಾಘವೇಂದ್ರ .*(2026)*ಕಡ್ಲಿಮಟ್ಟಿ ಕಾಶಿಬಾಯಿ : ಮೌಲ್ಯ ಮತ್ತು ವಾತ್ಸಲ್ಯ *Journal of Research and Development, 18(4(II)), 117–120. https://doi.org/10.5281/zenodo.19396785*

Quick Response Code:

Website:
https://jrdrvb.org/

DOI:
10.5281/zenodo.19396785

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಪ್ರಸ್ತುತ ಕಡ್ಲಿಮಟ್ಟಿ ಕಾಶಿಬಾಯಿ ಕಥೆಯು ಇದಕ್ಕೆ ಉತ್ತಮ ನಿದರ್ಶನ. ಇದುಕಾಲ್ಪನಿಕ ಕಥೆಯಾಗಿರದೆ ನೈಜಘಟನೆ ಆಧಾರಿತ ಕಥೆ ಎಂಬುವುದು ಇದರ ಪ್ರಸಿದ್ಧಿಗೆ ಕಾರಣ.ಕಾಶಿಬಾಯಿ ಮದುವೆಯಾಗಿ ಗಂಡನ ಜೊತೆ ಸುಖದಿಂದ ಸಂಸಾರ ನಡೆಸುತ್ತಿರುತ್ತಾಳೆ.ಕಾಲ ಕಳೆದಂತೆ ಕಾಶಿಬಾಯಿ ತುಂಬು ಗರ್ಭಿಣಿಯಾಗಿ ಮುದ್ದಾದ ಗಂಡು ಮಗುವಿಗೆ ಜನ್ಮ ನೀಡುವಳು.ಸಂಪ್ರದಾಯದಂತೆ ಚೊಚ್ಚಲ ಹೆರಿಗೆ ತವರು ಮನೆಯಲ್ಲಿ ಆಗುವುದು.ಮಗುವಿನೊಂದಿಗೆ ತವರು ಮನೆಯಲ್ಲಿ ಕಾಶಿಬಾಯಿ ಸಂತೋಷದ ಸಮಯ ಕಳೆಯುತ್ತಿರುವಾಗ, ಕಾಶಿಬಾಯಿಯ ಗಂಡನಾದ ಬಾಬುರಾಯತನ್ನ ತಾಯಿಯ ಅಣತಿಯಂತೆ ಹೆಂಡತಿಯ ಕರೆಯಲು ಬರುವನು.ಮನೆಗೆ ಬಂದ ಗಂಡನಿಗೆ ಕಾಶಿಬಾಯಿ ಮತ್ತು ಅತ್ತೆ, ಮಾವ ಕಾಲಿಗೆ ಬಿಸಿ ನೀರು ಕೊಟ್ಟು ಸತ್ಕರಿಸುವವರು. ಊಟ ಉಪಚಾರದ ನಂತರ ತನ್ನ ಮಡದಿ ಮಗುವನ್ನು ಊರಿಗೆ ಕರೆದುಕೊಂಡು ಹೋಗಲು ಬಂದಿರುವೆ ಕಳಿಸಿಕೊಡಿ ಎಂದು ಅತ್ತೆ ಮಾವನನ್ನು ಕೇಳಿದಾಗ ಅದಕ್ಕೆ ಅವರು ಇಂತಹ ರಣಬಿಸಿನಲ್ಲಿ ಕಳಿಸುವುದಿಲ್ಲ, ಮಗಳು ಇನ್ನೂ ಚೊಚ್ಚಲ ಬಾಣಂತಿ, ಮೊಮ್ಮಗ, ಎಳೆಕೂಸು, ಎನ್ನುತ್ತಾ ಮಗಳಿಗೆ ತವರು ಮನೆಯಿಂದ ಇನ್ನು ಸೀರೆ, ಕುಬಸ ಮಾಡಿಲ್ಲ, ಮಗುವಿಗೆ ಕಾಲ್ಗಡ ತಂದಿಲ್ಲ ಎಂದು ಹೇಳಿದಾಗ ಅಳಿಯ ಕೋಪಗೊಂಡು ಏನನ್ನು ಉತ್ತರಿಸದೆ ಮಗುವನ್ನು ಅಪ್ಪಿಕೊಂಡು ಮುದ್ದಾಡಿ ಹೆಂಡತಿ ಕೈಯಲ್ಲಿ ಮಗುವನ್ನು ಕೊಟ್ಟು ಜೋಪಾನವಾಗಿ ನೋಡಿಕೊ ಎಂದು ಹೇಳಿ ತನ್ನ ಊರಿಗೆ ಹೊರಟನು.

ಕಾಶಿಬಾಯಿ ಗಂಡ ಹೊದ ತಕ್ಷಣವೇ ಅವಳ ಮನಸ್ಸೇತವರು ಮನೆಯಲ್ಲಿ ನಿಲ್ಲುವುದಿಲ್ಲ. ತಕ್ಷಣ ತಂದೆ ತಾಯಿ ಎಷ್ಟು ಹೇಳಿದರು ಕೇಳದೆ ತಾನು ಹೋಗಬೇಕು ಎಂದು ನಿರ್ಧರಿಸಿ, ಸುಡುವ ರಣಬಿಸಿಲೆನ್ನದೆ ಊಟವನ್ನು ಮಾಡದೇ ಬರಿಗಾಲಿನಲ್ಲೆ ರೈಲ್ವೆ ಸ್ಟೇಷನ್ಗೆ ಹೊರಟು ಬಂದಾಗ ಅಷ್ಟೊತ್ತಿಗೆ ಗಂಡ ರೈಲನ್ನು ಹತ್ತಿ ಹೋಗಿರುತ್ತಾನೆ. ಆದ್ದರಿಂದ ಕಾಶಿಬಾಯಿ ಆ ಸಮಯದಲ್ಲಿ ಇಳಿಸಂಜೆ ಹೊತ್ತು ಸುತ್ತ ಒಂದು ನರಪ್ರಾಣಿಯು ಕಾಣಿಸುವುದಿಲ್ಲ. ಅಲ್ಲಿದ್ದ ಟಿಕೀಟ್ ಮಾಸ್ತರ್ನಿಗೆ ತವರು ಮನೆಯಲ್ಲಿ ನಡೆದದ್ದೆಲ್ಲ ಕಾಶಿಬಾಯಿ ಹೇಳಿದಳು. ಎಲ್ಲಾ ಸುದ್ದಿ ಕೇಳಿ ಇಂದು ರಾತ್ರಿ ಇಲ್ಲೇ ಮಲಗು ಎಂದು ತನ್ನ ಕೋಣೆಯಲ್ಲಿ ಆಶ್ರಯ ನೀಡುತ್ತಾನೆ. ಟಿಕೆಟ್ ಕೊಡುವ ಸ್ಥಳಕ್ಕೆ ಮರಳಿ ಟಿಕೀಟ್ ಮಾಸ್ತರ್ ಹೋಗುವನು.ತನ್ನ ಎಲ್ಲಾ ಕೆಲಸವನ್ನು ಮುಗಿಸಿಕೊಂಡ ಮಾಸ್ತರ್ನು ಮನದಲ್ಲೆ ಕಾಶಿಬಾಯಿಯ ಸೌಂದರ್ಯ, ರೂಪ–ಲಾವಣ್ಯವನ್ನು ಸ್ಮರಿಸಿಕೊಂಡು,ಅವಳನ್ನು ಅನುಭವಿಸಲೇಬೇಕು ಎಂದು ಮನದಲ್ಲೇ ಆಸೆ ಪಡುವನು, ಅದೇ ಸಮಯಕ್ಕೆ ಅವಳ ಕೋಣೆಗೆ ಹೆಜ್ಜೆ ಇಡುತ್ತಾ ಬಾಗಿಲು ತಟ್ಟುವನು. ಯಾರು ಇಷ್ಟೊತ್ತಿಗೆ ಎಂದು ಕಾಶಿಬಾಯಿಕದ ತೆಗೆದಾಗ ಅವಳನ್ನೆ ನೋಡುತ್ತಾಇದೆಸರಿಯಾದ ಸಮಯ ಎಂದುಕೊಂಡು ತನ್ನ ಆಸೆಯನ್ನು ಹೇಳಿ ತನ್ನವಳನ್ನಾಗಿಸಿಕೊಳ್ಳಲು ಪ್ರಯತ್ನಿಸುವನು.ಆದರೆ ಯಾವುದಕ್ಕೂ ಒಪ್ಪದ ಕಾಶಿಬಾಯಿ ಉಪಾಯದಿಂದ ಕೋಣೆಯಿಂದ ಹೊರಗೆ ಬರುತ್ತಾಳೆ. ಅದಕ್ಕೆ ಕಾಮಾತುರನಾದ ಮಾಸ್ತರನ್ನು ಕಾಶಿಬಾಯಿ ನೀನು ಬರದಿದ್ದರೆ ನೋಡು ನಿನ್ನ ಮಗುವನ್ನು ಕೊಲ್ಲುವುದಾಗಿ ಎದುರಿಸಿದಾಗ ತನ್ನ ಶೀಲ, ಪಾತಿವ್ರತ್ಯವನ್ನು ಉಳಿಸಿಕೊಳ್ಳಲು ನಾನು ಯಾವುದೇ ತ್ಯಾಗಕ್ಕೂ ಸಿದ್ಧ ಎಂದು ಕಾಶಿಬಾಯಿ ನಿರ್ಧರಿಸಿದಳು.ಕಾಮದಾಂಧತೆಯಲ್ಲಿದ್ದ ಸ್ಟೇಷನ್ ಮಾಸ್ತರ್ ಮಗುವಿನ ದೇಹದ ಭಾಗವನ್ನು ತುಂಡು ತುಂಡಾಗಿ ಕಿತ್ತೊಗೆದು ಮಗುವನ್ನು ಕೊಲ್ಲುವಾಗಮಗುವನ್ನು ಕೊಲ್ಲಬೇಡ ಅಣ್ಣ ನಿನ್ನ ದಮ್ಮಯ್ಯ ಎಂದು ಗೋಗರೆದು ಬೇಡಿಕೊಂಡರು ಸ್ಟೇಷನ್ ಮಾಸ್ತರು ಕರುಣೆ ಇಲ್ಲದೆ ಮಗುವನ್ನುಕೊಲ್ಲುವನು.ತನ್ನ ಶೀಲ ಪಾತಿವೃತ್ಯಕ್ಕಾಗಿ ಮಗುವನ್ನೆ ತ್ಯಾಗ ಮಾಡಿದ ಕಾಶಿಬಾಯಿಯ ಕಥನ ಕಾವ್ಯ ಇದು.

ಕಾಶಿಬಾಯಿ ತನ್ನ ಕರುಳಬಳ್ಳಿಯನ್ನು ಕಳೆದುಕೊಳ್ಳುವಾಗ ಆಗುವ ದುಃಖ ಅಷ್ಟಿಸ್ಟಲ್ಲ ಅದನ್ನು ಊಹಿಸಿಕೊಳ್ಳಲು ಅಸಾಧ್ಯ.ಸಾಮಾನ್ಯ ಹೆಣ್ಣಿಗೆ ಸಹಿಸಿಕೊಳ್ಳಲು ಆಗದು.ಕರುಣೆ ಇಲ್ಲದ ಕಟುಕ ಸ್ಟೇಷನ್ ಮಾಸ್ತರ್ಮಗುವಿನ ಒಂದೊಂದು ದೇಹದ ಭಾಗಗಳನ್ನು ತುಂಡು ತುಂಡಾಗಿ ಕಿತ್ತೊಗೆಯುವಾಗ ಮಗುವಿಗಾಗಿ ಕಾಶಿಬಾಯಿಬೇಡಿಕೊಳ್ಳುವ ದೃಶ್ಯವಂತು ಮನ ಕಲಕುವುದು. ಅಣ್ಣ ನನ್ನ ಕೂಸನ್ನು ಕೊಲ್ಲಬೇಡ ನಿನ್ನ ಕೈ ಮುಗಿತೀನಿ ಎಂದು ನಿಸ್ಸಾಹಯಕಳಾಗಿ ಸೆರಗೊಡ್ಡಿ ಬೇಡಿಕೊಂಡರು ಆ ಕಟುಕ ಸ್ಟೇಷನ್ ಮಾಸ್ತರಿಗೆ ಕರುಣೆ ಬರುವುದಿಲ್ಲ.ಮಗುವಿನ ಕೈಬೆರಳು, ಕೈಗಳನ್ನು, ತೊಡೆ, ರುಂಡ ಹೀಗೆ ದೇಹದ ಒಂದೊಂದು ಅಂಗವನ್ನು ಕಿಟಕಿಯಿಂದ ಬಿಸಾಡುತ್ತಿರುವಾಗ ಅಯ್ಯೋ ದೇವರೇ ನನಗೆ ಎಂತಹ ಪರಿಸ್ಥಿತಿ ಬಂತಪ್ಪ! ಎಂದು ಎದೆ ಬಡೆದುಕೊಳ್ಳುತ್ತಾ, ಮಗುವಿನ ಒಂದೊಂದು ದೇಹದ ಭಾಗವನ್ನು ಆಯ್ದುಕೊಳ್ಳುತ್ತಾ ಕಂದ ನಾನೇ ನಿನ್ನ ಕೊಂದ ಪಾಪಿಯಾದೆ ಅಥವಾ ನಿನ್ನ ತಾಯಿಯ ಶೀಲ ಪಾತಿವ್ರತ್ಯ ಉಳಿಸಲು ನೀನೆ ಬಲಿಯಾದೆಯಾ?ಎಂದು ದುಃಖಿಸುವ ದೃಶ್ಯ ತಾಯಿಯ ಕರುಳಿಗೆ ನರಕವೆನಿಸುವುದು. ಒಂದು ಕಡೆ ಪಾತಿವ್ರತ್ಯದ ಪರೀಕ್ಷೆ, ಇನ್ನೊಂದು ಕಡೆ ತಾಯ್ತನದ ಕೂಗು,ಪಾತಿವ್ರತ್ಯ, ಶೀಲ ಗಟ್ಟಿಯಾಗಿದ್ದರೆಮುಂದೆ ಹತ್ತಾರು ಮಕ್ಕಳನ್ನ ಪಡಿತೀನಿ ಎಂದು ನಿರ್ಧರಿಸಿ ತನ್ನ ಮಗುವನ್ನೆ ತ್ಯಾಗ ಮಾಡಿದಳು.

"ಮಾಸ್ತರಗ ಕರುಣಬರಲಿಲ್ಲ ಕಣಕದಂಥ ಪಿಂಡ
ಕಾಲಾಗ ಹಿಡಕೊಂಡ
ಹರ್ತುಳ್ಳ ಚಾಕುದಿಂದ ಕೂಸಿನ ಹಸ್ತ ಕೊಯ್ಯ ಕೊಂಡ
ಮತ್ತ ಮಾಸ್ತರ ಮಾಡ್ಯಾನ ಕೂಸಿನ ಕೈಕಾಲ ತುಂಡ ತುಂಡು
ಕೊಯ್ದಿಟ್ಟ ರುಂಡ
ಕಿಡಿಕ್ಯಾಗ ತೋರಿಸಿ ಒಗಿತಾನ ಒಂದೊಂದು ತುಂಡು"[೨]

ಭಾರತ ಸ್ವಾತಂತ್ರವಾದ ನಂತರ ವಸಾಹತ್ತೋತರ ಯುಗದ ಕಲ್ಪನೆ ಚಿಂತನೆ, ಸ್ವಾತಂತ್ರ್ಯ ಪ್ರಜ್ಞೆ, ಸ್ವಾಭಿಮಾನ, ದೇಶಾಭಿಮಾನ, ಶೌರ್ಯ, ತ್ಯಾಗ, ನ್ಯಾಯ, ಸತ್ಯಪರತೆ, ಸ್ತ್ರೀಸಮಾನತೆ ಮೌಲ್ಯಗಳು ನಮ್ಮ ದೇಶದ ಸಾಹಿತ್ಯದಲ್ಲಿ ನಿರೂಪಿತವಾದವು.ಅದಕ್ಕೆ ಜನಪದ ಸಾಹಿತ್ಯವು ಮುಖ್ಯ ವಾಹಿನಿಯಾಗಿದೆ.ಅದೇ ರೀತಿ ಜನಪದರುತಮ್ಮ ಜೀವನದಲ್ಲಿ ಆದರ್ಶದ ಮೌಲ್ಯಗಳನ್ನು ಅಳವಡಿಸಿಕೊಂಡಿದ್ದರು.ಕಥೆ, ನಾಟಕ, ಲಾವಣಿ, ಗೀಗಿ ಪದ, ಕಥನ ಕಾವ್ಯಜನಪದರ ಜೀವನದ ಜೊತೆ ಜೊತೆಗೆ ಹುಟ್ಟಿಕೊಂಡವು.ಅಂತಹ ಮುಖ್ಯ ಕಥನ ಕಾವ್ಯಗಳಲ್ಲಿ ಕಡ್ಲಿಮಟ್ಟಿ ಕಾಶಿಬಾಯಿ ಕಥನ ಕಾವ್ಯ ಮಹತ್ವದಾಗಿದೆ.ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರ ಸ್ವಾಭಿಮಾನ, ಆತ್ಮಾಭಿಮಾನ, ನ್ಯಾಯ, ನೈತಿಕ ಪ್ರಜ್ಞೆ, ಸಂಸ್ಕೃತಿ, ಸಂಪ್ರದಾಯ, ದೇಶಾಭಿಮಾನ ಮುಂತಾದ ಪರಿಕಲ್ಪನೆಗಳು ದೇಶದ ಜನರಲ್ಲಿ ಚಿಗರೊಡೆದವು, ದೇಶದ ಜನರು ಈ ಎಲ್ಲಾ ಮೌಲ್ಯಗಳನ್ನು ಅಳವಡಿಸಿಕೊಂಡರು.ಇದರಲ್ಲಿ ಜನಪದ ಸಾಹಿತ್ಯಕ್ಕು ಅಷ್ಟೇಮುಖ್ಯ ಸ್ಥಾನವಿದೆ.ಉದಾಹರಣೆ ಹಲಗಲಿ ಬೇಡರ, ಸಂಗೋಳ್ಳಿ ರಾಯಣ್ಣ, ಸಿಂಧೂರ ಲಕ್ಷ್ಮಣ, ಒನಕೆ ಓಬವ್ವ, ಕಿತ್ತೂರು ರಾಣಿ ಚನ್ನಮ್ಮ ಹೀಗೆ ಜನಪದರು ಲಾವಣಿ, ಕಥನ ಕಾವ್ಯಗಳ ಮೂಲಕ ಮಹನೀಯರ ಆದರ್ಶ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ.

ಹೀಗೆ ಜನಪದರಲ್ಲಿನ ಜೀವನ ಮೌಲ್ಯಗಳ ಬಗೆಗೆ ಬಹಳಷ್ಟು ನಿದರ್ಶನಗಳನ್ನು ಕಾಣುತ್ತೇವೆ. ಅದರಲ್ಲಿ ಕಡ್ಲಿಮಟ್ಟಿ ಕಾಶಿಬಾಯಿ ಕಥನ ಕಾವ್ಯ ಮುನ್ನೆಲೆಗೆ ಬರುತ್ತದೆ.ತನ್ನ ಪಾತಿವ್ರತ್ಯ, ಶೀಲವನ್ನು ಕಾಪಾಡಿಕೊಳ್ಳಲು ತನ್ನ ಕರುಳ ಬಳ್ಳಿಯನ್ನೇ ತ್ಯಾಗ ಮಾಡಿದ ಕಥೆ.ಇದರ ಕಾಲಘಟ್ಟವನ್ನು ಗಮನಿಸಿದಾಗಕ್ಯಾತನಹಳ್ಳಿ ರಾಮಣ್ಣ'ನವರು "ಕಡ್ಲಿಮಟ್ಟಿ ಕಾಶೀಬಾಯಿ' ಪದ ತುಂಬ ಪ್ರಸಿದ್ಧವೆಂದೂ, ಅದು ನಡೆದ ಕಥೆಯೆಂದೂ, ಬಹುಶಃ ೧೯೦೫ರಲ್ಲಿ ನಡೆದಿರಬೇಕೆಂದೂ ಎಂದು ಅಭಿಪ್ರಾಯ ಪಟ್ಟಿದ್ದಾರೆ."[೩]ಇದು ೨೦ನೇ ಶತಮಾನದ ಮಧ್ಯಭಾಗದಲ್ಲಿ ನಡೆದಿರಬಹುದಾದ ಈ ಘಟನೆಯೂ ಸಾಮಾಜಿಕ, ಧಾರ್ಮಿಕ, ನೈತಿಕ ಮೌಲ್ಯಗಳ ಸ್ಥಿತಿಗತಿಗಳನ್ನು ಪ್ರತಿಬಿಂಬಿಸುತ್ತದೆ.೧೯೮೧ರಲ್ಲಿ ಕರ್ನಾಟಕದ ಪ್ರಪ್ರಥಮ ಲೈಸೆನ್ಸ್ ಪಡೆದ ಕ್ಯಾಸೆಟ್ ತಯಾರಿಕ 'ವಿಜಯ' ಸಂಸ್ಥೆಯಲ್ಲಿ ಕಾಶಿಬಾಯಿ ಕಥೆಯು ಕ್ಯಾಸೆಟ್ ಮೂಲಕ ಕನ್ನಡನಾಡಿನ ಜನರ ಮನೆಮನಕ್ಕೂ ಮುಟ್ಟುವಂತೆ ಮಾಡಿ ಪ್ರಸಿದ್ಧಿಪಡೆದುಕೊಂಡಿತು. ಅರವತ್ತರ ದಶಕದ ಕಾಲಘಟ್ಟದಲ್ಲಿ ಸಾಮಾಜಿಕ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಕಟ್ಟುಪಾಡುಗಳು, ಧಾರ್ಮಿಕ ನಿಬಂಧನೆಗಳು, ಸಂಪ್ರದಾಯ, ಆಚಾರ–ವಿಚಾರ ಹೀಗೆ ಹೆಚ್ಚು ನಂಬಿಕೆಯಿಂದ ಅನುಸರಿಸಿದಕಾಲ. ಹೆಣ್ಣು ಸಮಾಜ ಒಪ್ಪಿತ ಎಲ್ಲಾ ನಿಯಮಗಳಿಗೆ ಬದ್ಧಳಾಗಿ ಅನುಸರಿಸುತ್ತಿದ್ದಳು ಎನುವುದಕ್ಕಿಂತ ಅನುಸರಿಸಲೇಬೇಕಾಗಿತ್ತು. ಹಾಗೆ ನೋಡಿದರೆ ಹುಟ್ಟಿದ ಮನೆಯಲ್ಲಿ ತಂದೆ ತಾಯಿ ಆಶ್ರಯ, ನಂತರ ಪತಿಯ ಆಶ್ರಯದಿಂದ ಪತಿಯೇ ಪರದೈವವೆಂದು ಗಂಡನು ಎಷ್ಟೇ ಕಷ್ಟ ಕೊಟ್ಟರುಸಾವಿನ ಕೊನೆವರೆಗು ಅವನ ನೆರಳಲ್ಲೇ ಬದುಕಬೇಕಾಗಿತ್ತು. ಭಾರತಕ್ಕೆ ಸ್ವಾತಂತ್ರ ದೊರೆತ ನಂತರ ಹೊಸ ಚಿಂತನೆಗಳು ಮೂಡಿದ ಮೇಲೆ ಮಹಿಳೆಯರ ಜೀವನದಲ್ಲಿಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ರಂಗದಲ್ಲಿ ತುಂಬಾ ಬದಲಾವಣೆಯಾದವು.೨೦ನೇ ಶತಮಾನದ ಕಾಲಘಟ್ಟದಲ್ಲಿ ಭಾರತದಲ್ಲಿ ವೈಚಾರಿಕ ಪ್ರಜ್ಞೆಯು ಕೂಗು ಕೇಳಿಬಂತು, ಆಗ ಸಾಮಾಜಿಕ ನ್ಯಾಯ, ಸ್ತ್ರೀ ಶಿಕ್ಷಣ, ಲಿಂಗ ಸಮಾನತೆ, ಸ್ವಾವಲಂಬಿಯ ಬದುಕು, ಸ್ವಾಭಿಮಾನದ ಕಿಚ್ಚು, ಧಾರ್ಮಿಕ ಸಮಾನತೆ, ನೈತಿಕಪ್ರಜ್ಞೆ, ಮಹಿಳೆಯು ತನ್ನ ಬದುಕನ್ನು ತಾನೇ ಕಟ್ಟಿಕೊಳ್ಳಲು ಶಕ್ತಳಾದಳು. ಅದೇ ರೀತಿ ಹಲವಾರು ವೀರ ಮಹಿಳೆಯರ ತ್ಯಾಗ, ಶೌರ್ಯ, ಸತ್ಯನಿಷ್ಠೆ, ಸಚ್ಚಾರಿತ್ರ್ಯದೇಶ ಪ್ರೇಮ, ನಾಡು ನುಡಿಯ ಬಗ್ಗೆ ಪ್ರಜ್ಞೆ ಹೆಚ್ಚಾಗಿತ್ತು, ಸ್ತ್ರೀಯರಿಗೆ ಶಿಕ್ಷಣ, ಸಮಾನತೆ.ಅವರು ಪುರುಷರಂತೆ ಎಲ್ಲದರಲ್ಲಿಯು ಸಮಾನರು ಎಂಬ ಧ್ವನಿ ಮುಳುಗಿತು. ಆದರೂ ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಚೀನ ಪರಂಪರೆಗೆ, ಪುರಾತನ ಮೌಲ್ಯಗಳಿಗೆ ಹೆಚ್ಚಿನ ಮಾನ್ಯತೆಯಿತ್ತು. ಹಾಗೆಯೆ ಭಾರತೀಯ ಪರಂಪರೆಯಲ್ಲಿ ಶೀಲ ಎಂಬ ಮೌಲ್ಯಕ್ಕೆ ನಮ್ಮ ದೇಶದ ಜನರು, ಜನಪದರುಅನಾದಿ ಕಾಲದಿಂದಲು ದೈವತ್ವದ ರೀತಿಯಲ್ಲಿ ಭಯ–ಭಕ್ತಿಯಿಂದ ಗೌರವ ನೀಡಿ ಅನುಸರಿಸಿದವರು. ಹೆಣ್ಣು ಶೀಲವಂತೆಯಾಗಿದ್ದರೆ ಮಾತ್ರ ಪೂಜ್ಯಭಾವನೆಯಿಂದ ನೋಡುತ್ತಿದ್ದರು. ಆದರೆ ಶೀಲ ಕಳೆದುಕೊಂಡಂತ ಹೆಣ್ಣಿನ ಸ್ಥಿತಿ ಪ್ರಾಣಿಗಿಂತಲೂ ಕೀಳಾಗಿತ್ತು.ಗಂಡ ಮತ್ತು ಮಗನಿಂದ ಹಿಡಿದು ಕುಟುಂಬದಎಲ್ಲಾ ಸದಸ್ಯರು ತುಚ್ಛವಾಗಿ ನೋಡುತ್ತಿದ್ದರು.ಉದಾಹರಣೆಗೆ ಸೀತೆಯ ಅಗ್ನಿ ಪ್ರವೇಶ, ಅಹಲ್ಯೆಗೆ ಶಾಪ, ಜುಂಜಪ್ಪ ಮಹಾಕಾವ್ಯದಲ್ಲಿ "ಜುಂಜಪ್ಪನು ತನ್ನ ತಾಯಿಯಾದ ಸಿನ್ನಮ್ಮನ ಶೀಲ ಶಂಕಿಸಿ ಕಠೋರ ಪರೀಕ್ಷೆಗೆ ಒಡ್ಡುವನು."[೪]ಹೀಗೆ ತಮ್ಮ ಪಾತಿವ್ರತ್ಯ ಶಕ್ತಿಯನ್ನು ತೋರಿಸಿದ ಹೆಣ್ಣನ್ನು ದೇವಸ್ಥಾನ ಗುಡಿ ಗುಂಡಾರ ನಿರ್ಮಿಸಿ, ಮೆರವಣಿಗೆ ಮಾಡಿ ಸೂರ್ಯ ಚಂದ್ರ ಇರುವರೆಗು ದೇವರಂತೆ ಪೂಜೆ ಮಾಡುತ್ತಾ ಬಂದಿದ್ದಾರೆ.ಪಾತಿವ್ರತ್ಯಕ್ಕೆ ಹೆಸರಾದ ಅರುಂಧತಿ, ಅನುಸೂಯೆ, ಸತಿಸಾವಿತ್ರಿ, ಶೀಲ ಪಾತಿವ್ರತ್ಯದ ಮಹತ್ವವನ್ನು ಜಗತ್ತಿಗೆ ಸಾರಿದ್ದಾರೆ.ಅದೇ ರೀತಿ ಜನಪದರು ಕೂಡ ಶೀಲ ಮತ್ತು ಪಾತಿವ್ರತ್ಯ ಮೌಲ್ಯಗಳಿಗೆ ಕೊಟ್ಟ ಮಹತ್ವವನ್ನು ಬೇರೆ ಯಾವುದಕ್ಕೂ ನೀಡಿಲ್ಲ.ಶೀಲ ಪಾತಿವ್ರತ್ಯ ವಿಷಯ ಬಂದಾಗ ಜನಪದರು ಪ್ರಾಣವನ್ನೆ ಪಣಕ್ಕಿಟ್ಟು ಕಾಪಾಡಿಕೊಂಡು ಬಂದಿದ್ದಾರೆ.ಅದಕ್ಕೆ ಕಡ್ಲಿಮಟ್ಟಿ ಕಾಶಿಬಾಯಿ ಕಥೆಸಾಕ್ಷಿಯಾಗಿದೆ.

"ನನ್ನ ಮುತ್ತೈದೆತನ ತಣ್ಣಗ ಇದ್ದರೆ
ಇಂಥ ಯೇಸು ಪುತ್ರ ಪಡೆದನು"[೫]

ಎಂದು ಹೇಳುವಾಗ ಕಾಶಿಬಾಯಿಯು ಕರುಳ ಕೂಸಿನ ಜೀವಕ್ಕಿಂತ ತನ್ನ ಶೀಲ, ಪಾತಿವ್ರತ್ಯವೆ ಎಲ್ಲಾ ಸಂಪತ್ತಿಗಿಂತ ಹೆಚ್ಚು ಎಂದು ಮಗನನ್ನೆ ತ್ಯಾಗ ಮಾಡುವಳು.ಆದ್ದರಿಂದ ಜನಪದರು ಶೀಲ, ಪಾತಿವ್ರತ್ಯ ಮೌಲ್ಯಗಳೇ ತಮ್ಮ ಜೀವನದ ಆದರ್ಶ ಎಂದು ಬದುಕಿದರು.ಪಾತಿವ್ರತ್ಯವು ವಿಭಿನ್ನ ರೀತಿಯಿಂದ ಕೂಡಿರುತ್ತದೆ.ಭಾರತೀಯ ಪರಂಪರೆಯಲ್ಲಿ ಸತಿಪತಿ ಒಂದಾಗಿ ಸುಖವಾಗಿ ಸಹಬಾಳ್ವೆಯಿಂದ ಬಾಳುವುದನ್ನು ಕಾಣುತ್ತೇವೆ. ಕಾಶಿಬಾಯಿಯು ಕಾಯಾ, ವಾಚಾ, ಮನಸಾ ತನ್ನ ಗಂಡನಿಗೆ ಮೀಸಲಾಗಿ ತನ್ನ ಶೀಲ ಉಳಿಸಿಕೊಳ್ಳಲು ದೃಢವಾದ ನಿರ್ಧಾರ ಮಾಡಿ ತನ್ನ ಕರುಳ ಬಳ್ಳಿಯನ್ನು ಅಸಾಹಯಕಳಾಗಿ ತ್ಯಾಗ ಮಾಡುವಳು. ಸ್ಟೇಶನ್ ಮಾಸ್ತರು ಮಗುವಿನ ದೇಹವನ್ನು ತುಂಡು ತುಂಡಾಗಿ ಕತ್ತರಿಸಿ ಒಗೆಯುವಾಗ ಕಾಶಿಬಾಯಿ ಮಗುವಿನ ಕೈಯನ್ನು, ಕಾಲು, ತೊಡೆ ರುಂಡ ನೋಡುತ್ತಾ ಮಗನೇ ನಿನ್ನ ತಾಯಿಯ ಶೀಲ, ಪಾತಿವ್ರತ್ಯ, ಉಳಿಸಲು ನೀನೆ ಬಲಿಯಾದೆಯಲ್ಲಾ ಎಂದು ಅಳುತ್ತಾ ಸೀರೆಯಲ್ಲಿ ರಕ್ತದ ಮಡುವಿನಲ್ಲಿ ಮಗುವಿನ ದೇಹದ ಭಾಗಗಳನ್ನ ಹಾಕಿಕೊಳ್ಳುವ ದೃಶ್ಯ ಜಗತ್ತಿನ ಯಾವುದೇ ದುಃಖ, ನೋವು ಕಾಶಿಬಾಯಿಯ ದುಃಖಕ್ಕೆ ಸಮವಾಗಲಾರದು.

"ಕಾಶಿಬಾಯಿ ಕಂದನ ಕಮಲ ತುಣಕ ಹಾಯ್ಕೊಂಡು
ಉಡ್ಯಾಗ ಕಟಿಕೊಂಡು
ಪರಮಾತ್ಮಗಂತಾಳೊ ನೀನೆ ನೋಡೊ ಕಣ್ಣಂಡಾ"[೬]

ಹೀಗೆ ಕಾಶಿಬಾಯಿ ಪತಿಧರ್ಮಪಾಲನೆಯಿಂದ ಹೆಣ್ಣು ಕುಲಕ್ಕೆ ಕಳಶಪ್ರಾಯಳಾಗಿದ್ದಾಳೆ.ಗಂಡ ತನ್ನ ಊರಿಗೆ ಹೋದ ತಕ್ಷಣವೇ ಪತಿಯೇ ಪರದೈವವೆಂದು ಒಂದು ಕ್ಷಣವೂ ನಿಲ್ಲದೆ ಪತಿಯ ಹಿಂದೆ ಹೋಗುವಳು.ಜನಪದರು ಕೂಡ ದೈವೀಭಾವದಿಂದ ಮನ್ನಣೆ ನೀಡಿ ಅನುಸರಿಸುತ್ತಿದ್ದರು. ಅದಕ್ಕೆ ಸಾಕ್ಷಿಯಾಗಿ ವೀರದಿಮ್ಮವ್ವ, ಗುಣಸಾಗರಿ, ಚದುರಂಗ ಮಹಾರಾಜ, ಸಿರಿದೇವಿ ಜನಪದ ಕಥನ ಕಾವ್ಯಗಳ ಜೊತೆಗೆ ಪುರಾಣ ಸ್ತ್ರೀಯರಾದ ಸೀತೆ,ಅನುಸೂಯ, ಅರುಂಧತಿ ಇಂಥ ತುಂಬಾ ಮಹನೀಯರು ಈ ನೆಲದಲ್ಲಿ ಹುಟ್ಟಿ ನುಡಿದಂತೆ ನಡೆದು ಪೂಜ್ಯನೀಯ ಸ್ಥಾನ ಪಡೆದಿದ್ದಾರೆ. ಅದೇ ಆದರ್ಶದ ದಾರಿಯಲ್ಲಿ ಕಾಶಿಬಾಯಿ ಸಾಗಿದ್ದಾಳೆ. ತನ್ನ ಶೀಲವನ್ನು ಕಾಪಾಡಿಕೊಳ್ಳಲು ಪಡುವ ಕಷ್ಟ, ಏನಾದರೂ ಸರಿಯೇ ನನ್ನ ಗರತಿತನಕ್ಕೆ ಕುಂದು ಬರದಂತೆ ನಡೆಯುತ್ತೇನೆ ಎಂಬ ಆತ್ಮಸ್ಥೈರ್ಯದಿಂದ ತನ್ನ ಹೆತ್ತ ಕರುಳನ್ನೇ ಸ್ಟೇಶನ್ ಮಾಸ್ತರ್ ಕೊಲ್ಲುವುದಾಗಿ ಹೆದರಿಸಿದಾಗ ಮಗುವಿನ ಸಲುವಾಗಿ ಅವನಲ್ಲಿ ಸೆರೆಗೊಡ್ಡಿ ಅಂಗಲಾಚಿ ಬೇಡಿಕೊಂಡರು ಆ ಕಟುಕನಿಗೆ ಕರುಣೆ ಬರೋದಿಲ್ಲ. ಎಷ್ಟಾದರೂ ಆ ಸಮಯದಲ್ಲಿ ಇರುವುದು ಅವಳೊಬ್ಬಳೇ ಒಂದು ಹೆಣ್ಣು ಬೇಡಿಕೊಳ್ಳುವುದು ಬಿಟ್ಟು ಮತ್ತೇನು ಮಾಡಲು ಸಾಧ್ಯ? ಆ ಸಮಯದಲ್ಲಿ ಅಸಹಾಯಕ ಅಬಲೆಯಾಗಿ ನಿಲ್ಲುವಳು.ಮನದೊಳಗೆ ಮಗುವನ್ನು ಪ್ರೀತಿ ವಾತ್ಸಲ್ಯ ಮಮತೆಯಿಂದ ಸ್ಮರಿಸುತ್ತಾ ತನ್ನ ಪ್ರಾಣವನ್ನಾದರು ಕೊಟ್ಟು ಮಗುವನ್ನು ಉಳಿಸಿಕೊಳ್ಳುವ ತುಡಿತ ಅವಳದು, ಆದರೆ ತನ್ನ ಶೀಲ ಪಾತಿವ್ರತ್ಯ ಕಳೆದುಕೊಂಡರೆ ನಾನು ಬದುಕಿದ್ದರೂ ಸತ್ತ ಹೆಣದಂತೆ ಎಂಬುವ ಪ್ರಜ್ಞೆಯು ಅವಳಲ್ಲಿ ದೃಡವಾಗಿ ನಿಲ್ಲುವಂತೆ ಮಾಡುವುದು. ಏಕೆಂದರೆ ಒಂದು ಹೆಣ್ಣಿಗೆ ತಂದೆ–ತಾಯಿಮಗು, ಆಸ್ತಿ,ಬೆಳ್ಳಿ ಬಂಗಾರ, ಎಲ್ಲಕ್ಕಿಂತ ಶೀಲ, ಪಾತಿವ್ರತ್ಯವೇ ನಿಜವಾದ ಆಭರಣವಾಗಿರುತ್ತದೆ. ಅದನ್ನೆ ಕಳೆದುಕೊಂಡರೆ ಅವಳಿಗೆ ಸಮಾಜದಲ್ಲಿ ಯಾವುದೇ ಬೆಲೆ ಇರುವುದಿಲ್ಲ. ವೈಯಕ್ತಿಕ ಮೌಲ್ಯಕ್ಕಿಂತ ಸಮಾಜ ನಿರ್ಮಿಸಿದ ಸಾಮಾಜಿಕ ಮೌಲ್ಯಗಳಿಗೆ ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ಹೆಚ್ಚಿನ ಮನ್ನಣೆ ಇತ್ತು "ಕಾಶಿಬಾಯಿ ಸಾಮಾಜಿಕ ಮೌಲ್ಯವಾದ ಪಾತಿವ್ರತ್ಯವನ್ನು ಮಾತ್ರ ಕಳೆದುಕೊಳ್ಳಲು ಆಕೆ ಬಯಸುವುದೇ ಇಲ್ಲ, ಅದನ್ನು ಕಳೆದುಕೊಂಡು ಆಕೆ ಸಮಾಜದಲ್ಲಿ ಬದುಕಲು ಸಾಧ್ಯವಿಲ್ಲ.ಇದು ಎಲ್ಲಾ ಹೆಣ್ಣು ಮಕ್ಕಳಿಗೆ ಸಮಾಜವೆ ವಿಧಿಸಿದ ನಿಯಮವಾಗಿ ತೋರುತ್ತದೆ. ಅಂದರೆ ಜೀವಕ್ಕಿಂತ ಪಾತಿವ್ರತ್ಯವೇ ಮುಖ್ಯ'ವೆಂಬ ಮಾತು ಸಹಜವಾಗಿಯೇ ಅದು ಸಮಾಜದ ನಿರ್ಣಯವೇ ಎನಿಸುತ್ತದೆ.[೭]ಎಂದು ವೀರಣ್ಣ ದಂಡಿ ಹೇಳಿದ್ದಾರೆ.

ಆದ್ದರಿಂದ ಶೀಲ ಕಳೆದುಕೊಂಡಂತಹ ಹೆಣ್ಣು, ಸತ್ತ ಶವಕ್ಕೆ ಸಮನಾಗಿ ಕಾಣುವರು.ಜನಪದರು ಇದಕ್ಕೆ ಹೊರತಾಗಿರಲಿಲ್ಲ ಅವರು ಸಮಾಜದ ಕಟ್ಟುಪಾಡುಗಳಿಗೆ ಬದ್ಧರಾಗಿದ್ದರು. ಅದರಂತೆ ಆ ಕಾಲಘಟ್ಟದ ಸ್ತ್ರೀಯರು ತಮ್ಮ ಪ್ರಾಣ ಹೋದರೆ ಹೊಗಲಿ ಮಾನವೇ ಮುಖ್ಯವೆಂದು ಮನಸ್ಸಿನಲ್ಲಿ ಅಚ್ಚಾಗಿಸಿಕೊಂಡಿದ್ದರು. ಇದನ್ನೆ ದೌರ್ಬಲ್ಯವಾಗಿಸಿಕೊಂಡು ಪುರುಷ ವರ್ಗ ನಾವು ಏನು ಮಾಡಿದರೂ ನಡೆಯುವುದು, ನಮ್ಮ ಆಸೆಗೆ ಹೆಣ್ಣು ಒಪ್ಪಲೇಬೇಕು ಇಲ್ಲವಾದರೆ ಅವಳುಸಮಾಜದಲ್ಲಿ ಬದುಕಲು ಸಾಧ್ಯವಿಲ್ಲ ಎಂಬ ಪುರುಷಹಂಕಾರದಿಂದ ಹೆಣ್ಣನ್ನು ದೈಹಿಕ, ಮಾನಸಿಕ, ಭಾವನಾತ್ಮಕವಾಗಿ ಶೋಷಣೆ ಮಾಡಿರುವುದನ್ನು ನಾವು ಪ್ರಾಚೀನ ಕಾಲದಿಂದಲು ನೋಡಿ ಕೇಳಿಕೊಂಡು ಬಂದಿದ್ದೇವೆ. ಉದಾ: ಇಂದ್ರನು ಅಹಲ್ಯೆಯನ್ನು ಮೋಸದಿಂದ ಸೇರಿದ್ದು, ರಾವಣನು ಸೀತೆಯನ್ನು ಅಪಹರಿಸಿದ್ದು, ರಾಮನು ಸೀತೆಯನ್ನು ಅನುಮಾನಿಸಿ ಅಗ್ನಿ ಪರೀಕ್ಷೆಗೆ ಒಳಪಡಿಸಿದ್ದು, ಪಾಂಡವರು ದ್ರೌಪದಿಯನ್ನು ಪಗಡೆ ಆಟದಲ್ಲಿ ನಿರ್ಜೀವ ವಸ್ತುವಿನಂತೆ ಸೋತ ಕಾರಣ ದುರ್ಯೋಧನ ದುಶ್ಯಾಸನ, ಇದನ್ನೆ ಅವಕಾಶ ಮಾಡಿಕೊಂಡು ದೈಹಿಕ, ಮಾನಸಿಕ, ಲೈಂಗಿಕವಾಗಿ ಶೋಷಣೆ ಮಾಡಿರುವ ನಿದರ್ಶನಗಳಿವೆ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಹೀಗೆ ಅಸಾಹಯಕರಾದ ಬಹಷ್ಟು ಸ್ತ್ರೀಯರನ್ನು ಪುರುಷಹಂಕಾರದಿಂದ ಬಲಿಪಶು ಮಾಡಿದಾರೆ. ಪ್ರಸ್ತುತ ಆಧುನಿಕ ಕಾಲದಲ್ಲಿ ಉದಾಹರಣೆ ಸಹಿತವಾಗಿ ಇದರಂತೆ ನಮ್ಮ ಕಣ್ಮುಂದೆ ಎಷ್ಟೋ ಘಟನೆಗಳು ನಡೆದಿರುವುದನ್ನು ನಾವು ಕಾಣುತ್ತೇವೆ.

ಇವೆಲ್ಲವನ್ನೂ ಮೆಟ್ಟಿನಿಂತು ಕಡ್ಡಿಮಟ್ಟಿ ಕಾಶಿಬಾಯಿ ಭಾರತೀಯ ಜನಪದರ ಸಂಸ್ಕೃತಿಯ ಮಹಿಳಾ ನಾಯಕಿಯಾಗಿ ನಿಲ್ಲುವಳು.ಈ ಕಥೆಯಿಂದ ಜನಪದರು ಮಹಿಳೆಯ ಪಾತಿವ್ರತ್ಯ, ಶೀಲವಂತಿಕೆ ಮತ್ತು ತಾಯ್ತನದ ಮೌಲ್ಯವನ್ನು ಗುರುತಿಸುವರು.ಎಂತಹ ಒತ್ತಡ ಪರಿಸ್ಥಿಯಲ್ಲಿಯು ನೈತಿಕ ಮೌಲ್ಯಗಳನ್ನು ಕಾಪಾಡಿಕೊಂಡು ಬಂದ ಕಾಶಿಬಾಯಿ ಸಮಾಜಕ್ಕೆ ಧೈರ್ಯ, ಸಚ್ಚಾರಿತ್ರ್ಯ ನೈತಿಕತೆಯ ಸಾಕ್ಷಿ ಪ್ರಜ್ಞೆಯಾಗಿದ್ದಾಳೆ.ಕಾಶಿಬಾಯಿ ಕಥೆಕೇವಲ ಪಾತ್ರವಾಗಿರದೆ ನಮ್ಮ ಜನಪದರ, ಪರಂಪರೆಯ, ಸಂಸ್ಕೃತಿಯ ಮತ್ತು ನೈತಿಕತೆಯ ಜೀವಂತ ಪ್ರತಿನಿಧಿಯಾಗಿದ್ದಾಳೆ.ಕಾಶಿಬಾಯಿಯ ಬದುಕಿನ ಜೀವನ ಚಿತ್ರಣದ ಮೂಲಕ ಸ್ತ್ರೀಯ ತ್ಯಾಗ ಬಲಿದಾನ, ಪಾತಿವ್ರತ್ಯ ಶೀಲ, ಧರ್ಮ ಮತ್ತು ಪುತ್ರ ವಾತ್ಸಲ್ಯದ ನಿಜವಾದ ಅರ್ಥವನ್ನು ಅರಿಯಬಹುದು. ಪ್ರಸ್ತುತ ಆಧುನಿಕ ಯುಗದಲ್ಲಿ ಈ ಎಲ್ಲಾ ಮೌಲ್ಯಗಳು ಸ್ವಚ್ಛಂದ ಆರೋಗ್ಯದಾಯಕ ಸಮಾಜ ನಿರ್ಮಾಣಕ್ಕೆ ತುಂಬಾ ಅತ್ಯವಶ್ಯಕವಾಗಿವೆ

ಅಡಿ ಟಿಪ್ಪಣಿಗಳು

೧. ಸಂ. ಡಾ. ವೀರಣ್ಣ ದಂಡೆ, 'ದೇಸಿ೧' ಭಾಗ್ಯಶ್ರೀ ಎಂಟರ್‌ಪ್ರೈಸಸ್, ದಾಮಿನಿ ಮುದ್ರಣ ಬೆಂಗಳೂರು ೨೦೦೩, ಪುಟ– ೧೦೪

೨. ಸಂ. ಡಾ. ವೀರಣ್ಣ ದಂಡೆ, 'ದೇಸಿ ೨' ಭಾಗ್ಯಶ್ರೀ ಎಂಟರ್‌ಪ್ರೈಸಸ್, ದಾಮಿನಿ ಮುದ್ರಣ ಬೆಂಗಳೂರು೨೦೦೩ ಪುಟ–೧೪೨
ಅದೆ ಪುಟ–೧೪೨

೩. ಸಂ.ಕ್ಯಾತನಹಳ್ಳಿ ರಾಮಣ್ಣ, 'ಜಾನಪದ ವಿಹಾರ', ಕರ್ನಾಟಕ ಸಂಘ(ರಿ), ಗುರುಭವನ ಮಂಡ್ಯ ೨೦೧೦ ಪುಟ–೨೪೫

೪. ಸಂ. ಡಾ. ವೀರಣ್ಣ ದಂಡೆ, 'ದೇಸಿ ೧' ಭಾಗ್ಯಶ್ರೀ ಎಂಟರ್‌ಪ್ರೈಸಸ್, ದಾಮಿನಿ ಮುದ್ರಣ ಬೆಂಗಳೂರು ೨೦೦೩ ಪುಟ–೧೦೭

೫. ಅದೆ ಪುಟ–೧೦೮

೬. ಸುನಂದ ಎಂ, 'ನಿಷೇಧಗಳು ಮತ್ತು ಲಿಂಗ ವ್ಯವಸ್ಥೆ', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೭ ಪುಟ–೧೧೯

೭. ಸುನಂದ ಎಂ 'ನಿಷೇಧಗಳು ಮತ್ತು ಲಿಂಗ ವ್ಯವಸ್ಥೆ', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೭ ಪುಟ–೧೩೮

ಪರಾಮರ್ಶನ ಗ್ರಂಥಗಳು

೧. ಸಂಗ್ರಾಹಕರು. ಎಚ್ ಎಲ್ ನಾಗೇಗೌಡ,ಸಂಪಾದಕರು ಪ್ರೊ ಡಿ ಲಿಂಗಯ್ಯ, 'ಕನ್ನಡ ಜನಪದ ಕಥನ ಕಾವ್ಯಗಳ', ಕರ್ನಾಟಕ ಜಾನಪದ ಪರಿಷತ್ತು ಸಂಪಾದಕರು,ಬೆಂಗಳೂರು ೨೦೦೭

೨. ಸಂಗ್ರಹಕಾರರು. ಎಚ್ ಎಲ್ ನಾಗೇಗೌಡ, ಸಂಪಾದಕರು, ಪ್ರೊ ಡಿ ಲಿಂಗಯ್ಯ, 'ಚಾರಿತ್ರಿಕ ಜನಪದ ಕಥನ ಕಾವ್ಯಗಳು', , ಕರ್ನಾಟಕ ಜಾನಪದ ಪರಿಷತ್ತು ಸಂಪಾದಕರು, ಬೆಂಗಳೂರು ೨೦೦೮

೩. ಸಂಪಾದಕ. ಸಮಿತಿಯ ಅಧ್ಯಕ್ಷರು ಡಾ ಹಿಶಿ ರಾಮಚಂದ್ರ ಗೌಡ, 'ಸಮಗ್ರ ಕನ್ನಡ ಜಾನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ', ಕನ್ನಡ ಸಂಸ್ಕೃತಿ ಇಲಾಖೆ, ಕರ್ನಾಟಕ ಜಾನಪದ ಅಕಾಡೆಮಿ. ಬೆಂಗಳೂರು ೨೦೦೯

೪. ರಿಯಾಜ್ ಪಾಷ್, 'ಜನಪದ ಸಾಹಿತ್ಯದಲ್ಲಿ ವರ್ಗ ಸಂಘರ್ಷದ ನೆಲೆಗಳು', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೧೨

೫. ಸಂ. ಡಾ. ವೀರಣ್ಣ ದಂಡೆ, 'ದೇಸಿ'೧ ಭಾಗ್ಯಶ್ರೀ ಎಂಟರ್‌ಪ್ರೈಸಸ್, ದಾಮಿನಿ ಮುದ್ರಣ ಬೆಂಗಳೂರು ೨೦೦೩

೬. ಸಂ. ಡಾ. ವೀರಣ್ಣ ದಂಡೆ, 'ದೇಸಿ'೨ ಭಾಗ್ಯಶ್ರೀ ಎಂಟರ್‌ಪ್ರೈಸಸ್, ದಾಮಿನಿ ಮುದ್ರಣ ಬೆಂಗಳೂರು ೨೦೦೩

೭. ಸುನಂದ ಎಂ 'ನಿಷೇದಗಳು ಮತ್ತು ಲಿಂಗ ವ್ಯವಸ್ಥೆ', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೭

೮. ಸಂ. ಕ್ಯಾತನಹಳ್ಳಿ ರಾಮಣ್ಣ,'ಜಾನಪದ ವಿಹಾರ', ಕರ್ನಾಟಕ ಸಂಘ(ರಿ), ಗುರುಭವನ ಮಂಡ್ಯ ೨೦೧೦

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ತೇಜಸ್ವಿ ಕಾದಂಬರಿಗಳಲ್ಲಿ ಪರಿಸರಪ್ರಜ್ಞೆ

ಬಿ ಈ ಶಿವರಾಜಕುಮಾರ[1] ಡಾ.ರಾಜಶೇಖರ ಜಮದಂಡಿ[2]
[1]ಸಂಶೋಧನಾರ್ಥಿ ಹಾಗೂ ಸಹಾಯಕ ಪ್ರಾಧ್ಯಾಪಕ
ಸ. ಪ್ರ.ದ. ಕಾಲೇಜು, ಹಳೇಬೀಡು.
ಖಚಿಚಿಜುಥಿಛಿ3@ರಟಚಿಟ.ಛಿಠಟ
[2]ಮಾರ್ಗದರ್ಶಕರು
ಶ್ರೀನಿವಾಸ್ ವಿಶ್ವವಿದ್ಯಾಲಯ
ಮಂಗಳೂರು.

Manuscript ID:
JRD -2026-180435
ISSN: 2230-9578
Volume 18
Issue 4(II)
Pp.121-122
April 2026
Submitted:16 Mar. 2026
Revised:05 Apr. 2026
Accepted:14Apr.2026
Published:30 April2026

ಸಾರಲೇಖ :

ಪೂರ್ಣಚಂದ್ರ ತೇಜಸ್ವಿಯವರು ನವ್ಯಕಾಲಘಟ್ಟದಲ್ಲಿ ಬರುವ ಲೇಖಕರಲ್ಲಿ ಸ್ವತಂತ್ರ ಪ್ರವೃತ್ತಿಯ ಬರಹಗಾರರು ಹಾಗೂ ಸಮಾಜವಾದಿ ಚಿಂತಕರು. ಆಧುನಿಕಕನ್ನಡ ಸಾಹಿತ್ಯದಲ್ಲಿ ಪರಿಸರ ಪ್ರಜ್ಞೆಯನ್ನುಗಂಭೀರವಾಗಿ ಅಭಿವ್ಯಕ್ತಗೊಳಿಸಿದ ಪ್ರಮುಖ ಸಾಹಿತಿಗಳಲ್ಲಿ ಪೂರ್ಣಚಂದ್ರ ತೇಜಸ್ವಿಯವರು ಪ್ರಮುಖರು. ತೇಜಸ್ವಿಯವರ ಕಾದಂಬರಿಗಳು ಪ್ರಕೃತಿ–ಮಾನವ ಸಂಬಂಧವನ್ನು ವಿಶಿಷ್ಟರೀತಿಯಲ್ಲಿ ನಿರೂಪಿಸುವ ಮಹತ್ವಪೂರ್ಣ ಸಾಧನಗಳೆನ್ನಬಹುದು. ಈ ಸಂಶೋಧನಾ ಲೇಖನವು ತೇಜಸ್ವಿಯವರ ಕಾದಂಬರಿಗಳಲ್ಲಿ ವ್ಯಕ್ತವಾಗುವ ಪರಿಸರಪ್ರಜ್ಞೆಯನ್ನು ವಿಶ್ಲೇಷಿಸುವ ಉದ್ದೇಶವನ್ನು ಹೊಂದಿದೆ. ಪಶ್ಚಿಮಘಟ್ಟಗಳ ಪರಿಸರ, ಅರಣ್ಯ, ಜೀವವೈವಿಧ್ಯ, ಮಾನವನ ಹಸ್ತಕ್ಷೇಪ ಮತ್ತುಅದರ ಪರಿಣಾಮಗಳು ಇವರ ಕಾದಂಬರಿಗಳಲ್ಲಿ ಹೇಗೆ ಸಾಹಿತ್ಯರೂಪ ಪಡೆದುಕೊಂಡಿವೆಎಂಬುದನ್ನು ಈ ಅಧ್ಯಯನ ವಿವರಿಸುತ್ತದೆ. ಪರಿಸರ ಸಂರಕ್ಷಣೆಯ ಸಂದೇಶವನ್ನು ಕಾದಂಬರಿಗಳ ಮೂಲಕ ತೇಜಸ್ವಿ ಹೇಗೆ ತಲುಪಿಸುತ್ತಾರೆಎಂಬುದನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಲಾಗಿದೆ.

ಇಪ್ಪತ್ತನೇ ಶತಮಾನದಕನ್ನಡಸಾಹಿತ್ಯದಲ್ಲಿ ಹೊಸ ಸಂವೇದನೆಗಳು ಮತ್ತು ವೈಚಾರಿಕ ಚಿಂತನೆಗಳನ್ನು ಪರಿಚಯಿಸಿದ ಸಾಹಿತಿಗಳಲ್ಲಿ ಪೂರ್ಣಚಂದ್ರ ತೇಜಸ್ವಿ ಪ್ರಮುಖವಾದ ಸ್ಥಾನವನ್ನು ಹೊಂದಿದ್ದಾರೆ. ಪ್ರಕೃತಿಎಂದರೆ ಮನಸ್ಸಿಗೆ ಬರುವುದು ಮರಗಿಡ, ಬೆಟ್ಟಗುಡ್ಡ, ಪ್ರಾಣಿಪಕ್ಷಿ, ಹರಿವನೀರು, ಅಲ್ಲಿನಜೀವಸಂಕುಲ. ಇಂತಹ ವಿಸ್ಮಯ ಪ್ರಕೃತಿ ಹಲವಾರು ಸಾಹಿತಿಗಳಿಗೆ ಸ್ಫೂರ್ತಿಯ ಸೆಲೆಯಾಗಿದೆ. ಮಲೆನಾಡಿನ ಪ್ರಕೃತಿ ಸೊಬಗಿಗೆ ಮನಸೋತು ಕೃಷಿ, ಶಿಕಾರಿ, ಛಾಯಗ್ರಹಣ ಹೀಗೆ ಹತ್ತು ಹಲವು ಪ್ರವೃತ್ತಿಗಳಲ್ಲಿ ತೊಡಗಿಸಿಕೊಂಡು ಪ್ರಕೃತಿಯಲ್ಲಿನ ವಿಸ್ಮಯಗಳ ಬ ಗೆಗಿನ ಕುತೂಹಲವನ್ನುತಮ್ಮ ಬದುಕಿನುದ್ದಕ್ಕೂಇಟ್ಟುಕೊಂಡವರು ತೇಜಸ್ವಿ.

ವಿಜ್ಞಾನಿಯಾಗಿ, ಪರಿಸರವಾದಿಯಾಗಿ ಮತ್ತು ಸಾಹಿತಿಯಾಗಿಅವರುತಮ್ಮ ಸಾಹಿತ್ಯದಲ್ಲಿ ಪ್ರಕೃತಿಯೊಂದಿಗಿನ ಸಂಬಂಧವನ್ನುಗಂಭೀರವಾಗಿ ಚರ್ಚಿಸಿದ್ದಾರೆ. ಇವರ ಸಾಹಿತ್ಯದಕೇಂದ್ರ ಪ್ರಜ್ಞೆ ಪರಿಸರವೇಆಗಿದೆ. ಪ್ರಕೃತಿಯೊಡನೆ ಸಹಬಾಳ್ವೆ ನೆಡೆಸಿದಂತಹ ತೇಜಸ್ವಿಯವರು ತಮ್ಮ ಸಾಹಿತ್ಯದಲ್ಲಿ ಕೇವಲ ಕಥೆಯನ್ನಷ್ಟೇ ಹೇಳುವ ಉದ್ದೇಶವನ್ನು ಮಾತ್ರಇಟ್ಟುಕೊಂಡಿರದೆತಮ್ಮಜೀವನದೃಷ್ಟಿಯ ಮೂಲಕ ಯಾವುದೋಅನುಭವ ವಿಶೇಷವನ್ನು ಬರವಣಿಗೆಯ ಮೂಲಕ ಸದಾ ಸಂವಹನಗೊಳಿಸುತ್ತಿರುತ್ತಾರೆ. ಇವರುತಮ್ಮ ಕಾದಂಬರಿಗಳಲ್ಲಿ ಪ್ರಕೃತಿಯನ್ನು ಕೇವಲ ಹಿನ್ನೆಲೆಯಾಗಿ ಬಳಸದೆ ಕಥೆಯ ಅವಿಭಾಜ್ಯ ಅಂಗವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಇವರ ಸಾಹಿತ್ಯದಲ್ಲಿ ಪ್ರಕೃತಿ ಪ್ರೀತಿಎಂಬುದುಏಕಮುಖವಾಗಿರದೆ ಹತ್ತು ಹಲವು ದೃಷ್ಟಿಕೋನಗಳಲ್ಲಿ ಜೀವಂತವಾಗಿ ಮೂಡಿ ಬಂದಿವೆ.

ಇವರ ಸಾಹಿತ್ಯವನ್ನುಓದುಗರುಓದುವಾಗ ಪ್ರಕೃತಿಯ ಸೌಂದರ್ಯವನ್ನು ಸವಿಯುವುದರಜೊತೆಜೊತೆಗೆ ಪರಿಸರದ ಬಗ್ಗೆ ಜಾಗೃತರಾಗುತ್ತಾರೆ ಹಾಗೂ ಪ್ರಕೃತಿ ಪ್ರೀತಿಯನ್ನು ಬೆಳೆಸುವಲ್ಲಿ ಇವರ ಸಾಹಿತ್ಯ ಪ್ರಮುಖ ಪಾತ್ರವಹಿಸುತ್ತದೆ. ತೇಜಸ್ವಿಯವರು ತಮ್ಮ ಸಾಹಿತ್ಯದಲ್ಲಿ ವೈಜ್ಞಾನಿಕ ವಿಷಯಗಳನ್ನು ಬಳಸಿಕೊಂಡಿದ್ದರೂ ಕಠಾರುವಕ್ಕಾದ ಶಾಸ್ತ್ರಜ್ಞಾನದಅನ್ವೇಷಣೆಗಾಗಿಅಲ್ಲ, ಸತ್ಯಾನುಭವದಅರಸುವಿಕೆಗಾಗಿಎಂಬುದುಗಮನಾರ್ಹ.

'ಕರ್ವಾಲೋ'ಕಾದಂಬರಿಯಲ್ಲಿ ವ್ಯಕ್ತವಾಗಿರುವ ಪರಿಸರಪ್ರಜ್ಞೆ

ಪಶ್ಚಿಮಘಟ್ಟಗಳ ಅರಣ್ಯಪ್ರದೇಶವನ್ನು ಹಿನ್ನೆಲೆಯಾಗಿ ಹೊಂದಿರುವ'ಕರ್ವಾಲೋ'ಕಾದಂಬರಿಯಲ್ಲಿ ಪ್ರಕೃತಿ ಕೇವಲ ಹಿನ್ನೆಯಾಗಿ ಬಂದಿಲ್ಲ. ಅದುಜೀವಂತ ಪಾತ್ರದಂತೆ ವರ್ತಿಸುತ್ತದೆ. ಪ್ರಬುದ್ಧಚಿಂತಕನೊಬ್ಬತೀವ್ರ ಕಾಳಜಿಯಿಂದ ನಡೆಸಿ ತತ್ವಜಿಜ್ಞಾಸೆಯೇ ಈ ಕಾದಂಬರಿಎಂದು ಹೇಳಬಹುದು. ಜೀವಪರದೋರಣೆಯಕಲಾಕಾರನೊಬ್ಬ ವಿಸ್ಮಯಗಳ ಬೆನ್ನುಹತ್ತಿದ ದಾಖಲೆಗಳ ಪುಸ್ತಕದಂತಿದೆ'ಕರ್ವಾಲೋ'. ಕರ್ವಾಲೋರವರ ಮೂಲಕ ಪರಿಚಯವಾಗುವ ಮಂದಣ್ಣ ಹಾಗೂ ಅವನಲ್ಲಿಯ ಪ್ರಕೃತಿಯ ಬಗೆಗಿನ ಅಧಮ್ಯ ಪ್ರತಿಭೆ,

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಬಿ ಈ ಶಿವರಾಜಕುಮಾರ' ಸಂಶೋಧನಾರ್ಥಿ ಹಾಗೂ ಸಹಾಯಕ ಪ್ರಾಧ್ಯಾಪಕಸ. ಪ್ರ. ದ. ಕಾಲೇಜು, ಹಳೇಬೀಡು.

How to cite this article:
ಬಿ ಈ ಶಿವರಾಜಕುಮಾರಡಾ. ರಾಜಶೇಖರಜಮದಂಡಿ.(2026). *Journal of Research and Development, 18(4(II)), 121–122. https://doi.org/10.5281/zenodo.19396821*

Quick Response Code:
Website: https://jrdrvb.org/
DOI: 10.5281/zenodo.19396821

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಕರ್ವಾಲೋರವರ ಗೆಳೆತನ ಮತ್ತು ಮಾರ್ಗದರ್ಶನದಿಂದ ತೇಜಸ್ವಿಯವರು ಅರಣ್ಯ ಮಧ್ಯದ ಜೀವರಾಶಿಯ ನಿಗೂಢ ಬದುಕನ್ನುತೆರೆದಿಡುತ್ತಾ ಹೋಗುತ್ತಾರೆ.ಕಾದಂಬರಿಯ ಮೂಲಕ ತೇಜಸ್ವಿಯವರು ಮಾನವನ ಲಾಭಾಸಕ್ತಿ ಮತ್ತು ಪರಿಸರ ವಿನಾಶದ ನಡುವಿನ ಸಂಘರ್ಷವನ್ನುತೀಕ್ಷ್ಣವಾಗಿ ಬಿಂಬಿಸಿದ್ದಾರೆ.

ಕಥಾನಕದಲ್ಲಿ ಮಾನವನಅರಣ್ಯಪ್ರವೇಶ, ಶೋಷಣೆ ಮತ್ತುಅದರ ಪರಿಣಾಮಗಳು ಹಂತಹಂತವಾಗಿ ಬಿಂಬಿತವಾಗುತ್ತವೆ. ಪ್ರಕೃತಿಯೊಂದಿಗೆ ಸಮತೋಲನ ಕಾಪಾಡಿಕೊಳ್ಳದ ಮಾನವನ ನಡವಳಿಕೆಗಳು ಹೇಗೆ ವಿನಾಶಕ್ಕೆ ದಾರಿಮಾಡಿಕೊಡುತ್ತವೆಎಂಬುದುಇಲ್ಲಿ ಸ್ಪಷ್ಟವಾಗುತ್ತದೆ. ಕಾದಂಬರಿಯಲ್ಲಿಅರಣ್ಯವುಜೀವಂತ ಪಾತ್ರದಂತೆಕಾಣುತ್ತದೆ.ಮರಗಳು, ಕಾಡುಪ್ರಾಣಿಗಳು, ಕೀಟಗಳು, ಹಕ್ಕಿಗಳು ಇತ್ಯಾದಿ ಇವುಗಳ ಸೂಕ್ಷ್ಮ ವಿವರಣೆಗಳು ತೇಜಸ್ವಿಯವರ ಪರಿಸರ ಪ್ರಜ್ಞೆಯನ್ನು ಪ್ರತಿಬಿಂಬಿಸುತ್ತವೆ. ಜೀವ ವೈವಿಧ್ಯವನ್ನು ಉಳಿಸಿಕಳ್ಳುವ ಅಗತ್ಯವನ್ನುಅಪ್ರತ್ಯಕ್ಷವಾಗಿ ಸಾರುತ್ತಾರೆ.

ಮಳೆ, ನದಿ ಮತ್ತು ಭೂದೃಶ್ಯಗಳ ವಿವರಣೆಗಳು ಕಾದಂಬರಿಗೆಜೀವ ತುಂಬುತ್ತವೆ.ಪಶ್ಚಿಮಘಟ್ಟಗಳಮಳೆ, ಕಾಡುಪ್ರದೇಶದ ಸ್ವಭಾವವನ್ನು ತೇಜಸ್ವಿ ವೈಜ್ಞಾನಿಕ ಹಾಗೂ ಸಾಹಿತ್ಯಿಕದೃಷ್ಟಿಯಿಂದ ಚಿತ್ರಿಸಿದ್ದಾರೆ. ಪ್ರಕೃತಿಚಕ್ರದ ಮಹತ್ವವನ್ನುಇಲ್ಲಿಅರಿಯಬಹುದು.ಕಾದಂಬರಿಯಲ್ಲಿ ಮಾನವನ ಲಾಭಾಸಕ್ತಿ, ಅರಣ್ಯ ಶೋಷಣೆ ಮತ್ತು ಪ್ರಕೃತಿ ಸಂಪತ್ತಿನ ದುರ್ಬಳಕೆ ಪ್ರಮುಖ ವಿಷಯಗಳಾಗಿವೆ. ಅರಣ್ಯವನ್ನು ಕೇವಲ ಸಂಪತ್ತಾಗಿ ನೋಡುವದೃಷ್ಟಿಕೋನವನ್ನು ತೇಜಸ್ವಿ ಪ್ರಶ್ನಿಸುತ್ತಾರೆ.ಈ ಮೂಲಕ ಪರಿಸರ ವಿನಾಶದ ದೀರ್ಘಕಾಲೀನ ಪರಿಣಾಮಗಳ ಬಗ್ಗೆ ಅವರುಎಚ್ಚರಿಸುತ್ತಾರೆ.ಮಾನವ–ಪ್ರಕೃತಿ ಸಂಬಂಧದಲ್ಲಿ ಸಮತೋಲನ ಕಳೆದುಹೋದಾಗ ಉಂಟಾಗುವ ಅಪಾಯಗಳನ್ನು'ಕರ್ವಾಲೋ'ಕಾದಂಬರಿ ಸ್ಪಷ್ಟವಾಗಿಚಿತ್ರಿಸುತ್ತದೆ.

ಕರ್ವಾಲೋಕಾದಂಬರಿಯ ಪ್ರಮುಖ ವೈಚಾರಿಕ ಸಂದೇಶ ಪರಿಸರಸಂರಕ್ಷಣೆಯಜೊತೆಗೆಜೀವವೈವಿಧ್ಯದರಕ್ಷಣೆಯಅಗತ್ಯವಾಗಿದೆ.ಪ್ರಕೃತಿಯನ್ನು ಶೋ಼ಷಣೆಯ ವಸ್ತುವಾಗಿ ಅಲ್ಲದೆ, ಸಹಜೀವನದ ಭಾಗವಾಗಿ ನೋಡಬೇಕೆಂಬ ಚಿಂತನೆಇಲ್ಲಿ ವ್ಯಕ್ತವಾಗುತ್ತದೆ.ತೇಜಸ್ವಿಯವರ ವೈಜ್ಞಾನಿಕ ಹಿನ್ನೆಲೆ ಈ ಕಾದಂಬರಿಯಲ್ಲಿ ಸ್ಪಷ್ಟವಾಗಿಗೋಚರಿಸುತ್ತದೆ.

'ಚಿದಂಬರರಹಸ್ಯ'ಕಾದಂಬರಿಯಲ್ಲಿವ್ಯಕ್ತವಾಗಿರುವಪರಿಸರಪ್ರಜ್ಞೆ

ಪೂರ್ಣಚಂದ್ರತೇಜಸ್ವಿಯವರ ಮತ್ತೊಂದು ಪ್ರಮುಖಕಾದಂಬರಿಎಂದರೆಕೇಂದ್ರ ಸಾಹಿತ್ಯಅಕಾಡೆಮಿ ಪ್ರಶಸ್ತಿಯನ್ನು ತಂದುಕೊಟ್ಟಂತಹಚಿದಂಬರರಹಸ್ಯ.ಕಾದಂಬರಿಅರಂಭವಾಗುವುದೇ "ಒಟ್ಟಿನಲ್ಲಿಕ್ರಾಂತಿಆಗಬೇಕಪ್ಪಾ" ಎಂಬ ಸಾಲಿನೊಂದಿಗೆ.ಚಿದಂಬರರಹಸ್ಯಕಾದಂಬರಿಯು ಕೇವಲನಿಗೂಢತೆ ಮತ್ತುಕಥಾನಕವನ್ನಷ್ಟೇ ಒಳಗೊಂಡಿರದೆ ನೈಸರ್ಗಿಕ ಪರಿಸರದ ಪ್ರಭಾವ ಮತ್ತು ಪರಿಸರ ಪ್ರಜ್ಞೆಯನ್ನು ತಿಳಿಸಿಕೊಡುತ್ತದೆ .ಕಾದಂಬರಿಯಲ್ಲಿ ಪ್ರಕೃತಿಯ ಸಂಕೇತಗಳು, ವಾತಾವರಣದ ವೈಶಿಷ್ಟ್ಯಗಳು ಮತ್ತುಗ್ರಾಮೀಣ ನಿಸರ್ಗದ ಮಹತ್ವವನ್ನು ಬಹು ಹತ್ತಿರದಿಂದ ವರ್ಣಿಸಿದ್ದು ಕೆಲವು ಸನ್ನಿವೇಶಗಳಲ್ಲಿ ಅರಣ್ಯ, ನದಿ, ಗಿಡಮರ, ಬೆಟ್ಟಗುಡ್ಡ ಮುಂತಾದವುಗಳಿಗೆ ಪಾತ್ರಗಳಂತೆ ಸಾಂಗತ್ಯವನ್ನು ನೀಡಲಾಗಿದೆ.

ಏಲಕ್ಕಿ ಬೋರ್ಡಿನಇಂಟಲಿಜೆನ್ಸ್ಎಂದು ಬರುವಆಗುಂತಕಅಂಗಾಡಿಕ್ಷೀಣಿಸುತ್ತಿರುವ ಏಲಕ್ಕಿ ಬೆಳೆಯ ಬಗ್ಗೆ ವರದಿ ತಯಾರಿಸಲು ಬಂದುಯಾವೆಲ್ಲಾ ವಿಷಯಗಳನ್ನು ಕೆದಕುತ್ತಾ ಹೋಗುತ್ತಾರೆ.ಕ್ವಿಂಟಾಲ್ಗಟ್ಟಲೆ ಬೆಳೆಕೊಡಬಹುದಾದಕೆಸರೂರು ಬ್ರಿಗೇಡನ್ನು ಸಂಶೋಧಿಸ ಹೊರಟ ಜೋಗಿಹಾಳರ ಕೊಲೆ ಎಲ್ಲಾ ಸಮಸ್ಯೆಗಳಿಗೂ ತಳುಕು ಹಾಕಿಕೊಳ್ಳುತ್ತದೆ.ಕಾಡು ನಾಶಮಾಡುತ್ತಿರುವ ಸುಲೇಮಾನ್ ಬ್ಯಾರಿ ಮತ್ತವನತಂಡ, ಟನ್ನುಗಟ್ಟಲೆ ಬೆಳೆಬರುವ ಏಲಕ್ಕಿಯ ಪ್ರಭೇದ ಸಾಗರೋಪಾದಿಯಾಗಿ ಬೆಳೆದಲಂಟನಾದ ಬಳ್ಳಿಯೊಳಗೆ ಭದ್ರವಾಗಿರುವುದನ್ನುಕಣ್ಣಿಗೆಕಟ್ಟುವಂತೆಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

ಪರಿಸರದ ಸಮತೋಲನದ ಪ್ರಸ್ತಾಪಕಾದಂಬರಿಯುದ್ದಕ್ಕೂಇದ್ದು ಮಾನವ ನಿರ್ಲಕ್ಷ್ಯದಿಂದ ನೈಸರ್ಗಿಕಸಂಕುಲಕ್ಕೆಆಗುವಂತಹಅಪಾಯವನ್ನು ಪರೋಕ್ಷವಾಗಿತೋರಿಸಲಾಗಿದೆ.ಮನುಷ್ಯತಾಂತ್ರಿಕ ಮತ್ತುಆರ್ಥಿಕದುರಾಸೆಯಿಂದಅನಿಯಂತ್ರಿತಅರಣ್ಯನಾಶ, ನೈಸರ್ಗಿಕ ಸಂಪತ್ತುಗಳ ದುರುಪಯೋಗ, ಜಲಮೂಲಗಳ ಹಾಳಾಗುವಿಕೆಯಿಂದಾಗುವ ಪರಿಣಾಮಗಳನ್ನು ಕಾದಂಬರಿ ಪ್ರತಿಬಿಂಬಿಸುತ್ತದೆ.

'ಜುಗಾರಿಕ್ರಾಸ್'ಕಾದಂಬರಿಯಲ್ಲಿ ಪರಿಸರಪ್ರಜ್ಞೆ

ಪಶ್ಚಿಮಘಟ್ಟದ ಏಕಾತನತೆಯಅರಣ್ಯದ ಮತ್ತೊಂದು ಮಗ್ಗುಲನ್ನುಜುಗಾರಿಕ್ರಾಸ್ ನಲ್ಲಿರಸವತ್ತಾಗಿಕಟ್ಟಿಕೊಟ್ಟಿದ್ದಾರೆ.ಮಲೆನಾಡಿನದಟ್ಟ ಅರಣ್ಯಗಳಲ್ಲಿ ನಡೆಯುವ ದಂಧೆಗಳ ಸಮಗ್ರಚಿತ್ರಣವನ್ನಜುಗಾರಿಕ್ರಾಸ್'ತೆರೆದಿಡುತ್ತದೆ.ಜೊತೆಗೆ ಭ್ರಷ್ಟರಿಗೆ ಪರೋಕ್ಷ ಬೆಂಬಲ ನೀಡುವ ನಮ್ಮ ಆಡಳಿತ ವ್ಯವಸ್ಥೆಯ ಮತ್ತೊಂದು ಮುಖವನ್ನುಓದುಗರಿಗೆ ತೇಜಸ್ವಿ ಪರಿಚಯಿಸುತ್ತಾರೆ. ಕಾದಂಬರಿಯು ಮಂಗಳೂರು–ಬೆಂಗಳೂರು ಹೆದ್ದಾರಿಯ ನಡುವೆ ಬರುವಜುಗಾರಿಕ್ರಾಸ್ ಮತ್ತುದೇವಪುರದ ಸುತ್ತಕೇವಲ 24 ಗಂಟೆಗಳ ಅವಧಿಯಲ್ಲಿ ನಡೆಯುವಂಥದ್ದು.ಆದರೆಅಲ್ಲಿ ಬರುವ ಮುಗ್ಧ ಮತ್ತು ಕರಾಳಪಾತ್ರಗಳು, ಸನ್ನಿವೇಶಗಳೆಲ್ಲಾ ಸೇರಿಒಂದುಯುಗದಲ್ಲಿ ನಡೆದಕಥೆ ಎನ್ನಿಸಿಬಿಡುತ್ತದೆ.ಜುಗಾರಿಕ್ರಾಸ್ ಸ್ಥಳವೇ ನೋಡುಗರಿಗೆಒಂದುರೀತಿಯಅನುಮಾನವನ್ನುಜೊತೆಗೆ ಬಹಳಷ್ಟು ಪ್ರಶ್ನೆಗಳನ್ನು ಹುಟ್ಟಿಸುವಂಥದ್ದು.ಅಲ್ಲಿನ ಫಾರೆಸ್ಟರ್ಇಕ್ಬಾಲ್ ಸಾಬ ಮತ್ತುಗಾರ್ಡ್ಗುರಪ್ಪ ಸೇರಿಅಲ್ಲಿ ಬರುವ ವಾಹನಗಳನ್ನು ತಡೆಹಾಕಿ ಹೇಗೆ ಅವರಿಂದ ಲಂಚಪೀಕುತ್ತಾರೆ ಎಂಬಲ್ಲಿಂದರೋಚಕಕಥೆಆರಂಭವಾಗುತ್ತದೆ.ಕಲ್ಲುಕಳ್ಳರಿಗೆ, ಮರಗಳ್ಳರಿಗೆ, ಗಂಧ, ಚಕ್ಕೆ ಕಳ್ಳಸಾಗಣೆ ಮಾಡುವಖದೀಮರಿಗೆ ಪಶ್ಚಿಮಘಟ್ಟದ ಅರಣ್ಯಗಳು ತೆರೆದ ಖಜಾನೆಗಳಂತಾಗಿದ್ದು ಝದೀಮರು ಕಣ್ಣುಹರಿಸಿದಲ್ಲೆಲ್ಲ ಹಣದರಾಶಿ ಬಿದ್ದಿರುವಂತೆಕಾಣುತ್ತದೆ.ಇದರಿಂದಉತ್ಪತ್ತಿಯಾಗುವ ಕಾಳ ಧನದೇಶದರಾಜಕೀಯದ ಮೇಲೆ ಬೀರುವ ಭಯ ಅನಕ ಪರಿಣಾಮವನ್ನುಕಾದಂಬರಿ ವಿಸೃತವಾಗಿ ವಿವರಿಸುತ್ತ ಸಾಗುತ್ತದೆ.ಜುಗಾರಿಕ್ರಾಸ್ಕಾದಂಬರಿಯು ಕೇವಲ ಮನರಂಜನೆಯ ಸರಕಾಗದೆ ನಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಡೆಯುವ ಸಾಮಾಜಿಕ ಸಮಸ್ಯೆಗಳು, ನಾಶವಾಗುತ್ತಿರುವ ಕಾಡುಗಳ ಬಗ್ಗೆ ತೀವ್ರ ಕಳವಳವನ್ನು ವ್ಯಕ್ತಪಡಿಸುತ್ತದೆ.

ತೇಜಸ್ವಿಯವರ ಸಾಹಿತ್ಯದಕೇಂದ್ರ ಪ್ರಜ್ಞೆ ಪರಿಸರವೇಆಗಿದ್ದು, ಅದರೊಟ್ಟಿಗಿನಜಗತ್ತು, ಮನುಷ್ಯ ಹಾಗೂ ಅವನ ಆಲೋಚನಾಕ್ರಮಗಳನ್ನು ಕುರಿತುಇವರ ಸಾಹಿತ್ಯ ಮಾತನಾಡುತ್ತದೆ. ಮನುಷ್ಯ ಪ್ರಕೃತಿಯನ್ನು ಹಾಳುಗೆಡವಿದಷ್ಟು ಅದುತನ್ನದೇ ನಿಯಮಗಳ ಮೂಲಕ ಅಸ್ತಿತ್ವ ಸಾಧಿಸುತ್ತಾ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತ ಹೋಗುತ್ತದೆಎನ್ನುವ ಸತ್ಯವನ್ನುತಮ್ಮ ಕಾದಂಬರಿಗಳಲ್ಲಿ ತೇಜಸ್ವಿಯವರು ತಿಳಿಸಿಕೊಡುತ್ತಾರೆ.

ಪರಾಮರ್ಶನಗ್ರಂಥಗಳು

1. ಪೂರ್ಣಚಂದ್ರತೇಜಸ್ವಿ–ಕರ್ವಾಲೋ–ಪುಸ್ತಕಪ್ರಕಾಶನ, ಮೈಸೂರು
2. ಪೂರ್ಣಚಂದ್ರತೇಜಸ್ವಿ–ಚಿದಂಬರರಹಸ್ಯ–ಪುಸ್ತಕಪ್ರಕಾಶನ, ಮೈಸೂರು
3. ಪೂರ್ಣಚಂದ್ರತೇಜಸ್ವಿ–ಜುಗಾರಿಕ್ರಾಸ್–ಪುಸ್ತಕಪ್ರಕಾಶನ, ಮೈಸೂರು
4. ಪೂರ್ಣಚಂದ್ರತೇಜಸ್ವಿ–ಅಣ್ಣನನೆನಪು–ಪುಸ್ತಕಪ್ರಕಾಶನ, ಮೈಸೂರು
5. ಜಿ. ಹೆಚ್. ನಾಯಕ–ಕರ್ವಾಲೋ–ಅಕ್ಷರಪ್ರಕಾಶನ, ಸಾಗರ
6. ಲಕ್ಷ್ಮೀನಾರಯಣಅರೋರ–ಕಾದಂಬರಿಗಳವಿಮರ್ಶೆ–ಪ್ರಸಾರಂಗ, ಮೈಸೂರುವಿ.ವಿ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಬೇಂದ್ರೆ–ಕಾವ್ಯದಲ್ಲಿ ಪರಿಸರ ಪ್ರಜ್ಞೆ

ಡಾ. ಕಸ್ತೂರಿ ದಳವಾಯಿ
ಸಹ ಪ್ರಾಧ್ಯಾಪಕರು,
ಸರಕಾರಿ ಪ್ರಥಮದರ್ಜೆಕಾಲೇಜು ಹಾಗೂ
ಸ್ನಾತಕೋತ್ತರ
ಅಧ್ಯಯನಕೇಂದ್ರ, ಗದಗ

Manuscript ID:
JRD -2026-180436
ISSN: 2230-9578
Volume 18
Issue 4(II)
Pp.123-126
April 2026
Submitted:16 Mar. 2026
Revised:05Apr. 2026
Accepted:14Apr.2026
Published:30 April2026

ಸಾರಲೇಖ :

"ಶ್ರಾವಣ" ಕವನ ಸಾಹಿತ್ಯದಲ್ಲಿ ಮೂಡಿಬಂದಕವಿಯ ಮಹೋನ್ನತಿಯ ಪರಿಪಾಕವೆನ್ನಬೇಕು. "ಶ್ರಾವಣ" ಭಾವಗೀತೆಯು ಕೇವಲ ಓದುವಕವನವಲ್ಲಾ ಶ್ರಾವಣಎಂದರೆ– ಆಲಿಸುವುದು. ಬೇಂದ್ರೆಯವರು "ಕರ್ನಾಟಕದ ಕಾಶ್ಮೀರವೆಂದೇ ಪ್ರಸಿದ್ಧವಾದ ಧಾರವಾಡ ಸಾಧನಕೇರಿಯಲ್ಲಿಇದ್ದವರು. ತಾವು ಬರೆದ ಭಾವಗೀತೆಯೊಂದಿಗೆ ಪರಿಸರದಅಪಾರ ಕಾಳಜಿ. ಅನನ್ಯತೆ, ಅದ್ಭುತ, ಅಗಮ್ಯ, ಪ್ರೇಮ ಮತ್ತು ಕಾಳಜಿಯನ್ನು ಮುಂದಿನ ಪೀಳಿಗೆಗೆ ಚಿತ್ರಕವಿತ್ವದಲ್ಲಿಎತ್ತಿತೋರಿಸುತ್ತಾರೆ. ಬೇಂದ್ರೆಯವರು ಸಂಗೀತ ನಾದವನ್ನು ಸಾಹಿತ್ಯದಲ್ಲಿ ಹೊಮ್ಮಿಸಿದ್ದಾರೆ. ಪ್ರಕೃತಿಯ ಪರಿಸರದ ಹಿಗ್ಗನ್ನುತಾವುಉಂಡು ಸಹೃದಯರಿಗೆಉಣ ಬಡಿಸಿದ್ದಾರೆ.

ಸುಮಾರು ನೂರು ವರುಷಗಳ ಹಿಂದೆಧಾರವಾಡದಲ್ಲಿ ನೂರು ಸೆಂಟಿಮೀಟರ್ ವಾರ್ಷಿಕ ಮಳೆಯಾದ ದಾಖಲೆ ಇದೀಗ 50–60 ಸೆಂಟಿಮೀಟರ್ ಮಳೆಯಾದರೆ ಅದನ್ನೇಅತಿವೃಷ್ಟಿ, ಅನಾವೃಷ್ಟಿ ಎನ್ನುವ ಕಾಲಬಂದಿದೆ. ಆ ಕಾಲದ ಮಳೆಯನ್ನು ಶಬ್ದ ಗಾರುಡಿಗಜನಪದ ಶೈಲಿಯಕವಿಯು ಹೀಗೆ ವರ್ಣಿಸಿದ್ದಾನೆ.

ಧಾರವಾಡದ ಮ್ಯಾಗ
ಏರಿ ಬಂದಾವ ಮೋಡ
ದೊರಿಯ ನೋಡಪ್ಪ ಕಮಕಾಳ ಕಟ್ಟಿಮ್ಯಾಲ
ಭೋರ್ಯಾಡತಾವ ಮಳಿರಾಯ

ಮಳೆಯ ಆರ್ಭಟಕ್ಕೆ ಪುಟ್ಟ ಬಾಲಕನಂತೆ ಬೆರಗಾಗಿ ನಿಂತ ಕವಿ, ಪ್ರಬುದ್ಧಕವಿಯಾಗಿತನ್ನ ಸುತ್ತಲಿನ ಪರಿಸರದಚೆಲುವನ್ನುಕಂಡು ಆನಂದಿಸಿದನು. ಇದೀಗ ಪರಿಸರದದೈವಿಕತೆಯನ್ನುಅನುಭವಿಸಲಿದ್ದಾನೆ.

ಗುಡ್ಡಗುಡ್ಡ ಸ್ಥಾವರ ಲಿಂಗ
ಅವಕ ಅಭ್ಯಂಗ
ಎರಿತಾವನ್ನೂ ಹಾಂಗ
ಕೂಡ್ಯಾಟ ಮೋಡ ಸುತ್ತೆಲ್ಲಾ ನೋಡ ನೋಡ

ಪುಟ್ಟ ಮಕ್ಕಳು ಹಾಗೂ ಗರ್ಭಣಿ ಮಹಿಳೆಯ ಕಂಡಕವಿಯಕಣ್ಣು ಪರಿಸರದಲ್ಲಿ ಪ್ರಕೃತಿಯನ್ನುಚಿತ್ರಕವಿತ್ವದಲ್ಲಿ ಹೀಗೆ ಅಭಿವ್ಯಕ್ತಿಸುತ್ತಾನೆ.

ಹಸುರುಟ್ಟ ಬಸುರಿಯ ಹಾಂಗ
ನೆಲ ಹೊಲ ಹ್ಯಾಂಗ
ಅರಿಷಣಒಡೆದ್ಹಾಂಗ
ಹೊಮ್ಮುತ್ತಾದ ಬಂಗಾರಚಿಮ್ಮತಾವ ।

ಪ್ರಕೃತಿಯು ಹಸಿರಿನಿಂದ ತುಂಬಿದೆ, ಹಸಿರು ಎಲ್ಲಡೆಗೂ ಬೆಳೆದು ನಿಂತಿದೆ, ಭೂತಾಯಿ ಈಗ ಬಸರಿಯಾಗಿದ್ದಾಳೆ, ಮುತ್ತೈದೆಯ ಹೆಣ್ಣು ಮಗಳು ಗಲ್ಲಗಳಿಗೆ ಅರಿಷಣ ಹಚ್ಚಿಕೊಳ್ಳುವಂತೆ ನೆಲದ ಮೇಲೆ ಹರಡಿದ ಹಳದಿ ಕಿರು ಸಸ್ಯಗಳು ಭೂಮಿತಾಯಿಯಚೆಲುವನ್ನು ಸೃಷ್ಟಿಸಿವೆ. ಬಂಗಾರ ಬಣ್ಣದ ಸಸ್ಯಗಳು ವಸುಂಧರೆಗೆ ಒಡವೆಗಳಿಂತಿವೆ. ಲಕ್ಷಣಾರ್ಥದಲ್ಲಿ ಹೇಳುವುದಾದರೆ ಪರಿಸರದ ಬಸರಿನಿಂದ ಬಂಗಾರದಂತಹ ಫಲ ದೊರೆಯುತ್ತದೆಎನ್ನುವುದುಆಧುನಿಕತಂತ್ರಜ್ಞಾನದ ಮನುಷ್ಯನಿಗೆ ಈ ಪರಿಸರ ಬಹಳ ಮುಖ್ಯವೆಂದು ಕವಿವಾಣಿ ಹೇಳುತ್ತದೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ. ಕಸ್ತೂರಿ ದಳವಾಯಿ ಸಹ ಪ್ರಾಧ್ಯಾಪಕರು, ಸರಕಾರಿ ಪ್ರಥಮದರ್ಜೆಕಾಲೇಜು ಹಾಗೂ
ಸ್ನಾತಕೋತ್ತರಅಧ್ಯಯನಕೇಂದ್ರ, ಗದಗ

How to cite this article:
ಡಾ. ಕಸ್ತೂರಿ ದಳವಾಯಿ*(2026).* ಬೇಂದ್ರೆಕಾವ್ಯದಲ್ಲಿ ಪರಿಸರ ಪ್ರಜ್ಞೆ. *Journal of Research and Development, 18(4(II)), 123–126. https://doi.org/10.5281/zenodo.19396863*

Quick Response Code:
Website: https://jrdrvb.org/
DOI: 10.5281/zenodo.19396863
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

"ಸ್ಥಾವರಕ್ಕೆ ಅಳಿವುಂಟು ಜಂಗಮಕ್ಕೆ ಅಳಿವಿಲ್ಲಾ" ಎಂದು ಬಸವಾಣಿ ಹೇಳಿದರೆ, ಬೇಂದ್ರೆಯವರು ಪ್ರಸರವನ್ನೇದೇವಾಲಯವನ್ನಾಗಿ ಮಾಡಿ ಬೆಟ್ಟ ಗುಡ್ಡಗಳನ್ನು ಲಿಂಗ ಮಾಡಿ ಸ್ಥಾವರದ ವಿಭೂತಿಯನ್ನು ತೋರಿಸಿದ್ದಾರೆ.

ನಾಡೆಲ್ಲಾಏರಿಯವಾರಿ
ಹರಿತಾಚಝುರಿ
ಹಾಲಿನ ತೋರಿ
ಈಗ ಯಾಕೋ । ನೆಲಕೆಲ್ಲಕುಡಿಸಲಾಕ ॥ ಶ್ರಾವಣ ಬಂತು

ಈ ಪರಿಸರದ ಪರ್ಜನ್ಯಯಜ್ಞದ ಫಲಶೃತಿಯೇನು ?ಶ್ರಾವಣ ಮಾಸ ಬರುವುದು ಪರಿಸರದ ಸೃಷ್ಟಿಗೆ ಘೋಷಣೆಕೊಡುವುದಕ್ಕಾಗಿ ನಾಡಿನ ಏರಿಗಳು ಹಾಗೂ ಓರೆಗಳು, ಅಂದರೆ ನೀರಿನ ಜರಿಗಳಿಂದ ತುಂಬಿ ಹರಿಯುತ್ತವೆ. ಇದು ಬರೀ ನೀರಲ್ಲಇದು ಹಾಲಿನ ತೊರೆ, ಈ ಹಾಲನ್ನು ಶ್ರಾವಣವು ನೆಲಕ್ಕೆ ಕುಡಿಸುತ್ತದೆ.ಭೂತಾಯಿಗೆ ಈ ಶ್ರಾವಣವುತಾಯಿಯಾಗಿದೆಎಂದು ಕವಿ ಸಾಹಿತ್ಯ ಹೇಳುತ್ತದೆ.

ದೂರದ ಬೆಟ್ಟಗಳು ಪುಟ್ಟ ಮಕ್ಕಳಂತೆ ಕಂಡರೆ ಹತ್ತಿರದ ಬನಗಳು ಕಾಣುವುದು ಹರಿಯದ ಮದು ಮಕ್ಕಳ ಹಾಗೆ, ಬನದಲ್ಲಿರುವ ಮರಗಳ ಶಿರೋಭಾಗ್ಯವು ಹೊಸ ತಳಿರುಗಳಿಂದ, ಚಿಗುರಿ, ಕವಿಯಕಣ್ಣಿಗೆ ಮದುಮಗನು ಧರಿಸಿದ ಬಾಸಿಂಗ ಹಾಗೆ ಕಾಣುತ್ತದೆ. ಮದುಮಕ್ಕಳಲ್ಲಿ ಉಕ್ಕುವ ಹರ್ಷವನ್ನು ಈ ಪರಿಸರದ ಬನಗಳಲ್ಲಿಯೂ ಕಾಣಿಸುತ್ತಾನೆ. ಕವಿ ಪುಂಗವ ಈ ಹರ್ಷಕ್ಕೆಕಾರಣ ಮತ್ತೆ ಮತ್ತೆ ಸೃಷ್ಟಿಸುವ ಮಳೆಗಾಲ.

ಈ ಶ್ರಾವಣವು ನಿಸರ್ಗದಲ್ಲಿ ಮೂಡಿಸಿದ ಪರಿಣಾಮ

ಬೆಟ್ಟತೊಟ್ಟಾವಕುತನಿಯ ಅಂಗಿ
ಹಸಿರು ನೋಡತಂಗಿ
ಹೋರಾಟವೆಲ್ಲೋಜಂಗಿ
ಜಾತ್ರಿಗೇನೂ ನೆರದದ $ ಇಲ್ಲೆತಾನೋ ॥
ಬನ, ಬನ, ನೋಡು ಈಗ ಹ್ಯಾಂಗ
ಮದುವಿ ಮಗನ್ಹಾಂಗ

ಕವಿಯ ನೋಟ ಸುತ್ತಲಿನ ಪರಿಸರದ ಮೇಲೆ ವಿಶಾಲವಾಗಿ ಹರಿಯುತ್ತದೆ.ಅಲ್ಲಿಕಾಣುವುದೇನು ?ಮಳೆಗಾಲದ ಮೊದಲಲ್ಲಿ ಸ್ವೇಚ್ಛೆಯಾಗಿ, ಬೆಳೆದು, ಬೆಟ್ಟಗಳ ಮೇಲೆಲ್ಲಾ ವ್ಯಾಪಿಸಿದ ಹಸಿರು ಕಿರಿಹುಲ್ಲುಇದುದೂರದಿಂದಕವಿಯಕಣ್ಣಿಗೆಕುತನಿಯಅಂಗಿಯನ್ನುತೊಟ್ಟ ಪುಟ್ಟ ಮಕ್ಕಳ ಹಾಗೆ ಕಾಣುತ್ತದೆ.

ಈ ಪುಟ್ಟ ಮಕ್ಕಳು ಕುತನಿಯಅಂಗಿಯನ್ನುತೊಡುವುದು, ಅಪರೂಪದ ಸಂದರ್ಭಗಳಲ್ಲಿ ಅಂದರೆ ಹಬ್ಬಗಳಲ್ಲಿ ಜಾತ್ರೆಗೆ ಹೊರಡುವಾಗ ಅವು ಹೊರಡುವುದುತುಂಬಾಉತ್ಸಾಹದಿಂದ (ಜಂಗಿ–ಕಾಳಗ) ಈ ಎಲ್ಲಾ ಬೆಟ್ಟಗಳು ನೆರದಿದ್ದುಇಲ್ಲಿಯೇ ಈ ಹಬ್ಬವು ಹೆಣ್ಣುಮಕ್ಕಳ ಹಬ್ಬ, ಅಕ್ಕ–ತಂಗಿಯರುಕೂಡಿ ನಲಿಯುವ ಹಬ್ಬ, ಆದುದರಿಂದಲೇ ನೋಡತಂಗಿಎಂದುಕವಿಯು ಹೇಳುವಂತೆ ಹೇಳುತ್ತಾನೆ.

ಶ್ರಾವಣ ಬಂತುಊರಿಗೆ । ಕೇರಿಕೇರಿಗೆ
ಹೊಡೆದಝುರಿಗೆ
ಜೋಕಾಲಿ ಏರಿ । ಆಡರ್ಯಾಟ ಮರಕ ಹಾರಿ
ಶ್ರಾವಣ ಬಂತು ಮನಿಮನಿಗೆ । ಕೂಡಿದನಿದನಿಗೆ
ಮನದ ನನಿ ಕೊನಿಗೆ
ಒಡೆದಾವಕಾಡೂ । ರಸಉಕ್ಕಲೆಂದ ನೋಡು ॥
ಶ್ರಾವಣ ಬಂತು ॥

ಶ್ರಾವಣ ಮಾಸವು ಹಬ್ಬಗಳ ಮಾಸವು ಹೌದು ಹಳ್ಳಿಗಳಲ್ಲಿ ಹುಡುಗ, ಹುಡುಗಿಯರು, ಮರಕ್ಕೆಜೋಕಾಲಿ ಕಟ್ಟಿಜೋರು, ಜೋರಾಗಿ, ಝುರಿಕಿ, ಹಾಕುತ್ತಾಜೀಕುತ್ತಾರೆ. ಹುಡುಗರು ಮಳೆ, ಗಾಳಿ, ಎನ್ನದೇ ಹೊರಗೆಆಡುತ್ತಿದ್ದರೆ ಮನೆಯ ಹಿರಿಯರುಉತ್ಸಾಹದಿಂದಇರುತ್ತಾರೆ.

ತಮ್ಮಊರಿಗೆ ಹೊಲಗಳಿಗೆ ಮಳೆ ಬಂದ ಹುರುಪಿನಲ್ಲಿಅವರುದನಿಗೆ ದನಿಗೂಡಿಸಿ ಉರಿಯುತ್ತಿದ್ದಾರೆ. ಅವರ ಪ್ರಸನ್ನಗೊಂಡ ಮನಸ್ಸೆಂಬ ರೆಂಬೆಯಚೆಲುವಾದಕೊನೆಯಲ್ಲಿ (ಹೂವು, ಅರುವಂತೆ) ಹಾಡು ಬಡದಿವೆ, ಮಳೆಯ ನೀರು ಈ ಹಳ್ಳಿಗಳ ಹಾಡಲ್ಲಿ "ಆನಂದದ್ರವವನ್ನುಉಕ್ಕುಸುತ್ತದೆ" ಈ ಸಂತೋಷಉಕ್ಕುವುದು ಈ ಪರಿಸರದಲ್ಲಿ.

ಶ್ರಾವಣ ಬರುವಿಕೆಯನ್ನು ಕವಿ ಪುಂಗವ ಪರಿಸರದಅದ್ಭುತ ಸೊಬಗನ್ನು ಹೀಗೆ ಹೇಳುತ್ತಾನೆ. ಶ್ರಾವಣ ಬಂತು ಕಾಡಿಸಿ । ಬಂತು ನಾಡಿಗೆ ಬಂತು ಬೀಡಿಗೆ । ಶ್ರಾವಣ ಬಂತು ಮಳೆಗಾಳಿಯು ಕಡಲನ್ನುದಾಟಿದ ಬಳಿಕ ಮೊದಲು ಪ್ರವೇಶಿಸುವುದು ಪಶ್ಚಿಮ ಘಟ್ಟದ ಬಳಿಕೆಯ ನಾಡನ್ನು ಹಾಗೂ ಅದು ವಿಶಾಲವಾದಜನ ಬಳಿಕೆಯ ನಾಡನ್ನು ಹಾಗೂ ಜನರು ವಾಸಿಸುವ ಬೀಡನ್ನುತಲುಪುತ್ತದೆ.

ಶ್ರಾವಣ ಬಂತು ಹಾಡಿಸಿ । ಬಂತುಗಾಡಿಗೆ
ಬಂತು ಬೀಡಿಗೆ । ಶ್ರಾವಣ ಬಂತು ॥
ಕಡಲಿಗೆ ಬಂತು ಶ್ರಾವಣ । ಕಣಿದ್ಹಾಂಗರಾವಣಾ
ಕುಣಿದಾವ ಗಾಳಿ । ಬೈರವನರೂಪ ತಾಳಿ ॥

ಶ್ರಾವಣದ ಈ ಮಳಿಗಾಳಿಯೇ ರಾವಣನೇಕುಣಿಯುತ್ತಿರುವನೇನೂಎನ್ನುವಷ್ಟು ಭೀಕರವಾಗಿದೆ.ವಿಶೇಷವೇನೆಂದರೆ, ಧಾರ್ಮಿಕ ಪುರಾಣಗಳಿಗೂ ಪರಿಸರಕ್ಕೂ ಅವಿನಾಭಾವ ಸಂಬಂಧವಿದೆ.ರಾವಣನಿದ್ದಿದ್ದು ಭಾರತದದಕ್ಷಿಣದಲ್ಲಿದ್ದ ಲಂಕೆಯಲ್ಲಿ ಭಾರತಕ್ಕೆ ಮುಂಗಾರು ಮಳೆ ಬರುವುದುದಕ್ಷಿಣ – ಪಶ್ಚಿಮದಿಂದಲೇ ಕಡಲಿನ ತೆರೆಗಳೂ ಅಲ್ಲೋಲ ಕಲ್ಲೋಲ ಮಾಡುವ ಶಕ್ತಿಶಾಲಿ ಗಾಳಿಯ ರೂಪವನ್ನು ಕುಣಿದಾವಗಾಳಿ, ಎನ್ನುವಎರಡೇ ಪದಗಳಲ್ಲಿ ಬೇಂದ್ರೆ ಬಿಚ್ಚಿಟ್ಟಿದ್ದಾರೆ.

ಆದರೆರಾವಣನಂತೆ ಈ ಮಳೆಗಾಳಿ ವಿನಾಶಕಾರಿಯಲ್ಲರಾವಣನು ಪೂಜಿಸುತ್ತಿದ್ದದೇವತೆಯಾದ ಶಿವನೇ ಅಂದರೆ ಬೈರವನೇ ಮಳಿಗಾಳಿಯ ರೂಪತಾಳಿ ಕಡಲಿನ ಮೇಲೆ ಕುಣಿಯುತ್ತಿರುವನೇನೂಎನ್ನುವ ವಿರಾಟ್‌ದರ್ಶನವನ್ನುಇಲ್ಲಿ ಬೇಂದ್ರೆತೋರಿಸುತ್ತಿದ್ದಾರೆ.ಬೈರವನನು ಸಹ ಭಯಂಕರನೇಆದರೆರಾವಣನಂತೆ ವಿನಾಶಕನಲ್ಲಿ ಮುಂಗಾರು ಮಳೆಗಾಳಿಯ ಎರಡು ರೂಪಗಳನ್ನು ಬೇಂದ್ರೆಯವರು ಈ ಎರಡು ಪ್ರತಿಬಿಂಬಗಳ ಮೂಲಕ ತೋರಿಸುತ್ತಿದ್ದಾರೆ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಶ್ರಾವಣ ಬಂತುಘಟ್ಟಕ್ಕೆ । ರಾಜ್ಯಘಟ್ಟಕ್ಕ
ಬಾನಮಟ್ಟಕ್ಕೆ
ಏರ್ಯಾವ ಮುಗಿಲು । ರವಿ ಕಾಣಿಹಾಡೆ ಹಗಲು ।
ಶ್ರಾವಣ ಬಂತು ಹೊಳಿಗೆ ಮತ್ತು ಮಳಿಗೆ
ಆಗ್ಯೇದ ಲಗ್ನ । ಅದರಾಗ ಭೂಮಿ ಮಗ್ನ ।

ಭೂಮಿಯ ಮೇಲೆ ಹರಡಿದ ಈ ಮೋಡಗಳು ಅಲ್ಲಿ ಹರಿಯುತ್ತಿರುವ ಪ್ರವಾಹಗಳಿಗೆ ಮಳೆಯನ್ನು ಸುರಿಸುತ್ತಿವೆ. ಮೋಡ ಹಾಗೂ ಹೊಳೆ ಒಂದಾಗುತ್ತಿರುವ ಈ ದೃಶ್ಯವು ಅವುಗಳ ಮಿಲನದಂತೆಕಾಣುತ್ತವೆ. ಕನ್ನಡದಲ್ಲಿ ಲಗ್ನಎಂದರೆಕೂಡುವುದು, ಮದುವೆಎನ್ನುವಅರ್ಥವಿದೆ.ಆದರೆ ಲಗ್ನದ ನಿಜವಾದಅರ್ಥವು ಹತ್ತಿಕೊಂಡು ಈ ಒಂದು ಸಮಯದಲ್ಲಿ ಭೂಮಿಯೇ ಶುಭ ಮುಹೂರ್ತದಲ್ಲಿ ಸಂತೋಷವಾಗಿರುತ್ತದೆ.

ಘಟ್ಟಕ್ಕೆಡಿಕ್ಕಿ ಹೊಡೆಯುತ್ತಿದ್ದ ಶ್ರಾವಣದ ಮೋಡಗಳು ಈಗ ಇನ್ನಷ್ಟುಎಂದರೆಆಕಾಶದೆತ್ತರಕ್ಕೆಏರಿವೆ (ಈ ವರ್ಣನೆ ಕಾಳಿದಾಸನ ಮೇಘದೂತವನ್ನು ನೆನಪಿಗೆ ತರುತ್ತದೆ.ಆಕಾಶದೆತ್ತರಕ್ಕೆಏರಿದ ಈ ಮೋಡಗಳು ತಮ್ಮ ಕೆಳಗಿನ ಭೂಮಿಯನ್ನೆಲ್ಲಾ ಕವಿದಿವೆ ಎನ್ನುವ ಸುಂದರ ಪರಿಸರ ಪ್ರಜ್ಞೆಕವಿಯ ಸಾಹಿತ್ಯದಲ್ಲಿದೆ.

ಅವರಇನ್ನೊಂದು ಭಾವಗೀತೆಯಲ್ಲಿ ಪರಿಸರದಜೀವ ಸಂಕುಲದ ಪಾತರಗಿತ್ತಿಚಿಟ್ಟೆಯನ್ನುಕಂಡು ಹಾಡುವಜೀವಶಾಸ್ತ್ರ ಪ್ರಾಣಿಶಾಸ್ತ್ರವನ್ನು ಬಲ್ಲವನಾಗಿದ್ದಾನೆ. ಕವಿಯತನ್ನ ಸಾಹಿತ್ಯದಲ್ಲಿ

ಪಾತರಗಿತ್ತಿ ಪಕ್ಕ ನೋಡಿದೇನಾ ಅಕ್ಕ
ಪಾತರಗಿತ್ತಿ ಪಕ್ಕ ನೋಡಿದೇನಾ ಅಕ್ಕ
ಪಾತರಗಿತ್ತಿ ಪಕ್ಕ ನೋಡಿದೇನಾ ಅಕ್ಕ
ಹಸಿರು ಹಚ್ಚಿ ಚುಚ್ಚಿ ಮೇಲಕ್ಕೆ ರಶಿಣ ಹಚ್ಚಿ
ಹಸಿರು ಹಚ್ಚಿಚುಚ್ಚಿ ಮೇಲಕ್ಕಿರಶಿಣ ಹಚ್ಚಿ

ಧಾರವಾಡದಟ್ಟವಾದ ಸುಂದರ ಪರಿಸರದಲ್ಲಿಇಂದು ಗಗನಚುಂಬ ಕಟ್ಟಡಗಳು ಆದರೆಆಧುನೀಕರಣದ ಭರಾಟೆಯಲ್ಲಿ ಈ ಜೀವ ಸಂಕುಲ ನಶಿಸಿಹೋಗುತ್ತಿದೆ. ಆ ಪರಿಸರದ ಪ್ರಜ್ಞೆಯ ಈ ಸಾಹಿತ್ಯದಲ್ಲಿ ಅಕ್ಕನಿಗೆ ಸಂಭೋದಿಸುತ್ತಾ ಪಾತರಗಿತ್ತಿ ಪಕ್ಕವನ್ನುರೆಕ್ಕೆಯನ್ನು ನೋಡಿದೆಯಾ ಎಷ್ಟು ಸುಂದರ ಹಸಿರು ಹಚ್ಚಿ ಚುಚ್ಚಿ ಮೇಲೆ ಅರಿಶಣ ಹಚ್ಚಿದ ಹಾಗೆ ಆ ಚುಚ್ಚಿಯ (ಚಿಟ್ಟೆಯ) ಸೂಕ್ಷ್ಮ ವರ್ಣನೆಯನ್ನು ಮಾಡುವುದರಜೊತೆಗೆಅದು ಹಾರಾಡುವಾಗಅದರರೆಕ್ಕೆಯ ಸೌಂದರ್ಯ "ಸಂಕಗಳ" ಹಾಗೆ ಮೇಲೆ ಕೆಳಗೆ ಮಾಡುವ ಸೌಂದರ್ಯವನ್ನು ಕವಿ ಬೆರಗಿನಿಂದ ನೋಡುವುದರಜೊತೆಗೆ ಸಣ್ಣ ಸಣ್ಣ ಕೀಟಗಳ ಸಂರಕ್ಷಣೆಯನ್ನು ಹೇಳುತ್ತಾನೆ.

ಬನ ಬನದಾಗಆಡಿ ಪಕ್ಕ ಹುಡಿ ಹುಡಿ ಬನ ಬನದಾಗಆಡಿ ಪಕ್ಕ ಹುಡಿ ಹುಡಿ ಹುಲ್ಲುಗಾವಲುಗಾರ ಹಳ್ಳಿ ಹುಡುಗಿ ಹಂಗಾ ॥ ಆ ನಿಸರ್ಗ ಸೌಂದರ್ಯಅಲ್ಲಿ ಬನದಲ್ಲಿ ಪಾತರಗಿತ್ತಿ ಸ್ವತಂತ್ರ್ಯ ಹುಡುಗಿಯ ಆ ಸಂಭ್ರಮಆಟವನ್ನು ಹೇಳುವದರ ಜೊತೆಗೆ ಪರಿಸರ ನೆನಪಿಸುತ್ತಾರೆ.

ಇಳಿದು ಬಾ ಭೂತಾಯಿ ಇಳಿದು ಬಾ

ಬೇಂದ್ರೆಯವರು ಈ ಭಾವಗೀತೆಯಲ್ಲಿ ಭೂವಿಗೆ ಬೇಕಾಗುವ ಜೀವ ಸಂಕುಲದ ಹವೆಯ ನಂತರ ಪರಿಸರದಉತ್ಪನ್ನ "ನೀರು" ಆ ನೀರಿನಅವಶ್ಯಕತೆ ನಮಗೆ ಎಷ್ಟಿದೆಎಂದರೆ 2022ನ್ನು ನಾವು "ಜಲ ವರ್ಷವೆಂದು" ಕರೆಯುತ್ತೇವೆ. ಆದಿ ಇಲ್ಲ ವೆಂದರೆಜೀವ ಸಂಕುಲ ಬದುಕುವುದುತುಂಬಾ ಕಷ್ಟ.

"ಆ ಗಂಗೆಯನ್ನುಅಥವಾ "ನೀರನ್ನು" ಹೇಗೆ ಭೂಮಿಗೆಕೈಮಾಡಿಕರೆಯುತ್ತಾರೆಂದರೆ ನೀನು ಹರನಜಡೆಯಿಂದು ಹರಿಯ ಪಾದದಿಂದಋಷಿಯತೊಡೆಯಿಂದ ನುಸಳಿಲಾ ದೇವದೇವರನ್ನು ತಣಿಸಿ ಬಾ, ದಿಗಿದಿಗಂತದಲ್ಲಿ ಹಣಿಸಿ ಬಾ ಚರಾಚರಗಳಿಗೆ ಉಣಿಸಿ ಬಾ ಇಳಿದು ಬಾಕಿ ತಾಯಿ ಇಳಿದು ಬಾ ಎನ್ನುವಅವರಅಂತಃಕರಣದ ಕಕ್ಕಳತೆಯನ್ನು ಎತ್ತಿತೋರಿಸುತ್ತದೆ. ಪರಿಸರದಲ್ಲಿಜೀವ ಜಂತುಗಳೆಲ್ಲಾ ನೀವು ಸಮಾಧಾನ ಪಡಿಸಿ ಬರಬೇಕೆನ್ನುತ್ತದೆ.ಕವಿಯ ಹೃದಯ.

'ನೀರು' ಗಂಗೆಯ ನಾನು ಬಂದರೆ ನಿನಗೆ ಪೊಡೆನುಡುವೆ ನಿನ್ನನ್ನುಉಟ್ಟುತೊಟ್ಟ ಸಂಭ್ರಮಿಸುವೆ ಏಕೆ ಎಡೆತಡವೆ ನೀನು, ತಡಮಾಡದೆ ಬೇಗ ಬಾ ಸುರಿಸೋಣ ಬಾ ಸ್ವರ್ಗವನ್ನುತೊರೆದ ಬಾ, ಬಯನ್ನು "ಜರಿದು" ಇಳಿದು ಬಾ ಇಳಿದು ಬಾ ತಾಯಿ ಇಳಿದು ಎಂದು ವಾತ್ಸಲ್ಯದಿಂದ ಪರಿಸರದಗಂಗೆಯನ್ನುಕರೆಯುವ ಕವಿ ಪುಂಗವರ ಮಾನವ್ಯಾದ ಕಳಕಳಿ ಅಗತ್ಯವಾದದ್ದು.

ನೀನು ನನ್ನ ತಲೆಯೊಳಗೆ ಹತ್ತಿರ, ಒಳಗೆ ಬಳಿಗೆ ನುಗ್ಗಿ ಬಾ, ಕಣ, ಕಣ, ತೋರಿಸಿ ಬಾ, ಉಸಿ, ಎಲೆ, ಎಳೆಸಿ, ನುಡಿಯ ಸಸಿ ಮೊಳಸಿ ಹಿಗ್ಗಿ ಬಾ, ಎದೆಯ ನೆಲೆಯಲ್ಲಿ ನೆಲೆಸಿ ಬಾ, ಜೀವಜಲದಲ್ಲಿ ಚಲಿಸಿ ಬಾ, ಮೂಲ ಹೊಲದಲ್ಲಿ ನೆಲೆಸಿ ರೈತನ ಸಂತೃಪ್ತಪಡಿಸಿ ಬಾ, ಎಂದು ಕವಿ ಮನ ಸಂಭ್ರಮದಿಂದಕರೆಯುತ್ತದೆ.

ತಾಯಿಯೇ ಕಂಚು ಚುಂಚಾಗಿ ಬಾ ನೀರು ನೀರಾಗಿ ಉರುಳಿ ಬಾ, ಹೊಡೆದು ಮರಳಿ ಬಾ, ದಯೆಯಿರದ ದೀನ ಹರೆಯಳಿದ ಹೀನ ನೀರಿರದ ಮೀನ ಕರೆಕರೆದ ಬಾ, ಇವರೆಲ್ಲರೂ ನಿನ್ನನ್ನುಕರೆಯುತ್ತಾರೆ, ನೀನು ಅವರುಇರವರೆನ್ನದೇ ಮುಂಗಾರು, ಹಿಂಗಾರು ಬೆಳೆಯ ಭೂತಾಯಿ ಸಮೃದ್ಧಿಯಂತೆ ನೀನು ಇಳಿದು ಬಾ ಎಂದು ಹಂಬಳಿಸಿ ಕರೆಯುತ್ತಾನೆ.

ಕೊಳೆಯ ತೊಳೆವರು ಇಲ್ಲ, ಬೇರೆ ಶಕ್ತಿಗಳ ಹೊಲ ಬಾ, ಹೀಗೆ ಮಾಡಿದರುಅಲ್ಲ ಬಾ, ನಾಡ ನುಡಿಯನುತುತ್ತ ಬಾ, ನಮ್ಮ ನಾಡವರಿಗೂ ಸುತ್ತ ನೀನು ಸುರಿಯಬೇಕು ನೀನು ಇಲ್ಲಿದೆ ಮನುಕುಲ ಸಲುಹಲು ನೀನು ಬಿಡದೆ ಬಾ, ಅವನು ದೈಹಿಕ ಕೊಳೆ ತೊಳೆಯಲಿ ಅವನ ದಾಹತೀರಿಸಲು ನೀನು ಬಾ ಎಂದುಅಂಗಲಾಚಿ ಕವಿ ಕರೆಯುತ್ತಾನೆ.

ಹರಕೆ ಸಂದಂತೆ ಮಮತೆ ಮೀಯುವಂತೆತುಂಬಿ ಬಂದಂತೆದುಮ್, ಡಮರ್ಎಂದಂತೆದುಡುಕಿ ಬಾ, ನಿನ್ನಕಂದನ್ನ ಹುಡಕಿ ಬಾ, ಹರನ ಹೊಸತಾಗಿ ಬಾ, ಬಾಳು ಬೆಳಕಾಗಿ ಬಾ, ಶಂಭು ಶಿವಹರನ ಜತ್ತೆ ಬಾ, ದತ್ತ ನರಹರಿಯ ಮತ್ತೇಅಂಬಿಕಾತನಯ ನತ್ತೆ ಬಾ, ಎಂದುದೇವಾನು ದೇವತೆಗಳನ್ನು ಮೊರೆ ಹೋಗುವ ರೀತಿಅದ್ಭುತವಾಗಿದೆ.

ಗಂಗೆಯತಾಯಿಯೆನ್ನು ವರ್ಣಿಸುವರೀತಿ ನೀನು ಎಚ್ಚೆತ್ತುಎದ್ದುಆಕಾಶದತ್ತ ಧರೆಗಿಳಿಯಲಿದ್ದು ಧೀರೆ ನೀನು ನಿರವಾಗಜಾತ, ವರ ಪಾಂಚಾತತಾರರಕುಸುಮದಿಂದ ವೃಂದಾರದಂದ್ಯೆ ಮಂಧಾರಗಂದೆಎಂದು ಪರಿಸರದ ಹವೆ, ನೀರು, ಆಹಾರಗಳು ಒಂದರಲ್ಲಿ ಬಂದರಅಭಿನಾಭಾವ ಸಂಬಂಧದ ಸೂಕ್ಷ್ಮತೆ ಎಳೆಯನ್ನು ಕವಿಯ ಸಾಹಿತ್ಯವುತುಂಬಿ ಕೊಡುತ್ತದೆ.

ಸಾಹಿತ್ಯದಲ್ಲಿ ಪರಿಸರತಂದಾಗ ಮಾತ್ರ ನಮ್ಮ ಸಂರಕ್ಷಣೆಯ ಜಾಸ್ತಿಯಾಗುತ್ತದೆ.ನಮ್ಮ ನೈಸರ್ಗಿಕ ಅವಾಸ್ಥಾನಗಳು ಪರಿಸರ ವ್ಯವಸ್ಥೆಗಳು, ಸಸ್ಯಗಳು ಮತ್ತು ವನ್ಯ ಜೀವಿಗಳನ್ನು ರಕ್ಷಿಸುವಅಭ್ಯಾಸವೇ ಪರಿಸರ ಸಂರಕ್ಷಣೆ.

ಜೀವ ವೈವಿದ್ಯತೆಯನ್ನುರಕ್ಷಿಸುವುದು ಮತ್ತು ಸಂರಕ್ಷಿಸುವುದುಇದರಗುರಿಯಾಗಿದೆ.ಪ್ರಕೃತಿ ಸಂರಕ್ಷಣೆಆಂತರಿಕ ಮೌಲ್ಯಜನರಿಗೆ ನೀಡುವಜೀವಾಧಾರವಾಗಿದೆ.ಪರಿಸರವು ನಮಗೆ ಬದುಕಲು ಮತ್ತುಅಭಿವೃದ್ಧಿ ಪಡಿಸಲುಅಗತ್ಯವಿರುವ ಸಂಪನ್ಮೂಲಗಳನ್ನು ಒದಗಿಸುತ್ತದೆ.ಇದುಆಹಾರ, ಶುದ್ಧ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ನೀರು, ಔಷಧಗಳು ಮತ್ತು ನೈಸರ್ಗಿಕ ವಿಕೋಪಗಳಿಂದ ರಕ್ಷಣೆ ನೀಡುವುದರಿಂದ ಮಾನವನ ಉಳಿವಿಗೆ ಅತ್ಯಗತ್ಯ ಪರಿಸರ ವ್ಯವಸ್ಥೆಗಳು, ಕಾರ್ಬನ್ ಸೀಕ್ವೆಸ್ಟ್ರೇಶನ್, ನೀರಿನ ಶೋಧನೆ, ಮಣ್ಣಿನರಚನೆ ಮತ್ತು ಪೋಷಕಾಂಶಗಳ ಸೈಕಿಂಗನಂತಹ ಪ್ರಮುಖ ಸೇವೆಗಳನ್ನು ನಿರ್ವಹಿಸುತ್ತವೆ. ಇದು ಮಾನವಜೀವನ ಮತ್ತುಆರ್ಥಿಕಚಟುವಟಿಕೆಗೆಅವಶ್ಯಕವಾಗಿದೆ.

ಆಧಾರಗ್ರಂಥಗಳು :

1. ಬೇಂದ್ರೆಯವರ ಸಮಗ್ರ ಭಾವಗೀತೆಗಳು.
2. ಜಿ.ಎ. ಕುಲಕರ್ಣಿಯವರ ಬೇಂದ್ರೆ ಮತ್ತು ನಾನು.
3. ಔದುಂಬರಗಾಥಾ
4. ಶ್ರಾವಣ
5. ಪಾತರಗಿತ್ತಿ ಪಕ್ಕ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

Original Article

ಜೈನ ಸಾಹಿತ್ಯ ಮತ್ತು ಧರ್ಮ

ಶ್ರೀನಿವಾಸ್ ಬಿ.ಆರ್.
ಸಹಾಯಕ ಪ್ರಾಧ್ಯಾಪಕರು
ಶೇಷಾದ್ರಿಪುರಂ ಕಾಲೇಜು ತುಮಕೂರು

Manuscript ID:
JRD -2026-180437
ISSN: 2230-9578
Volume 18
Issue 4(II)
Pp.127-131
April 2026
Submitted: 16 Mar. 2026
Revised: 05 Apr. 2026
Accepted: 14 Apr. 2026
Published: 30 April 2026

ಸಾರಲೇಖ :

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಧರ್ಮ ಮತ್ತು ಸಾಹಿತ್ಯದ ಸಂಬಂಧ ರಕ್ತ ಮತ್ತು ಮಾಂಸಗಳ ಭಾವದಿಂದ ಕೂಡಿದೆ. ಜೈನ,ಶೈವ, ವೈದಿಕ, ಕವಿಗಳು ಸಾಹಿತ್ಯರಚನೆ ಮಾಡಿರುವ ಸಂದರ್ಭದಲ್ಲಿ ತಾವು ಆಶ್ರಯಿಸಿರುವ ಧರ್ಮವನ್ನು ವಸ್ತು ದ್ರವ್ಯವಾಗಿಸಿಕೊಂಡು ಕಾವ್ಯಗಳನ್ನು ಬರೆದಿದ್ದಾರೆ. ಮೂಲತಃ ಕವಿಗಳಾದ ಅವರಲ್ಲಿ ಕಾವ್ಯಧರ್ಮ ಹಾಗೂ ಆಶ್ರಯ ಧರ್ಮಗಳು ಹೇಗೆ ಮೇಳೈಸಿವೆ ಎಂಬುದು ಕುತೂಹಲದ ವಿಚಾರ. ಆದಿಕವಿ ಪಂಪನೆ ಲೌಕಿಕ ಆಗಮಿಕಗಳೆಂಬ ತಾತ್ವಿಕ ನಿಲುವು ತಾಳಿದಂತೆ **"ಬೆಳಗುವೆನಿಲ್ಲಿ ಲೌಕಿಕಮಂ ಅಲ್ಲಿ ಜಿನಾಗಮಮಂ "** ಎಂದು, ತನ್ನ ದೃಷ್ಟಿಯನ್ನು ಘೋಷಿಸಿದ್ದಾನೆ.ಕವಿ ಹೇಳುವ ದೃಷ್ಟಿ ನಿರ್ದೇಶಕ ಧೋರಣೆಗೂ ಕಾವ್ಯದಲ್ಲಿ ವ್ಯಕ್ತವಾಗುವ ವಸ್ತುಧ್ವನಿಗೂ ಇರುವ ಸಂಬಂಧ ವಿಸ್ಮಯಕಾರಿಯಾದದ್ದು.

ವಿಶ್ವದ ಮಹಾನ್‌ಧರ್ಮಗಳ ಸಾಲಿಗೆಸೇರುವ ಶ್ರೇಷ್ಠ ಭಾರತೀಯ ಧರ್ಮಗಳೆಂದರೆ ಜೈನ, ಶೈವ, ಮತ್ತು ವೈದಿಕ ಧರ್ಮ. ಸುಮಾರು 2500 ವರ್ಷಗಳಿಂದಲೂ ಭಾರತೀಯ ಸಂಸ್ಕೃತಿಯಲ್ಲಿ ಹಾಸು ಹೊಕ್ಕಾಗಿರುವ ಧರ್ಮಗಳಿವು. ಮಾನವ ಕಲ್ಯಾಣವನ್ನು ಕೇಂದ್ರವಾಗಿಟ್ಟುಕೊಂಡು ಅಲೌಕಿಕ ನೆಲೆಗೆ ಮಾನವನನ್ನು ಆಹ್ವಾನಿಸಿದ ಧರ್ಮಗಳು. ಮಾನವನನ್ನು ಅಲೌಕಿಕ ನೆಲೆಯ ಉತ್ತುಂಗಕ್ಕೆ ಏರಿಸುವ ಮಹತ್ಕಾರ್ಯದಲ್ಲಿ ಈ ಧರ್ಮಗಳು ಮತ್ತು ಧಾರ್ಮಿಕ ಕೃತಿಗಳು ಕೆಲಸ ಮಾಡಿವೆ.

ಮುಖ್ಯ ಪದಗಳು : ಕನ್ನಡಸಾಹಿತ್ಯ, ಧರ್ಮ, ಲೌಕಿಕ, ಆಗಮಿಕ, ಜೈನಧರ್ಮ,

ಪ್ರಸ್ತಾವನೆ

ಕನ್ನಡ ಸಾಹಿತ್ಯವೆಂದರೆ ಒಂದು ಅರ್ಥದಲ್ಲಿ ಧಾರ್ಮಿಕ ಸಾಹಿತ್ಯವೇ ಎನ್ನುವ ಮಟ್ಟಕ್ಕೆ ಕೃತಿಗಳು ಹೇರಳವಾಗಿ ರಚನೆಯಾಗಿವೆ ,ಕನ್ನಡ ಸಾಹಿತ್ಯದ ಪ್ರಾರಂಭಾವಸ್ಥೆಯ ಕಾವ್ಯ ರಚನೆಯಲ್ಲಿ ಜೈನ ಕವಿಗಳೇ ಮೇಲುಗೈ ಸಾಧಿಸಿದ್ದಾರೆ ಎಂಬುದು ಸರ್ವವಿಧಿತ. ಈ ಅವಧಿಯಲ್ಲಿ ರಚನೆಯಾದ ಕಾವ್ಯಗಳಲ್ಲಿ ಬಹುತೇಕ ಕಾವ್ಯಗಳು ಧಾರ್ಮಿಕ ಕಾವ್ಯಗಳು ಎಂಬುದು ಸತ್ಯ ಈ ಕಾಲಘಟ್ಟದಲ್ಲಿ ಕವಿಗಳು ತಾವು ಹುಟ್ಟಿ ಬಂದ ಧರ್ಮದಪರವಾಗಿ ಕಾವ್ಯಗಳನ್ನು ಬರೆಯತೊಡಗಿದ್ದರ ಫಲವೇ ಧಾರ್ಮಿಕ ಕೃತಿಗಳ ಸೃಷ್ಟಿಗೆ ಕಾರಣವಾಗಿದೆ. ಲೌಕಿಕ ಕೃತಿಗಳು ಈ ಕಾಲಘಟ್ಟದಲ್ಲಿ ರಚನೆಯಾಗಿದ್ದರೂ ಹೆಚ್ಚು ಒಲವು ಧಾರ್ಮಿಕ ಕಾವ್ಯಗಳಕಡೆಗೆ ಕಂಡುಬರುತ್ತದೆ. ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆ ಎಂದರೆ ಧರ್ಮದ ಚರಿತ್ರೆ, ಜೈನ ಸಾಹಿತ್ಯ ಚರಿತ್ರೆಯಾಗಿಯೇ ಕಂಡುಬರುತ್ತದೆ. ಶಾಸನಗಳಿಂದ ಹಿಡಿದು 12ನೇಶತಮಾನದವರೆಗಿನ ಸಾಹಿತ್ಯವನ್ನು ಪರಿಭಾವಿಸಿದಾಗ ಸಾಹಿತ್ಯವು ಒಂದಲ್ಲಾ ಒಂದು ರೀತಿಯಲ್ಲಿ ಶೇಕಡ 80ಭಾಗ ಧರ್ಮ ಸಂಬಂಧಿಯಾಗಿ ರಚನೆಯಾಗಿರುವುದನ್ನು ಕಾಣುತ್ತೇವೆ. ಅಧಿಕೃತವಾಗಿ ವಡ್ಡಾರಾಧನೆ ಇಂದ; ಹಿಡಿದು ಆಂಡಯ್ಯನವರೆಗೂ ಈ ಮಾತು ಪರಿಗಣಿಸಬಹುದಾಗಿದೆ.

ಅಂದಿನ ರಾಜರು ತಮ್ಮ ಮತಧರ್ಮ ಪ್ರಚಾರ ಮಾಡಲು ಕವಿಗಳಿಗೆ ಆಶ್ರಯ ನೀಡಿದ್ದರೆ, ಅಂದಿನ ರಾಜರುಗಳು ಮತಧರ್ಮ ಪ್ರಚಾರ ಮಾಡಲು ಕವಿಗಳಿಂದ ಆಸರೆ ಪಡೆದರು. ಆಶ್ರಯ ಪಡೆದ ಕವಿಗಳು ಈ ಅವಕಾಶವನ್ನು ಉಪಯೋಗಿಸಿಕೊಂಡು ತಮ್ಮ ಕವಿ ಪ್ರತಿಭೆ ಮೆರೆದಿರುವುದು ನೋಡಬಹುದು. ಜೊತೆಗೆ ಧರ್ಮ ಪ್ರಸಾರವು ಆಯಾ ಕವಿಯ ಅನಿವಾರ್ಯ ಸ್ಥಿತಿಯ ಒತ್ತಡ ವಾತಾವರಣವಾಗಿದ್ದನ್ನು ಗಮನಿಸಬೇಕು. ಹಾಗಾಗಿ ಧರ್ಮದ ವಿಷಯವು ರಾಜರ ಮತ್ತು ಕವಿಗಳ ಆದ್ಯ ಕರ್ತವ್ಯವೆಂಬಂತೆ ಸಾಹಿತ್ಯ ಕೃತಿಯಲ್ಲಿ ಅವಕಾಶ ಪಡೆಯಲು ಕಾರಣವಾಗಿದೆ ಎಂಬುದನ್ನು ಹೇಳಬೇಕಾಗಿದೆ. ಕನ್ನಡ ಸಾಹಿತ್ಯವನ್ನು ವಿಭಾಗಿಸಿ ಕೊಳ್ಳುವಾಗ ಮತಧರ್ಮದ ಆಧಾರದಿಂದ ವಿಭಾಗಿಸುವುದು ನೋಡಿದರೆ ಸಾಹಿತ್ಯದಲ್ಲಿ ಮತಧರ್ಮಕ್ಕೆ ಕೊಟ್ಟಿರುವ ಪ್ರಾಶಸ್ತ್ಯದ ಅರಿವಾಗದಿರದು. 12ನೇ ಶತಮಾನದ ವರೆಗಿನ ಸಾಹಿತ್ಯವನ್ನು ಬಹುಕಾಲ ತುಂಬಿರುವುದು ಧರ್ಮಗಳೇ ಹೊರತು ಮಾನವೀಯ ಧರ್ಮಗಳೆಲ್ಲ ಎಂಬ ಆಶಯವನ್ನು ಪ್ರಾಚೀನ ಸಾಹಿತ್ಯದಿಂದ ನೋಡಬಹುದಾಗಿದೆ. ಹಾಗೆ ನೋಡಿದರೆ ಸಾಹಿತ್ಯ ರಚನೆಯಾಗುವುದಕ್ಕೂ ಆಶ್ರಯವಾಗಿ ನಿಂತದ್ದೇ ಧರ್ಮವಲ್ಲವೇ. ತಮ್ಮ ತಮ್ಮ ಮತಧರ್ಮಗಳನ್ನು ಮುನ್ನೆಲೆಗೆ ಕೊಂಡೊಯ್ಯಲು ಆಯಾ ಧರ್ಮದ ರಾಜರು ಶ್ರೀಮಂತರು ತಮ್ಮ ಧರ್ಮದಲ್ಲಿರುವ ಉತ್ತಮ ಅಂಶಗಳನ್ನು ಪ್ರಚಾರ ಮಾಡುವುದರ ಮೂಲಕ ಇತರ ಧರ್ಮಿಯರನ್ನು ತನ್ನೆಡೆಗೆ ಸೆಳೆಯಲು ಅನೇಕ ಉಪಾಯಗಳನ್ನು ಕಂಡುಕೊಂಡರು.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಶ್ರೀನಿವಾಸ್ ಬಿ.ಆರ್.ಸಹಾಯಕ ಪ್ರಾಧ್ಯಾಪಕರು ಶೇಷಾದ್ರಿಪುರಂ ಕಾಲೇಜು ತುಮಕೂರು

How to cite this article:
ಶ್ರೀನಿವಾಸ್ ಬಿ.ಆರ್. (2026).ಜೈನ ಸಾಹಿತ್ಯ ಮತ್ತು ಧರ್ಮ. *Journal of Research and Development, 18(4(II)), 127–131.* https://doi.org/10.5281/zenodo.19396902

Quick Response Code:

Website:
https://jrdrvb.org/

DOI:
10.5281/zenodo.19396902

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

ಕನ್ನಡದ ಮೊಟ್ಟ ಮೊದಲ ಉಪಲಬ್ದ ಕೃತಿ ಎಂದು ಗುರುತಿಸಿಕೊಳ್ಳುವ **ಶ್ರೀವಿಜಯನ ಕವಿರಾಜಮಾರ್ಗವು** ಅಲಂಕಾರ ಕೃತಿಯಾದರೂ ಧರ್ಮದ ಬಗ್ಗೆ ಇದರಲ್ಲಿ ಲಭ್ಯವಾಗುವ ಮಾಹಿತಿ ತುಂಬಾ ಅದ್ಭುತವಾದದ್ದು. ಕೃತಿಕಾರನಾದ ಶ್ರೀವಿಜಯನು **"ಕಸವರವೆಂಬುದು ನೆರೆ ಸೈರಿಸಲಾರ್ಪೊಡೆ ಪರ ವಿಚಾರಮುಂ ಪರಧರ್ಮ ಮುಂ"** ಎಂಬ ಸಾರವತ್ತಾದ ವಾಕ್ಯದ ಮೂಲಕ ನಮ್ಮನ್ನು ಕೈಬೀಸಿ ಕರೆಯುತ್ತಾನೆ. ಕನ್ನಡಿಗರು ಧರ್ಮಸಹಿಷ್ಣುಗಳಾಗಿದ್ದರು ಎಂಬುದನ್ನು ಮೊದಲು ಉಲ್ಲೇಖಿಸುವ ಈ ಗ್ರಂಥದಲ್ಲಿ ಪರರವಿಚಾರಗಳನ್ನು ಪರರಧರ್ಮವನ್ನು ಸಹಿಸುವುದೇ ನಿಜವಾದ ಸಂಪತ್ತು ಎಂಬ ಮೌಲಿಕ ಮಾತುಗಳನ್ನಾಡಿದ್ದಾನೆ.

"ಶಿವಕೋಟ್ಯಾಚಾರ್ಯನ ವಡ್ಡಾರಾಧನೆ" ಜೈನಧರ್ಮವನ್ನು ಬೋಧಿಸುವ ಮತ್ತು 19ಕಥೆಗಳ ಒಂದು ಗ್ರಂಥ. ಹಳೆಗನ್ನಡ ಶೈಲಿಯಲ್ಲಿ ರಚಿತವಾಗಿರುವ ಪ್ರಪ್ರಥಮ ಗದ್ಯಕೃತಿ. ಇದು ಸಂಸಾರದ ನಶ್ವರತೆಯನ್ನು ಜೀವಿಯ ಆಸೆ, ಆಮಿಷಗಳು ಹೇಗೆ ಬಾಳಿನಲ್ಲಿ ಬೆನ್ನುಹತ್ತುತ್ತವೆ ಎಂಬುದನ್ನು ಬಿಡಿಬಿಡಿ ಕಥೆಗಳ ಮೂಲಕ ಸುಂದರವಾಗಿ ನಿರೂಪಿಸಿರುವ ಕೃತಿ. ಜೈನಧರ್ಮ ಪ್ರಚಾರವನ್ನೇ ಉದ್ದೇಶವಾಗುಳ್ಳ ಈ ಕೃತಿಯಲ್ಲಿ ತಪಸ್ಸಿಗೆ ವಿಘ್ನಕಾರಿಗಳಾದ ಉಪಸರ್ಗಗಳನ್ನು ಸಂಯಮದಿಂದ ತಾಳಿಕೊಂಡು ಮೋಕ್ಷ ಪಡೆದ ಜೈನ ಮುನಿಗಳನ್ನು ಕುರಿತ ಧಾರ್ಮಿಕ ಕಥಾನಕ ಇಲ್ಲಿದೆ .ಧಾರ್ಮಿಕ ಅಂಶಗಳ ಪ್ರಕಟಣೆ ಈ ಕೃತಿಯಲ್ಲಿ ಪ್ರಮುಖವಾಗಿ ಕಂಡುಬರುತ್ತದೆ. ಇಲ್ಲಿನ 19ಕಥೆಗಳಲ್ಲಿ ಜೀವನ ಹಾಗೂ ಕಾವ್ಯಸೌಂದರ್ಯ ಮಾತ್ರವಲ್ಲದೆ ಆಧ್ಯಾತ್ಮಿಕ ಹಾಗೂ ಅಲೌಕಿಕವಾದ ಸುಂದರ ಭಾವನೆಗಳ ಸಾಮರಸ್ಯವನ್ನು ಕಾಣಬಹುದು. ಹಲವು ವಿಶಿಷ್ಟ ಗುಣಗಳಿಂದ ಇದು ಕನ್ನಡ ಸಾಹಿತ್ಯದಲ್ಲಿ ಉತ್ಕೃಷ್ಟ ಕಥಾ ಸಂಕಲನವಾಗಿದೆ ಎಂದು ಧಾರಾಳವಾಗಿ ಹೇಳಬಹುದು. ವಡ್ಡಾರಾಧನೆಯಲ್ಲಿ ಜೈನಧರ್ಮದ ಉತ್ತಮ ಅಂಶಗಳನ್ನು ಪ್ರಕಟಪಡಿಸುವ ಉದ್ದೇಶ ಕವಿಗಿದ್ದು ಅದಕ್ಕಾಗಿ ಕಥನ ಮಾರ್ಗವನ್ನು ಆರಿಸಿಕೊಂಡಿದ್ದಾನೆ.

ಆದಿ ಕವಿಯಾದ ಪಂಪನ ಎರಡು ಕೃತಿಗಳು ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ, ಕನ್ನಡ ಸಾಹಿತ್ಯದಲ್ಲಿ ಹೆದ್ದಾರಿಯನ್ನೇ ಉಂಟುಮಾಡಿದವು. ಪಂಪನು ಹೇಳಿದ ಹಾಗೆ **"ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ"** ಎಂಬುದು ಮುಂದಿನ ಕವಿಗಳಿಗೆ ಕಾವ್ಯರಚನೆಯ ಸತ್‌ಸಂಪ್ರದಾಯವನ್ನು ಹಾಕಿಕೊಟ್ಟಂತಾಯಿತು. ನಂತರ ಬಂದ ಜೈನಕವಿಗಳು ಪಂಪನ ಜಾಡನ್ನೇ ತುಳಿದಿದ್ದರಿಂದ ಪಂಪನನ್ನು ಆದಿಕವಿ ಎಂದು ಮಾರ್ಗಸಂಪ್ರದಾಯದ ಕವಿಎಂದು ಕರೆಯುವಂತಾಯಿತು. ಪಂಪನ ಕೃತಿಯಾದ ಆದಿಪುರಾಣದಲ್ಲಿ ಜಿನಾಗಮನಕ್ಕೆ ಸಂಬಂಧಿಸಿದ ಧಾರ್ಮಿಕ ಅಂಶಗಳು ಪ್ರತಿಪಾದನೆಯಾಗಿದ್ದು, ವಿಕ್ರಮಾರ್ಜುನ ವಿಜಯದಲ್ಲಿ ಲೌಕಿಕ ವಸ್ತು ವಿಷಯಗಳು ಪ್ರಧಾನವಾಗಿ ಮೂಡಿಬಂದಿವೆ. ಆದಿಪುರಾಣದಲ್ಲಿ ಜೈನಧರ್ಮದ ತತ್ವಗಳನ್ನು ಹೇಳುವ ಪ್ರಚಾರಕರಾಗಿ ಕಡೆಯವರೆಗೂ ಅವುಗಳನ್ನು ಸಹಜ ಸುಂದರವಾಗಿ ಇತರರಿಗೆ ಪ್ರಿಯವಾಗುವಂತೆ ತಿಳಿಹೇಳುವ ಕುಶಲ ಕವಿಯಾಗಿರುವುದು ಗಮನಾರ್ಹಸಂಗತಿ.

ಒದಗಿಬಂದ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಜೈನಧರ್ಮದವನಾಗಿ ಆ ಧರ್ಮದ ಪ್ರಭಾವಕ್ಕೆ ಒಳಗಾಗಿ ಅದೇ ಧರ್ಮದ ಪ್ರವರ್ಧಮಾನಕ್ಕಾಗಿ ಕಾವ್ಯ, ಧಾರ್ಮಿಕಕಾವ್ಯವನ್ನು ಬರೆದದ್ದು ಈ ಸಂದರ್ಭದಲ್ಲಿ ಅವಶ್ಯಕತೆಯಾಗಿ ಉಳಿಯದೆ ಮುಂದಿನ ಕವಿಗಳಿಗೆ ಒಂದು ಅನುಸರಣೆಯ ಸಂಪ್ರದಾಯವಾದುದಕ್ಕೆ ಪಂಪನ ದೈತ್ಯ ಪ್ರತಿಭೆಯೇ ಕಾರಣವಾಗಿದೆ. ಜೈನನಾದ ತಾನು ಜೈನನಲ್ಲದ ರಾಜನೊಬ್ಬನು ತನ್ನ ಪರಮ ಸ್ನೇಹಿತನೂ ಆದಾಗ ಸಹಜವಾಗಿಯೇ ಒಂದೆಡೆ ತನ್ನ ರಾಜನ ಬಗೆಗಿದ್ದ ಸ್ನೇಹ ನಿಷ್ಠೆಯನ್ನು ಮತ್ತೊಂದೆಡೆ ತನ್ನ ಧರ್ಮನಿಷ್ಠೆಯನ್ನು ಪ್ರಕಟಿಸಬೇಕಾದ ಉಭಯಬದ್ಧತೆಗೆ ಒಳಗಾಗಿದ್ದರಿಂದ ಅವನ ಕಾವ್ಯ ಪ್ರತಿಭೆ ದ್ವಿಮುಖವಾಯಿತಿಲ್ಲಿ. ಗಮನಿಸಬೇಕಾದ ವಿಷಯವೆಂದರೆ ಪಂಪನಿಗೆ ಅರಿಕೇಸರಿಯ ಪ್ರತಾಪವನ್ನು ಹೇಳುವುದಷ್ಟೇ ಮುಖ್ಯವಾಗಿಲ್ಲ. ಅದರಾಚೆಗೆ ಧರ್ಮದೊಂದಿಗೆ ಬೆರೆತು ಹೋಗಿರುವುದನ್ನು ಹೇಳಬೇಕಾಗಿತ್ತು. ಪಂಪನ ಕಾಲಕ್ಕಾಗಲೇ ಪ್ರಭುತ್ವ ಸಂಪೂರ್ಣವಾಗಿ ಧರ್ಮದೊಂದಿಗೆ ಬೆರೆತು ಹೋಗಿದ್ದರಿಂದ ಧರ್ಮದ ಪ್ರಚಾರ ಕಾರ್ಯವೇ ಕಾವ್ಯದ ಪರಮೋದ್ದೇಶ ಸಾದಿಸುವುದಾಗಿತ್ತು. ಕವಿಗಳು ಕಾವ್ಯಧರ್ಮ ಮತ್ತು ಧರ್ಮಕಾರ್ಯ ಎರಡನ್ನು ಮಾಡುವ ಮೂಲಕ ರಾಜನ ಋಣವನ್ನು ತೀರಿಸಲಾಗುತ್ತಿತ್ತು. ಮತ್ತು ಪಂಪನ ಆದಿಪುರಾಣವು ಜೈನಧರ್ಮದ ಪ್ರಥಮ ತೀರ್ಥಂಕರರಾದ ಆದಿನಾಥನ ಜೀವನ ಚರಿತ್ರೆಯನ್ನು ಚಿತ್ರಿಸುತ್ತದೆ. ಪಂಪ ಧರ್ಮವನ್ನು ಕೇವಲ ಆಚರಣೆಯಾಗಿ ನೋಡದೆ ವಿಕಾಸವಾಗಿ ನೋಡುತ್ತಾನೆ **"ಅರಿವಂ ಅನಿಸುವುದು ಧರ್ಮಂ"** ಯಾವುದು ಅರಿವನ್ನು ಮೂಡಿಸುತ್ತದೆ ಅದೇ ಧರ್ಮ ಎಂಬುದು ಪಂಪನ ಪ್ರಸಿದ್ಧ ಉಕ್ತಿ. ಅವನ ಪ್ರಕಾರ ಕಾವ್ಯ ಮತ್ತು ಧರ್ಮಗಳು ಬೇರೆ–ಬೇರೆ ಅಲ್ಲ.

ಆದಿಪುರಾಣವು ಲೌಕಿಕ ಸುಖ ಮತ್ತು ಆಧ್ಯಾತ್ಮಿಕ ಮುಕ್ತಿ ಎರಡನ್ನು ಚರ್ಚಿಸುತ್ತದೆ. ವೃಷಭದೇವನು ರಾಜನಾಗಿ ರಾಜ್ಯಭಾರ ಮಾಡುವಾಗ ಲೌಕಿಕ ಸಂಪತ್ತಿನ ಮಹತ್ವವನ್ನು ತೋರಿಸುತ್ತದೆ. ಇಂದ್ರಜಾಲದಂತೆ ಕ್ಷಣಿಕವಾದ ಸುಖವನ್ನು ಬಿಟ್ಟು ಸನ್ಯಾಸತ್ವ ಸ್ವೀಕರಿಸುವ ಮೂಲಕ ಆತ್ಮೋದ್ಧಾರದ ಹಾದಿಯನ್ನು ಜೈನ ಧರ್ಮದ ತತ್ವಗಳಾದ ಅಹಿಂಸೆ ಸಿದ್ಧಾಂತ, ಸಮಾನತೆಗಳನ್ನು ಪಂಪ ತನ್ನ ಕೃತಿಯಲ್ಲಿ ಪ್ರತಿಪಾದಿಸಿದ್ದಾನೆ. ಪ್ರಾಣಿ ಹಿಂಸೆ ಮಾಡದಿರುವುದು ಜೈನಧರ್ಮದ ಮೂಲಾಧಾರವಾಗಿದೆ. ಮನುಷ್ಯನ ಸುಖ–ದುಃಖಗಳಿಗೆ ಅವನ ಕರ್ಮಗಳೇ ಕಾರಣ, ಎಂಬ ತತ್ವ **"ಮನುಷ್ಯ ಜಾತಿ ತಾನೊಂದೇ ವಲಂ"** ಎನ್ನುವ ಸಮಾನ ತತ್ವಗಳನ್ನು ಪ್ರತಿಪಾದಿಸಿದ್ದಾನೆ. ಮತ್ತು ಬಾಹುಬಲಿಯ ಸಂಘರ್ಷದ ಮೂಲಕವೂ ಧರ್ಮವನ್ನು ಇಲ್ಲಿ ಎತ್ತಿಹಿಡಿದಿದ್ದಾನೆ. ಬಾಹುಬಲಿ ಯುದ್ಧದಲ್ಲಿ ಗೆದ್ದರು ರಾಜ್ಯ ಅಶಾಶ್ವತವೆಂಬ ಅರಿವುಮೂಡಿ ತನ್ನ ಅಣ್ಣನಿಗೆ ರಾಜ್ಯವನ್ನು ಬಿಟ್ಟುಕೊಟ್ಟು ತಪಸ್ಸಿಗೆ ಹೋಗುವುದು ತ್ಯಾಗ ಮತ್ತು ಧರ್ಮದ ಉತ್ತುಂಗವನ್ನು ತೋರಿಸುತ್ತದೆ. ಭೌತಿಕ ಸುಖ ಮತ್ತು ಆಧ್ಯಾತ್ಮಿಕ ಮುಕ್ತಿ ಸಂಘರ್ಷವೇ ಆದಿಪುರಾಣ. ಆದಿಪುರಾಣದಲ್ಲಿ ಧರ್ಮಜ್ಞಾನವನ್ನು, ಜೈನಧರ್ಮದ ಪ್ರಮುಖ ತತ್ವಗಳಾದ ಅಹಿಂಸಾ ಅನೇಕಾಂತವಾದ ಮತ್ತು ಸತ್ಯ ಇತ್ಯಾದಿಗಳನ್ನು ಸ್ಪಷ್ಟವಾಗಿ ನಿರೂಪಿಸಲಾಗಿದೆ. ಧರ್ಮವು ಜೀವಹಿಂಸೆಯನ್ನು ತೀವ್ರವಾಗಿ ವಿರೋಧಿಸುತ್ತದೆ ಪಾತ್ರಗಳ ನಡೆ–ನುಡಿಗಳ ಮೂಲಕ ಅಹಿಂಸೆಯ ಮಹತ್ವವನ್ನು ಪಂಪ ಬೋಧಿಸುತ್ತಾನೆ. ಜೈನಧರ್ಮವು ಭೌತಿಕ ಆಸಕ್ತಿಗಳನ್ನು ತ್ಯಜಿಸಿ ಆತ್ಮಶುದ್ಧಿಗೆ ಮಹತ್ವ ನೀಡುತ್ತದೆ. ಆದಿಪುರಾಣದಲ್ಲಿ ರಾಜರು ಹಾಗೂ ವೀರರು ಸಂಸಾರವನ್ನು ತ್ಯಜಿಸಿ ಸನ್ಯಾಸ ಮಾರ್ಗವನ್ನು ಅನುಸರಿಸುವ ಪ್ರಸಂಗಗಳು ಜೈನ ವೈರಾಗ್ಯ ತತ್ವವನ್ನು ಪ್ರತಿಬಿಂಬಿಸುತ್ತವೆ. ಇದು ಜೀವನದ ಅಂತಿಮ ಗುರಿ. ಮೋಕ್ಷವೆಂಬ ಜೈನಧರ್ಮದ ದೃಷ್ಟಿಕೋನವನ್ನು ಸ್ಪಷ್ಟಪಡಿಸುತ್ತದೆ.

ಪಂಪನ ಮತ್ತೊಂದು ಕೃತಿಯಾದ ವಿಕ್ರಮಾರ್ಜುನ ವಿಜಯವು ನೇರವಾಗಿ ಜೈನ ಧರ್ಮದ ತತ್ವಗಳನ್ನು ಪ್ರತಿಪಾದಿಸದಿದ್ದರು ಪರೋಕ್ಷವಾಗಿ ಜೈನಧರ್ಮದ ತತ್ವಗಳಾದ, ಸತ್ಯನಿಷ್ಠೆ ಮತ್ತು ಸ್ನೇಹ ಭಾವ ಅಹಿಂಸಾ, ಸತ್ಯವೈರಾಗ್ಯ ಮತ್ತು ಅಪರಿಗ್ರಹ ವಿವಿಧ ಪಾತ್ರಗಳ ಮೂಲಕ ಕಾವ್ಯದಲ್ಲಿ ವ್ಯಕ್ತವಾಗಿದೆ. ಪಂಪನು ಮಾನವೀಯ ಮೌಲ್ಯಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಈ ಕೃತಿಯಲ್ಲಿ ನೀಡಿದ್ದಾನೆ. ಯುದ್ಧದ ಭೀಕರತೆಯಲ್ಲಿ ಹಿಂಸೆಯ ಪ್ರತಿಪಾದನೆಯಾದರು ಅದು ಹಿನ್ನೆಲೆಯಲ್ಲಿ ಅಹಿಂಸಾ ತತ್ವದ ಬೋಧನೆಯಾಗಿಯೇ ಕಂಡುಬರುತ್ತದೆ. ಹಿಂಸೆಯ ಕ್ರೂರತೆಯನ್ನು ಮನಮುಟ್ಟುವಂತೆ ಚಿತ್ರಿಸುವ ಮೂಲಕ ಅಹಿಂಸಾ ತತ್ವವನ್ನು ಬೋಧಿಸುತ್ತಾನೆ. ಹಾಗೆ ಕಾವ್ಯದ ಪ್ರಸಂಗಗಳಲ್ಲಿ ಜೀವನದ ಅನೀತಿಯನ್ನು ತೋರಿಸುವ ಮೂಲಕ ಪಂಪ ವೈರಾಗ್ಯ ಮಾರ್ಗವನ್ನು ಕಾವ್ಯದಲ್ಲಿ ಬಿತ್ತಿದ್ದಾನೆ ಹೀಗೆ ತನ್ನ ಎರಡು ಕೃತಿಗಳಲ್ಲಿ ತನ್ನ ಜೈನಧರ್ಮದ ಪ್ರತಿಪಾದನೆ ಅಥವಾ ಧರ್ಮದ ನೆರಳನ್ನು ಕಾಣಬಹುದು.

ಪಂಪನ ನಂತರ ಬಂದ **ಪೊನ್ನ ಶಾಂತಿನಾಥ ಪುರಾಣ, ಜಿನಾಕ್ಷರಮಾಲೆ, ಭುವನೈಕರಾಮಾಭ್ಯುದಯ** ಕೃತಿಗಳನ್ನು ರಚಿಸುತ್ತಾನೆ. ಶಾಂತಿನಾಥ ಪುರಾಣದಲ್ಲಿ ಶಾಂತಿನಾಥ ತೀರ್ಥಂಕರನ ಕಥೆಯನ್ನು ಆಯ್ಕೆ ಮಾಡಿಕೊಳ್ಳುತ್ತಾನೆ ಹನ್ನೆರಡು ಆಶ್ವಾಸಗಳಿಂದ ಕೂಡಿದ ಈ ಕೃತಿಯಲ್ಲಿ ಹದಿನಾರನೆಯ ತೀರ್ಥಂಕರನ ಚರಿತ್ರೆಯನ್ನು ವಸ್ತುವಾಗಿ ಎತ್ತಿಕೊಳ್ಳಲಾಗಿದೆ. ಶಾಂತಿ ಪುರಾಣವನ್ನು ಪರಿಶೀಲಿಸಿದ ಬಾವಾವಳಿಗಳಿಂದಲೂ ಆಗಮ ಧರ್ಮ ಭಾಗಗಳಿಂದಲೂ ಶಾಸ್ತ್ರಭಾಗ ವಿಚಾರಗಳಿಂದಲೂ ಜೈನ ಸಾಂಪ್ರದಾಯಿಕ ಲಕ್ಷಣಗಳಿಂದಲೂ ಕೂಡಿರುವುದು ಸ್ಪಷ್ಟವಾಗುತ್ತದೆ. ಪೊನ್ನನಿಗೆ ಜೈನಧಾರ್ಮಿಕ ಸಾಂಪ್ರದಾಯದ ತಾಂತ್ರಿಕ ಲಕ್ಷಣಗಳನ್ನೂ,ವಿಧಿವಿಧಾನ, ಆಚರಣೆಗಳನ್ನು ಹೇಳುವುದು ಬಹುಮುಖ್ಯವಾಗಿತ್ತೆಂದು ಕಾಣುತ್ತದೆ. ಹಾಗಾಗಿಯೇ ಒಂಬತ್ತು ಆಶ್ವಾಸನೆಗಳಲ್ಲಿ ಬಾವಾವಳಿಯ ಕಥೆ ಬಂದಿರುವುದು ಇಂತಹ ಅನಿಸಿಕೆಗಳಿಗೆ ಕಾರಣವಾಗಿದೆ. ಶಾಂತಿನಾಥ ಪುರಾಣದಲ್ಲಿ ಜನ್ಮಾಂತರದ ದೀರ್ಘ ಪಥವನ್ನು ದಾಟಿಹೋಗುವ ಕಥೆಯಿದೆ. ಸ್ವಯಂವರ, ಭೇಟಿ, ಜಲಕೇಳಿ, ಸೂಳೆಗೇರಿಯ ಪ್ರಸಂಗಗಳು, ಯುದ್ಧ ದೂತಕಾರ್ಯ, ದ್ರೋಹ, ಮೊದಲಾದ ಪ್ರಸಂಗಗಳು ಇವೆ. ಅರ್ಥಶಾಸ್ತ್ರ ,ಕಾಮಶಾಸ್ತ್ರ ಗಜಹಯಶಾಸ್ತ್ರ ಮುಂತಾದ ತಿಳುವಳಿಕೆಯ ಸಾಧನೆಗಳು ಬೇಕಾದಷ್ಟಿವೆ. ಕಾವ್ಯದಲ್ಲಿನ ಪಾತ್ರಗಳು ಸಂಪತ್ತನ್ನು ತ್ಯಜಿಸಿ ದೀನಮಾರ್ಗವನ್ನು

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

ಅನುಸರಿಸುವುದು ಧರ್ಮವು ವೈರಾಗ್ಯದಲ್ಲಿ ನೆಲೆಸಿದೆ ಎಂಬ ಸಂದೇಶವನ್ನು ಸಾರುತ್ತದೆ. ಅಂತಿಮ ಗುರಿ ಮೋಕ್ಷ ಸಾಧನೆಯಾಗಿದ್ದು ಅದನ್ನು ಸಾಧಿಸಲು ತಪಸ್ಸು, ಸತ್ಯನಿಷ್ಠೆ ಮತ್ತು ಇಂದ್ರಿಯ ನಿಗ್ರಹ ಅಗತ್ಯವೆಂದು ವೃಷಭನಾಥನ ಮೂಲಕ ಪ್ರತಿಪಾದಿಸುತ್ತಾನೆ. ಪೊನ್ನನ ಜಿನಾಕ್ಷರಮಾಲೆಯಲ್ಲಿ, ಜೈನರಮಹಿಮೆ, ಧರ್ಮಾಚರಣೆ, ವೈರಾಗ್ಯ, ಮೋಕ್ಷಸಾಧನೆ, ಇಂತಹ ಜೈನಧರ್ಮದ ತತ್ವಗಳನ್ನು ಕೃತಿಯಲ್ಲಿ ಬೋಧಿಸಲಾಗುತ್ತದೆ.

ರತ್ನತ್ರಯರಲ್ಲಿ ಒಬ್ಬನಾದ **ರನ್ನ**ನು ಶಕ್ತಿಶಾಲಿ ಕವಿ ಎನಿಸಿಕೊಂಡಿದ್ದಾನೆ. ರನ್ನನ ಶಕ್ತಿ ಇರುವುದೆಲ್ಲ **"ಸಾಹಸ ಭೀಮ ವಿಜಯ"** ಎಂಬ ತನ್ನ ಲೌಕಿಕ ಕಾವ್ಯದಲ್ಲಿ ಇವನು ಬರೆದ ಧಾರ್ಮಿಕ ಕೃತಿಯಾದ **"ಅಜಿತನಾಥ ಪುರಾಣವು"** ತೀರ್ಥಂಕರನಾದ ಅಜಿತನಾಥನನ್ನು ಕುರಿತದ್ದು. ತನಗಿಂತ ಮುಂದಿದ್ದ ಪಂಪ ಮಹಾಕವಿಯ ಮಾರ್ಗವನ್ನು ಅನುಸರಿಸಿದ ರನ್ನನು ಒಂದು ಲೌಕಿಕ ಮತ್ತೊಂದು ಆಗಮಿಕ ಕೃತಿಗಳ ರಚನೆಗೆ ಕೈಹಾಕಿದ. ಆದಿಪುರಾಣದ ಮಾದರಿಯಲ್ಲಿ ಎರಡನೇ ತೀರ್ಥಂಕರನ ಪುರಾಣವನ್ನು ರಚಿಸಿದಾಗ ಅದು ಹನ್ನೆರಡು ಆಶ್ವಾಸಗಳ ಒಂದು ಧಾರ್ಮಿಕ ಸಾಂಪ್ರದಾಯಿಕ ಚಂಪು ಕಾವ್ಯವಾಯಿತು. ಈ ಕೃತಿಯಲ್ಲಿ ಧಾರ್ಮಿಕ ಅಂಶಗಳಿಗೂ ಕಾವ್ಯದ ಅಂಶಗಳಿಗೂ ಕೊರತೆಯೇನಿಲ್ಲ. ಅಜಿತನಾಥ ಭಾವವಳಿ ಮತ್ತು ಪಂಚಕಲ್ಯಾಣ ವರ್ಣನೆಯ ಮೂಲಕ ಜೈನಧರ್ಮದ ಸಲ್ಲಕ್ಷಣ ಉಪಯೋಗಿಸಿ ಕೊಂಡಿದ್ದಾನೆ.

ರನ್ನನ ಕಾಲಕ್ಕಾಗಲೇ ಜೈನಧರ್ಮ ಪರಧರ್ಮೀಯರ ಪ್ರಭಾವವನ್ನು ಮೆಟ್ಟಿ ನಿಲ್ಲಲು ಹೆಣಗುತ್ತಿತ್ತು. ರಾಜಾಶ್ರಯ ಪಡೆದಿದ್ದರೂ ತೀರಾ ಬಿಗಿಯಾದ ತನ್ನ ಕಟ್ಟುಪಾಡುಗಳಿಂದ ಜನಾದರದಿಂದ ದೂರಾಗುತ್ತಿದ್ದ ಸಮಯದಲ್ಲಿ ಅತ್ತಿಮಬ್ಬೆ ಯಂತಹ **"ಜಿನಧರ್ಮಪತಾಕೆ"** ಸಮ್ಯಕ್ತ್ವ ವಂತಳ ಚಾರಿತ್ರ ರನ್ನನಿಂದ ಹೆಚ್ಚಿನ ಮನ್ನಣೆ ಪಡೆದಿರಬೇಕು. ಆದ್ದರಿಂದಲೇ ರನ್ನ ನಂಬುಗೆ ಜಿನಮತದಲ್ಲಿ **"ಮನಂಬುಗೆ ದರ್ಶನವಿಶುದ್ಧಿ"** ಇವುಗಳಿಗೆ ಹೆಚ್ಚಿನ ಪುರಸ್ಕಾರ ಕೊಟ್ಟಿದ್ದಾನೆ. ಜೈನಧರ್ಮ ಹೆಚ್ಚು ಕಡಿಮೆ ಅವಸಾನದ ಹಂಚಿಕೆ ಸರಿಯುತ್ತಿದ್ದ ಕಾಲದಲ್ಲಿ ಅದನ್ನು ಉಳಿಸಿಕೊಳ್ಳಲು ತನ್ನ ಧರ್ಮದಲ್ಲಿದ್ದ ಉತ್ತಮ ಅಂಶಗಳನ್ನು ಪ್ರಚಾರ ಮಾಡಲು ಹಾಗೂ ತನ್ನ ಧರ್ಮಕ್ಕೆ ಪ್ರೋತ್ಸಾಹ ನೀಡಿದ **"ಜಿನಸಮಯದೀಪಕ"** ಗಣ್ಯರನ್ನು ಪ್ರಶಂಸಿಸುವುದು ಸಹಜವಾಗಿಯೇ ಇದೆ. ರನ್ನನು ' ಇದನ್ನೇ ಮಾಡಿದ್ದಾನೆ.

ಅಜಿತನಾಥ ಪುರಾಣದಲ್ಲಿ ಅಜಿತಸ್ವಾಮಿ ಹಾಗೂ ಸಹೋದರ ಸಗರನಿಗಿಂತ ಕಣ್ಣಿಗೆ ಹೊಡೆದುಕಾಣುವ ಪಾತ್ರ ಅತ್ತಿಮಬ್ಬೆಯದು ರನ್ನ ವರ್ಣನೆಗೆ ಮೈಸೋತಿದ್ದಾನೆ. ಸಂಸಾರದ ಅನಿತ್ಯತೆ, ವೈರಾಗ್ಯ, ಹೆಣ್ಣು, ಹೊನ್ನು, ಮಣ್ಣು ಬಗೆಗಿನ ಅನಾದರಗಳನ್ನು ವರ್ಣಿಸುವಾಗ ಲಲಿತವಾಗಿ ವರ್ಣಿಸಿದ್ದಾನೆ. ಹೀಗೆ ರನ್ನ ಕಾವ್ಯಗಳಲ್ಲಿ ಸಾಹಿತ್ಯ ಮತ್ತು ಧರ್ಮವನ್ನು ವೃದ್ಧಿಯಾಗುವಂತೆ ಮಿಳಿತಗೊಳಿಸಿದ್ದಾನೆ.

ಕನ್ನಡದ ಮಹಾಕವಿಗಳ ಮೊದಲನೆಯ ಸಾಲಿನಲ್ಲಿ ಕುಳಿತು ಗೌರವವನ್ನು ಕೊಳ್ಳಲು ಸಮರ್ಥನಾದ ಕವಿ **ನಾಗಚಂದ್ರ** ಜಿನೋಪಾಸನೆ ಕಲೋಪಾಸನೆ ಇವು ನಾಗಚಂದ್ರನ ನಿತ್ಯ ಅನುಷ್ಠಾನಗಳಾಗಿದ್ದವು. ಪಂಪನ ಹಾಗೆಯೇ **"ಅಭಿನವ ಪಂಪನು"** ಎರಡು ಕೃತಿಗಳನ್ನು ಬರೆದಿದ್ದಾನೆ. ಜೈನಧರ್ಮದಲ್ಲಿ ಕವಿಗಿದ್ದ ಅತಿಯಾದ ನಿಷ್ಠೆ ಮತ್ತು ಆ ದಿನಗಳಲ್ಲಿ ತನ್ನ ಧರ್ಮವನ್ನೂ ಉಳಿಸಿಕೊಳ್ಳುವ ಅನಿವಾರ್ಯ ಸ್ಥಿತಿ ಒದಗಿದರಿಂದಲೋ ಏನೋ ನಾಗಚಂದ್ರನು ತನ್ನ ಕೃತಿಗಳಲ್ಲಿ ಧರ್ಮಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಿದ್ದಾನೆ. ನಂತರದ ಸ್ಥಾನವು ಸಾಹಿತ್ಯದ್ದಾಗಿದೆ. ಜೈನ ಧರ್ಮದಲ್ಲಿ ಆತನಿಗೆ ಅತ್ಯಂತ ಗಾಢವಾದ ಶ್ರದ್ಧಾ ಭಕ್ತಿ ಇತ್ತು ಆದರೆ ಆ ನಿಕಟ ಶ್ರದ್ಧೆ ಅನ್ಯ ಮತಗಳ ಅವಹೇಳನಕ್ಕೆ ಎಂದು ಅನುವು ಮಾಡಿಕೊಟ್ಟಿಲ್ಲ. ಜಿನಚರಿತ ಒಂದೇ ಹೇಳಬೇಕಾದ ಕಥೆ ಎಂದು ನಂಬಿಕೊಂಡ, ಅವನು ಎರಡೂ ಜೈನ ಪುರಾಣಗಳನ್ನೇ ರಚಿಸಿದ್ದಾನೆ. ಜೈನಧರ್ಮದಲ್ಲಿ ಆತನಿಗಿದ್ದ ಅಚಲ ನಿಷ್ಠೆ ಅಷ್ಟಿಷ್ಟಲ್ಲ ಅದಕ್ಕೆ ಕಾರಣವಿಲ್ಲದೆಯೂ ಇಲ್ಲ. ಪಂಪನ ಕಾಲದಲ್ಲಿದ್ದ ಜೈನ ಧರ್ಮದ ಪರಿಸ್ಥಿತಿಯೇ ಬೇರೆ ನಾಗಚಂದ್ರನ ಕಾಲದಲ್ಲಿದ್ದ ಪರಿಸ್ಥಿತಿಯೇ ಬೇರೆ. ಹನ್ನೆರಡನೇ ಶತಮಾನದಲ್ಲಿ ಆ ದಿನಗಳಲ್ಲಿ ಜೈನಧರ್ಮ ಅವನತವಾಗುತ್ತಿತ್ತು. ಅಥವಾ ಆಗಿತ್ತು. ವೀರಶೈವಧರ್ಮದ ಪ್ರಭಾವ ಪ್ರಚಲಿತವಾಗಿತ್ತು ಇದರಿಂದ ಜೈನ ಧರ್ಮದ ಮೇಲ್ಮೈಯನ್ನು ಪುನರುತ್ಥಾನಗೊಳಿಸಬೇಕು, ಶಿವನಿಗಿಂತ ಜೈನ ದೊಡ್ಡವನು ಎಂಬುದನ್ನು ಸ್ಥಾಪಿಸಬೇಕು ಎಂಬುದು ನಾಗಚಂದ್ರನ ಆಶಯವಾಗಿದ್ದರೆ ಅದರಲ್ಲಿ ಆಶ್ಚರ್ಯವಿಲ್ಲ.

ಮಲ್ಲಿನಾಥಪುರಾಣವು ವರ್ಣನಾ ಪ್ರಧಾನವಾದ ಕಾವ್ಯ. ಇದರಲ್ಲಿ ಕಥಾಂಶ ಕೇವಲ ಕಾಲುಭಾಗದಷ್ಟು ಮಾತ್ರವೇ. ಮಲ್ಲಿನಾಥನ ಎರಡು ಜನ್ಮದ ಚರಿತ್ರೆಯು ಒಂದು ಜನ್ಮದ ಪೂರ್ವೋತ್ತರ ಭಾಗವಾಗುವಂತೆ ನಾಗಚಂದ್ರನು ಜಾಣ್ಮೆಯಿಂದ ಚಿತ್ರಿಸಿದ್ದಾನೆ. ಉತ್ತರ ಜನ್ಮದ ಎಂದರೆ ತೀರ್ಥಂಕರ ಜನ್ಮದ ಫಲ ಬೀಜಗಳು ಪೂರ್ವಜನ್ಮದಲ್ಲಿ ಅಲ್ಲಲ್ಲಿ ಸೂಪ್ತವಾಗಿ ಅಡಗಿರುವಂತೆ ಕಥೆಯನ್ನು ಅನುವುಗೊಳಿಸಿದ್ದಾನೆ. ಮಲ್ಲಿನಾಥಪುರಾಣಕ್ಕೆ ಇಲ್ಲದ ಮಹತ್ವ, **ರಾಮಚಂದ್ರಚರಿತ ಪುರಾಣ**ಕ್ಕಿದೆ. **"ಪಿರಿದೆನಿಸಿರ್ದ ರಾಮಕಥೆಯಂ ಕಿರಿದಾಗಿ ದೇಸಿ ಮಾರ್ಗ ವೆಂಬೆರಡರೊಳಂ ರಸಂಬಡೆದುಪಂಡಿತ ಮಂಡಳಿ ಮೆಚ್ಚಿ"** ರಾಮಕಥೆಯನ್ನು ನಾಗಚಂದ್ರ ಹೇಳಿದ್ದಾನೆ. ಬೃಹತ್ತಾದ ವೈದಿಕ ಮೂಲದ ಕಥೆಯನ್ನು ಕಿರಿದಾಗಿ ರಸಾತ್ಮಕವಾಗಿ ಹೇಳಿದ ಶ್ರೇಯಸ್ಸು ನಾಗಚಂದ್ರನಿಗೆ ಸಲ್ಲುತ್ತದೆ. ಕನ್ನಡ ಸಾಹಿತ್ಯದಲ್ಲಿ ರಾಮಾಯಣದ ಕಥಾವಸ್ತು ಉಳ್ಳ ಮೊದಲನೆಯ ಕಾವ್ಯವನ್ನು ಬರೆದ ಶ್ರೇಯಸ್ಸು ನಾಗಚಂದ್ರ ಸಲ್ಲುತ್ತದೆ. ಮೂಲ ಕಥೆ ವೈದಿಕಮೂಲವಾಗಿದ್ದರೂ ಜೈನ ಧರ್ಮದ ಆಶಯಗಳಿಗೆ ಅನುಗುಣವಾಗಿ ಅನೇಕ ಬದಲಾವಣೆಗಳನ್ನು ನಾಗಚಂದ್ರ ಮಾಡಿದ್ದಾನೆ. ರಾಮ, ಲಕ್ಷ್ಮಣ, ರಾವಣರಲ್ಲಿ ಒಟ್ಟಾರೆಯಾಗಿ ನಾಗಚಂದ್ರನಿಗೆ ಹೇಗಾದರೂ ಧರ್ಮದ ಶ್ರೇಷ್ಠತೆಯನ್ನು ಸಾರುವುದು ಅತ್ಯಂತ ಅವಶ್ಯಕವಾಗಿತ್ತು.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಬಹುದೊಡ್ಡ ಹೆಸರು **ನಯಸೇನ** ಜೈನ ತತ್ವ ಪ್ರಚಾರವೇ ಮುಖ್ಯ ಉದ್ದೇಶವಾಗಿದ್ದ ನಯಸೇನನು ಅದಕ್ಕಾಗಿ ಆರಿಸಿಕೊಂಡದ್ದು ಕಥೆಯ ಮಾರ್ಗ. ಕಥೆಗಳನ್ನು ಮತ ಪ್ರಚಾರಕ್ಕೆ ಉಪಯೋಗಿಸಿಕೊಂಡು ಬರೆದವರಲ್ಲಿ ವಡ್ಡಾರಾಧನೆಯ ಶಿವಕೋಟ್ಯಾಚಾರ್ಯ ಬಿಟ್ಟರೆ ನಯಸೇನನ ಪ್ರಮುಖ. ಈ ಮೂಲಕ ಸಾಹಿತ್ಯವನ್ನು ಧರ್ಮದ ಪ್ರಚಾರಕ್ಕೆ ಚೆನ್ನಾಗಿ ದುಡಿಸಿಕೊಂಡಿದ್ದನ್ನು ಕಾಣಬಹುದು.
ನಯಸೇನನು ತಾನು ಬರೆಯುತ್ತಿರುವ ಕೃತಿಯ ಉದ್ದೇಶವನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾನೆ.

ಜಿನಮತದೊಳೆನಿತು ಸಾರಮಾ
ದನಿತು ಲೇಸಾಗಿ ತೋರ್ಪುದೀ ಕೃತಿಯೊಳ್ ಅದೆಂ
ತೆನೆ ಕನ್ನಡಿಯೊಳಗೆ ಜಲ
ಕ್ಕನೆ ತೋರ್ಪವೊಲ್ ಇಭದ ರೂಪು ವಿಸ್ತರದಿಂದಂ

ಇಡೀ **ಧರ್ಮಾಮೃತ ಕೃತಿ**ಯನ್ನು ಓದಿದ ಮೇಲೆ ನಯಸೇನನ ಈ ಮೇಲಿನ ಉಕ್ತಿಗಳು ಸರಿಯನಿಸದಿರಲಾರವು. ಧರ್ಮಾಮೃತದಲ್ಲಿ ಜೈನದರ್ಶನವು, ಅದರ ಎಂಟು ಅಂಗಗಳು ಮತ್ತು ಪಂಚಾಣು ವ್ರತಗಳು –ಇವುಗಳ ಮಹಿಮೆಯನ್ನು ವ್ಯಕ್ತಪಡಿಸುವುದೇ ಪ್ರಮುಖ ವಸ್ತುವಿಷಯವಾಗಿದೆ. ಈ ಕೃತಿಯು ದಿಗಂಬರಮತದ ಪ್ರಕಾರ ಜೈನಗೃಹಸ್ಥರು ಅನುಸರಿಸಬೇಕಾದ ವ್ರತ ಮುಂತಾದವುಗಳನ್ನು ಹೇಳುವ ಆಕೃತಿಯಂತಿದೆ.

ನಯಸೇನನು ರಚಿಸಿರುವ ಹದಿನಾಲ್ಕು ಕಥೆಗಳು ಸಮ್ಯಗ್ ದರ್ಶನ ಮತ್ತು ಆ ದರ್ಶನದ ಎಂಟು ಅಂಗಗಳಾದ– ನಿಶ್ಶಂಕೆ, ನಿಷ್ಕಾಂಕ್ಷೆ, ನಿರ್ವಿಚಿಕಿತ್ಸೆ ದುಷ್ಟ, ಅಮೂಢ,ದೃಷ್ಟಿಸ್ಥ ಉಪಗುಹನ,ಸ್ಥಿತಿಕರಣ,ವಾತ್ಸಲ್ಯ, ಧರ್ಮ ಪ್ರಭಾವಗಳನ್ನು ಕುರಿತು ಒಂಬತ್ತು ಕಥೆಗಳನ್ನು, ಅದರ ಜೊತೆಗೆ ಪಂಚಾಣು ವ್ರತಗಳಾದ ಅಹಿಂಸೆಯ, ಸತ್ಯ, ಆಸ್ತೇಯ. ಬ್ರಹ್ಮಚರ್ಯ, ಪರಿಗ್ರಹ ಗಳನ್ನು ಕುರಿತು ಐದು ಕಥೆಗಳನ್ನೂ ಹೀಗೆ ಒಟ್ಟು ಹದಿನಾಲ್ಕು ಕಥೆಗಳನ್ನು ಅತ್ಯಂತ ಸುಲಭವಾದ ಚಂಪೂ ಶೈಲಿಯಲ್ಲಿ ಹೇಳಿದ್ದಾನೆ. ಆ ಗುಣಗಳನ್ನು ಸಂಪಾದಿಸಲು ಸಮರ್ಥರಾದ ಹದಿನಾಲ್ಕು ಮಹಾವ್ಯಕ್ತಿಗಳು ಈ ಕೃತಿಯಲ್ಲಿ ಚಿತ್ರಿಸಲ್ಪಟ್ಟಿದ್ದಾರೆ. ಹದಿನಾಲ್ಕು ಮುಖ್ಯ ಕಥೆಗಳಲ್ಲದೆ ಉಪಕಥೆಗಳು ಉಂಟು ಈ ಎಲ್ಲಾ ಕಥೆಗಳನ್ನು ಜೈನಧರ್ಮದ ಉತ್ತಮ ಅಂಶಗಳನ್ನು ಪ್ರಭಾವಶಾಲಿಯಾಗಿ ಪ್ರಕಟಪಡಿಸುವ ಸಲುವಾಗಿ ಬಳಸಿಕೊಂಡಿರುವ ಕವಿಯ ಪ್ರಯತ್ನ ಸಫಲವಾಗಿದೆ.

ಹನ್ನೆರಡನೇ ಶತಮಾನದ ಉತ್ತರಾರ್ಧದ ಹೊತ್ತಿಗೆ ಜೈನ ಅರಸರ ಅಭಾವ ಮತ್ತು ಜೈನ ಸಾಹಿತ್ಯ ಅವನತಿಯಂಚಿನಲ್ಲಿತ್ತು. ವೈದಿಕಧರ್ಮದ ಪ್ರತಿಸ್ಪರ್ಧಿಯಾಗಿ ಬಂದ **ಜನ್ನನು** ಜೈನ ಧರ್ಮೀಯನಾಗಿ ತನ್ನ ಧರ್ಮವನ್ನು ಉಳಿಸಿಕೊಳ್ಳಬೇಕಾದುದು ಅನಿವಾರ್ಯವಾಯಿತ. ಜನ್ನನ **ಅನಂತನಾಥ**

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

ಪುರಾಣ ಮತ್ತು ಯಶೋಧರ ಚರಿತೆ ಎರಡು ಧಾರ್ಮಿಕ ಕೃತಿಗಳಾಗಿರುವುದು ಗಮನಾರ್ಹ. ಅನಂತನಾಥ ಪುರಾಣದಲ್ಲಿ ಜೈನ ತೀರ್ಥಂಕರರಲ್ಲಿ ಹದಿನಾಲ್ಕನೆಯ ತೀರ್ಥಂಕರನಾದ ಅನಂತನಾಥನ ಕಥೆಯ ಜೊತೆಗೆ ಚಂಡಶಾಸನ ಮತ್ತು ಸುನಂದೆಯ ಭಗ್ನ ಪ್ರೇಮದ ಕಥೆಯು, ಯಶೋಧರ ಚರಿತೆಯಲ್ಲಿ ಯಶೋಧರ ಅಮೃತಮತಿ –ಅಷ್ಟವಂಕನ ನಡುವಿನ ಪ್ರೇಮ ಕಾಮದ ಕಥೆಯನ್ನು ನಿರೂಪಿಸಲಾಗಿದೆ.

ಅನಂತನಾಥ ಪುರಾಣದ ಚಂಡಶಾಸನನ ಕಥೆಯಲ್ಲಿ ಕವಿ ಆಕರ್ಷಣೆಯನ್ನಿಟ್ಟಿದ್ದಾನೆ. ಚಂಡಶಾಸನ ವಸುಷೇಣರ ಸ್ನೇಹ, ಸುನಂದೆಯ ಸೌಂದರ್ಯ, ಸುನಂದೆಯ ರೂಪಕ್ಕೆ ಮರುಳಾದ ಚಂಡಶಾಸನನ ಮನಸ್ಸಿನಲ್ಲಿ ಮೂಡಿದ ಅನೈತಿಕ ಕಾಮಪ್ರಚೋದನೆ ಅದನ್ನು ಈಡೇರಿಸಿಕೊಳ್ಳಲು ಸುನಂದೆಯ ಅಪಹರಣ, ತನ್ನ ಆಸೆ ಈಡೇರಿಸಲು ಅವಳು ಒಪ್ಪದಿದ್ದಾಗ ಅವಳ ಗಂಡನ ಮಾಯಾರುಂಡದ ಪ್ರದರ್ಶನ,ಗಂಡನ ಸಾವನ್ನು ಕಂಡ ಆ ಪತಿವ್ರತೆ ಪ್ರಾಣ ತ್ಯಾಗ ಮಾಡುವುದು, ನಿರಾಶನಾದ ಚಂಡ ಶಾಸನವು ವಿಕೃತ ಮನಸ್ಸಿನಿಂದ ಅವಳ ಶವದೊಡನೆ ಸಹಗಮನದಲ್ಲಿ ತೊಡಗುವುದು– ಇತ್ಯಾದಿ ಅನೇಕ ಘಟನೆಗಳಲ್ಲಿ ಕಾವ್ಯವನ್ನು ಕಟ್ಟಿಕೊಟ್ಟಿದ್ದಾನೆ. ಇಲ್ಲಿ ಕೊನೆಗೂ ಸೇಡು ತೀರಿಸಿಕೊಳ್ಳಲು ಅವಕಾಶವಿಲ್ಲದ ವಸುಷೇಣ ವೈರಾಗ್ಯ ಮುಖನಾಗುವುದು ಜೈನಧರ್ಮದ ಅಹಿಂಸಾ ತತ್ವದ ಸಮರ್ಥ ಪ್ರತಿಪಾದನೆಯಾಗಿರುತ್ತದೆ.ಅನಂತನಾಥ ಪುರಾಣದ ಪ್ರಮುಖ ಅಂಶವೆಂದರೆ ಧರ್ಮದ ಪ್ರಧಾನ ವಿಚಾರಧಾರೆಯಾದ ಅಹಿಂಸೆಯ ಪ್ರತಿಪಾದನೆ.

ಸಂಕಲ್ಪ ಹಿಂಸೆಯು ಕೂಡ ಹಿಂಸೆ ಎಷ್ಟೇ ಪರಿಣಾಮವನ್ನು ಉಂಟು ಮಾಡಬಲ್ಲದು ಎಂಬುದನ್ನು ಜನ್ನನ ಮತ್ತೊಂದು ಕೃತಿ ಯಶೋಧರ ಚರಿತ ತಿಳಿಸುತ್ತದೆ. ಇದರ ಪ್ರಮುಖ ಅಂಶವೆಂದರೆ ಜೈನಧರ್ಮದ ಪ್ರಧಾನ ವಿಚಾರದಾರಿಯಾದ ಅಹಿಂಸೆಯ ಪ್ರತಿಪಾದನೆ. ಸಂಕಲ್ಪ ಹಿಂಸೆಯು ಕೂಡ ಹಿಂಸೆಯಷ್ಟೇ ನೋವನ್ನು ಉಂಟು ಮಾಡಬಲ್ಲದು ಎಂಬುದನ್ನು ಯಶೋಧರ ಚರಿತ ಯಶೋಧರ ಮತ್ತು ಅವನ ತಾಯಿಯ ಬದುಕಿನಲ್ಲಿ ಸಮರ್ಥವಾಗಿ ಬಿಡಿ–ಬಿಡಿಸಿ ತೋರಿಸುವ ಕಥೆಯಾಗಿದೆ. ಇಲ್ಲಿ ಯಶೋಧರನ ಹೆಂಡತಿಯಾದ ಅಮೃತಮತಿ ಎಂಬ ರಾಣಿ ಒಂದು ರಾಜ್ಯದ ರಾಜನು ರೂಪಾತಿಶಯವುಳ್ಳ ಮನ್ಮಥ ಸಮಾನನು ಆಗಿದ್ದ ಪತಿಯನ್ನುಳಿದು. ಮಾವಟಿಗನು ,ರೂಪದಲ್ಲಿ ಅಷ್ಟ ವಕ್ರತೆಯುಳ್ಳ ರೊಪಾಧಮನನ್ನು ಕೇವಲ ಹಾಡಿನ ಕಾರಣಕ್ಕೆ ಒಲಿದದ್ದು ಈ ಕಾವ್ಯದ ಕುತೂಹಲ. ಅಷ್ಟವಂಕ ನೊಂದಿಗಿನ ಗೌಪ್ಯ ಪ್ರೇಮ ಯಶೋಧರನಿಗೆ ತಿಳಿಯಲು ಅಮೃತಮತಿಯ ವಿಷಪ್ರಾಶನಕ್ಕೆ ಒಳಗಾಗಿ ಸತ್ತ ತಾಯಿ ಮತ್ತು ಮಗ ಏಳುಜನ್ಮದಲ್ಲಿ ಹಾದು ಬಂದು ಮನುಷ್ಯನ ರೂಪದಲ್ಲಿ ಹುಟ್ಟಿ ದೀಕ್ಷೆ ಪಡೆದು ಚರಿಗೆಗೆ ಬರುತ್ತಿರಲಾಗಿ ಮಾರಿದತ್ತನ ಕೈಗೆ "ಬಲಿ"ಗಾಗಿ ಸಿಗುವುದು ಕಾವ್ಯದ ಪ್ರಮುಖ ಘಟ್ಟವಾಗಿದೆ . ಅಭಯರುಚಿ – ಅಭಯಮತಿಯರು ಹೇಳುವ ಅಹಿಂಸಾ ಬೋಧನೆಗೆ ಮಾರಿದತ್ತನು ಬದಲಾದರು, ಘೋರಪಾಪಗಳನ್ನು ಮಾಡಿದ ಅಮೃತಮತಿ ಮಾತ್ರ ದಿನ ದಿನಕ್ಕೆ ಪಾಪ ಕೋಪದಲ್ಲಿ ಇಳಿಯುತ್ತಿದ್ದಳು ಎಂಬುದನ್ನು ತುಂಬಾ ಸಮರ್ಥವಾಗಿ ಕೃತಿಯಲ್ಲಿ ತೋರಿಸಲಾಗಿದೆ.

ಇಡೀ ಯಶೋಧರ ಚರಿತೆ ಅಹಿಂಸೆಯನ್ನು ಬೋಧಿಸಿದರೂ ಕೂಡ ಕೊನೆಗೆ ಇದು ಕೊಡುವ ತೀರ್ಮಾನ ಅಲೌಕಿಕವಾದುದೆ ಆಗಿದೆ. **"ಮನಸಿಜನ ಮಾಯೆ ವಿಧಿವಿಳಸನದ ನೆರಂಬಡೆಯೆ ಕೊಂದುಕೂಗದೆ ನರರಂ "**ಈ ನೆಲೆಯಲ್ಲಿ ಯಶೋಧರ ಚರಿತೆಯು ಧಾರ್ಮಿಕ ನೆಲೆಗಟ್ಟನ್ನುಳ್ಳ ಉತ್ಕೃಷ್ಟ ಕಾವ್ಯವಾಗಿದೆ.

ಸಂಸ್ಕೃತದ ನೆರವಿಲ್ಲದೆ ಕನ್ನಡದಲ್ಲಿ ಕಾವ್ಯ ರಚನೆ ಸಾಧ್ಯ ಎಂಬುದನ್ನು ಹಠತೊಟ್ಟು ಸಾದಿಸಿ ತೋರಿಸಿಕೊಟ್ಟವರು **ಆಂಡಯ್ಯ** ಕವಿ. ಅವನ **"ಕಬ್ಬಿಗರಕಾವ ಅಥವಾ ಕಾವನಗೆಲ್ಲ"** ಬರಿ ಕಾವ್ಯ ದೃಷ್ಟಿಯಿಂದ ಶೈಲಿ ದೃಷ್ಟಿಯಿಂದ ಮೆಚ್ಚತಕ್ಕ ಸತ್ಕೃತಿಯಾಗಿದೆ. ಗಾತ್ರದಲ್ಲಿ ಖಂಡಕಾವ್ಯದಷ್ಟು ಚಿಕ್ಕದಲ್ಲ ಮಹಾ ಕಾವ್ಯದಷ್ಟು ದೊಡ್ಡದಲ್ಲ ಎಂಬ ಮಾಧ್ಯಮ ಸ್ವರೂಪವು ಅದಕ್ಕಿದೆ . ಜೈನ ಧರ್ಮವು ಶೈವ ಮತ್ತು ವೈಷ್ಣವ ಧರ್ಮಗಳ ತೀವ್ರತರವಾದ ಸ್ಪರ್ಧೆಯನ್ನು ಎದುರಿಸುತ್ತಲೇ ಬದುಕಬೇಕಾದ ಸಂಕಷ್ಟದ ಪರಿಸ್ಥಿತಿಯಲ್ಲಿ ಅಂಡಯ್ಯ ಕಾವ್ಯ ಬರೆಯತೊಡಗಿದ್ದಾನೆ . ಜೈನ ಧರ್ಮದ ಪೋಷಕರಾದ ರಾಷ್ಟ್ರಕೂಟ ಮತ್ತು ಗಂಗ ವಂಶಗಳಿಗೆ ರಾಜಕೀಯ ಹಿನ್ನಡೆ ಉಂಟಾದ ವೇಳೆ, ಜೈನಧರ್ಮಕ್ಕೂ ಹಿನ್ನಡೆ ಉಂಟಾಗಿತ್ತು. ಇಂತಹ ವೇಳೆಯಲ್ಲಿ ತನ್ನ ಧರ್ಮದ ಜೀರ್ಣೋದ್ಧಾರಕ್ಕಾಗಿ ಈ ಶೃಂಗಾರ ಕಾವ್ಯವನ್ನು ಕವಿ ಬರೆದ. ಆಂಡಯ್ಯನ ಕಬ್ಬಿಗರ ಕಾವ ಶೃಂಗಾರ ಕಾವ್ಯಗಳ ಪಂಕ್ತಿಯಲ್ಲಿ ವಿವೇಚಿಸಿದರು ಇದು ಜೈನಧರ್ಮದ ಮಹತ್ತನ್ನು ಸೂಕ್ಷ್ಮವಾಗಿ ಎತ್ತಿ ಹಿಡಿಯುವ ಒಂದು ವಿಡಂಬನ ಕೃತಿ ಎಂದು ಭಾವಿಸಲು ಅವಕಾಶವಿದೆ.

ಕಬ್ಬಿಗರ ಕಾವ್ಯದಲ್ಲಿ ಮನ್ಮಥನ ಪರಿವಾರದಲ್ಲಿ ಒಬ್ಬನಾಗಿದ್ದ ಚಂದ್ರನನ್ನು ಅಪಹರಿಸಿಕೊಂಡು ಹೋಗಿ ಶಿವನು ಸೆರೆಯಲ್ಲಿ ಇರಿಸಿದ್ದಾನೆ ಎಂಬ ಸುದ್ದಿಯನ್ನು ಕೇಳಿ ಮನ್ಮಥನು ತನ್ನ ಸುಕುಮಾರ ಸೈನ್ಯದೊಡನೆ ಶಿವನ ಮೇಲೆ ದಂಡೆತ್ತಿ ಹೋಗಿ ಬಾಣಪ್ರಯೋಗ ಮಾಡಿ ಅವನನ್ನು ಸೋಲಿಸಿ ಅರೆವೆಣ್ಣನ್ನಾಗಿ ಮಾಡುತ್ತಾನೆ. ಆ ಸಂದರ್ಭದಲ್ಲಿ ಶಿವನು ಕೊಟ್ಟ ಶಾಪದಿಂದ ಮನ್ಮಥನು ನನೆಯಂಬನೆಂಬ ರಾಜನಾಗಿ ಹುಟ್ಟಿ ಅಪ್ಸರ ಸ್ತ್ರೀಯೊಬ್ಬಳಿಂದ ತನ್ನ ಹಿಂದಿನ ವೃತ್ತಾಂತವನ್ನು ತಿಳಿದು ಶಾಪ ವಿಮೋಚನೆಯಾಗಿ ತನ್ನ ಹಿಂದಿನ ಜನ್ಮದ ಸ್ಥಿತಿಯನ್ನು ಮತ್ತೆ ಪಡೆದು ಸುಖವಾಗಿದ್ದಾನೆ ಎಂಬುದು ಇದರ ಕಥಾವಸ್ತು.

ಉಪಸಂಹಾರ

'ಕನ್ನಡ ಸಾಹಿತ್ಯದಲ್ಲಿ ಆರಂಭಿಕವಾಗಿ ಜೈನ ಕವಿಗಳ ಸಾಹಿತ್ಯವೇ ಹೆಚ್ಚು ಸಮೃದ್ಧಿಯಾಗಿತ್ತು. ಮುಖ್ಯವಾಗಿ ರಾಜಾಶ್ರಯ ಮತ್ತು ಧರ್ಮದ ಆಶ್ರಯ ದೊರಕಿದಾಗ ಸಾಹಿತ್ಯ ವಾತಾವರಣವು ಸಮೃದ್ಧಿಯಿಂದ ಕೂಡಿರುತ್ತದೆ. ಕನ್ನಡ ಸಾಹಿತ್ಯದ ಆರಂಭಿಕ ಹಂತದಲ್ಲಿ ಜೈನ ಕವಿಗಳ ಸಾಹಿತ್ಯವೇ ಮುಖ್ಯವಾಗಿದೆ ಎಂಬುದಕ್ಕೆ ಈ ಪ್ರಯೋಗವೇ ಸಾಕ್ಷಿಯಾಗಿದೆ.

'ಈ ಅವಕಾಶವನ್ನು ಜೈನ ಕವಿಗಳು ಸದುಪಯೋಗಪಡಿಸಿಕೊಂಡರು. ಹತ್ತನೇ ಶತಮಾನದಿಂದ ಹದಿಮೂರನೇ ಶತಮಾನದವರೆಗೆ ವಸ್ತು ಪ್ರತಿಪಾದನೆಯಲ್ಲಿ ಹಾಗೂ ಆಯ್ಕೆಯಲ್ಲಿ ಜೈನ ಧರ್ಮದ ದಟ್ಟ ಪ್ರಭಾವವನ್ನು ಕಾಣಬಹುದು. ಧರ್ಮದ ಪ್ರಭಾವದಿಂದಾಗಿ ಪಂಪನು ರೂಪಿಸಿದ ಲೌಕಿಕ ಹಾಗೂ ಆಗಮಿಕ ಕ್ರಮವು ಮುಂದಿನ ಜೈನ ಕವಿಗಳಿಗೆ ಮಾರ್ಗದರ್ಶಕವಾಯಿತು.

' ಹತ್ತನೇ ಶತಮಾನದಿಂದ ಹದಿಮೂರನೇ ಶತಮಾನದವರೆಗೆ ರಚನೆಯಾದ ಬಹುತೇಕ ಸಾಹಿತ್ಯಗಳಲ್ಲಿ ಧರ್ಮದ ಪ್ರಸ್ತಾಪ ಹೆಚ್ಚಾಗಿದೆ ಎಂದು ಹೇಳಬಹುದು. ಕೆಲವು ಕವಿಗಳು ತಮ್ಮ ಎರಡೂ ಕೃತಿಗಳಲ್ಲಿಯೂ ಧರ್ಮವನ್ನೇ ಪ್ರಧಾನವಾಗಿ ಎತ್ತಿಹಿಡಿದಿರುವುದು ಕಾಣಿಸುತ್ತದೆ. ಹೀಗಾಗಿ ಕಾಲಧರ್ಮಕ್ಕೆ ಅನುಗುಣವಾಗಿ ಧರ್ಮವು ಎಲ್ಲಾ ಕವಿಗಳ ಪ್ರಮುಖ ವಸ್ತುವಾಯಿತು ಎಂದು ಹೇಳಬಹುದು.

ಅದೇ ರೀತಿ, ಆ ಕಾಲದ ಕವಿಗಳು ತಮ್ಮ ಕೃತಿಗಳಲ್ಲಿ ಧರ್ಮವನ್ನು ಮೇಳೈಸಿಕೊಂಡು ಬಂದಿದ್ದಾರೆ. ತಮ್ಮ ಕಾವ್ಯಗಳಲ್ಲಿ ಧರ್ಮದ ಸಹಭಾಗಿತ್ವದೊಂದಿಗೆ ಕಾವ್ಯಧರ್ಮವನ್ನು ಘೋಷಿಸಿ, ಕಾಪಾಡಿಕೊಳ್ಳುತ್ತಾ ಧರ್ಮ ಮತ್ತು ಕಾವ್ಯಧರ್ಮ ಎರಡನ್ನೂ ಸಮನ್ವಯಗೊಳಿಸಲು ಪ್ರಯತ್ನಿಸಿದ್ದಾರೆ.

ಗ್ರಂಥಋಣ

- ಹಳಗನ್ನಡ ಸಾಹಿತ್ಯ ಅಧ್ಯಯನ ಸಮೀಕ್ಷೆ ಯಿ– ಶ್ರೀಮತಿ ಎಚ್ ಎಸ್ ಎಸ್.
- ಕರ್ನಾಟಕ ಕವಿ ಚರಿತೆ – ಆರ್ ನರಸಿಂಹಾಚಾರ್.
- ಕನ್ನಡ ಸಾಹಿತ್ಯ ಚರಿತ್ರೆ ಒಂದು ಸಮೀಕ್ಷೆ – ತ ಸು. ಶಾಮರಾಯ.
- ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ –ಶಿವರುದ್ರಪ್ಪ. ಜಿ. ಎಸ್.
- ವಡ್ಡಾರಾಧನೆ ಎರಡನೇ ಮುದ್ರಣ – ನಾಗರಾಜಯ್ಯ ಹಂಪ .
- ಮಾರ್ಗ ಒಂದು – ಎಂಎಂ ಕಲಬುರ್ಗಿ
- ಆದಿಪುರಾಣ ಸಂಗ್ರಹಂ – ಎಲ್ ಗುಂಡಪ್ಪ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

- ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ ಎರಡು – ಶಿವರುದ್ರಪ್ಪ ಜಿ ಎಸ್
- ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ – ರಾಜಪ್ಪ ದಳವಾಯಿ, ಬರಗೂರು ರಾಮಚಂದ್ರಪ್ಪ
- ತಪೋನಂದನ –ಕುವೆಂಪು
- ಎರಡು ಜೈನ ಪುರಾಣಗಳು ಅನಂತನಾಥ ಪುರಾಣ ಮಲ್ಲಿನಾಥ ಪುರಾಣ –ಕೃಷ್ಣಕುಮಾರ್ ಸಿ ಪಿ.
- ಕನ್ನಡ ಸಾಹಿತ್ಯ ಮತ್ತು ಉಪನ್ಯಾಸಗಳು –ತಿಮ್ಮಪ್ಪಯ್ಯ
- ಕನ್ನಡ ಸಾಹಿತ್ಯ ಸಂಗಾತಿ –ಕೀರ್ತಿನಾಥ ಕುರ್ತುಕೋಟಿ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಆಧುನಿಕ ನಾಟಕ ಮತ್ತು ರಂಗಭೂಮಿಯಲ್ಲಿ ಡಾ.ರಾಜಪ್ಪ ದಳವಾಯಿ ಅವರ ಕೊಡುಗೆಗಳು

ಶ್ರೀಮತಿ ವೆಂಕಟಲಕ್ಷ್ಮಿ ಎಂ.
ಸಂಶೋಧನಾ ವಿದ್ಯಾರ್ಥಿನಿ ಕನ್ನಡ ವಿಭಾಗ
ಕರ್ನಾಟಕ ರಾಜ್ಯ ಅಕ್ಕಮಹಾದೇವಿ
ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ
Email : lakshmivasanth2007@gmail.com

Manuscript ID:
JRD -2026-180438
ISSN: 2230-9578
Volume 18
Issue 4(II)
Pp.132-134
April 2026
Submitted:20 Mar. 2026
Revised:30Mar. 2026
Accepted:14Apr.2026
Published:30 April2026

ಸಾರಲೇಖ :

ಸಾಹಿತ್ಯಎನ್ನುವುದು ಸೀಮಿತ ಜ್ಞಾನವಲ್ಲ, ಅದರಲ್ಲಿಯುಆಧುನಿಕತೆಎನ್ನುವ ಪರಿಕಲ್ಪನೆಯೇ ಸಾಪೇಕ್ಷವಾಗಿದೆ. ಇದು ಮೂರ್ತ ಮತ್ತುಅಮೂರ್ತ ಸ್ವರೂಪದಲ್ಲಿ ಒಳಗೊಳ್ಳುವಂತದ್ದು ಅಲ್ಲದೆ ನಮ್ಮಜೀವನದಎಲ್ಲಕ್ಷೇತ್ರ ಮತ್ತು ಕಾಲಗಳನ್ನು ಒಳಗೊಂಡಿದೆ. ಉದಾ : ವಿಜ್ಞಾನವನ್ನು ನಾವು ವಿವೇಕದಿಂದ ಬಳಸಿದರೆ ಪ್ರಗತಿಯಾಗಿಯೇ ನೆರವಿಗೆ ಬರುತ್ತದೆ. ಹಾಗೇ ಅದನ್ನೇ ಅವಿವೇಕದಿಂದ ಬಳಸಿದರೆ ಪರಮಾಣು ಬಾಂಬ್ ಆಗಿ ಎಲ್ಲವನ್ನೂ ಸುಟ್ಟು ಬಿಡುತ್ತದೆ, ವಸ್ತು ರೂಪದ ವಿಜ್ಞಾನವು ಮೂರ್ತವಾದರೆಜ್ಞಾನರೂಪದ ವಿಜ್ಞಾನವು ಮೂರ್ತವಾದರೆಜ್ಞಾನರೂಪದ್ದುಅಮೂರ್ತದಾಗಿರುತ್ತದೆ. ಇಲ್ಲಿ ಭಾಷೆ, ಶಿಕ್ಷಣ, ಆಡಳಿತ ಕೈಗಾರಿಕೆಕಟ್ಟಡರಸ್ತೆಅಣೆಕಟ್ಟುತಂತ್ರಜ್ಞಾನ ಕ್ಷೇತ್ರಗಳ ಬಳಕೆಯಿದ್ದು ಅದು ಸಾರ್ವಕಾಲಿಕವಾಗಿ ಪ್ರಸ್ತುತವಾಗುತ್ತದೆ.

ನಮ್ಮ ಪರಂಪರೆಯಅವಾಚೀನಘಟ್ಟವೇಆಧುನಿಕವಾಘಿದ್ದು, ಇದರ ಮೂಲಕ ನಮ್ಮಕನ್ನಡ ಸಾಹಿತ್ಯದ ಒಳಗೆ ಹೊಸ ಅನುಭವ, ಹೊಸ ಲೋಕದ ಪ್ರವೇಶವೂಆಗಿದೆ. ಆಧುನಿಕಕ್ರಾಂತಿಯಿಂದಾಗಿ ಸಾಹಿತ್ಯವು ಪ್ರತಿಷ್ಠಿತ ಸ್ಥಾನವನ್ನಿಂದು ಕಳೆದುಕೊಳ್ಳುತ್ತಿದೆ. ಸಾಂಸ್ಕೃತಿಕ ಸಮಾಜಗಳಲ್ಲಿ ಅರೆ ಶಿಕ್ಷಿತವಾಗಿದ್ದರು. ಸಹ ಸಾಹಿತ್ಯಕ್ಕೆ ಹೆಚ್ಚು ಸ್ಪೋಟಕ ಶಕ್ತಿ ಇರುತ್ತದೆ. ಕನ್ನಡ ನಾಟಕ ಸಾಹಿತ್ಯವುದ್ರಾವಿಡ ಸಂಸ್ಕೃತಿಯಒಂದು ಅಂಗವಾಗಿ ಬೆಳೆದು ಸ್ವತಂತ್ರ ನೃತ್ಯಗೀತಾದಿ ಪರಂಪರೆಯನ್ನುಕಾಪಾಡಿಕೊಂಡು ಬಂದಿದೆ.

ಮನುಷ್ಯನುತನ್ನ ಭಾವನೆಗಳನ್ನು ವ್ಯಕ್ತಪಡಿಸಲು ಅನಾದಿಕಾಲದಿಂದಲೂ ಬಳಸಿಕೊಂಡಿರುವ ಸಾಧನಗಳಲ್ಲಿ ಕುಣಿತ ಮತ್ತು ಹಾಡುವಕ್ರಿಯೆಯೇ ನಾಟಕದ ಉಗಮಕ್ಕೆ ಕಾರಣವಾಗಿದೆ. ವೇಷಭೂಷಣ, ಸಂಗೀತ, ನೃತ್ಯ, ಸಂಭಾಷಣೆ, ವಸ್ತು, ಪಾತ್ರ, ಹಿಮ್ಮೇಳ ಮುಂತಾದವು ನಾಟಕರಂಗಕ್ಕೆ ಅನಿವಾರ್ಯವಾಗಿಇರಬೇಕಾದ ಅಂಶಗಳು ಕರಡಿ ಮಜಲು, ಡೊಳ್ಳು ಕುಣಿತ, ಗೊಂದಲಿಗರ ಮೇಳ, ಕೋಲಾಟ, ವೀರಗಾಸೆಕುಣಿತ, ಗೊರವರಕುಣಿತ, ದುಡಿಕುಣಿತ, ಭೂತ ನೃತ್ಯ, ಕಂಸಾಳೆ, ಹರಿಕಥೆ, ಶಿವಕಥೆ ಮುಂತಾದಜನಪದ ಕಲೆಗಳ ಮೂಲಕ ನಮ್ಮಕನ್ನಡಿಗರಿಗೆ ಈ ಮೊದಲೇ ನಾಟಕವು ಮಾನವನ ಮೂಲಭೂತ ಸ್ವಭಾವವಾದಅನುಕರಣ ಮತ್ತು ಕಲೆಗಳ ಮೂಲಕ ಪರಿಚಿತವಿತ್ತು. ಕನ್ನಡ ನಾಟಕ ಮತ್ತುರಂಗಭೂಮಿಯು ಮೈಸೂರುಒಡೆಯರಆಶ್ರಯದಲ್ಲಿ ಬೆಳೆಯುತ್ತ. 19ನೇ ಶತಮಾನದಕೊನೆಯಲ್ಲಿ ವೃತ್ತಿರಂಗ ಭೂಮಿಯಾಗಿ ಬದಲಾಗಿ ಹೊಸಶಕೆಗೆ ಅನುಗುಣವಾಗಿ ಬೆಳೆಯುತ್ತ ಸ್ವಾತಂತ್ರ್ಯ ಹೋರಾಟಕ್ಕೂ ಪ್ರೇರಕವಾಗಿತ್ತು.

ಇಂದು ಹವ್ಯಾಸಿ ಮತ್ತು ಪ್ರಯೋಗಾತ್ಮಕರಂಗಭೂಮಿಯೊಂದಿಗೆ ಮುಂದುವರೆಯುತ್ತಿದೆ. ಆದರೂ ಸಹ ವೃತ್ತಿರಂಗಭೂಮಿಕುರಿತ ಪ್ರಶ್ನೆಗಳು ರಂಗಾಸಕ್ತರನ್ನಕಾಡುತ್ತಿವೆ. ಇದರ ಬೇರು ಸಂಸ್ಕೃತ ನಾಟಕಗಳಿಂದ ಮೂಡಿದ್ದರೂ ಸಹ ಆಧುನಿಕ ಕಾಲಕ್ಕೆ ಹೆಚ್ಚು ಪ್ರಚಲಿತವಾಗಿದೆ. ಈ ಹಿನ್ನೆಲೆಯಲ್ಲಿಡಾ. ರಾಜಪ್ಪ ದಳವಾಡಯಿಯವರ ಸಾಹಿತ್ಯಕ್ಷೇತ್ರತುಂಬಾ ವಿಶಾಲವಾಗಿದ್ದು, ಇವರ ಸಾಹಿತ್ಯವನ್ನು ಇನ್ನುಳಿದ ಸಾಹಿತ್ಯಕ್ಕಿಂತ ವಿಭಿನ್ನದೃಷ್ಟಿಕೋನದಿಂದಅಧ್ಯಯನ ಮಾಡುವ ಅನಿವಾರ್ಯತೆಯಿದೆ. ಏಕೆಂದರೆಇವರು ವೃತ್ತಿಯಿಂದ ಪ್ರಾಧ್ಯಾಪಕರಾಗಿದ್ದರು. ಸಹ ಪ್ರವೃತ್ತಿಯಲ್ಲಿ ಸಾಹಿತ್ಯದಜೊತೆಗೆರಂಗಭೂಮಿಯಲ್ಲಿಕೊಡುಗೆ ಸಲ್ಲಿಸಿರುವುದು ಸುಲಭದ ಕೆಲಸವಲ್ಲ. ಪ್ರತಿಭೆ, ಜ್ಞಾನ, ಪಾಂಡಿತ್ಯದಲ್ಲಿಒಬ್ಬರಿಗಿಂತಇನ್ನೊಬ್ಬರುಅಸಾಮಾನ್ಯವಾಗಿರುತ್ತಾರೆಎಂಬುದಕ್ಕೆ ದಳವಾಯಿ ಅವರುಜ್ವಲಂತ ಸಾಕ್ಷಿಯಾಗಿದ್ದಾರೆ.

ಇವರ ನಾಟಕಗಳನ್ನು ಪೌರಾಣಿಕ, ಚಾರಿತ್ರಿಕ, ಬೀದಿ ನಾಟಕ ಹಾಗೂ ಅಂಕನಾಟಕಗಳಾಗಿ ವಿಭಾಗಿಸಲಾಗಿದೆ. ಪ್ರಸ್ತುತ ಲೇಖನದಲ್ಲಿಅವರ ಕುಲಂ, ಸುಯೋಧನ, ಒಂದು ಬೊಗಸೆ ನೀರು, ಜೇಡರ ದಾಸಿಮಯ್ಯ, ಜಾತಿ ಮಾಡಬ್ಯಾಡರಿ ಅಧಿಕಾರದೊಳಗ, ತಂಬೂರಿ ಹಾಗೂ ಡೋಲಿ ಮತ್ತುಇತರೆ ನಾಟಕಗಳು ಮುಂತಾದ ಪ್ರಮುಖ ನಾಟಕಗಳ ವಸ್ತು ಮತ್ತುಆಶಯದಕುರಿತು ವಿಶ್ಲೇಷಿಸಲಾಗಿದೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಶ್ರೀಮತಿ ವೆಂಕಟಲಕ್ಷ್ಮಿ ಎಂ.ಸಂಶೋಧನಾ ವಿದ್ಯಾರ್ಥಿನಿ ಕನ್ನಡ ವಿಭಾಗಕರ್ನಾಟಕರಾಜ್ಯಅಕ್ಕಮಹಾದೇವಿಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

How to cite this article:
ಶ್ರೀಮತಿ ವೆಂಕಟಲಕ್ಷ್ಮಿ ಎಂ,(2026) ಆಧುನಿಕ ನಾಟಕ ಮತ್ತು ರಂಗಭೂಮಿಯಲ್ಲಿ ಡಾ.ರಾಜಪ್ಪ ದಳವಾಯಿ ಅವರ ಕೊಡುಗೆಗಳು.
Journal of Research and Development, 18(4(II)), 132–134. https://doi.org/10.5281/zenodo.19396922

Quick Response Code:
Website: https://jrdrvb.org/
DOI: 10.5281/zenodo.19396922
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಅಲ್ಲದೇ ನಾಟಕರಚನಕಾರರಾಗಿ ಸಾಹಿತ್ಯಕವಾಗಿ ಮಾತ್ರವಲ್ಲದೇ ಸ್ವತಃತಾವೇ ನಟರಾಗಿ, ನಿರ್ದೇಶಕರಾಗಿ ಹಲವು ನಾಟಕಗಳಿಗೆ ರಂಗದ ಮೇಲೆ ಜೀವತುಂಬಿದ್ದಾರೆ.ಇವರಎಲ್ಲ ನಾಟಕಗಳು ರಾಜ್ಯದಲ್ಲೆಡೆ ಹಲವಾರು ಪ್ರದರ್ಶನಗಳನ್ನು ಕಂಡು ಸಹೃದಯರ ಮನಮುಟ್ಟಿವೆ. ನಾಟಕ ನಿರ್ದೇಶನದಲ್ಲಿಅತ್ಯುತ್ತಮ ಪರಿಶ್ರಮ ಹೊಂದಿರುವ ದಳವಾಯಿ ಅವರುತಮ್ಮಆರು ನಾಟಕಗಳನ್ನು ಸ್ವತಃ ನಿರ್ದೇಶಿಸಿದ್ದಾರೆ.2008ರಲ್ಲಿ ಕೇವಲ ಹನ್ನೆರಡು ದಿನಗಳ ಕಾಲದಲ್ಲಿ ಹನ್ನೆರಡು ನಾಟಕಗಳು ನಾಟಕೋತ್ಸವದಲ್ಲಿ ಪ್ರದರ್ಶನಗೊಂಡಿವೆ. ಈ ರಂಗ ಸಾಧನೆಯನ್ನು ಗುರ್ತಿಸಿದ ಕರ್ನಾಟಕ ನಾಟಕಅಕಾಡೆಮಿಯುತನ್ನ ಸುವರ್ಣಾಚರಣೆಯ ಸಂದರ್ಭದಲ್ಲಿ ರಂಗಪ್ರಶಸ್ತಿ ನೀಡಿ ಗೌರವಿಸಿರುವುದು ಶ್ಲಾಘನೀಯ.

ರಾಜಪ್ಪ ದಳವಾಯಿ ಅವರೇ ಸ್ವತಃ ಅಭಿಪ್ರಾಯಿಸಿರುವಂತೆ ನಾಟಕವನ್ನುಕಲೆಯಾಗಿಕಲಿಯುವಉತ್ಸಾಹ ಇಂದಿನ ಯುವಜನತೆಯಲ್ಲಿಕ್ಷೀಣಿಸುತ್ತಿದ್ದು, ನಿಜವಾದರಂಗಕರ್ಮಿಆದವರುದೇಶದ, ಕಾಲಮಾನವನ್ನ ನಿರ್ಧರಿಸುವ ಶಕ್ತಿಯನ್ನ ಪಡೆದಿರುತ್ತಾರೆ. ಅಲ್ಲದೆರಂಗಭೂಮಿಗೆ ಪ್ರೇಕ್ಷಕರೇ ಜೀವಾಳ.ರಂಗಭೂಮಿಯಲ್ಲಿ ತೊಡಗಿಸಿಕೊಂಡವರು ಜೀವನವನ್ನುಗಂಭೀರವಾಗಿ ಪರಿಗಣಿಸುತ್ತಾರೆ. ರಂಗಭೂಮಿಒಬ್ಬರಂಗಕರ್ಮಿಗೆಅಥವಾಕಲಾವಿದನಿಗೆ ಅನೇಕ ಪ್ರಶ್ನೆಗಳನ್ನು ಮೂಡಿಸುತ್ತೆ.

ಕನ್ನಡಚರಿತ್ರೆಯಲ್ಲಿರಂಗಭೂಮಿಯ ಪಾತ್ರ ಬಹಳ ಮುಖ್ಯವಾದದ್ದು, ಮನುಷ್ಯ ಮಾಡಬಹುದಾದಎಲ್ಲರೀತಿಯ ಚಟುವಟಿಕೆಗಳು, ರಂಗದ ಮೇಲೆ ನಡೆಯುವಕ್ರಿಯೆಗೆ ವಸ್ತುವನ್ನಆರಿಸುವ ಪರಿಯಲ್ಲಿಯೇ ವಿಶೇಷತೆಯಿದೆ.ಇವರು ಪುರಾಣ ಮತ್ತುಐತಿಹಾಸಿಕ ವಿಷಯಗಳನ್ನು ಸಮಕಾಲೀನಗೊಳ್ಳುವ ಮಾದರಿಯಲ್ಲಿ ಸಾಹಿತ್ಯಕವಾಇ ನಾಟಕಗಳ ರಚಿಸಿದ್ದರೆ ರಂಗದ ಮೇಲೆ ಸಂಗಟಕರಾಗಿ ಪ್ರದರ್ಶಿಸುವ ಮಾದರಿಇನ್ನೊಂದು ಬಗೆಯ ವೈಶಿಷ್ಟ್ಯತೆಯನ್ನ ಪಡೆಯುತ್ತದೆ.

ಒಂದೊಂದು ನಾಟಕಕ್ಕೂಒಂದೊಂದುರೀತಿಯಅದರದೇಆದ Anotomy ಇರುತ್ತೆಅದರ Tssue ಏನು Background ಏನು ಅದರ ವಸ್ತು ಕ್ರಿಯೆಅದರ ವೈಚಾರಿಕತೆ ಏನು?ಆ ವೈಚಾರಿಕಾಕೃತಿ ಹೇಗೆ Create ಆಗುತ್ತೇ? ಆ ಕ್ರಿಯೇಟಿವ್ ಪರ್ಸಿಪರ್ಷ್ ಯಾವುದರಿಂದ ಬರುತ್ತೆಎನ್ನುವ ವಿಚಾರಗಳು ಬಹಳ ಮುಖ್ಯಆಗುತ್ತೆ.

ವಿಚಾರವಂತಕರು ಬಹಳಷ್ಟು ಜನಇದ್ದಾರೆ.ಆದರೆ ವಿಚಾರಗಳನ್ನ ಕ್ರಿಯೇಟ್ ಮಾಡುವವರು ಎಷ್ಟು ಜನ? (ಬಹಳ ವಿರಳ) ಅದು ಮುಖ್ಯ ಸಂವಿಧಾನದ ಬಗ್ಗೆ We the people of Indiaಎಂದುರಚಿಸಲಾಗಿಅದು ಬಹಳ ಮುಖ್ಯವಾಗಿ ಸಂವಿಧಾನವನ್ನುಒಂದು ನಾಟಕಕೃತಿಯಾಗಿ ನೋಡಿರುವ ಪ್ರಯೋಗವೇ ವಿಶೇಷವಾದದ್ದು, ಸಾಹಿತ್ಯದ ಪಠ್ಯವಾಗಿಒಂದು ನಾಟಕವನ್ನು ಬರೆಯುವ ಲೇಖಕ ತಾನೇ ನಿರ್ದೇಶಕನಾಗಿಯೇ (ನಟನಾಗಿಯೋರಂಗದ ಮೇಲೆ ಪ್ರಯೋಗಕ್ಕೆತಂದಾಗ ಮೂಲ ಆಶಯ/ ವಸ್ತು ತಪ್ಪಿ ಹೋಗುತ್ತೋ) ಬಂದು ಸೇರುತ್ತೊಇಲ್ಲಇನ್ನೇನಾದರೂ ವ್ಯತ್ಯಾಸಗಳಾಗುತ್ತವೆಯೋ ಎಂಬ ಪ್ರಶ್ನೆಗೆಉತ್ತರಿಸುತ್ತಾ ಬಹಳಷ್ಟು ಬೆಳವಣಿಗೆಗಳಾಗುತ್ತವೆ. ಒಂದುಕಲಾಕೃತಿ ನಿರ್ಮಾಣಆಗಬೇಕಾದರೆತುಂಬಾ ದಿನಗಳ ಪರಿಶ್ರಮ ಹೇಗೆ ಬೇಕು ಹಾಗೆ ತುಂಬಾ ದಿನಗಳ ಆಲೋಚನಾ ಕ್ರಮ ಆಮೇಲೆ ಅದನ್ನಕೂತು ಬರೆಯುತ್ತೇವೆಎನ್ನವಾಗಿನ ಸ್ವರೂಪವೇ ಬೇರೆಯಾಗುತ್ತೆ ಮತ್ತೆತಿದ್ದಿ ಬರೆದಾಗಇನ್ನೊಂದುರೂಪ ಪಡೆಯುತ್ತೆ ಮತ್ತೊಮ್ಮೆತಿದ್ದಿದಾಗ ಬೇರೆಆಗುತ್ತೆ.

ನಾಟಕರಚನೆಯಲ್ಲಿ ವಿಷಯದ ಸ್ಪಷ್ಟತೆಇಲ್ಲದೆರಚಿಸುವಕ್ರಿಯೆಗೆಅರ್ಥಇರುವುದಿಲ್ಲ. ಉದಾ : ಸಂವಿಧಾನ ಬರಿತೀನಿ ಅಂತ ಕುಳಿತು ಕಾವ್ಯ ಮೀಮಾಂಸೆ ಬರೆಯಲುಆಗುತ್ತದೆಯೇಇಲ್ಲ. ನಾವು ಏನು ಅಂದುಕೊಂಡು ಕುಳಿತಿರುತ್ತೇವೋ ಎನ್ನುವ ಸ್ಪಷ್ಟತೆಅತಿ ಮುಖ್ಯವಾಗಿ ನಾಟಕಕಾರನಿಗೆಇರಲೇಬೇಕಾಗುತ್ತದೆ. ಕಾವ್ಯರಚನೆಗೆಅಂತಹ ನಿಯಮಗಳಿರಬಹುದು.ಆದರೆ ನಾಟಕರಚನೆಯಲ್ಲಿ ವಾಸ್ತವಿಕ ಸನ್ನಿವೇಶದೊಂದಿಗೆ ಪುರಾಣದ ಪಾತ್ರ, ವಸ್ತು ಎಲ್ಲವರೂ ಸಮೀಕರಿಸಿ ಜನರ ಮನಸ್ಸಿಗೆ / ವರ್ತಮಾನ ಸ್ಥಿತಿಗತಿಗೆ ಅನುಗುಣವಾಗಿ ಹಲವಾರು ಬದಲಾವಣೆಗಳನ್ನು ಮಾಡಿಕೊಳ್ಳಲೇ ಬೇಕಾಗುತ್ತದೆ.

ರಾಜಪ್ಪ ದಳವಾಯಿ ಅವರ ಪೌರಾಣಿಕ ನಾಟಕಗಳೆಂದರೆ ಕುಲಂ, ಸುಯೋಧನ ನಾಟಕದಲ್ಲಿನ ವಸ್ತುವು ರನ್ನನಗದಾಯುದ್ಧ ಮತ್ತು ಪಂಪನ ವಿಕ್ರಮಾರ್ಜುನ ವಿಜಯದಲ್ಲಿ ವಿಶೇಷವಾಗಿ ಅದನ್ನೇ ದಳವಾಯಿ ಅವರರಂಗಪ್ರಯೋಗ ಪ್ರಸ್ತುತದ ಸಾಮಾಜಿಕ, ರಾಜಕೀಯ ಮತ್ತುಧಾರ್ಮಿಕತೆಯ ಮೌಲ್ಯಗಳನ್ನು ಸಾರುವ ಮತ್ತುಆಧುನಿಕಜಗತ್ತಿನ ಆಶಯಗಳನ್ನು ಪೌರಾಣಿಕ ಕೃತಿಗಳೊಡನೆ ಹೋಲಿಸುವುದರ ಮೂಲಕ ಅಭಿವ್ಯಕ್ತಿಸಿದ್ದಾರೆ. 'ಕುಲಂ'ನಲ್ಲಿಕಣ್ಣನ ಪಾತ್ರ ಸರ್ವಕಾಲಕ್ಕೂ ನಿಲ್ಲುವ ಶೋಷಿತ ಸಮುದಾಯದ ಪ್ರತೀಕವಾದರೆ, 'ಸುಯೋಧನ' ನಾಟಕದಲ್ಲಿಯುದ್ಧಕ್ಕಿಂತಲೂರಕ್ತ ಸಂಬಂಧದೊಡ್ಡದು ಎಂಬ ಮೌಲ್ಯವನ್ನುದೃತರಾಷ್ಟ್ರ ಮತ್ತುಗಾಂಧಾರಿಯ ಪಾತ್ರಗಳ ಮೂಲಕ ಬಿಂಬಿಸಲಾಗಿದೆ.ಇನ್ನೂದುರ್ಯೋಧನನಅವಸ್ಥೆಯಕಂಡುಕೊನೆಯಲ್ಲಿ ನಗುವ ದ್ರೌಪದಿ ಏನು ಕ್ರೂರಿಯಲ್ಲಆದರು ಅವಳ ಆನಂದಲ್ಲಿಯೇದುರ್ಯೋಧನನ ಸ್ವಾರ್ಥ, ಅಸೂಯೆಅಹಂಕಾರ, ದಾಯಾದಿ ಮತ್ಸರದ ಗುಣಗಳಿಂದಲೇ ಅವಸಾನವಾದ ಸತ್ಯದ ಪರಮಾರ್ಥವನ್ನರಂಗದ ಮೂಲಕ ಅಭಿವ್ಯಕ್ತಿಸಿದ್ದಾರೆ.

ಐತಿಹಾಸಿಕ ನಾಟಕಗಳಾದ 1) "ದಾರಾಶಿಕೊ"ದಲ್ಲಿ ಮೊಗಲ್ಇತಿಹಾಸದ್ದೇಆದರು ಸಮಕಾಲೀನ ಕೋಮುವಾದದ ಬಿಕ್ಕಟ್ಟುಗಳ ಬೇರುಗಳಲ್ಲಿ ಭಾವೈಕ್ಯತೆಯನ್ನು ಬೆಸೆಯಲು ಹೋಗಿ ಸ್ವತಃತಾನೇದುರಂತಕ್ಕೀಡಾದನು. ತನ್ನ ಸಾವಿನಲ್ಲೂಇತರರ ಲೇಸನ್ನೇ ಬಯಸಿದ ದಾರಾನ ಮೌಲ್ಯ ವಾಸ್ತವ ಜಗತ್ತಿಗೂ ಪ್ರಸ್ತುತವಾಗಿದೆ. 2) ಜೇಡರ ದಾಸಿಮಯ್ಯ : ವೃತ್ತಿಯಲ್ಲಿ ನೇಕಾರನಾದ ದಾಸಿಮಯ್ಯನನ್ನ ತತ್ವಜ್ಞಾನಿಯಾಗಿರಂಗದ ಮೇಲೆ ಪರಿಚಯಿಸುತ್ತಿರುವ ದಳವಾಯಿ, ಕಾಯಕದಲ್ಲಿ ನಿಷ್ಠಾವಂತ, ರಾಜರಾಣಿಗಿಂತಲೂ ಈ ಕಾಯಕಜೀವಿಯೇದೊಡ್ಡವನೆಂದುಚಿತ್ರಿಸುತ್ತ ಹಸಿವು, ಕಳವು, ಬೂಟಾಟಿಕೆಯ ಬಗ್ಗೆ ಒಂದೊಂದು ವಚನವೂ ಸಹ ಬೆಳಕು ಹರಿಸಿವೆ.

ಒಂದು ಬೊಗಸೆ ನೀರು : (ಅಲೆಗ್ಸಾಂಡರ್‌ದಗ್ರೇಟ್)

ಕಥಾನಾಯಕನಾದಅಲೆಕ್ಸಾಂಡರ್‌ನ ಪ್ರವೇಶತನ್ನಎರಡೂ ಕೈಗಳನ್ನು ಮೇಲಕ್ಕೆತ್ತಿರುವ ಪರಿಯಲ್ಲಿಇಡೀಜಗತ್ತನೇಗೆದ್ದ ಮಹಾ ವೀರಾಧಿವೀರಆದ್ರೆ ಕೋನೇಲಿ ಇದೇಜಗತ್ತಿನಿಂದಒಂದೇ ಹಿಡಿಯಲ್ಲಿನತೆಗೆದುಕೊಂಡು ಹೋಗಲಾಗದೆ ಸ್ಥಿತಿಯನ್ನ ಬಿಂಬಿಸಿದ್ದಾರೆ.ಸಾವಿನಲ್ಲಿಯಾವರಾಜ್ಯ, ಅಧಿಕಾರ, ಕಿರೀಟ, ಸಂಪತ್ತಿಗಿಂತಜೀವ ಉಲಿಸಲು ಬೇಕಾದದ್ದು ಕೇವಲ ಒಂದು ಬೊಗಸೆ ನೀರು ಮಾತ್ರ.ರಾಜನಾದವನಿಗೆಒಂದು ಬೊಗಸೆ ನೀರು ಸಿಗದೇ ಸಾಯುವ ಸ್ಥಿತಿ ಈಗಿನ ಸಮಾಜಕ್ಕೆಒಂದು ಪರಿಪಾಠವಾಗಿದೆ.

"ಪ್ರೀತಿಯ ಹುಡುಕುತ್ತಾ" ನಾಟಕದಲ್ಲಿಅಗ್ನಿ ಶ್ರೀಧರ ಅವರ ಹತ್ತು ಸಾಲಿನ ಕಥೆಯನ್ನುಒಂದು ನಾಟಕವಾಗಿಸಿರುವ ದಳವಾಯಿ ಅವರ ಸಾಹಸ ನಿಜಕ್ಕೂ ಶ್ಲಾಘನೀಯ ಸ್ವತಃ ವಿಧೂಷಕನ ಪಾತ್ರ ಸೃಷ್ಟಿಸಿ ಅವನ ಮೂಲಕ ತತ್ವಜ್ಞಾನವನ್ನು ಸಾರಲಾಗಿದೆ.ಸೆರೆಮನೆಯಲ್ಲಿ ಬಂಧಿಯಾಗಿದ್ದಗಂಡನಜೀವ ಉಳಿಸುವಲ್ಲಿ ಮಹಿಳೆ ನಿರ್ವಹಿಸಿರುವ ಪಾತ್ರ ವಿಶಿಷ್ಟವಾಗಿದೆ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಯಲುರಾಜನ ಮಡದಿಯಂತುಜಾನಪದ ಸೊಗಡನ್ನುರಂಗರೂಪಕ್ಕೆ ಬದಲಿಸಿರುವ ಪರಿಯಾಗಿದೆ.ರಾಣಿಯ ಅಕ್ಕನ ಪಾತ್ರ ಸೃಷ್ಟಿಯ ಮೂಲಕ ದಳವಾಯಿ ಅವರು ಹೊಸ ಮೆರುಗನ್ನು ನೀಡಿದ್ದಾರೆ. ಇಲ್ಲಿನರಾಜನಂತು ಬಹಳ ಸೌಮ್ಯ ಸ್ವರೂಪಿಯಾದವ ಸ್ವತಃತಾನೇಖಿದ್ದಾಗಿ ಹೋಗಿ ಆ ರಾಣಿ ಪ್ರೇಮಿಸಿದ ಕಲಾವಿದನ ಹುಡುಕಿ "ನನ್ನ ಸಖಿ ನಿನ್ನ ಮೆಚ್ಚಿರುವಳೆಂದ್ರೆ ನಿನ್ನ ಹಣೆ ಬರಹ ನಿಜವಾಗಿಯೂಚೆನ್ನಾಗಿದೆಯಪ್ಪಆದರೂ ಅವಳು ಸತ್ತ ನಲ್ವತ್ತೆರಡು ದಿವಸಕ್ಕೆ ಆಕೆಯತಲೆಬುರುಡೆಯನ್ನತನಗೇತಂದುಕೊಡು ಅವಳ ಹಣೆಬರಹದಲ್ಲಿಏನಿದೆಯೆಂದು ಓದಿಕೊಳ್ಳುತ್ತೇನೆ" ಎಂದು ಬೇಡಿಕೊಂಡ ಪರಿ ಮತ್ತುರಾಣಿಗೆ ಪೂಜಿಸುತ್ತಿದ್ದಕ್ರಮ ಬಹಳ ವಿಶೇಷವಾಗಿದೆ. ಪ್ರತಿಗಂಧರ್ವದಲ್ಲಿ ಹಿಂದೂ, ಮುಸ್ಲಿಂ ನಿಸ್ವಾರ್ಥ ಪ್ರೀತಿ, ಕಲಾವಿದರಲ್ಲಿಯಾವುದೇಜಾತಿ, ಧರ್ಮ, ಭಾಷೆ, ದೇಶ, ಪ್ರಾಂತ್ಯ ರಾಜ್ಯಗಳ ಹಂಗಿಲ್ಲದೇಎಲ್ಲಾ ಗಡಿಗಳನ್ನು ಮೀರಿದ್ದು ಪರಿಶುದ್ಧ ಬಂದವಾಗಿರಂಗಭೂಮಿಕಲೆಯಿಂದೆ ಕೋಮು, ದ್ವೇಷ, ಭಾಷಾದ್ವೇಷವು ಎದುರಿಸಿ ನಿಂತಕಲಾವಿದರ ಬದುಕಿನಕಥೆಯಿದೆ.

ಅಯಸಿಸ್ :

ನಾಟಕವಂತುಈಜಿಪ್ಟ್‌ನ ನೈಜಕತೆಯನ್ನುಕನ್ನಡಕ್ಕೆತರಲಾಗಿದ್ದು, ಮಹಿಳಾಧ್ವನಿಗೆ ಕೊರಳಾಗಿರುವ ಪರಿಯಲ್ಲಿ ವಿಶೇಷತೆಯಿದೆ.ಸ್ವತಃತನ್ನತಮ್ಮನಿಂದಲೇಐಂದ್ರಜಾಲಿತ ಪೆಟ್ಟಿಯಲ್ಲಿ ಬಂದಿಯಾಗುವರಂಗನಾಯಕಿ ಶಕ್ತಿ ದೇವತೆಯಾಗಿದ್ದುತನ್ನ ಶಕ್ತಿಯಿಂದಲೇಗಂಡನನ್ನು ಬಂಧನದಿಂದ ಬಿಡಿಸುವ ಮಾಂತ್ರಿಕತೆ ಈ ನಾಟಕದ ವಸ್ತುವಾಗಿದೆ.

ಬೀದಿ ನಾಟಕಗಳು :

ಕದ್ದವರ್ಯಾರಣ್ಣ ಬೀಜಗಳ, ಸ್ತನ್ಯಪಾನ, ಮಾಹಿತಿ ಹಕ್ಕು ಎಲ್ಲರ ಹಕ್ಕು, ಮುನ್ಸಿಪಾಲಿಟಿ, ನೀರು ಮತ್ತು ನೈರ್ಮಲ್ಯ ಎಲ್ಡಕ್ಕೆ ಹೋಗೋದೆಲ್ಲ, ಜಾತಿ ಮಾಡಬೇಡಿರಿ ಅಧಿಕಾರದೊಳಗ, ಕೆಂಪುದೀಪದ ಕೆಳಗೆ, ಡಾ.ಯಲ್ಲಮ್ಮ ನಮ್ಮ ಹೊಲ ನಮ್ಮದಾರಿಇನ್ನಿತರರಾಜಪ್ಪ ದಳವಾಯಿ ಅದರ ಬೀದಿ ನಾಟಕಗಳು ಒಂದೊಂದು ಸಹ ಒಂದು ವಿಶೇಷತೆಯ ಒಳಗೊಂಡ ಸಾಮಾಜಿಕ ಪ್ರಕ್ರಿಯೆಯನ್ನಜನರ ನಡುವೆಯೇ ನಿಂತು ಪ್ರಯೋಗಿಸುತ್ತಾಅರಿವನ್ನು ಮೂಡಿಸಿರುವ ಪರಿಯಾಗಿದೆ.

ಏಕಾಂಕಗಳು :

ಪುರಿ ಶಂಕರಾಚಾರ್ಯ, ಮೈಲಾರಿ, ಸ್ವತಂತ್ರ ನಿದ್ದೆ, ರಾಜಾಮಂತ್ರಿಡೋಲಿ ಮತ್ತುಇತರ ನಾಟಕಗಳಲ್ಲಿ ಅತ್ಯಂತಕಡಿಮೆ ಸಮಯದಲ್ಲೇ ಹೆಚ್ಚು ಜನರನ್ನುತಲುಪಬಲ್ಲ ಜಾಗೃತ ಭಾವ ನಿಜಕ್ಕೂ ಶ್ಲಾಘನೀಯವಾದದ್ದು, ನಮ್ಮದೇಶಕ್ಕೆ ಸ್ವಾತಂತ್ರ್ಯ ಸಿಕ್ಕು, ಇಷ್ಟು ವರ್ಷಗಳಾದರೂ ಅಸ್ಪಶ್ಯತೆಯಕಂಟಕವಿನ್ನೂ ಬಿಟ್ಟು ಹೋಗಿಲ್ಲ. ದೇವರು ಮಠ ಮಂದಿರಗಳ ಹೆಸರಿನಲ್ಲಿ ಮನುಷ್ಯರನ್ನು ಮನುಷ್ಯರನ್ನಾಗಿಕಾಣದ ಪರಿಸ್ಥಿತಿ ಇಂದಿಗೂ ಇರುವ ಸ್ಥಿತಿ ರಂಗದಲ್ಲಿ ನಿಜಕ್ಕೂ ಸಹ ಶೋಷನೀಯವೆನಿಸುತ್ತದೆ.

ಒಟ್ಟಾರೆಯಾಗಿಡಾ.ರಾಜಪ್ಪ ದಳವಾಯಿ ಅವರುತಮ್ಮಎಲ್ಲಾ ನಾಟಕಗಳಲ್ಲಿಯೂ ಸಹ ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ಸಮಾನತೆ, ಭ್ರಾತೃತ್ವ, ನೈತಿಕ ಹಾಗೂ ಮೂಲಭೂತ ಹಕ್ಕುಗಳ ಕುರಿತಾಗಿಜಾಗೃತಿಯ ಮೂಡಿಸಿದ್ದಾರೆ. ವಾಸ್ತವ ಜಗತ್ತಿಗೆ ಪ್ರಶ್ನಾರ್ಥಕರೂಪದಲ್ಲಿ ಪ್ರತಿಕ್ರಿಯಿಸಿರುವ ಇವರ ಬಂಡುಕೋರತನ, ತಂತ್ರಜ್ಞಾನ ಮತ್ತು ಸಮೂಹ ಮಾಧ್ಯಮಗಳಲ್ಲಿ ಕಂಡುಬಂದಿರುವಂತಹಇತ್ತೀಚಿನಗಮನಾರ್ಹ ಬದಲಾವಣೆಗಳನ್ನು ಸಾಹಿತ್ಯಕ್ಷೇತ್ರಕ್ಕೆ ಅಳವಡಿಸಿಕೊಮಡು ಅದನ್ನ ಬಳಸುತ್ತಿರುವ ಪರಿಯೇ ವಿಶೇಷ ಅದರಲ್ಲಿಯೂ ದಳವಾಯಿ ಅವರದೃಷ್ಟಿಕೋನದತೀವ್ರತೆಯನ್ನ ನಾವು ಗ್ರಹಿಸಿದರೆ ಮಾತ್ರವೇಅವರ ಶ್ರಮಕ್ಕೆ ಪ್ರತಿಫಲ ಸಿಗುತ್ತೆ ಎನ್ನುವುದು ನನ್ನ ಸ್ವ–ಅಭಿಪ್ರಾಯ. ಹೀಗಾಗಿ ನಾಟಕಗಳನ್ನು ಸಾಹಿತ್ಯಕ ಪಠ್ಯವಾಗಿಓದುವುದಕ್ಕಿಂತರಂಗಚಟುವಟಿಕೆಯಾಗಿ ನೋಡುತ್ತಾ ಪ್ರಸ್ತುತ ಸಮಾಜಕ್ಕೆ ಅಳವಡಿಸಿಕೊಂಡರೆ ಮಾತ್ರ ನಮ್ಮ ಸಾಹಿತ್ಯ ಮತ್ತುರಂಗಭೂಮಿಯಜೀವಂತಿಕೆಯಲ್ಲಿ ನಮ್ಮದೂ ಸಣ್ಣ ಅಳಿಲ ಸೇವೆಯ ಸಾರ್ಥಕತೆಇರುತ್ತೆ.

ನಾಟಕದಂತಹದೃಶ್ಯ–ಶ್ರವ್ಯ ಸೌಲಭ್ಯದಿಂದ ಮಾನವಪರ ಸಂದೇಶಗಳನ್ನೇ ಅವರಕಣ್ಣೇದುರಿಗೆಕಟ್ಟಿಕೊಡುವ ಮೂಲಕ ಇತ್ತೀಚಿನ ಬೆಳವಣಿಗೆಗಳನ್ನೂ ರಂಗಕ್ಕೆ ಅಳವಡಿಸುತ್ತಾ ಸಾಹಿತ್ಯಕ್ಷೇತ್ರದ ಜೊತೆ ಜೊತೆಗೇ ಸಮೂಹ ಮಾಧ್ಯಮದ ಲಕ್ಷಣವೂ ಸಹ ಸಹಜವಾಗಿಯೇಗಾಢ ಪರಿಣಾಮ ಬೀರುವಲ್ಲಿ ದಳವಾಯಿ ಕಾರಣಕರ್ತರಾಗಿದ್ದಾರೆ.ಇದರಿಂದಾಗಿ ನಾಟಕ ಪ್ರಯೋಗವೇಒಂದು ಚಲನಶೀಲತೆಯ ಜೀವಂತಿಕೆಯು ಪ್ರಯೋಗಾತ್ಮಕ, ವಿಶ್ಲೇಷಣಾತ್ಮಕವಾದ ವಿವೇಚನೆಯಲ್ಲಿ ವೈಚಾರಿಕತೆಯ ಸ್ಥಂತಿಕೆಯನ್ನ ಪರಂಪರೆಯ ಮುಂದುವರಿಕೆಯಾಗಿ ಪುರಾಣ, ಇತಿಹಾಸಜಾನಪದ, ವಾಸ್ತವಿಕತೆಗೆತಮ್ಮದೇ ಸ್ವಂತಿಕೆ ಮತ್ತುಗಟ್ಟಿತನವನ್ನ ಉಳಿಸಿಕೊಳ್ಳುತ್ತಾ ಸಾಗುತ್ತಿರುವ ದಳವಾಯಿ ಅವರ ಮಾರ್ಗದರ್ಶಜಾಡನ್ನ ಹಿಡಿದರೆ ನಾವೂ ಸಹ ಒಂದಲ್ಲಾಒಂದುರೀತಿಚಿಂತನಕ್ರಮಕ್ಕೆತಲುಪುತ್ತೇವೆ.

ಗ್ರಂಥಋಣ :

1) ಡಾ. ರಾಜಪ್ಪ ದಳವಾಯಿ ಅವರಡಜನ್ ನಾಟಕಗಳು ಪುಟ 162
2) ಇವರ ಬೀದಿ ನಾಟಕಗಳು
3) ಏಕಾಂಕಗಳು

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಆಧುನಿಕ ವೀರಶೈವ ಪುರಾಣಗಳ: ವೈಜ್ಞಾನಿಕ ವಿಶ್ಲೇಷಣೆ

ಆತ್ಮಾನಂದ ಸಕ್ರಿಕಡ್ಡಿ,
ಸಂಶೋಧನಾ ವಿದ್ಯಾರ್ಥಿ,
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ,
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ.
Email Id: atmanand42@gmail.com

Manuscript ID:
JRD -2026-180439
ISSN: 2230-9578
Volume 18
Issue 4(II)
Pp.135-137
April 2026
Submitted:25 Mar. 2026
Revised:05 Apr. 2026
Accepted:20 Apr.2026
Published:30 April2026

ಸಾರಲೇಖ:

ಆಧುನಿಕ ತಂತ್ರಜ್ಞಾನ ಯುಗದಲ್ಲಿ ಮಾನವನಜೀವನ ಸುಧಾರಿಸಿದರೂ, ಮನಸ್ಸುಅಶಾಂತಿ, ದುಃಖ ಮತ್ತು ನೈತಿಕ ಕುಸಿತದಿಂದ ಬಳಲುತ್ತಿದೆ. ಈ ಪರಿಸ್ಥಿತಿಯಲ್ಲಿ ಮನುಷ್ಯನು ಶಾಂತಿ ಮತ್ತು ನೆಮ್ಮದಿಗಾಗಿಧಾರ್ಮಿಕ ಕೇಂದ್ರಗಳು, ಸಂತರು ಮತ್ತು ಪುರಾಣಗಳತ್ತ ಮುಖ ಮಾಡುತ್ತಾನೆ. ಭೌತಶಾಸ್ತ್ರದದೃಷ್ಟಿಯಿಂದ ವಿಶ್ವದಲ್ಲಿರುವಎಲ್ಲವೂ "ಶಕ್ತಿ (Energy)"ಯರೂಪವೇಆಗಿದ್ದು, ಪ್ರತಿಯೊಂದು ವಸ್ತು ಅಣುಗಳಿಂದ ಕೂಡಿದೆ ಮತ್ತು ಅವು ನಿರಂತರ "ಕಂಪನ (Vibration)"ದಲ್ಲಿವೆ. ಮನುಷ್ಯನ ಆಲೋಚನೆಗಳು, ಭಾವನೆಗಳು ಮತ್ತು ಕ್ರಿಯೆಗಳು ಕೂಡಕಂಪನದ ರೂಪಗಳಾಗಿವೆ.

ಒಂದೇರೀತಿಯ ಕಂಪನ ಹೊಂದಿರುವ ವ್ಯಕ್ತಿಗಳು ಪರಸ್ಪರಆಕರ್ಷಿತರಾಗುತ್ತಾರೆ. ಇದೇಕಾರಣದಿಂದ ಒಳ್ಳೆಯವರು ಒಳ್ಳೆಯವರತ್ತ, ಕೆಟ್ಟವರುಕೆಟ್ಟವರತ್ತ ಸೆಳೆಯಲ್ಪಡುತ್ತಾರೆ. ದೇವಾಲಯಗಳು, ಮಠಗಳು ಮತ್ತು ಸಂತರುಉನ್ನತ ಮಟ್ಟದ ಸಕಾರಾತ್ಮಕಕಂಪನವನ್ನು ಹೊಂದಿರುವ "ಶಕ್ತಿ ಕೇಂದ್ರಗಳು". ಇವುಗಳ ಸಂಪರ್ಕದಿಂದ ವ್ಯಕ್ತಿಯ ನಕಾರಾತ್ಮಕ ಮನೋಭಾವಕಡಿಮೆಯಾಗುತ್ತ, ಸಕಾರಾತ್ಮಕತೆ ಹೆಚ್ಚುತ್ತದೆ. ಇದರಿಂದ ಮನಸ್ಸಿಗೆ ಶಾಂತಿ, ಸಮತೋಲನ ಮತ್ತು ನೈತಿಕ ಮೌಲ್ಯಗಳ ವೃದ್ಧಿ ಉಂಟಾಗುತ್ತದೆ.

ಹೀಗಾಗಿ, ಸಮಾಜದ ಸುಧಾರಣೆಗಾಗಿ ಪ್ರತಿಯೊಬ್ಬ ವ್ಯಕ್ತಿಯೂತನ್ನ ಆಲೋಚನೆಗಳನ್ನು ಸಕಾರಾತ್ಮಕವಾಗಿ ರೂಪಿಸಿಕೊಳ್ಳಬೇಕು ಮತ್ತುಧಾರ್ಮಿಕ–ಆಧ್ಯಾತ್ಮಿಕ ಪ್ರಭಾವವನ್ನು ವೈಜ್ಞಾನಿಕದೃಷ್ಟಿಯಿಂದ ಅರ್ಥಮಾಡಿಕೊಳ್ಳಬೇಕು ಎಂಬುದು ಈ ಲೇಖನದ ಮುಖ್ಯ ಸಂದೇಶ.

ಮುಖ್ಯ ಪದಗಳು :ಪುರಾಣ, ಶಕ್ತಿ, ಕಂಪನ, ಕ್ವಾಂಟಮ್‌ಸಿದ್ಧಾಂತ, ಸಕಾರಾತ್ಮಕಭಾವನೆ, ನಕಾರಾತ್ಮಕಭಾವನೆ.

.ಆಧುನಿಕಕಂಪ್ಯೂಟರಯುಗದಲ್ಲಿ ಮಾನವನ ಮನಸ್ಸುತೀವ್ರವಾದಚಂಚಲತೆ, ದುಃಖ, ಸಂಕಟಮತ್ತುಸಾಮಾಜಿಕ ಸಂಘರ್ಷಗಳ ಮಧ್ಯೆ ಸಿಲುಕಿದೆ. ತಂತ್ರಜ್ಞಾನದಲ್ಲಿ ಬೆಳವಣಿಗೆ ಸಾಧಿಸಿದ್ದರೂ, ಮನಸ್ಸುಪಕ್ವಗೊಳ್ಳದೆ ಅಲ್ಲೇ ಉಳಿದಿದೆ. ಇದರ ಪರಿಣಾಮವಾಗಿಮಾನವೀಯ ಮೌಲ್ಯಗಳಾದ ನೈತಿಕತೆ, ಪ್ರಾಮಾಣಿಕತೆ, ಪ್ರೀತಿಮತ್ತುವಾತ್ಸಲ್ಯಗಳು ಕ್ಷೀಣಿಸುತ್ತಿದ್ದು, ಆಧುನಿಕ ಸಮಾಜದ ಸ್ಥಿತಿಭ್ರಷ್ಟಾಚಾರ, ಅನೈತಿಕತೆ, ಸ್ವಾರ್ಥ, ಹಿಂಸೆ, ಕುಟುಂಬ ಸಂಬಂಧಗಳ ಕುಸಿತ, ರಾಜಕೀಯ/ಅಧಿಕಾರಗಳ ದುರ್ಬಳಕೆ, ಅತ್ಯಾಚಾರ, ಅನಾಚಾರ, ತಂದೆ–ತಾಯಿಗಳನಿರ್ಲಕ್ಷತೆ ಇವುಗಳು ಸಮಾಜದ ಮೇಲೆ ರುದ್ರತಾಂಡವವನ್ನುಪ್ರದರ್ಶಿಸುತ್ತಿವೆ. ಇಂತಹಇನ್ನಿತರ ಸಮಸ್ಯೆಗಳು ಸಮಾಜದ ನೈತಿಕತೆ ಕುಸಿಯಲು ಕಾರಣಗಳಾಗಿವೆ. ಇವೆಲ್ಲವು ನಕಾರಾತ್ಮಕಗುಣಗಳಾಗಿವೆ. ಆದ್ದರಿಂದವ್ಯಕ್ತಿಗಳ ಮನಸ್ಸಿನಲ್ಲಿ ನಕಾರಾತ್ಮಕಶಕ್ತಿಮತ್ತುಕಡಿಮೆ ಕಂಪನ (low frequency vibration)ಪ್ರಬಲವಾಗಿರುವುದು.

ಈ ಹಿನ್ನೆಲೆಯಲ್ಲಿ, ಮನುಷ್ಯನು ನೆಮ್ಮದಿ ಮತ್ತುಶಾಂತಿಯನ್ನು ಅರಸಿ ಧಾರ್ಮಿಕ ಕೇಂದ್ರಗಳು (ದೇವಸ್ಥಾನ, ಮಸೀದಿ, ಚರ್ಚ್) ಮತ್ತುಮಹಾನ್‌ವ್ಯಕ್ತಿಗಳ (ಸಾಧು, ಸಂತರು, ಶರಣರು), ಅಥವಾಉತ್ತಮ ಪುಸ್ತಕಗಳು, ಪುರಾಣ ಕಾವ್ಯಗಳ ಮೊರೆ ಹೋಗುತ್ತಾನೆ. ಧಾರ್ಮಿಕ ಕೇಂದ್ರಗಳಿಗೆ ಭೇಟಿನೀಡಿದಾಗಅಥವಾ ಮಹಾತ್ಮರನ್ನು ಭೇಟಿಯಾದಾಗ ಮನಸ್ಸುಪ್ರಶಾಂತವಾಗಲುಕಾರಣವಾದ ಅಂಶವೇನು? ಮಠಗಳು/ಸ್ವಾಮಿಗಳು ಸಮಾಜದ ನೈತಿಕಉನ್ನತಿಗೆ ಹೇಗೆ ಪ್ರಭಾವ ಬೀರಿವೆಎಂಬುದನ್ನುಆಲ್ಬರ್ಟ್ ಐನಸ್ಟೀನ ಅವರಶಕ್ತಿಮತ್ತುಆವರ್ತನದ (ಕಂಪನ) ಆಧರಿಸಿ ವೈಜ್ಞಾನಿಕವಾಗಿವಿಶ್ಲೇಷಿಸೋಣ. ಆಲ್ಬರ್ಟ್ ಐನಸ್ಟಿನ್‌ವರು ಹೀಗೆ ಹೇಳುತ್ತಾರೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಆತ್ಮಾನಂದಮ. ಸಕ್ರಿಕಡ್ಡಿ, ಸಂಶೋಧನಾವಿದ್ಯಾರ್ಥಿ,ಶಾಸ್ತ್ರೀಯಕನ್ನಡಭಾಷಾಅಧ್ಯಯನಸಂಸ್ಥೆ,
ರಾಣಿಚನ್ನಮ್ಮವಿಶ್ವವಿದ್ಯಾಲಯಬೆಳಗಾವಿ.

How to cite this article:
ಆತ್ಮಾನಂದಮ. ಸಕ್ರಿಕಡ್ಡಿ,.*2026).*ಆಧುನಿಕ ವೀರಶೈವ ಪುರಾಣಗಳ: ವೈಜ್ಞಾನಿಕ ವಿಶ್ಲೇಷಣೆ. *Journal of Research and Development, 18(4(II)), 135–137. https://doi.org/10.5281/zenodo.19396983*

Quick Response Code:

Website:
https://jrdrvb.org/

DOI:
10.5281/zenodo.19396983

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

"Everything is energy And
That's all there is to it"[೧]

ಭೌತಶಾಸ್ತ್ರದ ಪ್ರಕಾರ, ವಿಶ್ವದಲ್ಲಿಕಣ್ಣಿಗೆಕಾಣುವ ಮತ್ತುಕಾಣದಿರುವ ಪ್ರತಿಯೊಂದು ವಸ್ತು (ಜಡಮತ್ತುಜೀವಂತ) ಅಣುಗಳಿಂದ (Atom) ರಚಿತವಾಗಿದೆ.ಈ ಜಗತ್ತಿನಲ್ಲಿ ನಮ್ಮಕಣ್ಣಿಗೆಕಾಣುತ್ತಿರುವುದುಕಾಣದಿರುವುದುಎಲ್ಲವೂಎನರ್ಜಿ.ಅಂದರೆ ಪುಸ್ತಕ, ಪೆನ್ನು, ಮನುಷ್ಯ, ಗಿಡ–ಮರ, ಪ್ರಾಣಿ–ಪಕ್ಷಿ, ಬಸ್, ಟ್ರೇನು, ಹಣ, ಟೇಬಲ, ವಾಚ್, ಬೊರ್ಡ, ಗಾಳಿ ಮುಂತಾದವುಗಳು ಪ್ರತಿಯೊಂದುಎನರ್ಜಿಯನ್ನು ಹೊಂದಿರುತ್ತವೆ. ಏಕೆಂದರೆ ಇವುಗಳ ರಚನೆಯಾಗಿರುವುದುಅಣುವಿನಿಂದ (Atoms).ಉದಾಹರಣೆ ಮೂಲಕ ನೋಡೋಣಒಂದುಟೆಬಲ್ ತೆಗೆದುಕೊಂಡುಅದನ್ನುಚೆನ್ನಾಗಿಕುಟ್ಟಿದರೆ ಪುಡಿ ಉಳಿಯುತ್ತೆ.ಆ ಪುಡಿಯನ್ನುಇನ್ನೂ ಸಣ್ಣಗೆ ಮಾಡಿದರೆಕೊನೆಯಲ್ಲಿ ಉಳಿಯುವುದು ಅಣು. ಈ ಅಣುವನ್ನುಇನ್ನೂ ಬ್ರೇಕ ಮಾಡಿದಾಗ ಅದರೊಳಗ ನ್ಯೂಕ್ಲಿಯಸ್ (Nucleus)ಇರುತ್ತೆ. ಈ ನ್ಯೂಕ್ಲಿಯಸ್ ಮತ್ತೆಬ್ರೇಕ ಮಾಡಿದಾಗ ಪ್ರೋಟಾನ (Protan) ಮತ್ತುನ್ಯೂಟ್ರಾನ್ (Nutron)Electronಸಿಗುತ್ತೆ. ಈ ಪ್ರೋಟಾನ ಮತ್ತುನ್ಯೂಟ್ರಾನ್ ಬ್ರೇಕ ಮಾಡಿದಾಗ ಅದರೊಳಗಕ್ವಾರ್ಕ್ (Quark)ಸಿಗುತ್ತೆ. ಈ ಕ್ವಾರ್ಕ್ಬ್ರೇಕ ಮಾಡಿದಾಗ ಏನು ಸಿಗುತ್ತೆ ಎಂದು ವಿಜ್ಞಾನಿಗಳು ಕಂಡುಹಿಡಿದಿಲ್ಲ. ಆದ್ದರಿಂದಜಗತ್ತಿನಲ್ಲಿ ನಮ್ಮಕಣ್ಣಿಗೆಕಾಣುವವಕಾಣದಿರುವಜೀವ ಮತ್ತುನೀರ್ಜಿವಇರುವಎಲ್ಲಾ ವಸ್ತುಗಳಲ್ಲಿ ಈ ಕ್ವಾರ್ಕ್ಯಾವಗಲುಕಂಪನವಾಗುತ್ತಿರುತ್ತದೆ.ಆದರೆಅದು ನಮ್ಮಕಣ್ಣಿಗೆಕಾಣುವುದಿಲ್ಲ ಮತ್ತುಯಾವುದುಕೂಡಾ ಸ್ಥಿರವಾಗಿರುವುದಿಲ್ಲ. ಏಕೆಂದರೆಇವೆಲ್ಲವುಅಣುವಿನಿಂದರಚನೆಯಾಗಿವೆ.

ಅಣುಒಂದಕ್ಕೊಂದು ಹತ್ತಿರವಿದ್ದಾಗಅದು ಘನ(Solid)ವಾಗಿರುತ್ತದೆ. ಸ್ವಲ್ಪದೂರವಿದ್ದಾಗ (Liquid) ರೂಪದಲ್ಲಿರುತ್ತದೆ.ಇನ್ನೂದೂರದೂರವಿದ್ದಾಗ ಗಾಳಿ (Air) ಯಾಗಿರುತ್ತದೆ.ಶಕ್ತಿಯಮೂಲ ಈ ಕ್ವಾರ್ಕ್ಗಳು ನಿರಂತರವಾಗಿ ಕಂಪಿಸುತ್ತಿರುತ್ತವೆ (Vibrate).ಈ ಕಂಪನವು ಶಕ್ತಿಯನ್ನು (Energy) ಉತ್ಪಾದಿಸುತ್ತದೆ.ಯಾವುದೇ ವಸ್ತು ಸ್ಥಿರವಾಗಿರುವುದಿಲ್ಲ; ಅವು ತಮ್ಮದೇಆದಕಂಪನದಲ್ಲಿ(Frequency) ಕಂಪಿಸುತ್ತಾಇರುತ್ತವೆ. ಕಂಪನ(Frequency)ಶಕ್ತಿಯುಉತ್ಪತ್ತಿಯಾಗಲು ಕಂಪನವೇ ಮುಖ್ಯಕಾರಣ. ಕಂಪನ ಹೆಚ್ಚಾದಷ್ಟು ಶಕ್ತಿಯು ಹೆಚ್ಚಿರುತ್ತದೆ.ಮನುಷ್ಯನ ಯೋಚನೆಗಳು, ಮಾತುಗಳು, ಭಾವನೆಗಳುಮತ್ತು ಕ್ರಿಯೆಗಳು ಕೂಡ ಈ ಶಕ್ತಿಯಕಂಪನದ ರೂಪಗಳಾಗಿವೆ.

ಈ ಕ್ವಾರ್ಕ್ಕಂಪನವಾಗಲು ಎನರ್ಜಿಬೇಕು.ನಾವು ವಿಚಾರ ಮಾಡುವುದು, ನೋಡುವುದು, ಮಾತನಾಡುವುದು, ನಡೆಯುವುದುಎಲ್ಲವುಎನರ್ಜಿನೆ. ಈ ಎನರ್ಜಿ ಬರಲು ಮುಖ್ಯವಾದದ್ದು ಕಂಪನ. ಇದು ಜಾಸ್ತಿ ಇದ್ದಷ್ಟುಎನರ್ಜಿ ಜಾಸ್ತಿಯಾಗಿರುತ್ತದೆ. ಕಂಪನ ಕಡಿಮೆಇದ್ದಷ್ಟುಎನರ್ಜಿಕಮ್ಮಿಇರುತ್ತೆ.ಉದಾಹರಣೆಗೆರೇಡಿಯೋ, ಕಂಪನ ಜಾಸ್ತಿ ಇದ್ದಷ್ಟುಸರಾಗವಾಗಿರೇಡಿಯೋಪ್ರೋಗ್ರಾಮ ಕೇಳಿಸುತ್ತವೆ. ಇನ್ನೊಂದುಉದಾಹರಣೆ ನೋಡುವುದಾದರೆ ನಾವು ನಮ್ಮತಂದೆ–ತಾಯಿ, ಸ್ನೇಹಿತರಿಗೆಕರೆ ಮಾಡಿದಾಗಅದೇ ನಂಬರಿಗೆ ಹೇಗೆ ಕನೆಕ್ಟ ಆಗುತ್ತೆಎಂತ ವಿಚಾರಮಾಡಿದಾಗಅದಕ್ಕೆಕಾರಣ ಕಂಪನ. ಅಂದರೆ ನಮ್ಮ ಕಂಪನ ಅವರ ಕಂಪನ ಸರಿಯಾಗಿಹೊಂದಿದಾಗ(Match) ಮಾತ್ರಕನೆಕ್ಟಆಗುತ್ತೆ. ಒಂದುಮೊಬೈಲನಿಂದಇನ್ನೊಂದುಮೊಬೈಲಗೆನಾವುಹಾಟಸ್ಪಾಟ(Hotspot) ಕನೆಕ್ಟ ಮಾಡಲು ಹೋದಾಗಅದೇ ಮೊಬೈಲಗೆ ಹೇಗೆ ಕನೆಕ್ಟ ಆಗುತ್ತೆಂದರೆಕಾರಣ ಕಂಪನ 'ಸರಿಯಾಗಿಹೊಂದಿದಾಗ ಮಾತ್ರ ಕನೆಕ್ಟ ಆಗುತ್ತೆ.

ಈಗ 'ನಾವು ಇಲ್ಲಿಯವರೆಗೆತಾಂತ್ರಿಕವಾಗಿಉದಾಹರಣೆ ನೀಡಿದೆವು.ಈಗ ಅದನ್ನೆ ನಮ್ಮ ಸಾಮನ್ಯ ಬದುಕಿನಲ್ಲಿ ಹೇಗೆ ಕಾರ್ಯನಿರ್ವಹಿಸುತ್ತದೆ ನೋಡೋಣ, ಕುಟುಂಬ, ಸಮಾಜಅಥವಾ ಸ್ನೇಹಿತರಿಗೆಎಲ್ಲರಿಗೂ ನಾವು ಇಷ್ಟವಾಗುವುದಿಲ್ಲ ಅಥವಾಎಲ್ಲರೂ ನಮಗೆ ಈಷ್ಟವಾಗುವುದಿಲ್ಲ. ಕೆಲವೇ ಕೆಲವ ್ಯಕ್ತಿಗಳು ಮಾತ್ರ ನಮಗೆ ಕನೆಕ್ಟ ಆಗುತ್ತಾರೆ.ಏಕೆಂದರೆಅವರಕಂಪನನಮ್ಮ ಕಂಪನ 'ಸರಿಯಾಗಿಹೊಂದಾಣಿಕೆಯಾಗುತ್ತದೆ.ಕಾರಣನಮ್ಮ ವಿಚಾರ, ಆಲೋಚನೆ, ಮಾತನಾಡುವ ಶೈಲಿ, ನಮ್ಮಲ್ಲಿರುವ ಹಾಸ್ಯಪ್ರಜ್ಞೆ, ಸಿಟ್ಟಿನಸ್ವಭಾವ, ಸಂತೋಷ, ದುಃಖ, ಇತ್ಯಾದಿ ಅಂಶಗಳು ಇನ್ನೊಬ್ಬನ ವ್ಯಕ್ತಿಯಲ್ಲಿಇದೇ ಅಂಶಗಳು ಅಡಗಿದ್ದರೆಬೇಗನೆ ಕನೆಕ್ಟ ಆಗುತ್ತಾನೆ. ಬೇರೆ ಸ್ವಭಾವ 'ಹೊಂದಿರುವ ವ್ಯಕ್ತಿ ಕನೆಕ್ಟ ಆದರುಅದುತಾತ್ಕಾಲಿಕ ಮಾತ್ರ.ಅಂದರೆಮನುಷ್ಯನಲ್ಲಿಅಣುವಿದೆ, ಕ್ವಾರ್ಕ್ಇದೆ.ಇದು ಕಂಪನವಾಗಿ ಎನರ್ಜಿಉಂಟಾಗಿಕಂಪನಸರಿಹೊಂದುತ್ತದೆ.ಒಬ್ಬ೦ ಕೆಟ್ಟ ವ್ಯಕ್ತಿಇನ್ನೊಬ್ಬಕೆಟ್ಟವ್ಯಕ್ತಿಜೊತೆಗೆಅಥವಾಒಬ್ಬ ಒಳ್ಳೆಯ ವ್ಯಕ್ತಿಇನ್ನೊಬ್ಬ ಒಳ್ಳೆಯ ವ್ಯಕ್ತಿಯಜೊತೆಗೆ ಬೇಗನೆ ಕನೆಕ್ಟ ಆಗುತ್ತಾರೆ.ಕಾರಣ ಕಂಪನ. ನಾವೆನಾದರೂಕೆಟ್ಟವ್ಯಕ್ತಿಮಾಡುತ್ತಿರುವ ಕೆಲಸ 'ಸರಿಯಿಲ್ಲವೆಂದಾಗನಮ್ಮ ಮೇಲೆ ಅವನಿಗೆ ಬೇಗನ 'ಸಿಟ್ಟು ಬರುತ್ತೆಏಕೆಂದರೆ ನಮ್ಮ ಕಂಪನ ಅವರ ಕಂಪನ ಸರಿಯಾಗಿಹೊಂದುವುದಿಲ್ಲ, ಕಾರಣಪಾಸಿಟಿವ ಕಂಪನ ನೆಗೆಟಿವ ಕಂಪನ 'ಸರಿಯಾಗಿಹೊಂದಾಣಿಕೆ ಆಗುವುದಿಲ್ಲ.

ಈ ಮೇಲೆ ಹೇಳಿರುವ ಅಂಶಗಳನ್ನು ಗಮನಿಸಿದಾಗ ಮಾನವನ 'ಮನಸ್ಸುಮತ್ತು ಕಂಪನಗಳ 'ಹೊಂದಾಣಿಕೆ.ಮಾನವನಆಂತರಿಕ ವಿಚಾರಗಳು ಮತ್ತುಭಾವನೆಗಳು ಹೊರಸೂಸುವ ಕಂಪನವು ಇತರರಮೇಲ 'ತೀವ್ರ ಪ್ರಭಾವಬೀರುತ್ತದೆ.

ಭಾವನಾತ್ಮಕ ಕಂಪನಗಳು: ಸಕಾರಾತ್ಮಕ ಕಂಪನ(Positive Frequency): ಪ್ರೀತಿ, ಶಾಂತಿ, ಸಂತೋಷ, ಕೃತಜ್ಞತೆ, ದಯೆ, ಭರವಸೆ, ವಿಶ್ವಾಸ, ನಂಬಿಕೆ, ಸ್ವಾತಂತ್ರ್ಯ ಮುಂತಾದ ಸದ್ಭಾವನೆಗಳು ಹೆಚ್ಚಿನಕಂಪನದ ಶಕ್ತಿಯನ್ನು ಹೊರಸೂಸುತ್ತವೆ.

ನಕಾರಾತ್ಮಕ ಕಂಪನ(Negative Frequency): ಅಸೂಯೆ, ಸಿಟ್ಟು, ದ್ವೇಷ, ಭಯ, ದುಃಖ, ನಿರಾಸೆ, ಹೆದರಿಕೆ,ಹತಾಶೆ, ಸಂಕಟ, ಅನಾರೋಗ್ಯ, ಬಡತನ, ನಷ್ಟ, ವೈಪಲ್ಯ, ಚಿಂತೆ, ತಪಿತಸ್ಥಭಾವನೆ, ಅವಮಾನ, ಕೊರತೆ, ಮುಂತಾದ ದುರ್ಭಾವನೆಗಳು ಕಡಿಮೆಕಂಪನದಶಕ್ತಿಯನ್ನು ಹೊರಸೂಸುತ್ತವೆ.

ಆಕರ್ಷಣೆಮತ್ತುಹೊಂದಾಣಿಕೆಅಲ್ಬರ್ಟ್ ಐನ್ಸ್ಟೀನ್ಹೇಳಿದಂತೆ, ನೀವು ಬಯಸುವ ವಾಸ್ತವತೆಯ ಕಂಪನಕ್ಕೆ ಹೊಂದಾಣಿಕೆ ಮಾಡಿ, ಮತ್ತುನೀವು ಆ ವಾಸ್ತವತೆಯನ್ನು ಪಡೆಯಲೇಬೇಕು.

"Match the frequency of the
Reality you want And
You cannot help but get
The Reality"[೯]

ಇದರರ್ಥ, ವ್ಯಕ್ತಿಗಳು ತಮ್ಮ ಆಲೋಚನೆ ಮತ್ತುಭಾವನೆಗಳ 'ಆವರ್ತನಕ್ಕೆ ಹೋಲುವ ಕಂಪನ ಹೊಂದಿರುವ ವ್ಯಕ್ತಿಗಳನ್ನು, ಸ್ಥಳಗಳನ್ನುಮತ್ತು ಘಟನೆಗಳನ್ನುಆಕರ್ಷಿಸುತ್ತಾರೆ.ಒಬ್ಬ ಒಳ್ಳೆಯ ವ್ಯಕ್ತಿಯುಇನ್ನೊಬ್ಬ ಒಳ್ಳೆಯ ವ್ಯಕ್ತಿಯಜೊತೆ ಬೇಗನೆ ಸಂಪರ್ಕಸಾಧಿಸಲುಕಾರಣ, ಅವರ ಸಕಾರಾತ್ಮಕ ಕಂಪನಗಳು ಪರಸ್ಪರಹೊಂದಾಣಿಕೆಯಾಗುವುದು.ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಈ ರೀತಿಹೇಳುತ್ತಾನೆ.

"A person is made up of Their
Faith; whatever Their Faith is

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

That is what They become" [3]

ಅಂದರೆ ಮನುಷ್ಯನುಯಾವುದನ್ನು ಹೆಚ್ಚಾಗಿ ನಂಬುತ್ತಾನೆ ಅವನು ಅದೇಆಗುತ್ತಾನೆ.

ದೇವಸ್ಥಾನಗಳು, ಮಂದಿರಗಳು, ಮಸೀದಿಗಳು ಮತ್ತು ಚರ್ಚ್‌ಗಳಂತಹ ಧಾರ್ಮಿಕಸ್ಥಳಗಳು ಮತ್ತುಮಹಾನ್‌ಶರಣರು, ಯೋಗಿಗಳು, ಸಾಧ್ವಿಗಳು, ಮಹಾಸ್ವಾಮಿಗಳು, ಆದರ್ಶವ್ಯಕ್ತಿಗಳು, ಸಂತರ ಆಶ್ರಮಗಳು ಈ ಸಕಾರಾತ್ಮಕಕಂಪನವನ್ನು ಸಂಗ್ರಹಿಸುವ ಮತ್ತುಪ್ರಸಾರಮಾಡುವಶಕ್ತಿ ಕೇಂದ್ರಗಳಾಗಿವೆ. ಈ ನೆಗೆಟಿವ 'ಎನರ್ಜಿಸ್ಥಗಿತಗೊಳಿಸಿ ಪಾಸಿಟಿವ ಎನರ್ಜಿ ಹರಡುವವರು.

ಈ ಸ್ಥಳಗಳು ಆದಿಕಾಲದಿಂದಲುಕೋಟ್ಯಂತರಭಕ್ತರಪ್ರೀತಿ, ಭಕ್ತಿ, ಶಾಂತಿ, ನಂಬಿಕ 'ಮತ್ತುಸಕಾರಾತ್ಮಕ ಆಲೋಚನೆಗಳಿಂದ ಉತ್ಪತ್ತಿಯಾದಉನ್ನತಕಂಪನದ ಸಕಾರಾತ್ಮಕಶಕ್ತಿಯನ್ನು(High-Frequency Positive Energy)ತಮ್ಮಗರ್ಭಗುಡಿ, ಗೋಪುರ ಮತ್ತುಆವರಣದಲ್ಲಿ ಶೇಖರಿಸಿರುತ್ತವೆ. ಒಬ್ಬ ವ್ಯಕ್ತಿಯುತೀವ್ರವಾದ ಸಂಕಟ, ದುಃಖಅಥವಾ ನಕಾರಾತ್ಮಕಭಾವನೆಗಳೊಂದಿಗೆ (ಕಡಿಮೆ ಕಂಪನ) ದೇವಸ್ಥಾನಕ್ಕೆ ಪ್ರವೇಶಿಸಿದಾಗ, ಆ ಸ್ಥಳದಲ್ಲಿ ಸಂಗ್ರಹವಾಗಿರುವ ಸಕಾರಾತ್ಮಕಕಂಪನದ ಶಕ್ತಿಯೊಂದಿಗೆ ಅವನ 'ಆಂತರಿಕ ಕಂಪನವು ಸಂಪರ್ಕಸಾಧಿಸುತ್ತದೆ. ಮನುಷ್ಯನಕಡಿಮೆ ಕಂಪನವು ದೇವಸ್ಥಾನದಉನ್ನತಕಂಪನದೊಂದಿಗೆತಾತ್ಕಾಲಿಕವಾಗಿ 'ಅನುರಣನ' (Resonance)ಗೊಂಡು ಬದಲಾವಣೆಗೆ ಒಳಗಾಗುತ್ತದೆ. ಈ ಪ್ರಕ್ರಿಯೆಯಿಂದಾಗಿ, ಮನಸ್ಸಿನ ನಕಾರಾತ್ಮಕಶಕ್ತಿಯು ಸ್ಥಗಿತಗೊಂಡು, ಸಕಾರಾತ್ಮಕಶಕ್ತಿಯ ವೈಬ್ರೇಶನ್ ಹೆಚ್ಚಾಗುತ್ತದೆ.ಇದರ ಫಲಿತಾಂಶವೇ ಮನಸ್ಸಿನಶಾಂತಿ, ನಿರಾಳತೆ ಮತ್ತುನಿರ್ಮಲತೆ.

ಸಂತರು, ಸಾಧ್ವಿಗಳು ಮತ್ತುಶರಣರು ಸಮಾಜದಉನ್ನತಿಗೆ ಪ್ರಭಾವ ಬೀರಲು ಈ ಶಕ್ತಿಯಕಂಪನದ ಸಿದ್ಧಾಂತವೇ ಮೂಲಭೂತಕಾರಣ.ಸಕಾರಾತ್ಮಕಕಂಪನದ ಪ್ರಸರಣ: ಮಹಾತ್ಮರು ನಿರಂತರವಾಗಿಧ್ಯಾನ, ಸತ್ಕರ್ಮ, ಜ್ಞಾನ 'ಮತ್ತುನೈತಿಕಮೌಲ್ಯಗಳ ಚಿಂತನೆಗಳಲ್ಲಿ ತೊಡಗಿರುವುದರಿಂದ, ಅವರ ವ್ಯಕ್ತಿತ್ವವುಉನ್ನತ ಮಟ್ಟದ ಸಕಾರಾತ್ಮಕಕಂಪನದಮೂಲವಾಗಿರುತ್ತಾರೆ. ಇವರು ಹಳ್ಳಿಹಳ್ಳಿಗಳಿಗೆ ಸಂಚರಿಸಿ, ಪ್ರವಚನ, ಪಾಠ ಮತ್ತುಧರ್ಮದಮಾರ್ಗದರ್ಶನ ನೀಡಿದಾಗ, ಆ ಪ್ರದೇಶದಲ್ಲಿನ 'ಜನರ ನಕಾರಾತ್ಮಕ (ಕಡಿಮೆ)ಕಂಪನಗಳು ಅವರ ಸಂಪರ್ಕದಿಂದಾಗಿಉನ್ನತ ಕಂಪನಕ್ಕೆ ಬದಲಾಗುತ್ತವೆ.

ಯೋಗಿಯು, ಮಹಾನಸ್ವಾಮಿಗಳು, ಸಂತರು ಪ್ರಸರಿಸುವ ನಂಬಿಕೆ, ವಿಶ್ವಾಸ 'ಮತ್ತುಮೌಲ್ಯಗಳು ಜನರ ಮನಸ್ಸಿನಲ್ಲಿ ಬೇರೂರಿ, ಅವರಆಂತರಿಕಕಂಪನವನ್ನು ಸಕಾರಾತ್ಮಕವಾಗಿಬದಲಾಯಿಸುತ್ತವೆ. ಇದರಿಂದ ಸಮಾಜದಲ್ಲಿ ಶಾಂತಿ, ಸಮಾನತೆ ಮತ್ತುಸಹಬಾಳ್ವೆನೆಲೆಸಲು ಸಾಧ್ಯವಾಗುತ್ತದೆ.

ದೇವಸ್ಥಾನ ಮತ್ತುಮಠಗಳ ಪ್ರಭಾವ ಕೇವಲ ಧಾರ್ಮಿಕಅಥವಾ ಭಾವನಾತ್ಮಕಅಂಶವಲ್ಲ. ಇದುಕ್ವಾಂಟಮ್ ಭೌತಶಾಸ್ತ್ರದಆಧಾರದ ಮೇಲೆ, ಶಕ್ತಿಯಕಂಪನದ ಹೊಂದಾಣಿಕೆ ಮತ್ತುಪರಿವರ್ತನೆಯ ಪ್ರಕ್ರಿಯೆಯಾಗಿದೆ.ಆಧುನಿಕ ಸಮಾಜದಲ್ಲಿ ನೈತಿಕ ಮತ್ತುಮಾನವೀಯ ಮೌಲ್ಯಗಳ ಪುನರುಜ್ಜೀವನಕ್ಕೆ, ಪ್ರತಿಯೊಬ್ಬ ವ್ಯಕ್ತಿಯುತನ್ನಆಂತರಿಕ ಆಲೋಚನೆ ಮತ್ತುಭಾವನೆಗಳ ಕಂಪನವನ್ನು ಸಕಾರಾತ್ಮಕವಾಗಿ (ಪ್ರೀತಿ, ದಯೆ, ಶಾಂತಿ) ಇಟ್ಟುಕೊಳ್ಳುವುದು ಅನಿವಾರ್ಯ.ಈ ಉನ್ನತಕಂಪನದಜೀವನ 'ಶೈಲಿಯನ್ನು ಸಾಧಿಸಲು ಸಾಧು–ಸಂತರು ಮತ್ತುಧಾರ್ಮಿಕ ಕೇಂದ್ರಗಳ 'ಪ್ರಭಾವವನ್ನು ವೈಜ್ಞಾನಿಕನೆಲೆಯಲ್ಲಿಗುರುತಿಸುವುದುಅತ್ಯವಶ್ಯಕ.

ಕೊನೆ ಟಿಪ್ಪಣಿಗಳು

1) Albert Einstein Quote: "Everything is Energy and that is all there is to it. Match the frequency of the reality you want and you can not help..."
2) Albert Einstein Quote: "Everything is Energy and that is all there is to it. Match the frequency of the reality you want and you can not help..."
3) A.C. Bhaktivedanta Swami Prabhupada, "Bhagvadgita As It Is" Bhaktivedanta Book Trust **page 765**

DzsÁgÀ UÀæAxÀUÀ¼ÀÄ

(538) Quantum mechanics explained in Kannada by Surya Murugan - YouTube

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಶಿಕ್ಷಣದಲ್ಲಿ ಮಾಹಿತಿ ತಂತ್ರಜ್ಞಾನದ ಪಾತ್ರ

ಡಾ. ಗೌರಮ್ಮ ಟಿ
ಕನ್ನಡ ಪ್ರಾಧ್ಯಾಪಕಿ,
ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯ
ಯಲಹಂಕ ಬೆಂಗಳೂರು–64
Email : gowramm.t@nmit.ac.in

Manuscript ID:
JRD -2026-180440
ISSN: 2230-9578
Volume 18
Issue 4(II)
Pp.138-140
April 2026
Submitted:25 Mar. 2026
Revised:07 Apr. 2026
Accepted:14 Apr.2026
Published:30 April2026

ಸಾರಲೇಖ:

ಕನ್ನಡಕ್ಕೂ ಮಾಹಿತಿತಂತ್ರಜ್ಞಾನಕ್ಕೂಎಲ್ಲಿನ ಸಂಬಂಧವೆಂದುಅನೇಕರು ಮೂಗುಮುರಿದಿದ್ದರು. ಆದರೆ ಮಾಹಿತಿಯನ್ನುಒಂದೆಡೆಗೆ ಸಂಗ್ರಹಿಸಿ, ಅದರಉಪಯುಕ್ತತೆಯನ್ನು ಕಾಲ ನಿರ್ಬಂಧವಿಲ್ಲದೆ, ಸ್ಥಳ ನಿರ್ಬಂಧವಿಲ್ಲದೆಎಲ್ಲರೂ ಪಡೆಯುವಂತೆ ಮಾಡುವಲ್ಲಿ ಮಾಹಿತಿತಂತ್ರಜ್ಞಾನಕನ್ನಡಕ್ಕೂ ವ್ಯಾಪಿಸಿದೆ. ಇಂದು ಅನೇಕ ವೃತ್ತ ಪತ್ರಿಕೆಗಳು, ಮ್ಯಾಗಜ್ಜೀನುಗಳು, ಜಾಲತಾಣಗಳು ಮುಂತಾದವುಗಳು ಕನ್ನಡದಲ್ಲಿ ಲಭ್ಯವಿದೆ. ಎಲ್ಲಕನ್ನಡ ವೃತ್ತಪತ್ರಿಕೆಯ ಆವೃತ್ತಿಗಳೂ, ವಾರಪತ್ರಿಕೆಗಳು, ಪ್ರಾಫ್ಷಿಗಳೂ, ಮಾಸಪತ್ರಿಕೆಗಳೂ, ಸಿನೆಮಾ ಪತ್ರಿಕೆಗಳೂ ಕನ್ನಡದಲ್ಲಿಅಂತರ್ಜಾಲದಲ್ಲಿ ಲಭ್ಯವಿದೆ. ಕೆಲವು ಅತ್ಯಂತಉಪಯುಕ್ತ ವಿಷಯಗಳ ಮಾಹಿತಿಯನ್ನೊದಗಿಸುವಕನ್ನಡಿಯಂತಹ ಜಾಲತಾಣಗಳು ಲಭ್ಯವಿದೆ. ಇವೆಲ್ಲಕನ್ನಡಕ್ಕೆ ಮಾಹಿತಿತಂತ್ರಜ್ಞಾನ ಇಂಧನಗಳನ್ನಳವಡಿಸಿ ನಿರ್ಮಿಸಿದ ಜಾಲತಾಣಗಳಾಗಿವೆ. ಮನೆಯಲ್ಲಿ, ಕಛೇರಿಯಲ್ಲಿ ಬ್ರೌಸಿಂಗ್ ಕೇಂದ್ರಗಳಲ್ಲಿ ಎಲ್ಲೆಂದರಲ್ಲಿ ಈ ಸೌಲಭ್ಯಕಾಲದ ನಿರ್ಬಂಧವಿಲ್ಲದೆಎಲ್ಲರಿಗೂಏಕಕಾಲದಲ್ಲಿ ಲಭ್ಯ.

ಮುಖ್ಯ ಪದಗಳು :ಕಂಪ್ಯೂಟರ್, ಮಾಹಿತಿತಂತ್ರಜ್ಞಾನ, ಶಿಕ್ಷಣ, ಕನ್ನಡ

ಇಂದುಕಂಪ್ಯೂಟರ್ ಬರೀಒಂದುಯಾಂತ್ರಿಕ ಪರಿಕಲ್ಪನೆಯಾಗಿ ಮಾತ್ರ ಉಳಿದಿಲ್ಲ ಅದು ನಮ್ಮ ದಿನನಿತ್ಯದ ಅವಿಭಾಜ್ಯ ಅಂಗವೇ ಆಗಿದೆ. ಒಂದುಕಾಲದಲ್ಲಿ ಕೇವಲ ಕೂಡುವ, ಕಳೆಯುವ, ಭಾಗಿಸುವಗಣಿತಿಯ ವ್ಯವಹಾರಕ್ಕೆ ಸೀಮಿತವಾಗಿದ್ದ ಈ ಕಂಪ್ಯೂಟರ್ ಈಗ ಸರ್ವಾಂತರ್ಯಾಮಿಯಾಗಿ, ಪೂರ್ವ ಪ್ರಾಥಮಿಕ ಹಂತದಿಂದ ಹಿಡಿದುಕಾಲೇಜು ವಿದ್ಯಾರ್ಥಿಗಳಿಗೆ, ವ್ಯವಹಾರಸ್ಥರಿಗೆ, ಉದ್ಯೋಗಿಗಳಿಗೆ, ಉದ್ಯಮಿಗಳಿಗೆ, ಕಾರ್ಮಿಕರಿಗೆ, ಕೃಷಿಕರಿಗೆಇತ್ಯಾದಿ ಸಾಮಾನ್ಯ ಬಳಕೆಯ ಕ್ಷೇತ್ರಗಳಿಗೆ ಅಗತ್ಯ ಸಾಧನವಾಗಿದೆ.

ಪೀಠಿಕೆ : ಮಾಹಿತಿ ಎಂಬ ಪದವುಆಂಗ್ಲಭಾಷೆಯInformation ಎಂಬ ಪದದಿಂದ ಬಂದಿದೆ. Information ಎಂಬ ಪದವು ಲ್ಯಾಟಿನ್ ಭಾಷೆಯForma ಮತ್ತುformation ಎಂಬ ಎರಡು ಪದಗಳಿಂದ ಉತ್ಪತ್ತಿಯಾಗಿದೆ. Formaಎಂದರೆ ಸೂಚನೆ ನೀಡುವುದುFormationಎಂದರೆಆಕಾರ ನೀಡುವುದುಎಂದರ್ಥ. ಮಾಹಿತಿತಂತ್ರಜ್ಞಾನವುದೂರ ಸಂಪರ್ಕ ಮತ್ತುಗಣಕಯಂತ್ರದ ಸಂಯೋಜನೆಯಾಗಿದೆ. ಇದು ಮಾಹಿತಿಯ ಪ್ರಕ್ರಿಯೆಗಳು, ಅನ್ವಯಗಳು, ಸಂವಹನಗಳು ಸಂಪರ್ಕದ ಕೌಶಲ್ಯಗಳನ್ನು ಒಳಗೊಂಡಿರುತ್ತದೆ. ಮಾಹಿತಿಯನ್ನು ಸಂಗ್ರಹಿಸಿ, ಸಂಘಟಿಸಿ, ವಿಶ್ಲೇಷಿಸಿ ಸಂಸ್ಕರಿಸಿ ರವಾನಿಸುತ್ತದೆ. ಹೀಗೆ ಮಾಹಿತಿಗಳನ್ನು ತಂತ್ರಜ್ಞಾನಕ್ಕೆ ಅಳವಡಿಸುವ ಪದ್ಧತಿಗೆ ಮಾಹಿತಿತಂತ್ರಜ್ಞಾನಎನ್ನುವರು.

ಮಾಹಿತಿತಂತ್ರಜ್ಞಾನವು ಶಿಕ್ಷಣ ಪ್ರಕ್ರಿಯೆಯನ್ನು ತಾಂತ್ರಿಕಗೊಳಿತ್ತದೆ. ಆಧುನಿಕ ಸಂವಹನದ ಸಾಧನಗಳಿಂದ ಗಣಕಯಂತ್ರ ಮತ್ತುಅದರ ಸಾಧನಗಳನ್ನು ಬೋಧನೆ ಮತ್ತು ಕಲಿಕಾ ಕ್ರಿಯೆಯಲ್ಲಿ ಬಳಸಲು ಮಾಹಿತಿತಂತ್ರಜ್ಞಾನವು ಸಹಾಯ ನೀಡುತ್ತದೆ. ಮಾಹಿತಿತಂತ್ರಜ್ಞಾನದ ನೆರವಿನಿಂದದೃಶ್ಯ ಶ್ರವಣ ಅನುಭವಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಿ ಬೋಧನೆಕಲಿಕೆಯನ್ನು ಪರಿಣಾಮಕಾರಿಗೊಳಿಸುತ್ತದೆ. ವಿದ್ಯಾರ್ಥಿಗಳು ಕಲಿಕಾ ವಿಷಯವನ್ನು ವಿವಿಧ ಆಯಾಮಗಳಲ್ಲಿ ವಿಶ್ಲೇಷಿಸಲು ಮಾಹಿತಿತಂತ್ರಜ್ಞಾನವು ನೆರವು ನೀಡುತ್ತದೆ. ವಿದ್ಯಾರ್ಥಿ ಮತ್ತು ಶಿಕ್ಷಕರ ನಡುವೆಉತ್ತಮ ಸಂವಹನ ನಡೆಸಲು ಮಾಹಿತಿತಂತ್ರಜ್ಞಾನ ನೆರವಾಗುತ್ತದೆ. ಕಲಿಕಾ ಚಟುವಟಿಕೆಯಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಪಾಲ್ಗೊಳ್ಳುವಂತೆ ಮಾಡುತ್ತದೆ. ಮಾಹಿತಿತಂತ್ರಜ್ಞಾನವುಕಠಿಣವಾದ ಪರಿಕಲ್ಪನೆಗಳನ್ನು ಸರಳ ಮತ್ತು ಪರಿಣಾಮಕಾರಿಗೊಳಿಸುತ್ತದೆ. ಶಿಕ್ಷಕರ ಬೋಧನಾ ಶ್ರಮವನ್ನುಕಡಿಮೆ ಮಾಡುತ್ತದೆ. ಬೋಧನೆ ಮತ್ತು ಕಲಿಕಾ ವೇಗವನ್ನು ಹೆಚ್ಚಿಸಲು ಸಹಾಯವಾಗುತ್ತದೆ. ಹೊಸ ಹೊಸ ಕಲಿಕಾ ಅನುಭವಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಲು ಸಾಧ್ಯವಾಗುತ್ತದೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ. ಗೌರಮ್ಮಟಿಕನ್ನಡ ಪ್ರಾಧ್ಯಾಪಕರು,ನಿಟ್ಟೆ ಮೀನಾಕ್ಷಿತಾಂತ್ರಿಕ ಮಹಾವಿದ್ಯಾಲಯ
ಯಲಹಂಕ ಬೆಂಗಳೂರು–64

How to cite this article:
ಡಾ. ಗೌರಮ್ಮ ಟಿ**(2026).**ಶಿಕ್ಷಣದಲ್ಲಿ ಮಾಹಿತಿ ತಂತ್ರಜ್ಞಾನದ ಪಾತ್ರ. *Journal of Research and Development, 18(4(II)), 138–140. https://doi.org/10.5281/zenodo.19397076*

Quick Response Code:
Website: https://jrdrvb.org/
DOI: 10.5281/zenodo.19397076

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಶೈಕ್ಷಣಿಕತಂತ್ರಜ್ಞಾನದಅರ್ಥ

ಶೈಕ್ಷಣಿಕತಂತ್ರಜ್ಞಾನವು ಶಿಕ್ಷಣ ಮತ್ತುತಂತ್ರಜ್ಞಾನ ಎಂಬ ಎರಡು ಪದಗಳ ಸಂಯೋಜನೆಯಿಂದ ಬಂದಿದೆ. ಶಿಕ್ಷಣ + ತಂತ್ರಜ್ಞಾನ = ಶೈಕ್ಷಣಿಕತಂತ್ರಜ್ಞಾನ ಶಿಕ್ಷಣ ಎಂಬ ಪದವುಅದೇ ವಿಸ್ತಾರವಾದಅರ್ಥವನ್ನು ಹೊಂದಿದೆ. ಶಿಕ್ಷಣವೆಂದರೆ ಉದ್ದೇಶಪೂರ್ವಕವಾಗಿ ವೈಯಕ್ತಿಕ ಮತ್ತು ಸಾಮಾಜಿಕಜೀವನವನ್ನು ವೃದ್ಧಿ ಮಾಡುವ ಪ್ರಕ್ರಿಯೆಎನ್ನಬಹುದು.ತಂತ್ರಜ್ಞಾನಎಂದರೆ ಪರಿಸರವನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಲು ಹಾಗೂ ಅದರಲ್ಲಿ ಭಾಗವಹಿಸಲು ಮಾನವನ ಚಟುವಟಿಕೆಗಳನ್ನು ಸಂಘಟಿಸುವತಂತ್ರಜ್ಞಾನ. "ತಂತ್ರಜ್ಞಾನವನ್ನು ಶಿಕ್ಷಣ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳುವ ವಿಧಾನಕ್ಕೆ ಶೈಕ್ಷಣಿಕತಂತ್ರಜ್ಞಾನಎನ್ನುವರು."

"ಎಸ್.ಕೆ. ಮಿತ್ರಾರವರ ಪ್ರಕಾರ" :"ಶೈಕ್ಷಣಿಕ ಗುರಿಗಳನ್ನು ಸಂಧಿಸುವ ವಿಧಾನ ಮತ್ತು ತಂತ್ರಗಳ ವಿಜ್ಞಾನವೇ ಶೈಕ್ಷಣಿಕತಂತ್ರಜ್ಞಾನ"

"ಎಮ್. ಲೀಫ್‌ರವರ ಪ್ರಕಾರ" :"ಕಲಿಕೆಯ ಸನ್ನಿವೇಶಗಳ ಬಗೆಗಿನ ವೈಜ್ಞಾನಿಕಜ್ಞಾನಅನ್ವಯೀಕರಣವೇ ಶೈಕ್ಷಣಿಕತಂತ್ರಜ್ಞಾನ"

ಒಂದು ವಿಷಯದಎಲ್ಲ ಕಟ್ಟಳೆಗಳನ್ನು ಕುರಿತು ನಡೆಸುವಚರ್ಚೆಯನ್ನೇಆದರ ವ್ಯಾಪ್ತಿಎನ್ನುತ್ತೇವೆ. ಈ ವ್ಯಾಪ್ತಿಯನ್ನು ತಿಳಿಯುವುದೆಂದರೆ ಒಂದು ವಿಷಯದಕ್ಷೇತ್ರಎಲ್ಲಿಯವರೆಗೆ ಚಲಿಸಿಕೊಳ್ಳುತ್ತದೆ ಹಾಗೂ ಎಲ್ಲಿಗೆಅದು ನಿಲ್ಲುತ್ತದೆಎಂಬುದರ ತಿಳಿವಳಿಕೆಯನ್ನು ಪಡೆಯುವುದೇಆಗಿದೆ.ಶೈಕ್ಷಣಿಕತಂತ್ರಜ್ಞಾನದ ವ್ಯಾಪ್ತಿಯು ಕೇವಲ ಸಾಧನ ಸಲಕರಣೆಗಳನ್ನು ಬಳಸಿಕೊಂಡು ಶಿಕ್ಷಣವನ್ನು ಮುಂದುವರಿಯುವಂತೆ ಮಾಡುವುದಲ್ಲದೇ ಪ್ರತಿಯೊಬ್ಬ ವಿದ್ಯಾರ್ಥಿ, ಶಿಕ್ಷಕ ಕೂಡತನ್ನ ಮನೋವಿಕಾಸವನ್ನು ಸಾಧಿಕೊಂಡು ಮುಂದುವರಿಯುವಂತೆ ಮಾಡುವುದೇಆಗಿದೆ.ಪ್ರತಿಯೊಬ್ಬರಲ್ಲೂಕೌಶಲ್ಯಅಭಿವ್ಯಕ್ತಿ ಹಾಗೂ ಅಭಿರುಚಿಗಳು ಬೆಳೆದು.ಕಲಿಕೆಯ ಅನುಭವಗಳು ಪರಿಣಾಮಕಾರಿಯಾಗಿ ವಿಕಾಸಗೊಳ್ಳುವಂತೆ ಮಾಡುವುದರತ್ತ ಶೈಕ್ಷಣಿಕತಂತ್ರಜ್ಞಾನತನ್ನ ಗಮನ ಹರಿಸುತ್ತದೆ.ಆದ್ದರಿಂದಲೇ ಈ ಶಾಖೆಯ ವ್ಯಾಪ್ತಿ ಶಿಕ್ಷಣದಲ್ಲಿ ಬಹಳ ವ್ಯಾಪಕವಾಗಿದೆ.ಈ ಕ್ಷೇತ್ರದ ಪ್ರತಿಯೊಂದುಚಟುವಟಿಕೆಯಲ್ಲೂಅದರ ಪ್ರಭಾವವಿರುವುದನ್ನು ನಾವು ಗಮನಿಸಬಹುದು.

- ಉತ್ತಮ ಬೋಧನೆಯ ಪರಿಕಲ್ಪನೆ, ಆದರ ವಿಶ್ಲೇಷಣೆ, ಘಟ್ಟಗಳು, ಮಟ್ಟಗಳು, ಸಿದ್ಧಾಂತ, ಸೂತ್ರಗಳು, ತತ್ವಗಳು ಹಾಗೂ ಬೋಧನೆ ಮತ್ತುಕಲಿಕೆಯ ನಡುವಿನ ಸಂಬಂಧ ಇವುಗಳನ್ನೆಲ್ಲ ಉತ್ತಮಗೊಳಿಸಿ ಹೊಸ ಸ್ವರೂಪ ನೀಡಲು ಶೈಕ್ಷಣಿಕತಂತ್ರಜ್ಞಾನ ಶ್ರಮಿಸುತ್ತದೆ.
- ಶಿಕ್ಷಣ ಗುರಿ ಮತ್ತು ಉದ್ದೇಶಗಳನ್ನು ಸಾಧಿಸುವಲ್ಲಿ ಈ ಶಾಖೆಯ ಪಾತ್ರದೊಡ್ಡದುಯಾಕೆಂದರೆಇದು ಕಲಿಕೆಗೆ ಸೂಕ್ತ ವಾತಾವರಣವನ್ನು ನಿರ್ಮಿಸುತ್ತದೆ ಹಾಗೂ ಬೋಧನೆಯನ್ನು ಸುಲಲಿತಗೊಳಿಸುತ್ತದೆ.
- ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ನವೀನ ವಿಧಾನವನ್ನು ರೂಪಿಸಿ ಪಠ್ಯಕ್ರಮವನ್ನು ಮಾರ್ಪಡಿಸುವಲ್ಲಿ ಹಾಗೂ ಹೊಸ ಶೈಕ್ಷಣಿಕ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸುವಲ್ಲಿ ಶೈಕ್ಷಣಿಕತಂತ್ರಜ್ಞಾನಗಮನಾರ್ಹಕಾರ್ಯ ಮಾಡುತ್ತದೆ.
- ಲಭ್ಯವಿರುವ ಸಂಪನ್ಮೂಲಗಳ ಸಮೀಕ್ಷೆಕೈಗೊಂಡುಯೋಜನೆರೂಪಿಸುವಲ್ಲಿ ಈ ಶಾಸ್ತ್ರದ ನೆರವುಅಗತ್ಯ.
- ಪ್ರಾಯೋಗಿಕಅನುಭವ, ದೃಶ್ಯ ಶ್ರವಣೋಪಕರಣಗಳ ಬಳಕೆ, ಬೋಧನೆಯಲ್ಲಿ ಅವುಗಳ ಅಳವಡಿಕೆ ಅವುಗಳ ಬಳಕೆಗೆ ಬೇಕಾದ ಕೌಶಲವನ್ನು ತರಬೇತಿಗೊಳಿಸುವುದು ಇವೆಲ್ಲದರಲ್ಲಿ ಶೈಕ್ಷಣಿಕತಂತ್ರಜ್ಞಾನದ ಪಾತ್ರವಿದೆ.
- ಉತ್ತಮ ಮೌಲ್ಯಮಾಪನ ತಂತ್ರಗಳನ್ನು ರೂಪಿಸುವಲ್ಲಿ ಶೈಕ್ಷಣಿಕತಂತ್ರಜ್ಞಾನದ ಪಾತ್ರವಿದೆ.

ಹೀಗೆ ಇನ್ನೂ ಹಲವಾರು ಅಂಶಗಳನ್ನು ಪಟ್ಟಿ ಮಾಡಲು ಸಾಧ್ಯವಿದೆ.ಒಟ್ಟಿನಲ್ಲಿ ಈ ಶಾಖೆಯುಇಂದು ಶಿಕ್ಷಣದ ಎಲ್ಲಾ ಆಯಾಮಗಳನ್ನು ಪ್ರಭಾವಿಸುತ್ತದೆ.ಅವೆಲ್ಲದಕ್ಕೂ ಶೈಕ್ಷಣಿಕತಂತ್ರಜ್ಞಾನದ ನೆರವು ಅನಿವಾರ್ಯವಾಗಿದೆಎಂಬುದು ಸತ್ಯ.

ಶಿಕ್ಷಣ ತಂತ್ರಜ್ಞಾನದ ಉದ್ದೇಶಗಳು

ಬೋಧನೆ ಹಾಗೂ ಕಲಿಯುವದರ ಪ್ರಕ್ರಿಯೆಗೆಖಚಿತವಾದ ನಿರ್ದಿಷ್ಟ ಮಾದರಿಗಳ ನಿರ್ಮಾಣಕ್ಕೆ ಅವಕಾಶ ಮಾಡಿಕೊಡುವುದು. ಹೊಸ ಹೊಸ ರೀತಿಯ ಕಲಿಕಾ ವ್ಯವಸ್ಥೆ ಹಾಗೂ ಬೋಧನಾ ಸರಣಿಗಳನ್ನು ರೂಪಿಸುವುದುಇದಕ್ಕಾಗಿಅಗತ್ಯವಾದ ಸಾಮಗ್ರಿಗಳನ್ನು ಪೂರೈಸುವುದು. ಅವಕಾಶ ವಂಚಿತಜನಸಮುದಾಯಕ್ಕೆಕಡಿಮೆ ವೆಚ್ಚದಲ್ಲಿಕಲಿಯುವ ಅವಕಾಶಗಳನ್ನು ಒದಗಿಸುವುದು. ವಿದ್ಯಾರ್ಥಿಗಳಅಭಿರುಚಿ ಹಾಗೂ ಆಸಕ್ತಿಗನುಗುಣವಾಗಿ ಶಿಕ್ಷಣ ಪ್ರಕ್ರಿಯೆಯನ್ನುರೂಪಿಸಲು ನೆರವಾಗುವುದು. ಬೋಧನಾ ವಿಷಯಗಳನ್ನು ಉಚಿತರೀತಿಯಲ್ಲಿಅನುಕ್ರಮಣಿಕೆಯಲ್ಲಿ ವ್ಯವಸ್ಥೆಗೊಳಿಸಿ ಮಾರ್ಗದರ್ಶನ ಮಾಡುವುದು.ಬೋಧನೋಪಕರಣಗಳನ್ನು ರೂಪಿಸುವುದು ಅವುಗಳನ್ನು ಉಪಯೋಗಿಸಲು ಶಿಕ್ಷಕರಿಗೆ ಮಾರ್ಗದರ್ಶನ ಮಾಡುವುದು.ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಉನ್ನತ ಮಟ್ಟದಕಲಿಕೆಯ ಅವಕಾಶಗಳನ್ನು ಎಲ್ಲರಿಗೂ ಸಮಾನವಾದರೀತಿಯಲ್ಲಿ ದೊರಕಿಸಿಕೊಡಲು ಶ್ರಮಿಸುವುದು. ಬೋಧನೆ ಹಾಗೂ ಕಲಿಕೆಯ ಪರಿಣಾಮಗಳನ್ನು ಶೀಘ್ರವಾಗಿ ಹಾಗೂ ವೈಜ್ಞಾನಿಕವಾಗಿ ಮೌಲ್ಯಮಾಪನ ಮಾಡುವುದು.ಸಮುದಾಯದ ಶೈಕ್ಷಣಿಕ ಅಗತ್ಯತೆಗಳು ಮತ್ತು ಆಕಾಂಕ್ಷೆಗಳನ್ನು ಗುರುತಿಸುವುದು. ವಿಜ್ಞಾನ, ಕಲೆ ಮತ್ತು ಮಾನವ ಮೌಲ್ಯಗಳಲ್ಲಿನ ಆಧಾರದ ಮೇಲೆ ಪಠ್ಯಕ್ರಮವನ್ನುರಚಿಸುವುದು. ಬೋಧನಾ ಮತ್ತು ಕಲಿಕಾ ಪ್ರಕ್ರಿಯೆ ಸುಧಾರಿಸಲು ನಿಶ್ಚಿತ ಮಾದರಿಗಳನ್ನು ಅಭಿವೃದ್ಧಿಪಡಿಸುವುದು. ವಿದ್ಯಾರ್ಥಿಗಳ ಗುಣಲಕ್ಷಣಗಳು ಮತ್ತು ಅಗತ್ಯತೆಗಳನ್ನು ಗುರುತಿಸುವುದು ಮತ್ತು ವಿಶ್ಲೇಷಿಸುವುದಾಗಿದೆ. ಬೋಧನೆ ಕಲಿಕಾ ಪ್ರಕ್ರಿಯೆಯಲ್ಲಿ ಬದಲಾವಣೆತರಲು ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಸಮರ್ಪಕವಾದ ಪ್ರತಿಪುಷ್ಟಿಒದಗಿಸುವುದು.

ಶೈಕ್ಷಣಿಕತಂತ್ರಜ್ಞಾನದ ಘಟಕಗಳು

ಈಗ ಬಳಕೆಯಲ್ಲಿರುವಂತೆ ಶೈಕ್ಷಣಿಕತಂತ್ರಜ್ಞಾನಅಥವಾ ಶೈಕ್ಷಣಿಕತಂತ್ರಶಾಸ್ತ್ರ ಎಂಬ ಶಬ್ದವು ಹೊಸದಾಗಿ ಅವಿಷ್ಕಾರಗೊಂಡತಾಂತ್ರಿಕ ಸಲಕರಣೆಗಳು ಹಾಗೂ ವರ್ತನಾ ವಿಜ್ಞಾನ, ಬೋಧನೆ ಹಾಗೂ ಕಲಿಕೆಗಳನ್ನು ಕುರಿತಂತೆ ಬಳಕೆಗೆ ಬಂದಿರುವ ಅನೇಕ ಹೊಸ ವಿಚಾರಗಳು ಇವೆಲ್ಲವನ್ನೂ ಸಮಗ್ರವಾಗಿ ಒಗ್ಗೂಡಿಸಿ ಬಳಸುತ್ತಿರುವ ಹೊಸ ಪ್ರಕ್ರಿಯೆಯ ಫಲವಾಗಿ ಜಾರಿಗೆ ಬಂದಿದೆ. ತುಲನಾತ್ಮಕವಾಗಿ ನೋಡಿದರೆ, ಇದೊಂದು ಹೊಸ ಪರಿಕಲ್ಪನೆ.
ಈ ತಂತ್ರಜ್ಞಾನದಎರಡು ಘಟಕಗಳೆಂದರೆ

1) ಯಂತ್ರಾಂಶಗಳು (Hardware)
2) ತಂತ್ರಾಂಶಗಳು (Software)
3) ವ್ಯವಸ್ಥಾ ಮಾರ್ಗ (System Approach)

ಯಂತ್ರಾಂಶಗಳು (Hardware)

- ತಂತ್ರಾಂಶಗಳನ್ನು ಯಶಸ್ವಿಯಾಗಿ ಉಪಯೋಗಿಸಲುಅಗತ್ಯವಾಗಿ ಬೇಕಾದ ಬಾಹ್ಯೋಪಕರಣಗಳೇ ಯಂತ್ರಾಂಶಗಳು.
- ಯಂತ್ರಾಂಶಗಳ ಬಳಕೆಗೆ ಮಾರ್ಗವನ್ನುಉನ್ನತತಾಂತ್ರಿಕತೆಯ ಮಾರ್ಗಎಂದುಕರೆಯಲಾಗುತ್ತದೆ.
- ಉದಾ : ಪ್ರೊಜೆಕ್ಟರ್‌ಗಳು, ಕಂಪ್ಯೂಟರ್‌ಗಳು, ಟೆಲಿವಿಷನ್, ವಿಸಿಪಿ, ವಿ.ಸಿ.ಆರ್, ವಿಡಿಯೋಕ್ಯಾಮೆರಾಇತ್ಯಾದಿ.

ತಂತ್ರಾಂಶಗಳು (Software)

- ಯಂತ್ರಾಂಶಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಬೇಕಾಗಿರುವ ಒಳ ಉಪಕರಣಗಳೇ ತಂತ್ರಾಂಶಗಳೆನ್ನುವರು.
- ಇವುಗಳ ಬಳಕೆಯ ಮಾರ್ಗವನ್ನು ಕೆಳಮಟ್ಟದ ತಾಂತ್ರಿಕತೆಎನ್ನುತ್ತಾರೆ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

- ಉದಾ : ಪಿಲಂಗಳು, ಸ್ಲೇಟ್‌ಗಳು, ಕಂಪ್ಯೂಟರ್‌ನಲ್ಲಿ ಬಳಸುವ ತಂತ್ರಾಂಶಗಳು, ಪ್ಲಾಫಿಡಿಸ್ಕ್‌ಗಳು, ಸಿ.ಡಿ.ಗಳು ಇತ್ಯಾದಿ.

ವ್ಯವಸ್ಥಾಮಾರ್ಗ (System approach)

ಬೋಧನೆ ಕಲಿಕಾ ವ್ಯವಸ್ಥೆಯನ್ನು ವಿಶ್ಲೇಷಿಸುವ ಸಂಶೋಧಿಸುವ ಮತ್ತು ಕ್ರಮಬದ್ಧಗೊಳಿಸುವ ವಿಧಾನಕ್ಕೆ ವ್ಯವಸ್ಥಾಮಾರ್ಗಎನ್ನುವರು.

"ಜಾನ್ಸನ್‌ರವರ ಪ್ರಕಾರ" : ಯೋಜಿಸಿದ ಗುರಿತಲುಪಲುಕ್ರಮಬದ್ಧವಾಗಿರೂಪಿಸಲು ವಿವಿಧ ಅಂಶಗಳ ಗಣವನ್ನು ವ್ಯವಸ್ಥಾಭಾಗಮಅಥವಾ ವ್ಯವಸ್ಥಾಮಾರ್ಗಎನ್ನುವರು.

ಲಕ್ಷಣಗಳು

- ಬೋಧನಾ ಕಲಿಕಾ ಕ್ರಿಯೆಯನ್ನು ಕ್ರಮಬದ್ಧಗೊಳಿಸುತ್ತದೆ.
- ಬೋಧನೆಕಲಿಕೆಯ ವಿವಿಧ ಆಯಾಮಗಳನ್ನು ವಿಶ್ಲೇಷಿಸುತ್ತದೆ
- ಕಲಿಕೆ ಪ್ರಕ್ರಿಯೆಯಲ್ಲಿಕ್ರಮವಾಗಿ ಮತ್ತು ಹಂತಹಂತವಾಗಿಕಲಿಯಲು ಸಹಾಯಕವಾಗುತ್ತದೆ
- ಶಿಕ್ಷಕರ ತರಬೇತಿ ಕಾರ್ಯಕ್ರಮಗಳನ್ನು ಉತ್ತಮಪಡಿಸುತ್ತದೆ

ಉಪಸಂಹಾರ :

ಹಲವು ಗ್ರಾಹಕ ಪದಾರ್ಥಗಳಿಗೆ 'ಅಸಾಧಾರಣ, ಶಕ್ತಿ ಎಂಬುದುಒಂದು ಹೆಗ್ಗಳಿಕೆಯಾಗಿದೆ. ದೈನಂದಿನ ಬಳಕೆಯ ವಸ್ತುಗಳಿಗೆ ಇಂತಹಅಸಾಧಾರಣ, ಶಕ್ತಿ ನಿಜಕ್ಕೂಅವಶ್ಯಕವೇ ಎಂಬ ಸರಳ ಪ್ರಶ್ನೆಯನ್ನು ಗಮನಿಸೋಣ. ಉದಾಹರಣೆಗೆ ಬಟ್ಟೆಒಗೆಯುವ ಸೋಪನ್ನು ತೆಗೆದುಕೊಳ್ಳಿ ಮೊದಲೆಲ್ಲ ಬಟ್ಟೆಒಗೆಯಲಿಕ್ಕೆ ಅಂಟುವಾಳದ ಕಾಯಿಯ ಪುಡಿ, ಚೌಳುಮಣ್ಣು ಇತ್ಯಾದಿ ಆಯಾ ಪರಿಸರದಲ್ಲಿ ಸಿಕ್ಕುವ ನೈಸರ್ಗಿಕ ಪದಾರ್ಥಗಳನ್ನು ಬಳಸುತ್ತಿದ್ದರು.ಅನಂತರ ಸೋಪುಗಳ ಬಳಕೆ ಶುರುವಾಯಿತು.ಈಗ ಸೋಪುಗಳು ಮಾಯವಾಗಿ ಅವುಗಳ ಜಾಗದಲ್ಲಿ ಡಿಟರ್ಜೆಂಟ್‌ಗಳು ಬಂದಿವೆ. ಪ್ರತಿವರ್ಷ ಪೈಪೋಟಿಯ ಮೇಲೆ ಡಿಟರ್ಜೆಂಟ್‌ಗಳ ಶಕ್ತಿಯನ್ನು ಹೆಚ್ಚಿಸಲಾಗುತ್ತಿದೆ.ವಿವಿಧ ಕಂಪನಿಗಳವರು ತಮ್ಮ ಡಿಟರ್ಜೆಂಟ್‌ಗಳ ಬಗ್ಗೆ ಜಾಹೀರಾತಿನಲ್ಲಿ ಶಕ್ತಿ ಮಹಾಶಕ್ತಿ ಸಿಡಿಲಿನ ಶಕ್ತಿ ಇತ್ಯಾದಿ ಹೊಸ ಹೊಸ ವಿಶೇಷಣಗಳನ್ನು ಪ್ರಚಾರಕ್ಕೆ ಬಿಡುತ್ತಿದ್ದಾರೆ.

ವೇಗವಾಗಿ ಬದಲಾಗುತ್ತಿರೋ ಸಾಮಾಜಿಕ ಸನ್ನಿವೇಶಕ್ಕೆ ಮತ್ತಷ್ಟು ವೇಗವನ್ನುತಂದುಕೊಟ್ಟಿದೆ.ಇಂದುಡಿಜಿಟಲ್ ಆಗಿ ಚಿತ್ರಕೊಡುವಎ.ಟಿ.ಎಂ.ಆಗಿ ಹಣಕೊಡುವ ಹಂತಕ್ಕೆ ಬೆಳೆದು ನಿಂತಿದೆ.ಶೀಘ್ರ ಕಾರ್ಯನಿರ್ವಹಿಸುವ ಸಲುವಾಗಿ ಭೌತಿಕ ಮೂರ್ತ ಹಾಗೂ ಅಮೂರ್ತಎಂದೆನಿಸುವ ಎಲ್ಲಜಗತ್ತನ್ನು ಆವರಿಸಿ ಬಿಟ್ಟಿದೆ.ನಾವು ಕಲಿಯುವ ವಿದ್ಯೆಯು ನಮ್ಮದೃಷ್ಟಿ ಹಾಗೂ ಸೃಷ್ಟಿಗಳನ್ನು ವಿಕಾಸಗೊಳಿಸಬೇಕೆ ಹೊರತು ವಿಕಾರಗೊಳಿಸಬಾರದು.ಕನ್ನಡ ಭಾಷೆ ಸಂಸ್ಕೃತಿಗೆ ಪೂರಕವಾಗುವ ಹಾಗೆ ವಿಶ್ವದಎಲ್ಲ ಭಾಷೆಗಳಲ್ಲಿಯೂ ಕಂಪ್ಯೂಟರನ ಬಳಕೆಯಾಗುತ್ತಿದ್ದು ಇಂದಿನ ವಿದ್ಯಾರ್ಥಿಗಳಲ್ಲೂ ಈ ಭಾಷಾತಾಂತ್ರಿಕತೆಯುಉತ್ಪಾದಿಸುವಲ್ಲಿ ಈ ಲೇಖನ ಸಾಬೀತುಪಡಿಸುತ್ತದೆ.

ಪರಾಮರ್ಶನ :

1) ಕನ್ನಡಜಗತ್ತುಅರ್ಧ ಶತಮಾನ ಕೆ.ವಿ. ನಾರಾಯಣ
2) ಇಂಟರ್‌ನೆಟ್ ಪತ್ರಿಕೋದ್ಯಮ ಶ್ರೀಧರ ದೀಕ್ಷಿತ್.

ವ್ಯವಹಾರಿಕಕನ್ನಡ : 1) ಡಾ॥ ಬಸವರಾಜಕಲ್ಗುಡಿ
2) ಡಾ॥ ಬಿ. ಗಂಗಾಧರ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

OriginalArticle

ಜಿ.ಎಚ್.ಹನ್ನೆರಡುಮಠ ಅವರ ನಾಟಕಗಳಲ್ಲಿ ಸಾಮಾಜಿಕ ಸಂಘರ್ಷ

ಶಿವಕುಮಾರ ನಾಯಿಕ
ಸಂಶೋಧನಾ ವಿದ್ಯಾರ್ಥಿ
ಮಾರ್ಗದರ್ಶಕರು
ಡಾ॥ ಮಹೇಶ ಎಫ್.ಗಾಜಪ್ಪನವರ

Manuscript ID:
JRD -2026-180441
ISSN: 2230-9578
Volume 18
Issue 4(II)
Pp.141-143
April 2026
Submitted:25 Mar. 2026
Revised:05 Apr. 2026
Accepted:14Apr..2026
Published:30 April 2026

ಸಾರಲೇಖ :

ಈ ಸಂಶೋಧನಾ ಲೇಖನವು ಕನ್ನಡ ನಾಟಕ ಸಾಹಿತ್ಯದಇತಿಹಾಸದಲ್ಲಿ ಸಾಮಾಜಿಕ ನಾಟಕಗಳ ಬೆಳವಣಿಗೆ ಮತ್ತುಅದರಲ್ಲಿಯೂ ಜಿ.ಹೆಚ್. ಹನ್ನೆರಡುಮಠಅವರ ನಾಟಕಗಳಲ್ಲಿ ಕಾಣಿಸುವ ಸಾಮಾಜಿಕ ಸಂಘರ್ಷಗಳನ್ನು ವಿಶ್ಲೇಷಿಸುತ್ತದೆ. ಕನ್ನಡ ನಾಟಕಗಳ ಪ್ರಾರಂಭಿಕ ಹಂತದಿಂದ ಹಿಡಿದುಆಧುನಿಕಕಾಲದವರೆಗೆಅದರ ಪರಿವರ್ತನೆಗಳನ್ನು ಪರಿಶೀಲಿಸಿ, ಸಮಾಜದ ಸಮಸ್ಯೆಗಳು ಹೇಗೆ ನಾಟಕಗಳ ಮೂಲಕ ಪ್ರತಿಬಿಂಬಿತವಾಗಿವೆಎಂಬುದನ್ನುಇಲ್ಲಿ ವಿವರಿಸಲಾಗಿದೆ. ಹನ್ನೆರಡುಮಠಅವರ ನಾಟಕಗಳು ಸಾಮಾನ್ಯಜನಜೀವನ, ಸಾಮಾಜಿಕಅನ್ಯಾಯ, ಅಸಮಾನತೆ, ದೌರ್ಜನ್ಯ ಮತ್ತು ಸಾಂಸ್ಕೃತಿಕ ಮೌಲ್ಯಗಳ ಕುಸಿತವನ್ನು ಸ್ಪಷ್ಟವಾಗಿಚಿತ್ರಿಸುತ್ತವೆ. 'ಸ್ವಾಮಿಗಳ ಸ್ವಾಮಾರ', 'ಬಂಡೆದ್ದ ಬಾರುಕೋಲು', 'ಮಹಾಸಂಗಮ' ಮೊದಲಾದ ನಾಟಕಗಳ ಮೂಲಕ ಅವರು ಸಾಮಾಜಿಕಅಸಮತೋಲನಗಳನ್ನು ಹೊರಹಾಕಿ, ಸಮಾಜ ಪರಿವರ್ತನೆಗೆದಾರಿತೋರಿಸುತ್ತಾರೆ. ಅವರ ಕೃತಿಗಳು ಕೇವಲ ಮನರಂಜನೆಗಷ್ಟೇ ಸೀಮಿತವಾಗದೆ, ಸಮಾಜಮುಖಿಚಿಂತನೆಗೆ ಪ್ರೇರಣೆ ನೀಡುತ್ತವೆಎಂಬುದು ಈ ಅಧ್ಯಯನದ ಮುಖ್ಯಉದ್ದೇಶವಾಗಿದೆ.

ಮುಖ್ಯ ಪದಗಳು :ಕನ್ನಡ ನಾಟಕ, ಜಿ.ಹೆಚ್. ಹನ್ನೆರಡುಮಠ, ಸಾಮಾಜಿಕ ಸಂಘರ್ಷ, ಸಮಾಜಮುಖಿ ಸಾಹಿತ್ಯ, ನಾಟಕ ವಿಶ್ಲೇಷಣೆ

ನಾಟಕವುಕನ್ನಡ ಸಾಹಿತ್ಯವನ್ನು 12ನೇ ಶತಮಾನದಲ್ಲಿತಡವಾಗಿ ಪ್ರವೇಶಿಸಿದರು. ಅತ್ಯಂತಕಡಿಮೆಅವಧಿಯಲ್ಲಿಅದೊಂದು ಸತ್ವಯುತ ಮತ್ತು ಸ್ವತಂತ್ರ ಪ್ರಕಾರವಾಗಿ ಮೈತಳೆದುದು ಗಮನಾರ್ಹ. 12ನೇ ಶತಮಾನದಲ್ಲಿಯೇ ಏಕಾಏಕಿ ಕಾಣಿಸಿಕೊಂಡ ಸಿಂಗಾರಾರ್ಯನ 'ಮಿತ್ರವಿಂದಾಗೋವಿಂದಾ' ನಾಟಕವು ಸಂಸ್ಕೃತದ ಶ್ರೀ ಹರ್ಷನ ಲೌಕಿಕ 'ರತ್ನಾವಳಿ' ನಾಟಕದರೂಪಾಂತರವಾದಕನ್ನಡದ ಮೊದಲ ನಾಟಕ.ಅದೊಂದು ಸ್ವತಂತ್ರ್ಯಕೃತಿಯೆಂಬ ಹೆಗ್ಗಳಿಕೆಯನ್ನು ಪಡೆದುಕೊಂಡಿದೆ. ಆದರೆಅದರ ಹಿಂದಿನ ಸಾಹಿತ್ಯಇತಿಹಾಸವನ್ನು ಗಮನಿಸಿದರೆ ಕನ್ನಡ ನಾಟಕವುತುಂಬ ಹಿದೆಯೆರಚಿತವಾಗಿ ನಶಿಸಿ ಹೋಗಿರಬಹುದೇ? ಎಂಬುದನ್ನು ನಾವಿಲ್ಲಿ ಕೆಲವು ಪ್ರಮುಖ ಆಧಾರಗಳಿಂದ ಕನ್ನಡ ನಾಟಕದ ಪ್ರಾಚೀನತೆಯನ್ನುಗುರುತಿಸಬಹುದು.

9ನೇ ಶತಮಾನದಲ್ಲಿ ಶ್ರೀ ವಿಜಯ ರಚಿಸಿದ ಕವಿರಾಜಮಾರ್ಗವುಕನ್ನಡದಲ್ಲಿ ಲಭಿಸಿದ ಆದಿಗ್ರಂಥವಾಗಿದೆ.ಈಗ್ರಂಥ ರಚನೆಗೊಳ್ಳುವ ಮೊದಲೆಕನ್ನಡರಂಗಭೂಮಿಇದ್ದುದರ ಬಗ್ಗೆ ಉಲ್ಲೇಖ ನಮಗೆ ಶಾಸನಗಳಲ್ಲಿ ದೊರೆಯುತ್ತದೆ. ಕವಿರಾಜಮಾರ್ಗದಆಧಾರದ ಮೇಲೆ ಹೇಳುವುದಾದರೆ ಕನ್ನಡರಂಗಭೂಮಿಗೆ ಸಾವಿರ ವರ್ಷಗಳಿಗೆ ಮಿಕ್ಕದ ದೀರ್ಘಇತಿಹಾಸವಿದೆ. "ಕನ್ನಡದಲ್ಲಿ ನಾಟಕಗಳು ಬಹಳ ತಡವಾಗಿರಚಿತಗೊಂಡಿದ್ದರುಕನ್ನಡರಂಗಭೂಮಿಎನ್ನುವುದುಇದ್ದೇಇದ್ದಿತು. ಕನ್ನಡರಂಗಭೂಮಿ ಪ್ರಮುಖವಾಗಿಎರಡು ಕವಲುಗಳಲ್ಲಿ ಬೆಳೆದು ಬಂದಿದೆ .ಜನಪದ ಮತ್ತುಅಭಿಜಾತವೆಂಬ ಎರಡು ಕವಲುಗಳು ಇದಕ್ಕಿವೆ. ಅರಮನೆರಂಗಭೂಮಿಅಥವಾಅಭಿಜಾತರಂಗಭೂಮಿಯು, ರಾಜಮಹರಾಜರ,ಆಸ್ಥಾನ ಪಂಡಿತರ ಹಾಗೂ ವಿದ್ವಾಂಸರ ಸಲುವಾಗಿ ನಾಟಕಗಳನ್ನು ಆಡಿದ್ದು, ಇದಕ್ಕೆ ಸಂಸ್ಕೃತರಂಗಭೂಮಿ ಪ್ರೇರಣೆಯನ್ನು ನೀಡಿತು. ಜನಪದರಂಗಭೂಮಿ ಗ್ರಾಮೀಣವಲಯಗಳಲ್ಲಿ ಗ್ರಾಮೀಣಜನರಿಗೆ ಮನರಂಜನೆಯನ್ನು ಒದಗುಸಿದ್ದು ಅದು ದೇಶಿಯ ಪರಂಪರೆಯಿಂದ ಸ್ಫೂರ್ತಿ ಮತ್ತು ಪ್ರೇರಣೆಗಳನ್ನು ಪಡೆದುಕೊಂಡಿತು".[1]

1882ರಲ್ಲಿ ರಚಿತವಾದ 'ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ'ವೆಂಬ ಮೊದಲ ಸ್ವತಂತ್ರ್ಯ ಸಾಮಾಜಿಕಕನ್ನಡ ನಾಟಕವಾಗಿದೆ.ಇದನ್ನು ವೆಂಕಟರಮಣ ಶಾಸ್ತ್ರಿಸೂರಿ ಎಂಬುವರು ಬರೆದರುಎಂದು ಹೇಳಲಾಗುತ್ತದೆ. ಒಮ್ಮೆ ಪ್ರಾರಂಭಗೊಂಡ ಸಾಮಾಜಿಕ, ವಾಸ್ತವಿಕ ನಾಟಕಗಳ ರಚನೆ ಕೈಲಾಸಂ ಮತ್ತು ಶ್ರೀರಂಗರನ್ನು ಮೊದಲಗೊಂಡು ಮುಂದುವರೆದುಕೊಂಡು ಬಂದಿದೆ. ಅನಂತರದಲ್ಲಿ ಬಿ.ಎಂ.ಶ್ರೀ. 'ಅಶ್ವತ್ಥಾಮನ್' ನಾಟಕ ಕುವೆಂಪು ಅವರರಕ್ತಾಕ್ಷಿ' ನಾಟಕಗಳು ರಂಗಭೂಮಿ ಮೇಲೆ ಯಶಸ್ಸು ಸಾಧಿಸುವುದರೊಂದಿಗೆಓದುಗರಗಮನವನ್ನುಕೂಡ ಸೆಳೆದಿವೆ. ನವೋದಯ. ನವ್ಯದಲಿತ–ಬಂಡಾಯದ ಸಮಯದಲ್ಲಿ ಅನೇಕ ಲೇಖಕರು, ವಿದ್ವಾಂಸರು ಆಗ ಕೈಲಾಸಂ, ಶ್ರೀರಂಗ, ಪರ್ವತವಾಸಿ, ಸಂಸ, ಕೀರ್ತಿನಾಥಕುರ್ತಕೋಟಿ, ಕಂಬಾರ, ಕಾರ್ನಾಡ್, ಲಂಕೇಶ್, ಚಂಪಾರಂತಹ ನಾಟಕಕಾರರು ಅನೇಕ ನಾಟಕಗಳನ್ನು ರಚಿಸಿ ಕನ್ನಡ ನಾಟಕ ಸಾಹಿತ್ಯ ಶ್ರೀಮಂತಗೊಳಿಸುವಲ್ಲಿ ತಮ್ಮದೇ ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದಾರೆ. ಅಂತವರಲ್ಲಿ ಪ್ರೊ ಜಿ.ಎಚ್.ಹನ್ನೆರಡುಮಠಅವರುಕೂಡಒಬ್ಬರು.ಇವರು ಹೆಚ್ಚಾಗಿ ರಂಗದದೃಷ್ಟಿಯನ್ನುಇಟ್ಟುಕೊಂಡೆ ನಾಟಕಗಳನ್ನು ಬರೆದಿದ್ದಾರೆ ಹಾಗಾಗಿ ತಾವೊಬ್ಬರು ಸಮರ್ಥ ನಾಟಕಕಾರರುಎಂಬುದನ್ನು ತೋರಿಸಿಕೊಟ್ಟಿದ್ದಾರೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಶಿವಕುಮಾರ ನಾಯಿಕಸಂಶೋಧನಾ ವಿದ್ಯಾರ್ಥಿ ಮಾರ್ಗದರ್ಶಕರುಡಾ॥ ಮಹೇಶ ಎಫ್. ಗಾಜಪ್ಪನವರ

How to cite this article:
ಶಿವಕುಮಾರ ನಾಯಿಕ.**(2026).** ಜಿ.ಎಚ್.ಹನ್ನೆರಡುಮಠಅವರ ನಾಟಕಗಳಲ್ಲಿ ಸಾಮಾಜಿಕ ಸಂಘರ್ಷ. *Journal of Research and Development, 18(4(II)), 141–143.* https://doi.org/10.5281/zenodo.19397122

Quick Response Code:
Website:
https://jrdrvb.org/
DOI:
10.5281/zenodo.19397122
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

ಹಾಗೂ ಸಾಮಾಜಿಕ ಬದಲಾವಣೆಗೆ ನಾಟಕ ಸಾಹಿತ್ಯವನ್ನು ಸಮರ್ಥಕವಾಗಿ ಬೆಳೆಸಿಕೊಂಡಿರುವಂತಹದ್ದು ಅವರ ನಾಟಕಗಳಿಂದ ಕಂಡುಬರುತ್ತದೆ.ಸಾಂಪ್ರದಾಯಿಕ ವಸ್ತುವನ್ನು ವೈಚಾರಿಕ ವಿನೂತನ, ದೃಷ್ಟಿಕೋನದಿಂದ ನೋಡುವ ಪ್ರಯತ್ನಅವರ ನಾಟಕಗಳಲ್ಲಿ ಕಾಣುತ್ತೇವೆ. ಹನ್ನೆರಡುಮಠಅವರುಒಟ್ಟು ಮೂವತ್ತೂರು ನಾಟಕಗಳನ್ನು ಬರೆದಿದ್ದು, ಸಾಮಾಜಿಕ, ಚಾರಿತ್ರಿಕ, ವಿಕಾಂಕ, ಗೀತ, ಮತ್ತು ಮಕ್ಕಳ ನಾಟಕಗಳು ಎಂಬ ವಿವಿಧ ವರ್ಗೀಕರಣದದೃಷ್ಟಿಕೋನದಿಂದ ಅವುಗಳನ್ನು ವಿಶ್ಲೇಷಿಸಿ ಔಚಿತ್ಯಪೂರ್ಣವಾಗಿ ಈ ಕೆಳಕಂಡಂತೆ ನೋಡಲಾಗಿದೆ

"ಸಮಾಜದಕನಿಷ್ಠ ರೂಢಿಗಳನ್ನು,ಪ್ರವೃತ್ತಿಗಳನ್ನು, ಪದ್ಧತಿಗಳನ್ನು ಧೈರ್ಯವಾಗಿ ವಿಡಂಬಿಸುವುದರಲ್ಲಿ ಹನ್ನೆರಡುಮಠಅವರು ಸಿದ್ಧಹಸ್ತರೆನ್ನುವುದು ಅವರ ಸಾಮಾಜಿಕ ನಾಟಕಗಳು ಮತ್ತು ಅವುಗಳಿಗೆ ಬಂದರೆ ಪ್ರತಿರೋಧವೇ ಸಾಕ್ಷಿ. ಆದರೆಅವರ ನಾಟಕಗಳನ್ನು ಒಂದು ಸಮಗ್ರದೃಷ್ಟಿಯಿಂದ ನೋಡಿದಾಗಅವರ ಸಾಹಿತ್ಯ ಸೃಷ್ಟಿಯ ಮುಖ್ಯ ಸೆಲೆ ವಿಡಂಬನೆಯಾಗಿರದೆ ಸಮಾಜದ ಮತ್ತು ವ್ಯಕ್ತಿಯಆರೋಗ್ಯ ಬೆಳವಣಿಗೆಯಲ್ಲಿ ಅವರಿಗಿರುವ ಕಾಳಜಿಯಾಗಿದೆ.ಸಮಾಜದಲ್ಲಿಯ ಕೊಳೆಯನ್ನು ನಿರ್ದಾಕ್ಷಿಣ್ಯವಾಗಿ ಬೈಲಿ ಗೆಳೆಯುತ್ತಾರೆ.ಈ ಮಾತನ್ನುಕಾಣಬೇಕಾದರೆ ಹನ್ನೆರಡುಮಠಅವರು ಸೃಷ್ಟಿಸಿದ ಪಾತ್ರಗಳು ಅವರ ನಾಟಕಗಳಲ್ಲಿ ಪುಟಗೊಂಡಿರುವುದು ಸಾಮಾಜಿಕ ಪ್ರಜ್ಞೆಯನ್ನು ನಾವು ನೋಡಬಹುದು."[2]

"ಜನ ಸಾಮಾನ್ಯರಜೀವನ ವ್ಯಾಪಾರವನ್ನು ಹೊಸ ವಸ್ತುವನ್ನಾಗಿ ಬಳಸಿಕೊಂಡಿರುವ ನಾಟಕ, ಸಾಮಾಜಿಕ ನಾಟಕಎಂದು ಸ್ಥೂಲವಾಗಿ ಸೂತ್ರರೂಪದಿಂದ ಹೇಳಬಹುದು. ಜನಸಾಮಾನ್ಯರುಎಂದರೆ ಸಮಾಜದ ಮಧ್ಯಮ ಮತ್ತು ಪ್ರವರ್ಗದವರುಇವರ ದಿನದಿನನ ವ್ಯಾಪಾರವನ್ನು ನಾಟಕಕ್ಕೆ ವಸ್ತುವಾಗಿ ಸ್ವೀಕರಿಸುವುದು ಭರತಖಂಡಕ್ಕೆ ಹೊಸದೇನಲ್ಲ. ಸಂಸ್ಕೃತ ಸಾಹಿತ್ಯದಲ್ಲಿತಕ್ಕಮಟ್ಟಿಗೆ ಹುಲುಸಾಗಿಯೆ ಬೆಳೆದುಕೊಂಡಿರುವ ಬಾಣಪ್ರಹಸನ ಪ್ರಕರಣಇತ್ಯಾದಿ. ರೂಪಕ ವಿಧಾನಗಳಲ್ಲಿ ರೂಪಿತವಾಗಿರುವುದು ಸಾಮಾನ್ಯಜನರಜೀವನಚಿತ್ರವೇ" ಇವುಗಳಲ್ಲಿ ಕೆಲವು ಕನ್ನಡಕ್ಕೂ ಭಾಷಾಂತರವಾಗಿವೆ.[3]

ಸಾಮಾಜಿಕ ನಾಟಕಗಳ ಪ್ರಸಿದ್ಧಿಗೆ, ಯಶಸ್ಸಿ ಪ್ರಯೋಗಗಳಿಗೆ ಕಾರಣವೆಂದರೆ ಅವುಗಳಲ್ಲಿರುವ ವೈವಿಧ್ಯಮಯವಾದ ವಸ್ತು ಪ್ರಾಚೀನ ಕಾಲದಿಂದ ಇಂದಿನವರೆಗೂ ನಮ್ಮನ್ನುಕಾಡುತ್ತಿರುವಜಾತಿಯ ಸಮಸ್ಯೆ, ಬಾಲ್ಯ ವಿವಾಹ, ವಿಷಮ ವಿವಾಹ, ವೈಶ್ಯಾ ಸಮಸ್ಯೆ, ಅನಾಥ ಮಕ್ಕಳ ಸಮಸ್ಯೆ, ವರದಕ್ಷಿಣೆ ಪಿಡುಗು, ಕೌಟುಂಬಿಕ ಕಲಹಗಳು, ಬಡತನ, ನಿರುದ್ಯೋಗ, ಶೈಕ್ಷಣಿಕ ಸಮಸ್ಯೆ, ಭ್ರಷ್ಟಾಚಾರ ಶೋಷಣೆ, ರಾಜಕೀಯ, ಮಧ್ಯಪಾನ ಮೊದಲಾದ ಭೀಕರ ರೋಗಗಳ ಭೀತಿ, ಗ್ರಾಮೀಣಜನಜೀವನದ ಗೊಂದಲಗಳು ಈ ಮುಂತಾದವುಗಳು ಸಾಮಾಜಿಕ ನಾಟಕಗಳಲ್ಲಿ ವಿಜೃಂಭಿಸಿದವು.ಈ ಸಮಸ್ಯೆಗಳಿಗೆ ಪರಿಹಾರ ಶೋಧಿಸುವುದು ಮತ್ತು ನೀತಿ ಉಪದೇಶಿಸುವುದು ಈ ನಾಟಕಗಳ ಉದ್ದೇಶವಾಗಿತ್ತು.

ಹನ್ನೆರಡುಮಠಅವರ ಸಾಮಾಜಿಕ ನಾಟಕಗಳಲ್ಲಿ ಕಥಾವಸ್ತುವನ್ನು ಅವಲೋಕಿಸಿದಾಗ ಅವರು ಹೆಚ್ಚಾಗಿ ವಾಸ್ತವಕ್ಕೆ ಪೂರಕವಾದ ಪ್ರಮುಖಜ್ವಲಂತ ಸಮಸ್ಯೆಗಳನ್ನು ತಮ್ಮ ನಾಟಕಗಳಿಗೆ ಕಥಾವಸ್ತುವನ್ನಾಗಿಆಯ್ದುಕೊಂಡಿದ್ದಾರೆ. ಸಾಮಾಜಿಕ ನಾಟಕಗಳ ಶ್ರೇಣಿಯಲ್ಲಿ ಹನ್ನೆರಡು ಮಠದ ಸ್ವಾಮಿಗಳ ಸ್ವಾಮಾರ" ಬಂಡೆದ್ದ ಬಾರಕೂಲು" ಮಹಾಸಂಗಮ' 'ಕಬ್ಬಕ್ಕಿಕರೆದಾವಕವ್ವಕವ್ವ" ಮಂಜುಮಾಯ' ಮೊದಲಾದವುಗಳು ಉತ್ತಮ ಸಾಮಾಜಿಕ ನಾಟಕಗಳಾಗಿದ್ದು, ಪರಿಣಾಮಕಾರಿ ಪ್ರದರ್ಶನದ ಮೂಲಕ ಯಶಸ್ವಿಯಾಗಿವೆ. 1890ರಲ್ಲಿ ಪ್ರಕಟಗೊಂಡ' ಸ್ವಾಮಿಗಳ ಸ್ವಾಮಾರಾ' ಈ ನಾಟಕ ಸಾಮಾಜಿಕ ವಿಷಯ ವಸ್ತುವನ್ನುಳ್ಳ ನಾಟಕವಾಗಿದ್ದು, ಸಮಕಾಲೀನ ಸಮಾಜದಲ್ಲಿರುವ ಮಠಗಳ ಒಳಗಡೆ ನಡೆಯುವಂತ ಅಂಕುಡೊಂಕಗಳನ್ನು ಹಾಸ್ಯಮಯವಾಗಿ ವಿಡಂಬನೆಯರೂಪದಲ್ಲಿಚಿತ್ರಿಸಲಾಗಿದ್ದು, ನಾಟಕದ ಮುಖ ಪುಟದಲ್ಲಿಯೆ ಹೇಳಿದ ಹಾಗೆ 'ಒಳಗೆ ಮಹಾಸ್ವಾಮಿಗಳ ಪೂಜೆ ನಡೆದಿದೆ, ಪರವಾನಗೆಇಲ್ಲದೆ ಪ್ರವೇಶವಿಲ್ಲ' ಎಂಬ ಹೇಳಿಕೆಯಲ್ಲಿ ನಾಟಕದ ಒಳಹರಿವು ಮತ್ತು ವಿಡಂಬನೆಯನ್ನುಗುರುತಿಸುತ್ತಾರೆ

ನರಗುಂದರೈತ ಬಂಡಾಯದ ಹಿನ್ನಲೆಯಲ್ಲಿ ಬರೆದಂತಹರೈತ ಚಳುವಳಿಯ 'ಬಂಡೆದ್ದ ಬಾರುಕೋಲು' ಎಂಬ ನಾಟಕದಲ್ಲಿ 'ಬಾರುಕೋಲು'ರೈತರ ಸಂಕೇತವಾಗಿರುವುದನ್ನು ನೋಡುತ್ತೇವೆ."ನರಗುಂದ ಬಹು ಹಿಂದಿನಿಂದಲೂ ಬರಗಾಲ ಪೀಡಿತ ಪ್ರದೇಶವಾಗಿತ್ತು.ನೀರಾವರಿ ಸೌಲಭ್ಯ ಒದಗಿಸಿದ ಹಿನ್ನಲೆಯಲ್ಲಿ ಸರಕಾರಅಭಿವೃದ್ಧಿ ಶುಲ್ಕ ರೈತರ ಮೇಲೆ ವಿಧಿಸಿತು. ಇದರಿಂದರೈತರು ಹೆಚ್ಚು ಹೆಚ್ಚು ಸಾಲ ಮಾಡಬೇಕಾಯಿತು.ಈ ಸಾಲ ಮತ್ತುಅದರ ಬಡ್ಡಿಯನ್ನುಕಟ್ಟದೆ ಅನೇಕ ಸಮಸ್ಯೆಗಳಿಗೆ ಒಳಗಾದರೂ ಈ ನಿಟ್ಟಿನಲ್ಲಿ ಸರ್ಕಾರದ ಮುಂದೆ ಹಲವು ಬೇಡಿಕೆಗಳೊಂದಿಗೆ ಹತ್ತು ಸಾವಿರೈತರು ಬೃಹತ್‌ಸಮ್ಮೇಳನವನ್ನು ಕೈಗೊಂಡು ಅಂದಿನ ಧಾರವಾಡಜಿಲ್ಲೆಯ ನರಗುಂದ, ನವಲಗುಂದ, ಸೌವದತ್ತಿ ಮುಂತಾದಕಡೆಗೆರೈತರ ಚಳುವಳಿ ವಿಕೋಪಕ್ಕೆ ಹೋಗಿ ಪೊಲೀಸರು ಲಾಟಿಚಾರ್ಜ್ ಮಾಡಿದರು. ಆಗ ಹಲವಾರುರೈತರು ಗಾಯಗೊಂಡರು.[4]

"ಸಮಾಜದಲ್ಲಿ ದಿನನಿತ್ಯ ನಡೆಯುವ ಘಟನೆಗಳನ್ನು ಆಧಾರಿತವಾಗಿಇಟ್ಟುಕೊಂಡು ಬರೆದಿರುವ ನಾಟಕ'ಮಹಾಸಂಗಮ'ಈ ನಾಟಕದಲ್ಲಿ ಬರೆಯುವಂತಹ ಸನ್ನಿವೇಶ ಕಲ್ಪಿಸಿ ಬುದ್ಧ, ಬಸವ, ಗಾಂಧಿ, ಅಂಬೇಡ್ಕರರೆಂಬ ವ್ಯಕ್ತಿಗಳ ಸಮ್ಮುಖದಲ್ಲಿಕಥೆಯನ್ನುಕಟ್ಟುತ್ತಾರೆ.ಅವರಕಥೆಯನ್ನು ಆಧರಿಸಿ ಸಮಕಾಲೀನ ಬದುಕಿನಚಿತ್ರಣವನ್ನುಅನುಸರಿಸುವ ಮಾದರಿಗಳನ್ನು ನಾಟಕಇಲ್ಲಿ ನೋಡಬಹುದು.ಅಲ್ಲದೇ ಸಮಾಜದಲ್ಲಿನ ಆಗುಹೋಗುಗಳ ಬಗ್ಗೆ ವಿಳಂಬನೆ, ಟೀಕೆ, ಚಿಂತನೆಗಳು ಕಂಡುಬರುತ್ತವೆ. ಸಮಕಾಲೀನ ಜನಜೀವನವನ್ನು ಪ್ರತಿಭಿಂಬಿಸುವ ಧರ್ಮಾಧಿಕಾರಿಗಳ ಡಾಂಭಿಕತನ, ಡೋಂಗಿತನ ಹಲವು ಕಪಟ ವೇಷಗಳು ನಾಟಕದ ವಿಷಯವಸ್ತುಎಂಟು ದೃಶ್ಯಗಳಲ್ಲಿ ಮೈದಾಳಿದ ಸಾಮಾಜಿಕ ಪರಂಪರೆಗೆ ಸೇರುವ ನಾಟಕ'ಮಹಾಸಂಗಮ'.

ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಪ್ರಸ್ತುತ ಸಮಾಜದಲ್ಲಿಚಲಾವಣೆಯಲ್ಲಿರುವ ನಾಣ್ಯಗಳು ಇವರು ಪ್ರತಿಪಾದಿಸಿದ ಸರ್ವಕಾಲಿಕ ಮಾನವೀಯ ಮೌಲ್ಯವನ್ನು ಸಿದ್ಧಾಂತಗಳನ್ನು ಇಂದಿನ ಸಾಮಾಜಿಕಜೀವನದಲಿ ಯಾವರೀತಿಯಲ್ಲಿಗ್ರಹಿಸಲಾಗುತ್ತದೆ. ತಮ್ಮ ಅನುಕೂಲಕ್ಕೆ ಬಳಸಿಕೊಂಡು ಅಪಮೌಲ್ಯಗೊಳಿಸುತ್ತಿದೆ ಎಂಬ ಆತಂಕ, ನೋವು ನಾಟಕದಲ್ಲಿ ಅಡಗಿದೆ.[5]

ಬದುಕಿನ ಅನೇಕ ಜಟಿಲವಾದ ಸಮಸ್ಯೆಗಳಿಗೆ ತಾವು ಬದುಕಿಗೆ ಶಾಶ್ವತ ಮೌಲ್ಯಗಳು ಸರ್ವ ಸಮಾನತೆಯಆಧಾರದ ಮೇಲೆ ಸರ್ವರಿಗೂ ಸರ್ವಕಾಲಕ್ಕೂಸಾಧಿಸಲು ಸಾಧ್ಯವಾಗುವಂತಹ ವಸ್ತುವೆಂದರೆ ಶಿವಶರಣರ ವಚನಗಳು. ಇಂತಹಶರಣ ಶರಣೆಯರ ವಚನಗಳಿಂದ ಮತ್ತುಅವರ ಜೀವನಾದರ್ಶಗಳ ಮೌಲ್ಯಗಳನ್ನು ತಮ್ಮಜೀವನದಲ್ಲಿ ಅಳವಡಿಸಿಕೊಂಡಿರುವಂತಹ ಹನ್ನೆರಡುಮಠಅವರುಅದೇ ವಿಷಯವನ್ನುಆಧಾರವಾಗಿಟ್ಟುಕೊಂಡು'ಕಬ್ಬಕ್ಕಿಕರೆದಾವಕವ್ವಾ... ಕವ್ವಾ' ಎಂಬ ನಾಟಕವನ್ನು ಬರೆದರು.ಅದೇರೀತಿ ಹನ್ನೆರಡುಮಠರು ಸಾಮಾಜಿಕ ಪ್ರಜ್ಞೆಯನ್ನುಎತ್ತಿತೋರಿಸುವಂತಹ ನಾಟಕಗಳಲ್ಲಿ 'ಮಂಜುಮಾಯೆ'ಕೂಡಒಂದು.ಇದು ಸಮಾಜದಲ್ಲಿ ನಡೆಯುವಂತಹ ಮೋಸ, ವಂಚನೆ, ಶೋಷಣೆಯ ಸಂಘರ್ಷಮಯದಿಂದಕೂಡಿದ ಹಾಸ್ಯ ವಿಡಂಬನೆಯ ನಾಟಕ.ಇನ್ನುಳಿದ ನಾಟಕಗಳಾದ 'ಗೋಧಿ ಹುಗ್ಗಿ ಗಂಗಯ್ಯ' ಹುಚ್ಚವನ ಹಳೇ ಸಂತಿ, ಕೂಗಿತ್ತುಕಲ್ಯಾಣ, ಅಪ್ಪಗಳ ಅಪ್ಪಅಪ್ಪಣ್ಣ, ಜೋಳಿಗೆ ತುಂಬ ಹೋಳಿಗೆ ತುಂಬಿದ'ಮೋಳಿಗೆ ಮಾರಯ್ಯ' ಎಂಬ ನಾಟಕಗಳು ಸಾಮಾಜಿಕ ವಿಡಂಬನೆ ಸಂಘರ್ಷಗಳ ಕುರಿತು ಸಾಕಷ್ಟು ಮಾನವೀಯ ಅಂಶಗಳನ್ನು ಬೆಳಕು ಚೆಲ್ಲುತ್ತವೆ.

ಪರಾಮರ್ಶನ ಗ್ರಂಥಗಳು

1. ಮಹಾಸಂಗಮ : ಜಿ.ಎಚ್‌ಹನ್ನೆರಡುಮಠ– 1998–ಸಂಗಮೇಶ್ವರ್, ಆಫ್‌ಸೆಟ್‌ಪ್ರಿಂಟರ್ಸ್, ಗುಳೇದಗುಡ್ಡ
2. ಮೋಳಿಗೆ ಮಾರಯ್ಯ:ಜಿ.ಎಚ್. ಹನ್ನೆರಡುಮಠ: 2015 ವಚನ ಅಧ್ಯಯನಕೇಂದ್ರ ಶ್ರೀ ನಾಗನೂರುರುದ್ರಾಕ್ಷಿಮಠ, ಬೆಳಗಾವಿ
3. ಅಪ್ಪಗಳ ಅಪ್ಪಅಪ್ಪಣ್ಣ: ಜಿ.ಎಸ್. ಹನ್ನೆರಡುಮಠ :2008 ಜಾಗೃತಿ ಪ್ರಿಂಟರ್ಸ್, ಬೆಂಗಳೂರು
4. ಜಿ.ಎಚ್.ಹನ್ನೆರಡುಮಠಅವರ ಸಮಗ್ರ ಸಾಹಿತ್ಯ

ಅಡಿ ಟಿಪ್ಪಣಿಗಳು:

1. ಡಾ. ಬಸವರಾಜಕೋಣೂರ 'ಕನ್ನಡ ನಾಟಕ ಮತ್ತುರಂಗಭೂಮಿ' ಪುಟ ಸಂ 61

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578| Website: https://jrdrvb.orgVolume-18, Issue-4(II)| April- 2026

2. ಜಿ.ಎಚ್‌ಹನ್ನೆರಡುಮಠಅವರ ಸಮಗ್ರ ಸಾಹಿತ್ಯ, ಪುಟ ಸಂಖ್ಯೆ 54
3. ತ.ಸು ಶಾಮರಾಯಿ'ಕನ್ನಡ ನಾಟಕ' ಪುಟ ಸಂಖ್ಯೆ 213
4. 'ಪಾಲಾಕ್ಷ ಸಮಗ್ರಕರ್ನಾಟಕಇತಿಹಾಸ ಮತ್ತು ಸಂಸ್ಕೃತಿ' ಭಾಗ–5 ಪುಟ ಸಂಖ್ಯೆ 13
5. ಜಿ.ಎಚ್. ಹನ್ನೆರಡುಮಠ ಸಮಗ್ರ ಸಾಹಿತ್ಯ ಪುಟ ಸಂಖ್ಯೆ 60–61

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

Original Article

ಬಸವಾದಿ ಶರಣರ ವಚನಗಳಲ್ಲಿ ಪ್ರಕೃತಿ ವರ್ಣನೆ

ಡಾ. ರಾಜಶೇಖರ ಬಿರಾದಾರ

Manuscript ID:
JRD -2026-180442
ISSN: 2230-9578
Volume 18
Issue 4(II)
Pp.144-148
April 2026
Submitted: 25 Mar. 2026
Revised: 05Apr. 2026
Accepted: 14 Apr. 2026
Published: 30 April 2026

ಗ್ರೇಟಾ ಟೆನ್‌ಬರ್ಗ್‌ಳ ಈ ಆಕ್ರೋಶದ ಮಾತಿಗೆ 'ಪರಿಸರದ ಮಿತಿಮೀರಿದ ಬಳಕೆ'ಯಾಗಿದೆ. ಒಂದು ಅಂದಾಜಿನ ಪ್ರಕಾರ ಮುಂದಿನ ೩೦–೪೦ ವರ್ಷಗಳಿಗೆ ಬಳಸಬೇಕಾದ ಪರಿಸರದ ಸಂಪನ್ಮೂಲಗಳನ್ನು ಈಗಾಗಲೇ ಬಳಸಿಬಿಟ್ಟಿದ್ದೇವೆ. ಆದ್ದರಿಂದ 'ನಮ್ಮ ಭವಿಷ್ಯವನ್ನು ಉಜ್ವಲವಾಗಿಸುತ್ತೇವೆಂದು ಹೇಳುತ್ತಾ ಪರಿಸರ ಹಾಳುಮಾಡುತ್ತೀದ್ದೀರಿ' ಎಂದು ಗ್ರೇಟಾ ಕಿಡಿಕಾರುತ್ತಾಳೆ. ಆದರೆ ವಿಶ್ವದ ನಾಯಕರಿಗೆ ಅವಳ ಮಾತು ಎಷ್ಟು ಮನವರಿಕೆಯಾಗಿದೆ ಎಂಬುದು ಅನುಮಾನಾಸ್ಪದ. ಆದರೆ ಅವಳ ವಿಚಾರವಂತೂ ಗಂಭೀರವಾಗಿ ಯೋಚಿಸಬೇಕಾದುದೇ ಆಗಿದೆ. ಏಕೆಂದರೆ ಪರಿಸರ ಸಮತೋಲನವಿಲ್ಲದೆ ಭೂಮಿಯ ಮೇಲೆ ಜೀವಿಗಳು ಮುಂದುವರೆಯಲು ಸಾಧ್ಯವಿಲ್ಲ. ಚಂದ್ರ, ಮಂಗಳನನ್ನು ದಾಟಿ ಸಾಗುತ್ತಿರುವ ವೈಜ್ಞಾನಿಕ ಪ್ರಗತಿಯು ಪರಿಸರಕ್ಕೆ ಮಾರಕವಾಗುತ್ತಿದೆ. ಓಜೋನ್ ರಂಧ್ರ, ಹಸಿರು ಮನೆ ಪರಿಣಾಮ, ಅನಾವೃಷ್ಟಿಯಂತಹ ಪ್ರಾಕೃತಿ ವಿಕೋಪಗಳು ಹೆಚ್ಚುತ್ತಿವೆ. ಇಂತಹ ಸಂದರ್ಭದಲ್ಲಿ ಧರ್ಮ ಮತ್ತು ವಿಜ್ಞಾನಗಳು ಮೇಳೈಸಬೇಕಾದ ಅನಿವಾರ್ಯತೆಯಿದೆ. ಈ ಹಿನ್ನೆಲೆಯಲ್ಲಿ 'ಧರ್ಮವಿಲ್ಲದ ವಿಜ್ಞಾನ ಕುಂಟು; ವಿಜ್ಞಾನವಿಲ್ಲದ ಧರ್ಮ ಕುರುಡು' ಎಂಬ ಐನ್‌ಸ್ಟೈನ್ ಮಾತಿನಂತೆ ವಿಜ್ಞಾನ, ಧರ್ಮ ಯಾವುದೇ ಆಗಿರಲಿ, ಪರಸ್ಪರ ಸಮನ್ವಯದೊಂದಿಗೆ ಸಮಕಾಲೀನ ಪರಿಸರವನ್ನು ಪೋಷಿಸಬೇಕು.

> "How dare you? You say you hear us and that you understand the urgency. But no matter how sad and angry I am, I do not want to believethat. Because if you really understood the situation and still kept on failing to act, then you would be evil. And that I refuse to believe."
> (Greta Thunberg's (Sweden) speech at the U.N. Climate Action Summit on 23.09.2019)

'ಆಡು ಮುಟ್ಟದ ಸೊಪ್ಪಿಲ್ಲ' ಎಂಬಂತೆ ಬಸವಾದಿ ಶರಣರು ತರ್ಕಿಸದ ವಿಷಯಗಳಿಲ್ಲ. ಶರಣರು ಕೇವಲ ಅಧ್ಯಾತ್ಮಿಕ, ಧಾರ್ಮಿಕ ಸಂಗತಿಗಳನ್ನು ಮಾತ್ರ ಚರ್ಚಿಸದೆ, ಇಂದಿಗೂ ಪ್ರಸ್ತುತವಾಗುವ ಪ್ರಕೃತಿಯ ಅನೇಕ ಮಜಲುಗಳನ್ನು ಅತ್ಯಂತ ಕಾಳಜಿಯಿಂದ ಚಿತ್ರಿಸಿದ್ದಾರೆ. ಉಳಿದ ಜೀವಿಗಳಂತೆ ಪರಿಸರದ ಕೂಸಾದ ಮನುಷ್ಯನು ಪ್ರಕೃತಿಯೊಂದಿಗೆ ಹೆಜ್ಜೆ ಹಾಕುವುದು ಅನಿವಾರ್ಯ ಮತ್ತು ಸಹಜ ಕ್ರಮ. 'ಪರಿಸರ(ಭೂಮಿ) ಮತ್ತು ಮನುಷ್ಯನ ಸಂಬಂಧ ತಾಯಿ–ಮಗುವಿನ ಸಂಬಂಧ; ತಾಯಿಯ ಹಾಲು ಕುಡಿಯಬೇಕು, ರಕ್ತ ಕುಡಿಯಬಾರದು(ಇಬ್ಬರಿಗೂ ಅಪಾಯ)' ಎಂಬುದನ್ನು ವಚನ ಸಾಹಿತ್ಯವು ಪ್ರತಿಪಾದಿಸುತ್ತದೆ. ಶರಣರ ವಚನಗಳಲ್ಲಿ ವ್ಯಕ್ತವಾದ ಪ್ರಕೃತಿ ವರ್ಣನೆಯ ಅಂಶಗಳನ್ನು ವಿಶ್ಲೇಷಿಸುವುದು ಈ ಲೇಖನದ ಉದ್ದೇಶವಾಗಿದೆ.

ಜೈವಿಕ ಮತ್ತು ಅಜೈವಿಕ ಘಟಕಗಳ ಮೊತ್ತವಾದ ಈ ಪ್ರಕೃತಿಯು ಎಲ್ಲ ಚರಾಚರಗಳಿಗೆ ಸೇರಿದ್ದಾಗಿದೆ. "ಈ ಜಗತ್ತು ಯಾರಿಗೂ ಸೇರಿದ್ದಲ್ಲ; ಯಾರ ಸ್ವಂತ ಆಸ್ತಿಯೂ ಅಲ್ಲ. ಈ ಭೂಮಿ/ಸಂಪತ್ತನ್ನು ನಿನ್ನ ಮೂಲಭೂತ ಅವಶ್ಯಕತೆಗೆ ತಕ್ಕಷ್ಟೇ ಭೋಗಿಸು. ತ್ಯಾಗ ಜೀವನ ನಡೆಸು, ನಿನ್ನ ಭೋಗಕ್ಕಾಗಿ ಕೂಡಿಡಲು ಇದು ಯಾರ ಸ್ವತ್ತೂ ಅಲ್ಲ" ಎಂದು ಈಶಾವ್ಯಶೋಪನಿಷತ್ತು ಹೇಳುತ್ತದೆ. ಇದನ್ನೇ ಅಲ್ಲಮಪ್ರಭು 'ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮನಿ ನಿನ್ನವಳಲ್ಲ, ಎಂದು ಹೇಳುತ್ತಾರೆ. ಉಳಿದ ಪ್ರಾಣಿಗಳಿಗಿಂತ ಬುದ್ಧಿವಂತನೆನಿಸಕೊಳ್ಳುವ ಅರ್ಹತೆಯನ್ನು ಉಳಿಸಿಕೊಳ್ಳಲು 'ಸಕಲ ಜೀವರಾಶಿಗಳಿಗೆ ಲೇಸ ಬಯಸುವುದೇ ಮನುಷ್ಯಧರ್ಮ'ವನ್ನು ಪಾಲಿಸಬೇಕು.

ಲೋಕದ ಚೇಷ್ಟೆಗೆ ರವಿ ಬೀಜ:

ಜೀವಿ–ಭೌತಿಕ ಪರಿಸರವಲ್ಲ ಚಟುವಟಿಕೆಗಳಿಗೆ ಸೂರ್ಯನ ಆಧಾರ. ಸೂರ್ಯೋದಯದ ನಂತರವೇ ಇಡೀ ಜಗತ್ತು ಜಾಗೃತವಾಗುತ್ತದೆ. ಲೋಕದ ಚಟುವಟಿಕೆಗಳು ಆರಂಭಗೊಳ್ಳುತ್ತವೆ. ಸೂರ್ಯನ ಬೆಳಕಿನ ಸಹಾಯದಿಂದ ಸಸ್ಯಗಳು ದ್ಯುತಿ ಸಂಶ್ಲೇಷಣೆಕ್ರಿಯೆ ನಡೆಸಿ ಆಹಾರೋತ್ಪಾದನೆ ಮಾಡಿಕೊಳ್ಳುತ್ತವೆ. ಈ ವೈಜ್ಞಾನಿಕ ಸಂಗತಿಯನ್ನು ಅಕ್ಕಮಹಾದೇವಿಯು ತನ್ನ ಒಂದು ವಚನದಲ್ಲಿ ಅಧ್ಯಾತ್ಮದೊಂದಿಗೆ ಸುಂದರವಾಗಿ ಮೇಳೈಸಿದ್ದಾಳೆ.

ಲೋಕದ ಚೇಷ್ಟೆಗೆ ರವಿ ಬೀಜವಾದಂತೆ
ಕರಣಂಗಳ ಚೇಷ್ಟೆಗೆ ಮನವೇ ಬೀಜ
ಎನಗುಳ್ಳದೊಂದು ಮನ, ಆ ಮನ
ನಿಮ್ಮಲ್ಲಿ ಲೀನವಾದ ಬಳಿಕ
ಎನಗೆ ಭವವುಂಟೆ ಚೆನ್ನಮಲ್ಲಿಕಾರ್ಜುನ?

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ. ರಾಜಶೇಖರ ಬಿರಾದಾರ

How to cite this article:
ಡಾ. ರಾಜಶೇಖರ ಬಿರಾದಾರ. (2026). ಬಸವಾದಿ ಶರಣರ ವಚನಗಳಲ್ಲಿ ಪ್ರಕೃತಿ ವರ್ಣನೆ. *Journal of Research and Development, 18(4(II)), 144–148. https://doi.org/10.5281/zenodo.19397158*

Quick Response Code:
Website: https://jrdrvb.org/
DOI: 10.5281/zenodo.19397158
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

ರವಿಯು ಪರಿಸರದ ಚಟುವಟಿಕೆಗಳಿಗೆ ಪ್ರೇರಕವಾದಂತೆ ಮನಸ್ಸು ಮನುಷ್ಯನ ಚಟುವಟಿಕೆಗಳಿಗೆ ಚೈತನ್ಯದಾಯಿಯಾಗಿರುತ್ತದೆ. ಆ ಮನಸ್ಸನ್ನು ದೇವರಲ್ಲಿ ಐಕ್ಯಗೊಳಿಸುವುದೇ ನಿಜವಾದ ಅಧ್ಯಾತ್ಮವೆಂಬುದನ್ನು ಅಕ್ಕ ಮಾರ್ಮಿಕವಾಗಿ ಹೇಳಿದ್ದಾಳೆ.

ಪಂಚಭೂತಗಳ ಸಂಯೋಜನೆ:

ಜಗತ್ತಿನ ಸಮಸ್ತವೂ ಪರಿಸರದ ಅಂಶಗಳಾದ ನೀರು, ಗಾಳಿ, ಬೆಂಕಿ, ಆಕಾಶ ಮತ್ತು ಮಣ್ಣು ಎಂಬ ಪಂಚಭೂತಗಳ ಸಂಯೋಜನೆಯಿಂದ ನಿರ್ಮಿತವಾಗಿದೆ. ಜೀವಿಯದೇಹದ ಅಂಶಗಳು ಅದರ ಜೀವನದ ನಂತರ ಪೂರ್ವ ಸ್ವರೂಪಕ್ಕೆ ಮರಳಿ ಬೇರೆ ಜೀವಿಗಳಿಗೆ ಲಭ್ಯವಾಗುವಂತೆ ಆಗುತ್ತದೆ. ಆದ್ದರಿಂದ ದೇಹದ ಮೇಲಿನ ಮೋಹ ತೊರೆದಾಗ ಮಾತ್ರ ದೈವ ಸಾಕ್ಷಾತ್ಕಾರವಾಗಲು ಸಾಧ್ಯವಾಗುತ್ತದೆ ಎಂಬುದನ್ನು ಅಲ್ಲಮಪ್ರಭು ಈ ವಚನದಲ್ಲಿ ಸುಂದರವಾಗಿ ನಿರೂಪಿಸಿದ್ದಾರೆ:

ಐವರ ಸಂಗದಿಂದ ಬಂದೆ ನೋಡಯ್ಯಾ
ಐವರ ಸಂಗದಿಂದ ನಿಂದೆ ನೋಡಯ್ಯಾ
ಈ ಐವರೂ ತಮ್ಮ ತಮ್ಮ ಬಟ್ಟೆಯಲ್ಲಿ ಹೋದರು.
ನಾನೊಬ್ಬನೆ ನಿಸ್ಸಂಗಿಯಾಗಿ ಉಳಿದೆನಲ್ಲಾ!
ಗುಹೇಶ್ವರನೆಂಬ ನಿತ್ಯನಿರಂಜನ ರೂಹಿಲ್ಲದ ಘನವ ಕಂಡೆನಯ್ಯಾ

ಇತ್ತೀಚೆಗೆ ಎಲ್ಲ ದೇಶಗಳ ವಿಜ್ಞಾನಿಗಳು ಮಂಗಳ, ಚಂದ್ರನಲ್ಲಿ ಈ ಪಂಚಭೂತಗಳನ್ನೇ ಹುಡುಕುತ್ತಿದ್ದಾರೆ. ಇವು ದೊರೆತರೆ ಅಲ್ಲಿಯೂ ಜೀವಿಗಳು ವಾಸಿಸಲು ಸಾಧ್ಯವಾಗುತ್ತದೆ ಎಂಬ ಆಶಾಭಾವನೆಯು ಈ ಹುಡುಕಾಟಗಳಿಗೆ ಕಾರಣವಾಗಿದೆ. ಈ ಪರಿಸರದಲ್ಲಿ ಬದುಕುವ ಪ್ರತಿಯೊಂದು ಜೀವಿಯೂ 'ಬದುಕು–ಬದುಕಲು ಬಿಡು', 'ಬಳಸು–ಬೆಳಸು' ತತ್ವವನ್ನು ಅನುಸರಿಸಬೇಕು. ಅಂದರೆ ಈ ಪಂಚಭೂತಗಳಿಂದ ತಾವು ಪಡೆದ ಋಣವನ್ನು ತೀರಿಸಬೇಕು.

ಎಲೆ ಶಿವನೆ ನಿಮ್ಮಲ್ಲಿ ಸಾಲವ ಕೊಂಡು
ನಿಮ್ಮ ಶರಣ ಶಿವಲೋಕಕ್ಕೆ ಹೋದವನಲ್ಲಾ
ಪೃಥ್ವಿಯ ಸಾಲವ ಪೃಥ್ವಿಗೆ ಕೊಟ್ಟು
ಅಪ್ಪುವಿನ ಸಾಲವ ಅಪ್ಪುಗೆ ಕೊಟ್ಟು
ತೇಜದ ಸಾಲವ ತೇಜಕ್ಕೆ ಕೊಟ್ಟು
ವಾಯುವಿನ ಸಾಲವ ವಾಯುವಿಗೆ ಕೊಟ್ಟು
ಆಕಾಶದ ಸಾಲವ ಆಕಾಶಕ್ಕೆ ಕೊಟ್ಟು
ಪ್ರಸಾದವನಾರಿಗೆಯೂ ಕೊಡಲಿಲ್ಲೆಂದು ಕೂಡಲಚೆನ್ನಸಂಗನಲ್ಲಿ
ಹೊಣೆಹೊಕ್ಕ ಶರಣಂಗೆ ಮಿಗೆ ಮಿಗೆ ನಮೋ ನಮೋಯೆಂಬೆ

ಪ್ರಕೃತಿಯ ಅಂಶಗಳಾದ ಪೃಥ್ವಿ, ಅಪ್ಪು, ತೇಜ, ವಾಯು ಮತ್ತು ಆಕಾಶದಿಂದ ಪಡೆದ ಸಾಲವನ್ನು ಮರಳಿಸುವುದು ಪ್ರತಿಯೊಂದುಜೀವಿಯಆದ್ಯಕರ್ತವ್ಯ. ಮನುಷ್ಯನುಇದನ್ನು ಮರೆತಿದ್ದಾನೆ. ಅರಿತವನಾದ ಶರಣನು ಈ ಋಣಗಳನ್ನು ತೀರಿಸಿ ಆತ್ಮೋನ್ನತಿಯನ್ನು ಸಾಧಿಸಬೇಕುಎಂಬುದನ್ನು ಪ್ರಕೃತಿಯ ಸಾದೃಶ್ಯಗಳನ್ನು ಬಳಸಿ ಹೇಳಿದ್ದಾರೆ.

ಜೀವಜಾಲದಲ್ಲಿದೆ ಚರಾಚರವೆಲ್ಲ:

'ಸಸ್ಯಗಳಿಗೆ ಜೀವವಿದೆ'ಯೆಂದು ಆಧುನಿಕ ವಿಜ್ಞಾನಿಗಳು ಸಾಬೀತು ಮಾಡಿದ ಮೇಲೂ ನಮಗೆ ಸಸ್ಯಗಳನ್ನು ಜೀವಿಗಳಂತೆ ಪರಿಭಾವಿಸುವುದು ಸಾಧ್ಯವಾಗುತ್ತಿಲ್ಲ. ಆದರೆ ಶರಣರು ಹನ್ನೆರಡನೆಯ ಶತಮಾನದಲ್ಲಿ ಸಸ್ಯಗಳಿಗೆ ಜೀವವಿದೆ ಎಂದು ಪ್ರತಿಪಾದಿಸಿರುವುದು ಮಾತ್ರವಲ್ಲದೆ, ಗಿಡಮರ ಬಳ್ಳಿಗಳು, ಕ್ರಿಮಿಕೀಟಗಳು ಸೇರಿದಂತೆ 'ಸಕಲ ಜೀವಾತ್ಮರಿಗೆ ಲೇಸು ಬಯಸುವ' ಮಾಹಾಮಾರ್ಗವನ್ನು ಕಂಡುಕೊಂಡರು.

ಮರಗಿಡು ಬಳ್ಳಿ ಧಾನ್ಯಂಗಳ ಬೆಳಸೆಲ್ಲವ ತರಿತರಿದು ಪ್ರಾಣವ ಕೊಂದುಂಡು
ಶರೀರವ ಹೊರೆವ ದೋಷಕ್ಕೆ ಇನ್ನಾವುದು ವಿಧಿಯಯ್ಯಾ?
ಒಂದಿಂದ್ರಿಯ ಮೊದಲಾಗಿ ಐದಿಂದ್ರಿಯ ಕಡೆಯಾದ
ಜೀವಜಾಲದಲ್ಲಿದೆ ಚರಾಚರವೆಲ್ಲ. ಅದು ಕಾರಣ
ಕೂಡಲಸಂಗನ ಶರಣರು ಲಿಂಗಕ್ಕರ್ಪಿಸಿ
ಪ್ರಸಾದವಕೊಂಡು ನಿರ್ದೋಷಿಗಳಾಗಿ ಬದುಕಿದರು

ತರಕಾರಿ, ಹಣ್ಣು, ಸೊಪ್ಪುಗಳನ್ನು ಸೇವಿಸುವುದು ಸಸ್ಯಾಹಾರ. ಇದು ಮಾಂಸಾಹಾರಕ್ಕಿಂತ ಶ್ರೇಷ್ಠವೆಂಬ ತರತಮ ಭಾವವು ಹಿಂದೆಂದಿಗಿಂತಲೂ ಹೆಚ್ಚಾಗುತ್ತಿದೆ. ಈ ಸಂದರ್ಭದಲ್ಲಿ ಈ ವಚನವು ಹೆಚ್ಚು ಪ್ರಸ್ತುತತೆಯನ್ನು ಪಡೆಯುತ್ತದೆ. ಪರಿಸರದಲ್ಲಿರುವ ಮರ, ಗಿಡ, ಬಳ್ಳಿ, ಧಾನ್ಯಗಳನ್ನು ಹರಿದು ತಿನ್ನುವುದು ಅವುಗಳ ಪ್ರಾಣವನ್ನು ಕೊಂದು ತಿಂದಂತೆಯೇ ಸರಿ. ಜೀವಜಾಲದಲ್ಲಿ ಇವೆಲ್ಲವುಗಳಿಗೂ ಜೀವವಿದೆ. ಜೊತೆಗೆ 'ಒಂದಿಂದ್ರಿಯ ಮೊದಲಾಗಿ ಐದಿಂದ್ರಿಯ ಕಡೆಯಾಗಿ' ಅಂದರೆ ಅಮೀಬಾದಿಂದ ಹೋಮೋಸೋಫಿಯನ್‌ವರೆಗಿನ ಜೀವವಿಕಾಸದತತ್ವವನ್ನು ಪ್ರತಿಪಾದಿಸುತ್ತಿದ್ದಾರೆ.

ಸಸ್ಯ ಬೆಳೆವಣಿಗೆಯ ಕ್ರಮ:

ಮರಕ್ಕೆ ಬೇರು ಬಾಯಿಯೆಂದು ತಳುಂಕೆ ನೀರನೆರೆದಡೆ
ಮೇಲೆ ಪಲ್ಲವಿಸಿತ್ತು ನೋಡಾ!
ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದಡೆ
ಮುಂದೆ ಸಕಳಾರ್ಥವನೀವನು,
ಆ ಜಂಗಮ ಹರನೆಂದು ಕಂಡು, ನರನೆಂದು ಭಾವಿಸಿದಡೆ
ನರಕ ತಪ್ಪದು ಕಾಣಾ ಕೂಡಲಸಂಗಮದೇವಾ

ಸಸ್ಯಗಳಿಗೆ ನೀರು ಹಾಯಿಸಿದರೆ ಆ ನೀರು, ನೀರಿನಲ್ಲಿರುವ ಪೋಷಕಾಂಶಗಳನ್ನು ಬಳಸಿಕೊಂಡು ಸಸ್ಯವು ಸಮೃದ್ಧವಾಗಿ ಬೆಳೆಯುತ್ತವೆ; ಫಲ–ಪುಷ್ಪಗಳನ್ನು ನೀಡುತ್ತವೆ. ಈ ಫಲ–ಪುಷ್ಪಗಳನ್ನು ಆಶ್ರಯಿಸಿ ಪಕ್ಷಿಗಳು, ದುಂಬಿಗಳು ಬರುತ್ತವೆ. ಇದೇ ಸಮಯದಲ್ಲಿ ಪರಾಗಸ್ಪರ್ಶ, ಬೀಜ ಪ್ರಸರಣ ಕಾರ್ಯಗಳು ನಡೆಯುತ್ತವೆ. ಬೀಜಗಳು ಮಣ್ಣು–ನೀರಿನ ಸಂಗದಿಂದ ಮೊಳೆದು ಸಸಿಯಾಗಿ, ಮರವಾಗಿ, ಹೆಮ್ಮರವಾಗಿ ಬೆಳೆಯುತ್ತವೆ. ಪ್ರಾಣಿ–ಪಕ್ಷಿಗಳು ಸೇರಿದಂತೆ ಎಲ್ಲ ಜೀವಚರಗಳಿಗೆ ಆಹಾರವನ್ನು ನೀಡುತ್ತವೆ. ಅದೇರೀತಿ ದೇವರಿಗೆಂದು ನಾವು ಸಿದ್ಧಪಡಿಸುವ ಪ್ರಸಾದವನ್ನು ದೇವರಿಗೆ(ಲಿಂಗಕ್ಕೆ) ಬಾಯಿಯೇ ಜಂಗಮವೆಂದು ಭಾವಿಸಿ, ಅವರಿಗೆ ನೀಡಿದರೆ ಅದು ಸತ್ಫಲವನ್ನು ನೀಡುತ್ತದೆ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

ಜೀವಚೈತನ್ಯವನ್ನು ನೀಡುವುದೇ ದೇವರು:

'ನಾ ದೇವನಲ್ಲದೆ ನೀ ದೇವನೆ?' ಎಂದು ದೇವರಿಗೆ ಸವಾಲು ಹಾಕುವ ಅಲ್ಲಮಪ್ರಭು 'ಹಸಿದವರಿಗೆ ಆಹಾರವನ್ನು ನೀಡುವುದು, ಬಾಯಾರಿಕೆಯಾದವರಿಗೆ ನೀರು ಕೊಡುವುದು ದೇವರ ಕೆಲಸ' ಎಂದು ಹೇಳುತ್ತಾರೆ. 'ಆಹಾರ' ಮತ್ತು 'ನೀರು' ಪರಿಸರದಲ್ಲಿರುವ ಜೀವಿಗಳಿಗೆ ಚೈತನ್ಯವನ್ನು ನೀಡುತ್ತವೆ. ಪ್ರಕೃತಿಯು ಇವುಗಳನ್ನು ಪೂರೈಸುವುದರಿಂದ 'ಈ ಪ್ರಕೃತಿಯೇ ದೇವರು' ಎಂಬುದು ವಚನಕಾರರ ನಿಲುವಾಗಿತ್ತು.

ವನವೆಲ್ಲಾ ನೀನೆ, ವನದೊಳಗಣ ದೇವತರುವೆಲ್ಲಾ ನೀನೆ
ತರುವಿನೊಳಗಾಡುವ ಖಗಮೃಗವೆಲ್ಲಾ ನೀನೆ.
ಚೆನ್ನಮಲ್ಲಿಕಾರ್ಜುನಾ, ಸರ್ವಭರಿತನಾಗಿ ಎನಗೇಕೆ ಮುಖದೋರೆ

ದಿವ್ಯದೃಷ್ಟಿಯ ಅಕ್ಕಮಹಾದೇವಿಗೆ ಪರಿಸರದಲ್ಲಿರುವ ವನವೆಲ್ಲಾ ದೇವರಂತೆ ಕಾಣುತ್ತಿದ್ದೆ. ಏಕೆಂದರೆ ಈ ವನವೇ ಸಕಲ ಜೀವಚರಗಳನ್ನು ಪೋಷಿಸುತ್ತಿದೆ; ಬೆಳೆಸುತ್ತಿದೆ. ದೇವರು ಪರಿಸರದ ಎಲ್ಲ ಜೀವಜಾಲಕ್ಕೂ ಚೈತನ್ಯ ನೀಡುವ ಇಂತಹ ಪ್ರಕೃತಿಯಲ್ಲಿ ಇರುತ್ತಾರೆಯೇ ಹೊರತು ಸ್ಥಾವರರೂಪದ ಗುಡಿ ಗೋಪುರಗಳಲ್ಲಿ ಅಲ್ಲ. ಆದ್ದರಿಂದಲೇ ಅಕ್ಕಮಹಾದೇವಿಯು ತನ್ನ ಆರಾಧ್ಯದೈವವನ್ನು ಪ್ರಕೃತಿಯಲ್ಲಿಯೇ ಹುಡುಕುತ್ತಾಳೆ.

ಅಳಿಸಂಕುಲವೆ, ಮಾಮರವೆ,
ಬೆಳುದಿಂಗಳೆ, ಕೋಗಿಲೆಯೆ
ನಿಮ್ಮೆಲ್ಲರನೂ ಒಂದ ಬೇಡುವೆನು
ಎನ್ನೊಡೆಯ ಚೆನ್ನಮಲ್ಲಿಕಾರ್ಜುನದೇವ
ಕಂಡಡೆ ಕರೆದು ತೋರಿರೆ

ಎಂದು ಪರಿಸರದ ಅಂಶಗಳಾಗಿರುವ ಅಳಿಸಂಕುಲ, ಮಾಮರ, ಬೆಳದಿಂಗಳು, ಕೋಗಿಲೆಗಳಿಗೆ ಭಿನ್ನೈಸಿಕೊಳ್ಳುತ್ತಾಳೆ.

ಸಾರ್ಥಕತೆ:

ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ
ಲಿಂಗವೆಂಬ ಎಲೆಯಾಯಿತ್ತು.
ಲಿಂಗವೆಂಬ ಎಲೆಯ ಮೇಲೆ ವಿಚಾರವೆಂಬ ಹೂವಾಯಿತ್ತು,
ಆಚಾರವೆಂಬ ಕಾಯಾಯಿತ್ತು, ನಿಷ್ಪತ್ತಿಯೆಂಬ ಹಣ್ಣಾಯಿತ್ತು.
ನಿಷ್ಪತ್ತಿಯೆಂಬ ಹಣ್ಣು ತೊಟ್ಟುಬಿಟ್ಟು ಕಳಚಿಬೀಳುವಲ್ಲಿ
ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ

ಉತ್ತಮ ಗುಣಮಟ್ಟದ ಬೀಜವನ್ನು ಫಲವತ್ತಾದ ಭೂಮಿಯಲ್ಲಿ ಬಿತ್ತಿ, ಅದಕ್ಕೆ ಸರಿಯಾದ ಪೋಷಣೆ ಮಾಡಬೇಕು. ಆಗ ಮೊಳಕೆಯೊಡೆದು ಸಸಿಯಾಗಿ ಎಲೆ, ಹೂವು, ಕಾಯಿ–ಹಣ್ಣುಗಳಾಗುತ್ತವೆ. ಪ್ರಾಣಿ ಪಕ್ಷಿಗಳು ಅಂತಹ ಹಣ್ಣುಗಳನ್ನು ತಮಗೆ ಬೇಕೆಂದು ಪಡೆದುಕೊಳ್ಳುತ್ತವೆ. ಸಾಧಕನ ಸಾರ್ಥಕ ಜೀವನದ ಸಾಧನೆಗಳ ಬಗ್ಗೆ ಸಸ್ಯವಿಜ್ಞಾನದ ಉಪಮೆಯ ಮೂಲಕ ಹೇಳಿದ್ದಾರೆ. ಶರಣನು ತನ್ನ ಜೀವನದ ಸಾಕ್ಷಾತ್ಕಾರ/ಸಾರ್ಥಕತೆ ಪಡೆಯಲು, ಪರಿಸರದ ಪ್ರತಿಯೊಂದು ಚರಾಚರವು ಫಲಪ್ರದವಾಗಲು ಬೀಜವೊಂದು ಮೊಳಕೆಯೊಡೆದು ಸಾಗುವ ಜೀವನಕ್ರಮದ ಮೂಲಕ ಹೇಳಿದ್ದಾರೆ. ಜೀವಿ ಅಥವಾ ಬೀಜದ ಬೆಳೆವಣಿಗೆಯು ಈ ಕ್ರಮದಲ್ಲಿ ಸಾಗಿದರೆ ಮಾತ್ರವದು ಸಾರ್ಥಕತೆಯನ್ನು ಪಡೆಯಲು ಸಾಧ್ಯ.

ವೈವಿಧ್ಯತೆ ಪರಿಸರದ ಜೀವದ್ರವ್ಯ:

ಪ್ರಕೃತಿಯಲ್ಲಿ ಅಸಂಖ್ಯ ಪ್ರಮಾಣದಲ್ಲಿರುವ ಪ್ರಾಣಿ–ಪಕ್ಷಿಗಳು, ಕ್ರಿಮಿ–ಕೀಟಗಳು, ಸಸ್ಯ ಪ್ರಭೇದಗಳಲ್ಲಿ ಕಂಡುಬರುವ 'ವೈವಿಧ್ಯತೆ'ಯು ಪರಿಸರದ ಜೀವದ್ರವ್ಯವಾಗಿದೆ. ಕುವೆಂಪು ಅವರ 'ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ' ಎಂಬ ಕವಿತೆಯ ಆಶಯದಂತೆ ಈ ಜೀವಜಾಲದ ಪ್ರತಿಯೊಂದಕ್ಕೂ ಅದರದ್ದೇ ಮಹತ್ವವಿದೆ.

ಗಗನದ ಗುಂಪ ಚಂದ್ರಮ ಬಲ್ಲುದಲ್ಲದೆ
ಕಡೆಯಲಿದ್ದಾಡುವ ಹದ್ದು ಬಲ್ಲುದೆ ಅಯ್ಯಾ?
ನದಿಯ ಗುಂಪ ತಾವರೆ ಬಲ್ಲುದಲ್ಲದೆ
ಕಡೆಯಲ್ಲಿ ಹೊನ್ನಾವರಿಕೆ ಬಲ್ಲುದೆ ಅಯ್ಯಾ?
ಪುಷ್ಪದ ಪರಿಮಳವ ತುಂಬಿ ಬಲ್ಲುದಲ್ಲದೆ
ಕಡೆಯಲಿದ್ದಾಡುವ ನೊರಜು ಬಲ್ಲುದೆ ಅಯ್ಯಾ?
ಚೆನ್ನಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣರ ನಿಲವ ನೀವೇ ಬಲ್ಲಿರಲ್ಲದೆ
ಈ ಕೋಣನ ಮೈಮೇಲಣ ಸೊಳ್ಳೆಗಳೆತ್ತ ಬಲ್ಲವಯ್ಯಾ?

ಚಂದ್ರ, ತಾವರೆ, ಪುಷ್ಪಗಳು ತಾವಿರುವ ಪರಿಸರವನ್ನು ಶುಚಿಯಾಗಿಡುವುದು ಮಾತ್ರವಲ್ಲದೆ ಇತರರಿಗೆ ಅಪ್ಯಾಯಮಾನವೆನಿಸುವ ಹಿತವನ್ನು ಉಂಟುಮಾಡುತ್ತವೆ. ಇವುಗಳಿಗೆ ಪರ್ಯಾಯವಾಗಿ ಮತ್ತೊಂದನ್ನು ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಕೃತಕವಾಗಿ ಸೃಜಿಸಿದರೂ ನೈಜತೆ ಬರಲು ಸಾಧ್ಯವಿಲ್ಲ.

ವೈವಿಧ್ಯತೆಗೆ ನಿಸರ್ಗದತ್ತ ಕಾರಣ:

ಈ ಜೀವಿ–ನಿರ್ಜೀವಿ ಪರಿಸರದಲ್ಲಿರುವ ಜೀವಿಗಳು, ಸಸ್ಯಗಳಲ್ಲಿ ಅಪಾರ ಪ್ರಮಾಣದ ವೈವಿಧ್ಯತೆಯಿದೆ. ನೋಡಲು ಸಾಮ್ಯತೆಯಿದ್ದರೂ ಅವುಗಳ ಗುಣ–ಸ್ವಭಾವಗಳಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ಈ ವೈವಿಧ್ಯತೆಯು ನಿಸರ್ಗದತ್ತವಾಗಿ ಬಂದುದಾಗಿದೆ. ಸೃಷ್ಟಿಯ ವಿಸ್ಮಯಗಳಲ್ಲಿ ಒಂದಾದ ಈ ವೈವಿಧ್ಯತೆಯನ್ನು ಅಕ್ಕಮಹಾದೇವಿ ತನ್ನ ಒಂದು ವಚನದಲ್ಲಿ ಹೀಗೆ ಹಿಡಿದಿಟ್ಟಿದ್ದಾಳೆ:

ಈಳೆ ನಿಂಬೆ ಮಾವು ಮಾದಲಕೆ ಹುಳಿ ನೀರನೆರೆದವರಾರಯ್ಯಾ?
ಕಬ್ಬು ಬಾಳೆ ಹಲಸು ನಾರಿವಾಳಕ್ಕೆ ಸಿಹಿನೀರನೆರೆದವರಾರಯ್ಯಾ?
ಕಳವೆ ರಾಜಾನ್ನ ಶಾಲ್ಯನ್ನಕ್ಕೆ ಓಗರದ ಉದಕವನೆರೆದವರಾರಯ್ಯಾ?
ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ ಪರಿಮಳದುದಕವನೆರೆದವರಾರಯ್ಯಾ?
ಇಂತೀ ಜಲವು ಹಲವು ದ್ರವ್ಯಂಗಳ ಕೂಡಿ ತನ್ನ ಪರಿ ಬೇರಾಗಿಹ ಹಾಗೆ
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನು ಹಲವು ಜಗಂಗಳ ಕೂಡಿಕೊಂಡಿರ್ದಡೇನು? ತನ್ನ ಪರಿ ಬೇರೆ.

ಈಳೆ, ನಿಂಬೆ, ಮಾವು, ಮಾದಲಗಳ ರುಚಿ ಹುಳಿಯೇ ಆದರೂ ಒಂದರಿಂದ ಮತ್ತೊಂದು ಭಿನ್ನವಾಗಿರುತ್ತವೆ. ಕಬ್ಬು, ಬಾಳೆ, ಹಲಸು, ನಾರಿವಾಳಗಳು ಸಿಹಿಯೇ ಆದರೂ ನಾಲ್ಕೂ ಸಿಹಿಗಳು ಬೇರೆಯಾಗಿರುತ್ತವೆ. ಕಳವೆ, ರಾಜಾನ್ನ, ಶಾಲ್ಯನ್ನ ಮತ್ತು ಓಗರಗಳು ಅಕ್ಕಿಯ ನಾಲ್ಕು ಭಿನ್ನ ರೂಪಗಳಾಗಿವೆ. ಅದೇರೀತಿ ಮರುಗ, ಮಲ್ಲಿಗೆ, ಪಚ್ಚೆ ಮತ್ತು ಮುಡಿವಾಳದಂತಹ ಹೂವುಗಳ ಪರಿಮಳಗಳು ಬೇರೆ ಬೇರೆ ಸ್ವರೂಪದಲ್ಲಿರುತ್ತವೆ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

ಪ್ರಕೃತಿಯಲ್ಲಿರುವ ಪ್ರತಿಯೊಂದು ಚರಾಚರವೂ ಈ ರೀತಿ ಭಿನ್ನ ಸ್ವರೂಪವನ್ನು ಹೊಂದಿವೆ. ಇದನ್ನು ಮಾಡಿದವರು ಯಾರು? ಎಂಬ ವಿಸ್ಮಯದೊಂದಿಗೆ ಪರಿಸರದಲ್ಲಿ 'ಒಂದು ಪ್ರಭೇದದಿಂದ ಮತ್ತೊಂದು ಪ್ರಭೇದವು ಭಿನ್ನವಾಗಿರುತ್ತದೆ' ಎಂಬ ವೈಜ್ಞಾನಿಕ ಸಂಗತಿಯನ್ನು ಅಕ್ಕಮಹಾದೇವಿಯು ಈ ವಚನದಲ್ಲಿ ಪ್ರತಿಪಾದಿಸಿದ್ದಾಳೆ.

ಕೆರೆ ಹಳ್ಳ ಬಾವಿಗಳು ಮೈದೆಗೆದಡೆ
ಗುಳ್ಳೆ ಗೊರಜೆ ಚಿಪ್ಪು ಕಾಣಬಹುದು.
ವಾರಿಧಿ ಮೈದೆಗೆದಡೆ
ರತ್ನ ಮುತ್ತುಗಳ ಕಾಣಬಹುದು.
ಕೂಡಲಸಂಗನ ಶರಣರು ಮನದೆರೆದು
ಮಾತನಾಡಿದರೆ ಲಿಂಗವ ಕಾಣಬಹುದು.

ಕೆರೆ, ಹಳ್ಳ, ಬಾವಿಗಳು ಜೀವ ಪರಿಸರದ ನಿಂತ ನೀರಿನ ಆಗರಗಳು. ನಿಂತಿರುವ ನೀರು ಒಣಗಿದರೆ ತಳದಲ್ಲಿ ಸೂಕ್ಷ್ಮ ಜೀವಿಗಳು, ಕೀಟಗಳು, ಬ್ಯಾಕ್ಟೀರಿಯಾಗಳು, ಜಲವಾಸಿ ಸೂಕ್ಷ್ಮ ಜೀವಿಗಳು ಕಾಣಿಸುತ್ತವೆ. ಸಮುದ್ರದ ತಳಭಾಗದಲ್ಲಿ ಮುತ್ತು ಹವಳಗಳು ಕಾಣುತ್ತವೆ. ವೈಜ್ಞಾನಿಕವಾಗಿ ಜೀವಿಗಳ ಉಗಮವು ನೀರಿನಲ್ಲಿಯೇ ಆಗಿದೆ. ಪರಿಸರ ವಿಜ್ಞಾನದ ಈ ಸತ್ಯವನ್ನು ರೂಪಕವಾಗಿ ಬಳಸಿ ಸಾಮಾನ್ಯರು ಮತ್ತು ಶರಣರ ಮಾತುಗಳ ವ್ಯತ್ಯಾಸವನ್ನು ಹೇಳಿದ್ದಾರೆ.

ಹೊಂದಾಣಿಕೆ ಅಗತ್ಯ:

ಈ ವೈವಿಧ್ಯಮಯ ಜೀವಿ ಹಾಗೂ ಭೌತಿಕ ಪರಿಸರದಲ್ಲಿ ವಾಸಿಸುವ ಜೀವಿಗಳು, ಕ್ರಿಮಿಗಳು, ಕೀಟಗಳು ಮತ್ತು ಸಸ್ಯ ಪ್ರಭೇದಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪರಿಸರದಲ್ಲಿ ಉಂಟಾಗುವ ಏರುಪೇರುಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು ಅನಿವಾರ್ಯವಾಗಿದೆ. ಹೊಂದಾಣಿಕೆ ಸಾಧಿಸಲು ವಿಫಲವಾದ ಜೀವಿಯು ಅವನತಿಯನ್ನು ಹೊಂದುತ್ತದೆ. ಅಕ್ಕಮಹಾದೇವಿಯು ತನ್ನ ಒಂದು ವಚನವು ಪರಿಸರದಲ್ಲಿ ಸಹಿಷ್ಣುತೆಯ ಅಗತ್ಯವನ್ನು ಪ್ರತಿಪಾದಿಸಿದ್ದಾಳೆ.

ಬೆಟ್ಟದ ಮೇಲೊಂದು ಮನೆಯ ಮಾಡಿ, ಮೃಗಗಳಿಗಂಜಿದೊಡೆಂತಯ್ಯಾ?
ಸಮುದ್ರದ ತಡಿಯಲೊಂದು ಮನೆಯ ಮಾಡಿ, ನೊರೆತೊರೆಗಳಿಗಂಜಿದೊಂಡೆಂತಯ್ಯಾ?
ಸಂತೆಯೊಳಗೊಂದು ಮನೆಯ ಮಾಡಿ, ಶಬ್ದಕ್ಕೆ ನಾಚಿದೊಡೆಂತಯ್ಯಾ?
ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ, ಲೋಕದೊಳಗೆ ಹುಟ್ಟಿದ ಬಳಿಕ
ಸ್ತುತಿನಿಂದೆಗಳು ಬಂದಡೆ, ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

ನಾವು ವಾಸಿಸುವ ಪರಿಸರ, ನಿಸರ್ಗದೊಂದಿಗೆ ನಮ್ಮನ್ನು ಸಮನ್ವಯಗೊಳಿಸಿಕೊಳ್ಳಬೇಕಾದುದು ಅನಿವಾರ್ಯ ಎಂಬುದನ್ನು ಅಕ್ಕಮಹಾದೇವಿಯು ಹಲವು ದೃಷ್ಟಾಂತಗಳ ಮೂಲಕ ಸಾದರಪಡಿಸಿದ್ದಾಳೆ. ಬೆಟ್ಟಗುಡ್ಡಗಳಲ್ಲಿ ಮೃಗಗಳ ಘರ್ಜನೆ, ಸಮುದ್ರದಲ್ಲಿ ನೊರೆತೊರೆಗಳ ಆರ್ಭಟ ಮತ್ತು ಸಂತೆಯಲ್ಲಿ ಜನಸಂದಣಿಯ ಸದ್ದುಗದ್ದಲಗಳು ಸಹಜವಾಗಿ ಇರುತ್ತವೆ. ಮೃಗಗಳ ಘರ್ಜನೆ ಮತ್ತು ನೊರೆತೊರೆಗಳ ಆರ್ಭಟಗಳು ಸಹಜವಾದವುಗಳಾದರೆ, ಸಂತೆಯ ಸದ್ದುಗದ್ದಲಗಳು ಮಾನವ ನಿರ್ಮಿತವಾದುದು. ಈ ರೀತಿ ಸಹಜ ಅಥವಾ ಕೃತಕ ಕಲುಷಿತ ವಾತಾವರಣ ಸೃಷ್ಟಿಯಾದಾಗಲೂ ಜೀವಿಯು ಅದರೊಂದಿಗೆ ಹೊಂದಿಕೊಂಡು ಹೋಗಬೇಕು. ಇಂತಹ ಪರಿಸರದಲ್ಲಿ ವಾಸಿಸುವ, ಬದುಕುವ ನಿಶ್ಚಯ ಮಾಡಿದ ಜೀವಿಯು ಅಲ್ಲಿನ ವಾತಾವರಣದೊಂದಿಗೆ ಹೊಂದಿಕೊಂಡು ಬಾಳಬೇಕು. ಏರುಪೇರುಗಳು ಎದುರಾದರೂ ಧೃತಿಗೆಡದೆ ಸಮಚಿತ್ತದಿಂದ ಬದುಕು ಸಾಗಿಸಬೇಕು. ಆಗ ಮಾತ್ರ ಸಮೃದ್ಧ ಜೀವನ ನಡೆಸುವುದು ಸಾಧ್ಯವಾಗುತ್ತದೆ. ಇದೇ ಪರಿಸರದ, ಪ್ರಕೃತಿಯ ನಿತ್ಯ ನಿಯಮವಾಗಿದೆ.

ಮಿತ ಬಳಕೆ, ಹಿತ ಬಳಕೆ:

ಯಾವುದೇ ಲೋಕ ವಸ್ತುವಿನಿಂದ ನಾವು ಹೆಚ್ಚು ತೃಪ್ತಿಯನ್ನು ಪಡೆಯಬೇಕೆಂದರೆಅ ದನ್ನು ಮಿತವಾಗಿ, ಹಿತವಾಗಿ ಬಳಸಬೇಕು. ಫ್ರಾನ್ಸಿಸ್ ಬೇಕನ್ ಹೇಳುವಂತೆ "ಮನುಷ್ಯನ ಎಲ್ಲ ಅಗತ್ಯಗಳನ್ನು ಪೂರೈಸುವ ಶಕ್ತಿ ಈ ಪರಿಸರಕ್ಕೆ ಇದೆ; ದುರಾಸೆಗಳನ್ನಲ್ಲ" ಎಂಬ ಮಾತನ್ನು ಅರಿತು ಪ್ರಕೃತಿಯನ್ನು ಉಪಭೋಗಿಸಬೇಕು. ಜೊತೆಗೆ ಪರಿಸರದಲ್ಲಿರುವ ಸಂಪನ್ಮೂಲಗಳು 'ನಾವು ಬಳಸಿ, ಮುಂದಿನ ಪೀಳಿಗೆಗೂ ಬಳಕೆಗೆ ಯೋಗ್ಯವಾಗಿರುವ ಸ್ಥಿತಿಯಲ್ಲಿ ಬಿಟ್ಟುಹೋಗಬೇಕು'. ಅದರಲ್ಲೂ 'ನೀರು ಜೀವಜಲ'. ಅದನ್ನು ವ್ಯರ್ಥ ಮಾಡದೆ ಮಿತವಾಗಿ ಬಳಸಬೇಕು ಎಂಬುದನ್ನು ಶರಣರು ತಮ್ಮ ವಚನಗಳಲ್ಲಿ ಸುಂದರವಾಗಿ ನಿರೂಪಿಸಿದ್ದಾರೆ.

ಪೈರಿಗೆ ನೀರು ಬೇಕೆಂಬಲ್ಲಿ ಉಚಿತವರಿದು ಬಿಡಬೇಕು
ಕ್ರೀಗೆ ಅರಿವು ಬೇಕೆಂಬಲ್ಲಿ ಉಭಯವನರಿದು ಘಟಿಸಬೇಕು
ಏರಿ ಹಿಡಿವನ್ನಕ್ಕ ನೀರ ಹಿಡಿದಡೆ ಸುಖವಲ್ಲದೆ ಮೀರಿದರುಂಟೆ?
ಕ್ರೀಯ ಬಿಡಲಿಲ್ಲ, ಅರಿವ ಮರೆಯಲಿಲ್ಲ.
ಬೆಳೆಯ ಕೊಯಿದ ಮತ್ತೆ ಹೊಲಕ್ಕೆ ಕಾವಲುಂಟೆ?
ಅರಿವು ಆಚರಣೆಯೆಲ್ಲ ನಿಂದು,
ಆಚರಣೆ ಅರಿವಿನಲ್ಲಿ ಲೇಪನಾದ ಮತ್ತೆ
ಕಾಮಭೀಮಜೀವಧನನೊಡೆಯನೆಂಬುದ ಭಾವಿಸಲಿಲ್ಲ

ನೀರಿನ ಮಿತ ಬಳಕೆಯ ಬಗ್ಗೆ ಶರಣರು ೧೨ನೆಯ ಶತಮಾನದಲ್ಲಿಯೇ ಯೋಚಿಸಿದ್ದರು. ಜಲ ಮೂಲಗಳಾದ ಕೆರೆ, ಹಳ್ಳಗಳನ್ನು ಮನರಂಜನೆಯ ತಾಣಗಳಾಗಿ ನೋಡುತ್ತಿರುವ ಕಾಲದಲ್ಲಿ ಒಕ್ಕಲಿಗ ಮುದ್ದಣ್ಣನ 'ಪೈರಿಗೆ ನೀರು ಉಚಿತವರಿದು ಬಿಡಬೇಕು' ಎಂಬ ಚಿಂತನೆಯು ವಿಶಿಷ್ಟವಾದುದಾಗಿದೆ.

ಪರಿಸರ ಶುಚಿತ್ವ ಅಗತ್ಯ:

'ಅನ್ನದೊಳಗೊಂದಗುಳ, ಸೀರೆಯೊಳಗೊಂದೆಳೆಯ ಇಂದಿಂಗೆ ನಾಳಿಂಗೆನೆಂದೆನಾದೊಡೆ ನಿಮ್ಮಾಣೆ' ಎನ್ನುವ ಬಸವಣ್ಣನವರ ಮಾತಿನಲ್ಲಿ ಅಸಂಗ್ರಹತತ್ವದ ಆಶಯಗಳಿವೆ; ಸರಳ ಬದುಕಿನ ಸೂತ್ರವಿದೆ. ಸರಳ ಬದುಕಿನಿಂದ ಮಾತ್ರ ಈ ಪರಿಸರವನ್ನು ಸುಂದರವಾಗಿಡಲು ಸಾಧ್ಯವಿದೆ ಎಂಬ ಚಿಂತನೆಯಿದೆ. ಅದಕ್ಕಾಗಿ ನಮ್ಮ ಪಂಚಭೂತಗಳು ಶುದ್ಧವಾಗಿರಬೇಕು. ಜೊತೆಗೆ ನಮ್ಮ ಮನಸ್ಸು ಕೂಡ. ಪಂಚಭೂತಗಳಾದ ನೆಲ, ಜಲ, ಅಗ್ನಿ, ಗಾಳಿ ಮತ್ತು ಆಕಾಶಗಳು ಶುದ್ಧವಾಗಿಡುವ ಕುರಿತು ಚೆನ್ನಬಸವಣ್ಣನ ನಿಲುವೆಂದರೆ,

ನಾನು ಮೆಟ್ಟುವ ಭೂಮಿಯ ಭಕ್ತನ ಮಾಡಿದಲ್ಲದೆ ಮೆಟ್ಟೆನಯ್ಯ
ನಾ ನೋಡುತಿಹ ಆಕಾಶದ ಚಂದ್ರ ಸೂರ್ಯರ
ಭಕ್ತನ ಮಾಡಿದಲ್ಲದೆ ನಾ ನೋಡೆನಯ್ಯ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

ಆಲವ ಭಕ್ತನ ಮಾಡಿದಲ್ಲದೆ ನಾನು ಬಳಸೆನಯ್ಯ
ನಾನು ಕೊಂಬ ಹದಿನೆಂಟು ಧಾನ್ಯವ ಭಕ್ತನ ಮಾಡಿದಲ್ಲದೆ
ಕೊಳ್ಳೆನು ಕೂಡಲಚೆನ್ನಸಂಗಾ ನಿಮ್ಮಾಣೆ

ಭೂಮಿಯನ್ನು ಒಳಗೊಂಡ ಎಲ್ಲ ವಸ್ತುಗಳನ್ನು ಭಕ್ತ ಮಾಡುವುದು ಎಂದರೆ ಪರಿಸರದ ಅಂಶಗಳನ್ನು ಪರಿಶುದ್ಧವಾಗಿ ಇಟ್ಟುಕೊಳ್ಳುವುದು ಎಂದರ್ಥ. 'ಭಕ್ತ' ಎಂದರೆ 'ಆರಾಧನೆ, ಪೂಜೆಯಲ್ಲಿ ಶ್ರದ್ಧೆಯಿಂದ ತೊಡಗಿರುವವನು' ಎಂದರ್ಥ. ನಾವು ಆರಾಧಿಸುವ, ಪೂಜಿಸುವ ವಸ್ತುಗಳನ್ನು ಶುಚಿಯಾಗಿಡಲು ಬಯಸುತ್ತೇವೆ. ದೇವರನ್ನು ಆರಾಧಿಸುವ ಭಕ್ತನು ದೇವಾಲಯವನ್ನು ಮಲೀನಗೊಳಿಸುವುದಿಲ್ಲ. ದುರಂತವೆಂದರೆ ಭೂಮಿ, ಆಕಾಶ (ಚಂದ್ರ) ಅಗ್ನಿ, (ಸೂರ್ಯ) ಜಲ, (ಗಂಗೆ) ಮೊದಲಾದವುಗಳನ್ನು ಆರಾಧಿಸಿಯೂ ಅಪವಿತ್ರಗೊಳಿಸಿದ್ದೇವೆ. ನಾವು ನೆಲ, ಜಲ, ಗಾಳಿ, ಸೂರ್ಯ, ಚಂದ್ರ, ಧಾನ್ಯ ಮೊದಲಾದವುಗಳನ್ನು ಒಳಗೊಂಡ ಜೀವ ಪರಿಸರ, ಭೌತಿಕ ಪರಿಸರ ಮತ್ತು ಸಾಂಸ್ಕೃತಿಕ ಪರಿಸರ ಸಂರಕ್ಷಿಸಿಕೊಳ್ಳಬೇಕಾದ ಅಗತ್ಯವಿದೆ. ಈ ಸಂದರ್ಭದಲ್ಲಿ ಚೆನ್ನಬಸವಣ್ಣನ ಈ ವಚನವು ಹೆಚ್ಚು ಪ್ರಸ್ತುತತೆಯನ್ನು ಪಡೆಯುತ್ತದೆ.

ಪ್ರಕೃತಿಯ ಮುನಿಸು ಸಹಿಸಲಸದಳ:

ಒಲೆ ಹತ್ತಿ ಉರಿದೆಡೆ ನಿಲಬಹುದಲ್ಲದೆ
ಧರೆ ಹತ್ತಿ ಉರಿದೆಡೆ ನಿಲಲುಬಾರದು.
ಏರಿ ನೀರುಂಬಡೆ, ಬೇಲಿ ಕೆಯ್ಯ ಮೇವೊಡೆ
ನಾರಿ ತನ್ನ ಮನೆಯಲ್ಲಿ ಕಳುವೊಡೆ
ತಾಯ ಮೊಲೆ ಹಾಲು ನಂಜಾಗಿ ಕೊಲುವೆಡೆ
ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ!?

ಮನೆಯ ಒಲೆ ಉರಿದರೆ ಅಡುಗೆ ಮಾಡಿಕೊಂಡು ಊಟ ಮಾಡಬಹುದು. ಭೂಕಂಪ, ಸುನಾಮಿ, ಚಂಡಮಾರುತಗಳಂಥ ಪ್ರಕೃತಿ ವಿಕೋಪಗಳಿಂದ ಭೂಮಿಯೇ ಹೊತ್ತಿಕೊಂಡು ಉರಿದರೆ ನಾವು ಬದುಕುವುದು ಸಾಧ್ಯವೇ? ನಾವು ನಮ್ಮ ಮಕ್ಕಳಿಗೆಂದು ಆಸ್ತಿ ಸಂಚಯದಲ್ಲಿ ತೊಡಗುತ್ತೇವೆ. ಆದರೆ ತಾಯಿಯ ಮೊಲೆ ಹಾಲೇ ನಂಜಾಗುವಂತೆ, ನಮ್ಮ ಮಕ್ಕಳಿಗೆ ಕಲುಷಿತ ಪರಿಸರ ನೀಡುವ ಮೂಲಕ ಅವರ ಬದುಕಿಗೆ ನಾವೇ ಮಾರಕವೂ ಆಗುತ್ತಿದ್ದೇವೆ. 'ನಮ್ಮ ಬದುಕು ಪ್ರಕೃತಿ ಸಹಜವಾಗಬೇಕು. ಪರಿಸರ ಸಮತೋಲನದಿಂದ ಮಾತ್ರ ಪ್ರಕೃತಿ ವಿಕೋಪಗಳನ್ನು ತಡೆಯಲು ಸಾಧ್ಯ' ಎಂಬುದು ಈ ವಚನದ ಆಶಯವಾಗಿದೆ.

ಜೀವಿಯ ಅವಸಾನ ನಿಶ್ಚಿತ:

ಪರಿಸರ ವ್ಯವಸ್ಥೆಯಲ್ಲಿ ಆಕಸ್ಮಿಕವಾಗಿ ಪ್ರವೇಶ ಪಡೆಯುವ ಪ್ರತಿ ಜೀವಿಯು ತನ್ನ ಅವಧಿಯನ್ನು ಮುಗಿಸಿಕೊಂಡು ಅವಸಾನ ಹೊಂದಲೇಬೇಕು.

ಹಬ್ಬಕ್ಕೆ ತಂದ ಹರಕೆಯ ಕುರಿ
ತೋರಣಕ್ಕೆ ಕಟ್ಟಿದ ತಳಿರ ಮೇಯಿತ್ತು.
ಕೊಂದಹರೆಂಬುದನರಿಯದೆ ಬೆಂದ ಒಡಲ ಹೊರೆವುತ್ತಲಿದೆ.
ಅಂದಂದೆ ಹುಟ್ಟಿತ್ತು, ಅಂದಂದೆ ಸತ್ತಿತ್ತು
ಕೊಂದವರುಳಿವರೆ ಕೂಡಲಸಂಗಮದೇವಾ?

ಈ ಪರಿಸರದಲ್ಲಿ ಹುಟ್ಟುವ ಪ್ರತಿಜೀವಿಗೂ ಸಾವು ನಿಶ್ಚಿತ. ಅದು ಶಕ್ತಿವಂತ, ಬಲಾಢ್ಯ ಪ್ರಾಣಿಯೇ ಆಗಿರಲಿ, ಸಣ್ಣ ಕ್ರಿಮಿಯೇ ಆಗಿರಲಿ. ಇದನ್ನರಿತು ಬಾಳಬೇಕು. ಈ ನೀತಿಯು ಏಕಕಾಲಕ್ಕೆ ವೈಜ್ಞಾನಿಕ ಸತ್ಯವೂ ಹೌದು; ಅಧ್ಯಾತ್ಮಿಕ ಬೋಧೆಯೂ ಹೌದು.

ಒಟ್ಟಾರೆಯಾಗಿ ವಚನ ಸಾಹಿತ್ಯದಲ್ಲಿ ಶರಣರು ಪ್ರತಿಪಾದಿಸಿದ್ದು 'ಸಕಲ ಜೀವಾತ್ಮ'ರನ್ನೂ 'ಒಳಗೊಳ್ಳುವ' ನಿಲುವು. ಅವರ ವಚನಗಳಲ್ಲಿ ಏನುಂಟು, ಏನಿಲ್ಲ! 'ಆಡು ಮುಟ್ಟದ ಸೊಪ್ಪಿಲ್ಲ' ಎನ್ನುವಂತೆ 'ವಚನ ಸಾಹಿತ್ಯ ಒಳಗೊಳ್ಳದ ವಿಷಯವೇ ಇಲ್ಲ'ವೆಂದು ಹೇಳಬಹುದು. ಅಧ್ಯಾತ್ಮಿಕ, ಸಾಮಾಜಿಕ ಮತ್ತು ಧಾರ್ಮಿಕ ಸಂಗತಿಗಳು ಮಾತ್ರವಲ್ಲದೆ ಆರ್ಥಿಕ, ಭೌಗೋಳಿಕ, ರಾಸಾಯನಿಕ, ವೈದ್ಯಕೀಯ, ಪರಿಸರ ವಿಜ್ಞಾನ ಸೇರಿದಂತೆ ಸಮಸ್ತ ಜ್ಞಾನ ಭಂಡಾರವು ಶರಣರ ವಚನಗಳಲ್ಲಿ ಅಡಗಿದೆ. ಶ್ರಮಜೀವನ, ಹಂಚಿಕೊಂಡು ತಿನ್ನುವ ಪ್ರವೃತ್ತಿ, ಆಡಂಬರರಹಿತ ಸರಳ ಜೀವನದಂತಹ ಶರಣರ ಬೋಧನೆಗಳು ಪರಿಸರದೊಂದಿಗೆ ಹೊಂದಿಕೊಂಡು ಬಾಳುವ ಸಲಹೆಗಳೇ ಆಗಿವೆ. ಮಿತಾಹಾರ(ಆಹಾರವ ಕಿರಿದು ಮಾಡಿರಣ್ಣ), ಸಂಪತ್ತಿನ ಅಸಂಗ್ರಹ(ಇಂದಿಗೆ ನಾಳಿಂಗೆ ಎಂದೆನಾದಡೆ ನಿಮ್ಮಾಣೆ), ಪರಿಸರದ ಉತ್ಪನ್ನಗಳ ಮಿತಬಳಕೆ(ನುಡಿದರೆ ಮುತ್ತಿನ ಹಾರದಂತಿರಬೇಕು–ಅತಿಯಾದರೆ ಶಬ್ದಮಾಲಿನ್ಯ) ಮುಂತಾದ ಮಹತ್ವದ ಸಂಗತಿಗಳನ್ನು ವಚನ ಸಾಹಿತ್ಯವು ಒಳಗೊಂಡಿದೆ. 'ನನ್ನ ತಾಯಿ ಒಂದೂ ಕವಿತೆಯನ್ನು ಬರೆಯಲಿಲ್ಲ. ಆದರೆ ನೂರಾರು ಕವಿತೆಗಳನ್ನು ಬದುಕಿದಳು' ಎಂಬ ಖಲೀಲ್ ಗಿಬ್ರಾನ್ ಮಾತಿನಂತೆ, 'ಶರಣರ ವಚನಗಳಲ್ಲಿ ಪರಿಸರ ವಿಜ್ಞಾನದ ಒಂದೂ ಪರಿಭಾಷೆಯಿಲ್ಲ. ಆದರೆ ನೂರಾರು ಪರಿಭಾವನೆಗಳಿವೆ'. ಅಧ್ಯಾತ್ಮಿಕ ಪರಿಭಾಷೆಯಲ್ಲಿಯೇ ವಿಜ್ಞಾನದ ಸಂಗತಿಗಳನ್ನು ಮನಮುಟ್ಟುವಂತೆ ಹೇಳಿದ್ದಾರೆ. 'ಮಾತಿಗಿಂತ ಕೃತಿ ಮೇಲು' ಎಂಬಂತೆ ಪರಿಸರ ರಕ್ಷಣೆಯ ಕುರಿತು ಉಪನ್ಯಾಸ, ಶೃಂಗಸಭೆಗಳಿಗಿಂತ ನುಡಿದಂತೆ ಬದುಕಿದ ಶರಣರ ಜೀವನವೇ ಪರಿಸರ ಸಂರಕ್ಷಣೆಯ ಮೊದಲ ಅಡಿಪಾಯ. ಆದ್ದರಿಂದ ಶರಣರ ವಚನಗಳನ್ನು ಅರ್ಥೈಸಿಕೊಂಡು, ಅನುಸರಿಸುವ ಅನಿವಾರ್ಯತೆಯಿದೆ.

ಆಕರಗಳು:

೧. ಕಲ್ಯಾಣರಾವ ಪಾಟೀಲ: ವಚನಗಳಲ್ಲಿ ಪರಿಸರ ಪ್ರಜ್ಞೆ : ಬಸವ ಸಮಿತಿ, ಯುಟ್ಯೂಬ್, ೩೧ ಆಗಸ್ಟ್, ೨೦೨೦
೨. ಗುರುರಾಜ ಪೋಶೆಟ್ಟಿಹಳ್ಳಿ : ವಚನಗಳಲ್ಲಿ ಪರಿಸರ ಕಾಳಜಿ : ಉಪಯುಕ್ತ, ಜೂನ್ ೦೫, ೨೦೨೧
೩. ತರೀಕೆರೆ ಚಂದ್ರಶೇಖರ ತಾರಾನಾಥ: ವಚನಗಳಲ್ಲಿ ಸಸ್ಯ ಸಂಕುಲ ಮತ್ತು ಜೀವಿ ಪರಿಸರ ವಿಜ್ಞಾನ: ವಚನ ಮಂದಾರ ವೇದಿಕೆಯಿಂದ ಅಂತರ್ಜಾಲ ವಚನ ಸಾಹಿತ್ಯ ಉಪನ್ಯಾಸ ಮಾಲಿಕೆ, ವಚನ ಮಂದಾರ ಯುಟ್ಯೂಬ್, ೨೪ ಸೆಪ್ಟೆಂಬರ್, ೨೦೨೨
4. ಬಸವರಾಜ ಬಲ್ಲೂರ : ಶರಣರು ಮತ್ತು ಪರಿಸರ : ಬಯಲು ಭೂಮಿ, ಮಂಗಳವಾರ, ಮಾರ್ಚ್ ೨೦೧೩.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

Original Article

ಕನ್ನಡ ಸಾಹಿತ್ಯ ಮತ್ತು ಧರ್ಮ

ಮೌನೇಶ ಕೆಲ್ಲೂರ
ಸಂಶೋಧನಾ ವಿದ್ಯಾರ್ಥಿ
ಕನ್ನಡ ವಿಶ್ವವಿದ್ಯಾಲಯ ಹಂಪಿ
ಮಹಿಳಾ ಅಧ್ಯಯನ ವಿಭಾಗ
ಶ್ರೀ ಸದ್ಗುರು ಬಸವರೂಢ ಮಹಾಸ್ವಾಮೀಜಿ
ಕಲಾ ಮತ್ತು ವಾಣಿಜ್ಯ ಕಾಲೇಜು ಹೂವಿನ ಹಿಪ್ಪರಗಿ
ಇ–ಮೇಲ್ : mouneshkellur@gmail.com

Manuscript ID:
JRD -2026-180443
ISSN: 2230-9578
Volume 18
Issue 4(II)
Pp.149-152
April 2026
Submitted: 28 Mar. 2026
Revised: 08 Apr. 2026
Accepted: 14 Apr. 2026
Published: 30 April 2026

ಜನಜೀವನದಲ್ಲಿ ಮತಧರ್ಮದ ಪ್ರಭಾವ ಇರುವುದರಿಂದ, ಮತಧರ್ಮವು ಸಾಹಿತ್ಯದ ಪ್ರಭಾವವನ್ನು ಬಳಸಿಕೊಂಡಿರುವುದರಿಂದ ಸಾಹಿತ್ಯದಲ್ಲಿ ಮತಧರ್ಮಸ್ಥಾನ ಪಡೆದಿದೆ. ಮಾತು ಮಂತ್ರವಾಗಿ ಪೂಜ್ಯವಾಗುವ ಸಮಾಜಗಳಲ್ಲಿ ಕಾವ್ಯವು ಧಾರ್ಮಿಕ ಪಠ್ಯವಾಗಿ ಪೂಜ್ಯತೆಯನ್ನು ಪಡೆದಿದೆ. ಇದಕ್ಕೆ ಕನ್ನಡ ಸಾಹಿತ್ಯ ಹೊರತಲ್ಲ. ಪ್ರಾಚೀನ ಕನ್ನಡ ಕಾವ್ಯಕ್ಕೆ ಮತಧರ್ಮವೇ ಕೇಂದ್ರ. ಕವಿಗಳು ಜೈನ, ವೀರಶೈವ, ವೈದಿಕಮತಗಳಿಗೆ ಸೇರಿದವರು. ಅವರು ಬರೆದದ್ದು ಧಾರ್ಮಿಕ ಕಾವ್ಯ. ಕಾವ್ಯ ಬರೆಯುವುದು ಅವರಿಗೆ ಒಂದು ಧಾರ್ಮಿಕ ವಿಧಿ. ಜೈನಕಾವ್ಯಗಳಂತೂ ಆರಾಧನಾ ಕಥೆ, ನೋಂಪಿಯ ಕತೆ ಇತ್ಯಾದಿಯಾಗಿ ನೇರವಾಗಿ ಕ್ರಿಯೆಗೆ ಸಂಬಂಧ ಪಡುತ್ತದೆ. ಪುರಾಣಗಳನ್ನು ರಚಿಸುವ, ಪಂಚಕಲ್ಯಾಣಗಳಂಥ ನಿರ್ದಿಷ್ಟ ಕ್ರಮವಿದೆ. ಪ್ರಾಚೀನ ಕನ್ನಡ ಕವಿಗಳು ಧಾರ್ಮಿಕ ಶ್ರದ್ಧೆಯಿಂದ ಕಾವ್ಯ ರಚಿಸಿದ್ದಾರೆ.

ಪ್ರಾಚೀನ ಕಾಲದಲ್ಲಿ ಕನ್ನಡನಾಡನ್ನು ಆಳಿದ ಶಾತವಾಹನರು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಗಂಗರು ಮುಂತಾದ ರಾಜಮನೆತನಗಳು ಆ ಕಾಲದಲ್ಲಿನ ಧರ್ಮ ಸಾಹಿತ್ಯ – ಸಂಸ್ಕೃತಿಗಳ ಏಳಿಗೆಗೆ ಪ್ರೋತ್ಸಾಹಿಸಿದ್ದಾರೆ. ಪ್ರೇರಣೆಯಿಂದ ಕವಿಗಳು, ವಿದ್ವಾಂಸರು ಧರ್ಮಪ್ರಸಾರದೊಂದಿಗೆ ಕಾವ್ಯಗಳನ್ನು ರಚಿಸಿದರು. ಪ್ರಾಚೀನ ಕನ್ನಡ ಸಾಹಿತ್ಯವೆಂದರೆ ಒಂದು ರೀತಿಯಲ್ಲಿ ಧರ್ಮದ ಚರಿತ್ರೆಯೇ ಆಗಿದೆ. ಕನ್ನಡ ಸಾಹಿತ್ಯ ಮತ್ತು ಧರ್ಮ ಬೇರ್ಪಡಿಸಲಾರದಷ್ಟು ಅಪ್ಪಿಕೊಂಡಿದೆ. ಪ್ರಾಚೀನ ಕವಿಗಳ ಮೇಲೆ ಅತ್ಯಂತ ಗಾಢ ಪ್ರಭಾವ ಬೀರಿದ್ದು ಧರ್ಮವೇ! ಪಂಪ, ಪೊನ್ನ, ರನ್ನ, ನಾಗಚಂದ್ರ, ಜನ್ನ ಆಗಮಿಕ ಕಾವ್ಯಗಳನ್ನು ಬರೆದಿದ್ದು ಇದೇ ಕಾರಣವೆಂದು ಹೇಳಬಹುದು. ಮುಂದೆ ಬಂದ ಹರಿಹರ, ರಾಘವಾಂಕ, ಲಕ್ಷ್ಮೀಶ, ಕುಮಾರವ್ಯಾಸ, ಕೀರ್ತನಕಾರರನ್ನು ಈ ಧರ್ಮ ಬಿಡಲಿಲ್ಲ. ಕವಿಯೊಬ್ಬ ಧರ್ಮ ಮತ್ತು ರಾಜಾಶ್ರಯದೊಳಗೆ ಬದುಕುತ್ತಿದ್ದರೂ ಅದನ್ನು ಮೀರಿ ನಿಲ್ಲುವುದು ಅವನಲ್ಲಿನ ಪ್ರತಿಭೆ. ಇದನ್ನು ಪಂಪ ರನ್ನ ಕವಿಗಳಲ್ಲಿ ನೋಡಬಹುದು. ಕವಿಗಳಲ್ಲಿರುವ ಅಗಾಧ ಪ್ರತಿಭೆ ತಮ್ಮ ತಮ್ಮ ಧರ್ಮದ ಪ್ರಚಾರದ ಕಡೆಗೆ ಹಾಗೂ ಉಳಿವಿನ ಕಡೆಗೆ ಹರಿದಿದೆ.

ಕವಿರಾಜ ಮಾರ್ಗಕ್ಕಿಂತ ಪೂರ್ವದಲ್ಲಿ ಕನ್ನಡನಾಡನ್ನು ಆಳಿದ ರಾಜ ಮನೆತನಗಳನ್ನು ಅವಲೋಕಿಸಿದರೆ ವೈದಿಕಧರ್ಮ (ಅಶೋಕನ ಕಾಲದಲ್ಲಿ), ಬೌದ್ಧಮತ, ಜೈನಧರ್ಮಗಳು ಪ್ರಚಲಿತದಲ್ಲಿದ್ದವು. ಶಾತವಾಹನರ ಕಾಲದಲ್ಲಿ ಪ್ರಾಕೃತ, ಸಂಸ್ಕೃತ ಭಾಷೆಗಳ ಪ್ರಭಾವ ದಟ್ಟವಾಗಿತ್ತು. ಕನ್ನಡದ ಕೃತಿಗಳು ಯಾವು ಕಂಡುಬಂದಿಲ್ಲ. ಕದಂಬರು ಜೈನ ಮತ್ತು ಬೌದ್ಧ ಧರ್ಮಗಳನ್ನು ಪ್ರೋತ್ಸಾಹಿಸಿದ್ದರು. ಗಂಗರು, ರಾಷ್ಟ್ರಕೂಟರ ಕಾಲದಲ್ಲಿ ಜೈನಮತವು ಆಶ್ರಯವನ್ನು ಪಡೆಯಿತು. ಶಾಸನಗಳಲ್ಲಿ ಬೌದ್ಧ ಮತ್ತು ಜೈನಧರ್ಮಗಳ ನಡುವೆ ಮತೀಯ ಸ್ಪರ್ಧೆಗಳು ನಡೆಯುತ್ತಿದ್ದವೆಂದು ತಿಳಿಯುತ್ತದೆ.

ಕವಿರಾಜಮಾರ್ಗ (ರಾಷ್ಟ್ರಕೂಟ) ಪೂರ್ವ ಕಾಲದ ಕನ್ನಡ ಸಾಹಿತ್ಯವನ್ನು ವಿಶಿಷ್ಟವಾಗಿ ಮಾಡಿದ ಲಕ್ಷಣಗಳು 1) ಗಾಢ ಮತ ನಿಷ್ಠೆ 2) ಯುದ್ಧರಂಗದಲ್ಲಿ ಶೌರ್ಯ. ಅನೇಕ ಕನ್ನಡ ರಾಜರು ಜಿನದರ್ಶನದಲ್ಲಿ ನಿಷ್ಠರಾಗಿದ್ದವರು.

ಅವರ ಉತ್ತೇಜನದಿಂದಲೂ, ಸಹಾಯದಿಂದಲೂ ಜೈನಗುರುಗಳು ಜಿನ ಸಮಯವನ್ನು ಕನ್ನಡ ನಾಡಿನಲ್ಲಿ ಹರಡಿದರು. ಸಂಸ್ಕೃತ ಮತ್ತು ಕನ್ನಡ ಕೃತಿಗಳನ್ನು ಬರೆದು ಕನ್ನಡ ನಾಡಿನಲ್ಲಿ ಹರಡಿದರು. ಕವಿಗಳು ಮುಖ್ಯವಾಗಿ ಮತವನ್ನೂ ಮತ್ತು ವೀರಕತೆಗಳನ್ನು ಎತ್ತಿ ಹಿಡಿದರು. ಯಾವ ರಾಜರ ಆಶ್ರಯದಲ್ಲಿ ಜನರಿದ್ದರೂ, ಅವರಲ್ಲಿ ಜೈನ ಪ್ರಭಾವವನ್ನು ಹರಡಬೇಕೆಂದು, ಅದರ ಪ್ರತಿಪಾದನೆ ಮಾಡಲು ಜನರ ಭಾಷೆಯನ್ನು, ನಾಡಿನ ಭಾಷೆಯನ್ನು ಬಳಸಿಕೊಂಡು ದೇಸೀಯ ಶೈಲಿಯಲ್ಲಿ ಕೃತಿರಚನೆಗೆ ಕೈಯಾಕಿದರು. ಕವಿರಾಜಮಾರ್ಗ ಕೃತಿ ನೀಡುವ ಕನ್ನಡ ನಾಡು ನುಡಿ, ಜನ–ಮನದ ವಿವರಗಳು ಕನ್ನಡತನದ ಮೊದಲ ವ್ಯಾಖ್ಯಾನಗಳಾಗಿವೆ. ಮತ ಧರ್ಮಗಳಿಗೆ ಸಂಬಂಧಿಸಿದಂತೆ ಕನ್ನಡದ ನಿರ್ಮಾಣ ಮನಸ್ಸಿನ ಆಲೋಚನೆಗಳಿಗೆ ಕಳಸಪ್ರಾಯವಾಗುವಂಥ ಪದ್ಯ ಅದರಲ್ಲಿದೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಮೌನೇಶ ಕೆಲ್ಲೂರ ಸಂಶೋಧನಾ ವಿದ್ಯಾರ್ಥಿಕನ್ನಡ ವಿಶ್ವವಿದ್ಯಾಲಯ ಹಂಪಿ ಮಹಿಳಾ ಅಧ್ಯಯನ ವಿಭಾಗ
ಶ್ರೀ ಸದ್ಗುರು ಬಸವರೂಢ ಮಹಾಸ್ವಾಮೀಜಿ ಕಲಾ ಮತ್ತು ವಾಣಿಜ್ಯ ಕಾಲೇಜು ಹೂವಿನ ಹಿಪ್ಪರಗಿ

How to cite this article:
ಮೌನೇಶ ಕೆಲ್ಲೂರ **(2026).** ಕನ್ನಡ ಸಾಹಿತ್ಯ ಮತ್ತು ಧರ್ಮ. *Journal of Research and Development, 18(4(II)), 149–152. https://doi.org/10.5281/zenodo.19397210*

Quick Response Code:
Website: https://jrdrvb.org/
DOI: 10.5281/zenodo.19397210
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

"ಕಾಸವರಂ ಎಂಬುದು ನೇರಿ ಸೈರಿಸಲ್ ಆರ್ಪೊಡೆ ಪರವಿಚಾರಮಂ ಪರಧರ್ಮಮುಮುಂ.."
(ಬೇರೆಯವರ ವಿಚಾರವನ್ನು, ಧರ್ಮವನ್ನು ಸಹ ಸಂಪೂರ್ಣವಾಗಿ ಸಹಿಸಿಕೊಳ್ಳಲು ಸಮರ್ಥರಾದರೆ ಅದೇ ಬಂಗಾರ) ಇದು ಕನ್ನಡದ ವಿವೇಕ. ಇದು ಎಲ್ಲರ ಮನಗಳನ್ನೂ ಬೆಳಗಲಿ.
ಜೈನ ಧರ್ಮಕ್ಕೆ ಎರಡು ಮುಖ : 1) ತಾತ್ವಿಕ ವಿಚಾರ 2) ಮತೀಯ ಅಥವಾ ಧಾರ್ಮಿಕ ವಿಚಾರ. ಅಹಿಂಸೆ ಮುಖ್ಯವಾದ ಧಾರ್ಮಿಕ ವಿಚಾರ.
ಕವಿಗಳಿಗೆ ಅವರಂತೆಯೇ ಧಾರ್ಮಿಕ ಶ್ರದ್ಧೆಯಿಂದ ಆಶ್ರಯ ಧರ್ಮಾಭಿಮಾನಿಗಳಿದ್ದರೂ ಅಂಥವರಲ್ಲಿ ಒಬ್ಬಳಾದ ಅತ್ತಿಮಬ್ಬೆ ರನ್ನನಿಗೆ ಆಶ್ರಯ ನೀಡಿ ಅವನಿಂದ 'ಅಜಿತನಾಥ ಪುರಾಣ ತಿಲಕ'ವನ್ನು ಬರೆಯಿಸಿದ್ದಾರೆ. ಪೊನ್ನನ 'ಶಾಂತಿನಾಥ ಪುರಾಣ'ದ ಸಾವಿರ ಪ್ರತಿಗಳನ್ನು ಮಾಡಿಸಿ ಜನರಿಗೆ ಹಂಚಿದ್ದಾಳೆ. ತಮ್ಮ ಕಾವ್ಯದ ಶ್ರೋತೃಗಳಲ್ಲಿ ತಮ್ಮಂತೆಯೇ ಧರ್ಮಶ್ರದ್ಧೆ ಮಾಡಬೇಕು ಎಂಬುದು ಆ ಕವಿಗಳ ಉದ್ದೇಶ. ಆದ್ದರಿಂದ ಅವರ ಕಾವ್ಯದ ಗುರಿ ಧರ್ಮಶ್ರದ್ಧೆ. ಆ ದೃಷ್ಟಿಯಿಂದ ರಸಾನುಭವವೇ ಕಾವ್ಯದ ಅಂತಿಮಗುರಿ ಎಂಬ ಸಂಸ್ಕೃತ ಕಾವ್ಯಮೀಮಾಂಸೆಯ ನಿಲುವು ಕನ್ನಡ. ಕಾವ್ಯಗಳಿಗೆ ಪೂರ್ಣವಾಗಿ ಅನ್ವಯಿಸುವುದಿಲ್ಲ.
ಕನ್ನಡ ಸಾಹಿತ್ಯದ ಮೇಲೆ ಪ್ರಮುಖವಾಗಿ ಮೂರು ಪ್ರೇರಣೆಗಳು ಪ್ರಭಾವ ಬೀರಿವೆ.
(1) ಮತಧರ್ಮಗಳು (2) ರಾಜಾಶ್ರಯ, (3) ಸಂಸ್ಕೃತ ಸಾಹಿತ್ಯ ಪರಂಪರೆ

•ನಮ್ಮ ಕವಿಗಳು ಈ ಮೇಲಿನ ಮೂರರ ಬಗೆಗೆ ಉದ್ದಕ್ಕೂ ತೋರಿದ ಕ್ರಿಯೆ ಪ್ರತಿಕ್ರಿಯೆಗಳೇ ಕನ್ನಡ ಸಾಹಿತ್ಯ ಚರಿತ್ರೆ ಎನ್ನಬಹುದು.

•ಧರ್ಮವೇ ಜೀವನದ ಉಸಿರೆಂದು ಹೇಳಲಾದ ಭಾರತದಲ್ಲಿ ಎಲ್ಲಾ ಕಾವ್ಯ – ಕಲೆಗಳ ಮೂಲ ಸ್ಫೂರ್ತಿಯೇ ಧರ್ಮವಾಗಿದೆ.

•ಅಶೋಕನು ತನ್ನ ಮತಪ್ರಚಾರಕ್ಕಾಗಿ ಕರ್ನಾಟಕದ ಈ ಸ್ಥಳಗಳಿಗೆ ಧರ್ಮ ಬೋಧಕರನ್ನು ಕಳುಹಿಸಿದ ಉಲ್ಲೇಖಗಳಿವೆ ಬನವಾಸಿ ಮತ್ತು ಮಹಿಷಮಂಡಲ.

•ಕರ್ನಾಟಕದಲ್ಲಿ ಅಶೋಕನ ಕಾಲದ ಬೌದ್ಧ ಸ್ಮಾರಕಗಳು ದೊರಕಿರುವ ಸ್ಥಳಗಳು – ಬಳ್ಳಿಗಾವೆ, ಬನವಾಸಿ, ಕೋಳಿವಾಡ.

•ಚಂಪೂ ಗ್ರಂಥಗಳ ಪ್ರಾಧ್ಯಾನತೆ ತಗ್ಗಿ, ದೇಶೀವೃತ್ತಗಳು, ಹಾಡುಗಬ್ಬಗಳು ಪ್ರಚಲಿತಗೊಂಡ ಕಾಲ – ಕ್ರಿ.ಶ 12ನೇ ಶತಮಾನ.

•ತನ್ನ ಕೃತಿಯನ್ನು ಓದುವವರಿಗೆ "ಆಕಾಂಕ್ಷಿಪ ಮುಕ್ಕಿಯಕ್ಕುಂ" ಎಂದು ಹೇಳಿದವರು – ಕೇಶೀರಾಜ, ಶಬ್ದಮಣಿದರ್ಪದಲ್ಲಿ.

•ಜೈನಧರ್ಮವು ಕರ್ನಾಟಕದಲ್ಲಿ ಪ್ರವರ್ಧಮಾನದಲ್ಲಿದ್ದ ಕಾಲ ಕ್ರಿ.ಶ. 9 ರಿಂದ 12 ನೇ ಶತಮಾನ.

•ಧಾರ್ಮಿಕ ಕೃತಿಗಳನ್ನು ಪ್ರತಿಮಾಡಿಸಿ ದಾನಮಾಡುವುದನ್ನು ಹೀಗೆಂದು ಕರೆಯಲಾಗಿದೆ. – 'ಶಾಸ್ತ್ರದಾನ'

•ಧರ್ಮದಿಂದ ಪ್ರೇರಣೆಗೊಂಡು ರಚಿತವಾದ ಸಾಹಿತ್ಯವನ್ನು ಸ್ಥೂಲವಾಗಿ ಮೂರು ವಿಭಾಗಗಳಾಗಿ ವಿಂಗಡಿಸಬಹುದು.
(1) ಧಾರ್ಮಿಕ ಸಾಹಿತ್ಯ (ಖಿಜಟುರುಠಣ ಟುಣಜಡಿಚಿಣಣಡಿಜ)
(2) ಭಕ್ತಿ ಸಾಹಿತ್ಯ (ಆಜತಠಣಬಠಟಿಚಿಟ ಟುಣಜಡಿಚಿಣಣಡಿಜ)
(3) ಅನುಭಾವ ಸಾಹಿತ್ಯ (ಒಥಿ ಣಬಥಿ ಟುಣಜಡಿಚಿಣಣಡಿಜ)

•ಹತ್ತನೆಯ ಶತಮಾನದ ಜೈನ ಕವಿಗಳಿಗೆ ಕೇವಲ ಧರ್ಮದ ಶ್ರದ್ಧೆ ಹಾಗೂ ಧರ್ಮದ ಮಹತ್ವವನ್ನು ಎತ್ತಿ ಹಿಡಿಯುವುದೇ ಮುಖ್ಯ ಉದ್ದೇಶವಾಗಿತ್ತು.

•11–12ನೇ ಶತಮಾನದಲ್ಲಿ ಜೈನಕವಿಗಳು ಅನ್ಯಮತಗಳೊಡನೆ ಸೆಣಸಾಡುತ್ತಾ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಸಲುವಾಗಿ ಅನ್ಯಮತಗಳನ್ನು ವಿಡಂಬಿಸುವ ಮತ್ತು ಸ್ವಮತವನ್ನು ರಭಸದಿಂದ ಪ್ರಚಾರಮಾಡುವ ಅಗತ್ಯ ಮುಖ್ಯವಾಗಿತ್ತು.
ಕವಿಗಳು ಯಾವ ಒಂದು ನೆಲೆಯಲ್ಲಿ ತಾವು ಒಪ್ಪಿಕೊಂಡ ಮತಧರ್ಮಗಳ ಬಗ್ಗೆ ಶ್ರದ್ಧೆ, ಅಭಿಮಾನ, ಆವೇಶಗಳನ್ನು ಇರಿಸಿಕೊಂಡು, ಆಯಾ ಮತಧರ್ಮದ ಪ್ರಸಾರ ಹಾಗೂ ಪ್ರಚಾರವನ್ನು ಕಾವ್ಯದ ಮುಖ್ಯ ಗುರಿಯನ್ನಾಗಿ ಮಾಡಿಕೊಂಡು ಕೃತಿ ರಚನೆ ಮಾಡಿರುವರೋ ಅಂಥ ಕೃತಿಗಳನ್ನು ಧಾರ್ಮಿಕ ಸಾಹಿತ್ಯ (ಖಿಜಟುರುಠಣ ಟುಣಜಡಿಚಿಣಣಡಿಜ) ಎಂದು ಕರೆದಿದ್ದೇವೆ.

•ಧಾರ್ಮಿಕ ಸಾಹಿತ್ಯ'ದ ವಸ್ತುಗಳು ಬಹುಮಟ್ಟಿಗೆ ಆಗಲೇ ಸಿದ್ಧವಾದವುಗಳು.

•ಭಕ್ತಿ ಸಾಹಿತ್ಯ ಹಾಗೂ ಅನುಭಾವ ಸಾಹಿತ್ಯಗಳ ನಿರ್ಮಿತಿಗೆ ಒಂದು ಬಗೆಯ 'ಸಾಧಕ' ಮನೋಧರ್ಮ ಹಾಗೂ ಆಧ್ಯಾತ್ಮಿಕ ನಿಲುವೂ ಅಗತ್ಯ.

•ಅನುಭಾವ' ಎನ್ನುವುದು ಒಂದು ವಿಶೇಷವಾದ ಮಾನಸಿ ನಿಲುವು.

•ಭಕ್ತಿ ಸಾಹಿತ್ಯದ ವಸ್ತು ಮೂಲತಃ ಅಂತರಂಗದ್ದು.

•ಸಾಧಕನು ಆತ ಕಂಡ ಕಾಣೆಗಳು 'ಅನುಭಾವ ಸಾಹಿತ್ಯ'ದಲ್ಲಿ ಪ್ರಕಟವಾಗುತ್ತದೆ. ಅನುಭಾವಿಯು ಆಗಿರುತ್ತಾನೆ. ಮೂಲತಃ ಭಕ್ತನೂ ಆಗಿರುತ್ತಾನೆ.

•"ಹುಲಿ ಹೊಡೆದು ಚರ್ಮಹೊರೆ" ಎಂಬ ಲೋಕೋಕ್ತಿಯು ಜೈನಕವಿಗಳಿಗೆ ಅನ್ವಯಿಸುತ್ತದೆ.

•ಕನ್ನಡ ಸಾಹಿತ್ಯವನ್ನು ಶತಮಾನಗಳ ಉದ್ದಕ್ಕೂ ನಿಯಂತ್ರಿಸಿಕೊಂಡ ಬಂದ ಧರ್ಮಗಳಿಂದ ಕನ್ನಡ ಸಾಹಿತ್ಯದ ಮೇಲಾದ ಪರಿಣಾಮಗಳು.

•ಧರ್ಮವೆಂಬುದು ಎಲ್ಲಾ ಕಾಲದ ಕವಿಗಳಿಂದಲೂ ಕಾವ್ಯ ರೂಪದ ಕಾಣಿಕೆಯನ್ನು ನಿರೀಕ್ಷಿಸಿದ್ದರಿಂದ ಧಾರ್ಮಿಕವಲ್ಲದ ಬೇರೆಯೇ ಶುದ್ಧ ಕಾವ್ಯಗಳ ಸಂಖ್ಯೆ ತೀರಾ ವಿರಳವಾಯಿತು , ಮತ್ತು ಧಾರ್ಮಿಕವಲ್ಲದ ಕಾವ್ಯಗಳ ವಿಚಾರಕ್ಕೆ ತಿರಸ್ಕಾರವನ್ನು ಓದುಗರಲ್ಲಿ ಬೆಳೆಸಿತು.

•ಧಾರ್ಮಿಕ ಕಾವ್ಯಗಳ ಹೆಸರಿನಲ್ಲಿ ರಚಿತವಾದ 'ಪುರಾಣ'ಗಳು ಒಂದೇ ಮಾದರಿಯಾಗಿ ಆಯಾ ಮತಧರ್ಮಕ್ಕೆ ಸಂಬಂಧಪಟ್ಟ, ಶಾಸ್ತ್ರಾಂಶಗಳ ಸೀಗೇ ಮೆಳೆಗಳಿಂದ ಇಡಿಕಿರಿದು ನಿಜವಾದ ಕಾವ್ಯಾಸಕ್ತರ ಪಾಲಿಗೆ ನಿರಾಶೆಯನ್ನುಂಟುಮಾಡಿತು.

•ಧಾರ್ಮಿಕ ಕಾವ್ಯಗಳು ಸಾರಿದ ಕಾವ್ಯೋದ್ದೇಶದಿಂದಾಗಿ ಓದುಗರು ಕೇವಲ ಪುಣ್ಯ ಸಂಪಾದನಾರ್ಥಗಳಾದ ಶ್ರಾವಕರು ಮಾತ್ರವಾದರೇ ಹೊರತು ಕೃತಿಗಳನ್ನು ವಿಮರ್ಶೆಮಾಡುವ, ಚರ್ಚಿಸುವ ವೈಚಾರಿಕತೆಗಳಿಗೆ ಅವಕಾಶವೇ ಅವರಿಗೆ ದೊರಕಲಿಲ್ಲ.

•ಧಾರ್ಮಿಕ ಕಾವ್ಯಗಳು 'ಜೀವನ ನಶ್ವರ, ಪರಮಾರ್ಥವೆಂಬುದು ಜೀವನದ ಗುರಿ", ಜೈನರಾಗಲೀ, ವೀರಶೈವರಾಗಲಿ, ವೈಷ್ಣವರಾಗಲೀ ಹೇಳಿದ್ದು ಇದನ್ನೇ ವಾಸ್ತವ ಬದುಕಿನ ಬಗೆಗೆ ಪ್ರೀತಿ ಆಸಕ್ತಿ, ಕಾತರತೆ ಹಾಗೂ ತೊಡಗುವಿಕೆಗಳಿಗೆ ತೀರಾ ವಿರುದ್ಧವಾದ ಈ ಉಪದೇಶ ವಾಸ್ತವ ಹಾಗೂ ಸಹಜಾನುಭವಗಳ ಅಭಿವ್ಯಕ್ತಿಗೆ ಅವಕಾಶವಿಲ್ಲದ ಪರಿಸ್ಥಿತಿ ನಿರ್ಮಾಣಮಾಡಿತು. ಎಷ್ಟೋ ವೇಳೆ ಕಾವ್ಯ ನೀತಿ ಬೋಧನೆಗೆ ನೈವೇದ್ಯವಾಯಿತು.

•ಧರ್ಮವೆಂಬುದು ಕವಿಗಳೆಂಬ ಕುದುರೆಗಳಿಗೆ ಚಾಟಿಯಂತೆ ಕೆಲಸಮಾಡಿದೆ.

•ಧರ್ಮದ ಅತಿಯಾದ ಅನುಸರಣದಿಂದಾಗಿ ಕನ್ನಡ ಸಾಹಿತ್ಯ ಕಳಪೆಯಾಗಿದೆ ಎನ್ನಬಹುದು.

•ವೈರಾಗ್ಯ ನಿರೂಪಣೆಗೆ ಮೀಸಲಾದ ಜೈನ ಸಾಹಿತ್ಯವನ್ನು ಆರಾಧನಾ ಕಥಾ ಸಾಹಿತ್ಯ ಎನ್ನುತ್ತಾರೆ.

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

•ಕನ್ನಡ ಸಾಹಿತ್ಯಕ್ಕೆ ಬದುಕಿನ ಮೌಲ್ಯಗಳನ್ನು, ಆದರ್ಶಗಳನ್ನು, ತಾತ್ವಿಕ ಹಿನ್ನಲೆಯನ್ನು, ಅನುಭಾವಿಕ ಆಳ ಅಗಲುಗಳು ಶಿಖರಗಳೂ ಪ್ರಾಪ್ತವಾಗಿರುವುದು ಧಾರ್ಮಿಕ ಸಾಹಿತ್ಯದಿಂದ.

•ಆಧುನಿಕ ಯುಗದಲ್ಲಿ ಮತಧರ್ಮದ ಸ್ಥಾನವನ್ನು ಆಕ್ರಮಿಸಿಕೊಂಡಿರುವ ವಿಷಯ – ವಿಜ್ಞಾನ.

•ಶಾಂತ ರಸಕ್ಕೆ ಸಂಬಂಧಿಸಿದಂತೆ ಕನ್ನಡ ಜೈನಕವಿಗಳು ಮತ್ತು ಅಲಂಕಾರಿಕರು ತಳೆದ ನಿಲುವಿಗೆ ಮತಧರ್ಮವೇ ಕಾರಣವಾಗಿದೆ. ಭರತನು ಹೇಳದ ಶಾಂತರಸವನ್ನು ಒಪ್ಪಿಕೊಳ್ಳಬೇಕೋ ಬೇಡವೋ ಎನ್ನುವ ಚರ್ಚೆ ಸಂಸ್ಕೃತ ಕಾವ್ಯ ಮೀಮಾಂಸೆಯಲ್ಲಿ ನಿರ್ವಿವಾದಿತವಾಗಿ ಕೊನೆಗಾಣುವ ಮೊದಲೇ ಇವರು ಅದನ್ನು ಒಪ್ಪಿಕೊಂಡಿದ್ದರು. ಅಷ್ಟೇ ಅಲ್ಲದೆ ಇತರೆ ರಸಗಳಿಗಿಲ್ಲದ ಪ್ರಾಶಸ್ತ್ಯವನ್ನು ಕವಿಗಳು ಅದಕ್ಕೆ ನೀಡಿದ್ದಾರೆ.

•ನಿನಗೆ ರಸವೊಂದೆ ಶಾಂತಮೆ ಜಿನೇಂದ್ರ ಮನಂ ಆ ರಸಾಂಬುನಿಧಿಯೊಳಗೆ ಅವಗಾಹನಮಿರ್ದು ಮಿಕ್ಕ ರಸಮಂ ಕನಸಿನೊಳಂ ನೆನೆಯದಂತು ಮೊಡನಗೆ ಆರ್ಹಾ (10.82) ಎಂದು ನಾಗಚಂದ್ರ ಪ್ರಾರ್ಥಿಸಿದ್ದಾನೆ.

•ಶುದ್ಧ ಲೌಕಿಕಕಾವ್ಯ ಬರುವುದು ಅಪರೂಪವಷ್ಟೇ ಅಲ್ಲ ಮಾನ್ಯತೆಯೂ ಕಡಿಮೆ. ಆದ್ದರಿಂದಲೇ ಕನ್ನಡದಲ್ಲಿ ಲೌಕಿಕ ಕಾವ್ಯಗಳು ವಿರಳ. ತಮ್ಮ ಧರ್ಮಶ್ರದ್ಧೆಗೆ ಒಂದು ಆಗಮಿಕಕಾವ್ಯ. ತಮಗೆ ಆಶ್ರಯ ನೀಡಿದ ಪ್ರಭುವಿನ ಮೆಚ್ಚುಗೆಗೆ ಒಂದು ಲೌಕಿಕಕಾವ್ಯ ಬರೆಯುವ ಪರಿಪಾಠ ಕನ್ನಡ ಸಾಹಿತ್ಯದ ಆರಂಭದ ಜೈನಕವಿಗಳಲ್ಲಿ ಕಾಣಿಸಿದೆ. ಪಂಪನೆ ಆ ಪರಂಪರೆಯನ್ನು ಪ್ರಾರಂಭಿಸಿದ್ದಾನೆ ಎಂದು ತೋರಿದರೂ ಅವನಿಗಿಂತ ಹಿಂದೆ ಇದ್ದ ಕವಿಗಳಲ್ಲಿಯೇ ಆ ರೂಢಿ ಇತ್ತೆಂದು ತಿಳಿದುಬರುತ್ತದೆ. ಆ ಮೂಲಕ ಕೆಲವು ಲೌಕಿಕ ಕಾವ್ಯಗಳು ಬಂದಿವೆ. ಅವೂ ಶುದ್ಧವಾಗಿ ಲೌಕಿಕಕಾವ್ಯಗಳಲ್ಲ. ವೈದಿಕ ಪಂಪನೇ ಪುರಾಣಗಳಿಗೆ ಸ್ಥಳಿಕ ಮತ್ತು ತಾತ್ಕಾಲಿಕ ಇತಿಹಾಸವನ್ನು ಪೋಣಿಸಿದ ಕಾವ್ಯಗಳು. ಇತಿಹಾಸದಿಂದ ಮತ್ತು ಬರೆದವರು ವೈದಿಕರಲ್ಲದ್ದರಿಂದ ಅವು ಲೌಕಿಕ ಕಾವ್ಯಗಳಾಗಿವೆ. ಇಲ್ಲದಿದ್ದರೆ ಅವೂ ಧಾರ್ಮಿಕ ಕಾವ್ಯಗಳೇ ಆಗುತ್ತಿದ್ದವು. ಇಂಥ ಪರಂಪರೆಯೂ ಬಹುದೂರ ಬರಲಿಲ್ಲ. ನಾಗಚಂದ್ರ ಲೌಕಿಕ ಕಾವ್ಯವನ್ನು ಬರೆಯದೆ ಎರಡು ಧಾರ್ಮಿಕ ಕಾವ್ಯಗಳನ್ನು ಬರೆದು ಅದನ್ನು ತುಂಡರಿಸಿದೆ.

ಕಥೆ, ಜಿನ ಚರಿತಮೆ
ಕವಿ, ಜಿನಕಥೆಯಂ ಪೇಟ್ಪವೆನೆ
ರಾಜವಿಟಚೋರಕಥಾ ಕಥೆಯೇ? .....
ಆದಂ ಪೇಳ್ದ ಕವಿ ಕವಿಯೇ?.....(1.50)

ಎಂದು ಹೇಳಿ ಆತ ಹಳೆಯ ಪರಂಪರೆಯನ್ನು ತಿರಸ್ಕರಿಸಿದ್ದಾನೆ. ಅಲ್ಲಿಂದ ಮುಂದೆ ಜೈನಕವಿಗಳು ಲೌಕಿಕ ಕಾವ್ಯವನ್ನು ಬರೆದುದು ಕಡಿಮೆ ಪಂಪ ಆಗಮಿಕ ಮತ್ತು ಲೌಕಿಕ ಕಾವ್ಯವನ್ನು ಬರೆವ ಪರಂಪರೆಯನ್ನು ಪ್ರಾರಂಭಿಸಿದ್ದು. ಈಗ ಅದನ್ನು ಮುರಿದು ಧಾರ್ಮಿಕ ಕಾವ್ಯವನ್ನು ಮಾತ್ರ ಬರೆವ ಪರಂಪರೆಯನ್ನು ಪ್ರಾರಂಭಿಸಿದ. ಆ ದೃಷ್ಟಿಯಿಂದ ಈತ 'ಅಭಿನವಪಂಪ.'

ಶುದ್ಧ ಲೌಕಿಕಾವ್ಯವನ್ನು ಬರೆದವರು ಬ್ರಾಹ್ಮಣಕವಿಗಳು ಮೊದಲನೆಯ ನಾಗವರ್ಮ 'ಕರ್ಣಾಟಕ ಕಾದಂಬರಿ'ಯನ್ನೂ ದುರ್ಗಸಿಂಹ 'ಕರ್ಣಾಟಕ ಪಂಚತಂತ್ರ'ವನ್ನೂ ಬರೆದರು. ಹಾಗೆ ಅವರು ಲೌಕಿಕ ಕಾವ್ಯವನ್ನು ಬರೆದದೂ ಧಾರ್ಮಿಕ ಕಾರಣದಿಂದಲೇ 'ದೇವಭಾಷೆ'ಯಾದ ಸಂಸ್ಕೃತದಲ್ಲಿರುವ ವೈದಿಕ ಕಥೆಗಳನ್ನು ದ್ರಾವಿಡ (ಅವರ ಪ್ರಕಾರ ಅಪಭ್ರಂಶ) ಭಾಷೆಯಾದ ಕನ್ನಡದಲ್ಲಿ ಬರೆಯುವುದರಿಂದ ಅವಕ್ಕೆ ಮೈಲಿಗೆಯಾಗಿ ಅಪಚಾರವಾಗುತ್ತದೆಂದು ಅವರು ಲೌಕಿಕಕಥೆಯನ್ನು ಹೇಳಿದ್ದಾರೆ ಇಲ್ಲವೆ ಶಾಸ್ತ್ರ ಕೃತಿಗಳನ್ನು ರಚಿಸಿದ್ದಾರೆ. ಇದೇ ನಾಗವರ್ಮ 'ಛಂದೋಂಬುಂಧಿ' ಎಂಬ ಛಂದೋಗ್ರಂಥವನ್ನೂ ಚಂದ್ರರಾಜ, 'ಮದನತಿಲಕ'ವೆಂಬ ಕಾಮಶಾಸ್ತ್ರದ ಕೃತಿಯನ್ನೂ ರಚಿಸಿದ್ದಾರೆ. ನಾಗವರ್ಮಾಚಾರ್ಯ ಮಾತ್ರ 'ಚಂದ್ರ ಚೂಡಾಮಣಿ ಶತಕ' ಎಂಬ ತಾತ್ವಿಕ ವೈರಾಗ್ಯ ಪ್ರತಿಪಾದಕ ಕೃತಿಯನ್ನು ರಚಿಸಿದ್ದಾನೆ.

ಒಂದು ವೇಳೆ ವೈದಿಕರು ಕನ್ನಡದಲ್ಲಿ ಕಾವ್ಯವನ್ನು ಬರೆಯದಿದ್ದರೆ ಆ ಧರ್ಮಕ್ಕೆ ಆಗುತ್ತಿದ್ದ ನಷ್ಟವನ್ನು ಮನಗಂಡರೆ ಆ ಭೀತಿಯೂ ಅವರು ಕನ್ನಡದಲ್ಲಿ ಕಾವ್ಯವನ್ನು ಬರೆಯಲು ಒತ್ತಾಯಿಸಿದೆ ಎನಿಸುತ್ತದೆ. ಅಂದರೆ ಬ್ರಾಹ್ಮಣಕವಿಗಳು ಕನ್ನಡದಲ್ಲಿ ಧಾರ್ಮಿಕ ಕಾವ್ಯವನ್ನು ಬರೆಯದಿರಲು ಹೇಗೆ ಧಾರ್ಮಿಕ ಕಾರಣವಿತ್ತೋ ಹಾಗೇ ಬರೆದದ್ದಕ್ಕೂ ಧಾರ್ಮಿಕ ಕಾರಣವಿದೆ ಎಂದಾಗುತ್ತದೆ.

ಹೀಗೆ ಕನ್ನಡ ಸಾಹಿತ್ಯದಲ್ಲಿ ಅದರ ಮತಧರ್ಮ ಸಂಬಂಧಗಳಾಗಿ ಕಾಣಿಸುವುದರಿಂದ ಎಫ್. ಕಿಟೆಲ್, ನರಸಿಂಹಚಾರ್ಯ, ಈ.ಪಿ. ರೈಸ್ ಮತ್ತು ಬಿ.ಎಂ. ಶ್ರೀಕಂಠಯ್ಯನವರು ಕನ್ನಡಸಾಹಿತ್ಯ ಚರಿತ್ರೆಯನ್ನು ಜೈನಯುಗ, ವೀರಶೈವಯುಗ, ಬ್ರಾಹ್ಮಣಯುಗ ಎಂದು ಮತಧಾರಿತವಾಗಿ ವಿಂಗಡಿಸಿದ್ದಾರೆ.

ಮತಪ್ರಚಾರ ಮತ್ತು ಸಂಘರ್ಷಕ್ಕಾಗಿ ಹೆಸರಿಸಬಹುದಾದ ಮುಖ್ಯ ಜೈನಕೃತಿಗಳು ಶಿವಕೋಟ್ಯಾಚಾರ್ಯನ (ಕ್ರಿ.ಶ.920) 'ವಡ್ಡಾರಾಧನೆ', ನಯಸೇನನ (ಕ್ರಿ.ಶ.1100) 'ಧರ್ಮಾಮೃತಂ, ಬ್ರಹ್ಮಶಿವನ (ಕ್ರಿ.ಶ.1150) 'ಸಮಯಪರೀಕ್ಷೆ', ಹಾಗೂ ಜನ್ನನ (ಕ್ರಿ.ಶ.1225) 'ಯಶೋಧರ ಚರಿತ' ಜೈನಕಾವ್ಯಲೋಕವೆಂದರೆ ಅದು ಹೆಚ್ಚಾಗಿ 'ತ್ರಿಷಷ್ಟಿ ಶಲಾಕಾಪುರುಷರ' ಚರಿತ್ರೆ, ಅವರಲ್ಲಿ ಸೇರಿರುವ 24 ತೀರ್ಥಂಕರ ಕತೆಯನ್ನು ಪ್ರತ್ಯೇಕವಾಗಿ ಹೇಳುವ ಕಾವ್ಯಗಳು ಕನ್ನಡದಲ್ಲಿ ಬಹಳಷ್ಟಿವೆ. 12 ಜನ ಚಕ್ರವರ್ತಿಗಳು, 9 ಮಂದಿ ವಾಸುದೇವರು, 9 ಮಂದಿ ಪ್ರತಿವಾಸುದೇವರು 9 ಮಂದಿ.

ಬಲದೇವರ ಕತೆಗಳನ್ನು, ಅವುಗಳಲ್ಲಿ ವಿಶೇಷವಾಗಿ ಜೈನರಾಮಾಯಣ ಜೈನ ಮಹಾಭಾರತ ಕಥೆಗಳನ್ನು ಹೇಳುವ ಕಾವ್ಯಗಳೂ ಇವೆ. ಉಳಿದ ಹನ್ನೆರಡು ಮಂದಿ ಚಕ್ರವರ್ತಿಗಳ ಕತೆಯನ್ನೂ ಆಯಾ ತೀರ್ಥಂಕರರ ಕಾವ್ಯದ ಕೊನೆಯ ಪರಿಚ್ಛೇದದಂತೆ ಹೇಳುವುದು ರೂಢಿ. ಪ್ರತ್ಯೇಕ ಕಾವ್ಯವಾಗಿ ಹೇಳಿರುವುದೂ ಇದೆ. ವಿಶೇಷವೆಂದರೆ ಮೇಲೆ ಹೆಸರಿಸಿದ ಯಾವ ಕೃತಿಯೂ ಇದರಲ್ಲಿ ಯಾರ ಕತೆಯನ್ನೂ ಹೇಳುವುದಿಲ್ಲ, ವಡ್ಡಾರಾಧನೆಯು ಆರಾಧನಾ ಕಥಾಕೋಶ ಅದು ಕಥೆಯನ್ನು ಹೇಳುತ್ತದೆ. 'ಧರ್ಮಾಮೃತಂ' ಧರ್ಮತತ್ವಗಳ ಮಹಿಮೆಯನ್ನು ಸಾರುವ ಕಥಾಗುಚ್ಛ. ಅದು ಜೈನಧರ್ಮದಲ್ಲಿ ಗುಣವ್ರತಗಳಲ್ಲಿ ಒಂದೊಂದರ ಆಚರಣೆಯ ಮಹಿಮೆಯನ್ನು ತಿಳಿಸುವ 14 ಕತೆಗಳನ್ನು ಹೇಳುತ್ತದೆ.

'ಯಶೋಧರಚರಿತೆ'ಯ ನೋಂಪಿಯ ಕತೆ. ಅದು ಜೀವದಯಾಷ್ಟಮಿ ವ್ರತದ ಕಾರಣ, ಕ್ರಮ ಮತ್ತು ಫಲಗಳನ್ನು ತಿಳಿಸುವ ಕತೆಯನ್ನು ಹೇಳುತ್ತದೆ. ಹೀಗೆ ಜೈನಕಾವ್ಯಲೋಕದ ಮುಖ್ಯಕತೆಗಳನ್ನು ಬಿಟ್ಟು ಈ ಕಥನಮಾರ್ಗವನ್ನು ಅನುಸರಿಸಿದುದಕ್ಕೆ ಕಾರಣ ಮತಪ್ರಸಾರ, ಸಂಘರ್ಷ.

ವಡ್ಡಾರಾಧನೆಯ ಘೋಷಿತ ಕಥನದ ಉದ್ದೇಶ ಧರ್ಮಶ್ರದ್ಧೆಯನ್ನು ಮೂಡಿಸುವುದಾದರೂ ಅದು ಸಂಘರ್ಷದ ಮೂಲಕ ಮತ ಪ್ರಚಾರ ಮಾಡ ಹೊರಟಿದೆ. ಈ ಧರ್ಮಕಾರಣದ ಘಾಟು ಓದುಗನ ಮೂಗಿಗೆ ಗಟ್ಟಿಯಾಗಿಯೇ ತಾಗುವುದಾದರೂ ಸುಕುಮಾರಸ್ವಾಮಿಯ ಕಥೆಯಂಥದ್ದು ಓದಿ ಮುಗಿಸಿದಾಗ ಓದುಗನ ಮನದಲ್ಲಿ ಉಳಿದು ಮುದಗೊಳಿಸುವುದು ಅಲ್ಲಿನ ಉಪಕಥೆಗಳು, ಅವು ಧರ್ಮಕ್ಕೆ ಸಂಬಂಧಪಡುವುದಕ್ಕಿಂತ ಲೌಕಿಕ ನೀತಿಗೆ ಹೆಚ್ಚು ಸಂಬಂಧಿಸುತ್ತವೆ. ಅಲ್ಲದೆ ಕೃತಿಯ ಘೋಷಿತ ಅಘೋಷಿತ ಉದ್ದೇಶಗಳೆರಡನ್ನೂ ಮೀರಿಸುವಂತಿವೆ. ಕತೆಗಾರನ ಒಳಗಿರುವ ಮತಾಭಿಮಾನಿಯನ್ನು ಆತನ ಒಳಗಿರುವ ಕಲೆಗಾರ ಹಿಂದಿಕ್ಕಿದ್ದಾನೆ ಎನಿಸುತ್ತದೆ. ಆದ್ದರಿಂದಲೇ ವಡ್ಡಾರಾಧನೆ ಕೇಳುಗರನ್ನು ಆರ್ಷಿಸುತ್ತದೆ.

ಪರಮತದೂಷಣೆಯ ಮೂಲಕ ಮತಪ್ರಚಾರ, ಸಂಘರ್ಷ ನಡೆಸಿದ ಕೃತಿಗಳಿರುವಂತೆ ಪರಮತದ ಗೊಡನೆಗೆ ಹೋಗದೆ ತನ್ನ ಮತದ ಕತೆಗಳನ್ನು ಹೇಳಿದ ಕಾವ್ಯಗಳೂ ಕನ್ನಡದಲ್ಲಿವೆ. ಅಂತೆಯೇ ಕೃತಿಗಳೂ ಇವೆ. ಮತೀಯ ಅರುಹುವ ಸಾಮರಸ್ಯವನ್ನು ಮತಮತಗಳ ಗಡಿಯನ್ನು ಮಿರಿ ಅನುಭಾವಕ್ಕೆ ಲಗ್ಗೆಯಿಟ್ಟ ರಚನೆಗಳೂ ಇವೆ.

ಪರಮರ್ಶನ ಗ್ರಂಥಗಳು

1) ಕನ್ನಡ ಸಾಹಿತ್ಯ ಚರಿತ್ರೆ. ರಂ.ಶ್ರೀ.ಮುರಳಿ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

2)) ಕನ್ನಡ ಸಾಹಿತ್ಯ ಚರಿತ್ರೆ ತಸು ಶಾಮರಾಯ
3) ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆಣಟಿಜಜಜಿಟಿಜಜ. ಬೆಂಗಳೂರು ವಿಶ್ವವಿದ್ಯಾಲಯ
4) ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು. ರಂ.ಶ್ರೀ.ಮುರಳಿ
5) ಕನ್ನಡ ಸಾಹಿತ್ಯ ಕೋಶ. ರಾಜಪ್ಪ ದಳವಾಯಿ.
6) ಐಚ್ಛಿಕ ಕನ್ನಡ (ಭಾಗ 1, 2) ಪ್ರೋಫೆಸರ್ ಮಾಲೆ ಮುದ್ದಣ್ಣ
7) ಹೊಸಗನ್ನಡ ಸಾಹಿತ್ಯ ಚರಿತ್ರೆ. ಡಾ. ಎಲ್.ಎಸ್.ಶೇಷಗೀರಿರಾವ್
8) ಯುಗಧರ್ಮ ಹಾಗೂ ಸಾಹಿತ್ಯ ದರ್ಶನ ಕೀರ್ತಿನಾಥ ಕೂರ್ತಕೋಟಿ
9) ಹೊಸಗನ್ನಡ ಸಾಹಿತ್ಯ ಅವಲೋಕನ. ಡಾ. ಎಸ್.ಎಸ್.ಭಗವತಿ ಮತ್ತು ಹೆಚ್.ಎಸ್.ಮೇಲಿನಮನಿ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

Original Article

ಜಾತಿ ತಾರತಮ್ಯದ ಗ್ರಹಣ ಬಿಂಬಿಸುವ ಚಲನಚಿತ್ರ –'ಗ್ರಹಣ'

ನಟರಾಜು. ಎಂ
ಸಂಶೋಧನಾ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು – ೫೭೦೦೦೬
ಇಮೇಲ್ :buddhapriyanata@gmail.com

Manuscript ID:
JRD -2026-180444
ISSN: 2230-9578
Volume 18
Issue 4(II)
Pp.153-155
April 2026
Submitted: 28 Mar. 2026
Revised: 08 Apr. 2026
Accepted: 14 Apr. 2026
Published: 30 April 2026

ಗ್ರಹಣ ವಾಸ್ತವವಾದಿ ನೆಲೆಗಟ್ಟಿನಲ್ಲಿ ಅನಾವರಣಗೊಳ್ಳುವ ಸಾಂಪ್ರದಾಯಕ ಸಮಾಜದ ಕಥನವಾಗಿದೆ. ಅಹಿಂಸಾ ಮಾರ್ಗದಲ್ಲಿ ನಂಬಿಕೆ ಹೊಂದಿದ ನಿರ್ದೇಶಕನೊಬ್ಬ ಇಂತಹ ಜಾತ್ಯತೀತ ಚಿಂತನೆಯುಳ್ಳ ಸಿನಿಮಾ ನಿರ್ದೇಶಿಸಬಹುದು. ೧೯೭೮ ರಲ್ಲಿ ತೆರೆಕಂಡ ಈ ಸಿನಿಮಾವನ್ನು ಜನಪ್ರಿಯ ನಿರ್ದೇಶಕ ಟಿ. ಎಸ್ ನಾಗಾಭರಣ ಅವರು ನಿರ್ದೇಶನ ಮಾಡಿದ್ದಾರೆ. ಜಾತಿವ್ಯವಸ್ಥೆಯ ನ್ಯೂನತೆಗಳನ್ನು ಅನಾವರಣಗೊಳಿಸುವ 'ಗ್ರಹಣ' ಚಲನಚಿತ್ರದ ಮೂಲಕ ನಾಗಭರಣ ಸಿನಿಮಾ ಪಯಣ ಆರಂಭಿಸಿದರು. ಇವರ ನಿರ್ದೇಶನದ 'ಗ್ರಹಣ' 'ಸಂತ ಶಿಶುನಾಳ ಷರೀಫ' 'ಜನುಮದ ಜೋಡಿ' 'ಕಲ್ಲರಳಿ ಹೂವಾಗಿ' ಮುಂತಾದ ಸಿನಿಮಾಗಳು ಧರ್ಮ, ಜಾತಿ ಸೂಕ್ಷ್ಮತೆಗಳು ಮತ್ತು ಮೌಲಿಕ ಆಶಯಗಳನ್ನು ಹೊಂದಿದ ಇತರ ಸಿನಿಮಾಗಳಾಗಿವೆ.

ಜಾತಿವ್ಯವಸ್ಥೆಯ ಕರಾಳತೆಯನ್ನು ಅನಾವರಣಗೊಳಿಸುವ ಉದ್ದೇಶವನ್ನು ಗ್ರಹಣ ಹೊಂದಿದೆ. ದಮನಿತ ವರ್ಗದ ಕಣ್ಣಲ್ಲಿ ವ್ಯವಸ್ಥೆಯನ್ನು ಮತ್ತು ಸಾಂಪ್ರದಾಯಿಕ ವ್ಯವಸ್ಥೆಯಕಣ್ಣುಗಳಲ್ಲಿ ಕೆಳವರ್ಗಗಳನ್ನು ವ್ಯಾಖ್ಯಾನಿಸುವ ಪ್ರಯತ್ನ 'ಗ್ರಹಣ'ದಲ್ಲಿದೆ.ಜಾತಿ ಪ್ರಧಾನತೆಯ ಭಾರತೀಯ ಸಮಾಜವನ್ನು ಅದರದೆ ಆವರಣದೊಳಗೆ ನಿಂತು ಅದರ ಎಲ್ಲಾ ಮಿತಿಗಳೊಂದಿಗೆ ಬಿಂಬಿಸುವ ತುಡಿತ ಈ ಸಿನಿಮಾದ ಹಿಂದಿದೆ. ಕರ್ನಾಟಕದ ಸಂದರ್ಭದಲ್ಲಿ ಗ್ರಾಮ ದೇವತೆಗಳ ಆಚರಣೆಯು ಸಮಾಜದ ಬಹುಮುಖ್ಯ ಸ್ಥಾನವನ್ನು ಪಡೆದಿದೆ. ಆದರೆ ಇಂತಹ ಆಚರಣೆಗಳು ಹೇಗೆ ಒಂದು ವಿಧವಾದ ತಟಸ್ಥ ಧೋರಣೆಯನ್ನು ಪಾಲಿಸುತ್ತ ಸಮುದಾಯಗಳ ಚಲನಶೀಲತೆಯನ್ನು ನಿಷ್ಕ್ರಿಯಗೊಳಿಸುತ್ತದೆ ಎಂಬುದನ್ನು ಈ ಚಲನಚಿತ್ರದಲ್ಲಿ ಕಂಡುಕೊಳ್ಳುವ ಪ್ರಯತ್ನವಿದೆ. ಇದು ಪ್ರದೇಶವೊಂದರ ನೈಜ ಘಟನೆಯನ್ನು ಆಧರಿಸಿ ನಿರ್ಮಾಣವಾದ ಸಿನಿಮಾ. ಚಿತ್ರದ ಪ್ರಾರಂಭದಲ್ಲೆ ಉಜ್ಜನಿ ಜಾತ್ರೆಯ ಸಂಪೂರ್ಣ ವಿವರವನ್ನು ಅಕ್ಷರ ರೂಪದಲ್ಲಿ ಪರದೆಯ ಮೇಲೆ ಕಟ್ಟಿಕೊಡಲಾಗಿದೆ.

ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯ ಉಜ್ಜನಿ ಗ್ರಾಮ ವಿಜಯನಗರದ ಅರಸರ ಕಾಲದಿಂದಲೂ ವಿಭಿನ್ನ ಧಾರ್ಮಿಕ ಕ್ರಿಯೆಯೊಂದನ್ನು ನಡೆಸಿಕೊಂಡು ಬರುತ್ತಿದೆ.

ಅದಕ್ಕೊಂದು ಕಥೆ.....

ಉಜ್ಜಿನಿ ಸಮೀಪದ ಒಂದು ಹಳ್ಳಿ. ಅಲ್ಲಿಯ ಒಂದು ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದ ಹೆಣ್ಣು 'ಹೊನ್ನಾರತಿ'. ಮದುವೆಗೆ ಮುಂಚೆ ಮೈನೆರೆದ ಆಕೆಯನ್ನು ಅಂದಿನ ವಾಡಿಕೆಯಂತೆ ತಂದೆ ತಾಯಿಗಳೇ ಕಣ್ಣು ಕಟ್ಟಿ ಕಾಡಿಗೆ ಬಿಟ್ಟರಂತೆ. ಕಾಡಿನಲ್ಲಿ ದಿಕ್ಕಿಲ್ಲದೆ ಅಲೆದು ಉಜ್ಜಿನಿ ಸೇರಿದ ಆಕೆ ಬಾಯಾರಿಕೆಯಾಗಿ ಬ್ರಾಹ್ಮಣ ಕೇರಿಯಲ್ಲಿ ನೀರಿಗಾಗಿ ಯಾಚಿಸುತ್ತಾಳೆ.

ಜಾತಿಯಿಂದ ಬಹಿಷ್ಕರಿಸಿದ ಆಕೆಗೆ ನೀರು ಕೊಡಲು ನಿರಾಕರಿಸುತ್ತಾರೆ. ಮನೆಯಿಂದ ಮನೆಗೆ, ಕೇರಿಯಿಂದ ಕೇರಿಗೆ ನಡೆದು ಕೊನೆಗೆ ಹೊಲಗೇರಿಯನ್ನು ತಲುಪುತ್ತಾಳೆ. ಹೊಲೆಯರಾದರೋ ಭಯದಿಂದ ಬ್ರಾಹ್ಮಣ ಕನ್ಯೆಗೆ ನೀರು ಕೊಡಲು ಹಿಂಜರಿಯುತ್ತಾರೆ.

ಈ ಜಾತೀಯತೆಯ ಅಂತರವನ್ನು ತೊಡೆಯುವಂತೆ ಹೊಲೆಯರು ಸ್ನಾನ ಮಾಡಿ ನಂತರ ತನ್ನನ್ನು ಉಪಚರಿಸಲು ಕೇಳಿಕೊಳ್ಳುತ್ತಾಳೆ.ಹೀಗೆ ಬ್ರಾಹ್ಮಣರಾದ ಈ ಜನ ಆಕೆಯ ಫಲಾಹಾರಕ್ಕೆ ಅಣಿ ಮಾಡಲು ಹೊರಗೆ ಹೋಗಿದ್ದಾಗ, 'ಹೊನ್ನಾರತಿ' ಇದ್ದ ಜಾಗದಲ್ಲೆ ಐಕ್ಯವಾಗಿ ಹುತ್ತವಾಗಿ ಬೆಳೆಯುತ್ತಾಳೆ. ಅಂದು ರಾತ್ರಿ ಅರ್ಚಕರ ಕನಸಿನಲ್ಲಿ 'ಚೌಡೇಶ್ವರಿ' ಬಂದು 'ಹೊನ್ನಾರತಿ'ಯಂತ ಮಹಾಸಾದ್ವಿಯ ಪೂಜೆಯನ್ನು ಜಾತ್ರೆಯ ಸಮಯದಲ್ಲಿ 'ಹೆಬ್ಬಾರೆ'ಯ ರೂಪವಾಗಿ ಆಚರಿಸಿ, ಆ ಸಮಯದಲ್ಲಿ ಆಕೆಯನ್ನು ಉಪಚರಿಸಿದ ಹೊಲೆಯರ,ಮತ್ತವರ ಸಂತತಿಯವರಿಗೆ ಹದಿನೈದು ದಿನಗಳವರೆಗೆ ಬ್ರಾಹ್ಮಣ ದೀಕ್ಷೆಯನ್ನು ಕೊಟ್ಟು ದೀಕ್ಷಾ ಬದ್ಧರಾಗಿರುವಂತೆ ಮಾಡಿ ಎಂದು ಅಣತಿ ಇತ್ತಳಂತೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ನಟರಾಜು. ಎಂ ಸಂಶೋಧನಾ ವಿದ್ಯಾರ್ಥಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು – ೫೭೦೦೦೬

How to cite this article:
ನಟರಾಜು.ಎಂ **(2026).** ಜಾತಿ ತಾರತಮ್ಯದ ಗ್ರಹಣ ಬಿಂಬಿಸುವ ಚಲನಚಿತ್ರ –'ಗ್ರಹಣ'. *Journal of Research and Development, 18(4(II)), 153–155. https://doi.org/10.5281/zenodo.19397306*

Quick Response Code:
Website: https://jrdrvb.org/
DOI: 10.5281/zenodo.19397306
OPEN ACCESS

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

ಹೀಗೆ ಹೊನ್ನಾರತಿ ಹೆಬ್ಬಾರೆಯ ಪ್ರತೀಕವಾಗಿ 'ಹೆಬ್ಬಾರಮ್ಮ'ನಾಗಿ ಹೊಲೆಯರ ದೈವವಾಗಿ ಪ್ರತಿ ವರ್ಷವೂ ಜಾತ್ರೆ ನಡೆಸಿಕೊಳ್ಳುತ್ತಿದ್ದಾಳೆ.

ಇಂತಹ ಒಂದು ಜಾತ್ರೆಯ....ಕುರಿತಾದ ಅಕ್ಷರ ವಿವರದ ನಂತರ ದೃಶ್ಯಾತ್ಮಕ ಕಥನವಾಗಿ ಪ್ರೇಕ್ಷಕರ ಮುಂದೆ ತೆರೆದುಕೊಳ್ಳುತ್ತದೆ.ಈ ಜಾತ್ರೆಯ ವಿಚಿತ್ರ ನಿಯಮವೆಂದರೆ ದೇವಿಯ ಅಣತಿಯಂತೆ ಜಾತ್ರೆ ನಡೆಯುವ ಹತ್ತು ದಿನಗಳ ಮುಂಚೆ ಸ್ಥಳೀಯ ಆರು ಜನ ಹರಿಜನರು ಜನಿವಾರ ಹಾಕಿಕೊಂಡು ಮಡಿ ಉಟ್ಟು ಬ್ರಾಹ್ಮಣರಾಗಿ ಬಿಡುತ್ತಾರೆ.ಆ ದಿನಗಳಲ್ಲಿ ತಾವು ಹರಿಜನರು ಎಂಬ ವಾಸ್ತವ ಮರೆತು ಜಾತ್ರೆ ಸಂದರ್ಭದ ವಿಧಿಗಳನ್ನು ಪೂರೈಸಬೇಕಾಗಿತ್ತು. ಅವರ ಮುಂದಾಳತ್ವದಲ್ಲೇ ಜಾತ್ರೆ ಜರುಗಬೇಕಿತ್ತು. ಜಾತ್ರೆ ನೆರವೇರಿದ ಹದಿನೈದು ದಿನಗಳ ನಂತರ ಆರು ಜನ ದಲಿತರು ಜನಿವಾರವನ್ನು ತೆಗೆದು ಮತ್ತೆ ಹರಿಜನರಾಗಬೇಕಿತ್ತು. ಜಾತ್ರೆಯ ಕೊನೆಯ ದಿನದಂದು ಜನಿವಾರ ಹಾಕಿ ಬ್ರಾಹ್ಮಣನಾಗಿದ್ದ ಹೊಲೆಯ ಚಿಕ್ಕ ಹನುಮನ ಸಾವು ಸಂಭವಿಸುತ್ತದೆ.ಈತನ ಶವ ಸಂಸ್ಕಾರ ಮಾಡುವ ವಿಷಯವಾಗಿ ನಂಬಿಕೆ, ಶಾಸ್ತ್ರ, ಸಂಪ್ರದಾಯವು ಅಡ್ಡಿ ಬಂದು ಕಗ್ಗಂಟಾಗಿ ಪರಿಣಮಿಸುತ್ತದೆ.ಆತ ಸಾಯುವಾಗ ಜನಿವಾರವಿದ್ದ ಕಾರಣ ಶವ ಸಂಸ್ಕಾರ ಮಾಡಲು ಹೊಲೆಯರು ನಿರಾಕರಿಸುತ್ತಾರೆ. ಚಿಕ್ಕ ಹನುಮ ಸಾಯುವಾಗ ದೇವಿ ಆತನ ಮೈಮೇಲೆ ಇರಲಿಲ್ಲ ಎಂಬ ಕಾರಣಕ್ಕೆ ಬ್ರಾಹ್ಮಣರು ಶವ ಸಂಸ್ಕಾರ ಮಾಡಲು ನಿರಾಕರಿಸುತ್ತಾರೆ. ಹೊಲೆಯರು ಮತ್ತು ಮೇಲ್ವರ್ಗದ ಹಾರವರು ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವಲ್ಲಿ ವಿಫಲರಾದಾಗ, ಪುಟ್ಟಸ್ವಾಮಿ ಗೌಡ ಅನಿವಾರ್ಯವಾಗಿ ಕಾನೂನಿನ ಮೊರೆ ಹೋಗಿ ಪೊಲೀಸರನ್ನು ಪಂಚಾಯಿತಿ ನಡೆಯುತ್ತಿರುವ ಸ್ಥಳದಲ್ಲೇ ಕರೆತಂದು ಹೆಣದ ಸಂಸ್ಕಾರಕ್ಕೆ ಅಣಿ ಮಾಡಿಸುತ್ತಾನೆ.ಈತನಿಗೆ ಇದು ಸಮಸ್ಯೆಯೊಂದರ ಪರಿಹಾರವಾಗಿ ಕಂಡರೆ, ಪಂಚಾಯಿತಿ ಆಳ್ವಿಕೆಯ ಸಮುದಾಯಗಳಿಗೆ ಇದೊಂದು ಪ್ರತಿಷ್ಠೆಯ ಸಂಗತಿಯಾಗಿ ಪರಿಣಮಿಸುತ್ತದೆ. ಸಾಂಪ್ರದಾಯದ ಹೆಸರಿನಲ್ಲಿ ದಲಿತರನ್ನು ಕೀಳಾಗಿ ನೋಡುವ ವ್ಯವಸ್ಥೆಯ ವಿರುದ್ಧ ಪುಟ್ಟಸ್ವಾಮಿಗೌಡ ಬಂಡಾಯವನ್ನು ಹೂಡಿ ದಲಿತರ ಪರ ಧೋರಣೆ ತಾಳುತ್ತಾನೆ. ಇದಕ್ಕಾಗಿ ಸಾಮಾಜಿಕ ಬಹಿಷ್ಕಾರದ ಶಿಕ್ಷೆಗೂ ಒಳಗಾಗುತ್ತಾನೆ. ಹೀಗೆ ಜಾತ್ರೆಯನ್ನು ಕೇಂದ್ರವಾಗಿರಿಸಿ ಅದರ ಜೊತೆಗೆ ಇರುವ ನಂಬಿಕೆಗಳ ಹೆಸರಿನಲ್ಲಿ ಜಾತಿ ವ್ಯವಸ್ಥೆಯ ವಿವಿಧ ಮುಖಗಳನ್ನು ಪರಿಚಯಿಸುವುದೇ 'ಗ್ರಹಣ'ದ ಕಥಾವಸ್ತುವಾಗಿದೆ.

ಹೆಣ್ಣೊಬ್ಬಳ ಬಹಿಷ್ಕಾರದ ಮೂಲ ಕಾರಣದಿಂದಲೇ ಹುಟ್ಟಿಕೊಳ್ಳುವ ಜಾತ್ರೆಯ ನಿಯಮಗಳು ಬದಲಾದ ಸಾಮಾಜಿಕ ಸಂದರ್ಭದಲ್ಲಿ ಪರಿವರ್ತನೆಯನ್ನು ಬಯಸಬೇಕಿತ್ತು. ಆದರೆ ಸಂಪ್ರದಾಯವನ್ನು ಪ್ರಶ್ನಿಸುವ ಯಾರೇ ಆದರೂ ಬಹಿಷ್ಕಾರದ ಶಿಕ್ಷೆಯನ್ನ ಎದುರಿಸಲೇಬೇಕು ಎನ್ನುವಲ್ಲಿ ಸಂಪ್ರದಾಯದ ಹಠವೇ ಗೆಲುವು ಪಡೆಯುವುದು ವ್ಯಂಗ್ಯವಾಗಿ ಕಂಡುಬರುತ್ತದೆ.ಹಳ್ಳಿಯ ನ್ಯಾಯವು ಯಾವಾಗಲೂ ಪ್ರಬಲರ ಪರವಾಗಿರುತ್ತದೆ. ಪ್ರಶ್ನಿಸುವ ಮನೋಧೋರಣೆಯನ್ನು ಅದು ಒಪ್ಪುವುದೇ ಇಲ್ಲ.ಇದೇ ತೆರನಾದ ಹಳ್ಳಿಯ ನ್ಯಾಯವು ಜಾಗತಿಕ ನ್ಯಾಯವು ಆಗಿರುವ ಪ್ರಸ್ತುತ ಸಂದರ್ಭದಲ್ಲಿ ಉಚ್ಚ–ನೀಚ,ಶ್ರೇಷ್ಠ–ಕನಿಷ್ಠ,ಪ್ರಬಲ–ದುರ್ಬಲರ ನಡುವಿನ ಸಂಘರ್ಷದ ಕಥೆಯಾಗಿ 'ಗ್ರಹಣ' ಆಪ್ತವಾಗುತ್ತದೆ. ಯು.ಆರ್ ಅನಂತಮೂರ್ತಿಯವರ ಸಂಸ್ಕಾರ ಕಾದಂಬರಿಯನ್ನು ಆಧರಿಸಿ ನಿರ್ಮಾಣವಾದ ಅದೇ ಹೆಸರಿನ ಸಿನಿಮಾದಲ್ಲಿನ 'ನಾರಾಯಣಪ್ಪ'ನ ಶವಸಂಸ್ಕಾರದ ದ್ವಂದ್ವಗಳು, ಗ್ರಹಣದಲ್ಲಿನ ಹೊಲೆಯನಾದ ಚಿಕ್ಕ ಹನುಮನ ಶವ ಸಂಸ್ಕಾರದ ದ್ವಂದ್ವಗಳು ಧಾರ್ಮಿಕ ಹಾಗೂ ವ್ಯಕ್ತಿಗತ ದ್ವಂದ್ವಗಳ ಅಭಿವ್ಯಕ್ತಿಯಾಗಿ ಗಮನ ಸೆಳೆಯುತ್ತವೆ. ಶ್ರೇಷ್ಠತೆಯ ಪ್ರತಿನಿಧಿಕರಣದ ವಲಯದೊಳಗೆ ಇರುವ ಸಂಕುಚಿತತೆ,ದೌರ್ಬಲ್ಯ, ವೈಚಿತ್ರ್ಯಗಳನ್ನು ಬ್ರಾಹ್ಮಣ ಬಂಡಾಯವನ್ನು ನಾರಣಪ್ಪನ ಮೂಲಕ 'ಸಂಸ್ಕಾರ'ದಲ್ಲಿ ವ್ಯಕ್ತಗೊಂಡರೆ 'ಗ್ರಹಣ'ದಲ್ಲಿ ಬಂಡಾಯವು ಹಳ್ಳಿಯ ಊರ ಗೌಡರ ಮಗ ಪುಟ್ಟಸ್ವಾಮಿಯಿಂದ ಶುರುವಾಗುತ್ತದೆ. ಎರಡು ಪಾತ್ರಗಳ ಮೂಲ ಆಶಯವು ಶೋಷಿತ ಸಮುದಾಯಗಳನ್ನು ಬ್ರಾಹ್ಮಣ್ಯದ ಕಟ್ಟುಪಾಡುಗಳಿಂದ ಅಂಟು ಜಾಡ್ಯಗಳಿಂದ ವಿಮುಕ್ತಿ ಗೊಳಿಸುವುದಾಗಿತ್ತು. ಸಮಸಮಾಜದ ಆಶಯವನ್ನು ಹೊತ್ತ ಎರಡು ಜೀವಗಳು ಸಮತೆಯ ಕನಸು ಈಡೇರುವ ಮುನ್ನವೇ ಜೀವ ಕಳೆದುಕೊಂಡಿದ್ದು ವಿಷಾದನೀಯ.

ಗ್ರಹಣದಲ್ಲಿನ ಹಳ್ಳಿಯ ನ್ಯಾಯ ಪಂಚಾಯ್ತಿಯು ಶೋಷಣೆಯನ್ನು ವಿಸ್ತರಿಸುವ, ಸಂಪ್ರದಾಯವನ್ನು ಜೀವಂತವಾಗಿರಿಸುವ ಪ್ರಬಲ ಶಕ್ತಿಯಾಗಿ ಪಾತ್ರ ನಿರ್ವಹಿಸುತ್ತದೆ. ಪಂಚಾಯಿತಿಯಿಂದ ಬಹಿಷ್ಕಾರಕ್ಕೆ ಒಳಗಾಗುವ ಪುಟ್ಟಸ್ವಾಮಿಯು ಬಹಿಷ್ಕಾರದ ತೀರ್ಪನ್ನು ವಿರೋಧಿಸಿ ಧಿಕ್ಕರಿಸುತ್ತಾನೆ. ಬಂಡಾಯ ಧೋರಣೆ ಹೊಂದಿದ ಈತ ಸವರ್ಣೀಯರ ಪಾಲಿನ ಖಳನಾಗಿ ಕಾಡುತ್ತಾನೆ. ಅಷ್ಟರಲ್ಲಾಗಲೇ ಊರಲ್ಲಿ ಬರ ಬಂದು ದಲಿತರ ಸ್ಥಿತಿಗತಿಗಳನ್ನ ನರಕವಾಗಿಸುತ್ತದೆ. ಅವರ ಹಸಿವಿನ ದೌರ್ಬಲ್ಯವನ್ನೇ ದಾಳವಾಗಿಸಿ ಜಾತ್ರೆಯ ಆಚರಣೆಯನ್ನು ಮತ್ತೆ ಪುನರಾರಂಭಿಸಲು ಅಣಿಯಾಗುತ್ತಾರೆ. ದೇವಸ್ಥಾನದ ಪೂಜಾರಿಯ ಮೈಮೇಲೆ ಹೆಬ್ಬಾರಮ್ಮ ಬಂದು ಗಂಡಾಂತರದ ಬೆದರಿಕೆ ಹಾಕಿ ಹೆಬ್ಬಾರೆ ಹೊರುವವರ ಪಟ್ಟಿ ನೀಡುತ್ತದೆ. ಇದರ ಅನುಸಾರ ಜಾತ್ರೆಯು ಪುನಃ ಆಚರಣೆ ರೂಪ ಪಡೆಯುತ್ತದೆ. ಆ ಪಟ್ಟಿಯಲ್ಲಿ ಈ ಹಿಂದೆ ಸಾವನ್ನಪ್ಪಿದ ಚಿಕ್ಕ ಹನುಮನ ಮಗ 'ಗೂಡ'ನ ಹೆಸರು ಪ್ರಸ್ತಾಪ ವಾಗುತ್ತದೆ. ದೈವದ ಆಜ್ಞೆಯ ಭಯದಿಂದ ಆತ ಹೆಬ್ಬಾರೆ ಹೊರಲು ಒಪ್ಪಿಕೊಳ್ಳುತ್ತಾನೆ. ಪುಟ್ಟಸ್ವಾಮಿಯು ಇದನ್ನ ಪ್ರಶ್ನಿಸಿದಾಗ ಇಡೀ ಹಳ್ಳಿಯ ಜನರು ಮತ್ತು ದಲಿತರು ಆದಂತಹ ರಾದ್ಧಾಂತಕ್ಕೆಲ್ಲ ಕಾರಣ ಈತನೇ ಎಂದು ಹೀಯಾಳಿಸುತ್ತಾರೆ. ಇಲ್ಲಿ ದಲಿತರು ವ್ಯವಸ್ಥೆಯ ಪ್ರಾಬಲ್ಯ,ದೈವದ ನಂಬಿಕೆಗೆ ಶರಣಾಗಿ ವ್ಯವಸ್ಥೆಯ ಅಂಕುಡೊಂಕನ್ನು ಸುಡಲು ಮುಂದಾದ ಪುಟ್ಟಸ್ವಾಮಿಯ ಬದ್ಧತೆಯನ್ನು ಅರ್ಥಮಾಡಿಕೊಳ್ಳದೆ ಹೋದದ್ದು ಅವರ ಹಿನ್ನಡೆಗೆ ಕಾರಣವಾಗುತ್ತದೆ.ಜಾತ್ರೆ ನಡೆಯುವ ಸಂದರ್ಭದಲ್ಲಿ ಪುಟ್ಟಸ್ವಾಮಿಗೌಡ ನೆಲಕ್ಕೆ ಬಿದ್ದು ಸಾಯುವ ಮೂಲಕ ಸಿನಿಮಾ ಮುಕ್ತಾಯಗೊಳ್ಳುತ್ತದೆ. ಈ ದೃಶ್ಯವೂ ಹಳ್ಳಿ ಪಂಚಾಯಿತಿಯ ಸಂಪ್ರದಾಯಬದ್ಧ ಕ್ರೌರ್ಯವು ಬಂಡಾಯಕ್ಕೆ ನೀಡುವ ಕ್ರೂರ ಶಿಕ್ಷೆಯಾಗಿ ಗೋಚರಿಸುತ್ತದೆ.

ಚಿಕ್ಕ ಹನುಮನ ಮಗ ಗೂಡ ಜನಿವಾರ ತೊಟ್ಟು ಬ್ರಾಹ್ಮಣನಾಗಿ ಜಾತ್ರಾ ಕಾರ್ಯದಲ್ಲಿ ಭಾಗಿಯಾದರು ಆತನಲ್ಲಿ ಜಾಗೃತಪ್ರಜ್ಞೆ ಮೂಡುತ್ತದೆ. ಈ ಬದಲಾವಣೆಗೆ ಪುಟ್ಟಸ್ವಾಮಿಗೌಡನ ಬಂಡಾಯದ ಮಾತುಗಳಿಂದ ಆತ ಪ್ರಭಾವಿತನಾಗಿದ್ದು ಕಾರಣವಾಗಿತ್ತು. ಗೂಡ ಜನಿವಾರ ತೊಟ್ಟು ಬ್ರಾಹ್ಮನನಾಗಿದ್ದವರ ಗುಂಪಿನಿಂದ ತಪ್ಪಿಸಿಕೊಂಡು ಪುಟ್ಟಸ್ವಾಮಿಯ ಬಳಿ ಬಂದು ತನ್ನ ಅಳಲನ್ನು ತೋಡಿಕೊಳ್ಳುತ್ತಾನೆ. ನಂತರ ಪುಟ್ಟಸ್ವಾಮಿ ಗೌಡನೇ ಜನಿವಾರ ತೊಟ್ಟು ಬ್ರಾಹ್ಮಣರಾಗಿ ಬದಲಾಗಿದ್ದ ದಲಿತರ ಗುಂಪು ಸೇರಿ ಅವರನ್ನು ಜಾತ್ರೆ ಬಿಟ್ಟು ಹೊರ ಬರುವಂತೆ ಮನವೊಲಿಸುವ ಪ್ರಯತ್ನ ಮಾಡುತ್ತಾನೆ. ಆದರೆ ಆ ದಲಿತರೆ ಅವನನ್ನು ಗ್ರಾಮಸ್ಥರಿಗೆ ಒಪ್ಪಿಸಿ ಪುಟ್ಟಸ್ವಾಮಿಗೌಡನ ಸಾವಿಗೆ ಕಾರಣರಾಗುತ್ತಾರೆ. ಇಲ್ಲಿ ದಲಿತರಿಗೆ ಬದಲಾವಣೆ ಹೊಂದುವ ಎಷ್ಟೇ ಅವಕಾಶಗಳು ಒದಗಿ ಬಂದರು, ಬ್ರಾಹ್ಮಣ್ಯ ಸೃಷ್ಟಿಸಿದ ಮೌಢ್ಯದ ಕಂದಕದಿಂದ ಹೊರಬರಲು ಸಾಧ್ಯವಾಗಲಿಲ್ಲ. ಶತಶತಮಾನಗಳಿಂದ ಅವರ ತಲೆ ಹೊಕ್ಕ ಜಾತೀಯತೆ,ಶಾಸ್ತ್ರ ಸಂಪ್ರದಾಯ, ಮೌಢ್ಯದ ನಂಬಿಕೆಗಳು ಅವರನ್ನು ಸ್ವತಂತ್ರವಾಗಿ ಆಲೋಚನೆಗೆ ತೆರೆದುಕೊಳ್ಳಲು ಬಿಡುತ್ತಿಲ್ಲ. ಆಧುನಿಕ ಶಿಕ್ಷಣದ ಪ್ರಭಾವದಿಂದ ಶೋಷಿತ ಸಮುದಾಯಗಳುಅಲ್ಪಮಟ್ಟಿಗೆ ಇಂತಹ ಮೌಢ್ಯಕಂದಾಚಾರಗಳಿಂದ ಹೊರಬಂದಿರುವುದು ಸಮಾಧಾನಕರ ಸಂಗತಿ ಆಗಿದೆ.

ಗ್ರಹಣವು ಆರಂಭದಿಂದ ಕೊನೆಯವರೆಗೂ ಜಾತಿ ವ್ಯವಸ್ಥೆಯ ಬಣ್ಣಗಳನ್ನು ಗ್ರಾಮೀಣ ಬದುಕಿನ ಹಿನ್ನೆಲೆಯಲ್ಲಿ ಕಟ್ಟಿಕೊಟ್ಟಿದೆ. ಬಡತನ, ಹಸಿವು, ಅಸಹಾಯಕತೆ ಮುಂತಾದ ದೌರ್ಬಲ್ಯಗಳನ್ನು ಬಳಸಿಕೊಂಡ ಸಂಪ್ರದಾಯ ಬದ್ಧ ವ್ಯವಸ್ಥೆಯು ತನ್ನ ಇರುವಿಕೆಯನ್ನು ದೃಢಪಡಿಸುವ ಹುನ್ನಾರವನ್ನು ವಿವಿಧ ದೃಶ್ಯಗಳು ಅನಾವರಣಗೊಳಿಸಿವೆ. ಒಬ್ಬ ದಲಿತನ ಹೆಣದ ಅಂತ್ಯ ಸಂಸ್ಕಾರದ ಪ್ರಶ್ನೆ ಕಗ್ಗಂಟಾಗಿ ರೂಪುಗೊಂಡ ಬಂಡಾಯವನ್ನು ಸೃಷ್ಟಿಸಿ ಹಸಿವು, ಅಸಹಾಯಕತೆಗಳನ್ನು ಹಾದು ಕೊನೆಗೆ ಮತ್ತದೇ ಸ್ಥಿತಿಗೆ ಮರಳುವ ವೃತ್ತಾಂತ ನಿರೂಪಿತವಾಗಿದೆ. ಇಲ್ಲಿ ಇತಿಹಾಸವು ಗತಿಸಿ ಹೋದ ಘಟನೆಗಳನ್ನು ನೆನಪಿಸುವುದರೊಂದಿಗೆ ಪ್ರಸ್ತುತದ ಮತ್ತು ಭವಿಷ್ಯವನ್ನು ಕಟ್ಟಿಕೊಳ್ಳುವುದಕ್ಕೆ ಪೂರಕವಾಗಿ ಇರಬೇಕಿತ್ತು.ಆದರೆ ಗತಿಸಿದ ಘಟನೆಗಳು ವರ್ತಮಾನವನ್ನು ಕಟ್ಟಿಹಾಕಿ ಬದಲಾವಣೆಯ ಭವಿಷ್ಯದೆಡೆಗೆ ಸಾಗುವ ಎಲ್ಲಾ ಸಾಧ್ಯತೆಗಳಿಗೂ ಕಡಿವಾಣ ಹಾಕುತ್ತದೆ. ಪರಿವರ್ತನೆಯ ಹಾದಿಯ ಬದಲು ಇಲ್ಲಿ ಸ್ಥಗಿತತೆಯೇ ನಿರ್ಣಾಯಕವಾಗಿ ಬಿಡುತ್ತದೆ. ಈ ಹಿನ್ನೆಲೆಯಲ್ಲಿ ಗ್ರಹಣ ಎತ್ತುವ ಪ್ರಶ್ನೆಗಳು ಪ್ರಸ್ತುತವೆನಿಸುತ್ತದೆ.

'ಜನಿವಾರ' ಧಾರಣೆಯ ಶಾಸ್ತ್ರವು ಒಂದು ಸಮುದಾಯದ ಬಿಡುಗಡೆಯ ದಾರಿಯಾಗಲಿಲ್ಲವೇಕೆ? ದೈವ ನಂಬಿಕೆ, ಭಕ್ತಿ ಮುಂತಾದ ಧಾರ್ಮಿಕ ಬದ್ಧತೆಗಳು ತಾರತಮ್ಯದ ಗಡಿಗಳನ್ನು ಮೀರಲಿಲ್ಲವೇಕೆ? ನಿರ್ದಿಷ್ಟ ದಿನಗಳಲ್ಲಿ ಮಾತ್ರ ದಲಿತರಿಗೆ ಬ್ರಾಹ್ಮಣ್ಯದ ಪಟ್ಟ ಕಟ್ಟಿ ನಂತರ ಮತ್ತದೇ ಹೀನಾಯ ಸ್ಥಿತಿಗೆ

Journal of Research and Development
A Multidisciplinary International Level Referred and Double-Blind Peer Reviewed, Open Access
ISSN : 2230-9578 | Website: https://jrdrvb.org Volume-18, Issue-4(II)| April- 2026

ಮರಳಿಸಿದ್ದೇಕೆ? ಜಾತ್ರೆ ಆಚರಣೆಯ ಸಂದರ್ಭದಲ್ಲೇ ಸಂಭವಿಸಿದ ದಲಿತನ ಸಾವು ಮತ್ತು ಶವ ಸಂಸ್ಕಾರವು ಸಂಘರ್ಷಕ್ಕೆ ಎಡೆ ಮಾಡಿದ್ದೇಕೆ? ಇವೆಲ್ಲಾ ಪ್ರಶ್ನೆಗಳು ಗ್ರಹಣದಲ್ಲಿ ಎದುರಾದರು ಅವೆಲ್ಲಕ್ಕೂ ಉತ್ತರಗಳು ಅಲ್ಲೇ ಇವೆ. ಆ ಉತ್ತರಗಳು ಪುಟ್ಟ ಸ್ವಾಮಿ ಗೌಡನ ಬಂಡಾಯದಲ್ಲಿದೆ. ಆ ಬಂಡಾಯ ಬಿಡುಗಡೆ ಮತ್ತು ಬದಲಾವಣೆಯ ಸಾಧನವಾಗುವ ಬದಲು ಜಾತಿ ವ್ಯವಸ್ಥೆಯ ಯಥಾಸ್ಥಿತಿಯ ಮುಂದುವರಿಕೆಯಲ್ಲಿ ನಿರರ್ಥಕವಾಗುತ್ತದೆ. ಪ್ರಶ್ನಿಸುವಿಕೆ ಮತ್ತು ಬಂಡಾಯವು ಸಂಪ್ರದಾಯ ಸಮಾಜದಲ್ಲಿ ನಿಷಿದ್ಧ ಎನ್ನುವ ರೀತಿಯಲ್ಲಿ ಚಿತ್ರ ನಿರೂಪಿತವಾಗಿದೆ.

ಹೀಗೆ ಅಸಮಾನತೆಯನ್ನು ಒದ್ದು ಜಡ ಸಂಪ್ರದಾಯದ ವ್ಯವಸ್ಥೆಯೊಳಗೆ ಮನುಷ್ಯ ಬದುಕಿನ ಅಸ್ತಿತ್ವಕ್ಕಾಗಿ ಶೋಧಿಸುವ ಸಂಸ್ಕಾರ, ಚೋಮನ ದುಡಿಯ ಮುಂದುವರೆದ ಪ್ರಯತ್ನವಾಗಿ ಗ್ರಹಣ ಆಪ್ತವಾಗುತ್ತದೆ. ಉಜ್ಜನಿ ಜಾತ್ರೆಯನ್ನೇ ವಸ್ತುವಾಗಿಸಿಕೊಂಡಿದ್ದ ಈ ಸಿನಿಮಾ ಜನರ ನಂಬಿಕೆಯ ಗೂಡಿಗೆ ಕೈ ಹಾಕುವ ಸಾಹಸವಾಗಿತ್ತು. ನಂಬಿಕೆ ತಪ್ಪಲು ಆದರೆ ಅದು ಮೌಢ್ಯತೆಯ ಪರಾಕಾಷ್ಠೆಯ ತಲುಪಿ ಮನುಷ್ಯರ ಮನಸ್ಸನ್ನು, ಸಮಾಜವನ್ನು ಜಡತ್ವಗೊಳಿಸುವ ಮಟ್ಟಕ್ಕೆ ಹೋದರೆ ಅದೇ ನಂಬಿಕೆ, ಸಂಪ್ರದಾಯಗಳ ಜೀವಂತಿಕೆಯನ್ನು ಪೋಷಿಸುವ ಬಲಿಷ್ಟ ಶಕ್ತಿಯಾಗಿ ರೂಪಗೊಳ್ಳುತ್ತದೆ ಎಂಬುದನ್ನು ಈ ಸಿನಿಮಾ ತೋರಿಸಿದೆ.

ಪರಾಮರ್ಶನ ಗ್ರಂಥಗಳು.

೧. ಅನಂತ ಮೂರ್ತಿಯು. ಆರ್ –ಸಂಸ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು, ೨೦೦೬
೨. ಪದ್ಮನಾಭಎನ್. ಕೆ – ಅನನ್ಯ ಹಾದಿಯ ಹೆಜ್ಜೆಗಳು,ಪ್ರಕಾಶಕರು –ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು, ೨೦೧೫
೩. ಸುಂಕಂ ಗೋವರ್ಧನ – ಸಾಹಿತ್ಯದ ಅನುಭವ ವಿಸ್ತರಣೆ ಹಾಗೂ ಪರ್ಯಾಯ ಚಿಲನಚಿತ್ರಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಬೆಂಗಳೂರು–೨೦೨೧

ಆಕರ

೧. 'ಗ್ರಹಣ' ಚಲನಚಿತ್ರ –ಟಿ. ಎಸ್ ನಾಗಭರಣ, ನಿರ್ದೇಶನ, ೧೯೭೮